VIJAY COLLEGE LIBRARY
BIJAPUR.
SANAKALLA(ISHA
KANTH
HERS
A No 7665
VIJAY COLLEGE LIBRARY
BIJAPUR.
(BOOK-FLAP)
033m
. Shi.10
7665

1939
Acc.No
048

# ಶಿವಾನುಭವ.

ವರ್ಷ ೧೪] ಅಕ್ಟೋಬರ ೧೯೩೯ [ಸಂಚಿಕೆ ೧

## ಆತ್ಮನಿವೇದನೆಯು.

(ಲೇಖಕರು—ಸಂಪಾದಕ.)

ಶಿವಾನುಭವ ಪತ್ರಿಕೆಗೆ ೧೩ ವರ್ಷಗಳು ಪೂರ್ತಿಯಾಗಿ ಅದಕ್ಕೆ ಈ ತಿಂಗಳ ಸಂಚಿಕೆಯಿಂದ ೧೪ನೆಯ ವರ್ಷವು ಪ್ರಾರಂಭವಾಗುತ್ತದೆ. ಇದರ ಮೂಲಕ ಈವರೆಗೆ ಅನೇಕ ಮಹತ್ವದ ಗ್ರಂಥಗಳೂ ಸಂಶೋಧನೆಯ ಕಾರ್ಯಗಳೂ ನಡೆದುಬಂದಿದ್ದು ನಮ್ಮ ವಾಚಕರಿಗೆ ಗೊತ್ತೇ ಇರುತ್ತದೆ. ಈ ವರೆಗೂ ವೀರಶೈವ ಸಮಾಜದ ಧಾರ್ಮಿಕ ಮತ್ತು ರಾಜಕೀಯ ಇತಿಹಾಸವು ಪೂರ್ಣವಾಗಿ ಹೊರಪಟ್ಟಿರುವದಿಲ್ಲ. ಆದುದರಿಂದ ಈ ವಿಷಯವನ್ನುಕುರಿತು ಹೆಚ್ಚಾಗಿ ಲೇಖಗಳು ಬರುವಂತೆ ಪ್ರಯತ್ನಿಸುವೆವೆಂದು ನಾವು ಹೋದ ವರ್ಷದ ಆರಂಭದ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಆ ಮೇರೆಗೆ ಈ ಬಗೆಯ ಲೇಖನಗಳು ಹಿಂದಿನ ವರ್ಷದ ಶಿವಾನುಭವ ಪತ್ರಿಕೆಯಲ್ಲಿ ಹೆಚ್ಚಾಗಿ ಪ್ರಕಟವಾದದ್ದು ನಮ್ಮ ವಾಚಕರ ಲಕ್ಷ್ಯಕ್ಕೆ ಬಂದಿರಬಹುದು. ಇವುಗಳಲ್ಲಿ ಅನೇಕ ಮಹನೀಯರು ಮಹತ್ವದ ವಿಷಯಗಳ ಬಗ್ಗೆ ವಿವೇಚನೆಯನ್ನು ಮಾಡಿರುವದು ಬಹು ಸಮಾಧಾನಕರವಾಗಿರುತ್ತದೆ.

ಈ ತರದ ಲೇಖನಗಳು ಶಿವಾನುಭವ ಪತ್ರಿಕೆಯಲ್ಲಿ ಮೊದಲಿನಿಂದಲೂ ಆಗಿಂದ್ದಾಗ್ಗೆ ಬರುತ್ತಾ ಇವೆ. ಶ್ರೀಯುತ ಚನಮಲ್ಲಪ್ಪ ಹಲಸಂಗಿ, ಡಾ. ಎಸ್. ಸಿ. ನಂದೀಮಠ, ಎಮ್. ಎ. ಪಿ. ಎಚ್. ಡಿ. ಪ್ರಿನ್ಸಿಪಾಲ್ ಲಿಂಗರಾಜಕಾಲೇಜ ಬೆಳಗಾವ ಇವರು ಶಿವಾನುಭವ ಪತ್ರಿಕೆಯಲ್ಲಿ ಇಂಥ ಲೇಖಗಳನ್ನು ಅನೇಕ ಸಾರೆ ಪ್ರಕಟಿಸಿದ್ದಾರೆ. ವೇದಮೂರ್ತಿ ಶಿವಮೂರ್ತಿಶಾಸ್ತ್ರಿಗಳವರೂ ಶ್ರೀ. ವೀರಭದ್ರಪ್ಪಾ ಹಾಲಭಾವಿ,

ವೇದ ಮೂರ್ತಿ ಚಂದ್ರಶೇಖರಶಾಸ್ತ್ರಿಗಳು ಹೊಳಲು ಈ ಮೊದಲಾದವರು ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ವೀರಶೈವರ ಐತಿಹಾಸಿಕ ಸ್ಥಾನಗಳನ್ನು ಸಂದರ್ಶಿಸಿ ಅವುಗಳಲ್ಲಿ ಕಂಡುಬಂದ ಅನೇಕ ಮಹತ್ವದ ಸಂಗತಿಗಳನ್ನು ಪ್ರಕಾಶಕ್ಕೆ ತಂದಿದ್ದಾರೆ. ಅಲ್ಲದೆ ವೀರಶೈವರಿಗೆ ಸಂಬಂಧಿಸಿದ ಅನೇಕ ಶಿಲಾಶಾಸನಗಳೂ ಪತ್ರಿಕೆಯ ಸಂಚಿಕೆಗಳಲ್ಲಿ ಹೊರಗೆಡವಲ್ಪಟ್ಟಿವೆ. ಈ ಎಲ್ಲ ಪ್ರಯತ್ನಗಳು ವೀರಶೈವ ಇತಿಹಾಸದ ನಿಜಸ್ಥಿತಿಯನ್ನು ತಿಳಿಯಲು ಬಹು ಸಹಾಯಕವಾಗುತ್ತವೆ. ಈ ದೃಷ್ಟಿಯನ್ನಿಟ್ಟುಕೊಂಡು ಅನೇಕ ಲೇಖಕರು ಶಿವಾನುಭವ ಪತ್ರಿಕೆಯಲ್ಲಿ ತಮ್ಮ ಲೇಖಗಳನ್ನು ಈ ವರೆಗೂ ಬರೆಯುತ್ತಲಿರುವುದು ಸಂತೋಷಕರವಾಗಿದೆ. ಅವರು ಈ ರೀತಿಯಿಂದ ತಮ್ಮ ಸಂಶೋಧನಕಾರ್ಯಗಳನ್ನು ನಡಿಸಿದಲ್ಲಿ ವೀರಶೈವ ಧರ್ಮದ ಮಹತ್ವದ ಇತಿಹಾಸವು ಬೇಗನೆ ಹೊರಬೀಳಬಹುದೆಂದು ನಾವು ನಂಬಿದ್ದೇವೆ.

ಶಿವಾನುಭವಪತ್ರಿಕೆಯ ಮೂಲಕ ಈ ವರೆಗೆ ಗ್ರಂಥ ಪ್ರಕಾಶನಕಾರ್ಯವು ಎಷ್ಟು ಘನತರವಾಗಿ ನಡೆದು ಬಂದಿದೆಂಬದು ಕೆಳಗಿನ ಅಂಕಿಗಳಿಂದ ವಾಚಕರ ನಿದರ್ಶನಕ್ಕೆ ಬರಬಹುದೆಂದು ನಾವು ಭಾವಿಸಿದ್ದೇವೆ. ವೀರಶೈವ ಸಮಾಜದಲ್ಲಿ ಈ ರೀತಿ ಹೆಚ್ಚಾಗಿ ಕಾರ್ಯ ಮಾಡಿದವರು ಕೈ. ವಾ. ರಾವಬಹಾದ್ದೂರ ಮಲ್ಲಪ್ಪಾ ಅಣ್ಣಾ ವಾರದ ಇವರೇ ಇರುತ್ತಾರೆ. ಅವರು ಅನೇಕ ವರ್ಷ ಕೆಲಜನ ಶಾಸ್ತ್ರಿಗಳನ್ನಿಟ್ಟು ಅವರ ಮೂಲಕ ಬೇರೆ ಬೇರೆ ಭಾಗಗಳಲ್ಲಿರುವ ಗ್ರಂಥಗಳನ್ನು ಸಂಗ್ರಹಿಸಿದರು. ಕೆಲಜನ ಪಂಡಿತರನ್ನಿಟ್ಟುಕೊಂಡು ಅವರ ಮೂಲಕ ಅವುಗಳನ್ನು ಬರೆಯಿಸಿ ಶುದ್ಧಗೊಳಿಸಿ ಗ್ರಂಥಗಳನ್ನು ಅಚ್ಚುಹಾಕಿಸಿದರು. ಅವುಗಳನ್ನು ಪ್ರಸಾರ ಪಡಿಸಲು ಉಪದೇಶಕರನ್ನುಸಹ ನಿಯಮಿಸಿಕೊಂಡರು. ಈ ಪ್ರಕಾರ ಅವರು ಒಂದು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದರೆಂದು ಅವರ ಚರಿತ್ರೆಯಿಂದ ತಿಳಿಯುತ್ತಿದೆ. ಅವರು ಪ್ರಕಟ ಮಾಡಿದ ಗ್ರಂಥಗಳಲ್ಲಿ (೧) ಧಾರ್ಮಿಕ ಮೂಲ ಗ್ರಂಥಗಳು (೨) ಧಾರ್ಮಿಕ ಚಿಕ್ಕ ಗ್ರಂಥಗಳು (೩) ಮತ್ತು ವ್ಯವಹಾರಿಕ ಗ್ರಂಥಗಳು ಎಂದು ಮೂರು ವಿಭಾಗಗಳನ್ನು ಮಾಡಬಹುದು. ಅವರು ಅಚ್ಚು ಹಾಕಿದ ಈ ಗ್ರಂಥಗಳ ಪುಟಸಂಖ್ಯೆಗಳು ಕೆಳಗೆ ಬರೆದ ಮೇರೆಗೆ ಇವೆ.



| ಗ್ರಂಥಗಳು | ಪುಟಗಳು |
|---|---|
| ಧಾರ್ಮಿಕ ಮೂಲ ಗ್ರಂಥಗಳು | ೫೯೫೯ |
| ಧಾರ್ಮಿಕ ಚಿಕ್ಕ ಗ್ರಂಥಗಳು | ೧೦೧೦ |
| ವ್ಯವಹಾರಿಕ ಗ್ರಂಥಗಳು | ೮೦೮ |
| ಒಟ್ಟು | ೭೭೭೭ |

ಇದೇ ಪ್ರಕಾರ ಶಿವಾನುಭವ ಗ್ರಂಥಮಾಲೆಯಲ್ಲಿ ಅನೇಕ ಧಾರ್ಮಿಕ ಗ್ರಂಥಗಳು ಪ್ರಕಟವಾಗಿದ್ದು ಅವುಗಳಲ್ಲಿ ವಚನ ಗ್ರಂಥಗಳೂ ಕಾವ್ಯಗಳೂ ಮುಖ್ಯವಾಗಿರುತ್ತವೆ. ಇವಲ್ಲದೆ ಅನೇಕ ವಿದ್ವಾಂಸರು ಬರೆದ ಮಹತ್ವದ ಲೇಖಗಳೂ ಅದರಲ್ಲಿ ಬಂದಿರುತ್ತವೆ. ಇವುಗಳೆಲ್ಲ ವಾಙ್ಮಯಾತ್ಮಕವೂ ಐತಿಹಾಸಿಕ ಸಂಶೋಧನಾತ್ಮಕವೂ ಆಗಿರುತ್ತವೆ. ಇಂಥ ಲೇಖಗಳನ್ನು ಬಿಟ್ಟು ಬೇರೆ ತರದ ಲೇಖಗಳಿಗೆ ನಾವು ಶಿವಾನುಭವದಲ್ಲಿ ಸ್ಥಾನವನ್ನು ಕೊಟ್ಟಿದ್ದು ಅತ್ಯಲ್ಪ ಪ್ರಮಾಣದಿಂದ ಇರುತ್ತವೆ. ಇವೆಲ್ಲವೂ ಸಂಗ್ರಾಹ್ಯ ಲೇಖಗಳಾಗಿರುತ್ತವೆ. ಈ ಎಲ್ಲವುಗಳ ಸಂಖ್ಯೆಯು ಕೆಳಗೆ ಕಾಣಿಸಿದಂತೆ ಇರುತ್ತದೆ.

| | ಪುಟಸಂಖ್ಯೆ |
|---|---|
| ಧಾರ್ಮಿಕ ಗ್ರಂಥಗಳು | ೫೪೬೬ |
| ಲೇಖಗಳು | ೫೯೩೩ |
| ಒಟ್ಟು | ೧೧೩೯೯ |

ಮೇಲ್ಕಂಡ ಅಂಕಿಗಳನ್ನು ತುಲನಾತ್ಮಕವಾಗಿ ನಿರೀಕ್ಷಿಸಿದರೆ ಶಿವಾನುಭವ ಪತ್ರಿಕೆಯ ಮೂಲಕ ಎಂಥ ಮಹತ್ತರವಾದ ಪ್ರಕಟನಾಕಾರ್ಯಗಳು ಜರಿಗಿವೆಂಬದು ವಾಚಕರ ಲಕ್ಷಕ್ಕೆ ಬರದೆ ಇರಲಾರದು.

ಶಿವಾನುಭವ ಗ್ರಂಥಮಾಲೆಯಲ್ಲಿಯ ಅನೇಕ ಪುಸ್ತಕಗಳು ವಿಶ್ವವಿದ್ಯಾಲಯಗಳ ಉಚ್ಚ ಪರೀಕ್ಷೆಗಳಲ್ಲಿ ನಿಯಮಿಸಲ್ಪಟ್ಟಿದ್ದು ಅವುಗಳಲ್ಲಿ ೩೫ ಗ್ರಂಥಗಳು ಮುಂಬಯಿ ಸರಕಾರದಿಂದ ಮಾನ್ಯತೆಯನ್ನು ಹೊಂದಿರುತ್ತವೆ. ಇಷ್ಟೇ ಅಲ್ಲ, ಅವುಗಳನ್ನು ಅವಲಂಬಿಸಿ, ಅನೇಕ ಮಹನೀಯರು ಚಿಕ್ಕಪುಟ್ಟ ಗ್ರಂಥಗಳನ್ನು ಸ್ವತಂತ್ರ ರೀತಿಯಿಂದ ಪ್ರಕಟಿಸುತ್ತಾ ಇದ್ದಾರೆ. ಮತ್ತು ಅನೇಕ ಪತ್ರಿಕೆಗಳಲ್ಲಿ ಆಗಿಂದಾಗ್ಗೆ ಲೇಖಗಳನ್ನು ಬರೆಯುತ್ತಾ ಇದ್ದಾರೆ. ಈ

ಪ್ರಕಾರ ಶಿವಾನುಭವ ಗ್ರಂಥಮಾಲೆಯ ಗ್ರಂಥಗಳ ಮೂಲಕ ವೀರಶೈವ ಸಂಸ್ಕೃತಿಯು ತಿಳವಳಿಕೆಯು ಈಚೆಗೆ ಜನತೆಯಲ್ಲಿ ಬಹು ಒತ್ತರದಿಂದ ನಡೆದಿರುವದು ಕಂಡು ಬರುತ್ತದೆ.

ಇನ್ನುಮುಂದಾದರೂ ವೀರಶೈವರ ಧಾರ್ಮಿಕ ಮತ್ತು ರಾಜಕೀಯ ಇತಿಹಾಸ ಸಂಶೋಧನೆಗೆ ಸಂಬಂಧಪಟ್ಟ ಲೇಖಗಳಿಗೆ ನಾವು ಪತ್ರಿಕೆಯಲ್ಲಿ ಮುಖ್ಯ ಸ್ಥಾನವನ್ನು ಕೊಡುತ್ತ ಹೋಗುವೆವು. ಆದರೆ ಈ ಕಾರ್ಯದಲ್ಲಿ ಮತಭೇದಗಳಾಗುವದು ಸ್ವಾಭಾವಿಕವಾಗಿದೆ. ಲೇಖಕರು ಒಂದು ವಿಧಾನಕ್ಕೆ ಅಂಟಿಕೊಂಡ ಬಳಿಕ ಅವರು ಅದಕ್ಕೆ ವಿರುದ್ಧವಾದ ಸಂಗತಿಗಳನ್ನು ಬೇಗನೆ ಒಪ್ಪುವದು ತೋರಿಬರುವುದಿಲ್ಲೆಂದು ಕಂಡುಬರುತ್ತದೆ. ಅವರು ತಮಗೆ ಬಾಧಕವಾದ ವಿಷಯಗಳನ್ನು ಕುರಿತು ಹೆಚ್ಚುಹೆಚ್ಚಿಗೆ ಸಂಶೋಧನ ಮಾಡುವದರ ಬದಲು ಕೆಲವು ಸಂಗತಿಗಳನ್ನು ಮಾತ್ರ ಅವಲಂಬಿಸಿ ಅನೇಕ ಬಗೆಯಾಗಿ ಕಲ್ಪನೆಗಳನ್ನೂ ಅನುಮಾನಗಳನ್ನೂ ಊಹೆಗಳನ್ನೂ ಮಾಡುವದರಲ್ಲಿ ತಮ್ಮ ಜಾಣತನವನ್ನು ತೋರಿಸುವದರಲ್ಲಿ ಉತ್ಸುಕರಾಗುತ್ತಾರೆ. ಇದರಿಂದ ಪಕ್ಷಗಳು ನಿಷ್ಕಾರಣವಾಗಿ ಬೆಳೆಯುವ ಸಂಭವವಿದೆ. ಈ ಸ್ಥಿತಿಯು ತೋರಿಬಂದಲ್ಲಿ ನಾವು ಅಂಥ ವಿವಾದಗಳಿಗೆ ಪತ್ರಿಕೆಯಲ್ಲಿ ಸ್ಥಾನ ಕೊಡುವದನ್ನು ನಿಲ್ಲಿಸುವದು ಅವಶ್ಯವಾಗುವದು. ಬೇರೆ ಕೆಲವರು ತಮ್ಮ ವಿಧಾನಗಳನ್ನು ಪುಷ್ಟೀಕರಿಸುವಲ್ಲಿ ಅನಾವಶ್ಯಕವಾಗಿ ಕಟುವಾದ ಶಬ್ದಗಳನ್ನು ಉಪಯೋಗಿಸುವದುಂಟು. ಅಂಥ ಶಬ್ದಗಳನ್ನು ನಾವು ಅವರ ಲೇಖದೊಳಗಿಂದ ತೆಗೆದುಹಾಕಲು ಸ್ವಾತಂತ್ರ್ಯವನ್ನು ಇಟ್ಟುಕೊಳ್ಳಲು ಬಯಸುತ್ತೇವೆ. ಈ ಸಂಗತಿಗಳನ್ನು ನಮ್ಮ ವಾಚಕರ ಇದಿರಿಗೆ ಇಡುವದು ಅವಶ್ಯವೆಂದು ಹೋದ ವರ್ಷದ ಅನುಭವದಿಂದ ನಮಗೆ ತೋರಿಬಂದಿರುತ್ತದೆ. ಈ ಪ್ರಕಾರ ನಾವು ಮಾಡಬೇಕಾದಲ್ಲಿ ಲೇಖಕರು ನಮ್ಮಮೇಲೆ ರೇಗಿಕೊಳ್ಳಬಾರದೆಂದು ಅವರಿಗೆ ನಮ್ಮ ಸವಿನಯ ವಿಜ್ಞಾಪನೆ ಇದೆ.

ಶಿವಾನುಭವ ಪತ್ರಿಕೆಯ ಕಾರ್ಯಗಳಿಗೆ ಜನತೆಯ ಬೆಂಬಲವು ಯಾವಾಗಲೂ ಇರುವದಿಲ್ಲೆಂದು ಇಲ್ಲಿ ಹೇಳುವದು ಅವಶ್ಯವಿದೆ. ಕೇವಲ ಸಂಶೋಧನಾತ್ಮಕ ಮತ್ತು ವಾಙ್ಮಯಾತ್ಮಕ ಲೇಖನಗಳನ್ನು ಪ್ರೀತಿಸುವವರ ಸಂಖ್ಯೆಯು ಸಮಾಜದಲ್ಲಿ ಅತ್ಯಲ್ಪವಿರುತ್ತದೆಂದು ನಾವು ಇಲ್ಲಿ ಹೇಳದಿರಲಾರೆವು. ಈಚೀಚೆಗೆ ರಾಜಕೀಯ ಮೊದಲಾದ ಚಟುವಟಿಕೆಗಳ ಮೂಲಕ ಸಂಸ್ಕೃತಿ



ಪೋಷಕ ವಾಙ್ಮಯದಮೇಲೆ ಜನತೆಯ ಪ್ರೀತಿಯು ಕಡಿಮೆಯಾಗುತ್ತಾ ಇದೆ ಎಂದು ನಾವು ಬಹು ವಿಷಾದಪೂರ್ವಕವಾಗಿ ಇಲ್ಲಿ ಹೇಳಬೇಕಾಗಿದೆ. ಆದರೂ ಇಂಥ ಪ್ರಯತ್ನಗಳನ್ನು ಆದರಿಸುವಂಥ ಮಹನೀಯರು ಅಲ್ಲಲ್ಲಿ ಇದ್ದಾರೆಂಬುದು ಕಂಡು ಬರುತ್ತದೆ ಆದರೆ ಅಂಥವರ ಸಂಖ್ಯೆಯು ಬಹಳ ಕಡಿಮೆ ಇದೆ. ಇಂಥವರು ಕೆಲವರಾದರೂ ಸಮಾಜದಲ್ಲಿ ಇದ್ದಾರೆಂದು ನಮಗೆ ತೋರಿ ಬಂದದರಿಂದ ನಮ್ಮ ಕಾರ್ಯವನ್ನು ಮುಂದುವರಿಸಲು ನಮಗೆ ಉತ್ತೇಜನ ಉಂಟಾಗುತ್ತದೆ. ಆದರೆ ಈ ಮಹನೀಯರು ತಮ್ಮ ಮಿತ್ರರ ಇದಿರಿಗೆ ಶಿವಾನುಭವದ ಕಾರ್ಯಗಳನ್ನು ಇಟ್ಟು ಅವರಿಂದ ಪತ್ರಿಕೆಗೆ ಪೋಷಣೆಯು ದೊರೆಯುವಂತೆ ಮಾಡಿದಲ್ಲಿ ಅವರು ನಮಗೆ ನಿಜವಾಗಿ ಬಹಳ ಸಹಾಯ ಮಾಡಿದಂತಾಗುವದು.

---

## ಬಟ್ಟೆ !

ಕಡಲ ತಳದ ಮುತ್ತು ಮಣಿಗ-
ಳಂಥ ಬಟ್ಟೆ ತುಳಿದಿವೆ !
ಗಿಡದ ಪಣ್ಗಳಂಥ ಕಷ್ಟ-
ನಷ್ಟಗಳಲಿ ಬೆಳೆದಿವೆ ! ೧

ಹೂವು, ಕಂಪನೀಯಲೆಷ್ಟು
ಕಾಲ ತಪನ ನಿಂದಿತೋ !
ದೇವನಡಿಯ ಸೇರಲೆಷ್ಟು
ಜನ್ಮಗಳಲಿ ಬಂದಿತೋ ! ೨

ಊರ ಸೇರ್ವ ಪಥಿಕಗಂತು
ಬಟ್ಟೆಯೊಂದೆ ಸಾಧನೆ !
ದಾರಿ ಯೆಡರುಗಳನು ಸಹಿಸಿ
ಕ್ರಮಿಪುದೆ ಯಾರಾಧನೆ ! ೩

— ಈಶ್ವರ ಸಣಕಲ್ಲ.

# ಬಿಜ್ಜಳ.

(ಶ್ರೀ. ಎಸ್. ಶ್ರೀಕಂಠ ಶಾಸ್ತ್ರಿ ಎಂ. ಏ. ಲೆಕ್ಚರರ
ಮಹಾರಾಜಾ ಕಾಲೇಜ ಮೈಸೂರ)

"ಶಿವಾನುಭವ" (ಅಗಸ್ಟ ೧೯೩೯) ಸಂಚಿಕೆಯಲ್ಲಿ ಶ್ರೀಮಾನ್ ರಾವ್ ಸಾಹೇಬ ಫ. ಗು. ಹಳಕಟ್ಟಿ ಅವರು ಬಸವೇಶ್ವರನು ಕಾಲಚೂರ್ಯ ಬಿಜ್ಜಳನ ಕಾಲದಲ್ಲಿಯೇ ಮತ್ತು ಅವನ ಆಸ್ಥಾನದಲ್ಲಿಯೇ ಇದ್ದನೆಂದು ಸಾಧಿಸಲು ಯತ್ನಿಸಿರುವರು. ಹರಿಹರನ ರಗಳೆಯಲ್ಲಿ ಕೊಡಲ್ಪಟ್ಟ ಅಂಶಗಳಿಗೂ ಇತರ ಬಸವ ಪುರಾಣಗಳಲ್ಲಿರುವ ಅಂಶಗಳಿಗೂ ವೈರುಧ್ಯವು ಕಂಡು ಬಂದರೂ, ಎರಡಕ್ಕೂ ಸಮನ್ವಯ ಮಾಡಬೇಕೆಂಬ ಉದ್ದೇಶದಿಂದ ಬಸವನು ಮೊದಲು ಬಿಜ್ಜಳನ ಆಸ್ಥಾನದಲ್ಲಿ ಮಂಗಳವಾಡದಲ್ಲಿದ್ದನೆಂದು ಅನಂತರ ಬಿಜ್ಜಳನೊಡನೆ ಕಲ್ಯಾಣಕ್ಕೆ ಹೋಗಿ ಅಲ್ಲಿ ಮಂತ್ರಿ ಕೂಡ ಆಗಿದ್ದನೆಂದೂ (ಶಿವಾನುಭವ, ಜೂನ, ಜುಲೈ ೧೯೩೯) ಅಭಿಪ್ರಾಯಪಟ್ಟಿರುವರು. ಇವನ್ನು ಪರೀಕ್ಷಿಸುವದೇ ಈ ಲೇಖನೆಯ ಉದ್ದೇಶವು.

(೧) ಬಸವೇಶ್ವರನ ವಚನಗಳಲ್ಲಿ "ಚಾಳೋಕ್ಯ ರಾಯನ ಆಳಿಕೆ ತೆಗೆಯಿತ್ತು." ಎಂಬುದು ಕ್ರಿ. ಶ. ೧೧೫೫—೬ ರಲ್ಲಿ ಬಿಜ್ಜಳನು ಮುಮ್ಮಡಿ ತೈಲಪನ ರಾಜ್ಯವನ್ನು ಆಕ್ರಮಿಸಿಕೊಂಡುದನ್ನು ಸೂಚಿಸುವದೆಂದು ಹೇಳುವರು. ಹಾಗಾದರೆ ಕಲ್ಯಾಣ ಹಾಳಾಯಿತು ಎಂಬ ಅದೇ ವಚನದಲ್ಲಿ ಕಂಡುಬರುವದಕ್ಕೆ ಅರ್ಥವೇನು? ಬಿಜ್ಜಳನು ಕಲ್ಯಾಣಿಯನ್ನು ತಗೆದುಕೊಂಡಾಗ ಅದನ್ನು ಹಾಳು ಮಾಡಿದನೇ? ಪಟ್ಟಣ ಹಾಳಾಯಿತೆಂಬುದಕ್ಕೆ ಯಾವ ನಿದರ್ಶನವೂ ಇಲ್ಲ. ಕಲ್ಯಾಣವು ೧೨೦೦ ಇಸವಿ ವರೆಗೂ ಸರಿಯಾಗಿಯೇ ಇದ್ದಿತೆಂದು ಚಾಳುಕ್ಯರೂ ಕೂಡ ಅಲ್ಲಿ ರಾಜ್ಯಭಾರ ಮಾಡುತ್ತಿದ್ದರೆಂಬುದಕ್ಕೂ ಬೇಕಾದಷ್ಟು ಶಾಸನ ನಿದರ್ಶನಗಳಿವೆ. ಇಲ್ಲಿ ಕೆಲವನ್ನು ಉದಾಹರಿಸುತ್ತೇವೆ.

ಜಗದೇಕಮಲ್ಲ-ಕಲ್ಯಾಣಪುರ-ಶಕೆ ೧೦೬೮ ಪ್ರಮಾಥಿ. *M. E. R.* 530 of 1914
,, ... ,, ... (*A. D.* ೧೧೫೫) *S. I. I. ix pt. no.* 265
,, ... ,, ... ಶಕೆ ೧೦೮೩ (*A. D.* ೧೧೬೦) ,, ,, *no* 267
ತ್ರಿಭುವನಮಲ್ಲ... ,, ... ಕ್ರಿ. ಶ. ೧೧೬೯ ,, ,, *no* 269
ಜಗದೇಕಮಲ್ಲ... ,, ... ಕ್ರಿ. ಶ. ೧೧೬೯ ,, ,, *no* 270
,, (ಆಹವಮಲ್ಲ) ,, ಕ್ರಿ. ಶ. ೧೧೮೩ ,, ,, *no* 276

(೨) 'ಒಬ್ಬ ಜಂಗಮನಭಿನಾನದಿಂದ' ಎಂಬುದು ಬಹುಶಃ ರೇವಣಸಿದ್ಧೇಶ್ವರನಿಗೆ ಅನ್ವಯಿಸುವದೆಂದು ಶ್ರೀ ಹಳಕಟ್ಟಿಯವರ ಅಭಿಪ್ರಾಯ. (ಶಿವಾನುಭವ ಜೂನ. ಜುಲೈ ೧೯೩೯) ರೇವಣಸಿದ್ಧೇಶ್ವರನ ಶಾಪದಿಂದ ಚಾಳುಕ್ಯ ರಾಜ್ಯ ನಾಶವಾದುದೇ ಆಗಲಿ, ಕಲ್ಯಾಣ ಹಾಳಾದುದೇ ಆಗಲಿ ಎಲ್ಲಿಯೂ ಕಂಡು ಬರುವದಿಲ್ಲ. ವೀರಶೈವ ಪುರಾಣಗಳು ಬಸವನ ಶಾಪದಿಂದ ಕಲ್ಯಾಣ ನಾಶವಾಯಿತೆಂದೇ ಹೇಳುವವು. ಶ್ರೀ ಹಳಕಟ್ಟಿಯವರು ರುದ್ರಮುನೀಶ್ವರನು ರೇವಣಸಿದ್ಧೇಶ್ವರ ಸಂಜಾತನೆಂದು ಹೇಳುವರು. ಆದರೆ ಅರಾಧ್ಯಸಂಪ್ರದಾಯದ ಪ್ರಕಾರ ಈತನು ರೇಣುಕಾರಾಧ್ಯರ ಸಂಜಾತನೆಂದು ತಿಳಿದು ಬರುವದು. ಹೀಗೆ ಭಿನ್ನಾಭಿಪ್ರಾಯಗಳಿರುವದರಿಂದ ನಾವು ಇಲ್ಲಿ ಈ ವಿಷಯವನ್ನು ಬೆಳಿಸುವದಿಲ್ಲ.

(೩) ನಾನು ಬಿಜ್ಜಳನು ಯಾವಾಗಲೂ ಕಲ್ಯಾಣದಲ್ಲಿಯೇ ಇದ್ದನೆಂದು ಊಹಿಸಿರುವೆನೆಂದು ತಾವು ಊಹಿಸಿರುವರು. ನಾನು ಹಾಗೆ ಹೇಳಲಿಲ್ಲ. ಒಬ್ಬ ಬಿಜ್ಜಳನ ಕಾಲದಲ್ಲಿ ಬಸವನು ಮಂಗಳವಾಡಕ್ಕೆ ಹೋದನು. ಬಿಜ್ಜಳನು ಸ್ವತಂತ್ರನಾಗುವದಕ್ಕೆ ಮುಂಚೆ ಬನವಾಸಿ, ತರ್ದವಾಡಿ ಮುಂತಾದವುಗಳನ್ನೆಲ್ಲಾ ಆಳುತ್ತಿದ್ದನು. ಇವನ ಅಧೀನದಲ್ಲಿ ಅನೇಕರು ಈ ಮಂಡಲಗಳ ಅಂತರ್ಭಾಗಗಳಾದ ನಾಡು, ಬಾಡ, ಕಂಪಣಗಳನ್ನು ಆಳುತ್ತಿದ್ದರು. ಇಂತಹವರಲ್ಲಿ ಸಿಂದರೂ, ಮಾಳಿಗೆ ಬಿಜ್ಜನಾಯಕನೂ ಇದ್ದರು. ಆದುದರಿಂದ ಮಹಾಮಂಡಲೇಶ್ವರನಾದ ಬಿಜ್ಜಳನ ಬಳಿಗೆ ಬಸವನು ಹೋದನೆಂಬುದಕ್ಕೆ ಯಾವ ಆಧಾರವೂ ಇಲ್ಲ. ಕ್ರಿ. ಶ. ೧೧೫೬ ರಲ್ಲಿ ಬಿಜ್ಜಳನು ತರ್ದವಾಡಿಯನ್ನಾಳುತ್ತಿದ್ದನೆಂದು ನಾನೇ ಹೇಳಿರುವೆನು. ( ಕ. ಸಾ. ಪ. ಪ, ಅಕ್ಟೋಬರ-ಡಿಸೆಂಬರ ಪುಟ ೨೬೯ ಅಡಿ.)

(೪) "ತರಿಕಾಡುನಾಡಿನ ಮಂಗಳವೇಡೆ" ಎಂದು ನಾನು ತಪ್ಪು ಬರಿದೆನೆಂದು ಎರಂಬರಗೆಯಲ್ಲಿ ಆಳುತ್ತಿದ್ದ ಸಿಂದರ ರಾಜ್ಯವು ಬಾಗೆವರೆಗೂ ವ್ಯಾಪಿಸಿರಲಿಲ್ಲವೆಂದು ಹೇಳಿರುವರು. ಆದರೆ ಮುಡಗಿಹಾಳ ಶಾಸನವು (ಎಪಿಗ್ರಾಫಿಯ ಇಂಡಿಕ, ಸಂಪುಟ ೧೫) ಸ್ಪಷ್ಟವಾಗಿ ತರಕಾಡಿ

ನಾಡಿನೊಳಗಣ ಮಂಗಳವಾಡವು ರಾಯಮುರಾರಿ ಸೋಮೇಶ್ವರನಿಂದ ಆಳಲ್ಪಡುತ್ತಿದ್ದಿತೆಂದು, ಇವನ ಅಧಿಕಾರಿಯಾದ ಬಿಜ್ಜನಾಯಕನು ಮಂಗಳವಾಡದ ಮೇಲಾಳಿಕೆಯನ್ನು ಮಾಡುತ್ತಿದ್ದನೆಂದು ಹೇಳುವದು. ಮತ್ತು ಸೋಮೇಶ್ವರನು ಕೂಡ ೧೧೬೩ ರ ವರೆಗೆ ಮಂಗಳವಾಡದಲ್ಲಿಯೇ ಇದ್ದನೆಂದೂ ಹೇಳುವೆನು. (ಕ. ಸಾ. ಪ. ಪ ಅಕ್ಟೋಬರ್-ಡಿಸೆಂಬರ್ ಪುಟ ೨೬೯.)

ಮತ್ತು ಸಿಂದವಾಡಿಯು ಶಿವಮೊಗ್ಗ ಚಿತ್ರದುರ್ಗ ಬಳ್ಳಾರಿ ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳನೊಳಕೊಂಡಿದ್ದಿತು (ರೈಸ್ ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೭ ಉಪೋದ್ಘಾತ ಪುಟ ೩೪). ಫ್ಲೀಟರು ಕೂಡ ಕಿಸುಕಾಡು ೭೦, ಕೆಳವಾಡಿ ೩೦೦, ಬಾಗೆ ೭೦, ನರೆಯಂಗಲ್ ೧೧೨ ಮುಂತಾದವು ಸಿಂದವಾಡಿಯಲ್ಲಿದ್ದವೆಂದು ನಿರ್ಧರಿಸಿರುವರು. ಬಾಗೆನಾಡು ೭೦ ಗಂಗಬೂತುಗನಿಗೆ ಕೊಡಲ್ಪಟ್ಟಿತ್ತು. (ಎಪಿ ಇಂ ೪-೩೫೦) ಕಿಸುಕಾಡು ೭೦ ಕ್ಕೆ ಪಟ್ಟದಕಲ್ (ಕಿಸುವೊಳಲ್, ಪಟ್ಟದಕಿಸುವೊಳಲ್) ಅಯ್ಯಾವಳೆ ಅರಸೀಬೀಡಿ ಕಿರುನೆರೆಯಂಗಲ್ ಇವು ಸೇರಿದ್ದು ಎರಂಬರಿಗೆಯೇ ರಾಜಧಾನಿಯಾಗಿದ್ದಿತು. (ಕ್ರಿ. ಶ. ೧೧೭೪) ಇದಕ್ಕೆ ವಾಯವ್ಯದಲ್ಲಿ, ಮತ್ತು ಕೆಳವಡಿ ೩೦೦ಕ್ಕೆ ಈಶಾನ್ಯದಲ್ಲಿ ಬಾಗಡಿಗೆಯು ಇದ್ದಿತು. (ಎಪಿ. ಇಂಡಿಕಾ ಸಂಪುಟ ೩) ಆದುದರಿಂದ ತರ್ದವಾಡಿಯು ಅಂತರ್ಭಾಗವಾದ ತರಿಕಾಡುನಾಡಿನಲ್ಲಿ ಮಂಗಳವಾಡವು ಒಂದು ಬಾಡವಾಗಿದ್ದಿದುರಿಂದ ವಿರುದ್ಧವೇನೂ ಇಲ್ಲ. ಬಸವೇಶ್ವರನು ಎರಂಬರಿಗೆಗೆ ಹೋಗದೇ ಇದ್ದರೂ ಮಂಗಳವಾಡಕ್ಕೆ ಹೋದುದರಿಂದ ಸಿಂದವಾಡಿ ಮಹಾಮಂಡಲದಲ್ಲಿಯೇ ಇದ್ದನೆಂದು ಸಿದ್ಧವಾಗುವದು. ಅರ್ಜುನವಾಡ ಶಾಸನದಲ್ಲಿ ಮಾದಿರಾಜನು ತರ್ದವಾಡಿ ಮಧ್ಯಗ್ರಾಮ ಬಾಗವಾಡಿ ಪುರವರಾಧೀಶ್ವರನೆಂದು ಹೇಳಿದೆ. (ಎಪಿ. ಇಂ. ೨೧ ಪುಟ ೧೨) ಒಂದನೆಯ ಸೋಮೇಶ್ವರನ ಹೊನ್ನವಾಡ ಶಾಸನದಲ್ಲಿ ತರ್ದವಾಡಿ ಸಾಸಿರದೊಳಗೆ ಅರುನೂರಂಬಾಡದ ಖಂಪಣ ಬಾಗೆ ೫೦ ಮತ್ತು ಅದರ ಉತ್ತಮಾಗ್ರಹಾರ ಹೊನ್ನವಾಡವು ಉಕ್ತವಾಗಿದೆ. ಈ ಬಾಗೆ ೫೦ ತಡಲ್ಬಾಗೆ ಸುತ್ತಮುತ್ತಲಿದ್ದಿತೆಂದು ಫ್ಲೀಟರು ಹೇಳುವರು. (ಇಂಡಿಯನ್ ಆ್ಯಂಟಿಕ್ವರಿ ೨೦ ಪುಟ ೩೫೦) ಬಾಗಡಿಗೆಯು ಕೆಳವಡಿ ೩೦೦ ರ ಈಶಾನ್ಯಕ್ಕೆ ಇದ್ದಿತು. ಅಂತು ಮೇಲೆ ಹೇಳಿದಂತೆ ಬಾಗೆ ೭೦ ಸಿಂದವಾಡಿಯಲ್ಲಿಯೇ ಸೇರಿದ್ದಿತು.



(೫) ಪಾಲ್ಕುರಿಕೆ ಸೋಮನಾಥ, ಭೀಮಕವಿ ಮುಂತಾದವರು ಹಿಂದಣ ರಾಜರ ಹೆಸರುಗಳನ್ನೇ ಮರೆತಿರಬಹುದೆಂದು ಶ್ರೀ. ಹಳಕಟ್ಟಿಯವರು ಹೇಳುವರು. ಬಸವೇಶ್ವರನ ಜೀವನದಲ್ಲಿ ಬಿಜ್ಜಳನ ಪ್ರಸಂಗವು ಬಹಳ ಮುಖ್ಯವಲ್ಲವೆ? ಇಂತಹ ಬಿಜ್ಜಳನ ವಿಷಯವಾಗಿ ಪಾಲ್ಕುರಿಕೆ ಸೋಮನ ಸಮಕಾಲೀನನಾದ ಹರಿಹರನು ಹೇಳುವದನ್ನು ನಂಬಿ ಸೋಮನಾಥನಿಗೆ ಮಾತ್ರ ಈ ವಿಷಯವು ತಿಳಿದಿಲ್ಲವೆಂಬುದು ಸರಿಯಾಗದು. ಸೋಮನಾಥನ ಸಮಕಾಲೀನನಾದ ಕರಸ್ಥಳಸೋಮನು ಬಸವನ ಸಮಕಾಲೀನನಾದ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಶಿಷ್ಯನಾಗಿದ್ದನು. (ಬಸವ ಪುರಾಣಮು. I)

(೬) ಬಿಜ್ಜಳನು ಶೈವ ಮತ್ತು ಜೈನ ದೇವಾಲಯಗಳೆರಡಕ್ಕೂ ದಾನಗಳನ್ನು ಕೊಟ್ಟಿರುವದರಿಂದ "ಯಾವ ನಿರ್ಣಯವನ್ನು ಮಾಡಲಿಕ್ಕೆ ಬರುವದಿಲ್ಲ"ವೆಂದು ಹೇಳಿರುವರು. ಇದರಿಂದಲೇ ಬಿಜ್ಜಳನು ವೀರಶೈವ ಪುರಾಣಗಳಲ್ಲಿ ಹೇಳಿದಂತೆ ಜೈನರ ಪಕ್ಷಪಾತಿ, ಶಿವದ್ರೋಹಿ ಎಂಬುದು ನಿರಾಧಾರವೆಂದು ನಿರ್ಣಯಿಸುವದಕ್ಕೆ ಆತಂಕವಿಲ್ಲವಷ್ಟೆ! ಬಿಜ್ಜಳನು ಸ್ವತಃ ಶೈವನು. ಇವನ ಮತ್ತು ಇವನ ಮಕ್ಕಳ ಹೆಸರುಗಳು (ಸೋಮೇಶ್ವರ, ಸಂಕಮ, ವಿದ್ಯೇಶ್ವರ ಅಥವಾ ವಿದ್ಯಾಧರ) ಶೈವ ನಾಮಗಳು. ಕಾಳಚೂರ್ಯರು ಶೈವಾಂಶಸಂಭೂತರೆಂದು ಶಾಸನಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

(೭) ಬಿಜ್ಜಳನು ರಾಜಪರಿತ್ಯಾಗ ಮಾಡಿದನೆಂದು ನಾನು ಹೇಳಿರುವದಕ್ಕೆ ಉತ್ತರವಾಗಿ ಒಬ್ಬರು ಹಾಗೆ ಶಾಸನದಲ್ಲಿ ಹೇಳಿಲ್ಲವೆಂಬುದನ್ನು ನಂಬಿ ಶ್ರೀ. ಹಳಕಟ್ಟಿಯವರು ಫ್ಲೀಟರು ಹೇಳಿರುವದು ಕೂಡ ನಂಬಲಾಗದೆಂದು ಹೇಳಿರುವರು.

ಆದರೆ ಈ ಶಾಸನವು ಶಿಕಾರಿಪುರ ತಾಲ್ಲೋಕಿನಲ್ಲಿರುವ ಬೆಳಗಾವಿಯಲ್ಲಿದೆ. ಅಲ್ಲಿನ ಕೇದಾರೇಶ್ವರ ದೇವಸ್ಥಾನದ ಪ್ರಾಕಾರದಲ್ಲಿಡಲ್ಪಟ್ಟಿದೆ. (ಎಪಿಗ್ರಾಫಿಯ ಕರ್ನಾಟಕ ಸಂಪುಟ ೭, ಭಾಗ ೧, ಶಿಕಾರಿಪುರ ೯೨) ಈ ಶಾಸನವು ಬಿಜ್ಜಳನ ಮತ್ತು ಮುರಾರಿಯ ಅಮಾತ್ಯನಾದ ಕೇಶವಾಮಾತ್ಯನನ್ನು ಬಹಳವಾಗಿ ಹೊಗಳುವದು. ನಾಲ್ಕನೆಯ ಪಂಕ್ತಿಯಲ್ಲಿ ಬಿಜ್ಜಳನ ಬಿರುದುಗಳು ಕೊಡಲ್ಪಟ್ಟಿರುವದು. ಅನಂತರ ಹನ್ನೊಂದನೆಯ ಪಂಕ್ತಿಯಲ್ಲಿ:—

ಇಂತದ್ವಿತೀಯ ಸ್ವಾಮಿತ್ವದಿಂ ವಸುಧಾವಳಯಮಂ ಸುಖದಿನೇಕ ಛತ್ರದಿಂ ರಾಜ್ಯಂಗೆಯ್ಯುತಿರ್ದು **ಆತ್ಮರಾಜ್ಯಭರ ನಿರೂಪಣಂ ಮಾಡಿದ ಆಮಹಾರಾಜಪ್ರಿಯತನಯ** ಪ್ರತಾಪಮಂ ಪೇಳ್ವೊಡೆ ...

ಎಂಬುದಾಗಿ ರಾಯಮುರಾರಿಸೋಮೇಶ್ವರನನ್ನು ಹೊಗಳುತ್ತದೆ. ಅವನು ಬಾಳಿಕೆ ಕೇಸಿಮಯನನ್ನು "ದಕ್ಷಿಣದಿಶಾವರದ ಭಂಡಾರವಾಡ ದೇಶಂಗಳೆಲ್ಲಮಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನಂ" ಮಾಡೆಂದು ನಿಯಮಿಸಿದನು. ಆ ಕೇಸಿಮಯ್ಯನು ತರ್ದವಾಡಿ ೧೦೦೦, ಹಾನುಂಗಲ್ ೫೦೦ ಬನವಸೆ ೧೨೦೦೦ ಸುಖದಿನೇಕಕಾಲಂ ಪರಿಪಾಳಿಸುತ್ತಂ, ಸ್ವದೇಶಾವಲೋಕನಾರ್ಥ ಬಂದು" ಬಳ್ಳಿಗಾವೆಯ ದಕ್ಷಿಣಕೇದಾರೇಶ್ವರ ಸ್ಥಾನಾಚಾರ್ಯನಾದ ರಾಜಗುರು ವಾಮಶಕ್ತಿಗೆ ದಾನವನ್ನು ಕೊಟ್ಟನು. ಇದು ಕಾಲಚೂರ್ಯ ವರ್ಷ ೧೭ ಸರ್ವಧಾರಿ ವೈಶಾಖ ಪೌರ್ಣಿಮೆ ಆದಿತ್ಯವಾರ ಸೋಮಗ್ರಹಣ ಸಂಕ್ರಮಣ ವ್ಯತೀಪಾತದಲ್ಲಿ (ಕ್ರಿ. ಶ. ೧೧೬೮) ಕೊಡಲ್ಪಟ್ಟಿತು

ಹೀಗೆ ಬಿಜ್ಜಳನು ತನ್ನ ಪ್ರಿಯತನಯನಾದ ಸೋಮೇಶ್ವರನಿಗೆ ಆತ್ಮರಾಜ್ಯಭಾರವನೆಲ್ಲ ಕೊಟ್ಟನೆಂದು ಶಾಸನದಲ್ಲಿ ಸ್ಪಷ್ಟವಾಗಿ ಹೇಳಿದೆ.

(೮) ಲಕ್ಷಣ್ಣನು ಬಸವೇಶ್ವರನು ಸಿದ್ಧಾರ್ಥಿ ಸಂವತ್ಸರದಲ್ಲಿ ಹುಟ್ಟಿದನೆಂಬುದನ್ನು ನಾನು ಸಂಪೂರ್ಣವಾಗಿ ನಂಬಿರುವನೆಂದು ಆದರೆ ಲಕ್ಕಣ್ಣನು ೧೫ ಶತಮಾನದಲ್ಲಿದ್ದವನಾದುದರಿಂದ ಅವಿಶ್ವಸನೀಯವೆಂದು ಶ್ರೀಹಳಕಟ್ಟಿಯವರು ಹೇಳುವರು. ಲಕ್ಕಣ್ಣನು ನಿಷ್ಠನಾದ ವೀರಶೈವನು. ವರದಾನಿಗುಡ್ಡಮ್ಮ ವಿಷಯವಾಗಿ ಇವನು ಬರೆದಿರುವದು ಶಾಸನಾಧಾರಗಳಿಂದ ಸಿದ್ಧವಾಗುವದೆಂದು ತಾವೇ ತೋರಿಸಿರುವರು. ಬಸವನ ವಿಷಯವಾಗಿ ಮಾತ್ರ ನಂಬದಿರಲು ನಿದರ್ಶನಗಳು ಸಾಲವು.

ಚಿಕ್ಕ ವಯಸ್ಸಿನಲ್ಲಿಯೇ ಮಹಾತ್ಮರು ತಮ್ಮ ಪ್ರತಿಭೆಯನ್ನು ತೋರಿಸಿರುವದು ನಿಜ. ಆದರೆ ಪ್ರಕೃತದಲ್ಲಿ ಬಸವನ ಶಾಪದಿಂದಲೇ ಕಲ್ಯಾಣ ಕಟಕನಾಶವಾಯಿತೋ ಇಲ್ಲವೋ ಎಂಬುದನ್ನು ನಾವು ಚರ್ಚಿಸಬೇಕು. ಪಾಲ್ಕುರಿಕೆ ಸೋಮನಾಥನು ಮೇಲೆ ಉದಾಹರಿಸಿದ ಬಸವೇಶ್ವರ ವಚನವನ್ನನುಸರಿಸಿ ತನ್ನ ತೆಲುಗು ಬಸವಪುರಾಣದಲ್ಲಿಯೂ "ಕಲ್ಯಾಣ ಕಟಕಮು ಪಾಡುಗಾಶಪಿಯಿಂಚೆ ಬಸವನ ಮಂತ್ರಿ" ಎಂದು ಹೇಳಿರುವನು. ಆದುದರಿಂದ ಬಸವೇಶ್ವರನು ಪಾಲ್ಕುರಿಕೆ ಸೋಮನಾಥನು "ಬಿಜ್ಜಳನ ಭಂಡಾರ ಕೆಟ್ಟಿತ್ತು. ಕಲ್ಯಾಣ ಹಾಳಾಯಿತ್ತು. ಚಾಳುಕ್ಯರಾಯನಾಳಿಕೆ ತೆಗೆಯಿತ್ತು" ಇತ್ಯಾದಿಯಾಗಿ ಒಂದೇ ಸಂಬಂಧವನ್ನು ಹೇಳಿರುವರೆಂದು ನಿಷ್ಪಕ್ಷಪಾತದೃಷ್ಟಿಗೆ ತೋರದಿರಲಾರದು.



ಆದುದರಿಂದ ಬಸವೇಶ್ವರನು ೩೬ ನೆ ವರ್ಷದಲ್ಲಿಯೇ ಶಿವೈಕ್ಯನಾದನು, ರೇವಣನು ಬಸವನೊಡನೆ ಮಂಗಳವಾಡದಲ್ಲಿದ್ದನು, ಸಿದ್ಧರಸನು ಬಲದೇವನ ತಮ್ಮನಾಗಿದ್ದನು, ಬಸವೇಶ್ವರ ಷಟ್ಸ್ಥಳ ವಚನ ಕಥಾಸಾರ ಇಂತಹ ಗ್ರಂಥಗಳ ಆಧಾರದಮೇಲೆ ಬಸವನು ಬಿಜ್ಜಳನೊಡನೆ ಕಲ್ಯಾಣಕ್ಕೆ ಹೋಗಿ ಮಂತ್ರಿಯೇ ಆದನು, ಇತ್ಯಾದಿ ತರ್ಕಗಳನ್ನು ತ್ಯಜಿಸಿ ಕಾಳಚೂರ್ಯ ಬಿಜ್ಜಳನಿಗೂ ಬಸವೇಶ್ವರನಿಗೂ ಯಾವ ಸಂಬಂಧವೂ ಇರಲಿಲ್ಲವೆಂದು ಒಪ್ಪಿಕೊಳ್ಳುವರೆಂದು ನನ್ನ ಸವಿನಯ ಪ್ರಾರ್ಥನೆ.

---

## ಬಸವೇಶ್ವರನು ನಿರ್ಮಿಸಿದ ಸರ್ವಾಂಗ ಸುಂದರವಾದ ಸಮಾಜ ಮಂದಿರ.

( ಲೇಖಕ:— ಸದಾಶಿವಪ್ಪ. ಹಂಜಿ. ಎಂ. ಎ. ಬೈಲಹೊಂಗಲ. )

ಈ ಜಗತ್ತಿನಲ್ಲಿ ಮನುಷ್ಯನಿಗೂ ಸಮಾಜಕ್ಕೂ ನಿಕಟ ಸಂಬಂಧವಿರುತ್ತದೆ. ಒಬ್ಬ ಮನುಷ್ಯನು ಸುಖದಿಂದ ಬಾಳಬೇಕಾದರೆ ಅವನಿರುವ ಸಮಾಜದ ಪರಿಸ್ಥಿತಿಯು ಒಳ್ಳೇ ರೀತಿಯಿಂದ ಇರಬೇಕಾಗುವದು. ತಮ್ಮ ಸಮಾಜದಲ್ಲಿಯ ಪ್ರತಿಯೊಬ್ಬನ ಯೋಗ ಕ್ಷೇಮ ಸಮಾಚಾರಗಳನ್ನು ನೋಡಿಕೊಳ್ಳುವದು ಪ್ರತಿಯೊಂದು ಸಮಾಜದ ಮುಖ್ಯ ಕರ್ತವ್ಯವಾಗಿರುವದು. ಮನುಷ್ಯನಿಗೆ ಸಂಸಾರದಲ್ಲಿ ಅನೇಕ ಸಂಗತಿಗಳ ಅವಶ್ಯವಿರುತ್ತದೆ. ಮತ್ತು ಅವನು ಅವನ ಹೆಂಡರು ಮಕ್ಕಳುಗಳಿಗೆ ಇರಲಿಕ್ಕೆ ಮನೆಮಾರುಗಳು, ಅವನ ಮನೆತನದ ಉಪಜೀವನಕ್ಕೆ ಯಾವದಾದರೊಂದು ಉದ್ಯೋಗ ಮೊದಲಾದವು ಅತ್ಯವಶ್ಯವಾಗಿರುತ್ತವೆ. ಅವನು ಏನೂ

ಇಲ್ಲದೆ ತೀರ ಬಡವನಿದ್ದರೆ ಅವನನ್ನು ಮುಂದಕ್ಕೆ ಕರೆದು ಅವನು ಸ್ವಾವಲಂಬಿಯಾಗಿ ದುಡಿಯುವಂತೆ ಒಂದು ಉದ್ಯೋಗವನ್ನು ಹಚ್ಚಿಕೊಡುವದೂ ಕೂಡ ಸಮಾಜದ ಕಾರ್ಯವಾಗಿರುತ್ತದೆ. ಯಾಕಂದರೆ ಈ ಜಗತ್ತಿನಲ್ಲಿ ಬಡತನದ ಜೀವನವು ಕಷ್ಟಕರವಾದದ್ದು. ಅವನ ಬಗ್ಗೆ ಕೆಡಕೆನಿಸಿದವರು ಒಂದೆರಡು ದಿವಸ ಇಟ್ಟುಕೊಂಡು ಊಟಹಾಕಬಹುದು. ಆದರೆ ಇದು ಬಹು ದಿವಸ ನಡೆಯುವ ಮಾತಲ್ಲ. ಮುಂದೆ ಒಂದೆರಡು ದಿನಗಳಲ್ಲಿಯೇ ಅವನು ಬೇಸರಾಗಿ ಆ ಮನೆಯನ್ನು ತಾನೇ ಸಹಜವಾಗಿ ತ್ಯಜಿಸಬೇಕಾಗುವದು. ಆದುದರಿಂದ ಬಡವರನ್ನು ಯೋಗ್ಯ ದಾರಿಗೆ ಹಚ್ಚುವದೆಂದರೆ ಅವರಿಗೆ ಒಂದು ಪ್ರತ್ಯೇಕ ಉದ್ಯೋಗವನ್ನು ಮಾಡಹಚ್ಚಿ ಅವನು ತನ್ನ ಕುಟುಂಬ ಪೋಷಣ ಮತ್ತು ತನ್ನ ಸಮಾಜಸೇವೆ ಮಾಡಿಸುವದೇ ಸಮಾಜದ ಮುಂದಾಳುಗಳ ಮಹತ್ವದ ಕಾರ್ಯವಾಗಿರುವದು. ಇದರಿಂದ ಪ್ರತಿಯೊಬ್ಬನಿಗೆ ಹೊಟ್ಟೆತುಂಬ ಅನ್ನ ಮೈ ತುಂಬ ಬಟ್ಟೆಗಳು ದೊರೆತು ಅವನು ಸುಖಶಾಂತಿಗಳಿಂದ ಬಾಳುವನು. ಹೀಗೆ ಸಮಾಜದಲ್ಲಿ ಸುಖಶಾಂತಿಗಳು ನೆಲಿಸಿದ ಮೇಲೆ ನಿಜವಾಗಿ ಆ ಸಮಾಜವು ಎಲ್ಲ ಅಂಗಗಳಿಂದಲೂ ಪರಿಪೂರ್ಣವಾಗಿ ಎಲ್ಲರಿಗೂ ಆದರ್ಶವಾದದ್ದಾಗಿರುವದು.

ಬಸವೇಶ್ವರನು ವೀರಶೈವ ಧರ್ಮವನ್ನು ಪುನರುಜ್ಜೀವನಗೊಳಿಸಿ ಅದನ್ನು ಪ್ರಸಾರ ಮಾಡುವಾಗ ಅವನು ಒಳ್ಳೇ ಸರ್ವಾಂಗ ಸುಂದರವಾದ ಸಮಾಜ ಮಂದಿರವನ್ನು ನಿರ್ಮಿಸಲಿಕ್ಕೆ ಬಹಳ ಪ್ರಯತ್ನ ಪಟ್ಟನು. ಅವನು ಧರ್ಮದ ಎಲ್ಲ ತತ್ವಗಳನ್ನು ಬಲ್ಲವನಾಗಿದ್ದು ಅವುಗಳನ್ನು ವ್ಯವಹಾರದಲ್ಲಿ ಅಂದರೆ ತಾನಿರುವ ಸಮಾಜದಲ್ಲಿಯ ಜನರಿಗೆ ಅವರ ಪ್ರತಿದಿನದ ವ್ಯವಹಾರಗಳಿಗೆ ಉಪಯೋಗವಾಗುವಂತೆ ಪ್ರಸಾರ ಮಾಡಿದನು. ಕೇವಲ ಧರ್ಮ ಧರ್ಮವೆಂದು ಅದನ್ನು ಪ್ರಚಾರ ಮಾಡುತ್ತಾ ಹೋದರೆ ಅದು ಎಂದೂ ಪ್ರಚಾರವಾಗದು. ಆದರೆ ಧರ್ಮಕ್ಕಿಂತ ಮೊದಲು ಅನೇಕ ಸಂಗತಿಗಳು ಸಮಾಜದಲ್ಲಿ ನೆಲೆಗೊಳ್ಳಬೇಕಾಗುತ್ತದೆ. ಆದುದರಿಂದ ಬಸವೇಶ್ವರನು ಎಲ್ಲ ಮತದ ಜನರಿಗೂ ಸರಿಹೋಗುವ ಕೆಲವು ಮುಖ್ಯ ಸಂಗತಿಗಳನ್ನು ಗೊತ್ತು ಮಾಡಿ ಅವುಗಳ ಸಹಾಯದಿಂದ ಅವನು ಒಳ್ಳೇ ಸಮಾಜವನ್ನೇ ನೆಲೆಗೊಳಿಸಲು ಯತ್ನಿಸಿದನು. ಕೇವಲ ಧರ್ಮಕ್ಕಾಗಿ ಮನುಷ್ಯನಲ್ಲ, ಆದರೆ ಮನುಷ್ಯನ ಸಲುವಾಗಿ ಧರ್ಮವೆಂಬದನ್ನು ನೆನಪಿ



ನಲ್ಲಿಟ್ಟು, ಭಿನ್ನ ಮತದ ಜನಮಿಶ್ರಿತ ಸಮಾಜಕ್ಕೆ ಸರಿ ಹೋಗುವಂಥ ಧರ್ಮ ತತ್ವಗಳನ್ನು ನೀತಿ ತತ್ವಗಳನ್ನು ಪ್ರಚಾರದಲ್ಲಿ ತಂದನು. ಮನುಷ್ಯ ಸಮಾಜದಲ್ಲಿ ನೀತಿಯೇ ಪ್ರಾಮುಖ್ಯವು. ಆದುದರಿಂದ ಸದಾಚಾರದಿಂದ ನಡೆದು ಅಂತರಂಗ ಶುದ್ಧಿಯನ್ನು ಪಡೆಯಬೇಕು. ಮತ್ತು ಅವನು ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬೇಕಾದರೆ ಗಿರಿಗಂಹರಗಳಿಗೆ ಹೋಗಿ ನಿಲ್ಲಬೇಕಾಗಿಲ್ಲ. ಕಂದ ಮೂಲಗಳನ್ನು ತಿನ್ನುವ ಅವಶ್ಯವಿಲ್ಲ. ದೇಹವನ್ನು ಕೃಶಮಾಡಿ ಉಗ್ರ ತಪಸ್ಸನ್ನು ಕೈಕೊಳ್ಳುವ ಕಾರಣವಿಲ್ಲ. ಆದರೆ ಪರಮಾತ್ಮನಿಂದ ನಿರ್ಮಿಸಲ್ಪಟ್ಟ ಈ ಜಗತ್ತಿನ ಸಂಸಾರದಲ್ಲಿ ತೊಡಗಿಕೊಂಡು ಅದನ್ನೇ ಸಾಧನ ಭೂಮಿಯನ್ನಾಗಿ ಮಾಡಿಕೊಂಡು ಪಾಲಿಗೆ ಬಂದ ಸುಖೋಪಭೋಗಗಳನ್ನು ಯಥೇಚ್ಛವಾಗಿ ಭೋಗಿಸುತ್ತಾ ಯಾವಾಗಲೂ ಪರರಿಗೆ ಕಲ್ಯಾಣವನ್ನೇ ಬಯಸಬೇಕೆಂದು ಬಸವೇಶ್ವರನು ಜನರಿಗೆ ಬೋಧಿಸಿದನು.

ಒಂದು ಸಮಾಜವನ್ನು ನಿರ್ಮಾಣ ಮಾಡಬೇಕಾದರೆ ಕೇವಲ ನೀತಿಯೂ ಧರ್ಮವೂ ಸಾಕಾಗುವದಿಲ್ಲ. ಅವರ ಜೊತೆಗೆ ಇನ್ನೂ ಅನೇಕ ಸಂಗತಿಗಳ ಅವಶ್ಯವಿರುವದು. ಬಸವೇಶ್ವರನು ಇದನ್ನು ಲಕ್ಷಕ್ಕೆ ತಂದು ವೀರಶೈವ ದೀಕ್ಷೆಯನ್ನು ಪಡೆದ ಪ್ರತಿಯೊಬ್ಬ ವ್ಯಕ್ತಿಯು ಎಲ್ಲರ ಸರಿ ಸಮಾನನು ಎಂದು ಸಾರಿ ಹೇಳಿದನು. ಇದರಿಂದ ಉಚ್ಚನೀಚಗಳೆಂಬ ಕುಲಗಳ ಮತ್ತು ಮತಗಳ ನಿರ್ಮೂಲವು ಆಯಿತು. ಬ್ರಾಹ್ಮಣನೆಂದರೆ ಶ್ರೇಷ್ಠನು ಹೊಲೆಯನೆಂದರೆ ಕಡಿಮೆಯುವನು ಎಂಬ ಭಾವನೆಯು ಹೋಗಿ ಬಿಟ್ಟಿತು. ಲಿಂಗದೀಕ್ಷೆಯನ್ನು ಹೊಂದಿದವರಿಗೆ ಎಲ್ಲರಿಗೂ ಪ್ರೇಮದಿಂದಲೂ ನಿಷ್ಪಕ್ಷಪಾತ ಬುದ್ಧಿಯಿಂದಲೂ ವ್ಯವಹಾರದಲ್ಲಿ ಸರಿಸಮಾನವಾದ ಹಕ್ಕುಗಳನ್ನು ಕೊಟ್ಟದ್ದರಿಂದ ಈ ಮತವನ್ನು ಅಂಗೀಕರಿಸಿದ ಎಲ್ಲರೂ ಒಕ್ಕಟ್ಟಿನಿಂದಲೂ ಪರಸ್ಪರ ಪ್ರೇಮದಿಂದಲೂ ನಡೆಯಹತ್ತಿದರು. ಎಲ್ಲರಿಗೂ ಒಂದೇ ತರದ ದೀಕ್ಷೆ ಒಂದೇ ಮಂತ್ರ ಹೀಗಾಗಿ ಅವರಲ್ಲಿ ಮನುಷ್ಯ ಪ್ರಾಣಿಯೆಲ್ಲ ಒಬ್ಬರಿಗೊಬ್ಬರು ಸಮಾನರು ಎಂಬ ಅತ್ಯುಚ್ಚ ಭಾವನೆಯು ನೆಲೆಗೊಂಡಿತು. ಒಂದುವೇಳೆ ಬಸವೇಶ್ವರನು ಈ ಮತವನ್ನು ಸ್ವೀಕರಿಸಿದವರಿಗೆ ಪಕ್ಷಪಾತ ಬುದ್ಧಿಯನ್ನು ತೋರಿಸಿದ್ದರೆ ಅವರಲ್ಲಿ ಭಯಂಕರ ಕೋಲಾಹಲವೆದ್ದು ಅವನಲ್ಲಿ ಯಾರೂ ನಂಬಿಗೆ ಇಡದೆ ಆ ಮತಕ್ಕೆ ಪ್ರೋತ್ಸಾಹನ ಕೊಡುತ್ತಿದ್ದಿಲ್ಲ. ಆದರೆ ಮೊದಲೇ ಜಾಣತನದಿಂದ ಇದನ್ನೆಲ್ಲ ತಿಳಕೊಂಡು

ಬ್ರಾಹ್ಮಣನಿಂದ ಹಿಡಿದುಕೊಂಡು ಕೀಳು ಹೊಲೆಯನ ವರೆಗೂ ಅವನು ಒಂದೇ ತರದ ಆದರ ಮತ್ತು ಪ್ರೇಮಭಾವವುಳ್ಳವನಾಗಿದ್ದುದರಿಂದ ಯಾರಿಗೂ ವೀರಶೈವ ಮತವನ್ನು ಸ್ವೀಕರಿಸುವದು ಜಡವೆನಿಸುತ್ತಿದ್ದಿಲ್ಲ. ಹೀಗೆ ಅವರು ಮೊದಲಿಗಿಂತಲೂ ಹೆಚ್ಚು ಸುಖದಿಂದ ಇರಹತ್ತಿದರು.

ಇಲ್ಲಿಯ ವರೆಗೆ ಸ್ತ್ರೀಯರ ಉನ್ನತಿಯ ಬಗ್ಗೆ ಯಾರೂ ಅಷ್ಟು ವಿಚಾರ ಮಾಡಿದಂತೆ ಕಾಣುವದಿಲ್ಲ. ಆದರೆ ಸ್ತ್ರೀಯರು ಬುದ್ಧಿಯಲ್ಲಿಯೂ ಶಕ್ತಿಯಲ್ಲಿಯೂ ಪುರುಷರಿಗಿಂತ ಕಡಿಮೆ ತರಗತಿಯವರು, ಸಾಮಾಜಿಕ ಅಥವಾ ಧಾರ್ಮಿಕ ಕಾರ್ಯಗಳಲ್ಲಿ ಕೆಲಸ ಮಾಡಲಿಕ್ಕೆ ಅವರು ಸಂಪೂರ್ಣ ಅಯೋಗ್ಯರು, ಅವರು ವಿದ್ಯೆಯನ್ನು ಕೂಡ ಕಲಿಯಕೂಡದು, ದೀಕ್ಷೆಯನ್ನು ಪಡೆಯಲಿಕ್ಕೆ ಅಧಿಕಾರವಿಲ್ಲ. ಪುರುಷರ ಮುಖಾಂತರವೇ ಅವರು ದೇವರನ್ನು ಪೂಜಿಸಿ ಸದ್ಗತಿಪಡೆಯಬೇಕು, ಮೊದಲಾದ ಅನೇಕ ತರದ ಹೀನ ಮತ್ತು ಉಪಯೋಗವಿಲ್ಲದ ವಿಚಾರಗಳು ಜನರಲ್ಲಿ ತುಂಬಿದ್ದವು. ಆದರೆ ಬಸವೇಶ್ವರನು ಒಳ್ಳೇ ಸಮಾಜವನ್ನು ನಿರ್ಮಾಣ ಮಾಡುವಾಗ ಸ್ತ್ರೀಯರ ಉನ್ನತಿಗೆ ಬಹಳ ಪ್ರೋತ್ಸಾಹನ ಕೊಟ್ಟನು. ಪುರುಷರಂತೆ ಅವರೂ ದೀಕ್ಷೆಗೆ ಯೋಗ್ಯರು, ಅವರೂ ಸಹ ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬಲ್ಲರು, ಮತ್ತು ಅವರು ತಮ್ಮ ಪುರುಷರ ಯೋಗ್ಯ ಸದ್ಗತಿಯನ್ನು ಪಡೆಯಬಲ್ಲರು, ಎಂಬ ಭಾವನೆಗಳನ್ನು ಪ್ರಚಾರ ಮಾಡಿದನು. ಮೊದಲು ಸ್ತ್ರೀಯರಿಗೆ ಯೋಗ್ಯ ಆದರ ಗೌರವಗಳನ್ನು ತೋರಿಸಿ ಜನರಲ್ಲಿ ಅವರ ಬಗ್ಗೆ ಪೂಜ್ಯ ಭಾವನೆಯನ್ನುಂಟು ಮಾಡಿದನು. ಪರಸ್ತ್ರೀಯರೆಂದರೆ ಪ್ರತ್ಯಕ್ಷ ಮಹಾದೇವಿಯವರು ಮತ್ತು ಅವರನ್ನು ಯಾವಾಗಲೂ ತಮ್ಮ ಮಾತೆಯರಂತೆ ಇಲ್ಲವೆ ಸಹೋದರಿಯರಂತೆ ಭಾವಿಸಿ ನಡೆಯಬೇಕೆಂಬದನ್ನು ಪ್ರತ್ಯಕ್ಷ ಆಚರಣೆಯಲ್ಲಿ ತಂದನು. ಇದಲ್ಲದೆ ಅವರು ಹೆಣ್ಣು ಜನ್ಮಕ್ಕೆ ಬಂದ ಮೇಲೆ ಮದುವೆಯನ್ನು ಆಗಿಯೇ ತೀರಬೇಕೆಂಬ ವಂಶಪರಂಪರೆಯಿಂದ ಬಂದ ನಿಯಮವನ್ನು ತೆಗೆದುಹಾಕಿ ಅವರು ಮನಸ್ಸಿಗೆ ಬಂದರೆ ವಿವಾಹ ಮಾಡಿಕೊಳ್ಳಬಹುದು. ಇಲ್ಲವೆ "ಶರಣಸತಿ ಲಿಂಗಪತಿ" ಯೆಂಬ ಭಾವನೆಯಿಂದ ಆಜನ್ಮ ಕೌಮಾರ್ಯಾವಸ್ಥೆಯಲ್ಲಿಯೇ ಉಳಿಯಬಹುದೆಂದು ಸ್ತ್ರೀ ಸಮಾಜಕ್ಕೆಲ್ಲ ಸಾರಿ ಹೇಳಿದನು. ಆದುದರಿಂದ ಸ್ತ್ರೀಯರಿಗೆ ತಮ್ಮ ಮಾನಸಿಕ ಮತ್ತು ಶಾರೀರಿಕ ಪ್ರಗತಿಯನ್ನು ಹೊಂದಲಿಕ್ಕೆ ಅನುವಾಯಿತು. ಸಮಾಜದಲ್ಲಿ ಪುರುಷರ ಅಂಗವಿರುವಂತೆ ಸ್ತ್ರೀಯರೂ ಕೂಡ ಅದರಲ್ಲಿ ಭಾಗತೆಗೆದುಕೊಂಡು ಕೆಲಸ ಮಾಡಬೇಕೆಂದು ಅವನು ಬಯಸಿದನು. ಇದರಿಂದ ಅನೇಕ ಸ್ತ್ರೀಯರು ಸಮಾಜದಲ್ಲಿ ಮುಂದುವರಿದು ಕೆಲಸ ಮಾಡಹತ್ತಿದರು.



ಲಿಂಗ ದೀಕ್ಷೆಯನ್ನು ಪಡೆದವರೆಲ್ಲರೂ ಸಮಾನರು ಎಂದು ಹೇಳಿದಾಕ್ಷಣವೇ ಈ ತತ್ವವನ್ನು ಪ್ರಚಾರದಲ್ಲಿ ತರುವದು ಸಾಮಾನ್ಯ ಕಾರ್ಯವಲ್ಲ. ಇಲ್ಲಿಯ ವರೆಗೆ ಕೀಳು ಕುಲದವರೆನಿಸಿಕೊಂಡ ಅತ್ಯಂತ ಹೀನಾವಸ್ಥೆಯಲ್ಲಿದ್ದ ಅಸ್ಪೃಶ್ಯರನ್ನು ಮುಂದಕ್ಕೆ ಕರೆದು ಅವರಿಗೂ ಸಮಾಜದಲ್ಲಿ ಸರಿಸಮಾನವಾದ ಹಕ್ಕುಗಳನ್ನು ಕೊಟ್ಟು ಉಳಿದವರಿಗೂ ಅವರ ಕೂಡ ಪ್ರೇಮದಿಂದಲೂ ಆದರದಿಂದಲೂ ನಡೆಯಲಿಕ್ಕೆ ಹಚ್ಚಿಸಿದ್ದು ಬಸವೇಶ್ವರನು ಮಾಡಿದ ಒಳ್ಳೇ ಸಾಹಸದ ಮತ್ತು ಕ್ರಾಂತಿಕಾರಕ ಕಾರ್ಯವಾಗಿರುತ್ತದೆ. ಈ ಕಾರ್ಯದಲ್ಲಿ ಅವನಿಗೆ ಅನೇಕರು ವಿರೋಧಿಗಳಾಗಿ ಹೋರಾಡಿದರು. ಆದರೂ ಸಹ ಬಸವೇಶ್ವರನೂ ಆತನ ಅನುಯಾಯಿಗಳೂ ತಮ್ಮ ಸತ್ಯ ಧರ್ಮದ ತತ್ವಗಳಿಗನುಸಾರವಾಗಿ ನಡೆದರು. ಮತ್ತು ಅಸ್ಪೃಶ್ಯನಿವಾರಣೆಯನ್ನು ಮಾಡಿಯೇ ತೀರಿದರು. ಹೀಗೆ ಅಸ್ಪೃಶ್ಯರನ್ನು ಉದ್ಧಾರ ಮಾಡಿದ್ದರಿಂದ ಸಮಾಜದಲ್ಲಿ ಅವರಿಗೆ ಒಂದು ಮರ್ಯಾದೆಯುಳ್ಳ ಸ್ಥಾನವುಂಟಾಯಿತು. ಅವರು ಮಾಡುವ ಉದ್ಯೋಗವು ಕೀಳು ಎನಿಸಿದರೂ ಕಾಯಕದ ತತ್ವದಂತೆ ಅದು ಒಂದು ಪವಿತ್ರ ಮತ್ತು ಸಮಾಜಕ್ಕೆ ಉಪಯುಕ್ತವಾದ ಉದ್ಯೋಗವೇ ಸರಿ ಎಂದು ಗೊತ್ತಾಯಿತು ಮತ್ತು ಅವರು ಶಿಕ್ಷಣ ಪಡೆದು ಪ್ರತಿಯೊಂದು ಸಾರ್ವಜನಿಕ ಕಾರ್ಯಗಳಲ್ಲಿ ಅವರೂ ತಮ್ಮ ಜಾಣತನವನ್ನು ತೋರಿಸಹತ್ತಿದರು. ಹೀಗೆ ಅವರೂ ಕೂಡ ತಮ್ಮ ಜನ್ಮದ ಸ್ವಾರ್ಥಕತೆಯನ್ನು ಮಾಡಿಕೊಳ್ಳಲಿಕ್ಕೆ ಅನುವಾಯಿತು. ಒಟ್ಟಿನ ಮೇಲೆ ಬಸವೇಶ್ವರನು ಅಸ್ಪೃಶ್ಯರಾದರೂ ದೇವರು ಹುಟ್ಟಿಸಿದ ಮನುಷ್ಯನೇ ಸರಿ. ಅವರಿಗಾದರೂ ಜೀವನದ ಸುಖದುಃಖಗಳು ಆರೆ ಹಂಬಲಗಳು ಇವೆ. ಅವರು ಕೀಳು ಎಂದು ತಿಳಿದು ಮೂಲೆಗೆ ಕೂಡ್ರಿಸುವದು ಯೋಗ್ಯವಲ್ಲ, ಅವರೂ ನಮ್ಮ ಬಂಧುಗಳು ಎಂದು ಹೇಳಿ ಅವರಿಗೆ ಸ್ಥಾನಮಾನಗಳನ್ನೂ ಹಕ್ಕು ಬಾಧ್ಯತೆಗಳನ್ನೂ ಒದಗಿಸಿಕೊಟ್ಟನು.

ಇಷ್ಟೆಲ್ಲ ಮಾಡಿದ ಮೇಲೆ ಸಮಾಜದಲ್ಲಿಯ ಪ್ರತಿಯೊಬ್ಬ ಮನುಷ್ಯನಿಗೆ ಒಂದು ಸ್ವಂತ ಉದ್ಯೋಗವನ್ನು ಮಾಡಿಯೇ ಜೀವಿಸಬೇಕೆಂದು

ಅವನು ಕಟ್ಟಳೆ ಮಾಡಿದನು. ಯಾಕೆಂದರೆ ಮನುಷ್ಯನು ಹಿರಿಯರು ಗಳಿಸಿಟ್ಟ ಹಣವನ್ನು ಇಲ್ಲವೆ ಪರರಿಂದ ಅಪಹರಿಸಿದ ಧನವನ್ನು ಯಾವ ಉದ್ಯೋಗವನ್ನೂ ಮಾಡದೆ ಉಪಯೋಗಿಸುತ್ತಾ ಕೂಡ್ರಬಹುದು. ಹೀಗೆ ಕೂತು ತಿಂದರೆ ಆ ಹಣವು ಎಷ್ಟು ದಿವಸ ಸಾಲುವದು? ಆದುದರಿಂದ ಬಸವೇಶ್ವರನು ಸ್ವಾವಲಂಬಿಯಾಗಿ ಅನ್ಯರ ಧನವನ್ನು ಎಂದೆಂದಿಗೂ ಮುಟ್ಟದೆ ಒಂದು ಸ್ವಂತ ಉದ್ಯೋಗವನ್ನೇ ಮಾಡಿಯೇ ತನ್ನ ಉಪಜೀವನ ಮಾಡಬೇಕೆಂದೂ ಮತ್ತು ಯಾವ ಉದ್ಯೋಗವೇ ಆಗಲಿ ಅದು ಕಾಯಕದ ದೃಷ್ಟಿಯಿಂದ ಒಂದು ಪವಿತ್ರವಾದ ಉದ್ಯೋಗವೇ ಆಗುವದು ಎಂದೂ ತಿಳಿಸಿಕೊಟ್ಟನು. ಹೀಗೆ "ಕಾಯಕವೇ ಕೈಲಾಸ" ಎಂಬ ನೂತನ ತತ್ವದ ಪ್ರಕಾರ ಪೂರ್ವದ ಪ್ರತಿಯೊಂದು ಉದ್ಯೋಗವು ಪ್ರಚಾರದಲ್ಲಿ ಬಂದಿತು. ಆದರೆ ಮೊದಲು ಯಾವ ಉದ್ಯೋಗವೂ ಇದ್ದಿಲ್ಲವೆಂತಲ್ಲ. ಎಲ್ಲವೂ ಇದ್ದವು. ಆದರೆ ಜನರು ಬೇಸರದಿಂದ ಮಾಡುತ್ತಿದ್ದರಿಂದ ಅವರಲ್ಲಿ ಬಡತನವೂ ದಾರಿದ್ರ್ಯವೂ ಉಂಟಾಗಿದ್ದವು. ಇದಲ್ಲದೆ "ಜಂಗಮರಾದರೂ ಜಗತ್ತಿನ ಹಂಗಿಗರು" ಆದುದರಿಂದ ಅವರಾದರೂ ಕಾಯಕದಿಂದಲೇ ಜೀವಿಸತಕ್ಕದ್ದು ಎಂಬ ನಿಯಮವನ್ನು ಮಾಡಿದ್ದರಿಂದ ಅವರು ಭಿಕ್ಷೆಯೆತ್ತುವದನ್ನು ಬಿಟ್ಟು ತಮ್ಮ ಭಕ್ತರ ಸಲುವಾಗಿ ಯಾವದಾದರೊಂದು ಉದ್ಯೋಗವನ್ನು ಮಾಡಹತ್ತಿದರು. ಹೀಗೆ ಸಮಾಜದಲ್ಲಿದ್ದ ಮನುಷ್ಯನು ತನಗೆ ಬಂದಂಥ ಉದ್ಯೋಗವನ್ನು ಮಾಡಹತ್ತಿದ್ದರಿಂದ ಸಮಾಜಕ್ಕೆ ಉಪಯುಕ್ತವಾದ ಎಲ್ಲ ಉದ್ಯೋಗಗಳು ಅವರಲ್ಲಿಯೇ ನಡೆಯಹತ್ತಿದವು. ಇದರಿಂದ ಯಾವದೊಂದು ಕೆಲಸವನ್ನು ಮಾಡಿಸಿಕೊಳ್ಳಬೇಕಾದರೆ ಅನ್ಯ ಸಮಾಜದವರಿಗೆ ಬಾಯಿ ತೆರೆಯುದಂತಾಗಿ ಸಮಾಜದ ಹಣವು ಹೊರಗಿನ ಸಮಾಜಕ್ಕೆ ಹೋಗದೆ., ಇದ್ದ ಬಡ ಜನರ ಉದರ ಪೋಷಣಕ್ಕೆ ಹೋಗ ಹತ್ತಿತು. ಆದುದರಿಂದಲೇ ಬಸವೇಶ್ವರನು ನಿರ್ಮಿಸಿದ ಸಮಾಜವು ಸರ್ವ ಅಂಗಗಳಿಂದಲೂ ಪರಿಪೂರ್ಣವು ಮತ್ತು ಸರ್ವಾಂಗ ಸುಂದರವು ಎಂದು ಅನ್ನುವದು ಯಥಾ ಯೋಗ್ಯವೇ ಸರಿ. ಇದೇ ಕಾರಣದಿಂದಲೇ ವೀರಶೈವ ಸಮಾಜದಲ್ಲಿ ಪ್ರತಿಯೊಂದು ಉದ್ಯೋಗವನ್ನು ಮಾಡುವವರು ಕಂಡು ಬರುವಷ್ಟು ನೆರೆಹೊರೆಯ ಉಳಿದ ಯಾವ ಸಮಾಜದಲ್ಲಿಯೂ ಕಂಡು ಬರುವದಿಲ್ಲ. ಹೀಗೆ ಕಾಯಕ ಪದ್ಧತಿಯಿಂದ ಭಿಕ್ಷೆ ಬೇಡುವದು ಮತ್ತು ನಿರುದ್ಯೋಗ ಪ್ರಶ್ನೆ ( *The poblem of unemployment* ) ಗಳು ಸಂಪೂರ್ಣವಾಗಿ ಬಿಟ್ಟು ಹೋದವು. ಇಲ್ಲಿಯು ವರೆಗೆ ಹೊರಗಿನ ಜನರಿಗೆ ಖರ್ಚುಕೊಟ್ಟು ಮಾಡಿಕೊಳ್ಳುವ ಉದ್ಯೋಗಗಳನ್ನು ತಾವೇ ಸ್ವತಃ ಮಾಡಹತ್ತಿದ್ದರಿಂದ ಸಮಾಜದ ಆರ್ಥಿಕ ಪರಿಸ್ಥಿತಿಯು ಸುಧಾರಿಸಿ ಅದು ಒಳ್ಳೇ ಧನಧಾನ್ಯ ಸಂಪತ್ತುಗಳ ತವರು ಮನೆ ಆಯಿತು.



---

## ವೀರಶೈವ ಸಾಹಿತ್ಯದ ವೈಶಿಷ್ಟ್ಯ.

( ಲೇಖಕ— ಶ್ರೀಯುತ, ಎಸ್. ಜಿ. ಹಿರೇಮಠ. ಎಮ್. ಎ. ವಿಜಾಪುರ. )

ವೀರಶೈವ ಸಾಹಿತ್ಯವನ್ನು ಅದಕ್ಕೂ ಪೂರ್ವದ ಜೈನ ಸಾಹಿತ್ಯದೊಡನೆ ಮತ್ತು ಅದರ ತರುವಾಯ ತಲೆದೋರಿ ಅದರೊಡನೆ ಬೆಳೆದ ಬ್ರಾಹ್ಮಣ ಸಾಹಿತ್ಯದೊಡನೆ ಹೋಲಿಸಿ ನೋಡಿದರೆ ವೀರಶೈವಕವಿಗಳ ಸ್ವತಂತ್ರ ಪ್ರವೃತ್ತಿಯು ಅವರ ವೈಶಿಷ್ಟ್ಯವೆಂದು ಕಂಡು ಬರುತ್ತದೆ. ಜೈನ ಬ್ರಾಹ್ಮಣ ಕವಿಗಳೆಲ್ಲರೂ ಸಾಂಪ್ರದಾಯ ಶರಣರು; ಅವರು ಎಲ್ಲಿಯೂ ಸ್ವಾತಂತ್ರ್ಯವನ್ನು ತೋರಿಸಿಲ್ಲವೆಂತಲ್ಲ. ಆದಿ ಪಂಪ ರನ್ನರು ದುರ್ಯೋಧನನ ಪಾತ್ರವನ್ನು ರಚಿಸುವಲ್ಲಿ ಸ್ವಾತಂತ್ರ್ಯವನ್ನು ತೋರಿಸಿದರು. ಕುಮಾರ ವ್ಯಾಸನು ಸಂಸ್ಕೃತ ಭಾರತದ ಅನುವಾದಕನಲ್ಲ. "ಕುಮಾರ ವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪಾರವಾಗುವುದು" ಎಂದು ನಾವೆಲ್ಲರೂ ಅನ್ನುವಂತೆ ಸ್ವತಂತ್ರ ರೀತಿಯಲ್ಲಿ ಭಾರತವನ್ನು ರಚಿಸಿರುವನು. ಆದರೆ ವಸ್ತುಗಳನ್ನು ಆರಿಸುವಲ್ಲಿ, ಜನ ಸಾಮಾನ್ಯದ ಭಾಷೆಯನ್ನು ಉಪಯೋಗಿಸುವಲ್ಲಿ, ಕನ್ನಡ ಛಂದಸ್ಸುಗಳನ್ನು ನಿರ್ಮಿಸುವಲ್ಲಿ, ಜನಜೀವನಕ್ಕೂ ಸಾಹಿತ್ಯಕ್ಕೂ ನಿಕಟ ಸಂಬಂಧವನ್ನು ಬೆಳೆಸುವಲ್ಲಿ ಸ್ವಾತಂತ್ರ್ಯವನ್ನು ತೋರಿಸಿದವರೆಂದರೆ ವೀರಶೈವ ಕವಿಗಳೇ. ಈ ಸ್ವತಂತ್ರ ಮಾರ್ಗಾನುಸರಣವೇ ಅವರ ವೈಶಿಷ್ಟ್ಯ.

ಜೈನ ಪುರಾಣ ಕಾವ್ಯಗಳಲ್ಲಿ ವಸ್ತು ವೈವಿಧ್ಯವು ಸ್ವಲ್ಪವೂ ಕಂಡು ಬರುವುದಿಲ್ಲ. ಎಲ್ಲ ಕಾವ್ಯಗಳಲ್ಲಿ ಜಂಬೂದ್ವೀಪವರ್ಣನೆ ನಗರ ವರ್ಣನೆ,

ವನಕೇಳಿ ಜನಕೇಳಿ ಮುಂತಾದ ಮುಂತಾದ ಹದಿನೆಂಟು ವರ್ಣನೆಗಳು
ಬರುವವು. ಎಲ್ಲ ಪುರಾಣಗಳಲ್ಲಿಯು ವಸ್ತುಗಳು ಒಂದೇ ತರಹದವು. ಒಬ್ಬ
ಅರಸನಿರುವುದು, ಅವನು ಅನೇಕ ಸ್ತ್ರೀಯರೊಡನೆ ಭೋಗಗಳನ್ನು ಸೇವಿ
ಸುವುದು, ಒಂದು ದಿನ ಕೆನ್ನೆಯ ನೆರೆಗೂದಲವನ್ನು ನೋಡಿಯಾಗಲಿ,
ಉಲ್ಕಾಪಾತವನ್ನು ನೋಡಿಯಾಗಲಿ, ಅಥವಾ ಸಿಡಿಲಿನಿಂದ ಬಿದ್ದ ವಟ
ವೃಕ್ಷವನ್ನು ನೋಡಿಯಾಗಲಿ ವೈರಾಗ್ಯಪರನಾಗುವುದು. ಆ ಮೇಲೆ ತಪ
ಸ್ಸನ್ನಾಚರಿಸಿ ತೀರ್ಥಂಕರನಾಗಿ ಜನಿಸುವುದು, ಇಂದ್ರನು ಜಿನ ಶಿಸು
ವನ್ನು ಐರಾವತದ ಮೇಲೆ ಕೂಡಿಸಿಕೊಂಡು ಸ್ವರ್ಗಕ್ಕೊಯ್ಯುವುದು,
ಇತ್ಯಾದಿ ಇತ್ಯಾದಿ ಎಲ್ಲ ಜೈನ ಪುರಾಣಗಳಲ್ಲಿ ಕಂಡು ಬರುವವು. ಮತ್ತು
ವೀರಶೈವ ಸಾಹಿತ್ಯವು ತಲೆದೋರುವ ಪೂರ್ವದಲ್ಲಿ ಬರೆದ ಜೈನ ಕಾವ್ಯ
ಗಳೆಲ್ಲವೂ ಬರೆಯಲ್ಪಟ್ಟಿರುವುದು ಒಂದೇ ಒಂದು ಶೈಲಿಯಲ್ಲಿ. ಅದು
ಚಂಪೂಶೈಲಿ. ಭಾಷೆ ಸಂಸ್ಕೃತಪದ ಭೂಯಿಷ್ಠವಾದುದು. ಇವುಗಳನ್ನೋ
ದಲು ಪಂಡಿತರೇ ಬೇಕು. ಅವರಿಗೂ ಕೂಡ ಶಬ್ದಕೋಶಗಳ ಸಹಾಯವಿ
ಲ್ಲದೆ ಅರ್ಥವಾಗುವಂತಿಲ್ಲ.

ಈ ಜೈನ ಪುರಾಣಗಳೊಡನೆ ವೀರಶೈವ ಪುರಾಣಗಳನ್ನು ಹೋಲಿಸಿ
ನೋಡುವಾ. ವೀರಶೈವ ಕವಿಗಳು ಚಂಪೂಕಾವ್ಯಗಳನ್ನು ರಚಿಸಬಲ್ಲ
ಪಂಡಿತರಾಗಿದ್ದರೂ ಸಾಮಾನ್ಯ ಜನರ ಉದ್ಧಾರಕ್ಕಾಗಿ ಕನ್ನಡ ಛಂದಸ್ಸು
ಗಳಲ್ಲಿ ಮತ್ತು ಸರಳ ಭಾಷೆಯಲ್ಲಿ ಪುರಾಣ ಕಾವ್ಯಗಳನ್ನು ಬರೆದರು.
ಇದು ಅವರ ಸ್ವತಂತ್ರವೃತ್ತಿಯನ್ನು ತೋರಿಸುತ್ತದೆ. ಷಟ್ಪದಿಯಲ್ಲಿ ಪುರಾಣ
ಬರೆದವರಲ್ಲಿ ರಾಘವಾಂಕನು ಮೊದಲನೆಯವನು. ಚಂಪೂಕಾವ್ಯಗಳನ್ನು
ಜನ ಸಾಮಾನ್ಯಕ್ಕೆ ತಿಳಿಸಿ ಹೇಳುವುದು ಕಠಿಣ. ಆದರೆ ಷಟ್ಪದಿಕಾವ್ಯ
ಗಳನ್ನು ರಾಗವಾಗಿ ಹಾಡಿ ಪಾಮರರಿಗೂ ಕೂಡ ಕಾವ್ಯಾಮೃತಾ
ಸ್ವಾದನವನ್ನೊದಗಿಸಿಕೊಡಬಹುದೆಂಬುದಕ್ಕೆ ಹಳ್ಳಿಗಳಲ್ಲಿ ಈಗಲೂ ನಡೆ
ಯುತ್ತಿರುವ ಷಟ್ಪದಿ ಪುರಾಣ ಪ್ರವಚನಗಳೇ ಸಾಕ್ಷಿ. ಶಾಸ್ತ್ರಿಗಳು ಜನ
ಸಾಮಾನ್ಯದೆದುರು ಓದುವ ಪುರಾಣಗಳೆಂದರೆ 'ಬಸವ ಪುರಾಣ' 'ಸಿದ್ಧ
ರಾಮ' ಪುರಾಣ 'ರೇವಣ ಸಿದ್ಧೇಶ್ವರ' ಪುರಾಣ ಮುಂತಾದವುಗಳು. ಆದರೆ
'ವೃಷಭೇಂದ್ರ ವಿಜಯ'ದ ಪ್ರವಚನ ನಡೆದುದನ್ನು ನಾನು ಕೇಳಿಲ್ಲ.
ಮುಂದೆ ಷಟ್ಪದಿಯಲ್ಲಿ ಬರೆದ ಗದುಗಿನ ಭಾರತ ಮತ್ತು ಜೈಮಿನಿ ಭಾರತ
ಗಳೂ ಲೋಕಪ್ರಿಯವಾಗಿವೆ. ಸಾಹಿತ್ಯವು ಪಂಡಿತನಿಗಷ್ಟೇ ಬೇಕಾದು



ದಲ್ಲ ಪಾಮರರಿಗೂ ಸಾಹಿತ್ಯದ ಅವಶ್ಯಕತೆ ಇದೆ. ಚಂಪೂಶೈಲಿಯನ್ನು
ಬಿಟ್ಟು, ಷಟ್ಪದಿಯನ್ನು ಬಳಕೆಯಲ್ಲಿ ತಂದ ವೀರಶೈವ ಕವಿಗಳ
ಸ್ವಾತಂತ್ರ್ಯ ಪ್ರವೃತ್ತಿಯನ್ನು ಅಭಿನಂದಿಸಬೇಕಾಗಿದೆ.

ವಸ್ತುಗಳನ್ನಾರಿಸುವಲ್ಲಿಯೂ ವೀರಶೈವ ಕವಿಗಳು ಸ್ವಾತಂತ್ರ್ಯ
ವನ್ನು ತೋರಿಸಿರುವರು. ಇಲ್ಲಿ ಕಂಡು ಬರುವುದು ಒಂದೇ ಬಗೆಯಾದ
ಅರಸರುಗಳ ಜೀವನವಲ್ಲ. ವಿವಿಧ ಕಾಯಕಗಳಿಂದ ದೇಹಗಳನ್ನು
ಸವಿಸಿ ಅನಂತ ಶಾಂತಿಯನ್ನು ಹೊಂದಿದ ಶಿವಶರಣರುಗಳ ಜೀವನಗಳೇ
ಈ ಪುರಾಣಗಳ ವಸ್ತುಗಳು. ಒಬ್ಬ ಪುರಾತನ ಚರಿತ್ರೆಯು ಇನ್ನೊಬ್ಬ
ಪುರಾತನ ಚರಿತ್ರೆಯಂತಿಲ್ಲ. ಒಬ್ಬನು ಅರಸನಿದ್ದರೆ ( ಸೇದಿರಾಜ, ಪಗ
ಲ್ಚೋಳ ) ಇನ್ನೊಬ್ಬನು ಅಗಸ ( ತಿರುಕುರುಪೆತೊಂಡ ) ಮತ್ತೊಬ್ಬನು
ಅಂಬಿಗ ( ಅತಿಭಕ್ತ ) ಮಗುದೊಬ್ಬನು ಅಸ್ಪೃಶ್ಯ ( ಅರಿವಾಳತ್ತಾಂಡ, ಇಳೆ
ಯಾಂಡಗುಡಿಮಾರ ) ಶಿವಶರಣರ ದನಗಳನ್ನು ಕಾಯುವುದು ಒಬ್ಬನ
ಕಾಯಕ (ಸಾಂಖ್ಯರು) ಜೂಜಾಡುವುದೇ ಇನ್ನೊಬ್ಬನ ಕಾಯಕ (ಅಚ್ಯು
ತರು) ಜನರನ್ನು ನಗಿಸುವುದೇ ಮತ್ತೊಬ್ಬನ ಕಾಯಕ.( ಕಡಪೂರಕಾರಿ ).
ಈ ಪುರಾತನರ ಚರಿತ್ರಗಳು ವೀರಶೈವ ಪುರಾಣಗಳಲ್ಲಿ ಕಂಡುಬರುತ್ತವೆ.
ಬಸವಣ್ಣನವರು ಮತ್ತು ಅವರ ಸಮಕಾಲೀನರಾದ ಸಿದ್ಧರಾಮ, ಪ್ರಭು
ದೇವರು ಇವರ ಜೀವನಗಳು ಪುರಾಣ ವಸ್ತುಗಳಾದುವು. ಜೈನ ಪುರಾಣ
ಗಳಲ್ಲಿ ಕಾಣದ ವೈವಿಧ್ಯವು ವೀರಶೈವ ಪುರಾಣಗಳಲ್ಲಿ ಕಂಡು ಬರುತ್ತದೆ.
ಈ ರೀತಿ ಪುರಾತನರ ಮತ್ತು ಅರ್ವಾಚೀನ ಮಹಾತ್ಮರ ಜೀವನಗಳನ್ನೂ
ಕೂಡ ವೀರಶೈವ ಕವಿಗಳು ತಮ್ಮ ಕಾವ್ಯವಸ್ತುಗಳನ್ನಾಗಿ ಮಾಡಿಕೊಂ
ಡಿರುವರು. ಜೈನ ಪುರಾಣಗಳೆಲ್ಲವೂ ಪುರಾತನ ತೀರ್ಥಂಕರುಗಳ ಚರಿ
ತ್ರಗಳೇ. ಚರಿತ್ರಗಳೆಂದು ಕರೆಯುವುದಕ್ಕೂ ಹಿಂದು ಮುಂದು ನೋಡ
ಬೇಕಾಗುತ್ತದೆ. ರಾಘವಾಂಕನು 'ಸಿದ್ಧರಾಮ ಪುರಾಣ'ವನ್ನು ಬರೆದಿರು
ವನು. ಕವಿ ಚರಿತಕಾರರ ಅಭಿಪ್ರಾಯದ ಮೇರೆಗೆ ಸಿದ್ಧರಾಮನ ಕಾಲ
೧೧೬೦. ರಾಘವಾಂಕನ ಕಾಲ ೧೧೬೫. ಇದಕ್ಕೆ ಪುರಾಣವೆನ್ನಬೇಕೇ?
ಚರಿತ್ರವೆನ್ನಬೇಕೇ? ಏನೇ ಇರಲಿ. ವೀರಶೈವ ಕವಿಗಳು ತಮ್ಮ ಪುರಾ
ಣಗಳ ವಸ್ತುಗಳನ್ನು ಆರಿಸುವಲ್ಲಿ ಸ್ವಾತಂತ್ರ್ಯವನ್ನು ತೋರಿಸಿರುವರು.
ಕನ್ನಡ ಛಂದಸ್ಸನ್ನು ಬಳಸಿ ಸರಳ ಭಾಷೆಯಲ್ಲಿ ಸಾಮಾನ್ಯ ಜನರ ಎದೆ
ವುಗುವಂತೆ ಪುರಾಣಗಳನ್ನು ಬರೆದಿರುವರು.

ಹರಿಹರದೇವನ ರಗಳೆಗಳಲ್ಲಿ ನಾವು ಇದೇ ಸ್ವಾತಂತ್ರ್ಯವನ್ನು ಕಾಣುವೆವು. ಆದಿಪಂಪನ ಆದಿಪುರಾಣದಲ್ಲಿ, ರನ್ನನ ಅಜಿತಪುರಾಣದಲ್ಲಿ ರಗಳೆಯ ಪ್ರಯೋಗವಿದ್ದರೂ ಪೂರ್ಣ ಕಾವ್ಯವನ್ನು ಈ ಮೊದಲು ರಗಳೆಯಲ್ಲಿ ಯಾರೂ ಬರೆಯಲಿಲ್ಲ. (ನಾಗವರ್ಮನು ರಗಳೆಯ (ರಘಟಾ) ಲಕ್ಷಣವನ್ನು ಹೇಳಿರುವನು.) ಷಟ್ಪದಿಕಾವ್ಯಗಳು ಚಂಪೂಕಾವ್ಯಗಳಷ್ಟು ಕ್ಲಿಷ್ಟವಲ್ಲದಿದ್ದರೂ ತಿಳಿಸಿ ಹೇಳದೆ ಅವು ಜನಸಾಮಾನ್ಯಕ್ಕೆ ತಿಳಿಯುವಂತಿಲ್ಲ. ಆದರೆ ರಗಳೆಗಳು ಸಾಮಾನ್ಯರಿಗೂ ತಿಳಿಯುವಂತಿವೆ. ಲಾವಣಿ ಪದಗಳನ್ನು ಹೇಗೆ ನಿರಕ್ಷರಿಯೂ ಕೂಡ ತಿಳಿದುಕೊಳ್ಳುವನೋ ಅದರಂತೆ ನಿರಕ್ಷರಿಯ ಮುಂದೆ ರಗಳೆಗಳನ್ನು ಸರಿಯಾಗಿ ಓದಿದರೆ ಅವನು ಗ್ರಹಿಸುವನು. ಅವರಿಗಾಗಿಯೇ ಇವು ರಚಿಸಲ್ಪಟ್ಟಿರುವವು. ಗಿರಿಜಾಕಲ್ಯಾಣದಂಥ ಪ್ರೌಢಕಾವ್ಯವನ್ನು ಬರೆಯಬಲ್ಲ ಹರಿಹರದೇವನು 'ರಗಳೆಯ ಕವಿ'ಯೆಂದು ಜನರು ಹೀಯಾಳಿಸಬಹುದೆಂದು ಹೆದರದೆ ರಗಳೆಗಳನ್ನು ರಚಿಸಿದನು. ಇದು ಹರಿಹರದೇವನ ಸ್ವತಂತ್ರ ಪ್ರವೃತ್ತಿಯನ್ನು ತೋರಿಸುವುದು.

ಇನ್ನು ವಚನಗಳಿಗೆ ಬಂಧನವೇ ಇಲ್ಲ. ಅವು ಸ್ವತಂತ್ರ ಜೀವಿಗಳ ಹೃದಯಗಳಲ್ಲಿ ಹುಟ್ಟಿ ಓದುಗರ ಎದೆಯನ್ನು ನೇರವಾಗಿ ಸೇರುತ್ತವೆ. ವಚನಗಳಲ್ಲಿರುವ ವಿಚಾರಗಳೆಲ್ಲವೂ ಹೊಸವಲ್ಲ. ಈ ವಿಚಾರಗಳಲ್ಲೆಷ್ಟೋ ಭಗವದ್ಗೀತೆಯಲ್ಲಿ, ಉಪನಿಷತ್ತುಗಳಲ್ಲಿ ದೊರೆಯುವವು. ಅರ್ಜುನನು ಗುರುಹಿರಿಯರನ್ನು ಕೊಂದರೂ ದೋಷವಿಲ್ಲೆಂದು ಶ್ರೀಕೃಷ್ಣನು ಬೋಧಿಸಿದನು. ಯಾಕೆಂದರೆ ಯುದ್ಧ ಮಾಡುವುದು ಅವನ ಕಾಯಕವು. ಇದೇ ವಿಚಾರವನ್ನು ಆಯ್ದಕ್ಕಿ ಮಾರಯ್ಯನವರ ಒಂದು ವಚನದಲ್ಲಿ ಕಾಣಬಹುದು. "ಕಾಯಕದಲ್ಲಿ ನಿರುತನಾದೊಡೆ ಗುರುದರ್ಶನವಾದರೂ ಮರೆಯಬೇಕು, ಲಿಂಗ ಪೂಜೆಯಾದರೂ ಮರೆಯಬೇಕು, ಜಂಗಮ ಮುಂದಿದ್ದರೂ ಹಂಗು ಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ" "ತ್ಯಕ್ತೇನ ಭುಂಜೀಥಾಃ" ಎಂದು ಉಪನಿಷತ್ತು ಸಾರುವುದನ್ನೇ ಬಸವಣ್ಣನವರು ಕನಿಕರದಿಂದ ಕೆಳಗಿನ ವಚನದಲ್ಲಿ ಹೇಳಿರುವರು. "ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ!..." "ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿಹಸ್ತಿನಿ। ಶುನಿ ಚೈವ ಶ್ವಾಪಕೇ ಪಂಡಿತಾಃ ಸಮದರ್ಶಿನಃ" ಎಂಬ ಗೀತೋಕ್ತಿಯು ಕೆಳಗಿನ ವಚನದಲ್ಲಿದೆ.



"ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ? ಒಡೆಯನ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಪ್ರಾಣದಲ್ಲಿ ಹಿಡಿಗೋಲ?" "ಇಹೈವತ್ಯೈರ್ಜಿತಃ ಸ್ವರ್ಗ ಏಷಾಂ ಸಾಮ್ಯೇ ಸ್ಥಿತಂ ಮನಃ" ಎಂಬುದನ್ನೇ ಸಿದ್ಧರಾಮಯ್ಯನವರು ಕೆಳಗಿನ ವಚನದಲ್ಲಿ ಹೇಳಿರುವರು. "ತಪವ ಮಾಡಿ ಸ್ವರ್ಗವ ಪಡೆದಿಹೆನೆಂಬವನ ಮುಖವ ನೋಡಲಾಗದು....ಲಿಂಗದ ಕುರುಹ ತಿಳಿದು ಅಂಗಗುಣಗಳನತಿಗಳೆದು ಲಿಂಗವಾದುದೇ ಸ್ವರ್ಗ ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ."

ವಿಚಾರ ಹಳೆಯವಾದರೂ ಅವು ಶರಣರ ಆಚರಣೆಯಲ್ಲಿ ಬಂದು ಅವರ ಮುಖದಿಂದ ಹೊಸದಾಗಿ ಸ್ವತಂತ್ರಶೈಲಿಯಲ್ಲಿ, ಸುಂದರ ಉಪಮೆಗಳಲ್ಲಿ ಬಂದಿವೆ. ವಚನಗಳಲ್ಲಿರುವ ಭಾವನೆಗಳು ತೀರ ಹೊಸವಲ್ಲದಿದ್ದರೂ ಹೊಸವು. ಸೀತಾದೇವಿಯನ್ನು ಕಳಕೊಂಡು ಬಳಲುವ ರಾಮಚಂದ್ರನ ವ್ಯಥೆಯನ್ನು ವಾಲ್ಮೀಕಿಯು ವರ್ಣಿಸಿರುವನು. ನಮ್ಮ ನಾಗಚಂದ್ರನೂ ವರ್ಣಿಸಿರುವನು. ವಿಕ್ರಮನು ಊರ್ವಶಿಯನ್ನು ಕಳೆದುಕೊಂಡು ವನದಲ್ಲಿ ಅಳಲುವದನ್ನು ಕಾಳಿದಾಸನು ಚಿತ್ರಿಸಿರುವನು. ಆದರೆ ಮಹದೇವಿಯಕ್ಕನವರು ಚನ್ನಮಲ್ಲಿಕಾರ್ಜುನ ದೇವನಿಗಾಗಿ ಶ್ರೀಶೈಲ ಪರ್ವತದಲ್ಲಿ ಪಡುವ ವಿರಹ ವ್ಯಥೆ ತೀರ ಭಿನ್ನವಾದುದು.

"ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೆ? ಸರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ?......ಚನ್ನಮಲ್ಲಿಕಾರ್ಜುನನೆಲ್ಲಿದ್ದಾನೆಂದು ಹೇಳಿರೆ? ಇಂಥ ತೀಕ್ಷ್ಣ ವಿರಹದ ತರುವಾಯ ಸಮಾಗಮಾನಂದವೆಂತಹದು! "ಹೊಳೆವ ಕೆಂಜೆಡೆಗಳ, ಮಣಿಮಕುಟದ, ಒಪ್ಪುವ ಸುಲಿಪಲ್ಲ, ನಗೆಮೊಗದ ಕಂಗಳ ಕಾಂತಿಯಿಂ ಈರೇಳು ಭುವನಮಂ ಬೆಳಗುವ ದಿವ್ಯಸ್ವರೂಪನ ಕಂಡೆನು. ಕಂಡೆನ್ನ ಕಂಗಳ ಬರ ಹಿಂಗಿತ್ತೆಂದು ...ಭವಗೆಟ್ಟು ಬಂದೆಯಾ ಮಗಳೇ'ಎಂದು ಕರುಣದಿಂ ತೆಗೆದು ಬಿಗಿದಪ್ಪಿದರೆ ಚನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು."

ಇಂತಹ ಸ್ವತಂತ್ರ ಭಾವನೆಗಳನ್ನು ಸ್ವತಂತ್ರ ಶೈಲಿಯಲ್ಲಿ ನಿರೂಪಿಸುವವು ವಚನಗಳು.

ವೀರಶೈವ ಸಾಹಿತ್ಯದಲ್ಲಿ, ಪುರಾಣ, ರಗಳೆ, ವಚನ. ಇವೆಲ್ಲವುಗಳಲ್ಲಿಯೂ ವೀರಶೈವ ಕವಿಗಳ ಸ್ವತಂತ್ರ ಪ್ರವೃತ್ತಿಯು ವಸ್ತು, ಛಂದಸ್ಸು, ವಿಚಾರ, ಭಾವನೆ, ಭಾಷೆ, ಇವೆಲ್ಲವುಗಳಲ್ಲಿಯೂ ಹೇಗೆ ಒಡಮೂಡಿರುವದೆಂಬದನ್ನು ಸ್ವಲ್ಪವರಲ್ಲಿ ತೋರಿಸಲಾಗಿದೆ. ಈ ಪ್ರವೃತ್ತಿಯೇ ವೀರಶೈವ ಸಾಹಿತ್ಯದ ವೈಶಿಷ್ಟವೆಂದರೆ ತಪ್ಪಾಗಲಿಕ್ಕಿಲ್ಲವಷ್ಟೆ?

---

# ತೆಲುಗು ಬಸವ ಪುರಾಣದ ಮುನ್ನುಡಿ.

ಅನುವಾದಕರು:— ಶ್ರೀಯುತ ಎಸ್. ಹಂಪಯ್ಯ ಏಜೆಂಟ್
ಶ್ರೀಮನ್ನಿಡುಮಾಮಿಡಿಮಠ ಗೂಳೂರು.

---

ಆಂಧ್ರ ವಾಙ್ಮಯದಲ್ಲಿ ಬಸವ ಪುರಾಣವು ಸುಪ್ರಸಿದ್ಧವಾದ ಪ್ರಾಚೀನ ಕಾವ್ಯವಾಗಿದೆ. ಬಸವ ಪುರಾಣವು ತೆಲುಗು ಕಾವ್ಯಗಳಲ್ಲಿ ರಸವತ್ಕಾವ್ಯವಾಗಿ ಲಿಂಗಧಾರಿಗಳಿಗೆ ಪವಿತ್ರವಾದ ಪುರಾಣವಾಗಿದೆ. ಬ್ರಹ್ಮಶ್ರೀ ವೇಟೂರು ಪ್ರಭಾಕರ ಶಾಸ್ತ್ರಿಗಳವರು ಬರೆದಿರುವ ವಿಶಾಲವಾದ ಪೀಠಿಕೆಯು ಬಸವ ಪುರಾಣದ ಪ್ರತಿಭೆಯನ್ನು ಆಂಧ್ರಲೋಕಕ್ಕೆ ವಿಶದಪಡಿಸುತ್ತದೆ.

ಪೀಠಿಕೆಯಲ್ಲಿ ಸೋಮನಾಥನ ಕಾಲವೂ, ಕೃತಿಗಳೂ, ಶೈವಮತಭೇದಗಳೂ, ಬಸವೇಶ್ವರನ ಚರಿತ್ರೆಯೂ, ಭಕ್ತರ ಚರಿತ್ರೆಗಳೇ ಮುಂತಾದ ವಿಷಯಗಳನ್ನು ಪ್ರಭಾಕರ ಶಾಸ್ತ್ರಿಗಳವರು ಚೆನ್ನಾಗಿ ವ್ಯಕ್ತಪಡಿಸಿರುತ್ತಾರೆ. ವಿಷಯ ವಿಮರ್ಶೆಗಳಿಂದಲೇ ಪ್ರಭಾಕರ ಶಾಸ್ತ್ರಿಗಳವರ ವಿದ್ಯಾಪಾಂಡಿತ್ಯವು ವ್ಯಕ್ತವಾಗುತ್ತಿದೆ. ಸೋಮನಾಥನ ಕವಿತಾ ಸಾಮರ್ಥ್ಯವನ್ನೂ. ದೇಶಿರಚನೆ, ದ್ವಿಪದಿಗಳು, ಶಿವಕವಿಗಳು, ತೆಲುಗುಭಾಷೆಯ ಶಬ್ದಪ್ರಯೋಗಗಳು, ಶಬ್ದವಿಶೇಷಗಳು, ರಚನಾ ಸೌಂದರ್ಯ ಇತ್ಯಾದಿಗಳನ್ನು ಪರಿಷ್ಕರ್ತರಾದ ಶಾಸ್ತ್ರಿಗಳವರು ಚೆನ್ನಾಗಿ ವಿಮರ್ಶೆಮಾಡಿ, ಪಾಠಕರಿಗೆ ಈ ಗ್ರಂಥದಲ್ಲಿ ಅಭಿರುಚಿ ಹುಟ್ಟುವ ರೀತಿಯಲ್ಲಿ ವಿಶದಪಡಿಸಿದ್ದಾರೆ. ಬಸವಪುರಾಣದಲ್ಲಿ ಬಸವನ ಭಕ್ತಿರಸವೂ, ತೆಲುಗುಭಾಷೆಯ



ಅಂದವೂ, ದ್ವಿಪದಿಗಳ ರೂಪದಲ್ಲಿ ರಸಸ್ಥಾಯಿಯೊಡನೆ ಭಕ್ತಿಪಾರವಶ್ಯವನ್ನೂ, ಬ್ರಹ್ಮಾನಂದವನ್ನೂ ಉಂಟುಮಾಡುತ್ತಿದೆ. ಸೋಮನಾಥನು ತನ್ನ ರಚನೆಗೆ ಪುರಾಣವೆಂಬ ಹೆಸರು ಕೊಟ್ಟಿರುತ್ತಾನಾದರೂ, ಬಸವಪುರಾಣವು ಕಾವ್ಯರೂಪವನ್ನೇ ಹೊಂದಿರುವದಾಗಿದೆ. ಆಂಧ್ರ ವಾಙ್ಮಯ ಪರಿಶೋಧಕರಿಗೆ ಬಸವ ಪುರಾಣವು ಮುಖ್ಯ ಸಿಧಿಯಾಗಿರುವ ವಿಧಾನವನ್ನು ಪ್ರಭಾಕರ ಶಾಸ್ತ್ರಿಗಳವರ ಪೀಠಿಕೆಯೂ, ಮತ್ತು ಮೂಲಗ್ರಂಥವೂ ವ್ಯಕ್ತಪಡಿಸುತ್ತಿವೆ. ಈ ಗ್ರಂಥಕ್ಕೆ ಆಧಾರವಾದ ವೀರಶೈವ ಮತಕ್ಕೂ ಮತ್ತು ವೈದಿಕ ಮತಗಳಿಗೂ ಇರುವ ಸಂಬಂಧಗಳನ್ನು ಪರಿಶೋಧಕರು ವಿಮರ್ಶಿಮಾಡಿ ಈ ಮತಗಳಿಗಿರತಕ್ಕ ಸಮಾನ ಧರ್ಮಗಳನ್ನು ಪ್ರಕಟಗೊಳಿಸುವದರಿಂದ ಶ್ರೇಯಸ್ಕರವುಂಟು.

## ವೈದಿಕಮತವು.

ವೇದ ಯುಗದಲ್ಲಿ ಕರ್ಮಗಳ ಪರವಾಗಿದ್ದ ವೈದಿಕ ಮತವು ಕಾಲಕ್ರಮದಲ್ಲಿ ಜ್ಞಾನಪರವಾಗಿ ಪರಿವರ್ತನೆಯಾಗಿರುತ್ತೆ. ಯಜ್ಞಯಾಗಾದಿಗಳನ್ನು ಆಚರಿಸುವದರಿಂದ ಅನಿತ್ಯವಾದ ಸ್ವರ್ಗಫಲ ಪ್ರಾಪ್ತಿಯಾದ್ದರಿಂದ ಇದಕ್ಕಿಂತ ಮಿಗಿಲಾದ ನಿತ್ಯ ಮೋಕ್ಷಸಾಧನೆಗೆ ಪ್ರಯತ್ನಿಸಿತು. ಈ ಕಾರಣದಿಂದ ಕರ್ಮಕಾಂಡಕ್ಕೂ, ಜ್ಞಾನಕಾಂಡಕ್ಕೂ ಸಂಘರ್ಷಣೆಗೆ ಆರಂಭಿಸಿತು. ವೇದೋಕ್ತವಾದ ಮಂತ್ರಗಳಿಗೂ, ಬ್ರಾಹ್ಮಣಗಳಿಗೂ, ಸಮನ್ವಯವಾಗದೆ ಕರ್ಮಗಳು ಪರಿಹಾಸಕ್ಕೆ ಗುರಿಯಾದವು. ಜ್ಞಾನವನ್ನೇ ಪ್ರಧಾನವಾಗಿವುಳ್ಳ ಜೈನ ಬೌದ್ಧಾದಿ ಮತಗಳು ಪ್ರಬಲಿಸಿದವು. ಕರ್ಮದೀಕ್ಷಾಪಾರಾಯಣರಾದ ಬ್ರಾಹ್ಮಣರಿಗೂ, ಬ್ರಾಹ್ಮಣೇತರ ವರ್ಣಸ್ಥರಿಗೂ, ವೈದಿಕಮತ ವಿಚಾರದಲ್ಲಿ ಭೇದದೃಷ್ಟಿಯುಂಟಾಯಿತು. ಜೈನ ಬೌದ್ಧಾದಿ ಮತಗಳು ಪ್ರಬಲಿಸಿ ಬ್ರಾಹ್ಮಣ ಪ್ರಾಬಲ್ಯವನ್ನು ತಗ್ಗಿಸಿದವು. ಈ ರೀತಿಯಲ್ಲಿ ಬ್ರಾಹ್ಮಣ್ಯವನ್ನು ಪ್ರತಿಭಟಿಸಿದಾಗ್ಯೂ, ಬ್ರಾಹ್ಮಣ ಧರ್ಮವನ್ನು ಗೌರವಿಸಿಕೊಂಡೇ ಬಂದವು. ವೈದಿಕಮತ ಪರಿಣಾಮದಲ್ಲಿ ಕರ್ಮಯೋಗವೂ, ಜ್ಞಾನಯೋಗವೂ, ಭಕ್ತಿಮಾರ್ಗವೂ ಸಹಾ ಜೀವಯಾತ್ರೆಯಲ್ಲಿ ಸಮನ್ವಯಮಾಡುತ್ತಿವೆ. ಕರ್ಮಮಾರ್ಗವು ಜ್ಞಾನಮಾರ್ಗಕ್ಕೆ ಸಾಧನವಾದಾಗ್ಯೂ, ಬ್ರಾಹ್ಮಣಾಧೀನವಾದ ನಿತ್ಯಕರ್ಮಾನುಷ್ಠಾನಗಳು ಪ್ರಾಣ ಕಳೆಯನ್ನು ಒಳಗೊಂಡು, ಜನಸಾಮಾನ್ಯರ ನಿತ್ಯಜೀವಯಾತ್ರೆಗೆ ನಿರರ್ಥಕವಾಗಿ ಪರಿಣಮಿಸಿತು. ಕರ್ಮಾಧಿಕಾರಿಗಳಾ

ಗದಿರುವ ಪ್ರಜೆಗಳು ಜೀವನ್ಮುಕ್ತಿಗೆ ಮಾರ್ಗವಿಲ್ಲದೆ ಪರಿತಪಿಸುತ್ತಿದ್ದರು. ಆಗಿನ ತತ್ವಜ್ಞರ ಸಿದ್ಧಾಂತಗಳು ಪ್ರಜಾಸಾಮಾನ್ಯರಿಗೆ ಆಚರಿಸಲು ಅಸಾಧ್ಯವಾಗಿದ್ದ ಕಾರಣ ಆಗಿನ ಸ್ಥಿತಿಯಲ್ಲಿ ಪ್ರಜಾಕೋಟಿಯು ಅಜ್ಞಾನಾಂಧಕಾರದಲ್ಲಿದ್ದರು. ಇಂತಹ ವಿಷಮ ಸಮಯದಲ್ಲಿ ವರ್ಧಮಾನ ಮತ್ತು ಸಿದ್ಧಾರ್ಥ ಇತ್ಯಾದಿ ಕ್ಷತ್ರಿಯ ವೀರರು ಬ್ರಾಹ್ಮಣ ಧರ್ಮಗಳನ್ನು ಪ್ರತಿಭಟಿಸಿ, ಜೈನ, ಬೌದ್ಧಾದಿ ಮತಗಳ್ನು ಸ್ಥಾಪಿಸಿದರು. ಇದರಿಂದ ಪ್ರಜೆಗಳಲ್ಲಿ ನೂತನಕಳಾವಿರ್ಭಾವವಾಯಿತು.

## ಜೈನ ಬೌದ್ಧ ಮತಗಳು.

ಸಿದ್ಧಾರ್ಥ ವರ್ಧಮಾನಾದಿಗಳು ನಿರ್ಜೀವವಾಗಿಯೂ, ಕ್ರೂರವಾಗಿಯೂ ಇದ್ದ ಕರ್ಮಕಾಂಡವನ್ನೂ ಗ್ರಹಿಸಲು ಅಸಾಧ್ಯವಾದ ಜ್ಞಾನ ಮಾರ್ಗವನ್ನೂ ಬಿಟ್ಟು ಪ್ರಜಾಸಾಮಾನ್ಯರಲ್ಲಿ ಧರ್ಮ ಮಾರ್ಗವನ್ನು ಪ್ರತಿಷ್ಠಿಸಿದರು. ಬುದ್ಧದೇವನು ಸಂಕುಚಿತವಾದ ಬ್ರಾಹ್ಮಣ ಕರ್ಮಾನುಷ್ಠಾನಗಳನ್ನು ನಿರಾಕರಿಸಿದನು. ಯಜ್ಞಯಾಗಾದಿಗಳನ್ನು ತಿರಸ್ಕರಿಸಿದ್ದಲ್ಲದೆ, ಮಂತ್ರೋಪದಿಷ್ಟವಾದ ಇಷ್ಟದೇವತಾರ್ಚನಾದಿ ಕರ್ತವ್ಯಗಳನ್ನು ಗೌರವಿಸಲಿಲ್ಲವಾದ್ದರಿಂದ ವೈದಿಕಮತದಲ್ಲಿ ಮುಖ್ಯವೆಂದು ಎಣಿಸದಿದ್ದ ಕರ್ಮವು ಬೌದ್ಧಮತದಲ್ಲಿ ಪ್ರಾಮುಖ್ಯವೆಂದು ಗಣಿಸಲ್ಪಟ್ಟಿತು. ಜಾತಿಕುಲ ಭೇದಗಳಿಲ್ಲದೆ ಶುಭಾಶುಭ ಪ್ರಾಪ್ತಿಯೆಲ್ಲವೂ (ಅವಶ್ಯ ಮನುಭೋಕ್ತವ್ಯಂ) ಎಂಬುವ ರೀತಿಯಲ್ಲಿ ಪ್ರಾಪ್ತವಾಗತಕ್ಕದ್ದೆಂಬುವ ಸಿದ್ಧಾಂತವು ಹಿಂದೂ ಮತದಲ್ಲಿ ಪ್ರತಿಷ್ಠಿತವಾಯಿತು. ಕರ್ಮಸಿದ್ಧಾಂತವು ಪುನರ್ಜನ್ಮ ಸಿದ್ಧಾಂತವನ್ನು ವ್ಯಕ್ತಗೊಳಿಸಿತು. ಕರ್ಮಸಿದ್ಧಾಂತವೂ, ಪುನರ್ಜನ್ಮಸಿದ್ಧಾಂತವೂ, ಹಿಂದೂ ಮತ್ತು ಬೌದ್ಧಮತಗಳಲ್ಲಿ ಸಮಾನಸ್ಥಾನಗಳನ್ನು ಹೊಂದಿರುತ್ತವೆ. ಜೈನ ಬೌದ್ಧಮತಗಳು ಒಂದು ಸಾವಿರ ಸಂವತ್ಸರಗಳು ಭರತ ಖಂಡದಲ್ಲಿ ಪ್ರಬಲಿಸಿದ್ದುವು. ದೇಶವಾದ್ಯಂತವೂ ಮಠಗಳು, ವಿಹಾರಗಳು, ಸ್ತೂಪಗಳು ಸ್ಥಾಪಿತವಾದುವು. ಸನ್ಯಾಸಿಗಳೂ, ಶ್ರವಣಕರೂ, ಅಸಂಖ್ಯಾತರಾಗಿ ದೇಶವಾದಂತ್ಯವೂ ವ್ಯಾಪಿಸಿದರು. ದೇವತಾರಾಧನೆಯಿಲ್ಲದ ಬೌದ್ಧಮತವು ಸಂಕರವಾಗಿ ಪ್ರಾಣಪ್ರತಿಷ್ಠೆಯಿಲ್ಲದೆ ಪ್ರಜಾಜೀವನದಲ್ಲಿ ನಿರರ್ಥಕವಾಗಿ ಕಂಡುಬರುವಂತಾಯಿತು. ಶಂಕರಾಚಾರ್ಯರು ಜೈನ ಬೌದ್ಧಮತಗಳನ್ನು ಖಂಡಿಸಿ ವೈದಿಕ ಮತವನ್ನು ಪುನರುದ್ಧಾರ ಮಾಡಿದರು. ಮತ್ತು ಶೈವ ವೈಷ್ಣವಾದಿ ಷಣ್ಮತಗಳನ್ನು ಅನುಮೋ



ದಿಸಿದರು. ಶಂಕರಾಚಾರ್ಯರು ಕರ್ಮಸಿದ್ಧಾಂತವನ್ನೂ, ಪುನರ್ಜನ್ಮ ಸಿದ್ಧಾಂತವನ್ನೂ, ಸರ್ವಾತ್ಮತ್ವ ಸಿದ್ಧಾಂತವನ್ನೂ ಸರ್ವ ಬ್ರಹ್ಮಸಿದ್ಧಾಂತದಲ್ಲಿ ಸೇರಿಸಿ ವೈದಿಕಮತದ ಪರಿಣಾಮವನ್ನು ವೇದಾಂತದಲ್ಲಿ ಸಾರ್ಥಕವಾಗುವಂತೆ ಮಾಡಿದರು. ವೈದಿಕಮತ ಸಂಪ್ರದಾಯಗಳಾದ ದ್ವೈತಾದ್ವೈತ ವಿಶಿಷ್ಟಾದ್ವೈತ ಮತಗಳು ಸ್ಥಾಪಿಸಲ್ಪಟ್ಟು, ವೈದಿಕ ಕರ್ಮಗಳು ಜಾತಿಕುಲಗಳ ಭೇದಗಳು ಪುಷ್ಟಿಸಲ್ಪಟ್ಟವು. ಪ್ರಾಕೃತ ಜನರು ಜೀವನ್ಮುಕ್ತರಾಗುವುದಕ್ಕೆ ವೈದಿಕ ಕರ್ಮಗಳನ್ನವಲಂಬಿಸಲು ಅಧಿಕಾರವಿಲ್ಲವಾಯಿತು. ಜ್ಞಾನಮಾರ್ಗವನ್ನು ಅವಲಂಬಿಸುವದಾದರೋ ಅದು ಅಸಾಧ್ಯವಾದ ವಿಷಯ. ಇಂತಹ ವಿಷಮದೆಶೆಯಲ್ಲಿರುವಾಗ್ಗೆ ರಾಮಾನುಜರು, ಚೈತನ್ಯನು, ಬಸವೇಶ್ವರನು ಮುಂತಾದ ಮಹಾಭಕ್ತರು ಹೊರಹೊರಟು ಪ್ರಜಾಸಾಮಾನ್ಯರಲ್ಲಿ ಜೀವನ್ಮುಕ್ತಿ ಮಾರ್ಗವನ್ನು ಸುಖಪ್ರದವಾಗಿ ಮಾಡಲು ಸಹಾಯಕರಾದರು.

## ಭಕ್ತಿಮಾರ್ಗವು.

ವ್ಯಕ್ತಾವ್ಯಕ್ತಗಳಿಗೂ, ಕರ್ಮಜ್ಞಾನ ಮಾರ್ಗಗಳಿಗೂ, ಸಗುಣ ನಿರ್ಗುಣೋಪಾಸನೆಗಳಿಗೂ, ಮಾನವ ಹೃದಯದಲ್ಲಿ ಭಕ್ತಿಮಾರ್ಗವೇ ಸಂಧಿಬಂಧನವಾಗಿರುತ್ತೆ. ರುದ್ರೇಂದ್ರವರುಣಾಗ್ನಿದೇವತಾರ್ಚನೆಗಳಿಂದ ಆರಂಭವಾದ ವೈದಿಕ ಮತವು (ಸರ್ವಂ ಖಲ್ವಿದಂ ಬ್ರಹ್ಮ) ಎಂಬುವ ತತ್ವಜ್ಞಾನ ಪರಿಣಾಮವನ್ನು ಹೊಂದಿರುವದಾಗಿದೆ. ಈ ಪರಿಣಾಮದ ಅಂಕುರಗಳು ದ್ವೈತಾದ್ವೈತಗಳಲ್ಲಿಯೂ, ಶೈವವೈಷ್ಣವಗಳಲ್ಲಿಯೂ, ನಿರ್ಗುಣಸಗುಣೋಪಾಸನೆಗಳಲ್ಲಿಯೂ, ಕರ್ಮಭಕ್ತಿಜ್ಞಾನಯೋಗಗಳಲ್ಲಿಯೂ, ನಿಗಮಾಗಮ ಪುರಾಣಗಳಲ್ಲಿಯೂ, ಜಿಜ್ಞಾಸಕ್ಕೆ ಗೋಚರವಾಗುತ್ತವೆ. ಮನುಷ್ಯನ ನಿತ್ಯ ಜೀವನದಲ್ಲಿ ದುಃಖ ನಿವೃತ್ತಿಯಾಗಿ ಸುಖ ಪ್ರಾಪ್ತಿಯಾಗುವುದಕ್ಕೆ ದೈವಸಂದರ್ಶನವೇ ಪರಮ ಸಾಧನವಾಗಿರುತ್ತದೆ. ಜೈನ ಬೌದ್ಧಮತಗಳು ಸಂಸಾರವೇ ದುಃಖಮಯವಾದುದೆಂತಲೂ, ಸನ್ಯಾಸವು ಸುಖಸಾಧನವೆಂತಲೂ ಉಪದೇಶ ಮಾಡುತ್ತಿವೆ. ಸಂಸಾರವು ಮಾಯಾಕಲ್ಪಿತವೆಂದು ಅದ್ವೈತವು ಉಪದೇಶ ಮಾಡಿತು. ಪಂಡಿತರೂ ಬ್ರಾಹ್ಮಣರೂ ಸಹ ಕರ್ಮಗಳಿಂದಲೂ ಸಿದ್ಧಾಂತಗಳಿಂದಲೂ, ಸನ್ಯಾಸಾಶ್ರಮಗಳಿಂದಲೂ, ಕಾಲಯಾಪನೆ ಮಾಡುತ್ತಿದ್ದಾಗ್ಯೂ ಜನಸಾಮಾನ್ಯರು ಅಜ್ಞಾನದಿಂದ ದುಃಖ ಪಡುತ್ತಲೇ ಇದ್ದರು. ವೈರಾಗ್ಯವೂ, ನಿರ್ಲಿಪ್ತತ್ವವೂ, ನಿರ್ಲಕ್ಷ್ಯವೂ, ನಿಸ್ಪೃಹತ್ವವೂ,

ಸಹಾಯತ್ವವೂ, ಪತ್ರ್ಯಸ್ತ್ರನಾದ ಕಾರಣ ಭಾರತೀಯ ಚೈತನ್ಯವು ನಿರ್ವೀ ಸಹಾಯತ್ವವೂ, ಬಸವೇಶ್ವರನಿಂದ ಉಪದೇಶಿಸ ಲ್ಪಟ್ಟ ವೀರಶೈವವು ಮತಧರ್ಮಗಳಲ್ಲಿಯೂ, ದೃಶ್ಯಗಳಲ್ಲಿಯೂ, ಸಾಂಘಿಕ, ಆರ್ಥಿಕ ಪರಿಸ್ಥಿತಿಗಳಲ್ಲಿಯೂ ಮಹಾಪರಿವರ್ತನೆಗಳನ್ನುಂಟು ಮಾಡಿತು.

## ಶೈವವು.

ಶೈವಮತವು ವೈದಿಕ ಮತದಲ್ಲಿ ಪರಿಣಮಿಸಿರುವದೆಂಬುವದಕ್ಕೆ ಪ್ರತ್ಯಕ್ಷ ಪ್ರಮಾಣಗಳುಂಟು. ಹೇಗಂದರೆ:- ವೈದಿಕ ಮಂತ್ರಸ್ಥಿತನಾದ ರುದ್ರನು ವೇದಾಂತದಲ್ಲಿ ಶಿವರೂಪನೆಂದೆನ್ನಿಸಿಕೊಂಡು (ಶಿವೋಹಂ) ಎಂಬುವ ತತ್ವವನ್ನು ವ್ಯಕ್ತಪಡಿಸಿದ್ದಾನೆ. ಶಿವನು ಯಜ್ಞಪುರುಷನಾಗಿರ್ತು ವನು. ಶಿವನೇ ಸಗುಣ ನಿರ್ಗುಣ ಪರಬ್ರಹ್ಮನು. ಈ ಶಿವನೇ ಹಿಮಾಚ ಲದಲ್ಲಿ ಗೌರೀಶಂಕರನಾಗಿಯೂ, ರಾಮೇಶ್ವರದಲ್ಲಿ ರಾಮಲಿಂಗೇಶ್ವರನಾ ಗಿಯೂ, ಕಾಶ್ಮೀರದಲ್ಲಿ ಮಹಾದೇವನಾಗಿಯೂ, ಮಧುರಾ ಕ್ಷೇತ್ರದಲ್ಲಿ ಸುಂದರೇಶ್ವರನಾಗಿಯೂ, ಕಾಶಿಯಲ್ಲಿ ವಿಶ್ವೇಶ್ವರನಾಗಿಯೂ, ಸೌರಾಷ್ಟ್ರ ದಲ್ಲಿ ಸೋಮೇಶ್ವರನಾಗಿಯೂ, ಶ್ರೀಶೈಲದಲ್ಲಿ ಮಲ್ಲಿಕಾರ್ಜುನನಾಗಿಯೂ, ನೆಲೆಸಿರುವುದರಿಂದ ಅಲ್ಲಿರುವ ಶಿವಾಲಯಗಳು ಜಗತ್ಪ್ರಸಿದ್ಧವಾಗಿರುತ್ತ ಶೈವ ಮತದ ವ್ಯಾಪ್ತಿಯನ್ನು ತಿಳಿಯಪಡಿಸುತ್ತಿವೆ. ಪಾಶುಪತರು ಮತ್ತು ಕಾಳಾ ಮುಖರು ಶಿವಪೂಜಾಪಾರಾಯಣರಾಗಿರುವರು. ಶೈವರು ಲಿಂಗರೂಪ ನಾದ ಶಿವನನ್ನು ಪೂಜಿಸುತ್ತ, ಶಿವನ ಶ್ರೇಷ್ಠತೆಯನ್ನು ಪ್ರಚುರ ಪಡಿಸಿ ದ್ದಾರೆ. ಅಥರ್ವಶಿಖೆಯಲ್ಲಿರುವ ( ಈಶ್ವರಶಿವ ಏವಚ......ಶಿವ ಏಕೋ ಧ್ಯೇಯಃ ಶಿವಙ್ಕರಃ ) ಸ್ಕಂದೋಪನಿಷತ್ತಿನಲ್ಲಿರುವ ( ಜೀವಶ್ಶಿವಶ್ಶಿವೋ ಜೀವಃ ಸಜೀವಃ ಕೇವಲಶ್ಶಿವಃ ) ಇತ್ಯಾದಿ ವಾಕ್ಯಗಳು ಶಿವೋತ್ಕೃಷ್ಟತೆ ಯನ್ನು ತಿಳಿಯಪಡಿಸುತ್ತಿವೆ. ಶೈವರು ಶಿವಾಲಯಗಳಲ್ಲಿಯೂ, ಪೀಠಗಳ ಲ್ಲಿಯೂ ಸ್ವಯಂ ಅಂಗಗಳಲ್ಲಿಯೂ, ಲಿಂಗವನ್ನು ಪ್ರತಿಷ್ಠಿಸಿ ಪೂಜಿಸು ತ್ತಿರುವರು. ಶಿವಲಿಂಗಾರ್ಚನೆಯನ್ನು ಅದ್ವೈತಮತ ಸ್ಥಾಪಕರಾದ ಶ್ರೀ ಶಂಕರಾಚಾರ್ಯರು ಅವರ ಪೀಠದಲ್ಲಿ ಪ್ರತಿಷ್ಠೆ ಮಾಡಿರುತ್ತಾರೆ.

## ಶಿವಲಿಂಗವು.

ಶಿವಲಿಂಗವು ಅವ್ಯಕ್ತವೆಂತಲೂ, ನಿರ್ಗುಣ, ನಿರಾಕಾರ, ನಿರಹಂ ಕಾರವದ್ದುವೆಂತಲೂ ಅನ್ನಿಸಿಕೊಂಡು, ಅನಂತಾನಂತ ನಾಮರೂಪಗ



ಳಿಂದ ಜಗತ್ತಿನಲ್ಲೆಲ್ಲಾ ವ್ಯಾಪಿಸಿ, ಸೇವಿಸಲ್ಪಡುತ್ತಿದೆ. ಅವ್ಯಕ್ತವಾದ ಲಿಂಗಾಕೃತಿಯೇ ಜಗದ್ವ್ಯಾಪಕವಾಗಿ ಒಪ್ಪುತ್ತ, ಆಕಾಶಲಿಂಗ, .ವಾಯು ಲಿಂಗ, ತೇಜೋಲಿಂಗ, ಅಪೋಲಿಂಗ, ಪೃಥ್ವೀಲಿಂಗವೆಂಬುವ ಸ್ವರೂ ಪಗಳನ್ನು ಹೊಂದಿರುತ್ತೆ. ಇವುಗಳಲ್ಲಿ ಪಾರ್ಥಿವಲಿಂಗವು ಸಗುಣ ನಿರ್ಗುಣ ಸ್ವರೂಪಗಳಿಂದ ಪೂಜಾರ್ಹವಾಗಿದೆ. ಈ ಪಾರ್ಥಿವ ಲಿಂಗ ವನ್ನು ಸ್ತ್ರೀಪುಂಸಂಯೋಗ ಚಿಹ್ನವೆಂದು ಕೆಲವು ಪಂಡಿತರು ನಿರ್ಣಯಿ ಸುತ್ತಾರಾದರೂ, ಮಹಾತ್ಮರಿಗೆ ಬೀಜಚಿಹ್ನವಾಗಿರುವ ಲಿಂಗಕ್ಕೆ ಈ ಲಕ್ಷ ಣವು ಪ್ರಧಾನವೆನಿಸಲಾರದು. ಲಿಂಗವು ಷಡಕ್ಷರೀ ಮಂತ್ರರೂಪವೆಂದು ಶೈವಾಗಮಗಳಿಂದ ವಿಶದವಾಗುತ್ತಿದೆ. ಈ ಲಿಂಗವು ಆಕಾಶಾದಿ ಪಂಚಭೂ ತಗಳಲ್ಲಿಯೂ ಗೋಚರವಾಗುವದಾಗಿರುತ್ತೆ. ಶಿವಲಿಂಗವನ್ನು ವರ್ಣಭೇದ ಗಳಿಲ್ಲದೆ ಎಲ್ಲ ವರ್ಣಸ್ಥರೂ ಪೂಜಿಸುತ್ತಿರುವರು. ಬ್ರಾಹ್ಮಣರು ದೇವ ತಾರ್ಚನೆಯಲ್ಲಿಯೂ, ಇತರರು ದೇವಾಲಯಗಳಲ್ಲಿರುವ ಶಿವಲಿಂಗಗ ಳನ್ನೂ ಪೂಜಿಸುತ್ತಿದ್ದಾರೆ. ಲಿಂಗಧಾರಿಗಳು ತಮ್ಮ ಅಂಗಗಳಲ್ಲಿ ಶಿವ ಲಿಂಗವನ್ನು ಧರಿಸುತ್ತಾ, ಶೈವರೆಂತಲೂ, ವೀರಶೈವರೆಂತಲೂ ಕರೆಯ ಲ್ಪಡುತ್ತಿರುವರು. ಲಿಂಗಧಾರಣವು ಗೂಢಾರ್ಥವನ್ನೂ, ಬಾಹ್ಯಾರ್ಥ ವನ್ನೂ ಹೊಂದಿರುತ್ತಾ ವೀರಶೈವಕ್ಕೆ ಅಪೂರ್ವವಾದ ವ್ಯಕ್ತಿತ್ವವನ್ನು ಉಂಟುಮಾಡುತ್ತಿದೆ.

## ವೀರಶೈವವು.

ವೈದಿಕಮತವನ್ನೂ, ಜೈನ ಬೌದ್ಧಾದಿಮತಗಳನ್ನೂ ಪ್ರತಿಭಟಿಸು ವುದಕ್ಕಾಗಿ ಏರ್ಪಟ್ಟ ಶೈವಮತನೇ ವೀರಶೈವವೆನ್ನಿಸಿಕೊಂಡಿದೆ. ಶೈವ ಮತವು ಭರತಖಂಡದ ದಕ್ಷಿಣ ಪ್ರಾಂತಗಳಲ್ಲಿ ವ್ಯಾಪಕವಾಗಿದ್ದ ಪ್ರಾಚೀನ ಮತವೆಂದು ಶೈವಾಚಾರ್ಯರುಗಳ ಚರಿತ್ರೆಗಳು ಹೇಳುತ್ತಿವೆ. ದ್ರಾವಿಡ ಆಂಧ್ರ ಕರ್ಣಾಟಕ ದೇಶಗಳಲ್ಲಿ ಶೈವವು ವ್ಯಾಪಿಸಿದ ವಿಧಾನಗಳು ಭಕ್ತರ ಚರಿತ್ರೆಗಳಿಂದ ವಿಶದವಾಗುತ್ತಿದೆ. ಶಂಕರಾಚಾರ್ಯರು ಜೈನ ಬೌದ್ಧ ಮತಗಳನ್ನು ನಿರ್ವೀರ್ಯವಾಗಿ ಮಾಡಿದಾಗ್ಯೂ, ಜನಸಾಮಾನ್ಯರಲ್ಲಿ ಆ ಮತಗಳು ವ್ಯಾಪಿಸಿಕೊಂಡೇ ಇದ್ದುವು. ಅದ್ವೈತ ಸಿದ್ಧಾಂತಗಳು ಪ್ರಜೆಗಳಿಗೆ ಕಷ್ಟಸಾಧ್ಯವಾಗಿವೆ. ಜೈನ ಬೌದ್ಧ ಮತಗಳು ನಾಸ್ತಿಕವಾದ ಗಳಾಗಿವೆ. ಹೀಗಿರುತ್ತಾ ಅದ್ವೈತ ಸಿದ್ಧಾಂತಗಳೂ, ಜೈನ ಬೌದ್ಧ ಮತಗಳೂ ಹೆಚ್ಚಿ ವೈದಿಕ ಕರ್ಮಗಳ ಪ್ರತಿಭೆಯನ್ನು ತಗ್ಗಿಸಿದುವು.

ಇಂತಹ ಸಮಯದಲ್ಲಿ ಭಕ್ತಿಮಾರ್ಗವು ಪ್ರಬಲಿಸಿ, ಜನಸಾಮಾನ್ಯರಲ್ಲಿ ಹೊಸ ಹುರುಪು ಉಂಟಾಯಿತು. ಪ್ರಜಾಸಾಮಾನ್ಯರೆಲ್ಲರ ಹೃದಯಗಳಲ್ಲಿ ಮೂಡಿದ ಈ ನೂತನೋತ್ಸಾಹವನ್ನೇ ವೀರಶೈವವು ಪ್ರಕಾಶಪಡಿಸಿತೆಂಬ ವಿಧಾನವನ್ನು ಬಸವೇಶ್ವರ ಚರಿತ್ರೆಯು ತಿಳಿಸುತ್ತಿದೆ. ಬಸವೇಶ್ವರನು ಬ್ರಾಹ್ಮಣಕುಲದಲ್ಲಿ ಜನ್ಮಿಸಿದನಾದರೂ, ಉಪನಯನವನ್ನು ತಿರಸ್ಕರಿಸಿ, ವೀರಶೈವ ದೀಕ್ಷೆಯನ್ನು ಹೊಂದಿದ ಪರಮ ಶಿವಭಕ್ತನಾಗಿರುವನು. ವೀರಶೈವವು ಕರ್ಮಮಾರ್ಗವನ್ನು ಬಿಟ್ಟಿದೆ ಎಂಬುವ ವಿಷಯಗಳು ವೀರಶೈವ ಸಿದ್ಧಾಂತಗಳಿಂದ ವ್ಯಕ್ತಪಡುತ್ತಿವೆ. ಬಸವೇಶ್ವರನು ಉಪನಯನವನ್ನು ನಿರಾಕರಿಸುತ್ತ ತನ್ನ ತಂದೆಗೆ ಸಮಾಧಾನ ಹೇಳಿದ ವಿಷಯವು ಕರ್ಮನಿರಸನವನ್ನುಂಟುಮಾಡುತ್ತಿದೆ.

ಬಸವಪುರಾಣ ಪುಟ ೧೯ ದ್ವಿಪದಿಗಳು.

ಕೂಲಿ ಭಕ್ತುಲ ಕೆತ್ತುಕೇಲವಿತ್ರಾಟ-ಮೂಲಲಕೆತ್ತುಟಮಂತಪ್ಪಗಾದೇ ?
ಕರ್ಮಪಾಶಂಬುಲೊಕ್ಕಟಂ ದೆಗನೀಲ್ಗಿ-ಕರ್ಮಂಬುತ್ರಾಳ್ಲದಾಂಗಟ್ಟುಕೊಂದಗುನೇ
ರುದ್ರಾಕ್ಷ ಭಸಿತಾದಿ ಮುದ್ರಲುಂ ದಾಲ್ಚಿ-ಕ್ಷುದ್ರಮುದ್ರಲುದಾಲ್ಪಂ ಗೂಡುನೇಚವುನು
ಈರೀತಿಂ ದ್ರಾಟಕಿಂ ದೂರಮೈಯುನ್ನ-ವೀರಮಾಹೇಶ್ವರಾಚಾರ ದೀಕ್ಷಿತುನಿ
ನಿರ್ಮಿತೋಭಯಕರ್ಮನಿರ್ಮೂಲುನನ್ನಂ-ಗರ್ಮಾಬ್ಧಿ ಮುಂಚುಟ ಧರ್ಮಮೇನೀಕುಂ ?
ಗ್ರಜ್ಜರಿಂಗನ್ನುಲಂ ಗಾನವುಗಾಕ-ವಚ್ಚನೇ ಬಸವನಿವಡುಗುಶೇಯಂಗ
ಬ್ರಹ್ಮಶಿರೋಹರುಂ ಬ್ರಮಥೈಕವಂಶ್ಯು-ಬ್ರಹ್ಮವಂಶ್ಯಂಡನಿಭಾವಿಂಚೇದೆಟ್ಲು ?
ಜಾತಿಗೋತ್ರಾತೀತುಸದ್ಗುರುಜಾತು-ಜಾತಿಗೋತ್ರಕ್ರಿಯಾಶ್ರಯುಂ ಜೇಶೆದೆಟ್ಟು ?
ಆಕುಲಸ್ಥುಂಡೈಯುನ್ನಯುಭವುನಿಭಕ್ತು-ನಿಕಿನೇಕುಲಂಬನಿನಿಗ್ಣಯಿಂಚೆದವು ?

ಪುಟ ೨೧

ಧರನನ್ಯದೇವತಾಸ್ಮರಣಮಾತ್ರಮುನ-ನಿರುಪದೇನ್ಮಿದಿಕೋಟ್ಲನರಕಂಬುಲೊಂದು
ನನಕೃತುಲಂದುನುವಿನರೇಬಾಪನಿಕಿ-ದಿನಕರಪಾವಕ ದಿಕ್ಪಾಲಕುಲನು



ಹರಿವಿರಂಚ್ಯಾದುಲನಖಿಲದೇವತಲ-ಧರಮೂಂಡು ಸಂಧ್ಯಲಂದಾಂಗೊಲ್ಪಲಯುಂ
ಗೊಲುವ ಕತಕ್ಕಿನಂಬೊಲಿಸೇ ಬ್ರಾಹ್ಮ್ಯಂಬು-ಕೊಲಿಚೆನೇನಿಯುಭಕ್ತಗೊಲಿಸೆಂಗಾವುನನು
ಬ್ರಾಹ್ಮಣುಂಡೇನಿಯು ಭಕ್ತುಂಡೆಟ್ಲಗುನು-ಬ್ರಾಹ್ಮಣುಂಡೆಟ್ಲಗು ಭಕ್ತುಂಡೇನಿಯುನು ?
ಮಾವಿಡಿಬೀಜಂಬು ಮಹಿಮೊಂದವಿತ್ತಂ-ಗಾವೇಮುಗುನೇಪೆಕ್ಕಗಥಲೇವಿಜೆಪ್ಪ ?
ಸಹಜಲಿಂಗೈಕ್ಯನಿಷ್ಠಾಯುಕ್ತಿಭಕ್ತಿ-ಬಹುದೇವತಾಸೇವಬ್ರಾಹ್ಮಣಪಥಮು
ಕರ್ಮಮಾರ್ಗಂಬಕುಂಗಾಗ ಬ್ರಾಹ್ಮ್ಯಂಬು-ನಿರ್ಮಲಶಿವಭಕ್ತಿನಿಷ್ಠಿತಂಬಗುನೇ ?

... ... ... ... ... ...

ವೀರಶೈವಕ್ಕೆ ಲಿಂಗಧಾರಣೆಯೇ ಪ್ರಧಾನದೀಕ್ಷೆಯಾಗಿರುತ್ತೆ. ಲಿಂಗಧಾರಣೆಗೆ ಕಂಠ, ಹಸ್ತ, ಹಣೆ, ಶಿರಸ್ಸು, ಎದೆ, ತೋಳು ಇವುಗಳು ಮುಖ್ಯ ಸ್ಥಾನಗಳು. ಲಿಂಗಧಾರಿಗಳಾದವರೆಲ್ಲರೂ ಜಾತಿ ಕುಲ ಭೇದಗಳಿಲ್ಲದ ಶಿವಭಕ್ತರಾಗಿರುವರು. ಬ್ರಾಹ್ಮಣರು, ವೈಶ್ಯರು, ಶೂದ್ರರು, ಹೊಲೆಯರು ಮುಂತಾದ ಅಷ್ಟಾದಶವರ್ಣದವರೆಲ್ಲರೂ ವೀರಶೈವರಾಗಿ ಕುಲಭೇದಗಳನ್ನು ಎಣಿಸದೆ ಇದ್ದರೆಂಬುವ ವಿಧಾನಗಳು ಬಸವಚರಿತ್ರೆಯಿಂದ ಹೊರಪಡುತ್ತಿದೆ. ಬಸವೇಶ್ವರನು ವರ್ಣಸಂಕರ ಮಾಡುತ್ತಿರುವನೆಂದು ಬ್ರಾಹ್ಮಣರು ಬಿಜ್ಜಳ ರಾಜನಲ್ಲಿ ದೂರು ಹೇಳಿದ ಸಮಯದಲ್ಲಿ, ಬಸವೇಶ್ವರನು ಹೇಳಿದ ಪ್ರತ್ಯುತ್ತರಗಳಿಂದ ಭಕ್ತಿಯ ತತ್ವಗಳು ವಿಶದವಾಗುತ್ತಿರುವವು.

ಬಸವ ಪುರಾಣ ಪುಟ ೨೦೯

ವೇದಂಬುಲಾದಿಯಾವಿಧಿಕಲ್ಪಿತಂಬು-ಲಾದಿಯಾಜಾತುಲಕದಿಯೆಟ್ಟುಲನಿನಂ
ಜನುವೇದಬೋದಿತ ಜಾತುಲುರೆಂಡು-ವಿನುಮುಪ್ರವರ್ತಕಂಬುನು ನಿವರ್ತಕಮು

ಭವಕರ್ಮಸಂಸ್ಕಾರಿ ಭುವಿಂ ಬ್ರವರ್ತಕುಂಡು ಶಿವಕರ್ಮಸಂಸ್ಕಾರಿಭುವಿನಿವರ್ತ
ಕುಂಡು
ಸನ್ನುತವೇದಾರ್ಥಚರಿತಂಬುಲುಂಡ-ಮುನ್ನಂಬುಟ್ಟಿನ ಕುಲಮ್ಮುಲಮಾಟ
ಲೇಲ
ಪ್ರಸ್ಮಕ್ತಮುಗುನಟ್ಟಿ ಜಾತುಲುಗಾವೇ-ಯಷ್ಟಾದಶಂಬುಲುನವಿಯೇಲಚೆಪ್ಪ
ಮಿಕ್ಕಿಲಿ ಪಮುನೆನಿಮಿದಿವರ್ಣಮುಲಕು-ನಿಕ್ಕಮಾಯಭಕ್ತನಿಜಯಂಬು
ಕುಲಮು
ಭಾಗ್ಯಹೀನುಂಡುದಾಂಬನಿಂಡಿಂಬಟ್ಟಿನನ-ಯೋಗ್ಯುಂಪುಲೋಪ್ಪವೈಯು
ನ್ನಟ್ಲಿಶಿವುನಿ
ಪ್ರತಿಬಿಂಬಮೂರ್ತಿಯೈಭಕ್ತುಂಡುಭವಿಕೆ-ಮುಡಿಂಜೂಡಂ ಮಾನವಾಕೃತಿ
ನುಂಡುಧರಣಿ
ಗಾವುನಶಿವಭಕ್ತಗಣಮುಲಮಹಿಮ-ಭಾವಿಂಪಂದಲಂಪನೀಪ್ರಾಪ್ತಿಯೇಚ
ಪುಮು

... ... ... ... ...

ಈಗಿನ ಕಾಲದಂತೆಯೇ ಜಾತಿ, ಕುಲ ವೈಷಮ್ಯಗಳಿಂದ ಹೊಡೆದಾಡುತ್ತ ಬಲಹೀನವಾಗಿದ್ದ ಸಮಾಜವನ್ನು ವೀರಶೈವವು ಆಗಿನ ಕಾಲದಲ್ಲಿ ಭಕ್ತಿಪಾಶ ಬದ್ಧವನ್ನಾಗಿ ಮಾಡಿ ಬಲಿಷ್ಠವಾದ ಸ್ಥಿತಿಗೆ ತಂದ ವಿಚಾರವು ಆಶ್ಚರ್ಯಕರವಾಗಿರುತ್ತೆ. ವೀರಶೈವರು ಲಿಂಗೋಪಾಸನೆಯೆಂಬ ಶಸ್ತ್ರಧಾರಿಗಳಾಗಿ, ಶಿವದ್ರೋಹಿಗಳನ್ನೂ, ಜೈನ ಮತಸ್ಥರನ್ನೂ ನಾಶಗೊಳಿಸಿರುವ ವಿಷಯವು ವೀರಶೈವದ ಪ್ರತಿಭಾಶಕ್ತಿಯನ್ನು ಹೊರಪಡಿಸುತ್ತಿದೆ. ಜಗದೇವನು ವೀರ ತಾಂಬೂಲವನ್ನು ಕೈಗೊಂಡು ಬಿಜ್ಜಳನನ್ನು ಸಂಹರಿಸಿ, ತಾನು ಆತ್ಮಹತ್ಯಮಾಡಿಕೊಂಡನು. ನಾಚಿ ದೇವಯ್ಯನು ಹನ್ನೆರಡು ಸಾವಿರ ಮಂದಿ ಪರವಾದಿಗಳನ್ನು ನಿಗ್ರಹಿಸಿದನೆಂಬ ವಿಷಯವು ವೀರಶೈವ ದೀಕ್ಷಾ ಪ್ರಭಾವವನ್ನು ತೋರಿಸುತ್ತಿದೆ. ವೀರಶೈವವು ಅತ್ಯಲ್ಪ ಕಾಲದಲ್ಲಿಯೇ ಕರ್ನಾಟಕ, ಆಂಧ್ರ, ದ್ರಾವಿಡದೇಶಗಳಲ್ಲೆಲ್ಲಾ ವ್ಯಾಪಿಸಿ, ಜನಸಾಮಾನ್ಯರ ಮನಸ್ಸನ್ನು ಆಕರ್ಷಣೆ ಮಾಡಿತು. ಇದಕ್ಕೆ ವೀರಮಾಹೇಶ್ವರ ಭಕ್ತಿಯೆನ್ನುವ ಸಾಂಘಿಕ ವ್ಯವಸ್ಥೆಯೇ ಕಾರಣವು.



## ವೀರಶೈವ ಸಂಘವು.

ವೀರಶೈವಕ್ಕೆ ಶಿವಭಕ್ತಿ, ಲಿಂಗಧಾರಣೆ, ವಿಭೂತಿ ರುದ್ರಾಕ್ಷಿಧಾರಣೆ, ಪಂಚಾಕ್ಷರೀ ಮಂತ್ರ ಮತ್ತು ಲಿಂಗೋಪಾಸನೆಯ ಶಸ್ತ್ರಧಾರಣೆ ಇವುಗಳೇ ಮುಖ್ಯ ಲಕ್ಷಣಗಳಾಗಿವೆ. ವೀರಶೈವದಲ್ಲಿ ಶಿವಭಕ್ತಿಯು ವೀರಸ್ವರೂಪವನ್ನು ಹೊಂದಿರುತ್ತದೆ, ಶಿವಭಕ್ತಿಪರವಶರಾದ ಭಕ್ತರನೇಕರು ತಮ್ಮ ಕಣ್ಣುಗಳನ್ನೂ, ಪ್ರಾಣಗಳನ್ನೂ, ಪತ್ನೀಪುತ್ರಾದಿಗಳನ್ನೂ ಸಹಾ ಶಿವಾರ್ಪಿತಮಾಡಿ, ಕೈವಲ್ಯಪದವಿಯನ್ನು ಪಡೆದ ಸಂಗತಿಯು ಭಕ್ತರ ಚರಿತ್ರೆಗಳಿಂದ ವ್ಯಕ್ತಪಡುತ್ತಿದೆ. ಕಣ್ಣಪ್ಪ, ಸಿರಿಯಾಳ, ನಿಂಬ್ಯಕ್ಕ, ಕುಂಬಾರ ಗುಂಡಯ್ಯ, ಚೌಡಯ್ಯ, ಬೊಮ್ಮಯ್ಯ, ವೈಜವ್ವೆ, ದುಂಡಯ್ಯ, ಶ್ವಪಚಯ್ಯ, ಕಕ್ಕಯ್ಯ, ಗುಡ್ಡವ್ವೆ ಮುಂತಾದ ಭಕ್ತರ ಕಥೆಗಳು ಅತ್ಯದ್ಭುತವಾದ ವೀರಭಕ್ತಿಯನ್ನು ತಿಳಿಸುತ್ತಿವೆ. ಭಕ್ತರುಗಳ ಪುರಾತನಕಾಲದ ಹೆಸರುಗಳೇ ಅವರ ಚಿತ್ತದ ಪರಿಪಕ್ವದ ಲಕ್ಷಣವನ್ನು ಹೊರಪಡಿಸುತ್ತಿವೆ. ವೀರಶೈವ ಧರ್ಮವು ಸಮಾಜದ ಪರಿವರ್ತನೆಯನ್ನೂ, ಮತದ ಪರಿವರ್ತನೆಯನ್ನೂ ಪ್ರತಿಪಾದಿಸುತ್ತಿದೆ. ವೀರಶೈವ ಸಂಘಕ್ಕೆ ಬಸವೇಶ್ವರನು ದಂಡನಾಯಕನು. ಮಾಹೇಶ್ವರರು ಸೇನಾಪತಿಗಳು. ಭಕ್ತರೆಲ್ಲರೂ ಸೈನಿಕರು. ಈ ಭಕ್ತಸೈನಿಕರು ಶತ್ರು ಮಿತ್ರಾಭಿಮಾನ ಮತ್ತು ತಮ್ಮ ಪ್ರಾಣ, ಮಾನ, ಧನಾಭಿಮಾನಗಳನ್ನು ಸಹಾ ತೊರೆದು ಶೈವ ಧರ್ಮ ನಿರ್ವಹಣೆಯನ್ನು ಮಾಡಿರುವರು. ಜಂಗಮರಾದ ಶಿವಭಕ್ತರೆಲ್ಲರೂ ಶಿವಸ್ವರೂಪರೇ ಎಂತಲೂ, ವೀರಶೈವರಾದವರಲ್ಲಿ ಬ್ರಾಹ್ಮಣರು, ಹೊಲೆಯರು, ಪಂಡಿತರು-ಪಾಮರರು, ರಾಜರು-ಪ್ರಜೆಗಳು, ಸ್ತ್ರೀಯರೂ-ಪುರುಷರೂ, ಸಹ ಭೇದಭಾವವಿಲ್ಲದೆ ಶಿವಭಕ್ತರೇ ಎಂಬುವದು ನಿರ್ಧರವಾಯಿತು. ಶಿವಭಕ್ತರೆಲ್ಲರೂ ತಮ್ಮ ಸರ್ವಸ್ವವನ್ನೂ ಜಂಗಮಕ್ಕೆ ಅರ್ಪಿಸುವುದರಮೂಲಕ ಶಿವಾನಂದವನ್ನು ಪಡೆಯುತ್ತಿದ್ದರು. ವೀರಶೈವವು ಜಂಗಮಭಕ್ತಿಯನ್ನೂ, ಭವಿಸಂಗವಿಸರ್ಜನೆಯನ್ನೂ ಬೋಧಿಸಿತು. ಲಿಂಗಧಾರಣೆಯಿಲ್ಲದವರನ್ನು ಭವಿಗಳೆಂದು ಕರೆದರು ಭವಿಗಳು ಪರಾಜಿತರಾದ ವಿಧಾನಗಳನ್ನು ಬಸವಪುರಾಣ ಮತ್ತು ವೀರಶೈವಾಗಮಗಳು ವಿಶದಪಡಿಸುತ್ತಿವೆ. ವೀರಶೈವವು ಬ್ರಾಹ್ಮಣ್ಯವನ್ನೂ, ಯಜ್ಞಯಾಗಾದಿಗಳನ್ನೂ, ಕರ್ಮಗಳನ್ನೂ ತಿರಸ್ಕರಿಸುತ್ತಿದೆ. ಪಾಲ್ಕುರಿಕೆ ಸೋಮನಾಥಾದಿ ಬ್ರಾಹ್ಮಣರು ಕೆಲವರು ತಮ್ಮ ಕುಲಗೋತ್ರಗಳನ್ನು ವಿಸರ್ಜಿಸಿ ವೀರಶೈವ ದೀಕ್ಷೆ

ಯನ್ನು ಸ್ವೀಕರಿಸಿ ಕೃತಾರ್ಥರಾದರು. ಮಲ್ಲಿಕಾರ್ಜುನಪಂಡಿತಾರಾಧ್ಯರೇ ಮುಂತಾದವರು ವೀರಶೈವ ದೀಕ್ಷೆಯನ್ನು ಹೊಂದಿದ್ದರಾದರೂ, ತಮ್ಮ ಕುಲಸಂಬಂಧವನ್ನು ಬಿಡಲಾರದೆ ವೀರಶೈವ ಸಂಘದಲ್ಲಿ ಬೆರೆಯಲಾರದವರಾದರು. (ಭಕ್ತಿಮೊದಿವಲವು ಬ್ರಾಹ್ಮ್ಯಂಬುತೋಬೊತ್ತಂ ಬಾಯಲೇನು ನೇನು ಬಸವಲಿಂಗ) ಎಂಬುನಾಗಿ ಮಲ್ಲಿಕಾರ್ಜುನ ಪಂಡಿತಾರಾಧ್ಯನು ಹೇಳಿರುವುದನ್ನು ನೋಡಿದರೆ ಲಿಂಗಧಾರಣೆಯ ಸ್ವೀಕಾರವನ್ನೂ, ಬಸವಮತ ಸ್ವೀಕಾರಾಭಿಲಾಷೆಯನ್ನೂ ಸೂಚಿಸುತ್ತಿದೆ. ಲಿಂಗಧಾರಣೆಯ ಸ್ವೀಕಾರವಲ್ಲದೆ ಕೇವಲ ಶೈವ ಮತದ ಸ್ವೀಕಾರವನ್ನೇ ತಿಳಿಯಪಡಿಸಿದ್ದರೆ, ಬಸವಲಿಂಗ ನಾಮಸ್ಮರಣೆಗೂ ಮತ್ತು ಭಕ್ತಿಯ ಮೇಲಿನ ಅಭಿಮಾನಕ್ಕೂ ಅವಕಾಶವಾಗುತ್ತಿರಲಿಲ್ಲ. ಪಿತೃತರ್ಪಣಾದಿ ಕರ್ಮಗಳನ್ನು ವಿಸರ್ಜನೆ ಮಾಡುವಿಕೆಯೇ ಲಿಂಗಧಾರಣೆಗೆ ನಿದರ್ಶನವಾಗಿರುತ್ತದೆ. ಲಿಂಗಧಾರಿ ಬ್ರಾಹ್ಮಣರಲ್ಲಿ ವಿವಾದಾಸ್ಪದವಾಗಿರುವ ಮೂಲವು, ಸತ್ತವರನ್ನು ಸುಡದೆ ಸಮಾಧಿಕ್ರಿಯೆಗಳನ್ನು ಆಚರಿಸುತ್ತಿರುವುದೇ ಲಿಂಗಧಾರಣೆಯ ಸೂಚನವಾಗಿರುತ್ತದೆ. ಬಸವೇಶ್ವರನ ಕಾಲದಲ್ಲಿಯೂ ಅಲ್ಲಿಂದೀಚಿನ ಕಾಲದಲ್ಲಿಯೂ ಸಹ ಶಿವಭಕ್ತಿಪರವಶರಾದ ಹದಿನೆಂಟು ಕುಲದವರೆಲ್ಲರೂ, ಕೆಲವರು ಲಿಂಗ ಧಾರಣೆಯನ್ನು ಮತ್ತೆ ಕೆಲವರು ವೀರಶೈವ ದೀಕ್ಷೆಯನ್ನೂ ಹೊಂದಿದರು. ಲಿಂಗಧಾರಣೆಯನ್ನು ಹೊಂದಿದವರಲ್ಲಿ ಕೆಲವರು ತಮ್ಮ ಕುಲಬಾಂಧವರ ಸಮ್ಮಂಧವನ್ನು ಬಿಡಲಾರದೆ ಅವರಂತೆಯೇ ಆಚರಿಸಿಕೊಂಡು ಬಂದರು. ಲಿಂಗಧಾರಿಗಳಾಗಿದ್ದಾಗ್ಯೂ ವೀರಶೈವ ಆಚಾರ ನಿಷ್ಠತೆಯಿಲ್ಲದಿರುವ ಬ್ರಾಹ್ಮಣ ಮತ್ತು ವೈಶ್ಯಾದಿ ಜನಗಳು ಈಗಲೂ ಇರುತ್ತಾರಾಗಿ ಇದಕ್ಕೆ ಮೇಲ್ಕಂಡ ಕಾರಣವೇ ಇರಬೇಕೆಂದು ತೋರುತ್ತಿದೆ. ವೀರಶೈವದ ಪ್ರತಿಭೆಯು ತಗ್ಗುತ್ತ ಬಂದಂತೆಲ್ಲಾ ಬ್ರಾಹ್ಮಣರು, ವೈಶ್ಯರು ಲಿಂಗಧಾರಣೆಯನ್ನು ಪಡೆಯುವಿಕೆಯು ನಿಂತುಹೋಯಿತು. ಆಂಧ್ರದೇಶದಲ್ಲಿ ಲಿಂಗಧಾರಿ ಬ್ರಾಹ್ಮಣರುಗಳಿಗೆ ಗುರುಪೀಠಗಳಿಲ್ಲದಿರುವುದಕ್ಕೆ ತ್ರಿಮತಸ್ಥ ಬ್ರಾಹ್ಮಣರ ಪ್ರಾಬಲ್ಯವೂ, ವೀರಶೈವರ ಪ್ರಾಬಲ್ಯವೇ ಕಾರಣವಾಗಿರಬೇಕು. ಪಂಡಿತತ್ರಯವಂಶಜರು (ಶಿವಲೆಂಕ ಮಂಚನಪಂಡಿತ, ಶ್ರೀಪತಿಪಂಡಿತ, ಮಲ್ಲಿಕಾರ್ಜುನ ಪಂಡಿತ ವಂಶಜರು) ಗುರುಪೀಠಸ್ಥರಂತಲೇ ವ್ಯವಹರಿಸಲ್ಪಡುತ್ತಿದ್ದಾರೆ. ಲಿಂಗಧಾರಿ ಬ್ರಾಹ್ಮಣರು ವೀರಶೈವರೆಂಬ ಹೆಸರನ್ನು ಯಾವಾಗ ಸ್ವೀಕರಿಸಿದಾಗ್ಯೂ ವರ್ಣಾಶ್ರಮಗಳನ್ನು ವಿಸರ್ಜಿಸುವುದಕ್ಕೆ ಪ್ರಯತ್ನಮಾಡಿ ಅದ



ರಂತೆ ತಾವೂ ಆಚರಣೆಗೆ ತಂದರೆಂಬ ವಿಷಯವು ವೀರಶೈವಮತ ಚರಿತ್ರೆಯಿಂದ ವಿಶದವಾಗುತ್ತಿದೆ. ವೀರಶೈವ ಮತಕ್ಕೆ ಈಗಲೂ ಇರುವ ಪ್ರಾಬಲ್ಯದ ವಿಚಾರವು ಕರ್ಣಾಟಕ ದೇಶದಲ್ಲಿರುವ ವೀರಶೈವ ಗುರುಮಠಗಳಿಂದ ತಿಳಿಯಬರುತ್ತಿದೆ. ವೀರಶೈವ ಮಠಾಧೀಶ್ವರರುಗಳು ಇತರ ಗಣ್ಯಮಠಾಧೀಶ್ವರರಂತೆಯೇ ಸಮಸ್ತ ಗೌರವಾದಿಗಳಿಗೂ ಅರ್ಹರಾಗಿರುತ್ತಾರೆ. ವೀರಶೈವ ಮತವು ತಲೆಯೆತ್ತದೆ. ಈಗಿನ ಸ್ಥಿತಿಯಲ್ಲಿ ಕುಲಾಚಾರಗಳ ಹವ್ಯಾಸಕ್ಕೆ ತೊಡಗಿರುತ್ತಾ ಲಿಂಗಾಯಿತರು, ಜಂಗಮರು, ಸಾಲಿಗರು, ಜೇಡರು ಇತ್ಯಾದಿ ಕುಲಗಳು ಏರ್ಪಡುವಂತಾಗಿರುವುದರಿಂದ ವೈದಿಕ ಧರ್ಮಪ್ರಾಬಲ್ಯವು ಪುನಃ ತಲೆಯೆತ್ತುವಂತಿದೆ. ಭಕ್ತಿಪ್ರಾಧಾನ್ಯವಾದ ವೀರಶೈವವು ನಿರ್ಜೀವವಾದ ಆಚಾರ ಸಂಪ್ರದಾಯಕ್ಕೆ ತೊಡಗಿ, ಸಂಘದ ಪ್ರಯೋಜನಕ್ಕೂ ಮತ್ತು ಮಾನವರ ಕ್ಷೇಮಕ್ಕೂ ಸಹ ಉಪಯೋಗವಾಗದಿರುವ ಸ್ಥಿತಿಗೆ ಬಂದಿರುತ್ತೆ.

(ಮುಂದೆವರಿದುದು.)

---

## ಈ ದ್ರಾವಿಡ ಪ್ರಾಣಾಯಾಮವೇತಕ್ಕೆ?

(ಲೇಖಕರು:— ಶ್ರೀ ವೀರೇಶ್ವರ, ಬೆಂಗಳೂರು ನಗರ.)

ಇತ್ತೀಚೆಗೆ ನಮ್ಮ ಈ ಲಿಂಗಾಯತ ಸಮಾಜದಲ್ಲಿ “ಬಸವಣ್ಣನವರಿಗಿಂತಲೂ ಮೊದಲು ವೀರಶೈವ ಮತವಿದ್ದಿತು” ಎಂಬ ವಿಷಯವಾಗಿ ವಾದವಿವಾದಗಳು ಹೆಚ್ಚುಹೆಚ್ಚಾಗಿ ನಡೆಯತೊಡಗಿವೆ. ಮತ್ತು ಮೊದಲೇ ಇದ್ದಿತು ಎಂದು ವಾದಿಸುವರು ಕೆಲವರಿದ್ದು ಅವರಲ್ಲಿ ಎರಡು ಪಂಗಡಗಳಾಗಿ, ಒಂದು ಪಂಗಡದವರು ಸೃಷ್ಟಿಯಲ್ಲಿ ಶಿವಸೃಷ್ಟಿ, ಬ್ರಹ್ಮಸೃಷ್ಟಿ, ಎಂದೆರಡು ವಿಧವೆಂದೂ, ಈ ಎರಡು ವಿಧಗಳಲ್ಲಿ ಶಿವಸೃಷ್ಟಿಯೇ- ಅಂದರೆ ಆ ಶಿವನ ಪಂಚಮುಖಗಳಲ್ಲುದ್ಭವಿಸಿದ ಶ್ರೀ ರೇಣುಕಾದಿ ಪಂಚಾಚಾರ್ಯರಿಂದ ಮೊದಲಾದುದೇ ವೀರಶೈವ ಮತವೆಂದೂ ಇದು ಈ ಜಗತ್ತಿನ ಸೃಷ್ಟಿಕಾರ್ಯಕ್ಕಿಂತಲೂ ಪ್ರಾಚೀನವಾದುದೆಂದೂ ಬಸವಣ್ಣನವರು ಕೇವಲ ಇತ್ತೀಚಿನವರೆಂದೂ ವಾದಿಸುತ್ತಾರೆ.

ಅವರಲ್ಲಿಯೇ ಮತ್ತೊಂದು ಪಂಗಡದವರ ವಾದವೇನೆಂದರೆ— ಶ್ರೀ ಬಸವಣ್ಣನವರಿಗಿಂತಲೂ ಕೆಲವು ಶತಮಾನಗಳ ಹಿಂದಿನಿಂದಲೂ ಕೆಲ ಮಹಾತ್ಮರುಗಳುದಯಿಸಿ ಈ ವೀರಶೈವ ಧರ್ಮವನ್ನಾಚರಿಸಿರುವರೆಂದೂ ಆದರೆ ಬಸವಣ್ಣನವರ ಕಾಲಕ್ಕೆ ಅದು ಹೆಚ್ಚುಹೆಚ್ಚಾಗಿ ಪ್ರಸಾರವಾಯಿತೆಂದೂ ಆದುದರಿಂದ ಬಸವಣ್ಣನವರಿಗಿಂತ ಹಿಂದೆಯೇ ಅದು ಇದ್ದಹಾಗಾಯಿತೆಂದೂ ವಾದಿಸುತ್ತಾರೆ.

ಹೀಗೆ ಒಂದೇ ವಾದಕ್ಕಾಗಿ ಹುಟ್ಟಿರುವ ಈ ಎರಡು ಪಂಗಡಗಳಲ್ಲಿಯ ಮೊದಲನೆಯ ಪಂಗಡದವರ ಪೌರಾಣಿಕ ವಾದವನ್ನಂತೂ ಈ ಕಲಿಯುಗದಲ್ಲಿ ವಿಚಾರವಾದಿಗಳಾದವರಾರೂ ಒಪ್ಪುವುದಿಲ್ಲ. ಶಿವ ಸೃಷ್ಟಿಯೇ ಬೇರೆ, ಬ್ರಹ್ಮ ಸೃಷ್ಟಿಯೇ ಬೇರೆ ಎಂಬ ಇವರ ವಾದವು. ಈ ಎರಡು ಸೃಷ್ಟಿಗಳೂ ಬೇರೆ ಬೇರೆಯಾಗಿ ಒಂದು ಹೆಚ್ಚು, ಒಂದು ಕಡಿಮೆ ಎಂಬುದು ನಿಜವಾದರೆ, ಒಂದೇ ಬಗೆಯ, ನೆಲ, ನೀರು, ಗಾಳಿ, ಬೆಳಕು, ಬೆಂಕಿಗಳಿಂದ ಈ ಎರಡು ಸೃಷ್ಟಿಗಳೂ ಜೀವಿಸುತ್ತಿವೆಯೇಕೆ? ಹೆಚ್ಚಿನ ತರಗತಿಯದೆಂದು ಹೇಳಿಕೊಳ್ಳುವ ಶಿವಸೃಷ್ಟಿಯ ಜೀವನಾಧಾರಕ್ಕೆ ಪ್ರತ್ಯೇಕವಾದ ಗಾಳಿ, ಬೆಳಕು, ನೆಲ, ನೀರು, ಬೆಂಕಿಗಳಿರಬೇಕಾಗಿದ್ದಿತಲ್ಲವೇ? ಎಂಬುದಾಗಿ ಈಗಿನ ವಿಚಾರ ವಾದಿಗಳು ಕೇಳುವ ಒಂದೇ ಒಂದು ಪ್ರಶ್ನೆಗೆ ಈ ವಾದವು ಗಾಳಿಗೆ ಹಾರಿ ಹೋಗುತ್ತದೆ. ಮತ್ತು ಈ ಪಂಗಡದವರು ಕೇವಲ ಕುರುಡು ನಂಬಿಗೆಯ ರೀತಿಯಲ್ಲಿಯೂ ಪೌರಾಣಿಕ ರೀತಿಯಿಂದಲೂ ವಾದಿಸುತ್ತಾರೆಯಾಗಿ ಇವರ ಕುರುಡು ವಾದವನ್ನು ವಿಚಾರವಾದಿಗಳಾರೂ ಒಪ್ಪುವುದಿಲ್ಲ.

ಇನ್ನು ಎರಡನೆ ಪಂಗಡದವರ ವಾದವನ್ನು ವಿಚಾರಿಸೋಣ. ಈ ಎರಡನೆಯ ಪಂಗಡದವರ ವಾದವು ನಾಲ್ಕಾರು ವರ್ಷಗಳಿಂದೀಚೆಗೆ ಕೊಂಚ ಕೊಂಚವಾಗಿ ಕಲೆಯುತ್ತಿದೆ. ಈ ವಾದಕ್ಕೆ ಸಂಬಂಧಿಸಿದ ವಿದ್ವಾಂಸರ ಲೇಖನಗಳೂ ಈ ವರ್ಷದ ಶಿವಾನುಭವದ ಪತ್ರಿಕೆಯ (ಹದಿಮೂರನೆಯ ಸಂಪುಟದ)ಲ್ಲಿ ಹೆಚ್ಚಾಗಿ ಪ್ರಕಟವಾಗಿವೆ. ಬಸವಣ್ಣನವರಿಗಿಂತ ಹಿಂದಿನ ಈ ಮತದ ಹೆಸರು, ಸ್ಥಿತಿ, ಗತಿ, ರೀತಿ, ನೀತಿ, ವ್ಯಾಪ್ತಿ ಮುಂತಾದ ವಿಷಯಗಳನ್ನು ಕುರಿತು ಮಾನ್ಯರಾದ ರಾವ್‌ಸಾಹೇಬ. ಫ. ಗು. ಹಳಕಟ್ಟಿಯವರೂ ಸ್ವತಃ ಹಲವು ಲೇಖನಗಳನ್ನು ಪ್ರಕಟಿಸಿದ್ದಾರೆ.



ಆದುದರಿಂದ ಈ ಎರಡನೆಯ ಪಂಗಡದವರ ವಾದವನ್ನು ಕೊಂಚ ಪರಿಶೀಲಿಸಬೇಕೆಂಬುದೇ ಈ ಲೇಖನದ ಉದ್ದೇಶವಾಗಿದೆ. ಮೊದಲನೆಯದಾಗಿ ಈ ಪಂಗಡದ ವಾದದಲ್ಲಿ ಬಸವಣ್ಣನವರಿಗಿಂತಲೂ ಮೊದಲು ವೀರಶೈವ ಮತವಿದ್ದಿತು. ಆದರೆ ಆಗ ಇದಕ್ಕೆ "ವೀರಶೈವ" ಎಂಬ ಹೆಸರಿರಲಿಲ್ಲ, ಅದಕ್ಕೆ ಬದಲಾಗಿ ಬೇರೆ ಬೇರೆ ನಾನಾ ತರದ ಹೆಸರುಗಳಿದ್ದವು, ಇದಕ್ಕೆ ಸಾಕ್ಷಿಯಾಗಿ ಅನೇಕ ಶಿಲಾಶಾಸನಗಳಲ್ಲಿ ಆಗ ಈ ಮತಕ್ಕೆ ಸಂಬೋಧಿಸುತ್ತಿದ್ದ ನಾನಾ ಬಗೆಯ ಹೆಸರುಗಳ ಉಲ್ಲೇಖನಗಳು ಹೇರಳವಾಗಿ ದೊರೆಯುತ್ತವೆ, ಎಂಬ ಈ ವಿಷಯವೇ ಪ್ರತಿಪಾದಿತವಾಗುತ್ತದೆ.

ಈ ವಾದದ ಬೆಂಬಲಿಗರು ಅಭಿಪ್ರಾಯ ಪಡುವಂತೆ ಆಗ ಈ ಮತಕ್ಕೆ "ವೀರಶೈವ, ಅಥವ, "ಲಿಂಗಾಯತ" ಎಂಬ ಯಾವುದಾದರೊಂದು ನಾಮ ನಿರ್ದೇಶವಿಲ್ಲದೆ, ಸಮಯಾಚಾರಿ, ಭಕ್ತ, ಮಾಹೇಶ್ವರ, ಜಂಗಮ, ಶಿವಾಚಾರ, ಲಿಂಗಪಥ, ಲಿಂಗಭಕ್ತ, ವ್ರತಿ, ಶರಣ, ನಿಜವ್ರತ, ಮುನಿ, ಮುನಿಪ, ಮುಂತಾದ ನಾನಾ ವಿಧವಾದ ಹೆಸರುಗಳು ಈ ಮತಕ್ಕೆ ಇದ್ದವೆಂಬ ಮಾತನ್ನು ಕೇಳಿದವರಿಗೆ ಈ ಹೆಸರುಗಳೆಲ್ಲವೂ ಈ ವೀರಶೈವ ಧರ್ಮವನ್ನು ಕುರಿತೇ ಸಂಬೋಧಿಸಲ್ಪಟ್ಟಿವೆ, ಎಂಬುದಕ್ಕೆ ಆಧಾರವೇನು? ಒಂದು ಮತವು ಚನ್ನಾಗಿ ಪ್ರಚಲಿತವಾಗಿದ್ದು ಅದರ ಆಚಾರ, ವಿಚಾರಗಳು ಸರ್ವ ಜನ ಮಾನ್ಯವಾಗಿರುವಾಗ ಅಂತಹ ದೊಡ್ಡ ಮತಕ್ಕೆ ಯಾವುದಾದರೊಂದು ನಿರ್ದಿಷ್ಟವಾದ ಹೆಸರಿಲ್ಲದಿದ್ದರೆ ಆ ಮತವು ಪ್ರಸಾರವಾಗಲು ಸಾಧ್ಯವೇ? ಆ ಕಾಲದಲ್ಲಿ ಈ ಮತಕ್ಕೆ ಅಂತಹ ಯಾವ ವಿಧವಾದ, ಹೆಸರನ್ನೂ ನಿರ್ದಿಷ್ಟಗೊಳಿಸಿರಲಿಲ್ಲವೆನ್ನುವುದಾದರೆ ಆ ಬಗೆಯ ಹೆಸರಿಲ್ಲದ ಮತ-ತತ್ವ-ಧರ್ಮ ಶಾಸ್ತ್ರಗಳಲ್ಲಿ ವ್ಯವಸ್ಥೆ, ಕಟ್ಟು, ಕಟ್ಟಳೆಗಳಿರುತ್ತವೆಯೆ? ಹಾಗೆ ವ್ಯವಸ್ಥೆಯಿಲ್ಲದ ಅವ್ಯವಸ್ಥಿತ ಪದ್ಧತಿಯಲ್ಲಿದ್ದ ಆ ಜನ ಸಮೂಹವು ಇಟ್ಟುಕೊಂಡಿದ್ದ ನಾನಾ ಹೆಸರುಗಳನ್ನು ಈಗಣ ವ್ಯವಸ್ಥಿತ ವೀರಶೈವ ಧರ್ಮದ ಪದ್ಧತಿಗೇ ಅನ್ವಯಿಸಿಕೊಳ್ಳುವುದು ಯುಕ್ತವೇ? ಮುಂತಾದ ಪ್ರಶ್ನೆಗಳು ಪುಂಖಾನುಪುಂಖವಾಗಿ ಮುಂದೆ ಬರುತ್ತವೆ? ಅಲ್ಲದೆ ಆ ಹೆಸರುಗಳೂ ಸಹ ವಿಚಿತ್ರವಾಗಿವೆ. ಮುನಿ, ಮುನಿಪ, ಜಂಗಮ, ಮಾಹೇಶ್ವರ, ವ್ರತಿ, ನಿಜವ್ರತ, ಮುಂತಾದ ಕೆಲ ಹೆಸರುಗಳು ಇಂದಿಗೂ ಎಲ್ಲ ಮತೀಯರಲ್ಲಿಯೂ ಆಯಾ ಯೋಗ್ಯ

ಇದುವವುಗಳಾಗಿವೆಯಲ್ಲದೆ, ಜಂಗಮ, ಮಾಹೇ
ತೆಯುಳ್ಳ ವ್ಯಕ್ತಿಗಳಿಗೆ ಇದುವವುಗಳಾಗಿವೆಯಲ್ಲದೆ, ಜಂಗಮ, ಮಾಹೇ
ಶ್ವರ. ಈ ಹೆಸರುಗಳು ಕಾಶ್ಮೀರಿ ಶೈವರಲ್ಲಿ ಈಗಲೂ ಪ್ರಚಾರದಲ್ಲಿರುವು
ವನ್ನು ನೋಡಬಹುದು. ಆದುದರಿಂದ ಈ ಹೆಸರುಗಳನ್ನೆಲ್ಲಾ "ವೀರ
ಶೈವ"ದ ಈಗಣ ವ್ಯವಸ್ಥಿತವಾದ ಆಚಾರ ವಿಚಾರಗಳಿಗೆ ಸಮನ್ವಯಿ
ಸಿಕೊಳ್ಳುವುದು ಅಸಂಬದ್ಧವಾಗಿಯೇ ಕಾಣುತ್ತದೆ.

ಇನ್ನು ಹನ್ನೊಂದನೆಯ ಶತಮಾನದಲ್ಲಿಯೇ ಕೆಲ ಶರಣರು "ವೀರ
ಶೈವ" ಮತ ಪ್ರಸಾರ ಮಾಡಿದ್ದಾರೆ ಎಂಬ ವಾದವನ್ನು ನೋಡಿದರೆ "ವೀರ
ಶೈವ" ಎಂಬ ಹೆಸರೇ ಆಗ ನಿರ್ದಿಷ್ಟವಾಗಿ ವ್ಯವಸ್ಥೆಗೊಳ್ಳದಿದ್ದಾಗ ಆಗ
ಪ್ರಚಾರವಾದುದು "ವೀರಶೈವವೇ ಸರಿ" ಎಂಬ ಹೇಳಿಕೆಯಲ್ಲಿಯೇ ಒಂದು
ಬಗೆಯ ಕೃತಕತೆಯೂ, ದೌರ್ಬಲ್ಯವೂ ಕಂಡು ಬರುತ್ತದೆ.

ಉದಾಹರಣೆಗೆ:— ದೇವರ ದಾಸಿಮಯ್ಯಗಳ ವಿಷಯವನ್ನು
ನೋಡೋಣ. ಅವರು ದೇಶಿಂಗರಾಯನ ಆಸ್ಥಾನದಲ್ಲಿ ಜೈನರನ್ನು
ವಾದದಲ್ಲಿ ಸೋಲಿಸಿದ ನಂತರ ಆ ಸೋತ ಜೈನರಿಗೆ "ಶೈವದೀಕ್ಷೆ"ಯನ್ನು
ಮಾಡಿದರೆಂಬುದೂ ಆ ಪಟ್ಟಣದ ಬಸದಿಗಳಲ್ಲೆಲ್ಲಾ ಸ್ಥಾವರ ಲಿಂಗಗ
ಳನ್ನು ಪ್ರತಿಷ್ಠಿಸಿದರೆಂಬುದೂ ತತ್ಸಂಬಂಧವಾದ ಗ್ರಂಥಗಳಲ್ಲಿ ಸ್ಪಷ್ಟ
ವಾಗಿ ಉಲ್ಲೇಖಿಸಲ್ಪಟ್ಟಿದೆ. ಇಲ್ಲಿ ಶೈವ ದೀಕ್ಷೆ, ಎಂಬುದನ್ನೇ ನಾವು ವೀರ
ಶೈವವೆಂದು ಭಾವಿಸುವುದಾದರೆ, "ವೀರಶೈವ" ದೀಕ್ಷಾಚಾರ್ಯರೆಂದು
ತಿಳಿಯಲ್ಪಡುವ ದೇವರ ದಾಸಿ ಮಯ್ಯಗಳು ಅಲ್ಲಿಯ ಬಸದಿಗಳಲ್ಲಿ
ಸ್ಥಾವರ ಲಿಂಗಗಳನ್ನು ಪ್ರತಿಷ್ಠಿಸಿದುದನ್ನು ಒಪ್ಪಲು ಸಾಧ್ಯವೇ? ಹಾಗೆ
ಅವರು ಮಾಡಿದ್ದು "ವೀರಶೈವ" ದೀಕ್ಷೆಯೇ ಆಗಿದ್ದರೆ ಆ ಪಟ್ಟಣದ
ಬಸದಿಗಳನ್ನೆಲ್ಲಾ ಅವರು "ವೀರಶೈವ" ಮಠಗಳನ್ನಾಗಿ ಪರಿವರ್ತಿಸಿ
ಆಯಾ ಬಸದಿಗಳಲ್ಲಿದ್ದ ಜೈನಯತಿಗಳನ್ನೇ ಆಯಾ ಮಠಗಳ ಪರಿವರ್ತಿತ
ವೀರಶೈವ ಮಠಾಧಿಕಾರಿಗಳನ್ನಾಗಿ ಮಾಡಬೇಕಾಗಿದ್ದುದೇ ಯುಕ್ತವಾಗಿ
ದ್ದಿತಲ್ಲವೆ? ಆದರೆ ಅವರು ಹಾಗೆ ಮಾಡದೆ ಹೋಗಿರುವುದನ್ನು ನೋಡಿ
ದರೆ ಅವರು ಪ್ರಸಾರ ಮಾಡಿದುದು ಬರೀ "ಶೈವ" ಮತವೆಂಬುದೂ,
ಶೈವರಿಗವಶ್ಯವಾದ ಸ್ಥಾವರಲಿಂಗ ಪೂಜಾ ಪ್ರಸಾರವೆಂಬುದೂ, ಅವರು
ಪ್ರಸಾರ ಮಾಡಿದುದು "ವೀರಶೈವ"ವಲ್ಲವೆಂಬುದೂ ಸ್ಪಷ್ಟವಾಗಿ ತಿಳಿ
ಯುತ್ತದೆ.



ಈ ದೇವರದಾಸಿಮಯ್ಯಗಳನ್ನು ಬಿಟ್ಟು ಬೇರೆ ಯಾವ ಮಹಾತ್ಮ
ರನ್ನಾದರೂ ನೋಡೋಣವೆಂದರೆ. ಆ ಕಾಲದ ಯಾವ ಮಹಾತ್ಮರ
ನಡೆವಳಿಕೆಗಳಲ್ಲಿಯೂ ಸಂಪೂರ್ಣ "ವೀರಶೈವಾಚರಣೆಯು" ಕಂಡು ಬರು
ವುದಿಲ್ಲ. ರೇವಣಸಿದ್ಧರ ಕಾರ್ಯಕಲಾಪಗಳನ್ನು ಹರಿಹರ ಮಹಾಕವಿಯ
ಹೇಳಿಕೆಯ ಪ್ರಕಾರ ನೋಡಿದರೂ ಸಹ ಅವರಲ್ಲಿಯೂ ವೀರಶೈವಾಚರ
ಣೆಯು ಕಂಡುಬರುವುದಿಲ್ಲ. ರೇವಣಸಿದ್ಧರೂ ಸಹ ಎಲ್ಲೆಲ್ಲಿಯೂ ಸ್ಥಾಪಿ
ಸಿರುವುದು ಸ್ಥಾವರಲಿಂಗಗಳನ್ನೇ. ಅವರು ಎಲ್ಲರಿಗೂ ಕೊಟ್ಟಿರುವುದು
ಬರೀ "ಶೈವ" ದೀಕ್ಷೆಯನ್ನೇ. ಅಷ್ಟೇಕೆ ಅವರು ಸಿದ್ಧರಾಮೇಶ್ವರನು ಗರ್ಭ
ದಲ್ಲಿದ್ದಾಗ ಸಿದ್ಧರಾಮೇಶ್ವರನ ತಂದೆ ತಾಯಿಗಳ ಮನೆಗೆ ಹೋದಾಗ
ಸಿದ್ಧರಾಮೇಶ್ವರನ ತಾಯ ಗರ್ಭಕ್ಕೆ ಕೇವಲ "ಭಸ್ಮ"ವಂ ಧರಿಸಿ ಕಾರಣಿ
ಕವಂ ಪೇಳಿ, ಮುಂದಕ್ಕೆ ಪ್ರಯಾಣ ಮಾಡಿದ್ದಾರೆಯೇ ಹೊರತು ವ್ಯವ
ಸ್ಥಿತ ವೀರಶೈವಾಚರಣೆಯಂತೆ ಆ ಗರ್ಭಕ್ಕೆ ಲಿಂಗಧಾರಣೆ, ಮಂತ್ರೋ
ಪದೇಶಗಳನ್ನೇನೂ ನಡೆಯಿಸಿಲ್ಲ. ಸಿದ್ಧರಾಮೇಶ್ವರನುದಯಿಸಿ ಪ್ರಾಯ
ಸಮರ್ಥನಾದ ಬಳಿಕ ಶ್ರೀಪ್ರಭುದೇವರು ಸಿದ್ಧರಾಮೇಶ್ವರನನ್ನು ಕರೆದು
ಕೊಂಡು ಹೋಗಿ ಕಲ್ಯಾಣದಲ್ಲಿ ಶ್ರೀಚನ್ನಬಸವಣ್ಣನವರಿಂದ "ವೀರ
ಶೈವ ದೀಕ್ಷೆ"ಯನ್ನು ಕೊಡಿಸಿದ್ದಾರೆ. ಈ ವಿಷಯವು ಸರ್ವರಿಗೂ ತಿಳಿದೇ
ಇದೆ. ಇನ್ನು ಬಸವಣ್ಣನವರ ಲಿಂಗಧಾರಣೆಯ ವಿಷಯವನ್ನು ತೆಗೆದು
ಕೊಂಡರೂ ಸಹ (ಸಾಕ್ಷಾತ್ ಕೈಲಾಸನಾಥನೇ ಸಂಗಮನವತಾರದಿಂದ
ಬಂದು ಶಿಶುವಿಗೆ ಲಿಂಗಧಾರಣೆ ಮಾಡಿದನೆಂಬ ಪೌರಾಣಿಕ ವಿಚಾರವು
ಇಲ್ಲಿ ಅನವಶ್ಯಕ.) ಆಗ ಈಗಿನಂತೆ ಗುರುವಿನ ಮೂಲಕ "ವೀರಶೈವ"
ದೀಕ್ಷೆಯಾಗುವ ವ್ಯವಸ್ಥಿತ ಆಚಾರವಿಚಾರಗಳು ಇನ್ನೂ ನೆಲೆಗೊಂಡಿರ
ಲಿಲ್ಲವಾದುದರಿಂದ ಹರಿಹರ ಮಹಾಕವಿಯು ಹೇಳುವ ಪ್ರಕಾರ, ಕಪ್ಪಡಿ
ಕ್ಷೇತ್ರದ ಕೂಡಲಸಂಗಮೇಶ್ವರಲಿಂಗದ ಮುಂದಿರುವ ವೃಷಭನ ಮುಖಾಂ
ತರವಾಗಿಯೇ ಶ್ರೀಬಸವಣ್ಣನವರಿಗೆ ಲಿಂಗಧಾರಣೆಯಾಗಿದೆ ದೇವರ
ದಾಸಿಮಯ್ಯಾದಿಗಳು ಹನ್ನೊಂದನೇ ಶತಮಾನದಲ್ಲಿಯೇ ವ್ಯವಸ್ಥಿತವಾದ
"ವೀರಶೈವಾಚರಣೆ"ಗಳನ್ನು ಪ್ರಸಾರ ಮಾಡಿದ್ದರೆ, ಶ್ರೀಬಸವಣ್ಣನವ
ರೇಕೆ ಸ್ಥಾವರಮೂರ್ತಿಯ ಮೂಲಕ ಲಿಂಗಧಾರಣೆ ಹೊಂದಬೇಕಾಗಿದ್ದಿತು?
ಕಪ್ಪಡಿಕ್ಷೇತ್ರದ ಸ್ಥಾನಪತಿಗಳಾಗಿದ್ದ ಶ್ರೀ. ಈಶಾನ್ಯಗುರುಗಳೆಂಬುವವರು
ಆಗ ಅಲ್ಲಿಯೇ ಇದ್ದು ಬಸವಣ್ಣನವರನ್ನು ಅತ್ಯಂತ ಪ್ರೀತಿಯಿಂದ ವೇವಾ

ಲಯದಲ್ಲಿಯೇ ಇರಿಸಿಕೊಂಡಿದ್ದರೂ ಸಹ ಅವರಾವರೂ ಸ್ವತಃ ಬಸವಣ್ಣನವರಿಗೆ ಲಿಂಗಧಾರಣೆಯನ್ನೇಕೆ ಮಾಡಲಿಲ್ಲ? ವ್ಯವಸ್ಥಿತ "ವೀರಶೈವಾಚರಣೆ"ಯು ಆಗ ಪ್ರಸಾರಣೆಯಲ್ಲಿಲ್ಲದಿದ್ದುದೂ, ಆ ಶ್ರೀಈಶಾನ್ಯಗುರುಗಳೆಂಬವರು ಲಕುಲೀಶ ಅಥವಾ ಕಾಳಾಮುಖ "ಶೈವ" ಪಂಥದ ಗುರುಗಳಾಗಿದ್ದುದೂ ಇದಕ್ಕೆ ಕಾರಣವೆಂಬುದು ಸ್ಪಷ್ಟವಾಗುವುದಲ್ಲವೆ?

ನಿಜಸ್ಥಿತಿಯು ಹೀಗಿವೆ ಎಂದು ನಿರ್ಧರವಾಗಿ ಹೇಳಬಹುದು:— ಬಸವಣ್ಣನವರಿಗಿಂತ ಮೊದಲು ವ್ಯವಸ್ಥಿತವಾದ "ವೀರಶೈವ"ದ ಆಚಾರ ವಿಚಾರಗಳು ಇರಲಿಲ್ಲ. ಆದರೆ "ಲಿಂಗಧಾರಣ" ಪದ್ಧತಿಯು ಮಾತ್ರ ಅದಕ್ಕಿಂತ ಮುಂಚೆ ಬಹುಕಾಲದಿಂದಲೂ ಆಚರಣೆಯಲ್ಲಿದ್ದಿತು "ಲಕುಲೀಶ" ಎಂಬ ಶೈವ ಪಂಥದವರು ಸ್ಥಾವರಲಿಂಗದಲ್ಲಿ ಭಕ್ತಿ ವಿಶ್ವಾಸಗಳು ಚೆನ್ನಾಗಿ ಬಳವಟ್ಟ ಬಳಿಕ ಪ್ರಾಜ್ಞರಾದ ಸ್ತ್ರೀಯರೂ ಪುರುಷರೂ ಮಸ್ತಕದಲ್ಲಿ ಲಿಂಗವನ್ನು ಧರಿಸಿಕೊಳ್ಳುತ್ತಿದ್ದರು.

ಬಸವಣ್ಣನವರ ಕಾಲದಲ್ಲಿಯೂ ವೃದ್ಧರಾಗಿದ್ದ ರೇವಣಸಿದ್ಧರೂ ಸಹ ಮಸ್ತಕದಲ್ಲಿ ಲಿಂಗವನ್ನು ಧರಿಸುತ್ತಿದ್ದರು. ರೇವಣಸಿದ್ಧರು ಕೊಲ್ಲಾಪುರಕ್ಕೆ ಹೋದಾಗಣ ಸನ್ನಿವೇಶವನ್ನು ಹರಿಹರ ಕವಿಗಳು ಹೀಗೆ ಹೇಳುತ್ತಾರೆ:—

"ಹಿರಿಯ ಲಕ್ಕಾದೇವಿ ಗಳಗಳನೆ ನಡೆತಂದು। ಚರಿತದಿಂ ಮಹಲಕ್ಷ್ಮಿ ಗರುವೆ ಭರದಿಂ ಬಂದು। ಉತ್ತಮಾಂಗಸ್ಥಳದ ಶಿವಲಿಂಗಸಂಪನ್ನೆ। ಉತ್ತಮ ಶಿವಾಚಾರನಿಧಿಲೋಕದೊಳ್ಪ್ರಸನ್ನೆ। ನಡೆತಂದಾ ಸಿದ್ಧರೇವಣಯತಿಗೆ ಶರಣೆಂದು॥

ಈ ಸನ್ನಿವೇಶದ ವಿವರವನ್ನು ನೋಡಿದರೆ ಆಗ ಸ್ತ್ರೀಯರೂ ಮಸ್ತಕದಲ್ಲಿ ಲಿಂಗವನ್ನು ಧರಿಸುತ್ತಿದ್ದರೆಂಬುದೂ, ಆದರೆ ಅದು ವೀರಶೈವಾಚರಣೆಯಾಗಿರದೆ ಕೇವಲ "ಶೈವ" ಪದ್ಧತಿಯಾಗಿತ್ತೆಂಬುದೂ ಸ್ಪಷ್ಟವಾಗುತ್ತದೆ. ಮತ್ತು ದೇವರದಾಸಿಮಯ್ಯ, ಶಂಕರದಾಸಿಮಯ್ಯಗಳೂ ಸಹ "ವ್ಯವಸ್ಥಿತ ವೀರಶೈವಾಚರಣೆ"ಯಂತೆ ಗುರುಮುಖದಿಂದ ವೀರಶೈವ ದೀಕ್ಷೆಯನ್ನು ಪಡೆದ ಲಿಂಗಧಾರಿಗಳಾಗಿರದೆ ಅವರೂ ಸಹ ಮೊದಲಿನಿಂದಲೂ ಅವರ ಇಷ್ಟದೈವವಾಗಿದ್ದ ಸ್ಥಾವರ ಲಿಂಗಗಳ ಮೂಲಕವೇ ಲಿಂಗಧಾರಣೆ ಮಾಡಿಕೊಂಡಿದ್ದಾರೆಂಬ ವಿಚಾರವು ಅವರವರ ಚರಿತ್ರೆಗಳಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ.



ಲಿಂಗಧಾರಣೆಯ ವಿಚಾರವು ಹೀಗಿದ್ದು, ಆ ಕಾಲದಲ್ಲಿ ದೇಶದ ರಾಜಕೀಯ ಧಾರ್ಮಿಕ ಸ್ಥಿತಿಗತಿಗಳು ಬಹುವಾಗಿ ಹದಗೆಟ್ಟು ಹೋಗಿ ಜನಾಂಗವು ಗೊತ್ತುಗುರಿಯಿಲ್ಲದೆ ಹದಗೆಟ್ಟ ಜೀವನವನ್ನು ನಡೆಸುತ್ತಿದ್ದಿತು. ಹೀಗೆ ನಮ್ಮ ನಾಡಿನ ಧಾರ್ಮಿಕ ಪರಿಸ್ಥಿತಿಯು ಅತ್ಯಂತ ಅಸಹ್ಯಕರವಾಗಿ ಪರಿಣಮಿಸಿ, ಜನಜೀವನದ ರೀತಿನೀತಿಗಳು ಅಧೋಗತಿಯನ್ನೈದುತ್ತಿದ್ದ ಅನಾಯಕತ್ವದ ಪರಿಸ್ಥಿತಿಯಲ್ಲಿಯೇ ಶ್ರೀ. ಬಸವಣ್ಣನವರು ರಾಜಕೀಯ ಗದ್ದುಗೆಯನ್ನೇರಿ ಪ್ರಧಾನ ಪದವಿಯನ್ನಲಂಕರಿಸಿದುದು. ಬಾಲ್ಯದಿಂದಲೂ ಜನಮಧ್ಯದಲ್ಲಿದ್ದು ಸರಳಜೀವನ, ಧಾರ್ಮಿಕ ವಾತಾವರಣಗಳಲ್ಲಿಯೇ ಬೆಳೆದಿದ್ದ ಶ್ರೀ ಬಸವಣ್ಣನವರು, ಅವರಿಗಾಗಿದ್ದ ವಿದ್ಯಾಭ್ಯಾಸದಿಂದಲೂ, ಸಹವಾಸಿಗಳ ನಡೆನುಡಿಗಳಿಂದಲೂ, ಧರ್ಮ, ದೇವರು, ಶಾಸ್ತ್ರ, ಆಚಾರ, ವಿಚಾರ, ಪಾಪ, ಪುಣ್ಯ, ಸ್ವರ್ಗ, ನರಕ, ಮರ್ತ್ಯ, ಮುಂತಾದವುಗಳನ್ನು ಕುರಿತು ಇವುಗಳ ನಿಜಸ್ಥಿತಿಯು ಹೀಗೇ ಸರಿ ಎಂಬ ಒಂದು ನಿರ್ಧರವಾದ ಅಭಿಪ್ರಾಯವನ್ನು ಹೊಂದಿದ್ದರು. ಆದುದರಿಂದ ಮಹಾಪ್ರಧಾನ ಪದವಿಯನ್ನಲಂಕರಿಸಿದ ಆ ಮಹಾಪುರುಷರು ಇನ್ನಿತರ ಪ್ರಧಾನಿಗಳಂತೆ ಕೇವಲ ಆ ಅಧಿಕಾರಲಾಲಸೆಯಲ್ಲಿಯೇ ಮಗ್ನರಾಗದೆ, ಅದರ ಜೊತೆಯಲ್ಲಿಯೇ ತಾವು ಬಾಲ್ಯದಿಂದಲೂ ಕಾಣುತ್ತಿದ್ದ ಧಾರ್ಮಿಕ ಅಸಹ್ಯತೆಗಳನ್ನೂ, ಜನಜೀವನದಲ್ಲಿದ್ದ ಮೌಢ್ಯವನ್ನೂ ಹೋಗಲಾಡಿಸುವ— ಜನಾಂಗವನ್ನುದ್ಧರಿಸುವ— ಮಹತ್ಕಾರ್ಯವನ್ನೂ ಕೈಗೊಂಡರು. ಇಂತಹ ಮಹತ್ಕಾರ್ಯಕರ್ತರಾದ ನಾಯಕರನ್ನೇ ಅರಸುತ್ತಿದ್ದ ಲಕುಲೀಶ, ಪಾಶುಪತ, ಕಾಪಾಲಿಕ, ಕಾಳಾಮುಖಾದಿ ಶೈವ ಪಂಥಗಳ ಸಾತ್ವಿಕರಾದ ಕೆಲ ಪ್ರಮುಖರುಗಳು "ಬಡವಂಗೆ ಕಡವರವು ದೊರೆತಂತೆ" ತಮ್ಮ ಮನೋಭೀಷ್ಟಕ್ಕನುಕೂಲವಾಗಿ ದೊರೆತ ಶ್ರೀ ಬಸವಣ್ಣನವರ ನಾಯಕತ್ವದಲ್ಲಿಯೇ ತಮ್ಮ "ಶೈವಧರ್ಮ ಸಂಸ್ಕರಣ" ಕಾರ್ಯವನ್ನೂ ಪ್ರಾರಂಭಿಸಿದರು.

ಹೀಗೆ ಪ್ರಾರಂಭವಾದ "ಶೈವಧರ್ಮ ಸಂಸ್ಕರಣ" ಕಾರ್ಯವು ಅದನ್ನು ಪ್ರಾರಂಭಿಸಿದ ಸಾಮರ್ಥ್ಯಶಾಲಿಗಳಾದ ಕಾರ್ಯಕರ್ತರುಗಳ ಮತ್ತು ಆ ಸಾಮರ್ಥ್ಯಶಾಲಿಗಳ ನಾಯಕರಾದ ಶ್ರೀ ಬಸವಣ್ಣನವರ ಪ್ರಭಾವ, ಪ್ರತಿಭಾಶಕ್ತಿಗಳಿಂದ ನಮ್ಮೀ ನಾಡಿನಲ್ಲಿ ಅದ್ಭುತ ಫಲಕಾರಿಯಾದುದಲ್ಲದೆ, ತೆಲಗು, ತಮಿಳು, ಗುಜರಾತು, ಕಾಶ್ಮೀರ, ಮುಂತಾದ ಹಿಂದೂ

ಸ್ಥಾನದ ನಾನಾಭಾಗಗಳಲ್ಲಿಯೂ ಅದರ ಪ್ರಭಾವವು ಹರಡಿ ತತ್ಫಲವಾಗಿ ಆ ಎಲ್ಲ ದೇಶಗಳಿಂದಲೂ "ಧರ್ಮ ಸಂಸ್ಕರಣಾಭಿಲಾಷಿ" ಗಳಾದ ಸಾಮಾಜಿಕ ಕೆಲಸಗಾರರು ತಮ್ಮ ನಾಯಕರಾದ ಶ್ರೀ ಬಸವಣ್ಣನವರಿದ್ದ ಈ ಪುಣ್ಯದ ಬೀಡಿಗೆ ಗುಂಪು ಗುಂಪಾಗಿ ಬರತೊಡಗಿದರು. ಹೀಗೆ "ಧರ್ಮ ಸಂಸ್ಕರಣೆಯ" ಕಾರ್ಯಕರ್ತರ ಗುಂಪು ಬಲವಾದುದನ್ನು ಕಂಡು, ಆ ಕಾರ್ಯಕರ್ತರುಗಳು ಪರಸ್ಪರ ವಿಚಾರವಿನಿಮಯ ಮಾಡಿಕೊಳ್ಳುವುದಕ್ಕೂ, ತಮ್ಮ ಕಾರ್ಯಪದ್ಧತಿಗಳನ್ನು ನಿಶ್ಚಿತಗೊಳಿಸಿಕೊಳ್ಳುವುದಕ್ಕೂ, ತಮ್ಮ ಜ್ಞಾನಶಕ್ತಿಯನ್ನು ವೃದ್ಧಿಗೊಳಿಸಿಕೊಳ್ಳುವುದಕ್ಕೂ ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲರೂ ಒಂದೇ ಬಗೆಯ ಶಿಸ್ತಿಗೊಳಪಟ್ಟಿರುವಂತೆ ಮಾಡುವುದಕ್ಕೂ ಅನುಕೂಲವಾಗುವಂತಹ "ಅನುಭವಮಂಟಪ" ಎಂಬ ಹೆಸರಿನ ಒಂದು ಕೇಂದ್ರಸಂಸ್ಥೆಯು ರಚನೆಯಾಯಿತು. ಆ ಅನುಭವ ಮಂಟಪದಲ್ಲಿ ನಡೆದ "ಶಿವಾನುಭವಗೋಷ್ಠಿ"ಯ ಮೂಲಕವೇ ಇಂದು ಜಗನ್ಮಾನ್ಯವೆನಿಸಿ ವ್ಯವಸ್ಥಿತವಾದ ಒಂದು ರೂಪಕ್ಕೆಳದಿರುವ "ವೀರಶೈವ"ವು ನಿರ್ಮಾಣವಾದುದು.

ಹೀಗಲ್ಲದೆ ಶ್ರೀ ಬಸವಣ್ಣನವರಿಗಿಂತ ಮೊದಲೇ "ವೀರಶೈವ"ವು ಬೇರೆ ಹೆಸರುಗಳಿಂದ ಪ್ರಸಾರದಲ್ಲಿದ್ದಿತೆಂದು ಮಾತುಗಳನ್ನಾಡುವುದರಲ್ಲಿ ಅರ್ಥವಿಲ್ಲ. ಆಗ ಬೇರೆ ಬೇರೆ ಹೆಸರುಗಳಿಂದ ಪ್ರಸಾರದಲ್ಲಿದ್ದುದು "ವೀರಶೈವವಲ್ಲ" "ಕೇವಲ ಶೈವಧರ್ಮದ ಲಕುಲೀಶ, ಕಾಳಾಮುಖಾದಿ ವಿವಿಧ ಪಂಥಗಳು ಮಾತ್ರವೆಂಬುದು ನಿರ್ವಿವಾದ"

ಕೊನೆಯದಾಗಿ:– ಶ್ರೀ ಬಸವಣ್ಣನವರಿಗಿಂತಲೂ ಮೊದಲು ಇದ್ದ "ಶೈವಧರ್ಮ"ವನ್ನು "ವೀರಶೈವ"ವೆಂದು ವಾದಿಸುವ ಮಹಾಶಯರುಗಳು:– ವೀರಶೈವ ಧರ್ಮತತ್ವದ ತಿರುಳಿನಂತಿರುವ, ಕರಣ ಹಸಿಗೆ, ಮಿಶ್ರಾರ್ಪಣ, ಮಿಶ್ರಷಟ್ಸ್ಥಲವಚನ, ಏಕಾದಶ ಪ್ರಸಾದ ವಿಚಾರವಾಕ್ಯ ಮುಂತಾದ ಧರ್ಮಗ್ರಂಥಗಳಲ್ಲಿರುವುದಕ್ಕಿಂತ ಹೆಚ್ಚಾಗಿಯಾಗಲಿ ಅಥವಾ ಸ್ವಲ್ಪ ಹೆಚ್ಚು ಕಡಿಮೆ ಅವುಗಳಲ್ಲಿರುವಷ್ಟೇ ಆಗಲಿ ವೀರಶೈವ-ಶಿವಾನುಭವ ತತ್ವವನ್ನು ತಿಳಿಸುವ ಬೇರೆ ಹೆಸರಿನ ತತ್ವ ಗ್ರಂಥಗಳು ಶ್ರೀ ಬಸವಣ್ಣನವರ ಕಾಲಕ್ಕಿಂತ ಮೊದಲು ಯಾರಿಂದಲಾದರೂ ಬರೆಯಲ್ಪಟ್ಟವೆಯೆ? ಬರೆದಿದ್ದರೆ, ಗ್ರಂಥದ ಹೆಸರೇನು? ಬರೆದವರ ಹೆಸರು, ಕಾಲ



ಗಳಾವುವು? ಶ್ರೀ ಬಸವಣ್ಣನವರ ಕಾಲಕ್ಕಿಂತ ಮೊದಲು, ಕೊಲದೆ, ಹೊಲಸು ತಿನ್ನದೆ, ಸದಾಚಾರ, ಸುವಿಚಾರಗಳಿಂದ ಕೂಡಿದ ಸರ್ವ ಕಾಯಕಗಳನ್ನಾಚರಿಸುವವರಲ್ಲಿಯೂ ಮೇಲುಕೀಳುಗಳನ್ನೆಣಿಸದೆ, ಶಿವಸ್ವರೂಪಿಗಳಂತೆ ಕಂಡು, ಬ್ರಾಹ್ಮಣಾದಿ ಚಾತುರ್ವರ್ಣ್ಯ ವ್ಯವಸ್ಥೆಯನ್ನು ನಿರಾಕರಿಸಿ, ಯಜ್ಞಯಾಗಾದಿ ಕಾಮ್ಯಕರ್ಮಗಳನ್ನು ತ್ಯಜಿಸಿ, ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಾಚರಣಾದಿ ಕ್ರಮಬದ್ಧವೂ, ಸುವ್ಯವಸ್ಥಿತವೂ ಆದ ಧಾರ್ಮಿಕ ವಿಧಿನಿಯಮಗಳನ್ನೊಳಗೊಂಡ, "ಸಕಲ ಜೀವಾತ್ಮರಿಗೆ ಲೇಸನೇ ಬಯಸುವ" ವ್ಯವಸ್ಥಿತವಾದ ವೀರಶೈವ ಅಥವ ಲಿಂಗವಂತ, ಧರ್ಮವಾಗಲಿ, ಧರ್ಮತತ್ವವಾಗಲಿ, ಅವುಗಳನ್ನು ಕ್ರಮಬದ್ಧವಾಗಿ ಆಚರಣೆಯಲ್ಲಿಟ್ಟುಕೊಂಡಿದ್ದ-ಜನಾಂಗ-ಸಮಾಜವಾಗಲಿ ಶ್ರೀ ಬಸವಣ್ಣನವರಿಗಿಂತ ಮೊದಲು ಅಸ್ತಿತ್ವದಲ್ಲಿ-ಆಚರಣೆಯಲ್ಲಿದ್ದುವೆ?" ಎಂಬೀ ಪ್ರಶ್ನೆಗಳಿಗೆ ವಿದ್ವಾಂಸರಾದಿಯಾಗಿ ಸರ್ವಜನರೊಪ್ಪುವಂತೆ ಸಮರ್ಪಕವಾದ ಉತ್ತರಗಳನ್ನು ಕೊಡಬೇಕು.

# ಸಂಗೀತದಲ್ಲಿ ಶಿವಶರಣರ ವಚನಗಳು.

(ಲೇಖಕರು— ಶ್ರೀ. ಪಿ. ವ್ಹಿ. ಪಾಟೀಲ ಸಂಗೀತ ಶಿಕ್ಷಕ ಶ್ರೀಸಿದ್ಧೇಶ್ವರ ಹೈಸ್ಕೂಲ ವಿಜಾಪುರ.)

---

[ಸಂಪುಟ ೧೩, ಸಂಚಿಕೆ ೯-೧೦, ಪುಟ ೪೨೨ ರಿಂದ ಮುಂದೆಸಾಗಿದ್ದು]

೫೭

ರಾಗಃ— ಕಾಫಿ ತಾಲಃ— ಏಕತಾಲ

(ಬರಕತುವಾಪಿಯಾಸಾರೆ......ಎಂಬಂತೆ)

ಗಿಳಿಯೋದಿ ಫಲವೇನು ।
ಬೆಕ್ಕು ಬಹುದ ಹೇಳಲರಿಯದು ॥ಪ॥

ಜಗವೆಲ್ಲ ಕಾಂಬ ಕಣ್ಣು ತನ್ನ ।
ಕೊಂಬ ಕೊಯಿಲೆಯ ಕಾಣಲರಿಯದು ।
ಇದಿರ ಗುಣವ ಬಲ್ಲೆವೆಂಬರು ।
ತಮ್ಮ ಗುಣವರಿಯರು ಕೂಡಲಸಂಗಮದೇವಾ ॥೧॥

[ಬಸವಣ್ಣ]

೫೮

ರಾಗಃ— ತಿಲಕ ಕಾಮೋದ ತಾಲಃ— ದಾದರಾ

(ಪ್ರಣತನಾಥ ರಕ್ಷಿಕಾಂತ......ಎಂಬಂತೆ)

ತವನಿಧಿ ಬೆಳೆದವಗೆ । ಕಣಜದ ಹಂಗುಂಟೆ ।
ವಿರಕ್ತಂಗೆ ಅಶ್ಯೆಕೆಗೊಂಬುವರುಂಟೆ ॥ಪಲ್ಲ॥

ಕಾಯಕವ ಮಾಡುವ ಭಕ್ತಂಗೆ ।
ಇನ್ನಾರ ಕಾಡಲೇತಕ್ಕೊ ।
ಆ ಗುಣ ಅಮಳೇಶ್ವರ ಲಿಂಗಕ್ಕೆ ದೂರ ॥೧॥

[ಆಯುದಕ್ಕಿ ಮಾರಯ್ಯ.]



೫೯

ರಾಗಃ— ಪಟದೀಪ ತಾಲಃ— ತ್ರಿತಾಲ

(ಜರಿ ಲೇ ಸುಶೀಲಸಗುಣಾ......ಎಂಬಂತೆ.)

ಅಪ್ಪನು ನಮ್ಮ ಮಾದಾರ ಚನ್ನಯ್ಯ ।
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ ।
ಚಿಕ್ಕಯ್ಯನೆಮ್ಮಯ್ಯ ಕಾಣಿರಯ್ಯ ॥ಪಲ್ಲ॥

ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ ।
ಎನ್ನನೇತಕ್ಕರಿಯಿರಿ । ಕೂಡಲ ಸಂಗಮದೇವಾ ॥೧॥

[ಬಸವಣ್ಣ.]

೬೦

ರಾಗಃ— ಜಿಲ್ಹಾ ಖಮಾಜ ತಾಲಃ— ಕವಾಲಿ

( ಸತ್ಯವದೆ ವಚನಾಲಾ.........ಎಂಬಂತೆ. )

ಮಣಿಯನೆಣಿಸಿ ದಿನವ ಕಳೆಯಲುಬೇಡ
ಕಣಿಯ ಪೂಜಿಸಿ ದಿನವ ಕಳೆಯಲು ಬೇಡ ॥ಪ॥

ಕ್ಷಣವಾದರು ನಿಜದ ನೆನಹೆ ಸಾಕು।
ಕ್ಷಣದೊಳಗಣ ಅರ್ಧವಾದರು ನಿಜದ ನೆನಹೆ ಸಾಕು ।
ಬೆಂಕಿಯೊಳಗುಳ್ಳ ಬಿಸಿ ನೀರೊಳಗುಂಟೆ ಗುಹೇಶ್ವರಾ ॥೧॥

[ ಪ್ರಭುದೇವ. ]

---

# ಪದಮಂತ್ರ ಗೋಪ್ಯ.

ಶ್ರೀಗುರು ಚನ್ನಬಸವೇಶ್ವರಸ್ವಾಮಿಗಳು ನಿರೂಪಿಸಿದ ವಸ್ತು ನಿರ್ದೇಶ ಪದ ಮಂತ್ರ ಗೋಪ್ಯ.

## ಇಷ್ಟಲಿಂಗ.

ಆಕಾರ ನಿರಾಕಾರ ಏಕ ಒಂದೇ ನೋಡಿ। ಆಕಾರವಿಡಿದು ಅರ್ಚನೆ ಪೂಜನೆ॥ ಏಕೋಭಾವದ ನೈಷ್ಠೆ ನಿರ್ವಾಣದಿ ನಿಲಲು ನಿ। ನ್ನಾಕಾರ ನಿರಾಕಾರ ತಾನು ತಾನೆ ॥೧॥

ನೋಡ ನೋಡಲು ಲಿಂಗಧಾರಕನು ತಾನಾಗಿ। ನಾದಬಿಂದುವಿನ ಕಳೆ ಶಿವ ಕಳೆಯೊಳು॥ ಕೂಡೆ ಬಲಿದಾ ಲಿಂಗ ತಾನೆ ತಾನಾದಲ್ಲಿ। ನಾದ ಬಿಂದುಕಳಾತೀತನಾದ ॥೨॥

ಯೋಗ ಯೋಗವೆಂದು ಏಕೆ ಬಳಲುವೆ ಯೋಗಿ। ಸಾಕು ಗುರು ಹೇಳಿದಂತಿಹುದು ಯೋಗಾ॥ ಏಕಾಗ್ರದಲಿ ನೋಡಿ ಗುರುವಾಕ್ಯವಿಡಿದು ನಿಲೆ ನಿ। ನ್ನಾಕಾರ ನಿರಾಕಾರ ತಾನು ತಾನೆ ॥೩॥

ಮೂಲಸ್ಥಾನದ ದೇಗುಲದೊಳಗಣ ಲಿಂಗ। ನಾಭಿಮಂಡಲದ ಕಮಲದಲುದಯವು॥ ಮೇಲುಗಿರಿ ಶಿಖರ ಪಶ್ಚಿಮದ್ವಾರವನು ಹೊಗಲು। ಕಾಣಬಹುದಾ ಲಿಂಗದಾ ಘನವನು ॥೪॥.

ಮನ ಪವನ ಪ್ರಾಣಲಿಂಗವು ತಾನಾಗಿ। ಘನ ಮಹಾಲಿಂಗವನು ಗ್ರಹಿಸುತಿರಲು॥ ಘನಕೆ ಘನವಾದ ಏಕೋದೇವ ನ ದ್ವಿತೀಯ। ಚನ್ನ ಕೂಡಲಸಂಗನಾದ ಶರಣ ॥೫॥

ಇಂತು ಸದ್ಗುರುಕಾರುಣ್ಯದಿಂದ ಲಿಂಗಸಂಗಸಂಯೋಗವೆಂಬ ಶಿವಯೋಗಸಂಪನ್ನನಾಗಿ ಕರ್ಮಯೋಗವ ನಿರಾಕರಿಸಿ ತನ್ನಿಷ್ಟಲಿಂಗದ ನಿಜ ಸ್ವರೂಪವನರಿದು ಬೆರಿಸಿದ ಮಹಾಂತನು ಆ ನಿಜ ಸ್ವರೂಪವೆಂಬ ಪ್ರಾಣಲಿಂಗವನರ್ಚಿಸುತ್ತಿರಲು ಮುಂದೆ ಪ್ರಾಣಲಿಂಗಪೂಜಾವಿಧಾನ ಸ್ಥಲವಾದುದು.

## ಪ್ರಾಣಲಿಂಗ ಪೂಜಾವಿಧಾನ.

ಹೃದಯ ಪೀಠವ ಬಲಿದು ಸದಮಲದ ಬೆಳಗಿನಿಂ। ಪರಪದವ ಮೀರಿ ನಿಜದಲಿ ನಿಂದೆನು ॥೧॥



ಪದ್ಮ ಪೀಠವ ಬಲಿದು ಪದ್ಮ ನವ ಸೂತ್ರ। ಪದ್ಮಪುಷ್ಪವು ಅರಳಿ ವಾಸಿಸಿತು॥ ಪದ್ಮಪುಷ್ಪವ ಕೊಯ್ದು ಉನ್ಮನಿಯ ಸ್ಥಾನದ। ಪದ್ಮಲಿಂಗಾರ್ಚನೆಯ ಪರಮಯೋಗಿ ॥೨॥

ಧ್ಯಾನ ಮೌನವು ನೇಮನಿತ್ಯ ಚತುರ್ವಿಧವೆಂಬ। ಸ್ವಾನುಭಾವದಲಿ ಸನ್ನಿಹಿತನಾಗಿ॥ ಜ್ಞಾನಲಿಂಗಾರ್ಚನೆಯ ಮಾಡಿ ಸುಖಿಯಾಗಿರ್ಪ। ಸ್ವಾನುಭಾವದಲಿ ಸನ್ನಿಹಿತನಾದ ॥೩॥

ಅಂಗಕ್ರಿಯೆ ಲಿಂಗದಲಿ ಲಿಂಗಕ್ರಿಯೆ ಅಂಗದಲಿ। ಅಂಗ ಲಿಂಗವೆಂಬ ಉಭಯವಳಿದು॥ ಸಂಗಸಂಯೋಗವಾರಂಗದಲಿ ಮೈಮರೆದು। ಲಿಂಗಸಂಗವೇ ಸಂಗಿಯಾದ ಶರಣ ॥೪॥

ಜಾತಿ ನೀತಿಯನರಿದು ಜಾತಿ ಸೂತಕವನಳಿದು। ಜಾತಿ ನೀತಿ ಯೊಳ ಜಾತನಾದಾ॥ ಜ್ಯೋತಿಪ್ರಭೆಯನೈದಿ ಪ್ರಜ್ವಲಿಸಿ ಬೆಳಗುವಜಾತ। ಕೂಡಲ ಚನ್ನಸಂಗಯ್ಯನು ॥೫॥

ಇಂತು ಪ್ರಾಣಲಿಂಗಾರ್ಚನೆಯ ಮಾಡಿ ಆ ಲಿಂಗಸುಖದಲ್ಲಿ ತೃಪ್ತಿ ಪಡೆದು ಆ ಲಿಂಗದೊಳೈಕ್ಯಸ್ಥಲವ ಕಂಡು ಶರಣನ ನವ ಚಕ್ರದೊಳಗೆ ಆ ಪ್ರಾಣಲಿಂಗವೆಂಬುದಾ ನವಲಿಂಗ ಮಯದಿಂದ ಪ್ರಕಾಶಿಸುತ್ತಿರಲು ಆ ನವಲಿಂಗಗಳನರ್ಚಿಸಿ ಬೆರಿಸುತಿರ್ಪನಾಗಿ ಮುಂದೆ ನವಲಿಂಗ ಪೂಜಾ ಸ್ಥಾನವಾದುದು.

## ನವಲಿಂಗ.

ಅಷ್ಟದಳ ಮಂಟಪದ ಅಷ್ಟಕೋಣೆಗಳೊಳಗೆ। ಅಷ್ಟಲಿಂಗಾರ್ಚನೆಯು ಅಷ್ಟಪೂಜೆ॥ ಅಷ್ಟಲಿಂಗಾರ್ಪಿತವು ದೃಷ್ಟಪ್ರಸಾದದಿಂ। ನಿಷ್ಠೆ ನಿಜದಲಿ ನಿರಂಜನನ ಕಂಡೆ ॥೧॥

ನವಸೂತ್ರ ಪಟ್ಟಣವ ನವದ್ವಾರ ವೀಥಿಯೊಳು। ನವನಾಳ ಬಾಗಿಲಿಗೆ ನವಕಲಶ॥ ನವಲಿಂಗ ಸ್ಥಾವರಕೆ ನವಪೂಜೆ ನವಧೂಪ। ನವದೀಪ ಮಂತ್ರಜಪ ನಮೋ ಎಂಬೆನು ॥೨॥

ಆರು ನೆಲೆ ಮಂಟಪದ ಮೂರು ಕೋಣೆಗಳೊಳಗೆ। ಬೇರೊಂದು ಸ್ಥಾನದೊಳು ಲಿಂಗವಿಹುದು॥ ಆರು ನೆಲೆಯನು ದಾಂಟಿ ಮೂರು ಬಾಗಿಲ ಮುಚ್ಚಿ। ಮೀರಿ ಕಂಡೆನು ಮಹಾಘನಲಿಂಗವಾ ॥೩॥

ಆಕಾಶದ ಮೇಲೆ ನಿರಂತರ ಸ್ಥಾನದಲ್ಲಿ ಲೋಕವನು ಹೊದ್ದಿದಾ ಶಿವ ನಿಳಯವು॥ ಏಕಾಂತವಾಸದೊಳಗೇಕಾಕಾರನ ಪೂಜೆ। ಓಂಕಾರ ಮಂತ್ರದಲಿ ಗೋಪ್ಯ ಗೋಪ್ಯಂ ॥೪॥

ಮಂತ್ರಭೇದವ ಜಂತ್ರ ಸೂತ್ರದ ತೆರ ನಿರಂತರಂ ನಿಜವಿಡಿದು । ಹಂತ ನಂಮ ಸಂಕೈಸುತಾ ॥ ನಿಶ್ಚಿಂತ ನಿಜಾರ್ತನಿರವಯುವನೈದಿದವು । ಕೂಡಲಚನ್ನಸಂಗಯ್ಯನು ॥೫॥

ಇಂತು ಪ್ರಸನ್ನಪ್ರಸಾದದಿಂದ ಶಿವಸ್ವರೂಪನಾಗಿ ಶಿವಲಿಂಗಾರ್ಚನೆಯಂ ಮಾಡಿ ಮತ್ತಾ ನವಲಿಂಗದೇಕಸ್ವರೂಪವಪ್ಪ ಪರತತ್ವ ಲಿಂಗವನರ್ಚಿಸಿ ಮನೋಲ್ರಯವನೈದಿದ ಶರಣನ ಮೂಲಜ್ಞಾನದರಿವು ಆ ಲಿಂಗದ ಮಹವರುವಿನೊಳಡಗಿ, ಜಲಬಿಂದುವ ನುಂಗಿದ ಅರುಣನ ಕಿರಣದಂತೆ ಹೊರಗೊಳಗಾಗಿ ಲಿಂಗದ ದಿವ್ಯ ಪ್ರಕಾಶವ ತೋರುತ್ತಿರಲು ಮುಂದೆ ಪರತತ್ವಲಿಂಗ ಪ್ರಕಾಶಸ್ಥಲವಾದುದು.

## ಪರತತ್ವಲಿಂಗ ಪ್ರಕಾಶ.

ಪುಷ್ಪ ಪರಿಮಳ ನುಂಗಿ ನಿಷ್ಪತ್ತಿ ಕರಿಗೊಂಡು। ಕರ್ಪೂರವನಪ್ಪಿದುರಿಯಂತಾದೆನು ॥೧॥

ಶಶಿ ಸಾಗರವ ನುಂಗಿ ಶಿಸು ಗರ್ಭವ ನುಂಗಿ। ಪಶು ಬಸವನ ನುಂಗಿದಾ ತೆರದೊಳು॥ ಮನದ ಕೂರಲಗು ಮೊನೆ ವಜ್ರದಂಡದೊಲಿರ್ದು। ಪಸರಿಸಿತು ಶಿವಲಿಂಗ ಹೃದಯದೊಳಗೆ ॥೨॥

ಅಪ್ಪು ಅಗ್ನಿಯ ನುಂಗಿ, ಉಪ್ಪು ಉದಕವನುಂಗಿ। ಹೆಪ್ಪು ತುಪ್ಪವ ನುಂಗಿದಾತೆರದೊಳು । ಕಪ್ಪು ಕಣ್ಣನೆ ನುಂಗಿ ಒಪ್ಪು ಚಿತ್ರವ ನುಂಗಿ । ಅಪ್ಪಿ ಅಗಲದೆ ಇರ್ಪ ನಿಜವು ತಾನೆ ॥೩॥

ಧ್ಯಾನ ಮೌನವ ನುಂಗಿ, ಮೌನ ಮುಗ್ಧವ ನುಂಗಿ । ನೇಮ ನಿತ್ಯವ ನುಂಗಿದಾ ತೆರದೊಳು ॥ ಕಾಮ ಕರಣವ ನುಂಗಿ ನಾಮ ಸೀಮೆಯ ನುಂಗಿ । ಆ ಮಹಾಘನಲಿಂಗವಾದ ಶರಣಾ ॥೪॥

ಇಂತು ತನ್ನಂಗ ಮನಪ್ರಾಣೇಂದ್ರಿಯ ಭಾವಾದಿಗಳನೊಳಕೊಂಡು ಬೆಳಗುವ ಮಹಾಲಿಂಗದ ಮೂಲಪ್ರಭೆಯೊಳಗಿರ್ಪ ಶಿವ ಶರಣನೆಂತು ತೋರುತ್ತಿಹನೆಂದಡೆ, ಅರುಣನ ಕಿರಣದೊಳಗಿನ ಜಲಬಿಂದು ಆ ಕಿರಣ ಪ್ರಕಾಶಮಯದಿಂದಲೇ ತೋರುವಂತೆ ಪುಷ್ಪಗಂಧಗಳೇಕ ಸ್ವರೂಪಿನಂತೆ ತೋರುತ್ತಿರಲು, ಮುಂದೆ ಶಿವಾದ್ವೈತ ಶರಣ ಪ್ರಕಾಶ ಸ್ಥಲವಾದುದು.

ಮುಂದೆ ಸಾಗುವದು.

# ವಚನಶಾಸ್ತ್ರಸಾರ ಭಾಗ ೩

## ವೀರಶೈವಾಚಾರಗಳು ಪೂರ್ವಾರ್ಧ.

---

ಪುಟಗಳು ೨೪೪ ಬೆಲೆ ೨-೪-೦

ಈ ಗ್ರಂಥವು ರಾ॥ ಸಾ॥ ಫ. ಗು. ಹಳಕಟ್ಟಿ ಇವರಿಂದ ರಚಿಸಲ್ಪಟ್ಟಿದ್ದು ಇದು ಈ ತಿಂಗಳು ಪ್ರಕಟವಾಗಿರುತ್ತದೆ. ಇದರಲ್ಲಿ ವೀರಶೈವರ ಆಚಾರವಿಚಾರಗಳು ನಿರೂಪಿಸಲ್ಪಟ್ಟಿವೆ. ಗುರು ಲಿಂಗ ಜಂಗಮ ಭಕ್ತ ಈ ವಿಷಯಗಳು ಸವಿಸ್ತಾರವಾಗಿ ಶಿವಶರಣರ ವಚನಗಳಿಂದಲೇ ಹೇಳಲ್ಪಟ್ಟಿವೆ. ಕರ್ನಾಟಕದಲ್ಲೆಲ್ಲ ತಮ್ಮ ವಿದ್ವತ್ತಿನಿಂದ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ವಿದ್ಯಾವಾಚಸ್ಪತಿ ಶ್ರೀಶಂಭುಲಿಂಗ ಶಿವಾಚಾರ್ಯರು ಬೃಹನ್ಮಠ ವಿಜಾಪುರ ಇವರು ಈ ಗ್ರಂಥದಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು ಹೇಗೆಂದರೆ:—

### ವಿದ್ಯಾವಾಚಸ್ಪತಿ ಶ್ರೀಶಂಭುಲಿಂಗ ಶಿವಾಚಾರ್ಯ ಹಿರೇಮಠ ವಿಜಾಪುರ ಇವರ ಅಭಿಪ್ರಾಯವು.

ಸುಪ್ರಸಿದ್ಧರಾದ ರಾವಸಾಹೇಬ ಫ. ಗು. ಹಳಕಟ್ಟಿ ಅವರು ಈ ಮುನ್ನವೇ ಶ್ರೀಬಸವಾದಿ ಶಿವಶರಣರ ವಚನಗಳನ್ನು 'ಶಿವಾನುಭವ' ಮಾಸಪತ್ರಿಕೆಯ ಮೂಲಕವೂ ಟೀಕೆ ಟಿಪ್ಪಣಿಗಳುಳ್ಳ ಬೇರೆ ಬೇರೆ ಪುಸ್ತಕರೂಪವಾಗಿಯೂ ಪ್ರಕಾಶಪಡಿಸಿರುವುದು ಸರ್ವರಿಗೂ ಗೊತ್ತಿರುವ ವಿಷಯವು. ಸತ್ಕ್ರಿಯೆಯನ್ನೂ ಸುಜ್ಞಾನವನ್ನೂ ವಿಶದವಾಗಿ ಬೋಧಿಸುವ ವಚನವಾಙ್ಮಯವು ಸರ್ವ ಜನೋಪಯುಕ್ತವಾದುದು. ವರ್ತಮಾನ ಕಾಲದಲ್ಲಿ ಅದನ್ನು ಬೆಳಕಿಗೆ ತರಲು ಬಹು ಸಾಹಸದೊಡನೆ ಮುಂದಡಿಯನ್ನಿಟ್ಟವರು ಶ್ರೀಮಾನ್ ಹಳಕಟ್ಟಿಯವರೇ ಎಂದು ಗುಣಿಗಳು ನುಡಿಯುತ್ತಿರುವುದು ಯಥಾರ್ಥವು. ಸಾಮಾಜಿಕ ಧಾರ್ಮಿಕ ತಾತ್ವಿಕ ವಿಚಾರ ಪರಿಪ್ಲುತವಾದ ವಚನವಾಙ್ಮಯದಿಂದ ವೀರಶೈವ ಸಮಾಜ ಮಾತ್ರವೇ ಅಲ್ಲ, ಇಡೀ ಕರ್ಣಾಟಕ ಜನತೆಯೇ ಉಪಕೃತವಾಗಿದೆ. ಅಮಿತವಾದ ವಚನವಾಙ್ಮಯವನ್ನು ಪ್ರಕಾಶಪಡಿಸಲುದ್ಯುಕ್ತರಾದ ಶ್ರೀಮಾನ್ ಹಳಕಟ್ಟಿ

ಅವರು ಈ ವರೆಗೆ ಮುಖ್ಯ ವಿಷಯಗಳನ್ನೊಳಗೊಂಡ 'ವಚನಶಾಸ್ತ್ರಸಾರ'ದ ಮೂರು ಭಾಗಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಮೊದಲಿನ ಭಾಗವು ಶಿವಶರಣರ ಧಾರ್ಮಿಕ ಮತ್ತು ಸಾಮಾಜಿಕ ಅಭಿಪ್ರಾಯ ಗರ್ಭಿತವಾಗಿದೆ. ಎರಡನೆಯ ಭಾಗದಲ್ಲಿ ವೀರಶೈವ ಸಿದ್ಧಾಂತದ ಸಾರಭೂತವಾದ ಷಟ್ಸ್ಥಲಾಚರಣೆಯೂ ಅದಕ್ಕೆ ಸಂಬಂಧಿಸಿದ ತಾತ್ವಿಕ ವಿವೇಚನೆಯೂ ಪ್ರತಿಪಾದಿಸಲ್ಪಟ್ಟಿವೆ. ಮೂರನೆಯ ಭಾಗದ ಪೂರ್ವಾರ್ಧವು ಈಗ ತಾನೇ ಪ್ರಕಟಿಸಲ್ಪಟ್ಟಿರುವುದು. ಇದರಲ್ಲಿ ಅಷ್ಟಾವರಣ, ಪಂಚಾಚಾರ ಮುಂತಾದ ವೀರಶೈವರ ಮುಖ್ಯವಾದ ಆಚಾರಗಳು ವಿಶದೀಕೃತವಾಗಿವೆ. ವೀರಶೈವರ ನಿತ್ಯ ನೈಮಿತ್ತಿಕಾಚಾರಗಳನ್ನು ಸುಲಭವಾಗಿ ಅರಿತುಕೊಳ್ಳಲು ಅನುಕೂಲವಾದ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವನೂ ಸಂಗ್ರಹಿಸುವುದು ಯುಕ್ತವು. ಸರ್ವಜನೋಪಯುಕ್ತವಾದ ವಚನವಾಙ್ಮಯವು ಜಿಜ್ಞಾಸೆಯುಳ್ಳ ಬಡವರಿಗು ಕೂಡ ತುಸು ಬೆಲೆಗೆ ದೊರೆಯುವಂತೆ ಮಾಡಲು ಧನಿಕ ಧಾರ್ಮಿಕರು ವಚನವಾಙ್ಮಯ ಪ್ರಚಾರ ಕಾರ್ಯಕ್ಕೆ ಕೈನೀಡಿ ಸತ್ಕೀರ್ತಿಭಾಜನರಾಗಲೆಂದೂ, ವಿಶಾಲ ಹೃದಯರೂ ಕಾರ್ಯದಕ್ಷರೂ ಆದ ಶ್ರೀನರ್ಮ ಹಳಕಟ್ಟಿ ಅವರು ಮುಂದಿನ ಭಾಗವನ್ನು ಮುದ್ರಿಸಿ ಪ್ರಕಟಿಸಲು ಮುಂದರಿಯಲೆಂದೂ ಹಾರೈಸುತ್ತೇವೆ.

---



ಸರ್ವಾಂಗಲಿಂಗ ಸಂಬಂಧವಾಗಿ ಜ್ಞಾನ ಕ್ರಿಯೆವಿಡಿದು ಆಚರಿಸುವ ಶರಣರು ಮುಮುಕ್ಷುಗಳಾದ ಭಕ್ತಜನಂಗಳಿಗೆ ಅನ್ಯೋಪದೇಶವಾಗಿ ನಿರೂಪಿಸುತ್ತಿರ್ದರೆಂಬುದೀಗ ಅದು ನಾವು ನೀವು ಅರಿವ ಬನ್ನಿ ಅರ್ಕೇಶ್ವರಲಿಂಗವ ಬಲ್ಲವರಹರೆ ಎಂಬ ಶಬ್ದಕ್ಕರ್ಥ.

೨೩. ಪಂಜರದ ಕೋಳಿ ಮಾರ್ಜಾಲನ ಕೊಂದು ತಿಂದು ಬಂಧುಗಳ ಹೊಂದದೆ ತಾನೊಂದೇ ಹೊಂದಿತ್ತು ಪಂಜರದ ಹೊರಗೆ ಅರ್ಕೇಶ್ವರಲಿಂಗವನರಿದ ಕಾರಣ.

ಟೀಕು:—ಪಂಚಭೂತಾಶ್ರಯವಾದ ದೇಹದಲ್ಲಿರ್ದ ಸತ್ಪ್ರಾಣವುವೆಂಬುದೀಗ ಪಂಜರದ ಕೋಳಿ ಎಂಬ ಶಬ್ದಕ್ಕರ್ಥ. ಅಂತಪ್ಪ ಸತ್ಪ್ರಾಣವು ಜ್ಞಾನೋದಯವಾಗಿ ಮನೋಮಾರ್ಜಲನನವಗ್ರಹಿಸಿತ್ತೆಂಬುದೀಗ ಮಾರ್ಜಾಲನ ಕೊಂದು ತಿಂದು ಎಂಬ ಶಬ್ದಕ್ಕರ್ಥ. ಆ ಮನವನವಗ್ರಹಿಸಿದ ಸತ್ಪ್ರಾಣವು ಸಕಲ ಕರಣಂಗಳ ವ್ಯವಹಾರವ ಹೊಂದದೆಂಬುದೀಗ ಬಂಧುಗಳ ಹೊಂದದೆ ಎಂಬ ಶಬ್ದಕ್ಕರ್ಥ. ಆ ಸತ್ಪ್ರಾಣವು ಜ್ಞಾನಲಿಂಗದಲ್ಲಿ ಸಮರಸ ಭಾವದಿಂದೊಡಗೂಡಿತ್ತೆಂಬುದೀಗ ತಾನೊಂದೆ ಹೊಂದಿತ್ತೆಂಬ ಶಬ್ದಕ್ಕರ್ಥ. ಆ ಸತ್ಪ್ರಾಣವು ಜ್ಞಾನಲಿಂಗದಲ್ಲಿ ನಿಷ್ಪತ್ತಿಯಾದಲ್ಲಿ ಶರಣನ ಸರ್ವಾಂಗವು ಮಹಾಘನಲಿಂಗದಲ್ಲಿ ಸಮರಸಭಾವದಿಂದಡಗಿತ್ತೆಂಬುದೀಗ ಪಂಜರದ ಹೊರಗೆ ಅರ್ಕೇಶ್ವರ ಲಿಂಗವನರಿದ ಕಾರಣ ಎಂಬ ಶಬ್ದಕ್ಕರ್ಥ.

೨೪. ಗುಬ್ಬಿ ಗುಂಭವನೊಡೆದು ಒಬ್ಬುಳಿಕೆಯಾಯಿತ್ತು. ತನ್ನ ಸುಬುದ್ಧಿಯ ಬಿಟ್ಟು ಕಬ್ಬಕ್ಕಿಯ ಹಿಂಡನೊಲ್ಲದೆ ಅಲ್ಲಿಯೇ ಹೋಯಿತ್ತು ಅರ್ಕೇಶ್ವರಲಿಂಗವನರಿಯಿತ್ತು.

ಟೀಕು:—ಜೀವನೆಂಬುದೀಗ ಗುಬ್ಬಿಯೆಂಬ ಶಬ್ದಕ್ಕರ್ಥ. ಅಂತಪ್ಪ ಜೀವಂಗೆ ಸುಜ್ಞಾನೋದಯವಾಗಲು ದೇಹಭಾವವ ನಷ್ಟವ ಮಾಡಿದನೆಂಬುದೀಗ ಗುಬ್ಬಿ ಗುಂಭವ ನೊಡೆದು ಎಂಬ ಶಬ್ದಕ್ಕರ್ಥ. ಅಂತು ಸುಜ್ಞಾನೋದಯದಿಂ ದೇಹಭಾವ ನಷ್ಟವಾಗಿ ಗುರೂಪಾವಸ್ಥೆಯ ಮಾಡಲು ಆ ಶ್ರೀಗುರು ಕರುಣಿಸಿ ಸರ್ವಾಂಗಲಿಂಗಸಂಬಂಧವ ಮಾಡಿದನೆಂಬುದೀಗ ಒಬ್ಬುಳಿಕೆಯಾಯಿತ್ತೆಂಬ ಶಬ್ದಕ್ಕರ್ಥ. ಆ ಚಿದ್ಘನಲಿಂಗದಲ್ಲಿ ಒಡಗೂಡಿದ ಶರಣಂಗೆ ತಾನು ಜೀವನೆಂಬ ಸಂಕಲ್ಪ ವಿಕಲ್ಪ ನಷ್ಟ

ವಾಯಿತ್ತೆಂಬುದೀಗ ತನ್ನ ಸುಬುದ್ಧಿಯು ಬಿಟ್ಟು ಎಂಬ ಶಬ್ದಕ್ಕರ್ಥ. ಅಂತು ಜೀವಭಾವ ನಿವೃತ್ತಿಯಾಗಿ ಶಿವಭಾವ ಘಟಿಸಿದ ಶರಣನು ಸಕಲ ಕರಣಂಗಳ ಪ್ರವರ್ತನೆಯ ನಿವೃತ್ತಿಯ ಮಾಡಿದನೆಂಬುದೀಗ ಶಬ್ದಕ್ಕಿಯು ಹಿಂಡನೊಲ್ಲದೆ ಎಂಬ ಶಬ್ದಕ್ಕರ್ಥ. ಆ ಕರಣಂಗಳು ನಿವೃತ್ತಿಯಾಗಲು ತಾನೆ ಶಿವನೆಂಬ ದಿಟ ಘಟಿಸಿ ಆ ಪರಶಿವ ತತ್ವದಲ್ಲಿ ಜ್ಞಾನಕ್ರಿಯಿಂದಾಚರಿಸಿ ನಿರ್ವಯಲಾಯಿತ್ತೆಂಬುದೀಗ ಅಲ್ಲಿಯೇ ಹೋಯಿತ್ತು. ಅರ್ಕೇಶ್ವರ ಲಿಂಗವನರಿಯಿತ್ತು ಎಂಬ ಶಬ್ದಕ್ಕರ್ಥ.

೨೫. ಕಾಡಿನೊಳಗಣ ವರಾಹನ ಊರ ಕುಕ್ಕುರ ಕೊಲುವಾಗ ಊರಿಗೂ ಕಾಡಿಗೂ ಏತರ ಹಗೆ? ಅದರ ಭೇದವ ಅಲ್ಲಿಯೇ ಅಡಗಿತ್ತು. ಅರ್ಕೇಶ್ವರಲಿಂಗವನರಿಯಿರಣ್ಣಾ.

ಟೀಕು:— ಕಾಡೆಂದೊಡೆ ಭವಾರಣ್ಯ. ಅಂತಪ್ಪ ಭವಾರಣ್ಯವ ಪ್ರವೇಶವಾದ ಜೀವನೆಂಬುದೀಗ ಕಾಡಿನೊಳಗಣ ವರಾಹನೆಂಬ ಶಬ್ದಕ್ಕರ್ಥ. ಅಂತಪ್ಪ ಜೀವನ ಇಂದ್ರಿಯಂಗಳೆಂಬ ಶ್ವಾನಂಗಳು ಅವಗ್ರಹಿಸಿಕೊಂಡು ಗಾಸಿ ಮಾಡುತ್ತಿಹವೆಂಬುದೀಗ ಊರ ಕುಕ್ಕುರ ಕೊಲುವಾಗ ಎಂಬ ಶಬ್ದಕ್ಕರ್ಥ. ಶಿವಾಂಶಿಕನಾದಾತ್ಮನು ದೇಹಸಂಬಂಧವಾದಲ್ಲಿ ತನ್ನ ನಿಜವ ಮರೆದು ಅಜ್ಞಾನಿಯಾಗಿ ಇಂದ್ರಿಯಂಗಳ ಕೂಡೆ ಕರಣ ಕರ್ಕಶದಿಂದಿರುತ್ತಿರ್ದನೆಂಬುದೀಗ ಊರಿಗೂ ಕಾಡಿಗೂ ಏತರ ಹಗೆ ಎಂಬ ಶಬ್ದಕ್ಕರ್ಥ. ಅಂತಪ್ಪ ಜೀವಂಗೆ ಶಿವಜ್ಞಾನೋದಯವಾದಲ್ಲಿ ಆ ಇಂದ್ರಿಯಂಗಳ ಕರಣ ಕರ್ಕಶ ನಷ್ಟವಾಗಿ ತನ್ನ ನಿಜವಪ್ಪ ಪರಶಿವತತ್ವವನರಿವುತಿರ್ದನೆಂಬುದೀಗ ಅದರ ಭೇದವ ಅಲ್ಲಿಯೇ ಅಡಗಿತ್ತು ಅರ್ಕೇಶ್ವರಲಿಂಗವನರಿಯಿರಣ್ಣಾ ಎಂಬ ಶಬ್ದಕ್ಕರ್ಥ.

೨೬. ಕಲ್ಲು ಬೆಂಕಿ ಕೂಡಿ ಉರಿವಾಗ ಹುಲ್ಲು ಕತ್ತಿದುದಿಲ್ಲ. ಮೆಲ್ಲನೆ ಉರುಹುವಾತನ ಸೊಲ್ಲಿನ ಬಲ್ಲತನ ಅಲ್ಲಿಯೇ ಬೆಂದಿತ್ತು. ಅರ್ಕೇಶ್ವರಲಿಂಗವನರಿಯಿರಣ್ಣಾ.

ಟೀಕು:— ಕಲ್ಲು ಹೃದಯವಾದ ದೇಹವೆಂಬುದೀಗ ಕಲ್ಲು ಎಂಬ ಶಬ್ದಕ್ಕರ್ಥ. ತಾಪತ್ರಯಾಗ್ನಿಯಾಗ ಬೆಂಕಿ ಶಬ್ದಕ್ಕರ್ಥ. ಅಂತಪ್ಪ ದೇಹವು ತಾಪತ್ರಯಾಗ್ನಿಯು ಏಕವಾಗಿ ಪ್ರವರ್ತಿಸುತ್ತಿಹುವೆಂಬುದೀಗ ಕಲ್ಲು ಬೆಂಕಿ ಕೂಡಿ ಎಂಬ ಶಬ್ದಕ್ಕರ್ಥ. ಆ ತಾಪತ್ರಯಾಗ್ನಿಯು ಪ್ರವ



ರ್ತಿಸುವಲ್ಲಿ ಹುಲ್ಲೆಂದೊಡೆ ವಿಷಯಂಗಳು. ಅಂತಪ್ಪ ವಿಷಯಂಗಳು ವಶೆಯಾಗದೆ ಇರುತ್ತಿಹವೆಂಬುದೀಗ ಉರಿವಾಗ ಹುಲ್ಲು ಕತ್ತಿದುದಿಲ್ಲ ವೆಂಬ ಶಬ್ದಕ್ಕರ್ಥ. ಅಹಂ ಬ್ರಹ್ಮವೆಂಬ ದ್ವೈತಜ್ಞಾನಿಗಳು ತಾಪತ್ರಯದಲ್ಲಿ ಕೂಡಿ ವರ್ತಿಸುತ್ತಿಹರೆಂಬುದೀಗ ಮೆಲ್ಲನೆ ಉರುಹುವಾತನೆಂಬ ಶಬ್ದಕ್ಕರ್ಥ. ಅಂತಪ್ಪ ಜ್ಞಾನಿಗಳ ವಾಗದ್ವೈತದರಿವೆಲ್ಲವು ತಾಪತ್ರಯಾಗ್ನಿಯಲ್ಲಿ ದಗ್ಧವಾಯಿತ್ತೆಂಬುದೀಗ ಸೊಲ್ಲಿನ ಬಲ್ಲತನ ಅಲ್ಲಿಯೇ ಬೆಂದಿತ್ತು ಎಂಬ ಶಬ್ದಕ್ಕರ್ಥ. ಅಂತಪ್ಪ ವಾಗದ್ವೈತವ ನಷ್ಟವ ಮಾಡಿ ಶಿವಾದ್ವೈತ ಭಕ್ತಿವಿಡಿದಾಚರಿಸಿ ಪರಶಿವತತ್ವದಲ್ಲಿ ಏಕಾರ್ಥವನೆಯ್ದು ಎಂಬುದೀಗ ಅರ್ಕೇಶ್ವರಲಿಂಗವನರಿಯಿರಣ್ಣಾ ಎಂಬ ಶಬ್ದಕ್ಕರ್ಥ.

೨೭. ಕವಿಯ ಕಾಳಗದಲ್ಲಿ ರವಿ ಬಂಟನಾಗಿ ಶಶಿ ದೆಸೆಗೆಟ್ಟು ಅರಸು ಬಂಟರ ಬಿಟ್ಟೋಡಿದ. ರವಿ ರಥವ ತುಡುಕಿ ಅವಿರತವಾದ. ಅರ್ಕೇಶ್ವರಲಿಂಗದಲ್ಲಿ ಕವಿ ಕವಲಾಯಿತ್ತು.

ಟೀಕು:— ಸಕಲ ಶಾಸ್ತ್ರಂಗಳ ಕಲಿತು ಕವಿಯು ಹವಣಿಂದ ಕವಿತ್ವವ ಮಾಡುತ್ತಿಹರೆಂಬುದೀಗ ಕವಿಯು ಎಂಬ ಶಬ್ದಕ್ಕರ್ಥ. ಆ ಕವಿತ್ವಸಾಧಕರು ಅಹುದಲ್ಲವೆಂದು ತರ್ಕಿಸುತ್ತಿಹರೆಂಬುದೀಗ ಕವಿಯ ಕಾಳಗದಲ್ಲಿ ಎಂಬ ಶಬ್ದಕ್ಕರ್ಥ. ಆ ಮಥನಿಸುತಿರ್ಪ ಜೀವರುಗಳಲ್ಲಿ ಕೋಪಾಗ್ನಿ ಪ್ರಭಾವಿಸಿತ್ತೆಂಬುದೀಗ ರವಿ ಬಂಟನಾಗಿ ಎಂಬ ಶಬ್ದಕ್ಕರ್ಥ. ಆ ಕೋಪಾಗ್ನಿ ಪಟುತರವಾದಲ್ಲಿ ಪರಮ ಶಾಂತಿಯ ನಿಲವು ತಪ್ಪಿತ್ತೆಂಬುದೀಗ ಶಶಿ ದೆಸೆಗೆಟ್ಟು ಎಂಬ ಶಬ್ದಕ್ಕರ್ಥ. ಆ ಪರಮ ಶಾಂತಿ ನಷ್ಟವಾಗಲು ಮಹಾಘನ ಲಿಂಗದ ನಿಲವು ಕಾಣಬಾರದೆಂಬುದೀಗ ಅರಸು ಬಂಟರ ಬಿಟ್ಟೋಡಿದನೆಂಬ ಶಬ್ದಕ್ಕರ್ಥ. ಅಂತು ಮಹಾಲಿಂಗದ ನಿಜವು ಭಿನ್ನವಾಗಲು ಕೋಪಾಗ್ನಿ ದೇಹವೆಂಬ ರಥವನವಗ್ರಹಿಸಿ ಅನುಕೃತವಿಹುದೆಂಬುದೀಗ ರವಿ ರಥವ ತುಡುಕಿ ಅವಿರತವಾದನೆಂಬ ಶಬ್ದಕ್ಕರ್ಥ. ಆ ಕ್ರೋಧವೆಡೆಗೊಂಡಲ್ಲಿ ಕವಿತ್ವಸಾಧಕರು ಲಿಂಗಕ್ಕೆ ಸಲ್ಲದೆ ಭಿನ್ನರಾಗಿ ಹೋದರೆಂಬುದೀಗ ಅರ್ಕೇಶ್ವರಲಿಂಗದಲ್ಲಿ ಕವಿ ಕವಲಾಯಿತ್ತು ಎಂಬ ಶಬ್ದಕ್ಕರ್ಥ.

೨೮. ಕುದುರೆಯ ನರಿ ಕೊಂದು ನರಿಯ ಇರುವೆ ತಿಂದು ಆ ಇರುವೆ ತನ್ನ ತಾ ಸತ್ತಿತ್ತು ಅರ್ಕೇಶ್ವರಲಿಂಗವನರಿವುದಕ್ಕೆ.

ಪ್ರಾಣವಾಯುವಿಕಾರ
ಟೀಕು:— ಸತ್ತ್ರಣಮುಜ್ಞಾನ ಉದಯುವಾದಲ್ಲಿ ಕುದುರೆಯ ನರಿ ಕೊಂದು ಎಂಬ ಶಬ್ದಕ್ಕರ್ಥ. ನಷ್ಟವಾಯಿತ್ತೆಂಬುದೀಗ ಆ ಸತ್ತ್ರಣಮುವ ಶರಣನ ಸೂಕ್ಷ್ಮವಾದ ಪರಿಪೂರ್ಣಜ್ಞಾನವನವಗ್ರಹಿಸಿತ್ತೆಂಬುದೀಗ ನರಿಯ ಇರುವೆ ತಿಂದು ಎಂದು ಶಬ್ದಕ್ಕರ್ಥ. ಆ ಸತ್ತ್ರಣಮುವ ನವಗ್ರಹಿಸಿದ ಶರಣನ ಪರಿಪೂರ್ಣಜ್ಞಾನವು ಆ ಪರವಸ್ತುವಿನಲ್ಲಿ ನಿಷ್ಪ್ರಿಯಾಯಿತ್ತೆಂಬುದೀಗ ಆ ಇರುವೆ ತನ್ನ ತಾ ಸತ್ತಿತ್ತು, ಅರ್ಕೇಶ್ವರ ಲಿಂಗವನರಿವುದಕ್ಕೆ ಎಂಬ ಶಬ್ದಕ್ಕರ್ಥ.

೨೯. ಕಂಗಳ ಮಧ್ಯದಲ್ಲಿ ಮಳೆಯಲ್ಲಿ ಒಂದು ನಿಸ್ಸಂಗ ಶೃಂಗಿ ಮೇವುತ್ತಿದೆ. ಅಂಬೊಂದು, ಹಿಲುಕು ಮೂರು, ಅಲಗಾರು, ಮೊಲೆ ಐದು ಕೂಡಿ, ಧನ ನಾಲ್ಕು ಹಿಡಿದು, ನಾರಿ ಎಂಟು ಕೂಡಿ, ಶರ ಕೂಡಿ ಸಂಧಾನದ ವೇಶಿಯ ಶೃಂಗಿ ಬಿದ್ದಿತ್ತು, ಆಸು ಬದುಕಿತ್ತು, ಅರ್ಕೇಶ್ವರಲಿಂಗವನರಿತ ಕಾರಣ.

ಟೀಕು:— ಚಿತ್ಸ್ವರೂಪನಾದ ಶರಣನ ಸುಜ್ಞಾನದೃಷ್ಟಿಯ ಮುಂದೆ ಸದ್ವಿವೇಕವೃಕ್ಷ ಸ್ವರೂಪವಾಗಿ ತೋರುವ ಷಡಾಧಾರ ಚಕ್ರಂಗಳಲ್ಲಿ ಎಂಬುದೀಗ ಕಂಗಳ ಮಧ್ಯದ ಮಳೆಯಲ್ಲಿ ಎಂಬ ಶಬ್ದಕ್ಕರ್ಥ. ಆ ಚಿದಾರಣ್ಯ ಮಧ್ಯದಲ್ಲಿ ದೇಹೇಂದ್ರಿಯಂಗಳ ಸಂಗವಿಲ್ಲದ ನಿಷ್ಕಲ ಚಿಚ್ಛಕ್ತಿ ಸುಜ್ಞಾನಾಂಕುರವ ಸವಿವುತ್ತಿಹಳೆಂಬುದೀಗ ಒಂದು ನಿಸ್ಸಂಗ ಶೃಂಗಿ ಮೇವುತ್ತಿದೆ ಎಂಬ ಶಬ್ದಕ್ಕರ್ಥ. ಆ ನಿಷ್ಕಲ ಚಿಚ್ಛಕ್ತಿಯಲ್ಲಿ ಶರಣಸಮರಸವನೆಯ್ದುವುದಕ್ಕೆ ಮೂಲಸ್ಥಾನವೇ ಅಂಬಾಗಿಹುದೆಂಬುದೀಗ ಅಂಬೊಂದು ಎಂಬ ಶಬ್ದಕ್ಕರ್ಥ. ಅದಕ್ಕೆ ಕ್ರಿಯಾಜ್ಞಾನಭಾವಂಗಳೇ ಹಿಲುಕುಗಳೆಂಬುದೀಗ ಹಿಲುಕು ಮೂರು ಎಂಬ ಶಬ್ದಕ್ಕರ್ಥ. ಅದಕ್ಕೆ ಸುಜ್ಞಾನ ಸ್ವರೂಪವಾದ ಷಟ್ಸ್ಥಲಂಗಳೇ ಅಲಗಾಗಿಹುದೆಂಬುದೀಗ ಅಲಗಾರು ಎಂಬ ಶಬ್ದಕ್ಕರ್ಥ. ಆ ಷಟ್‌ಸ್ಥಲಂಗಳಲ್ಲಿ ಪಂಚಾಕ್ಷರಿ ಸ್ವರೂಪವಾದ ಪಂಚಾಚಾರ ಸಂಬಂಧವಾಗಿರುತ್ತಿಹುದೆಂಬುದೀಗ ಮೊಲೆ ಐದು ಕೂಡಿ ಎಂಬ ಶಬ್ದಕ್ಕರ್ಥ. ಆ ಪಂಚಾಚಾರಂಗಳಲ್ಲಿ ಚತುರ್ವಿಧಭಕ್ತಿಸಂಬಂಧವಾಗಿಹವೆಂಬುದೀಗ ಧನ ನಾಲ್ಕು ಹಿಡಿದು ಎಂಬ ಶಬ್ದಕ್ಕರ್ಥ. ಆ ಚತುರ್ವಿಧ ಭಕ್ತಿಯಲ್ಲಿ ಅಷ್ಟವಿಧ ಭಕ್ತಿಸಂಬಂಧವಾಗಿಹವೆಂಬುದೀಗ ನಾರಿ ಎಂಟು ಕೂಡಿ ಎಂಬ ಶಬ್ದಕ್ಕರ್ಥ. ಆ ಸರ್ವಾಚಾರಸಂಪತ್ತುವಿಡಿದಿರ್ದ



ಶರಣನು ಸುಜ್ಞಾನವೆಂಬ ಸರಳಿಂ ಪ್ರಯೋಗಿಸಲು ಆತ ಶಕ್ತಿ ಶರಣನ ಸುಜ್ಞಾನದಲ್ಲಿ ಸಮರಸವನೆಯ್ದಿತ್ತೆಂಬುದೀಗ ಶರಸಂಧಾನದ ವೇಶಿಯ ಶೃಂಗಿ ಬಿದ್ದಿತ್ತೆಂಬ ಶಬ್ದಕ್ಕರ್ಥ. ಆ ಚಿಚ್ಛಕ್ತಿಯನವಗ್ರಹಿಸಿಪ್ಪ ಶರಣನ ಚಿದಾತ್ಮನು ನಿತ್ಯವಾದ ಶಿವಪದವನೆಯ್ದಿತ್ತೆಂಬುದೀಗ ಅಸು ಬದುಕಿತ್ತು ಅರ್ಕೇಶ್ವರಲಿಂಗವನರಿತ ಕಾರಣವೆಂಬ ಶಬ್ದಕ್ಕರ್ಥ.

೩೦. ಕಣ್ಣ ಕಾದುವ ಗುಂಗುರ ತಿಂದು ಬಾಯ ಕಾದುವ ಕೈಯ್ಯ ತಿಂದು ಆಪ್ಯಾಯನವಡಿಸಿದ ಹೊಟ್ಟೆಯ ತಿಂದು ಮತ್ತಿವರ ಹುಟ್ಟು ಮುಟ್ಟನರಿಯಲೇತಕ್ಕೆ? ಅರ್ಕೇಶ್ವರ ಲಿಂಗವನರಿಯಿರಣ್ಣಾ.

ಟೀಕು— ಶಿವಜ್ಞಾನ ಪ್ರಕಾಶವೆಂಬುದೀಗ ಕಣ್ಣು ಎಂಬ ಶಬ್ದಕ್ಕರ್ಥ. ಅಂತಪ್ಪ ಸುಜ್ಞಾನ ಪ್ರಕಾಶವ ಅತ್ಯಂತ ಸೂಕ್ಷ್ಮವಾದ ಮಾಯೆ ಅವಗ್ರಹಿಸಿಕೊಂಡಿಹಳೆಂಬುದೀಗ ಕಣ್ಣ ಕಾದುವ ಗುಂಗುರು ಎಂಬ ಶಬ್ದಕ್ಕರ್ಥ. ಸ್ವಾನುಭಾವ ಉದಯವಾದ ಶರಣ ಆ ಪರಿಪೂರ್ಣಜ್ಞಾನ ಪ್ರಕಾಶದಿಂದ ಮಾಯೆಯನವಗ್ರಹಿಸಿದನೆಂಬುದೀಗ ಗುಂಗುರ ತಿಂದು ಎಂಬ ಶಬ್ದಕ್ಕರ್ಥ. ಶಿವತತ್ವದಲ್ಲಿ ಬೆರಸಬೇಕೆಂಬ ಶಿವಾಪೇಕ್ಷೆಯೆಂಬ ಬಾಯನು ನಷ್ಟವ ಮಾಡುವ ಸಂಕಲ್ಪರೂಪವಾದ ಮನೋಹಸ್ತವನು ಛೇದಿಸಿದನೆಂಬುದೀಗ ಬಾಯ ಕಾದುವ ಕೈಯ ತಿಂದು ಎಂಬ ಶಬ್ದಕ್ಕರ್ಥ. ಭಿನ್ನಾಪೇಕ್ಷೆಯಿಂ ಹುಟ್ಟುವ ಪ್ರಾರಬ್ಧಭೋಗವ ನಷ್ಟವ ಮಾಡಿದನೆಂಬುದೀಗ ಆಪ್ಯಾಯನವಡಸಿದ ಹೊಟ್ಟೆಯ ತಿಂದು ಎಂಬ ಶಬ್ದಕ್ಕರ್ಥ. ಅಂತಪ್ಪ ತತ್ವಂಗಳೆಲ್ಲ ಲಿಂಗತತ್ವದಲ್ಲಿ ಲೀಯವಾದ ಶರಣಂಗೆ ಇನ್ನು ತತ್ವಂಗಳ ವಿಭಾಗವ ಮಾಡಲಿಲ್ಲವೆಂಬುದೀಗ ಮತ್ತಿವರ ಹುಟ್ಟು ಮುಟ್ಟನರಿಯಲೇತಕ್ಕೆ ಅರ್ಕೇಶ್ವರಲಿಂಗವನರಿಯಿರಣ್ಣಾ ಎಂಬ ಶಬ್ದಕ್ಕರ್ಥ.

೩೧. ಅಣ್ಣನ ಮೂರು ಕುತ್ತಿನಲ್ಲಿ ಅಕ್ಕನ ಮೂರು ಮಕ್ಕಳು ಹೆತ್ತು ಅಪ್ಪನ ಕೈಯ್ಯಲು ಕೊಡಲು ಅಣ್ಣ ಹಣ್ಣಿದ ಜಗಳ ಅಕ್ಕನ ಹೊಟ್ಟೆಯ ಕೇಡು ಅಕ್ಕನ ಕೂಸು ಅಪ್ಪನ ತಿಂದು ಎತ್ತ ಹೋಯಿತ್ತೆಂದರಿಯೆ ಅರ್ಕೇಶ್ವರಲಿಂಗವ ಕೇಳುವ ಬನ್ನಿ.

ಟೀಕು:— ಅಣ್ಣನೆಂದೊಡೆ ಚಿತ್ಸ್ವರೂಪವಾದ ಶ್ರೀಗುರು ತತ್ವವೆಂಬುದೀಗ ಅಣ್ಣನೆಂಬ ಶಬ್ದಕ್ಕರ್ಥ. ಜ್ಞಾನಶಕ್ತಿ ಸ್ವರೂಪವಾದ ಶರಣಸತಿಯಲ್ಲಿ ದೀಕ್ಷಾತ್ರಯಂಗಳಿಂದ ಶ್ರೀಗುರು ಅವಿರಳಸಂಗವ ಮಾಡಲು

ತನುತ್ರಯಂಗಳು ನಷ್ಟವಾಗಿ ಲಿಂಗತ್ರಯಂಗಳುದಯಿಸಿದವೆಂಬುದೀಗ ಅಣ್ಣನ ಮೂರು ಕುತ್ತಿನಲ್ಲಿ ಅಕ್ಕನ ಮೂರು ಮಕ್ಕಳು ಹೆತ್ತು ಎಂಬ ಶಬ್ದಕ್ಕರ್ಥ. ಆ ಶರಣಸತಿಯು ಲಿಂಗತ್ರಯವನು ತನಗೆ ಜನಕನಪ್ಪ ಮಹಾಜ್ಞಾನದ ಮಧ್ಯದಲ್ಲಿ ಸಂಬಂಧವ ಮಾಡಿದನೆಂಬುದೀಗ ಅಪ್ಪನ ಕೈಯ್ಯಲ್ಲಿ ಕೊಡಲು ಎಂಬ ಶಬ್ದಕ್ಕರ್ಥ. ಆ ಶ್ರೀಗುರು ತತ್ವದಿಂ ಪುಟ್ಟಿದ ಕ್ರಿಯಾಜ್ಞಾನ ಮಥನದಿಂ ಲಿಂಗಭೋಗೋಪಭೋಗಿಯಾದ ಶರಣಸತಿಯು ಪ್ರಾರಬ್ಧಸ್ಥಿತಿಯು ನಷ್ಟವಾಯಿತ್ತೆಂಬುದೀಗ ಅಣ್ಣ ಹಣ್ಣಿದ ಜಗಳ ಅಕ್ಕನ ಹೊಟ್ಟೆಯ ಕೇಡು ಎಂಬ ಶಬ್ದಕ್ಕರ್ಥ. ಆ ಶರಣ ಸಂಬಂಧವಾದ ಮಹಾಘನಲಿಂಗವು ತನಗೆ ಜನಕನಪ್ಪ ಮಹಾಜ್ಞಾನವನವಗ್ರಹಿಸಿ ನಿಷ್ಪತ್ತಿಯಾಯಿತ್ತೆಂಬುದೀಗ ಅಕ್ಕನ ಕೂಸು ಅಪ್ಪನ ತಿಂದು ಎತ್ತ ಹೋಯಿತ್ತೆಂಬುದನರಿಯೆ ಎಂಬ ಶಬ್ದಕ್ಕರ್ಥ. ಈ ನಿಷ್ಪತ್ತಿಯಾದ ಭೇದವ ಸುಜ್ಞಾನಿ ಶರಣನು ಪರಶಿವ ಮುಖದಿಂದ ಅರಿವುತಿರ್ದನೆಂಬುದೀಗ ಅರ್ಕೇಶ್ವರಲಿಂಗವ ಕೇಳುವ ಬನ್ನಿ ಎಂಬ ಶಬ್ದಕ್ಕರ್ಥ.

೩೨. ಆರು ಕುಂಭದ ಮಾಳಿಗೆಯ ನಡುವೆ ಒಂದು ಮೂರು ಮುಖದ ಹೆಗ್ಗಣ ತೋಡಿ ಕಂಡಿತ್ತು ತೋಡೊಲೆಗಳ ಸಾಗರದ ಮಂದಿರವ ಅದು ತನ್ನನಿರವ ತೋರುವುದಕ್ಕೆ ಮೊದಲೆ ಮಾಳಿಗೆಯು ಜಾರಿತ್ತು ಅರ್ಕೇಶ್ವರಲಿಂಗವ ಕೇಳುವ ಬನ್ನಿ.

ಟೀಕು:— ಷಟ್ಕರಣಯುಕ್ತವಾದ ದೇಹಮಧ್ಯದಲ್ಲಿ ಎಂಬುದೀಗ ಆರು ಕುಂಭದ ಮಾಳಿಗೆಯ ನಡುವೆ ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹದಲ್ಲಿ ತ್ರಿವಿಧಾವಸ್ಥೆಯ ಮುಖವಾಗಿರ್ಪ ಜೀವಾತ್ಮನಿರುತ್ತಿಹನೆಂಬುದೀಗ ಒಂದು ಮೂರು ಮುಖದ ಹೆಗ್ಗಣವೆಂಬ ಶಬ್ದಕ್ಕರ್ಥ. ಅಂತಪ್ಪ ಜೀವಾತ್ಮನು ದೇಹಾದಿ ಪ್ರಪಂಚವನುಂಟುಮಾಡಿಕೊಂಡು ದ್ವೈತಭಾವದಿಂ ಭಿನ್ನಕ್ರಿಯಾಚಾರವಿಡಿದು ಆಚರಿಸುತ್ತಿಹನೆಂಬುದೀಗ ತೋಡಿ ಕಂಡಿತ್ತು ತೋಡೊಲೆಗಳ ಎಂಬ ಶಬ್ದಕ್ಕರ್ಥ. ಅಂತಪ್ಪ ಜೀವನು ಭಿನ್ನಕ್ರಿಯೆ ವಿಡಿದಾಚರಿಸಿ ಭಿನ್ನಫಲಪದಂಗಳ ಪಡೆದು ಭವಾಂಬುಧಿಗೊಳಗಾಗಿ ದೇಹವಿಡಿದಿರ್ದನೆಂಬುದೀಗ ಸಾಗರದ ಮಂದಿರವ ಎಂಬ ಶಬ್ದಕ್ಕರ್ಥ. ಅಂತಪ್ಪ ಜೀವಂಗೆ ಶಿವಕೃಪೆಯಿಂ ಸುಜ್ಞಾನೋದಯವಾಗಿ ತನ್ನ ನಿಜವ ತಿಳಿದು ಗುರುಕರುಣದಿಂ ಸರ್ವಾಂಗಲಿಂಗಸಂಬಂಧವಾದಾಕ್ಷಣದಲ್ಲಿ ದೇಹ ಭಾವ ನಷ್ಟವಾಯಿತ್ತೆಂಬುದೀಗ ಅದು ತನ್ನಿರವ



ತೋರುವುದಕ್ಕೆ ಮೊದಲೆ ಮಾಳಿಗೆಯು ಜಾರಿತ್ತು ಅರ್ಕೇಶ್ವರಲಿಂಗವ ಕೇಳುವ ಬನ್ನಿ ಎಂಬ ಶಬ್ದಕ್ಕರ್ಥ.

೩೩. ಊರವರೆಲ್ಲರೂ ಕೂಡಿ ಬೇಟೆಗೆ ಹೋಗಿ ಹಾರುವನ ಕೊಂದರು. ತಲೆ ಉಳಿದು ಕಾಲ ಖಂಡಿಸಿ ಕರುಳಡಗಿತ್ತು. ಬೇಟೆ ಬೆಲೆಯಾದುದಿಲ್ಲ. ಕೇಳುವ ಬನ್ನಿ ಅರ್ಕೇಶ್ವರಲಿಂಗವ.

ಟೀಕು:–ಅಂತರಂಗದಲ್ಲಿ ಸುಜ್ಞಾನೋದಯವಾಗಿ ಗುರುಕರುಣದಿಂ ಸರ್ವಾಂಗಲಿಂಗಸಂಬಂಧಿಗಳಾದ ಪಟ್ಟಸ್ಥಲಬ್ರಹ್ಮಿಗಳೆಂಬುದೀಗ ಊರೆಲ್ಲರೂ ಕೂಡಿ ಎಂಬ ಶಬ್ದಕ್ಕರ್ಥ. ಅಂತಪ್ಪ ಮಹಾನುಭಾವಿಗಳು ಅಭಿನ್ನಜ್ಞಾನಕ್ರಿಯೆವಿಡಿದು ಆಚರಿಸುತ್ತಿಹರೆಂಬುದೀಗ ಬೇಟೆಗೆ ಹೋಗಿ ಎಂಬ ಶಬ್ದಕ್ಕರ್ಥ. ಅಂತಪ್ಪ ಶಿವಾದ್ವೈತ ಭಕ್ತಿಯಿಂದಾಚರಿಸಿದ ಶರಣರು ಪರಧನ ಪರಸ್ತ್ರೀಯರಿಗೆ ಹಾರೈಸುತ್ತಿರ್ದ ಜೀವನ ಅಜ್ಞಾನಭಾವವ ಸಂಹರಿಸುತ್ತಿಹರೆಂಬುದೀಗ ಹಾರುವನ ಕೊಂದರು ಎಂಬ ಶಬ್ದಕ್ಕರ್ಥ. ಅಂತು ಜೀವ ನಷ್ಟವಾದಲ್ಲಿ ಅಭಿನ್ನಜ್ಞಾನ ಉಳಿಯಿತ್ತೆಂಬುದೀಗ ತಲೆ ಉಳಿದು ಎಂಬ ಶಬ್ದಕ್ಕರ್ಥ. ಅಂತಪ್ಪ ಅಭಿನ್ನಜ್ಞಾನ ಪ್ರಕಾಶದಿಂ ಜೀವನ ದುಶ್ಚರಿತೆ, ಎಂಬ ಚರಣವನು ಸಕಲ ಕರಣಂಗಳು ನಿವೃತ್ತಿ ಮಾಡಿದನೆಂಬುದೀಗ ಕಾಲ ಖಂಡಿಸಿ ಕರುಳಡಗಿತ್ತು ಎಂಬ ಶಬ್ದಕ್ಕರ್ಥ. ಆ ಜೀವಭಾವವ ನಿವೃತ್ತಿಯ ಮಾಡಿದ ಸಜ್ಜೀವಸ್ವರೂಪನಾದ ಶರಣನ ಪರಿಪೂರ್ಣ ಜ್ಞಾನಫಲಪದಂಗಳಿಗೆ ಒಳಗಾಗದೆ ಪರಶಿವ ತತ್ವದಲ್ಲಿ ಸಮರಸವಾಯಿತ್ತೆಂಬುದೀಗ ಬೇಟೆ ಬೆಲೆಯಾದುದಿಲ್ಲ ಕೇಳುವ ಬನ್ನಿ ಅರ್ಕೇಶ್ವರಲಿಂಗವ ಎಂಬ ಶಬ್ದಕ್ಕರ್ಥ.

೩೪. ಬಲೆಯ ಮೀರಿದ ಮೃಗ ಸತ್ತಿತ್ತು. ಕೊಲು ಹೋದಾತ ಹಲವು ಹರಿದ ತಲೆಯ ಕಂಡು ಹೊಲಬುದಪ್ಪಿದರು ಅರ್ಕೇಶ್ವರಲಿಂಗವ ನರಿಯರಣ್ಣಾ.

ಟೀಕು:—ದೇಹಸಂಬಂಧಿಯಾಗಿರ್ಪ ಜೀವಾತ್ಮಂಗೆ ಶಿವಜ್ಞಾನ ಪ್ರಕಾಶಿಸಲು ಮಾಯಾಪಾಶ ನಷ್ಟವಾಗಿ ಶ್ರೀಗುರುಕಾರಣ್ಯದಿಂ ಸರ್ವಾಂಗಲಿಂಗಸಂಬಂಧವಾಗಲು ಸತ್ತು ರೂಪವಾದ ಪರಬ್ರಹ್ಮವೇ ಆಯಿತ್ತೆಂಬುದೀಗ ಬಲೆಯ ಮೀರಿದ ಮೃಗ ಸತ್ತಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಲಿಂಗಸಂಬಂಧವನರಿಯದಿರ್ಪ ಅದ್ವೈತ ಜ್ಞಾನಿಗಳು ಜೀವಭಾವವ ನಿವೃತ್ತಿಯ

ಮಾಡಿಹೆನೆಂದು ಹೋಗಲು ಅಲ್ಲಿ ಭಿನ್ನ ಜ್ಞಾನವೇ ಇದಿರಿಟ್ಟು ತೋರು ತ್ತಿಹುದೆಂಬುದೀಗ ಕೊಲು ಹೋದಾತ ಹಲವು ಹರಿದ ತಲೆಯು ಕಂಡು ಎಂಬ ಶಬ್ದಕ್ಕರ್ಥ. ಅಂತಪ್ಪ ಭಿನ್ನಜ್ಞಾನಿಗಳು ಮೋಕ್ಷಮಾರ್ಗಕ್ಕೆ ದೂರ ವಾದರೆಂಬುದೀಗ ಕೊಲಬು ತಪ್ಪಿದರೆಂಬ ಶಬ್ದಕ್ಕರ್ಥ. ಅಂತಪ್ಪ ಅದ್ವೈತ ಜ್ಞಾನವ ನಿವೃತ್ತಿಯ ಮಾಡಿದ ಶರಣನು ಶಿವಾದ್ವೈತ ಭಕ್ತಿವಿಡಿದಾಚ ರಿಸಿ ಪರಶಿವ ತತ್ವದಲ್ಲಿ ಸಮರಸೈಕ್ಯವನೆಯ್ದಬೇಕೆಂಬ ಬಯಕೆಯಲ್ಲಿರು ತಿರ್ದನೆಂಬುದೀಗ ಅರ್ಕೇಶ್ವರಲಿಂಗವನರಿಯಿರಣ್ಣಾ ಎಂಬ ಶಬ್ದಕ್ಕರ್ಥ.

೩೫. ಚಿತ್ತಲೆಯ ಹುತ್ತದಲ್ಲಿ ಕತ್ತಲೆಯ ಹೆಡೆಯ ಸರ್ಪ ತೆಕ್ಕೆಯ ಮಡಿಯಲರಿಯದೆ ಸಿಕ್ಕಿ ಇದೆ. ಹುತ್ತದ ಬಾಯಲ್ಲಿ ಕಪ್ಪೆ ಹರಿದು ಬಂದು ಸರ್ಪನ ನುಂಗಿತ್ತು. ಹುತ್ತು ಬಟ್ಟ ಬಯಲಾಯಿತ್ತು ಅರ್ಕೇಶ್ವರಲಿಂಗನಿಗೆ ಗೊತ್ತು.

ಟೀಕು:— ಭಿನ್ನ ಕ್ರಿಯಾಚಾರ ಬಾಹ್ಯವಾದ ನವದ್ವಾರಯುಕ್ತ ವಾದ ದೇಹವೆಂಬುದೀಗ ಚಿತ್ತಲೆಯ ಹುತ್ತದಲ್ಲಿ ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹದಲ್ಲಿ ಅಜ್ಞಾನವೇ ಶಿರಸ್ಸಾಗಿರ್ಪ ಮನವು ಮಹಾಘನ ಲಿಂಗದಲ್ಲಿ ಸಮರಸದಿಂದೊಬ್ಬುಳಿಯಾಗಲರಿಯದೆ ದೇಹಭಾವದ ಪ್ರಪಂ ಚಿನಲ್ಲಿ ಇರುತ್ತಿಹುದೆಂಬುದೀಗ ಕತ್ತಲೆಯ ಹೆಡೆಯ ಸರ್ಪ ತೆಕ್ಕೆಯ ಮಡಿಯಲರಿಯದೆ ಸಿಕ್ಕಿ ಇದೆ ಎಂಬ ಶಬ್ದಕ್ಕರ್ಥ. ಅಂತಪ್ಪ ಪಿಂಡದಲ್ಲಿ ಸುಜ್ಞಾನೋದಯವಾಗಲು ಬ್ರಹ್ಮರಂಧ್ರಸ್ಥಾನದಲ್ಲಿರ್ಪ ಪರಮ ಶಾಂತಿಯ ಚಿದ್ಬಿಂದುವೇ ಸುಷುಮ್ನದ್ವಾರದಿಂದೊಸರಿ ಗುರುವಿನ ಭಾವ ಮನದೃಕ್ಕ ನೊಳಕೊಂಡು ಇಷ್ಟಲಿಂಗವಾಗಿ ಶರಣನ ಆಚಾರಲಿಂಗದಲ್ಲಿ ಮೂರ್ತಿ ಗೊಂಡಿತ್ತೆಂಬುದೀಗ ಹುತ್ತದ ಬಾಯಲ್ಲಿ ಕಪ್ಪೆ ಹರಿದು ಬಂದು ಎಂಬ ಶಬ್ದಕ್ಕರ್ಥ. ಅಂತಪ್ಪ ಇಷ್ಟಲಿಂಗದಲ್ಲಿ ಚಿತ್ಕಲೆ ಅಂತರಂಗಕ್ಕೆ ಭೇದಿಸಿ ಘನವನೊಳಕೊಂಡು ಪ್ರಾಣಲಿಂಗವಾಗಿ ಮೂರ್ತಿಗೊಂಡಿತ್ತೆಂಬುದೀಗ ಸರ್ಪನ ನುಂಗಿತ್ತು ಎಂಬ ಶಬ್ದಕ್ಕರ್ಥ. ಆ ಮಹಾಘನಲಿಂಗವು ಶರಣನ ಸರ್ವಾಂಗವನವಗ್ರಹಿಸಿದಲ್ಲಿ ದೇಹ ನಿರ್ಬಯಲಾಯಿತ್ತೆಂಬುದೀಗ ಹುತ್ತು ಬಟ್ಟ ಬಯಲಾಯಿತ್ತು, ಅರ್ಕೇಶ್ವರಲಿಂಗನಿಗೆ ಗೊತ್ತು ಎಂಬ ಶಬ್ದಕ್ಕರ್ಥ.

---



ಮೊಗವೊಳ್ಗುಡಿಸಿ ಗೂರು ಪೆಗ್ಗೂರಿಡುತ್ತಮಿರೆ
ಬಗೆಗೆಟ್ಟು ಸತಿಪುತ್ರರೊಟ್ಟಲೊರಲುತ್ತಮಿರೆ
ಪೋದನಿಕ್ಕಿಲ್ಲ ಕಿರಿದುಸುರರಿದುಮಿರ್ದಪುದು
ಪೋದನೆಳ್ಳರೆಯುಸಿತು ದಾನಮಿವಗಿರ್ದಪುದು
ಎಲೆಲೆಲೇ ಕರ್ಣಮಂತ್ರದ ಪೊಳ್ತು ತಪ್ಪದಿದು
ಎಲೆಲೆ ಸತ್ತಂ ಸತ್ತನೆನುತಮಿರೆ ನೆರವಿಗುದು
ಅಲ್ಲಿಯುಂ ಕೆಲಬರುತ್ಕ್ರಾಂತಿಯಂ ಕೊಂಬುವರು
ಅಲ್ಲಿ ಬಾಗೆಗೆ ಹೆಣನ ನೆರೆ ಜಗಳವಾಡುವರು
ಏನೆಂಬೆನೋ ಜಗದ ಮಾಯೆಯೊಂದಂದಮಂ
ನಾನಾ ವಿಧದ ಲಜ್ಜೆಗೆಟ್ಟ ಲಘು ವೃಂದಮಂ
ಇಂತಪ್ಪ ಸಮಯದೊಳ್ ಕಣ್ಮೇಲೆ ಮರಳುತಿರೆ
ಅಂತಲ್ಲಿ ಜೀವಮಂ ಯಮದೂತರೆಳೆಯುತಿರೆ
ನೆಂಟರುಂ ನೋಡುತ್ತಿರೆ ಬಂಟರುಂ ನೋಡುತ್ತಿರೆ
ಬಡವರುಂ ನೋಡುತ್ತಿರೆ ಬಲ್ಲಿದನೋಡುತ್ತಿರೆ
ಪುತ್ರರುಂ ಪೌತ್ರರುಂ ಪೆಂಡಿರುಂ ನೋಡುತ್ತಿರೆ
ಅಸುವತ್ತ ಪೋಗಿ ಪೆಣನಿತ್ತ ಬಿದ್ದುದು ಕೆಡೆದು
ಬಿಸುಸುಯ್ದು ಮಿಗೆ ನೆರವಿ ಬಡಿದಳಲ್ತೊಡಗಿದುದು

ಇಂತಾದ ಬಳಿಕ ನಾಂ ಮಾಳ್ಪುದಿನ್ನೊಂದುಂಟೆ
ಇಂತು ಬರಿದೊರೆವೋದ ಬಳಿಕ ಎಚ್ಚರು ಉಂಟೆ
ಬಳಿಕ ದೇವರ್ಗುಂಟೆ ಬಳಿಕ ಪಿರಿಯರ್ಗುಂಟೆ
ಬಳಿಕ ಪುಣ್ಯಕ್ಕುಂಟೆ ಬಳಿಕ ಧರ್ಮಕ್ಕುಂಟೆ
ಪುಟ್ಟಿದಂ ಸತ್ತನೆಡೆಯೊಳ್ಪುಡಿನುದೇನಾಯ್ತು
ಮುಟ್ಟಿರೀಕ್ಷಿಸಲೊಲ್ಲರೀ ದೇಹವಿಂತಾಯ್ತು
ನಿಮಿಷವಿರಿಸದೆ ಕೊಂಡು ಪೋಗಿ ಸುಟ್ಟನೋಡ
ನಿಮಿಷಾರ್ಧದಿಂದಚಿರವೀ ದೇಹಮುಂ ನೋಡ
ಇಂತಪ್ಪ ಭವಮಾಲೆಯೊಳಗೆ ಬಂದೇಂ ದೇವ
ಇಂತಿಂತು ಸತ್ತು ಪುಟ್ಟುತ್ತಮಿರ್ದೆಂ ದೇವ
ಜನಿಯಿಸುವ ಕಷ್ಟವಿದು ಬರ್ದುಕುವ ನಿರೋಧವಿದು
ಅನುಗೆಟ್ಟು ಸಾವ ಸಂಕಟದೊಂದವಸೆ ಇದು

ದೇವಾ ಇದಕ್ಕೊಂದು ಸುಖ ಉಂಟೆ ಲೇಸುಂಟೆ
ದೇವಾ ಇದಕ್ಕೊಂದು ಗತಿಯುಂಟೆ ಮತಿಯುಂಟೆ
ಅನೇಕ ಸಂಸಾರವೇಕೆ ಕೇಳಿಲೆ ತಂದೆ
ನೀನು ಎನಗೊಡ್ಡಿದ ಮಹೇಂದ್ರಜಾಲಂ ಕಂಡೆ
ರಾಜಶೇಖರ ಶರ್ವ ಭವ ಭವಾನೀಧವ
ಈ ಜನ್ಮದೊಳಗೆನಗೆ ಕರುಣಿಸಭವಾ ಭವಾ
ಎಂಭತ್ತುನಾಲ್ಕು ಲಕ್ಷದ ಯೋನಿಯಂ ಕಳೆದು
ಶಂಭುವೇ ಎಂತಕ್ಕೆ ಬಂದೆನಾನಿದನರಿದು
ಮತ್ತೆಯುಂ ಕರುಣಿಸುವುದೆನಗೆ ಕರುಣಾಕರಾ
ಮತ್ತೆಯುಂ ಕೃಪೆ ಮಾಳ್ಪುದೆನಗೆ ಶಶಿಶೇಖರಾ
ಮುಂದುಗೆಟ್ಟಿಂ ಮೂರ್ಖನಾಗಿರ್ದೆನಿನ್ನೆಗಂ
ಇಂದುಧರ ನಿಮ್ಮನರಿಯದೆ ಕೆಟ್ಟೆನಿನ್ನೆಗಂ
ವ್ಯರ್ಥವಾಗುತ್ತಮಿರುತಿರ್ದೆ ನಾನೆಲೆ ದೇವ
ಸ್ವಾರ್ಥವಿದು ನಿನ್ನ ನೆನೆಯದೆ ಕೆಟ್ಟೆನೆಲೆ ದೇವ
ನಾಡಮಾತಂ ಬಳಸುತಿರೆ ಪೊಳ್ತು ಪೋಗುತಿದೆ
ಕೂಡೆ ತೊಳಲುತ್ತಮಿರೆ ಪೊಳ್ತು ಪೋಗುತ್ತಲಿದೆ
ಅಂಜುತ್ತ ಅಳಲುತ್ತಮಿರೆ ಪೊಳ್ತು ಪೋಗುತ್ತಿದೆ
ರಂಜಿಸುತ ಬೋಧಿಸುತಮಿರೆ ಪೊಳ್ತು ಪೋಗುತ್ತಿದೆ
ಕೋಪಿಸುತ ಕಾಮಿಸುತ ಮಿಗೆ ಪೊಳ್ತು ಪೋಗುತ್ತಿದೆ
ತಾಪಿಸುತ ತಲ್ಲಣಿಸುತಿರೆ ಪೊಳ್ತು ಪೋಗುತ್ತಿದೆ

ನಿತ್ಯ ಲಿಂಗಾರ್ಚನೆಯೊಳಿರಿಸೆನ್ನನೆಲೆ ದೇವ
ಸತ್ಯ ಶರಣರ ನಡುವೆ ಸಲಿಸೆನ್ನನೆಲೆ ದೇವ
ಊರ್ಧ್ವರೇತಂ ವಿರೂಪಾಕ್ಷನೆಂಬುದು ನಿನಗೆ
ಸದ್ಧರ್ಮವಯ್ಯಾ ಕರುಣಿಪುದು ಕುರುಣಿಪುದೆನಗೆ
ಪುಣ್ಯಪಾಪಂಗಳಿಲ್ಲದ ನಿರ್ಮಳಂ ನೀನೆ
ಗಣ್ಯರಹಿತಂ ಸಕಲದೇವ ಕುಲಗುರು ನೀನೆ
ಸಿರಿಬಡತನಗಳಿಲ್ಲದ ಸದರ್ಥನುಂ ನೀನೆ
ಹರಿಬೊಮ್ಮರೆಚ್ಚರದನಾದಿಲಿಂಗಂ ನೀನೆ

ದೇಹವುಳ್ಳಲ್ಲಿ ಕಾಮದೊಳಿರ್ಪುದರಿದಲ್ಲ
ದೇಹವುಳ್ಳಲ್ಲಿ ಕೋಪದೊಳಿರ್ಪುದರಿದಲ್ಲ



ಕಾಯವುಳ್ಳಲ್ಲಿ ನಿಃಕಾಮಿ ಯೆನಿಸುವುದರಿದು
ಕಾಯವುಳ್ಳಲ್ಲಿ ನಿರ್ಮಾಯನೆನಿಸುವುದರಿದು
ದೇಹವುಳ್ಳಲ್ಲಿ ಸದ್ಗುರುವ ಪಡೆಯುವುದರಿದು
ದೇಹವುಳ್ಳಲ್ಲಿ ನಿನ್ನಡಿಯನರ್ಚಿಪುದರಿದು
ಇಂತಿವೆಲ್ಲಂ ನೀನೇ ಕೊಟ್ಟಲ್ಲದಿಲ್ಲಯ್ಯ
ಎಂತಾದೊಡಂ ನಿನ್ನ ಕೃಪೆ ಇಲ್ಲದಿಲ್ಲಯ್ಯಾ
ನೆನೆವುತ್ತ ನೋಡುತ್ತ ಅರ್ಚಿಸುತ್ತಿರಿಸಯ್ಯಾ
ಅನುದಿನಂ ನಿಜಭಕ್ತಿ ವಿಕಳನಾಗಿರಿಸಯ್ಯಾ

ತನುವಿಂಗೆ ರೋಗವಂ ಮಾಡುವುದನಿಷ್ಟವದು
ತನುಪರಿತ್ಯಾಗದೊಳ್ಮರೆಯಿಸೆ ಕನಿಷ್ಟವದು
ದೇಹವಂ ಬಿಡುವಲ್ಲಿ ನೆನೆಯಿಪುದು ಮಧ್ಯಮಂ
ದೇಹಂಬೆರಸು ಕೊಂಡು ಪೋಪುದತ್ಯುತ್ತಮಂ
ಮಧ್ಯಮೋತ್ತಮಗಳೊಳುತ್ತಮವೆನೆಗೆ ಮಾಡಯ್ಯಾ !
ಸಾಧ್ಯವಲ್ಲದುದಿಲ್ಲ ನೋಡಿ ಕುರಣಿಪುದೆನಗೆ
ದೇವ ಕರುಣಿಗಳರಸ ದೇವದಾನಿಗಳರಸ
ದೇವ ಮಾನಿಗಳರಸ ದೇವ ಬೋಳೆಯರರಸ

ಪಂಪಾಪುರದ ನಿಧಿಯೆ ಪಂಪಾಪುರದ ಸುಧೆಯೆ
ಪಂಪಾಪುರದ ಗತಿಯೆ ಪಂಪಾಪುರದ ಮತಿಯೆ
ಪಂಪಾಪುರಾಂಬುನಿಧಿವರ್ಧನ ವಿಮಲಚಂದ್ರ
ಪಂಪಾಪುರಾಬ್ಜವಿಕಸಿತವಿಮಲದಿವಸೇಂದ್ರ
ಕರುಣಿಪುದು ಕರುಣಿಪುದು ವಿರೂಪಾಕ್ಷ
ಕರುಣದಿಂದೀಕ್ಷಿಪುದು ಪಂಪಾ ವಿರೂಪಾಕ್ಷ
ಪ್ರತಿಪಾಲಿಪುದು ಗುರುವೆ ಪಂಪಾ ವಿರೂಪಾಕ್ಷ
ಶೃತಿಗಗೋಚರನಪ್ಪ ಪಂಪಾ ವಿರೂಪಾಕ್ಷ
ಜಯ ಜಯ ವಿರೂಪಾಕ್ಷ ಜಯ ಜಯ ವಿರೂಪಾಕ್ಷ
ಜಯ ಜಯ ವಿರೂಪಾಕ್ಷ ಜಯ ಜಯ ನಮೋಸ್ತು ತೇ

## ಚಂಡೇಶ ಪಿಳ್ಳೆಯ ರಗಳೆ.

ಕಂದ॥ ಮಾತೆಪಿತರಹಿತನುಗ್ರನ ।
ಜಾತಂ ಚಂಡೇಶ ಪಿಳ್ಳೆಯಂ ಮೆರೆದಂ ಧಾ ॥
ತ್ರೀತಳದೊಳ್ಖ್ಯಾತೇಶಂ ।
ಖ್ಯಾತಿ ಮಿಗಲ್ಕೆಮ್ಮ ಹಂಪೆಯ ವಿರೂಪಾಕ್ಷಂ ॥

### ರಗಳೆ.

ಚೋಳದೇಶದೊಳೊಂದು ನಲ್ಲೂರದೊಪ್ಪುವುದು
ಫಾಳಲೋಚನನ ಭಕ್ತಿಯ ಭರಮನೊಪ್ಪುವುದು
ಅಲ್ಲಿ ಅಚ್ಯುತಭಟ್ಟನೆಂಬ ವಿಪ್ರಂ ನೋಡ
ವಲ್ಲಭಂ ಸಕಲ ಶಾಸ್ತ್ರಕ್ಕೆ ತಾನೇ ನೋಡ
ಅವರ್ಗರಸಿ ಸಾವಿತ್ರಿ ಎಂಬ ನಾಮದ ವನಿತೆ
ಅವರ ಸಂಪದವೆ ಪುರಕೆಲ್ಲ ಸಂಪದವನಿತೆ
ಧನದೊಳಂ ಧಾನ್ಯದೊಳಗಾವನುಂ ಸರಿ ಇಲ್ಲ
ಮನದಂತಿರಿಪ್ಪ ಬಂಧುಗಳಿಂ ಕೊರತೆ ಇಲ್ಲ

ಪುತ್ರನೋರ್ವನು ಇಲ್ಲದುಮ್ಮಳಂ ಪಿರಿದಾಗೆ
ಚಿತ್ತದೊಳ್ತನಯನಂ ಬೇಡಲುದ್ಯುತನಾಗೆ
ಅವ್ವೂರೊಳೆಲ್ಲರ್ಗೆ ಬೇಡಿತಂ ಕೊಡುತಿರ್ಪ
ದೇವನಣುಗಂ ಚಂಡಪಿಳ್ಳೆ ಪೆಸರಿಂದಿರ್ಪ
ಭೂಚರರ್ಬಯಸಿ ಬರಲಿಷ್ಟ ಸಿದ್ಧಿಯನೀವ
ಖೇಚರರ್ಬಯಸಿ ಬರೆ ಬೇಡಿತಂ ಮುನ್ನೀವ
ಗರುಡರುಂ ಗಂಧರ್ವರುಂ ಪೂಜಿಸುತ್ತಿರ್ಪ
ಸುರರಸುರರಾಗಳು ಬಯಸಿ ಪೂಜಿಸುತ್ತಿರ್ಪ
ಕಿನ್ನರರ್ಖೇಚರರ್ನೆರೆದರ್ಚಿಸುತ್ತಿರ್ಪ
ಪನ್ನಗಸಿದ್ಧರಾತುರದೊಳರ್ಚಿಸುತಿರ್ಪ
ಚಿನ್ನ ಡೋಳುಂಗೆಜ್ಜೆಗಾಲಿಂದಲೊಪ್ಪಿರ್ಪ
ಪನ್ನಗನೇರಿ ಸುತ್ತಿ ಮುತ್ತಿ ರಾಜಿಸುತಿರ್ಪ



ಆನೆಮೊಗದಿಂ ಕೆಯ್ಯಕೋಡಿಂದಮೊಪ್ಪಿರ್ಪ
ನಾನಾ ವಿಳಾಸದಿಂ ಮಿಗೆ ರಂಜಿಸುತ್ತಿರ್ಪ
ಹರಪುತ್ರನಲ್ಲಿಗೆಯ್ತಂದು ಹರುಷಂಬಟ್ಟು
ವರ ಪುತ್ರನಂ ಬೇಡಿ ಮಿಗೆ ಸಂತಸಂಬಟ್ಟು
ಇರೆ ವಿನಾಯಕನಲ್ಲಿ ಕರುಣದಿಂದಂ ಬಂದು
ವರ ವಿಪ್ರ ಕೊಟ್ಟೆನೇಳೋರ್ವ ಪುತ್ರನನೆಂದು
ಬೆಸಸೆ ಕಣ್ದೆತ್ತಂತೆ ನಿಳಯಕ್ಕೆ ನಡೆತಂದು
ಶಶಿಮುಖಿಗೆ ಪೇಳುತುಂ ಹಿಗ್ಗಿ ನಲಿಯುತ್ತಂದು
ಬಸಿರೊಳಗೆ ಮೂಡಿತ್ತು ಗರ್ಭ ವಿಪ್ರನ ಸತಿಗೆ
ಮುಸುಡೊಳಗೆ ಮೂಡಿತ್ತು ಕಾಂತಿಯಾ ಕಾಮಿನಿಗೆ
ಯೊಂದೆರಡು ಮಾಸಕ್ಕೆ ನವಮಾಸವಾಗುತಿರೆ
ಕಂದನಂ ಪಡೆದಳಾ ತಂದೆಯುತ್ಸವಿಸುತಿರೆ

ಪಡೆಯೆ ಸಂತಸದಿಂದೆ ಜಾತಕರ್ಮಂ ಮಾಡಿ
ಪ್ಪಡನೆ ಶರಣೆಂದೆನುತೆ ನಾಮಕರಣಂ ಮಾಡಿ
ಚಂಡೇಶಪಿಳ್ಳೆಯೆಂಬಿಭಮುಖನ ಪೆಸರಿಟ್ಟು
ತಂಡತಂಡದ ಸುಖನಿಕಾಯಮಂ ಮುಂತಿಟ್ಟು
ಇರೆ ಬೆಳೆದನೋರ್ವ ಹರುಷೋತ್ಸವಂ ನೆಲೆಗೊಳಿಸಿ
ಹರನೇಕ ನಿಷ್ಠೆ ಬಳೆವಂದದಿಂ ಘುಳುಘುಳಿಸಿ

ಬಳೆಯೆ ಬಳೆದುದು ದರಿದ್ರಂ ಬಾಲನೊಡನೊಡನೆ
ಹೊಳೆವ ಮಾಯೆಗೆ ಭಕ್ತಿ ಸೊಗಸದೆಂಬಂತೊಡನೆ
ಇಂದ್ರಿಯಕ್ಕಂ ಶಿವಂಗಂ ಸೇರದೆಂಬಂತೆ
ಚಂದ್ರಮುಂಗಂ ತಮಕ್ಕಂ ಸೇರದೆಂಬಂತೆ
ಕೆಲಸಾರುತೆಲ್ಲ ಸಂಪತ್ತು ತೊಲಗುತ್ತಮಿರೆ
ಹೊಲದಲೆಲ್ಲಂ ಹೊಲದೊಳಲ್ಲಿ ಪೋಗುತ್ತಮಿರೆ
ಮನೆಯೊಳೆಲ್ಲಂ ಮನೆಯೊಳುಂ ಮಾಯವಾಗುತಿರೆ
ನೆನೆದುದೆಲ್ಲಂ ನೆನಹಿನೊಳ್ಬಚ್ಚಿಯಾಗುತಿರೆ

ಇಂತಾಗೆ ಪುರಜನಂ ಕಂಡೆಲೆಲೆ ವಿಪ್ರರೇ
ಎಂತಪ್ಪ ಕಂದನಂ ಪಡೆದಿರೆಲೆ ಭಟ್ಟರೇ
ಆವುದು ಮುಹೂರ್ತವೀತಂ ಪುಟ್ಟಲಿಂತಾಯ್ತು

ಏನೇಳ್ವೆನೀತನಂ ನೋಡುವರ್ಗರಿದಾಯ್ತು
ಸಾಕಿಪರ್ಗೀತನಂ ಕೊಟ್ಟು ಕಳೆವುದೆ ಲೇಸು
ಬೇಗವಿನ್ನಿಂತು ಮಾಡಲ್ಕೆ ನಿಮಗಂ ಲೇಸು

ಎನಲೆನಗೆ ಹೊನ್ನುವುಂ ಚಿನ್ನವುಂ ಕಂದನೇ
ಎನಗೆನ್ನ ಬಂಧುವುಂ ಬಳಗವುಂ ಕಂದನೇ
ಎನಗೆನ್ನ ಸಂಪದಂ ಸುಖಕರಂ ಕಂದನೇ
ಎನಗೆನ್ನ ಜೀವನಮುಂ ಭಾವಮುಂ ಕಂದನೇ
ಮಗನಂ ಪೆರರ್ಗಿತ್ತು ಬಾಳ್ವ ಸಂಪದವೇಕೆ
ಮಗನುಳ್ಳ ಬಡತನಂ ಸಂಪದಕೆ ಸರಿ ಏಕೆ
ಎಂದೆನುತೆ ಮಗನುಮುಂ ಬಡತನಮುಮಂ ಬಿಡದೆ
ಅಂದಂದು ಜೀವಿಪ್ಪುದರಿದಾಗೆ ಧೃತಿಗೆಡದೆ
ಇರೆ ಪನ್ನೆರೇಳ್ವರಿಸವಾದುದಾ ಪುತ್ರಂಗೆ
ಪುರಹರನ ಪರಮ ಭಕ್ತ್ಯನ್ವಿತ ಚರಿತ್ರಂಗೆ

ಆಗ ಪುರಜನವೆಲ್ಲ ಕಂಡೆಲೇ ವಿಪ್ರರೇ
ಈಗಳೊಂದನುಮಾನಮಂ ಪೇಳ್ವೆವಪ್ಪರೇ
ನೆರೆವನೀಗಳ್ನಿಮ್ಮ ಮಗನೀತನಿಂದೆಮ್ಮ
ಕರುಗಳಂ ಕಾಯಲ್ಕೆ ಬಕುತಿ ತಪ್ಪದು ನಿಮ್ಮ
ಒಂದು ಕರುವಿಂಗೊರ್ಬಳಂ ಧಾನ್ಯಂಗೊಂಡು
ಬಂದು ಜೀವಿಪ್ಪುದೆನಲಂತದಂ ಕೈಕೊಂಡು

ಕಂದ ನೀಂ ಕರುಗಾಯ್ವ ಚೆಂದವಾಯ್ತೆನುತೋವಿ
ಕಂದನಂ ನೋಡುತಂ ಕಣ್ಣ ನೀರಂ ತೀವಿ
ಕರುಗಾವುದಕ್ಕೆ ಪಡೆದೆನೆ ನಿನ್ನನೆಲೆ ಮಗನೆ
ಹೆರೆಸೂಡಿದನ ಕರುಣವಿಂತು ಬಡತನ ಮಗನೆ
ಎಂದಿಂತು ಶೋಕಿಸುತೆ ಕರುಮರಿಗಳಂ ಕೂಡಿ
ಹಿಂದೆ ಕಿರಿದಂತರಂ ಬಂದು ಮಗನಂ ನೋಡಿ
ಮಗನೆ ಕರುಗಳನೊಯ್ದು ಸುಯಿಧಾನನಾಗಯ್ಯ
ಮಗನೆ ಎನಗಂ ಪುಟ್ಟಿ ಈ ವಿಧಿಯನುಂಡಯ್ಯ
ಬಡತನಂ ಬೇರೆ ಕರುಗೆಟ್ಟೊಡಂತದು ಬೇರೆ
ಕಡು ದೂರಮಂ ಪೋಗದಿರು ಕಂದ ನೀನಾರೆ



ಪುಲಿ ಕರಡಿಯುಂಟು ಪದುಳಂ ಪೋಗೆಲೆ ಕಂದ
ಅಲಸದಿರು ನಿನಗೆ ಇದಿರಾಗಿ ಬರ್ಪೆಂ ಕಂದ
ಪೋಗೆನುತೆ ತಿರುಗಿ ನೋಡುತ್ತೆ ಬಂದಂ ಮನೆಗೆ
ಏಗೆಯ್ವೆನಿಂತು ವಿಧಿ ಮಾಡಿತೆನುತುಂ ತನಗೆ
ಉಮ್ಮಳಂ ಪಿರಿದಾಗೆ ಸುಯ್ದು ಸಿಗ್ಗಾಗುತುಂ
ದುಮ್ಮಾನವೆಯ್ದೆ ಬಡತನವನಂದೆಣಿಸುತುಂ
ಇರೆ ಪಡುವ ಜಾವದೊಳ್ಕರುಗಳನಿತಂ ಕೊಂಡು
ಬರೆ ಪುತ್ರನಂ ನೋಡಿ ಪಿರಿದು ಹರುಷಂಗೊಂಡು
ಲೇಸಾಯ್ತು ಮಗನಿಂತು ಬುದ್ಧಿಗಲ್ತಂ ನೋಡ
ಲೇಸಿನ್ನು ಬಡತನಕ್ಕಂಜೆನಂಜೇಂ ನೋಡ

ಎಂದಿಂತು ನಾಲ್ಕೆರಡು ದಿವಸಂಗಳಂ ಕಳೆದು
ಸಂದ ಗೋವೃಂದದಾಡುಂಬೊಲನುಮಂ ತಿಳಿದು
ಕಲಿಚಂಡಪಿಳ್ಳೆ ನುಡಿದಂ ತಂದೆಗಂದಿರದೆ
ಎಲೆಯಯ್ಯ ಕರುಗಳಂ ಕಾವುದೇನೊಂದರಿದೆ
ಹಸುಗಳಂ ತಂದುಕೊಡು ಕಾದಿಪ್ಪೆನೆಂದೆನಲ್
ಒಸೆದು ಪುತ್ರನನಪ್ಪಿ ನಡೆತಂದು ಭೋಂಕೆನಲ್
ಅಲ್ಲಲ್ಲಿ ಹಸುಗಳಂ ಕೂಡಿಸುತ್ತಂ ಹೊಡೆದು
ಮೆಲ್ಲಮೆಲ್ಲನೆ ನೂರು ಜೀವದನವಂ ಪಡೆದು
ಹಸುವಿಂಗೆ ಒಂದೊಂದು ಕೊಳಗ ಧಾನ್ಯಂ ಬಂದು
ಹಸಿವೋಡಿತೆನ್ನ ಮಗನಿಂದೆನ್ನ ಮನೆಗೆಂದು
ತಂದು ಹಸುವಂ ಕೂಡಿಕೊಟ್ಟು ಮಗನಂ ಕಳುಪೆ
ಬಂದು ಹುಲ್ಲುಳ್ಳ ಹೊಲದೊಳ್ ಗೋವುಗಳ ಕಳುಪೆ

ಇರ್ದಿರ್ದು ಚಂಡಪಿಳ್ಳೆಯ ಬಲದ ಕಣ್ಮೆತ್ತೆ
ಇರ್ದಿರ್ದು ಗಗನದೊಳ್ ಬೆಳಗು ತನ್ನಂ ಮುತ್ತೆ
ಇಳಿತಂದನೋರ್ವಂ ಮಹೇಶ್ವರಂ ಭೂತಳಕೆ
ಬೆಳಬೆಳಗುತಂ ಚಂಡಪಿಳ್ಳೆಯಿರ್ದಾ ಹೊಲಕೆ
ಬಂದು ಹಸುಳೆಯ ಶಿರದ ಮೇಲೆ ಹಸ್ತವನಿಟ್ಟು
ಸಂದ ಪಂಚಾಕ್ಷರಿಯನುಪದೇಶವಂ ಕೊಟ್ಟು
ಮಗನೆ ಇದನಾರ್ಗೆಯುಂ ತೋರದಿರು ಬೀರದಿರು

ಮಗನೆ ಶಿವನಿಂದೆಯಂ ಕಾಣದಿರ್ಕೇಳದಿರು
ಎನೆ ದೇವ ಪಿತೃಮಾತೃವೊಳಗಾಗಿಯುಂ ಪೇಳಿ
ಎನಗೆ ಕಣ್ಣಾಂ ಗತಿಯು ನಿಮ್ಮಾಜ್ಞೆಯುಂ ಪೇಳಿ
ನೆಂದೊಡಂತಲ್ಲಿ ಮಕಲೊಳ್ ಲಿಂಗಮಂ ತೋರಿ
ಇಂದು ಈ ಪರಿಯರ್ಚಿಸೆಂದು ಸುಖಮಂ ಸಾರಿ
ಮಾಯಮಾದಂ ಮಹೇಶ್ವರನಲ್ಲಿ ಹೊಲದೊಳಗೆ

ಮಾಯೆ ಕಳಲುತ್ತಿರಲ್ಕಿತ್ತ ಬಾಲಕನೊಳಗೆ
ಜಾತಿಸೂತಕವಳಿದು ಜನನವಿರಹಿತನಾಗಿ
ನೂತನ ಶರೀರದಿಂ ಕೃತಕೃತ್ಯ ಮನನಾಗಿ
ಮುನ್ನಿನಂತಲ್ಲವಡಿಗಡಿಗೆ ಕಳೆಯೇರುತುಂ
ತನ್ನ ಮನದೊಳ್ ತಾನೆ ಹಿಗ್ಗಿ ಹೊರೆಯೇರುತುಂ

ಇರೆ ಜೀವದನವೆಲ್ಲ ಪುಲ್ಮೇಯೆ ಹರುಷದಿಂ
ಬರಲವಂ ಕೊಂಡು ಪುರದೊಳಯಿಂಕೆ ರಾಗದಿಂ
ಬಂದು ಸುಖದಿಂದಿರಲ್ ಹಸುಗಳೆಲ್ಲಂ ಮೆರೆಯೆ
ಎಂದಿನಂತಲ್ಲದಿಮ್ಮಡಿ ಪಾಲ್ಗಳಂ ಕರೆಯೆ
ಕಂಡು ಪುರಜನವೆಲ್ಲ ಪರಸಿ ಹರುಷಂದಳೆದು
ಚಂಡಪಿಳ್ಳೆಯರ್ಗುಡುಗೊರೆಯನಿತ್ತರ್ನಲಿದು
ಕೊಟ್ಟು ಸಂತೋಷದಿಂದಿರುತಿರಲನಂತರಂ

ಪುಟ್ಟಿದಂ ಪೂರ್ವಾಚಲಾಗ್ರದೊಳ್ ರವಿಕರಂ
ಬೆಳಗಾಗೆ ಗೋ ನಿಕರಮಂ ಕೊಂಡು ಪೊರಮಟ್ಟು
ಕಳೆದು ಪುರದಿಂ ಬಂದು ಹರುಷಮಂ ಮುಂದಿಟ್ಟು
ಗೋವುಗಳನಲ್ಲಲ್ಲಿ ಮೇಯಲ್ಕೆ ಬೆಸನಿತ್ತು
ದೇವಂ ತನಗೆ ಕೊಟ್ಟ ಶಿವಮಂತ್ರಮಂ ಪೊತ್ತು

ಆಹಾ ಎನಗೆ ನೀನೆ ಕರುಣಿಸಿದ ತಾಣವಿದು
ಆಹಾ ಮಹೇಶ್ವರಂ ನಿಂದಿರ್ದ ತಾಣವಿದು
ಎನುತಲ್ಲಿ ಪೊರಳುತುಂ ಕುಂಬಿಕ್ಕಿ ಕುಣಿವುತುಂ
ಮನದೊಳಗೆ ಗುರುಪದವನಜಬಿತ್ತಿ ತಣಿವುತುಂ
ಜನನಮರಣಂಗಳಂ ರೂಹುಗೆಡಿಸಿದ ಗುರುವೆ

# ವಚನಶಾಸ್ತ್ರಸಾರ ಭಾಗ ೨.

## ( ವೀರಶೈವ ಸಿದ್ಧಾಂತ. )

ರಾ॥ ಸಾ॥ ಫ. ಗು. ಹಳಕಟ್ಟಿಯವರು ರಚಿಸಿದ ಈ ಹೊಸ ಗ್ರಂಥದಲ್ಲಿ ವೀರಶೈವ ಶಿವಶರಣರ ಷಟ್‌ಸ್ಥಲ ಸಿದ್ಧಾಂತದ ತತ್ವಗಳು ಸವಿಸ್ತಾರವಾಗಿ ವಚನಗಳ ಮೂಲಕವೇ ನಿರೂಪಿಸಲ್ಪಟ್ಟಿರುತ್ತವೆ.

ಇದರಲ್ಲಿ ಸ್ಥಲ ವಿಭೇದಗಳು, ಏಕೋತ್ತರಶತಸ್ಥಲದ ವಿವೇಚನೆಗಳು, ಶರಣಸತಿಗೆ, ಸಕೀಲಗಳು, ೩೬ ತತ್ವಗಳು, ಷಡಧ್ವಗಳು, ಸಾದಾಖ್ಯಗಳು ಮೊದಲಾದ ಮಹತ್ವದ ವಿಷಯಗಳು ವಚನಗಳ ಮೂಲಕ ಸವಿಸ್ತಾರವಾಗಿ ವಿವೇಚಿಸಲ್ಪಟ್ಟವೆ. ವೀರಶೈವ ಮತತತ್ವಗಳನ್ನು ತಿಳಿಯಲು ಇದು ಅತ್ಯಂತ ಸಹಾಯಕಾರಿಯಾದ ಗ್ರಂಥವಾಗಿದೆ.

ಪುಟಗಳ ಸಂಖ್ಯೆ ೬೩೨. **ಬೆಲೆ ರೂ. ೪—೮—೦**

ಪುಸ್ತಕ ದೊರೆಯುವ ಸ್ಥಳ:—

**ಹಿತಚಿಂತಕ ಪ್ರಿಂಟಿಂಗ ಪ್ರೆಸ್**

**ವಿಜಾಪುರ.**

ಇದನ್ನು ವಿಜಾಪುರದಲ್ಲಿ ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ಉಪಲೀಬುರುಜ ಓಣಿಯಲ್ಲಿರುವ ತಮ್ಮ ೧೬೩೦ (ಅ) ಮನೆಯಲ್ಲಿ ಪ್ರಸಿದ್ಧಿಸಿದರು.

R. N. B. 2554

ಶ್ರೀ

# ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೪ ]    ನವ್ಹೆಂಬರ ೧೯೩೯.    [ ಸಂಚಿಕೆ ೨

## ವಿಷಯಾನುಕ್ರಮಣಿಕೆ.


| ವಿಷಯಗಳು. | ಲೇಖಕರು. | ಪುಟ. |
|---|---|---|
| ೧ ಗಾಯನಕಲೆ | — | ೫೧ |
| ೨ ತೆಲಗು ಬಸವಪುರಾಣದ ಮುನ್ನುಡಿ | ಶ್ರೀ. ಎಸ್. ಹಂಪಯ್ಯ | ೫೫ |
| ೩ ಶಿವಶರಣರ ಸ್ಥಾನಗಳು | ರಾ. ಸಾ ಪಿ. ಜಿ ಹಳಕಟ್ಟಿ | ೬೫ |
| ೪ ವೀರಶೈವರ ಲಿಂಗವೂ ಲಿಂಗಪೂಜೆಯೂ | ಶ್ರೀ. ಬಸವಪ್ಪ ಚೆನ್ನಪ್ಪ ಪಟ್ಟೀದ | ೭೩ |
| ೫ ಪದಮಂತ್ರ ಗೋಪ್ಯ | — | ೮೯ |
| ೬ ಕೊಡಗು ದೇಶದ ನಿಜವಾದ ಇತಿಹಾಸವು | ಶ್ರೀ. ಎಸ್. ನ್ಹಿ. ಹಂಜಿ | ೯೨ |
| ೭ ಶ್ರೀ ಬಸವೇಶ್ವರನ ಕಾಲ ನಿರ್ಣಯ | ಶ್ರೀಮಾನ್ ಗೋವಿಂದ ಪೈ | ೯೭ |
| ೮ ಹರಿಹರನ ರಗಳೆ ಭಾಗ ೭ | — | ೭೭ |

# ಶಿವಾನುಭವ.

ವರ್ಷ ೧೪] ನೊವೆಂಬರ ೧೯೩೯ [ಸಂಚಿಕೆ ೨

## ಗಾಯನ ಕಲೆ.

ತಾರೀಖು ೨೮-೯-೧೯೩೯ನೆಯ ದಿವಸ ವಿಜಾಪುರದಲ್ಲಿ ನಡೆದ ಆನೇ ವೀರಶೈವ ಜಿಲ್ಲಾ ಶಿಕ್ಷಣ ಪರಿಷತ್ತಿನಲ್ಲಿ ವಿದ್ಯಾವಾಚಸ್ಪತಿ — ಶ್ರೀ. ಶಂಭುಲಿಂಗ ಶಿವಾಚಾರ್ಯರು ಹಿರೇಮಠ ವಿಜಾಪುರ ಇವರು ಮಾಡಿದ ಭಾಷಣದ ಸಾರಾಂಶವು ಇಲ್ಲಿ ಕೊಡಲ್ಪಟ್ಟಿದೆ. — **ಸಂಪಾದಕ.**

ಉಪನಿಷತ್ಕಾರರು ಹೇಳುವಂತೆ ವಿದ್ಯೆಯು ಪರಾ ಹಾಗು ಅಪರಾ ಎಂಬುದಾಗಿ ಎರಡು ವಿಧವಾಗಿರುವುದು. 'ಯಯಾ ತದಕ್ಷರಮಧಿಗಮ್ಯತೆ ಸಾ ಪರಾ' ಎಂಬಂತೆ ಅಧ್ಯಾತ್ಮ ವಿದ್ಯೆಯೇ ಪರಾ ರೂಪವಾದುದು. ಮಿಕ್ಕ ಲೌಕಿಕ ವಿದ್ಯೆಗಳು ಅಪರಾ ರೂಪವಾದುವು. ಪರಾ ವಿದ್ಯೆಯ ಪ್ರಾಪ್ತಿಗೆ ಅಪರಾ ವಿದ್ಯೆಗಳು ಸಾಧನೀಭೂತಗಳಾಗಿವೆ. ಸಂಗೀತವು ಶಾಸ್ತ್ರಬದ್ಧವಾಗಿರುವುದರಿಂದ ಅದೂ ಒಂದು ವಿದ್ಯೆಯೆಂದೇ ಹೇಳಲ್ಪಡುವುದು. ಸಂಗೀತದ ಮೂಲ ಸ್ವರೂಪವು ನಾದವು. 'ನಾದರೂಪಃ ಶಿವಃ ಪ್ರೋಕ್ತೋ ಬಿಂದುಃ ಶಕ್ತಿರುದಾಹೃತಾ' ಎಂಬ ಆಗಮ ವಚನಾನುಸಾರವಾಗಿ ನಾದವೇ ಪರಮೇಶ್ವರನು. ಸೃಷ್ಟಿಯ ಆರಂಭದಲ್ಲಿ 'ಅಹಂ ಬಹುಸ್ಯಾಂ ಪ್ರಜಾಯೇಯ' ಎಂಬ ಪರಬ್ರಹ್ಮದ ಸ್ಫುರಣವೇ ನಾದಮಯ ಶಬ್ದವು. ಅದು ಕಾರ್ಯರೂಪವಾದ ಸಮಸ್ತ ಭೂತಭೌತಿಕ ಪ್ರಪಂಚದಲ್ಲಿ ವ್ಯಾಪ್ತವಾಗಿರುತ್ತದೆ. ಈ ದೇಹದಲ್ಲಿ ಸೂಕ್ಷ್ಮರೂಪದಿಂದಿರುವ ಆ ನಾದವು ಅಗ್ನಿ ಹಾಗು ಪ್ರಾಣ ಇವೆರಡರ ಸಂಯೋಗದಿಂದ ಸ್ಥೂಲರೂಪವಾಗಿ ಪರಿಣಮಿಸುವದು. ಈಗ ನನ್ನಿಂದ ಉಚ್ಚರಿಸಲ್ಪಡುವ ಪ್ರತಿಯೊಂದು ವರ್ಣ

ದಲ್ಲಿಯೂ ಆ ನಾದವು ಸ್ಥೂಲರೂಪದಿಂದ ಶ್ರವಣಗೋಚರವಾಗುವದು. ಸೂಕ್ಷ್ಮರೂಪವಾದ ನಾದವು ಮೂಲಾಧಾರವೆಂಬ ಆಧಾರ ಚಕ್ರದಲ್ಲಿರುವುದು. ಪರನಾದವೆಂದು ಹೇಳಲ್ಪಡುವ ಆ ಸೂಕ್ಷ್ಮರೂಪನಾದವನ್ನು ಯೋಗಿಗಳು ಅಭ್ಯಾಸಬಲದಿಂದ ಅನುಭವಗಮ್ಯವಾಗಿ ಮಾಡಿಕೊಳ್ಳುವರು. ಆ ನಾದಾನುಸಂಧಾನವು ಪದ್ಮಾಸನ ಶಾಂಭವೀ ಮುದ್ರೆಗಳೊಡನೆ ಅಭ್ಯಾಸ ಮಾಡಲ್ಪಡುವದಾದರೆ ದಿನಕ್ರಮೇಣ ಅನಾಹತದಲ್ಲಿ ದಶವಿಧವಾಗಿ ಅಭಿವ್ಯಕ್ತವಾಗುವುದು. ಆಹತ (ತಾಡನ) ವಿಲ್ಲದೆ ಹುಟ್ಟುವುದರಿಂದ ಅದು ಅನಾಹತ ನಾದವೆನಿಸುವುದು. ಮೂಲಾಧಾರದಲ್ಲಿರುವ ಕುಂಡಲಿನೀ ಶಕ್ತಿಯ ಜಾಗರಣವೇ ನಾದಾಭಿವ್ಯಕ್ತಿಯು. ಅತ್ಯಂತ ಸೂಕ್ಷ್ಮವಾದ ಪರಾವಾಕ್ಕು ಸ್ಥೂಲರೂಪವಾಗಿ ಪರಿಣಮಿಸಿದುದೇ ಈ ವೈಖರೀವಾಕ್ಕು. ಹಾಗೆ ಸೂಕ್ಷ್ಮನಾದವು ಕೋಮಲ ತೀವ್ರಾದಿ ಸ್ವರಭೇದಪೂರ್ವಕ ಸ್ಥೂಲರೂಪದಿಂದ ಪರಿಣಮಿಸಿದುದೇ ಸಂಗೀತವು. ನಾದರೂಪವಾದ ಬ್ರಹ್ಮವು ಮನುಷ್ಯಾದಿ ಪ್ರಾಣಿಗಳಲ್ಲಿ ಅಭಿವ್ಯಕ್ತವಾಗುವಂತೆ ತಂತಿ ತೊಗಲು ಮುಂತಾದವುಗಳಿಂದ ಮಾಡಲ್ಪಟ್ಟ ವಾದ್ಯಗಳಲ್ಲಿಯೂ ಗಂಟೆ ಜಾಗುಟೆಗಳಲ್ಲಿಯೂ ಯಾಂತ್ರಿಕ ವಸ್ತುಗಳಲ್ಲಿಯೂ ವ್ಯಕ್ತವಾಗಿ ಗೋಚರಿಸುತ್ತಿರುವುದನ್ನು ಭಾವಿಸಿದರೆ ನಾದರೂಪ ಪರಮೇಶ್ವರನು ಜಡಾಜಡಾತ್ಮಕವಾದ ಸರ್ವ ವಸ್ತುಗಳಲ್ಲಿಯೂ ಇರುವನೆಂಬುದು ಮನವರಿಕೆಯಾಗುವುದು. ಮೋಟಾರುಗಳ ಹಾರ್ನುಗಳಾದರೂ ಪಟ್ಟೆ ಪಂಚವು ಸ್ವರಾನುಗುಣವಾಗಿರುವುವು. ನಡೆಯಿಸಲ್ಪಟ್ಟ ಇಂಜನು ಒಮ್ಮೆಲೆ ಅಪಸ್ವರವಾಗಿ ಕೇಳಿಬಂದರೆ ಅದರ ಚಾಲಕನು ಕೂಡಲೆ ಅದರ ನ್ಯೂನತೆಯನ್ನು ಕಂಡು ಹಿಡಿಯಲು ಯತ್ನಿಸುತ್ತಾನೆ. ನಮ್ಮ ಕಂಠನಾದವೂ ಕುಗ್ಗಿ ಕೈಸನ್ನೆ ಕಣ್ಸನ್ನೆ ಆರಂಭವಾದರೆ ಬಳಿಯಲ್ಲಿದ್ದ ಜನರು ಗಾಬರಿಗೊಂಡು ವೈದ್ಯರನ್ನು ಬರಮಾಡಿಕೊಳ್ಳುವ ಸಂಭವವಿದೆ.

ನೈಸರ್ಗಿಕವಾದ ಆಂತರ್ಯ ನಾದವು ಮನುಷ್ಯನ ಪ್ರಯತ್ನವಿಶೇಷದಿಂದ ಸ್ಥೂಲರೂಪವನ್ನು ಹೊಂದಿ ತೀವ್ರ ಕೋಮಲಾದಿ ಭೇದಗಳುಳ್ಳದಾಗಿ ಅಭಿವ್ಯಕ್ತವಾದುದೇ ಸ ರಿ ಗ ಮ ಪ ಧ ನಿ ಎಂಬ ಸಪ್ತ ವರ್ಣಗಳ ಮೂಲಕ ಬೇರೆಬೇರೆ ರಾಗಗಳಿಂದ ಸರ್ವರಿಗೂ ಆನಂದವನ್ನುಂಟುಮಾಡುವುದು. ನಾದ ಬ್ರಹ್ಮದ ಮಹಾತ್ಮ್ಯವು ಅಪಾರವಾದುದು. ಸಂಗೀತವರ್ಣಕಾರನು ಹೀಗೆ ಹೇಳಿದ್ದಾನೆ.—



ನಾದಾಬ್ಧೇಸ್ತು ಪರಂಪಾರಂ ನ ಜಾನಾತಿ ಸರಸ್ವತೀ ।
ಅದ್ಯಾಪಿ ಮಜ್ಜನಭಯಾತ್ ತುಂಬಂ ವಹತಿ ವಕ್ಷಸಿ ॥

ವಿದ್ಯಾ ಮೂರ್ತಿಯಾದ ಸರಸ್ವತಿಯು ನಾದರೂಪ ಸಮುದ್ರದಲ್ಲಿ ತಾನು ಮುಳುಗಿ ಹೋಗಬಹುದೆಂಬ ಭೀತಿಯಿಂದೇ ವಕ್ಷಸ್ಥಲದಲ್ಲಿ ಸೋರೆಕಾಯಿಯನ್ನು ಧರಿಸಿರುವಳು. ಮೂಲತಃ ಪರಮಾತ್ಮ ಸ್ವರೂಪವೇ ಆದ ನಾದವು ಯಾರಿಗೆ ತಾನೇ ಇಷ್ಟವಾದುದಲ್ಲ? ಬ್ರಹ್ಮಾದಿ ದೇವತೆಗಳೂ ನಾರದಾದಿ ಮುನಿಗಳೂ ಸಂಗೀತಪ್ರಿಯರಲ್ಲವೆ? ಯಕ್ಷಗಾನ ಗಂಧರ್ವಗಾನವೆಂಬ ಈ ಭೇದ ಪರಂಪರೆಯಿಂದ ಯಕ್ಷ ಸಮಾಜವೂ ಗಂಧರ್ವ ಸಮಾಜವೂ ಗಾನ ವಿದ್ಯೆಯಲ್ಲಿ ಉತ್ತಮವಾದ ಪ್ರಗತಿಯನ್ನು ಹೊಂದಿದ್ದಾರೆಂದು ಹೇಳಬಹುದಾಗಿದೆ. ಗಾನ ವಿದ್ಯೆಯ ಪುರಸ್ಕಾರಕ್ಕೆ ಸಾಮವೇದವು ಪ್ರಮಾಣಭೂತವಾಗಿದೆ. ರಾಜಸೂಯ ಯಜ್ಞದಲ್ಲಿ ದೀಕ್ಷಿತನಾದ ಸಾರ್ವಭೌಮನು ವೀಣಾ ನಾದವನ್ನು ಶ್ರವಣಮಾಡಬೇಕೆಂಬುದಾಗಿ ಕೃಷ್ಣ ಯಜುರ್ವೇದಾಂತರ್ಗತವಾದ ತೈತ್ತಿರೀ ಬ್ರಾಹ್ಮಣದಲ್ಲಿ ವಿಧಿಸಲ್ಪಟ್ಟಿದೆ. ಲೌಕಿಕರಿಂದಲೂ ಸಂಗೀತವು ಆದರಿಸಲ್ಪಡುವುದೆಂಬ ವಿಷಯದಲ್ಲಿ ಈಗ ಸರ್ವತ್ರ ಪ್ರಚಲಿತವಾದ ಚಲಚ್ಚಿತ್ರ ಪ್ರಚಾರವೇ ಪ್ರಮಾಣವಾಗಿದೆ. ಹೆಚ್ಚು ಮಾತೇಕೆ? ಶಿಶುಗಳೂ, ಪಶುಗಳೂ, ಫಣಿಗಳೂ ಕೂಡ ಗಾನಲುಬ್ಧವಾಗಿವೆ. ಗೀತ, ವಾದ್ಯ, ನೃತ್ಯ ಸಮ್ಮಿಲಿತ ಸಂಗೀತವು ಜಗತ್ತಿನಲ್ಲಿ ಸರ್ವರಿಗೂ ಇಷ್ಟವಾಗಿದೆ. ಶೃಂಗಾರಾದಿ ನವರಸಗಳು ಉದ್ಬುದ್ಧವಾಗುವುದಕ್ಕೆ ಸಂಗೀತದ ಅವಶ್ಯಕತೆಯುಂಟು. ಮನುಷ್ಯನ ಹೃದ್ಗತವಾದ ಭಾವವನ್ನು ಸ್ಪಷ್ಟಗೊಳಿಸುವ ಸಾಮರ್ಥ್ಯವು ಸಂಗೀತದಲ್ಲಿದೆ. ಮನುಷ್ಯನ ಭಾವಭಿನ್ನತೆಯಿಂದ ಗಾನದ ಪರಿಣಾಮವಾದರೂ ಭಿನ್ನವಾಗುವುದು. ಯುದ್ಧದಲ್ಲಿ ವೀರರಸವನ್ನು ಹೆಚ್ಚಿಸುವ ಗೀತವಾದ್ಯಗಳಿಗೂ ವೀರಶೈವರಲ್ಲಿ ಲಿಂಗೈಕ್ಯರಾದವರನ್ನು ಸಮಾಧಿ ಸ್ಥಳಕ್ಕೊಯ್ಯುವಾಗ ಬಾರಿಸಲ್ಪಡುತ್ತಿರುವ ಸನಾದಿ ಸಮ್ಮೇಳನಗಳ ಒಂದು ಬಗೆಯ ಸಪ್ಪಳಕ್ಕೂ ಎಷ್ಟೋ ವ್ಯಾತ್ಯಾಸವಿಲ್ಲವೇ? ನಾದಬ್ರಹ್ಮದ ಪ್ರಭಾವ ವಿಷಯದಲ್ಲಿ ಮತ್ತೊಂದು ಉದಾಹರಣೆಯನ್ನು ತೋರಿಸುವೆನು. ಶ್ರೀಕೃಷ್ಣನು ನಾದಬ್ರಹ್ಮದ ಅಪರಾವತಾರನೆಂದು ಹೇಳಲ್ಪಡುವನು. ಅವನ ಮುರಲೀರವವು ಪಶುಪಕ್ಷಿಗಳನ್ನೂ, ಪಾಮರರನ್ನೂ, ಪಂಡಿತರನ್ನೂ, ಪರಮ ಯೋಗಿಗಳನ್ನೂ ಕೂಡ ಮುಗ್ಧರನ್ನಾಗಿ ಮಾಡುವ

ಅಲೌಕಿಕ ಸಾಮರ್ಥ್ಯವುಳ್ಳುದೆಂಬುದು ಸುಪ್ರಸಿದ್ಧವು. ಒಂದು ದಿವಸ ಆ ಕೃಷ್ಣನಲ್ಲಿ ಅನನ್ಯಭಕ್ತಿಯುಳ್ಳ ಓರ್ವ ಗೋಪಿಯು ತನ್ನ ಮನೆಯಲ್ಲಿ ಅಡಿಗೆ ಮಾಡತೊಡಗಿದ್ದಳು. ಅಷ್ಟರಲ್ಲಿಯೇ ಆ ಶ್ಯಾಮಸುಂದರನ ಮುರಲಿಯ ಮಂಜುಳಧ್ವನಿಯು ಶ್ರವಣಗೋಚರವಾಗಿ ಅದರಿಂದ ಅವಳ ಚಿತ್ತವು ಆವರಿಸಲ್ಪಟ್ಟಾಕ್ಷಣವೇ ಆ ಮುರಹರನ ದಿವ್ಯ ಮೂರ್ತಿಯೂ ಧ್ವನಿನೇತ್ರದೆದುರಿಗೆ ಬಂದು ನಿಂತಿತು. ಇತ್ತ ರಸವರ್ಷಿಣಿಯಾದ ಆ ಮುರಲಿಯ ಧ್ವನಿಯು ರಸದ ಮಳೆಗರೆದು ಒಲೆಯೊಳಗಿದ್ದ ಉರಿಗಟ್ಟಿಗೆಗಳ ಅಂತಸ್ಥವನ್ನು ಕೂಡ ತೋಯಿಸಿದುದರಿಂದ ಅವುಗಳಿಂದಲೂ ರಸವು ಒಸರಲಾರಂಭಿಸಿತು; ಬೆಂಕಿಯು ಆರಿತು; ಕೃಷ್ಣನಲ್ಲಿ ಪರಾನುರಕ್ತಿಯುಳ್ಳ ಆ ಪರಮಭಾಗ್ಯವತಿಯ ಬಾಯಿಂದ ಹೊರಹೊಮ್ಮಿದ ನುಡಿಗಳು ಹೀಗಿವೆ —

> ಮುರಹರ! ರನ್ಧನ ಸಮಯೇ ಮಾ ಕುರು ಮುರಲೀರವಂ ಮಧುರಮ್ ।
> ನೀರಸಮೇಧೋರಸತಾಂ ಕೃಶಾನುರಪ್ಯೇತಿ ಕೃಶತರತಾಮ್ ॥

ಎಲೈ ಮುರಾರಿಯೆ! ಅಡಿಗೆಮಾಡುವ ವೇಳೆಯಲ್ಲಾದರೂ ದಯವಿಟ್ಟು ಮುರಲಿಯ ಮಧುರ ತಾನತರಂಗಗಳನ್ನು ಹಬ್ಬಿಸಬೇಡ. ಇಗೋ ನೋಡು. ನಿನ್ನ ಕೊಳಲಿನ ದನಿಯಿಂದ ಈ ನನ್ನ ಒಲೆಯ ಒಣಗಟ್ಟಿಗೆಗಳು ಕೂಡ ರಸಯುಕ್ತಗಳಾಗಿವೆ; ಒಲೆಯೊಳಗಿನ ಬೆಂಕಿಯೂ ಆರುತ್ತಲಿದೆ.

ನೋಡಿದಿರಾ! ನಾದಶ್ರವಣದಿಂದ ಮನೋವೃತ್ತಿಯು ನಾದಬ್ರಹ್ಮದಲ್ಲಿ ಬೆರೆಯುವುದರ ಪರಿಯನ್ನು! ಇನ್ನು ಗಾನಾಸಕ್ತರು ಕೆಟ್ಟ ನಡತೆಯುಳ್ಳವರಾಗುವರೆಂದು ಕೆಲವರ ತಿಳಿವಳಿಕೆ ಇರಬಹುದು. ಆದರೆ ತಿಲಮಾತ್ರವೂ ಗಾನ ಸಂಸ್ಕಾರವಿಲ್ಲದ ಎಷ್ಟೋ ಜನರು ದುರಾಚಾರಿಗಳಿರುವುದಿಲ್ಲವೆ? ಚಿಕ್ಕವರಿರಲಿ, ದೊಡ್ಡವರಿರಲಿ, ಅವರ ಮನೋವಿಕೃತಿಗೆ ಗಾನವು ಕಾರಣವಲ್ಲ. ಆ ಗಾನದೊಡನೆ ಬೆರೆದು ಶ್ರವಣಗೋಚರವಾಗುವ ಶಬ್ದಗಳೇ ಕಾರಣಗಳು. ಬೆಲೆವೆಣ್ಣುಗಳಾಗಲಿ ನಟರಾಗಲಿ ಹಾಡುವ ಶೃಂಗಾರರಸಪ್ರಧಾನಗಳಾದ ಪದ್ಯಗಳಲ್ಲಿಯೂ ಸಾಧುಸಂತರ ಶಾಂತಿರಸಪ್ರಧಾನಾತ್ಮಕ ಪದ್ಯಗಳಲ್ಲಿಯೂ ಅಡಕವಾಗಿರುವ ರಾಗರಚನೆಯಲ್ಲಿ ವ್ಯತ್ಯಾ



ಸವಿಲ್ಲದಿದ್ದರೂ ಆ ಆ ಪದ್ಯಗಳ ಬೇರೆ ಬೇರೆ ಭಾವಬೋಧಕ ಶಬ್ದಗಳಲ್ಲಿ ಮಾತ್ರ ವೈಚಿತ್ರ್ಯವಿರುವುದು. ಇದರಿಂದ ಮನೋವಿಕೃತಿಗೂ ಮನಃಶಾಂತಿಗೂ ಶಬ್ದಗಳೇ ಕಾರಣಗಳು; ಗಾನವಾದರೋ ರೋಗಿಗೂ ಭೋಗಿಗೂ ಯೋಗಿಗೂ ಕೂಡ ಶ್ರವಣಮಾತ್ರದಿಂದ ಶಾಂತಿಯನ್ನೇ ಬೀರುವುದಲ್ಲದೆ ಮನೋವಿಕೃತಿಯನ್ನುಂಟು ಮಾಡುವುದಿಲ್ಲ. ಆದ್ದರಿಂದ ಶಬ್ದಾಪರಾಧವೆಂಬ ಮಡಕೆಯನ್ನು ನಿರಪರಾಧಿಯಾದ ಗಾನದ ತಲೆಯ ಮೇಲೆ ಒಡೆಯಬೇಕೆಂಬ ಯೋಚನೆ ಸರಿಯಾದುದಲ್ಲ.

ಶಬ್ದೋಚ್ಚಾರದಲ್ಲಿ ಬೆರೆದ ಗಾನವು ಗುಡೌಷಧ ನ್ಯಾಯದಂತೆ ಕಿವಿಗೆ ಬಿದ್ದಾಕ್ಷಣವೇ ಮೊದಲು ಮನಸ್ಸನ್ನು ಆಕರ್ಷಿಸಿ ಏಕಾಗ್ರಗೊಳಿಸಿ ಯಾವ ವಿಧ ಶಬ್ದಗಳನ್ನಾದರೂ ಆ ಮನಸ್ಸಿನಲ್ಲಿ ಮೂಡುವಂತೆ ಮಾಡುವ ಸಾಮರ್ಥ್ಯವುಳ್ಳುದಾಗಿದೆ. ಅದು ಕಾರಣವೇ ಭರತಖಂಡದಲ್ಲಿ ಆ ಆ ಕಾಲಕ್ಕೆ ಬೇರೆ ಬೇರೆ ದೇಶಗಳಲ್ಲಿ ಮೈದೋರಿದ ಶರಣರು ಸಂತರು ಮಹಾತ್ಮರು ನೀತಿ ಭಕ್ತಿ ಜ್ಞಾನ ಬೋಧಕಗಳಾದ ಸ್ವಾನುಭವವಚನಗಳನ್ನು ರಾಗ ರಚನೆಯಿಂದ ಬೇರೆಬೇರೆ ಭಾಷೆಗಳಲ್ಲಿ ಹಾಡಿದ್ದಾರೆ. ಶ್ರೀಕೃಷ್ಣನು ನಾದಬ್ರಹ್ಮಮೂರ್ತಿಯಲ್ಲವೇ? ಅವನ ವಚನನಿಚಯವು ಗೀತೆಯೆಂದು ಹೇಳಲ್ಪಡುವುದರ ಆಶಯವೇನು? ಅದು ತಾಳಮೆಟ್ಟನ್ನನುಸರಿಸಿ ಹಾಡಲ್ಪಡುವುದಿಲ್ಲವಾದರೂ ಪಾರಾಯಣ ಪ್ರತಿಗಳು ಅದನ್ನು ನಾದಮಯ ಕಂಠಸ್ವರದಿಂದೇ ಪಠಿಸುತ್ತಿರುವರು. ಹಾಗೆ ಶಿವಶರಣರ ವಚನನಿಚಯವನ್ನಾದರೂ ನಾದಮಯ ಕಂಠಸ್ವರದಿಂದ ಪಠಿಸಲು ಯಾವ ಅಭ್ಯಂತರವೂ ಇಲ್ಲ. ಸುಪ್ರಸಿದ್ಧ ಕವಿಗಳೂ ಮಹಾತ್ಮರೂ ಆದ ಶ್ರೀಹರಿಹರ ಮರಿತೋಂಟದಾರ್ಯರು ಮುಂತಾದವರು ಶ್ರೀಬಸವೇಶ್ವರಾದಿ ಶಿವಶರಣರ ವಚನಗಳನ್ನು ಪುರಾತನ ಗೀತೆಗಳೆಂದು ಕೊಂಡಾಡಿದ್ದಾರೆ. ಶ್ರೀಮರಿತೋಂಟದಾರ್ಯ ಪ್ರಣೀತವಾದ ನಿರಂಜನ ಶತಕದ ಉಪಕ್ರಮದಲ್ಲಿ 'ವರ ಬಸವೇಶ ಚೆನ್ನಬಸವೇಶ ಮಹಾಪ್ರಭುಮುಂತೆನಿಪ್ಪ ಬಂಧುರ ಶರಣೌಘಮೊಲ್ದು ಮಿಗೆ ಪಾಡಿದ ಗೀತೆಯ ಸಾರಮಂ' ಎಂಬುದಾಗಿಯೂ ಉಪಸಂಹಾರದಲ್ಲಿ 'ಇದು ಶಿವತತ್ವಭಾಷಿತ ಪುರಾತನ ಗೀತರಹಸ್ಯಾರ್ಥವಿಂತಿದು' ಎಂಬುದಾಗಿಯೂ ಸ್ಫುಟವಾಗಿರುವುದು. ಇದರಿಂದ ಶಿವಶರಣರ ವಚನಗಳನ್ನು ಗಾನರಸದೊಡನೆ ಪಠಿಸುವುದರಿಂದೇ ಅವುಗಳಿಗೆ ಗೀತೆಗಳೆಂಬ ಹೆಸರು ಸಾರ್ಥಕವಾಗುವ

ಗ್ರಮುಮುನನೇಕೋನ್ಮಂಗತುಸಂತಲ್ಲಿ-ಭ್ರಮಲೇಕಪಾಡವಿನಪ್ರಜ್ಞಚೀ
ನಂತ
ಗುರುಂಡು ಲಿಂಗಂಬನಿಗುರತುಗಾನೆರಿಂಗಿ-ಯರಯಲಿಂಗ ಮಗುರುಂಡಸಿ
ಯುನೆರಂಗಿ
ಗರಿಮುಜಂಗಮುಮುಲಿಂಗಂಬುಗಾನೆರಂಗಿ-ಮರಲಿ ಲಿಂಗಮು ಜಂಗಮುಂ
ಗಾನೆರಂಗಿ
ಯೇಕ ರೋಕ ರೋಕ ನಂದು ನುಂಡುಟನೆರಿಂಗಿ-ಯೇಕರೀತಿ ಮುವ್ವುರು
ನೊಕಟಿಗಾನೆರಿಂಗಿ
ಯಿಟ್ಟಿವಿಜ್ಞಾನ ಮಹಿಮ್ಮಂಡೈಮನಸು-ಮುಟ್ಟಿಮೂರ್ತಿತ್ರಯಂಬುಸುಭ
ಜಿಂಪುಚು
ಬರಮು ಸದಾನಂಪ ಭರಿತಾತ್ಮಂಡಗುಚು-ನರುದ್ಯೆಸಗುರುಕರುಣಾಬ್ಧಿಂದೆ
ಲುಚುನು

## ಜೀವಯಾತ್ರೆ.

ಬ್ರಹ್ಮಾನಂದಮಯವಾದ ವಿಶ್ವಕಲ್ಯಾಣವೇ ಜೀವಯಾತ್ರೆಗೆ ಪರಮ ಪ್ರಯೋಜನವಾಗಿದೆ. ಜೀವನು ಜೀವಯಾತ್ರೆಯನ್ನು ಮಾಡುವುದಕ್ಕೆ ಪ್ರಪಂಚವಾದ್ಯಂತವೂ ಸುಸ್ವಾಗತವನ್ನೀಯುತ್ತಿವೆ. ವಿಶ್ವೇಶ್ವರ, ಜೀವ, ವಿಶ್ವಭಾವಗಳನ್ನೂ, ಜ್ಞೇಯ, ಜ್ಞಾತೃ, ಜ್ಞಾನ ಭಾವಗಳನ್ನೂ, ಕಾರ್ಯ ಕರ್ತೃ, ಕಾರಣಭಾವಗಳನ್ನೂ, ಗುರು ಲಿಂಗ ಜಂಗಮ ರೂಪಗಳನ್ನೂ, ಸಾಧ್ಯ ಸಾಧಕ ಸಾಧನಗಳನ್ನೂ ಪಡೆಯುತ್ತದೆ. ಅವ್ಯಕ್ತವಾದ ಪರಮಾತ್ಮನಿಗೂ, ವ್ಯಕ್ತವಾದ ವಿಶ್ವಕ್ಕೂ ವ್ಯಕ್ತಾವ್ಯಕ್ತವಾದ ಜೀವನಲ್ಲಿ ಧರ್ಮ ಪ್ರತಿಷ್ಠೆಯುಂಟಾಗುತ್ತಿದೆ. ಜೀವನು ಸಹಜವಾಗಿ ವ್ಯಕ್ತವಾದ ವಿಶ್ವದಲ್ಲಿ ದೇಹ ಭ್ರಾಂತಿಯನ್ನು ಹೊಂದಿ ಸುಖಪ್ರಾಪ್ತಿಗೆ ದೂರಸ್ಥನಾಗುತ್ತಾನೆ. ಅವ್ಯಕ್ತವನ್ನು ಕಾಣುವುದಕ್ಕೆ ಸಾಧನವಾದ ವ್ಯಕ್ತವು ಸ್ವಯಂಪ್ರತಿಬಂಧಕವಾಗುತ್ತಿದೆ. ಜೀವ ಯಾತ್ರೆಯಲ್ಲಿ ವ್ಯಕ್ತಾವ್ಯಕ್ತಗಳ ಪರಿಜ್ಞಾನವು ಮತಗಳಿಗೂ, ಧರ್ಮಗಳಿಗೂ, ಕರ್ಮಗಳಿಗೂ, ಸಾಹಿತ್ಯಗಳಿಗೂ, ಕಲೆಗಳಿಗೂ, ಶಾಸ್ತ್ರಗಳಿಗೂ ಅತ್ಯವಶ್ಯವಾಗಿರುತ್ತೆ. ಅವತಾರಮೂರ್ತಿಗಳೂ, ಮಹರ್ಷಿಗಳೂ, ತತ್ವಜ್ಞರೂ, ಜ್ಞಾನಿಗಳೂ, ಯೋಗಿಗಳೂ, ತ್ಯಾಗಿಗಳೂ, ಶಾಸ್ತ್ರಜ್ಞರೂ, ಧರ್ಮಜ್ಞರೂ, ಕರ್ಮಜ್ಞರೂ, ಭಕ್ತರೇ ಮುಂತಾದವರೆಲ್ಲರೂ ಜೀವಯಾತ್ರಾ ಫಲವನ್ನು ಸಾಧಿಸುವುದಕ್ಕಾಗಿ ಮಾಡಿರುವ



ತಪಃಪ್ರಭಾವಗಳನ್ನು ಪ್ರಪಂಚವಿಜ್ಞಾನವು ಅನಂತಾನಂತವಾಗಿ ಬೋಧಿಸುತ್ತಿದೆ. ನಿಗಮಾಗಮಗಳೂ, ದರ್ಶನಗಳೂ, ಗೀತೆಗಳೂ, ಧರ್ಮ ಶಾಸ್ತ್ರಗಳೂ, ಪುರಾಣಗಳೂ, ಕಾವ್ಯಗಳೂ, ನಾಟಕಗಳೂ, ಕಲೆಗಳೂ ಸಹಾ ಬೋಧಿಸುತ್ತಿರುವ ವಿಷಯಗಳು ಜೀವಯಾತ್ರೆಗೆ ಸಾಧನಗಳಾಗಿದ್ದರೂ, ಇವುಗಳು ಪ್ರಜಾಸಾಮಾನ್ಯರಿಗೆ ಆಚರಿಸಲು ಅಸಾಧ್ಯವಾಗಿರುತ್ತಿವೆ. ಆದರೆ ಜೀವಕ್ಷೇತ್ರದಲ್ಲಿ ವ್ಯಕ್ತಾವ್ಯಕ್ತ ಧರ್ಮಪ್ರತಿಷ್ಠೆಯನ್ನು ಹೊಂದಿ ಸುವುದಕ್ಕೆ ಭಗವದ್ಭಕ್ತಿಯೇ ಮುಖ್ಯ ಸಾಧನವಾಗಿರುತ್ತೆ. ಜೀವಯಾತ್ರೆಯನ್ನೂ ದೇವಯಾತ್ರೆಯನ್ನೂ ಮಾಡತಕ್ಕ ವಿಧಾನಗಳನ್ನು ವೈದಿಕ ಧರ್ಮವು ಅನೇಕ ವಿಧಗಳಲ್ಲಿ ಬೋಧಿಸುತ್ತಿದೆ. ಮಾನವನಿಗೆ ಅವ್ಯಕ್ತವನ್ನು ಗ್ರಹಿಸುವುದು ದುಸ್ತರವಾಗಿರುತ್ತೆ. ಅವ್ಯಕ್ತವು ವ್ಯಕ್ತದ ಮೂಲಕ ಗ್ರಾಹ್ಯವಾಗುತ್ತೆ. ಹ್ಯಾಗಂದರೆ:—

ಶ್ಲೋ॥ ಕ್ಲೇಶೋಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಮ್ ।
ಅವ್ಯಕ್ತಾಹಿಗತಿರ್ದುಃಖಂ ದೇಹವದ್ಭಿರವಾಪ್ಯತೇ ॥

ಜೀವಯಾತ್ರೆಯನ್ನೂ, ವಿಷಯಯಾತ್ರೆಯನ್ನೂ ಮಾಡದೆ ಶಿವಯಾತ್ರೆಯನ್ನು ಮಾಡುವದಕ್ಕೆ ಸರ್ವ ಕಾಲಗಳಲ್ಲಿಯೂ, ಸರ್ವಾವಸ್ಥೆಗಳಲ್ಲಿಯೂ ಶಿವಸಂದರ್ಶನ, ಶಿವನಾಮಸ್ಮರಣೆ, ಶಿವಸಂಕೀರ್ತನಗಳು ಸಾಧನಗಳಾಗಿವೆ. ಜೀವಯಾತ್ರೆಯನ್ನೂ, ಶಿವಯಾತ್ರೆಯನ್ನೂ ಮಾಡುವದಕ್ಕೆ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಸಹಾ ಗುರು ಲಿಂಗ ಜಂಗಮಾರ್ಚನೆಗಳಲ್ಲಿ ತೊಡಗಿ ಭಕ್ತಿಪಾರವಶ್ಯರಾಗಬೇಕು. ಜೀವಯಾತ್ರೆಯನ್ನು ಕೇವಲ ದೇಹಯಾತ್ರೆಗಾಗಿಯೇ ಉಪಯೋಗಿಸದೆ ಆತ್ಮಯಾತ್ರಾರ್ಥವಾದ ಮುಕ್ತಿಸಾಧನವಾಗತಕ್ಕ ವಿಧಾನವನ್ನು ವೀರಶೈವವು ಬೋಧಿಸುತ್ತದೆ.

## ಸಾಧಕನು

ಮಾನವನ ಶರೀರವು ಅದ್ಭುತ ರೀತಿಯಲ್ಲಿ ನಿರ್ಮಿತವಾಗಿರುತ್ತೆ. ಈ ಶರೀರದಲ್ಲಿರುವ ಕೀಲುಗಳನ್ನು ಕಂಡು ಹಿಡಿಯಲು ಮಹಾನುಭಾವರು ಮಾತ್ರವೇ ಸಮರ್ಥರು. ಪ್ರಕೃತಿ ಶಾಸ್ತ್ರಜ್ಞರು ದೇಹದಲ್ಲಿರುವ ಕೀಲುಗಳನ್ನು ನಿರ್ಣಯಿಸುತ್ತಾರೆ. ಆದರೂ ಅಂತರಿಂದ್ರಿಯ ರಹಸ್ಯಗಳನ್ನು ನಿರ್ಣಯಿಸುವದಕ್ಕೆ ಮಹಾ ಯೋಗಿಗಳು ಮಾತ್ರವೇ ಸಮರ್ಥರು. ತತ್ವಜ್ಞರು ದೇಹದಲ್ಲಿರುವ ತತ್ವಗಳನ್ನು ವ್ಯತ್ಯಸ್ತವಾಗಿ ನಿರ್ಣಯಿಸು

ತ್ತಾರೆ. ಸಾಂಖ್ಯರೂ ಮತ್ತು ಯೋಗಿಗಳೂ ೫ ತತ್ವಗಳೆಂತಲೂ, ವೀರಶೈವರು ೩೬ ತತ್ವಗಳೆಂತಲೂ ನಿರ್ಣಯಿಸುತ್ತಾರೆ. ಸೃಷ್ಟಿಯ ಕ್ರಮವು ಅನುಲೋಮವಿಧಾನದಲ್ಲಿ ಆಕಾಶಜನ್ಯವಾದ ಶಬ್ದದಿಂದ ಆರಂಭವಾಗುತ್ತದೆ. ಪಂಚಭೂತಗಳು, ಸ್ಥೂಲ ಸೂಕ್ಷ್ಮಗಳು, ದಶೇಂದ್ರಿಯಗಳು, ಮನೋಬುದ್ಧಿ ಚಿತ್ತ ಅಹಂಕಾರಗಳು, ಜೀವನು, ಇಪ್ಪತ್ತೈದು ತತ್ವಗಳೇ ಮುಂತಾದ ಸ್ಥೂಲ ಶಬ್ದಕ್ಕೆ ನಾದರೂಪವಾಗಿರುವದೇ ಲಿಂಗವು. ಅವ್ಯಕ್ತಕ್ಕೆ ಆದಿ ಅವ್ಯಕ್ತವೇ ಸ್ವರೂಪವಾದ ನಾದವು. ಆ ನಾದವು ಅಂತರ್ಲಿಂಗ ರೂಪವಲ್ಲಿ ಪ್ರಪಂಚವೆಲ್ಲವನ್ನೂ ಬೆಳಗಿಸುತ್ತಿರ:ವದಾಗಿರುತ್ತೆ. ಮಾನವನ ದೇಹದಲ್ಲಿಯೂ ಹೃದಯಕಮಲದಲ್ಲಿ ದೇದಿಪ್ಯಮಾನವಾಗಿ ಪ್ರಕಾಶವಾಗಿರುತ್ತೆ. ಬುದ್ಧ, ಕ್ರಿಸ್ತ, ಕೃಷ್ಣಾವತಾರಗಳಲ್ಲಿ ಈ ದಿವ್ಯ ತೇಜಸ್ಸನ್ನು ಭಕ್ತರು ಸಂದರ್ಶಿಸಿ ಅದನ್ನು ಚಿತ್ರಿಸಿದರು. ಸಕಲ ಮನುಷ್ಯರಲ್ಲಿಯೂ ದೇದೀಪ್ಯಮಾನವಾದ ತೇಜಸ್ಸು ಅಡಕವಾಗಿರುತ್ತೆ. ನಾದ ಸಂಜಾತವಾದ ಲಿಂಗಶರೀರವು ಸಕಲ ದೇಹಗಳಲ್ಲಿಯೂ ಅಂತರ್ಯಾಮಿಯಾಗಿ ಜೀವಯಾತ್ರೆಯನ್ನೂ, ಮೋಕ್ಷಪ್ರಾಪ್ತಿಯನ್ನೂ ಉಂಟು ಮಾಡತಕ್ಕ ಸಾಧನವಾಗಿದೆ. ಜೀವಯಾತ್ರೆಯಿಂದ ಕೈವಲ್ಯಪ್ರಾಪ್ತಿಯನ್ನು ಪಡೆಯುವುದಕ್ಕೆ ಬಾಹ್ಯ ಲಿಂಗಧಾರಣೆಯೂ, ಅಂತರ್ಲಿಂಗಧಾರಣೆಯೂ ಉಪಯುಕ್ತವಾಗತಕ್ಕ ವಿಧಾನಗಳನ್ನು ವೀರಶೈವಾಗಮಗಳು ವಿಶದಪಡಿಸುತ್ತಿರುವುವು. ಈ ರಹಸ್ಯವನ್ನೇ ಅಪರೋಕ್ಷಾನುಭೂತಿಯಲ್ಲಿ ಶಂಕರಾಚಾರ್ಯರು ವಿಶದಪಡಿಸಿದ್ದಾರೆ.

ಶ್ಲೋ॥ ಯತ್ರಯತ್ರಮನೋಯಾತಿ ಬ್ರಹ್ಮಣಸ್ತತ್ರದರ್ಶನಾತ್ ।
ಮನಸಾಧಾರಣಂ ಚೈವ ಧಾರಣಾಸಾಪರಾಮತಾ ॥

ಶ್ರೀಗುರುಕಟಾಕ್ಷವು ಕೃಪಾಪಾತ್ರನಾದ ಭಕ್ತನಿಗೆ ವೀರಶೈವ ದೀಕ್ಷೆಯನ್ನು ಅನುಗ್ರಹಿಸಿ ಕೃತಾರ್ಥನನ್ನಾಗಿ ಮಾಡುತ್ತಿದೆ. ವೀರಶೈವ ದೀಕ್ಷೆಯ ಅಧಿಕಾರ ಲಕ್ಷಣಗಳನ್ನು ಬಸವಪುರಾಣದಲ್ಲಿ ಉಕ್ತವಾದ ದೀಕ್ಷಾದೋಷೆಯು ಈ ರೀತಿ ವಿವಂಸುತ್ತಿದೆ.

ಬಸವಪುರಾಣದ ಪ್ರಥಮಾಶ್ವಾಸ ೨೫ ನೇ ಪುಟ

ತಗನಿವಾರಿಕಿ ದೀಕ್ಷಂಗಗಂಜೇಯುಗುರುನ-ಕಗುಂ ಬ್ರಮಾದಂಬು ಮಹಾದೇವುಚೇತ



ಗುರುವುಲು ಶಿಷ್ಯುನಿಗುಣವಿಶೇಷಮುಲ-ನರಯಕದೀಕ್ಷಂ ಜೇಯಂಗನೆಟು ವಚ್ಚು

ಬಾಲುರಕುನು ಮದ್ಯಪಾಯಿಕಿದ್ಯೂತ-ಶೀಲಿಕಿ ಮಾಂಸಭಕ್ಷಿಕಿನಜ್ಞನಕುನು
ಆತುರನುಕು ವೇಶ್ಯಕಂಗ ಹೀನ:ನಕು-ನೀತಿಗಾದಟವ್ಯಸನಿಕಿ ದೀಕ್ಷಂಜೇಯ
ನಿವಿದೆಲಿಯಕಂ ದೀಕ್ಷಲಿಚ್ಚಿನಗುರುನ-ಕವುನರಕಂಬನಿಹರುವಾಕ್ಯಮನುಡು
ಗುರುನಾಥುಂಡಕನಿಂಗನ್ಗೊನಿವತ್ಸವಿನುವು--ಹರದೀಕ್ಷನಿಮ್ಮನ್ನನಾಪಟ್ಟು ಮನುಚು

ಶಿಷ್ಯುನಿಶಕ್ತಿಯು ಶಿಷ್ಯುನಿಭಕ್ತಿ-ಶಿಷ್ಯುಭಾವಮುಂಬರೀಕ್ಷಿಂಪ ಕಿಂದಗುನೇ
ಯಾ ಮುಮುಕ್ಷುಂಡು ದೀಕ್ಷಯುಗುಟಯೇಚಾಲು-ನಾವಿೂಂದನಾಚರಣಂಬುದುರ್ಘಟಮು
ಮೊದಲು ಸರ್ವ ದ್ವಂದ್ವ ಮುಲಂ ಬಾಯ:ವಲಯು-ಮದಮು ಗರ್ವಮುಂ ಬೊಡಮಕಯುಂಡವಲಯು
ಕುತ್ಸಿತ ನಿಷ್ಠುರ ಕೋಪಮಾಲಿನ್ಯ-ಮಾತ್ಸರ್ಯ ಶಾಠ್ಯ ಡಂಬ ಮುಲುಂಡಂಡ ಗದು
ಕಷ್ಟ ಲೋಭ ಜ್ಞಾನ ಕಾಮ ಮೋಹಾದಿ-ದುಷ್ಟಗುಣಂಬುಲುದೊಲಂಗಗ ವಲಯು
ಗುದ ಪಾದ ಪಾಣಿ ವಾಗ್ಗುಹ್ಯಾಸೌಖ್ಯಮುಲು-ಗಡಿಸಿನವಶವರ್ತಿಗಾಕುಂಡ ವಲಯು
ಶಾಂತಂಬುಮುಖವಿಕಾಸಂಬು ಸದ್ವೃತ್ತಿ-ದಾಂತಿನೀತಿಯುದೆಲ್ಪಿದಯಯನುವಲಯು
ಸಂತೋಷಮುನುಗತಸ್ಪರ್ಧಯುಧರ್ಮ-ಚಿಂತಯುಸದ್ಗುಣಶಿಲಂಬುನಲಯು
ಮುಗಮಾಟಯುನುದಾನಮುನುವಿನಯಂಬು-ತಗವು ಧರ್ಮಾರ್ಥಸಾಧಕ ಬುದ್ಧಿವಲಯು
ನುಚಿತಜ್ಞತಯು ಸತ್ಕ್ರಿಯೋದ್ಯೋಗಧರ್ಮ-ರಚನಪರೋಪಕಾರಂಬುನುವಲಯು
ಶಿವುಂಡೇದೈವಂಬನಿಚೇಪಟ್ಟನಲಯು-ಶಿವಮಹೋತ್ಸವಮುಲುಸೇಯಂಗವಲಯು
ನಿತ್ಯಶಿವಾರ್ಚನಾನ್ವಿತುಂಡುಗಾವಲಯು-ಸತ್ಯಂಬುಗುರುಪರಿಚರ್ಯೆಯುದಲಿಯು

ಭಯಭಕ್ತಿಯುನುಶಿವಪರತಂತ್ರಮತಿಯು-ನಿಯಮವ್ರತಂಬುಲುನಿಷ್ಠಯು
ವಲಯು

ನೀಗುಣಂಬುಲುಗಲ್ಗಿಕೆಟ್ಲಯ್ಯವಚ್ಚು ನಾಗನೋಕ್ತಂಬಗುಹರಭಕ್ತಿದೀಕ್ಷ

ಶೈವ್ಯೈನನು ಲಿಂಗಸಹಿತುಲ್ಯೈಯುನ್ನ-ಮಿತ್ರುಲಕಾಂಜೂಡುಮಿೂ ಬಸವನ್ನ

ಪಟ್ಟಿನ ವ್ರತಮುಲು ಪ್ರಾಣಂಬುಮೀಂದ. ಮೆಟ್ಟಿನವಿಡುವಕುಮಿೂ. ಬಸವನ್ನ

ವೇರುಭಕ್ತುಲ ಜಾತಿ ವೆವಕಕುಂಡುಟಯೆ. ಮಿೂರಿನೆಂಬದಮುಸೆಮಿೂ
ಬಸವನ್ನ

ಚಿತ್ತಜಾಂಶತು ಭಕ್ತಿಂ ಬೆಡನಾಡುಖಲಲು-ವೃತ್ತ್ಯವುಗತಿಂದ್ರುಂಪುಮಿೂ
ಬಸವನ್ನ

ವೇದಶಾಸ್ತ್ರಾರ್ಥಸಂಪಾದಿತ ಭಕ್ತಿ-ಮೇದಿನಿವೆಲಯಂಪುಮಿೂ ಬಸವನ್ನ

ಯೆಂದಪ್ಪಿವಟ್ಟುದುನಿಲಂಬರ ಸ್ತ್ರೀಲ-ಮಿಾಂದಂಗಸ್ಪಾರ್ಶಕುಮಿೂ ಬಸವನ್ನ

ಸಾಧ್ಯಮೌಭಕ್ತಿ ಪ್ರಸಾದೇತರಂಬ-ಮೇಧ್ಯಂಬಕಾಂಜೂಡುಮಿೂ ಬಸವನ್ನ

ನಿಕ್ಷಂಪು ಭಕ್ತಿಕಿನಿರ್ವಂಚಕಂಬು. ಮಿಕ್ಕಿಲಿಗುಣಮುಸುಮಿೂ ಬಸವನ್ನ

ಏಪ್ರಾದ್ದು ಜಂಗಮಂ ಬೇನಕಾಂಜೂಡು-ಮಿೂಪ್ರಸಾದ ಮುಂಗೊನುಮಿೂ
ಬಸವನ್ನ

ನಾಲುಕಕಿಂಪುಗಾಕೂಲಿಭಕ್ತುಲನು-ಮೇಲಕಾನುತಿಯಿಂಪುಮಿೂ ಬಸವನ್ನ

ಯೇಮ್ಯೈನವಲಶಿನಯೆಡಕ್ಕೈನಂದಲಂಪು. ಮಿೂಮಮ್ಮುಮರುವಕುಮಿೂ
ಬಸವನ್ನ

ಗುರುವು ಶಿಷ್ಯನಿಗೆ ಚಿನ್ಮಯ ದೀಕ್ಷೆಯನ್ನಿತ್ತು ಹಸ್ತ ಮಸ್ತಕ ಸಂಯೋಗ ಮತ್ತು ಪಂಚಾಕ್ಷರೀ ಮಂತ್ರೋಪದೇಶವನ್ನು ಮಾಡಿ, ಲಿಂಗಕ್ಕೆ ಪ್ರಾಣ ಕಳಾನ್ಯಾಸವನ್ನೆಸಗಿ ಲಿಂಗಾಂಗ ಸಂಯೋಗವನ್ನುಂಟು ಮಾಡುವನು. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಂದುಂಟಾಗುವ ಜ್ಞಾನವು ನಿಶ್ಚಲವಾಗದೆ ಚಂಚಲವಾಗುವುದು. ಸಾಮಾನ್ಯವಾಗಿ ದಶೇಂದ್ರಿಯಗಳು ದೇಹಯಾತ್ರೆಯಲ್ಲಿ ಜೀವನಿಗೆ ಆರೂಢ ಜ್ಞಾನವುಂಟಾಗಲು ಆತ್ಮಾವಲೋಕನವೇ ಸಾಧನವಾಗಿರುವುದು. ಅಂತರ ಬಾಹ್ಯಗಳಲ್ಲಿಯೂ ಲಿಂಗ ನಿರೀಕ್ಷಣೆ ಮಾಡುವುದರ ಮೂಲಕ ಆತ್ಮಾವಲೋಕನವನ್ನು ಸಾಧಿಸಬಹುದು. ಈ ವಿಷಯವನ್ನು ವೀರಶೈವ ದೀಕ್ಷಾಬೋಧೆಯ ೮೮ ಮತ್ತು ೯೦ ನೆಯ ಪುಟಗಳಲ್ಲಿ ಈ ರೀತಿಯಾಗಿ ವಿಶದಪಡಿಸಿರುತ್ತೆ.



ಕಾನನೀಯಿಷ್ಟಲಿಂಗಮುಭಾವಗಮ್ಯಂ-ಡೈನಿನ್ನಂ ಬ್ರೇರೇಪನಲ
ರಿಂತು ಕ್ರಿಯಲು

ತವಿಲಿಲಿಂಗಮುಂ ಜೂಡಂದಾಂ ಜೂಚುರೂಪ-ವಿವರಿಂಚಿಲಿಂಗಂಬು
ವಿನವಿನುಧ್ವನುಲು

ಸಾರಿದಿಲಿಂಗಮು ಸೋಂಕಸೋಂಕು ಸ್ಪರ್ಶನಮುಂ-ಬರಮುಲಿಂಗಮು
ಭಜಿಂಪಭುಜಿಂಚುನವಿಯು

ನೆಗಡಿಲಿಂಗಂಬು ಘ್ರಾಣಿಂಪಘ್ರಾಣಿಂಚುಂ-ದಗಲಿಂಗ ದೃಷ್ಟಿಚೆಂದಾದ್ರಷ್ಟ
ಯುಗುನು

ಸರಿನಿಟ್ಲು ಪ್ರಾಗ್ಯೈಕಸಹೋದರುಂಡಗುಚುಂ-ಜರಿಯಿಂಚು ಭಕ್ತುಂಡು
ಸರ್ವಾಂಗಲಿಂಗಿ

ಪ್ರಾಣಾಂಗಮುಲು ದನಪ್ರಾಣಲಿಂಗಂಬು-ಪ್ರಾಣಾಂಗಮುಲುಗಾಂಗಸಮ
ರಿಂಚಿಚೇಷ್ಟ

ಲನುಲಿಂಗಮುಂದುಂಗೀಲ್ಕೊಲಪಿತಾನಂತ-ಯುನುಲಿಂಗಮಯಮಯಿ
ಯುಂಡುನಾಶರಣು

ನೇಮನಿಮದಿನಿರ್ಣಯಿಂ ತುಂಗೀರ್ತಿಂತು-ನಾಮಹಾತ್ಮುನಿಯುಪಮಾತೀತ
ಮೂರ್ತಿಂ

ಜಡಬುದ್ಧುದಮು ನೀಟಸಮಿಸಿಯನಟ್ಲು-ವಡಗಂಡ್ಲುನೀಟಲೋವರ್ಷಿಂ
ಚುನಟ್ಲು

ಕಾಂಕಲನಿಂಗಿಲೀಕಮುರಸವ್ಯೈನ-ಜೋಕಂಗಾಷ್ಠಮುಲಗ್ಗಿಸೋಂಕಿತಾ
ಮಗ್ನಿ

ಯ್ಯೈನಟ್ಲು ಲಿಂಗಂಬುನಂದ್ಯೈನತನುವುಂ-ದಾನುಲಿಂಗಕ್ರಿಯಂದಗಲಿಂಗ
ಮಯ್ಯೆ

ಮದಿವೆವ್ವಂಡೆಯ್ಯದಿಮರಿಗಿಧ್ಯಾನಿಂಚು-ನದಿಯೇವಾಕ್ಯನವೇಲ್ಲನಾಡುಚು
ನುಂಡು

ನದಿಯೆಕರ್ಮಂಬುಚೇನಲರಿಂಪುಚುಂಡು–ವಿದಿತಂಬುಗಾನಿದಿವೇದವಾ
ಕ್ಯಂಬು

... ... ... ... ...

ಲಿಂಗನಿರೀಕ್ಷಣೆಗೆ ಸೂಕ್ಷ್ಮೇಂದ್ರಿಯಜ್ಞಾನವನ್ನು ಪಡೆಯತಕ್ಕ ವಿಧಾನವು ಸಿದ್ಧ ಪುರುಷರ ಅನುಭವಯುಕ್ತವೆಂಬುವದು ಪ್ರಸಿದ್ಧವಾಗಿದೆಯಷ್ಟೆ. ದಿವ್ಯದೃಷ್ಟಿ ದೂರಶ್ರವಣವು, ದಿವ್ಯಜ್ಞಾನವೇ ಮುಂತಾದ ಅಷ್ಟಸಿದ್ಧಿಗಳಿಂದ

ಶಿವತ್ವವು ಲಭ್ಯವಾಗುತ್ತಿದೆ. ಸ್ಥೂಲ ಶರೀರವು ಸೂಕ್ಷ್ಮ ಶರೀರದಲ್ಲಿಯೂ, ಸೂಕ್ಷ್ಮಶರೀರವು ಲಿಂಗಶರೀರದಲ್ಲಿಯೂ, ಲಿಂಗಶರೀರವು ಆತ್ಮದಲ್ಲಿಯೂ, ಆತ್ಮವು ಪರಶಿವನಲ್ಲಿಯೂ ಲೀನವಾಗಿ ಶಿವಸಾಯುಜ್ಯವುಂಟಾಗುತ್ತಿದೆ. ಸಾಧಕನು ದೇಹಯಾತ್ರೆಯಿಂದ ಶೈವಯಾತ್ರೆಯಲ್ಲಿ ಮಗ್ನನಾಗಬೇಕಾದರೆ ಮಲತ್ರಯಗಳನ್ನು ವಿಸರ್ಜಿಸಬೇಕು. ಆಣವ ಮಲಗಳಿಂದ ದೂರಸ್ಥನಾಗಬೇಕಾದರೆ ಮಾತಾ ಸತೀ ಸುತಾದಿಗಳ ಭ್ರಾಂತಿಯನ್ನು ತೊರೆದು ತಾನು ಶಿವಾಂಶವಾದ ಚೈತನ್ಯಸ್ವರೂಪವನ್ನು ದೃಷ್ಟಿಸತಕ್ಕವನಾಗುತ್ತಾನೆ. ಈವಿಚಾರ ವುವೀರಶೈವ ದೀಕ್ಷಾಬೋಧೆಯ ೩೬ನೆಯ ಪುಟದಲ್ಲಿ:—

ಸಕಲಂಬುದಾನಯ್ಯೆ ಸರ್ವೇಶ್ವರುಂಡು-ಸಕಲೆಂಬುನಾಡಿರಚುಚೈತನ್ಯ
ಮೂರ್ತಿ
ಶಿವುಂಡಟ್ಟಿಚೈತನ್ಯಚೇತನಾತ್ಮಕುಂಡು-ತವಿಲಿಪ್ರೇರೇಪಂಗಂದಾನಾಡುಜ
ಗಮು
ತಲ್ಲಿಪಾರ್ವತಿಯುನುತಂಡ್ರಿಶಿವುಂಡು-ನೆಲ್ಲಭಕ್ತುಲುತನಹಿತಬಂಧುಜನುಲು
ನನುಚುನಾನಾ ಪುರಾಣಾಗಮಾರ್ಥಮುಲು-ಮುನುಚೆಪ್ಪೆಂಗಾವುನಮುಂ
ದುಂಡಿನೀವು
ನಾದಿನೀಶ್ವರ ಬೀಜಮಂದ್ವೈತಿಗಾನ-ಭೇದಂಬುಲೆಲ್ಲಂಗಲ್ಪಿತಮುಗಾನಾತ್ಮಂ
ಜೆಂತಿಂಚಿತೆಲಿಯುನು ಸ್ಥಿರಮಾಟನೀವು-ಅಂತನಪಾಯು ನೀಕಾಣವಮ
ಲಮು

... ... ... ... ...

ಮಾಯಾಮಲ ವಿದೂರನಾಗಬೇಕಾದರೆ ಸ್ತ್ರೀ—ಪುರುಷ ಭ್ರಾಂತಿಯನ್ನು ತೊರೆದು ಸರ್ವತ್ರ ಆತ್ಮಸಂದರ್ಶನವನ್ನು ಮಾಡಬೇಕು. ಹೇಗೆಂದರೆ:—ವೀರಶೈವ ದೀಕ್ಷಾಬೋಧೆಯ ೩೯ನೆಯ ಪುಟದಲ್ಲಿ ಉಕ್ತವಾಗಿರುವ

ಶಿಲಲಲೋಪಲಂ ಜನಿಂಚಿನನೇಮಿಚಸಿಡಿ-ಶಿಲಯಂ ದಾನಗುನಯ್ಯ
ಚಿಂತಿಂಪನಟ್ಲ
ಮಾನವುಲಂದುಸಂಭವು ಲೈನನೇಮಿ ಮಾನವುಲಗುದುರೇಮಾಭಕ್ತಿ
ಪೂರುಷಲೈನ ನಪುಂಸಕುಲೈನ-ನಾರುಲೈನನು ಬ್ರಾಹ್ಮಣಕುಲೀನುಲಯಿನಂ
ವರುಲು
ಜಂಡಾಲುಲೈನನು ಶಂಭುಂಬೂಜಿಂಪ-ನೊಂಡೇಮಿರುದ್ರಸಾಮ್ಯಲುವಿಚಾ
ರಿಂಪ
ನದಿಗಾಕ ನೀವುನೀಯಾತ್ಮನುಗಾಂಚಿ-ವದಲ ಕುಂಡಿನಂಗುಲ ವ್ಯಾಮೋಹ
ಮುಡಗುಂ



ಮರಿದಾನೇತೊಲಂಗು ನೀಮಾಯಾ ಮಲಂಬು-ಕೊರಲುನಹಂ ಕೃತಿದೋ
ಷ್ಟನಯಡಂಗು

... ... ... ... ...

ಕಾರ್ಮಿಕಮಲದಿಂದ ನಿವೃತ್ತನಾಗಬೇಕಾದರೆ ಯಥಾಲಾಭಸಂತುಷ್ಟನಾಗಿರುತ್ತಾ ತನ್ನ ಸಂಪತ್ತೆಲ್ಲವನ್ನೂ ಗುರುಲಿಂಗಜಂಗಮಕ್ಕೆ ಸಮರ್ಪಿಸಿ, ಅವರ ತೀರ್ಥಪ್ರಸಾದಗಳನ್ನು ಸ್ವೀಕರಿಸುತ್ತ ತೃಪ್ತನಾಗಿರಬೇಕು. ಈ ವಿಚಾರವು ವೀರಶೈವ ದೀಕ್ಷಾಬೋಧೆಯ ೪೨ ನೇ ಪುಟದಲ್ಲಿ ಈ ರೀತಿ ವಿವರಿಸಿರುತ್ತೆ.

ಪ್ರಾಣೇಶ್ವರನ ಕುಂಬ್ರಾಣಾರ್ಥಂಬುಲೊಸಂಗು-ಜಾಣವೈಧನವಿಮ್ಮು
ಸದ್ಭಕ್ತುಲಕು
ವಿನುಮುವೆಂಡಿಯು ನೊಕ್ಕವಿತ್ತಮೇಕಾದು-ತನುಮನೋಧನಮುಲುದ
ಗಂಗುರುಲಿಂಗ
ಜಂಗಮಾವಲಿವಿನಿಶ್ಚಯಮೆಟ್ಟುಲನಿನ-ಸಂಗತಲಿಂಗದೀಕ್ಷಾಕಾಲಮುಲನು
ತ್ರಿವಿಧ ಮೂರ್ತುಲುತುನುಶ್ರೀಗುರುಸ್ವಾಮಿ-ತ್ರಿವಿಧ ವಿಮ್ಮೆಯೇನಾತ್ರಿವಿಧ
ಮೆಟ್ಲನಿನ
ತನುವೆಪ್ಪುಡು ಗುರೂತ್ತಮುನಕು ಮನಮುಂ-ದನರಲಿಂಗಮುನಕುಧನ
ಮುಭಕ್ತುಲತಂ
ಘನ ಮನೋವಾಕ್ಕಾಯ ಕರ್ಮಸತ್ಕ್ರಿಯಲಂ-ದನಗುರುನಿಯನುಗ್ರಂದ
ಪ್ರಕಿಚ್ಚಿನನು
ಘನಮುಲಕೆಲ್ಲನು ಘನಮೈನಲಿಂಗ-ಮುನುಶ್ರೀಗುರುಂಡು ಮುದಮಾರ
ನಿಚ್ಚ
ನಟುಗಾಕ ದೀಕ್ಷ ನೀವಾಸಿಂಚಿನಪುಡು-ತಟುಕು ನಂದುನು ಮನೋಧನ
ಮುಂದ್ರಿಮೂರ್ತು
ಲಕುಸಮರ್ಪಿಂಪ ವಾಲಾಯಂಬುಗಾನ-ನೊಕಟಿಯು ನೀದಿಗಾಕುಂಡಟಂ
ಡೆಲಿಸಿ
ತ್ರಿವಿಧ ಮೂರ್ತುಲ ತನು ದ್ರಿವಿಧ ವಸ್ತುವುಲ-ನವಿರಳಪ್ರೀತಿ ನೀನರ್ಪಿಂಚಿ
ತೇನಿಂ
ಬಟ್ಟಿಂಚು ಸದ್ಭಕ್ತಿ ಭಾವಮುಂತಟನು-ಗಟ್ಟಿಗಾಂದೊಲುಂಗು ನೀಕಾರ್ಮಿಕ
ಮಲಮು

ಆಣವ, ಮಾಯಾ, ಕಾರ್ಮಿಕಾದಿ ಮಲತ್ರಯಗಳನ್ನು ದೂರೀಕರಿಸುವ ಸಾಧಕನು ಧರ್ಮಪ್ರವರ್ತಕನಾಗಿ, ಶ್ರೀಗುರುಕಟಾಕ್ಷಕ್ಕೆ ಪಾತ್ರನಾಗಿರುತ್ತಾ ಲಿಂಗಧಾರಣೆಯ ರೂಪವಾದ ಚಿನ್ಮಯ ದೀಕ್ಷೆಯನ್ನು ಹೊಂದಿ ಶಿವಸ್ವರೂಪನಾಗುತ್ತಾನೆ. ಶಿವಲಿಂಗ ಸ್ವರೂಪನಾದ ಈ ಸಾಧಕನು ಶಿವಲಿಂಗ ಸ್ವರೂಪರಾದ ಜಂಗಮಭಕ್ತರ ತೀರ್ಥಪ್ರಸಾದಗಳನ್ನು ಸ್ವೀಕರಿಸುತ್ತಾ, ಪ್ರಕೃತಿ ಕಲ್ಪಿತಗಳಾದ ಭೇದಾವರಣಗಳನ್ನು ಬಿಟ್ಟು, ಗುರುಲಿಂಗೈಕ್ಯವನ್ನು ಹೊಂದುತ್ತಾನೆ. ಜಂಗಮ ಸೇವೆ, ಪ್ರಾಣಿಹಿಂಸೆ ಮಾಡದೆ, ಸಕಲ ಪ್ರಾಣಿಗಳೂ ತನ್ನಂತೆಯೇ ಎಂದು ಭಾವಿಸುವಿಕೆ, ಇವುಗಳೇ ಈಶ್ವರ ಪೂಜಾ ಫಲಗಳೆಂದು ಎಲ್ಲ ಮತಗಳೂ ಸಾರುತ್ತಿರುವವು. ಬಸವೇಶ್ವರನು ಲಿಂಗಧಾರಿಗಳಾದ ಭಕ್ತರನ್ನೆಲ್ಲಾ ಕುಲಭೇದಗಳನ್ನೆಣಿಸದೆ ಪೂಜಿಸಿ ಮಾನವಸಹೋದರತ್ವವನ್ನೂ, ಜಂಗಮರೂಪಿನ ಪ್ರಾಶಸ್ತ್ಯವನ್ನೂ ಸ್ಥಾಪಿಸಿದ ವಿಧಾನಗಳು ಬಸವ ಚರಿತ್ರೆಯಲ್ಲಿ ರಮ್ಯವಾಗಿ ವರ್ಣಿತವಾಗಿವೆ ಮತ್ತು ಬೋಧಿಸುತ್ತಿವೆ.

(ಮುಂದುವರಿವುದು.)

---



# ಶಿವಶರಣರ ಸ್ಥಾನಗಳು.

(ರಾ. ಸಾ. ಪಿ. ಜಿ. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ. ವಿಜಾಪುರ

ವೀರಶೈವ ಧರ್ಮದ ಪೂರ್ವಕಾಲದ ಚಳವಳಿಯ ಉಗಮಸ್ಥಾನವು ಆವುದೆಂಬದನ್ನು ಸಂಶೋಧಿಸುವದು ಬಹು ಮಹತ್ವದ ವಿಷಯವಾಗಿದೆ. ಆದರೆ ಈ ಲೇಖದಲ್ಲಿ ನಾವು ಬಸವೇಶ್ವರನ ಕಾಲ ಮತ್ತು ಅವನಕ್ಕಿಂತಲೂ ಸ್ವಲ್ಪ ಹಿಂದಿನಕಾಲ ಇಷ್ಟು ಮಾತ್ರ ನಾವು ತೆಗೆದುಕೊಂಡಿದ್ದೇವೆ. ಇವುಗಳಿಗಿಂತಲೂ ಪೂರ್ವದಲ್ಲಿ ಈ ಧಾರ್ಮಿಕ ಚಳವಳಿಯ ಸ್ವರೂಪು ಕರ್ನಾಟಕದಲ್ಲಿ ಯಾವ ರೀತಿಯದಾಗಿತ್ತು ಯಾವಲ್ಲಿ ಮತ್ತು ಯಾರಲ್ಲಿ ಅದು ಪ್ರಾದುರ್ಭವಿಸಿತು ಎಂಬುದನ್ನು ನಿಶ್ಚಯಪೂರ್ವಕವಾಗಿ ನಿರ್ಧರಿಸುವಷ್ಟು ಆಧಾರಗಳು ಇನ್ನೂ ಉಪಲಬ್ಧವಾಗಿರುವದಿಲ್ಲ. ಆದ್ದರಿಂದ ಈ ವಿಷಯವನ್ನು ಬಿಟ್ಟು ಕೊಟ್ಟು ೧೧ನೇ ೧೨ನೇ ಶತಮಾನಗಳಲ್ಲಿ ಉಂಟಾದ ಕ್ರಾಂತಿಯ ಕಾಲವನ್ನು ಕುರಿತು ಮಾತ್ರ ನಾವು ಇಲ್ಲಿ ಉಲ್ಲೇಖಿಸುತ್ತೇವೆ.

ಈ ಕಾಲದಲ್ಲಿ ಕರ್ನಾಟಕದಲ್ಲಿ ಶಿವಶರಣರು ಯಾವ ಸ್ಥಳಗಳಲ್ಲಿ ಉಗಮಿಸಿದರು ಮತ್ತು ಅವರ ಸಂಖ್ಯೆಯು ಎಲ್ಲಿ ನಿಬಿಡವಾಗಿದ್ದಿತು ಎಂಬುದರ ಶೋಧವು ಬಹು ಮಹತ್ವದ್ದದೆ. ಇದರಿಂದ ಈ ವಿಷಯದ ಮೇಲೆ ಹೆಚ್ಚು ಪ್ರಕಾಶವು ಬೀಳಬಹುದೆಂದು ತೋರುತ್ತಿದೆ. ಈ ದೃಷ್ಟಿಯನ್ನಿಟ್ಟುಕೊಂಡು ನಾವು ಈ ಲೇಖವನ್ನು ಆರಂಭಿಸುತ್ತೇವೆ.

ನಾವು ಹೋದ ವರ್ಷದ ಶಿವಾನುಭವ ಪತ್ರಿಕೆಯ ಸಂಚಿಕೆಗಳಲ್ಲಿ ಮಾಡಿದ ನಿರೂಪಣೆಗಳಿಂದ ಮೊದಲು ವೀರಶೈವ ಧರ್ಮದ ಚಳವಳಿಯು ಮುದನೂರು ಪ್ರಾಂತದಲ್ಲಿ ಉಗಮಿಸಿ ಮುಂದೆ ತದ್ದೇವಾಡಿ ಪ್ರಾಂತದಲ್ಲಿ ಅದು ರೂಪುಗೊಂಡು ಅಲ್ಲಿ ಕೆಲವು ಕಾಲ ಪ್ರಬಲಿಸುತ್ತ ಮುಂದೆ ಕಲ್ಯಾಣ ಪಟ್ಟಣದಲ್ಲಿ ಬಸವೇಶ್ವರನ ನೇತೃತ್ವದಲ್ಲಿ ಅದು ಅತ್ಯುಚ್ಚಸ್ಥಿತಿಯನ್ನು ಹೊಂದಿತೆಂದು ವಾಚಕರಿಗೆ ತೋರಿ ಬಂದಿರಬಹುದು. ಈ ೧೦೦-೧೫೦ ವರ್ಷಗಳಲ್ಲಿ ವೀರಶೈವ ಧರ್ಮದ ಸ್ವರೂಪು ಒಂದೇ ವಿಧವಾಗಿತ್ತೆಂದು ಹೇಳಲಿಕ್ಕೆ ಮಾತ್ರ ಬರಲಾರದು. ಈ ಕಾಲದಲ್ಲಿ ಅದು ಯಾವ ಯಾವ ಮಾರ್ಪಾಡುಗಳನ್ನು ಹೊಂದಿತೆಂಬುದನ್ನು ನಿರ್ಧರಿಸಲು ಸಾಕಷ್ಟು ಆಧಾರಗಳು ಇನ್ನೂ ದೊರೆತಿಲ್ಲ. ಆದರೆ ಬಸ

ವೇಶ್ವರನ ಕಾಲದಲ್ಲಿ ಶಿವಾನುಭವ ಮಂಟಪದಲ್ಲಿ ಅದು ವ್ಯವಸ್ಥಿತ ಸ್ವರೂಪವುಳ್ಳದಾಗಿ ಅತ್ಯಂತ ವೈಶಾಲ್ಯವನ್ನು ಹೊಂದಿತೆಂಬ ಊಹೆಗೆ ಸಬಲ ಕಾರಣಗಳಿರುವುದಾಗಿ ವಚನಶಾಸ್ತ್ರದ ಅಭ್ಯಾಸದಿಂದ ಗೊತ್ತಾಗುವಂತೆ ಇದೆ.

ಪ್ರಕೃತದಲ್ಲಿ ಈ ವಿವೇಚನೆಯಲ್ಲಿ ಪ್ರತ್ಯಕ್ಷವಾಗಿ ನಾವು ತೊಡಗದೆ ಈ ಕಾಲದ ಶಿವಶರಣರು ಯಾವ ಯಾವ ಸ್ಥಳಗಳಲ್ಲಿ ಹೆಚ್ಚಾಗಿ ಉದ್ಭವಿಸಿದರೆಂಬುದನ್ನು ವಾಚಕರೆದುರಿಗೆ ಇಡಲು ಪ್ರಯತ್ನಿಸುತ್ತೇವೆ. ಇದರಿಂದ ಯಾವ ಅನುಮಾನಗಳು ಉತ್ಪನ್ನವಾಗಬಹುದೆಂಬದನ್ನು ವಾಚಕರು ನಿರ್ಧರಿಸಲು ಸಹಾಯವಾಗುವದೆಂದು ನಮ್ಮ ನಂಬಿಗೆ ಇದೆ.

ತದ್ದೇವಾಡಿ ನಾಡಿನಲ್ಲಿಯೇ ಮೊದಲು ಶಿವಶರಣರು ಬಹು ಸಂಖ್ಯಾಕರಾಗಿ ಉದಯಿಸಿದರೆಂದು ಅವರ ಚರಿತ್ರೆಗಳಿಂದ ತಿಳಿದು ಬರುತ್ತಿದೆ. ಇಲ್ಲಿ ಉದ್ಭವಿಸಿದಷ್ಟು ಶಿವಶರಣರು ಬೇರೆ ಯಾವ ಕಡೆಗೂ ಆಗಿರುವುದಿಲ್ಲ. ತದ್ದೇವಾಡಿ ನಾಡು ಎಂದರೆ ಈಗಿನ ವಿಜಾಪುರ ಜಿಲ್ಲೆಯ ಉತ್ತರ ಭಾಗ. ದಕ್ಷಿಣದಲ್ಲಿ ಘಟಪ್ರಭಾ ಮತ್ತು ಕೃಷ್ಣೆ ಈ ನದಿಗಳ ತೀರದಿಂದ ಉತ್ತರಕ್ಕೆ ಈಗಿನ ಸೊಲ್ಲಾಪುರ ಪಟ್ಟಣದ ವರೆಗೂ ಮೊದಲಿನ ಕಾಲದಲ್ಲಿ ಈ ನಾಡು ವಿಸ್ತರಿಸಿತ್ತೆಂದು ತೋರುತ್ತದೆ. ಅಂದರೆ ಈಗಿನ ಸೊಲ್ಲಾಪುರ, ಇಂಡಿ, ಸಿಂದಗಿ, ವಿಜಾಪುರ, ಬಾಗೇವಾಡಿ, ಮತ್ತು ಮುದ್ದೇಬಿಹಾಳ ತಾಲೂಕುಗಳು ಇದರಲ್ಲಿ ಅಂತರ್ಭೂತವಾಗುತ್ತವೆ. ಅಲ್ಲದೆ ಇದರ ಸುತ್ತಲಿನ ಪ್ರದೇಶಗಳಾದ ಸಾಂಗಲಿ ಮತ್ತು ಜತ್ತ ಸಂಸ್ಥಾನಗಳೂ ಕೂಡ ಇದರಲ್ಲಿ ಸೇರ್ಪಡೆಯಾಗುತ್ತವೆ. ನಾವು ಮೇಲೆ ಉಲ್ಲೇಖಿಸಿದ ಮುದನೂರು ಪ್ರದೇಶವಾದರೂ ಈ ಪ್ರಾಂತಕ್ಕೆಯೇ ಹೊಂದಿ ಪೂರ್ವದಿಕ್ಕಿಗೆ ಪಸರಿಸಿರುತ್ತದೆ. ಈ ಭಾಗಗಳು ಮೊದಲು ವೀರಶೈವ ಚಳವಳಿಯ ಕೇಂದ್ರಸ್ಥಾನಗಳಾಗಿದ್ದವೆಂದು ಕಂಡು ಬರುತ್ತದೆ. ಆದ್ದರಿಂದ ಈ ಯಾವ ಯಾವ ತಾಲೂಕುಗಳಲ್ಲಿ ಯಾವ ಯಾವ ಶರಣರು ಉದಯಿಸಿದರೆಂಬುದನ್ನು ನಾವು ಇಲ್ಲಿ ನಿರ್ದೇಶಿಸುತ್ತೇವೆ. ಆದರೆ ವಿಸ್ತಾರ ಭಯಕ್ಕಾಗಿ ನಾವು ಆಯಾ ಶಿವಶರಣರ ಚರಿತ್ರೆಗಳನ್ನು ಇಲ್ಲಿ ಉದಹರಿಸುವದಿಲ್ಲ.



## ಸೊಲ್ಲಾಪುರ ತಾಲೂಕು.

ಮಂಗಳವಾಡ:— ಇಲ್ಲಿ ರೇವಣಸಿದ್ಧನು ಬಹು ದಿವಸ ವಾಸಮಾಡಿದ್ದನು. ಮಧುವರಸನು ಕೂಡ ಇದೇ ಪಟ್ಟಣದವನಾಗಿದ್ದನು. ರೇವಣಸಿದ್ಧನ ಮಗನಾದ ರುದ್ರಮುನಿಯೂ ಸಹ ಇಲ್ಲಿಯೇ ಗುರುಪಟ್ಟವನ್ನು ಹೊಂದಿ ಬಹು ದಿವಸ ವಾಸಿಸಿದನು. ಈ ಸ್ಥಾನವು ಕೆಲವು ಕಾಲ ಚಾಲುಕ್ಯ ಮತ್ತು ಕಲಚೂರ್ಯ ರಾಜರ ಆವಾಸಸ್ಥಾನವಾಗಿತ್ತು. ಇದು ಈಗ ಸಾಂಗಲಿ ಸಂಸ್ಥಾನಕ್ಕೆ ಸೇರಿದ್ದು ಸೊಲ್ಲಾಪುರ ತಾಲೂಕಿನಲ್ಲಿ ಅಂತರ್ಗತವಾಗಿದೆ.

ಮಾಸನೂರು:— ಇಲ್ಲಿಯೇ ಬಿಜ್ಜಳನು ರೇವಣಸಿದ್ಧನ ಸುರಿಗಿಯನ್ನು ಮಡುವಿನೊಳಗಿಂದ ಅವಸಿಂದ ಎತ್ತಿಕೊಂಡು ಸ್ವೀಕರಿಸಿದನು. ಈಗಲೂ ಈ ಸ್ಥಳವು ಪುಣ್ಯಭೂಮಿಯೆನಿಸಿಕೊಂಡಿದೆ.

ಪುಳುಜೆ:— ಇಲ್ಲಿ ಅಮುಗಿದೇವನು ಇದ್ದುಕೊಂಡು ಪ್ರಸಿದ್ಧನಾದನು. ಇದು ಭೀಮಾ ತೀರದಲ್ಲಿದೆ. ಈತನಿಗೆ ಯಾದವ ನೃಪಾಲನಾದ ಸಿಂಘಣನು ದತ್ತಿ ಬಿಟ್ಟಿದ್ದರ ಉಲ್ಲೇಖವು ಇಲ್ಲಿಯ ದೇವಾಲಯದಲ್ಲಿರುವ ಶಿಲಾಶಾಸನದಲ್ಲಿದೆ. ಈತನು ಶಿವಾನುಭವ ಮಂಟಪದಲ್ಲಿದ್ದುಕೊಂಡು ಪ್ರಸಿದ್ಧ ವಚನಕಾರನಾದನು.

ವಾಡಪುರಿ:— ಇಲ್ಲಿ ವರದಾನಿ ಗುಡ್ಡಮ್ಮೆಯ ದೇವಸ್ಥಾನವನ್ನು ದೇವಗಿರಿ ಯಾದವರಾಜರ ಮಾಂಡಲಿಕನೊಬ್ಬನು ಸ್ಥಾಪಿಸಿದನೆಂದು ಶಿಲಾಲೇಖದಿಂದ ತಿಳಿದುಬರುತ್ತಿದೆ.

ಸೊನ್ನಲಿಗೆ:— ಇದು ಈಗಿನ ಸೊಲ್ಲಾಪುರ ಪಟ್ಟಣವಿರುತ್ತದೆ. ಇಲ್ಲಿ ಶ್ರೀಸಿದ್ಧರಾಮೇಶ್ವರನು ಜನಿಸಿ ಬಹು ಪ್ರಸಿದ್ಧನಾದನು. ಈತನು ಮಹತ್ವದ ವಚನಕಾರನು.

ಮೇಲೆ ಉಲ್ಲೇಖಿಸಿದ ಕೆಲವು ಗ್ರಾಮಗಳು ಸೊಲ್ಲಾಪುರ ಮತ್ತು ಇಂಡೀ ತಾಲೂಕುಗಳ ಮೇರೆಯಲ್ಲಿ ಪ್ರವಹಿಸುವ ಭೀಮಾ ತೀರದಲ್ಲಿರುತ್ತವೆ. ಇಂಡೀ ತಾಲೂಕಿನಲ್ಲಿಯೂ ಕೆಲವು ಶಿವಶರಣರ ಸ್ಥಾನಗಳಿರುತ್ತವೆ.

## ಇಂಡಿ ತಾಲೂಕು.

ಇಂಡಿ:— ಇಲ್ಲಿ ಶಾಂತಯ್ಯನೆಂಬ ಶಿವಶರಣನು ಉದಯವಾದನು. ಸಹಸ್ರಗಣ ಮಾಲೆಯಲ್ಲಿ ಈತನ ಹೆಸರು ಬಂದಿರುತ್ತದೆ. ಈತನ ದೇವಾಲಯವು ಈ ಗ್ರಾಮದಲ್ಲಿದೆ.

ಹಾವಿನ ಹಾಳ:— ಈ ಗ್ರಾಮವು ಈ ತಾಲೂಕಿನಲ್ಲಿದ್ದು ಇಲ್ಲಿ ಹಾವಿನಹಾಳ ಕಲ್ಲಯ್ಯನೆಂದು ಪ್ರಸಿದ್ಧಿ ಹೊಂದಿದ ವಚನಕಾರನು ಜನಿಸಿದನು. ಹರಿಹರ ಕವಿಯು ಆತನ ವಿಷಯವಾಗಿ ಒಂದು ರಗಳೆಯನ್ನು ರಚಿಸಿದ್ದಾನೆ. ಈತನು ರುದ್ರಮುನಿಯಿಂದ ಉಪದೇಶಹೊಂದಿದನು.

ಕರಜಗಿ:— ಇದು ಗಜೇಶ ಮಸಣಯ್ಯನೆಂಬ ಪ್ರಸಿದ್ಧ ವಚನಕಾರನ ಸ್ಥಾನವಾಗಿರುತ್ತದೆ. ಇದು ಇಂಡೀ ತಾಲೂಕಿನಲ್ಲಿ ಅಂತರ್ಗತವಾಗುವ ಜತ್ತ ಸಂಸ್ಥಾನದಲ್ಲಿದೆ.

ರೇಣಾವಿ:— ಇದು ಇಂಡೀ ತಾಲೂಕಿನ ಮೇರೆಯಿಂದ ಪಶ್ಚಿಮಕ್ಕೆ ೬೦ ಮೈಲು ದೂರವಿರುತ್ತದೆ. ರೇವಣಸಿದ್ಧನು ವಾಸವಾಗಿದ್ದ ಪುಣ್ಯಭೂಮಿಯಾಗಿರುತ್ತದೆ. ಇದು ಈಗ ಸಾತಾರಾ ಜಿಲ್ಲೆಯಲ್ಲಿ ಸಮಾವೇಶವಾಗಿದೆ.

## ಸಿಂದಗಿ ತಾಲೂಕು.

ಈ ತಾಲೂಕು ಇಂಡೀ ತಾಲೂಕಿನ ಪೂರ್ವಕ್ಕೆ ಹೊಂದಿದ್ದು ಇಲ್ಲಿಯೂ ಕೂಡ ಅನೇಕ ಶಿವಶರಣರ ಸ್ಥಾನಗಳಿವೆ.

ಹಿಪ್ಪರಿಗೆ:— ಇಲ್ಲಿ ಮಡಿವಾಳ ಮಾಚಿದೇವನು ಜನಿಸಿದನು. ಬಸವೇಶ್ವರನ ಕಾಲದಲ್ಲಿ ಅದ್ಭುತ ಸಾಹಸವನ್ನು ತೋರಿಸಿದ್ದಾನೆ. ಮುಂದೆ ಕಲ್ಯಾಣಕ್ಕೆ ಹೋಗಿ ಶಿವಾನುಭವ ಮಂಟಪದಲ್ಲಿ ಸೇರಿಕೊಂಡು ಬಸವೇಶ್ವರನಿಗೆ ಸಹಾಯಕನಾಗಿ ವರ್ತಿಸಿದನು. ಈತನೂ ಕೂಡ ವಚನಕಾರನಿದ್ದಾನೆ.

ಕೊಂಡಗುಳಿ:— ಇದು ಕೊಂಡಗುಳಿಯ ಕೇಶಿರಾಜನ ಸ್ಥಾನವು. ಹಿಪ್ಪರಿಗೆಯ ದಕ್ಷಿಣಕ್ಕೆ ೧೦ ಮೈಲು ದೂರದಲ್ಲಿದೆ. ಈ ಕೇಶಿರಾಜನು ಬಿಜ್ಜಳನ ತಂದೆಯಾದ ಪೆರ್ಮಾಡಿರಾಯನ ಆಸ್ಥಾನದಲ್ಲಿ ಕೆಲಕಾಲ ಮಂತ್ರಿಯಾಗಿದ್ದನು. ಈತನು ಉತ್ತಮ ಕವಿಯೆಂದು ಹೆಸರಾಗಿದ್ದಾನೆ.



ಗೊಲ್ಲಗಿರಿ:— ಇದು ಗೊಲ್ಲಾಳಯ್ಯನ ಪ್ರಸಿದ್ಧ ಸ್ಥಾನವು. ಈತನು ವಚನಕಾರನಿದ್ದಾನೆ.

ಕಕ್ಕಳಮೇಲಿ:— ಇದು ಕಕ್ಕಯ್ಯನ ಸ್ಥಾನವು. ಕಕ್ಕಯ್ಯನು ವಚನಕಾರನಿದ್ದಾನೆ.

ಕುಳೇ ಕುಮಟಿಗಿ:— ಇದು ವಚನಕಾರನಾದ ಸುಲಿಯ ಚಂದಯ್ಯನ ಸ್ಥಾನವು. ಬಸವೇಶ್ವರನ ಕಾಲದಲ್ಲಿ ಶಿವಾನುಭವ ಮಂಟಪದಲ್ಲಿದ್ದುಕೊಂಡು ಬಹು ಪ್ರಸಿದ್ಧನಾದನು.

ಮಲಘಾಣ:— ಇದು ಮಲ್ಲಿಬೊಮ್ಮಯ್ಯನ ಸ್ಥಾನವೆಂದು ಪ್ರತೀತಿ ಇದೆ.

ಆಲಮೇಲ:— ಇದು ಜಗದೇವನ ಸ್ಥಾನವೆಂದು ಪ್ರತೀತಿ ಇದೆ.

ಮೇಲ್ಕಂಡ ಎರಡು ಸ್ಥಳಗಳು ಪರಸ್ಪರ ೭—೮ ಮೈಲು ಅಂತರದ ಮೇಲಿದ್ದು ಬಿಜ್ಜಳನನ್ನು ಇರಿದ ಜಗದೇವ ಮಲ್ಲಿಬೊಮ್ಮಯ್ಯಗಳು ಇಲ್ಲಿಯವರೇ ಎಂಬ ತಿಳುವಳಿಕೆ ಜನರಲ್ಲಿ ಇದೆ.

ಮುದನೂರು:— ಇದು ಸಿಂದಿಗಿ ತಾಲೂಕಿನ ಮೇರೆಯ ಪೂರ್ವಕ್ಕೆ ೩೫ ಮೈಲು ದೂರ ಇದ್ದು ಇದು ದೇವರದಾಸಿಮಯ್ಯನ ಸ್ಥಾನವಿರುತ್ತದೆ. ಇಲ್ಲಿ ಆತನ ಅನೇಕ ಕುರುಹುಗಳಿರುತ್ತವೆ. ದೇವರದಾಸಿಮಯ್ಯನು ಬಹು ಪ್ರಸಿದ್ಧ ವಚನಕಾರನಿದ್ದಾನೆ.

## ವಿಜಾಪುರ ತಾಲೂಕು

ಹರಳಯ್ಯನ ಗುಂಡು:— ಈ ತಾಲೂಕಿನಲ್ಲಿ ಹರಳಯ್ಯನ ಗುಂಡವೆಂಬ ಹೆಸರಿನ ಪುಣ್ಯಸ್ಥಳವಿದೆ. ಇಲ್ಲಿ ಹರಳಯ್ಯನು ಕೆಲಕಾಲ ವಾಸವಾಗಿದ್ದನೆಂದು ಹೇಳಲ್ಪಡುತ್ತಿದೆ.

ಗುಡ್ಡಾಪುರ:— ಇದು ಜತ್ತ ಸಂಸ್ಥಾನದಲ್ಲಿ ವಿಜಾಪುರ ತಾಲೂಕಿನ ಮೇರೆಯಿಂದ ಪಶ್ಚಿಮಕ್ಕೆ ೧೦ ಮೈಲು ದೂರವಿರುತ್ತದೆ. ಇದು ಪ್ರಸಿದ್ಧ ಶಿವಶರಣಿಯಾದ ವರದಾನಿಗುಡ್ಡಮ್ಮೆಯ ಸ್ಥಾನವು. ಈಕೆಯು ಶೂರಸ್ತ್ರೀಯಳು. ವೈರಿಗಳೊಡನೆ ಯುದ್ಧವನ್ನು ಮಾಡಿ ಶಿವಲಿಂಗವನ್ನು ಸ್ಥಾಪಿಸಿದಳು.

## ಬಾಗೇವಾಡಿ ತಾಲೂಕು.

ವಿಜಾಪುರ ಮತ್ತು ಸಿಂದಗಿ ತಾಲೂಕುಗಳ ದಕ್ಷಿಣಕ್ಕೆ ಈ ತಾಲೂಕು ಇದೆ. ಇದರಲ್ಲಿ ಪ್ರಸಿದ್ಧಿಗೆ ಬಂದ ಶಿವಶರಣರು ಮತ್ತು ವಚನಕಾರರು ಕೆಳಗೆ ವಿವರಿಸಲ್ಪಟ್ಟಿದ್ದಾರೆ.

ಬಾಗೇವಾಡಿ:— ಇದು ಬಸವೇಶ್ವರನ ಜನ್ಮಸ್ಥಳವಾಗಿದೆ. ಇದು ಈ ತಾಲೂಕಿನ ಮುಖ್ಯ ಗ್ರಾಮವು.

ಚಿಮ್ಮಲಿಗೆ:— ಇದು ಚಂದಿಮರಸು, ನಿಜಗುಣರ ವಾಸಸ್ಥಳವು. ಇವರಿಬ್ಬರೂ ವೀರಶೈವ ವಚನಕಾರರಲ್ಲಿ ಬಹು ಪ್ರಸಿದ್ಧರು. ಚಂದಿಮರಸನ ಮುದ್ರಿಕೆಯು "ಸಿಮ್ಮಲಿಗೆಯ ಚನ್ನರಾಮಾ" ಎಂದು ಇದ್ದು ಇವನ ವಚನವು ಶಿವಾನುಭವ ಗ್ರಂಥ ಮಾಲೆಯಲ್ಲಿ ಪ್ರಸಿದ್ಧಿಸಲ್ಪಟ್ಟಿದೆ. ಸಿಮ್ಮಲಿಗೆ, ಚಿಮ್ಮಲಿಗೆ ಈ ಎರಡೂ ಹೆಸರುಗಳು ಒಂದೇ ಇವೆ. ಚಂದಿಮರಸನ ಗುರುವು ನಿಜಗುಣನು. "ನಿಜಗುಣಯೋಗಿಯ ಯೋಗಾ" ಎಂಬುದು ಈತನ ಮುದ್ರಿಕೆಯು.

ಇಂಗುಳೇಶ್ವರ:— ಇದು ಬಾಗೇವಾಡಿಯ ಉತ್ತರಕ್ಕೆ ೪ ಮೈಲುಗಳ ಮೇಲೆ ಇದೆ. ಇಲ್ಲಿ ರೇವಣಸಿದ್ಧೇಶ್ವರನ ಗವಿಯೊಂದಿದೆ.

## ಮುದ್ದೇಬಿಹಾಳ ತಾಲೂಕು.

ಈ ತಾಲೂಕು ಬಾಗೇವಾಡಿ ತಾಲೂಕಿಗೆ ದಕ್ಷಿಣಕ್ಕೆ ಹೊಂದಿರುತ್ತದೆ. ಇದರ ದಕ್ಷಿಣದ ಮೇರೆಯಲ್ಲಿ ಕೃಷ್ಣಾನದಿಯು ಪ್ರವಹಿಸುತ್ತಿದೆ.

ಸಂಗಮ:— ಮಲಪ್ರಭಾ ಮತ್ತು ಕೃಷ್ಣೆಯ ಸಂಗಮಸ್ಥಳದಲ್ಲಿ ಶ್ರೀ ಬಸವೇಶ್ವರನು ಐಕ್ಯಹೊಂದಿದನು.

ತಂಗಡಿಗಿ:— ಇದು ಈ ತಾಲೂಕಿನಲ್ಲಿ ಮೇಲ್ಕಂಡ ಸಂಗಮದ ಸ್ಥಳದಲ್ಲಿಯೇ ಇದ್ದು ಇಲ್ಲಿಯೇ ಬಸವೇಶ್ವರನ ಪತ್ನಿಯಾದ ನೀಲಾಂಬಿಕೆಯು ತನ್ನ ಲಿಂಗದಲ್ಲಿ ಐಕ್ಯವಾದಳು. ಆಕೆಯ ಸಮಾಧಿಯು ಈ ಗ್ರಾಮದಲ್ಲಿ ಕೃಷ್ಣಾ ತಟಾಕದ ಮೇಲಿದೆ.

ಬಾಹೂರು:— ಪ್ರಸಿದ್ಧ ಶಿವಶರಣನಾದ ಬಾಹೂರು ಬೊಮ್ಮಯು ಮುದ್ದೇಬಿಹಾಳ ಗ್ರಾಮಕ್ಕೆ ಸಮೀಪವಿರುವ ಬಾಹೂರ ಎಂಬ ಗ್ರಾಮದವನು.



ಕೋಡಗನೂರು:— ಇದು ಇದೇ ತಾಲೂಕಿನಲ್ಲಿ ತಾಳೀಕೋಟೆಯ ಈಶಾನ್ಯಕ್ಕೆ ೬ ಮೈಲಿನ ಮೇಲೆ ಇದೆ. ಸೌಂದರನೆಂಬೆಣ್ಣನು ಇಲ್ಲಿ ಇದ್ದನೆಂದು ಇಲ್ಲಿಯ ಜನರ ಹೇಳಿಕೆ ಇದೆ.

ಕಾರಗನೂರು:— ಕೋಡಗನೂರಿನ ಬಳಿಯಲ್ಲಿಯೇ ಕಾರಗನೂರು ಇದೆ. ಇದು ಚೇರಮರಾಯನ ಪಟ್ಟಣವೆಂದು ಹೇಳಲ್ಪಡುತ್ತಿದೆ.

ಕಾರಗನೂರು, ಕೋಡಗನೂರು ಇವು ಹಳೆಯ ಪಟ್ಟಣಗಳಿದ್ದು ಇಲ್ಲಿ ಪುರಾತನ ಅವಶೇಷಗಳು ಹೇರಳವಾಗಿವೆ.

ಅಗ್ನಿ:— ಈ ಗ್ರಾಮವು ಮೇಲ್ಕಂಡ ಎರಡು ಗ್ರಾಮಗಳಿಂದ ೮-೧೦ ಮೈಲು ದೂರದ ಮೇಲೆ ಪೂರ್ವಕ್ಕೆ ನಿಜಾಮನ ರಾಜ್ಯದಲ್ಲಿದ್ದು ಅದು ಅಗ್ಗವಣಿಯ ಹೊನ್ನಮ್ಮನೆಂಬ ಪ್ರಸಿದ್ಧ ಶಿವಶರಣಿಯ ಸ್ಥಾನವು. ಇಲ್ಲಿ ಆಕೆಯ ಹೆಸರಿನ ದೇವಾಲಯವಿದೆ.

ಕೆಂಭಾವಿ:— ಇದು ತಾಳೀಕೋಟೆಯಿಂದ ೨೦-೨೪ ಮೈಲುಗಳ ಮೇಲೆ ಈಶಾನ್ಯಕ್ಕೆ ಒಂದು ಗ್ರಾಮವಾಗಿದ್ದು ಇಲ್ಲಿ ಭೋಗಯ್ಯನು ವಾಸವಾಗಿದ್ದನು. ಆತನ ಅವಶೇಷಗಳು ಇಲ್ಲಿ ಅನೇಕವಿರುತ್ತವೆ. ಹರಿಹರನು ಈತನ ವಿಷಯವಾಗಿ ಒಂದು ರಗಳೆಯನ್ನು ರಚಿಸಿದ್ದಾನೆ. ಇದು ನಿಜಾಮನ ರಾಜ್ಯದಲ್ಲಿದೆ.

ನವಿಲಿ:— ಇದು ಕೃಷ್ಣಾ ತಟಾಕದಲ್ಲಿ ಈ ತಾಲೂಕಿನ ಪೂರ್ವಕ್ಕೆ ೧೦-೧೨ ಮೈಲುಗಳ ಮೇಲೆ ಇದ್ದು ಇದು ಶಂಕರದಾಸಿಮಯ್ಯನ ಸ್ಥಾನವು. ಇಲ್ಲಿ ಆತನ ಅವಶೇಷಗಳಿವೆ. ಅವನ ವಿಷಯವಾಗಿ ಹರಿಹರನು ಒಂದು ರಗಳೆಯನ್ನು ರಚಿಸಿದ್ದಾನೆ.

## ಬಾಗಲಕೋಟೆ ತಾಲೂಕು

ಇಲ್ಲಾಳ:— ಇಲ್ಲಿ ಇಲಿಹಾಳ ಬೊಮ್ಮಯ್ಯನೆಂಬ ಪ್ರಸಿದ್ಧ ಶಿವಶರಣನಿದ್ದನು. ಈತನು ಪೆರ್ಮಾಡಿ ರಾಜನ ಕಾಲದಲ್ಲಿದ್ದನು. ಹರಿಹರನು ಆತನ ಬಗ್ಗೆ ಒಂದು ರಗಳೆಯನ್ನು ರಚಿಸಿದ್ದಾನೆ. ಈ ಗ್ರಾಮವು ಘಟಪ್ರಭಾ ನದಿಯ ದಂಡೆಯ ಮೇಲೆ ಇದೆ. ಇಲ್ಲಿ ಈ ಶಿವಶರಣನ ಅನೇಕ ಕುರುಹುಗಳು ಈಗಲೂ ತೋರಿಸಲ್ಪಡುತ್ತಿವೆ.

ಹುನಗುಂದ ಮತ್ತು ಬದಾಮಿ ತಾಲೂಕುಗಳು ಮತ್ತು ಬೀಳಗಿ ಪೇಟಾ ಇಲ್ಲಿ ಬದಾಮಿ, ಮತ್ತು ಕಲ್ಯಾಣ ಚಾಲುಕ್ಯರ ಮತ್ತು ಸವದತ್ತಿ ರಟ್ಟ ರಾಜರ ಅನೇಕ ಕುರುಹುಗಳು ಇವೆ. ಆದರೆ ಬಸವೇಶ್ವರನ ಕಾಲದಲ್ಲಿ ಪ್ರಸಿದ್ಧಿಗೆ ಬಂದ ಶಿವಶರಣರ ಸ್ಥಾನಗಳು ಮಾತ್ರ ನನಗೆ ಉಪಲಬ್ಧವಾಗಿಲ್ಲ. ಆದರೆ ಅವನ ತರುವಾಯ ವಿಜಯನಗರ ರಾಜರು ಮತ್ತು ವಿಜಾಪುರ ಬಾದಶಹರು ಈ ಭಾಗದಲ್ಲಿ ನೆಲಿಸಿದ ಬಳಿಕ ಈ ತಾಲೂಕುಗಳಲ್ಲಿ ವೀರಶೈವ ಅನೇಕ ಮಹತ್ತ್ವಿಕರು ಆಗಿ ಹೋಗಿದ್ದು ಅವರ ಅನೇಕ ಸ್ಥಾನಗಳಿವೆ. ಆದರೆ ಅವುಗಳನ್ನು ಇಲ್ಲಿ ಈಗ ವಿವರಿಸುವದು ಅಪ್ರಸ್ತುತವಾದದ್ದು.

ಇದರಂತೆಯೇ ರಾಯಚೂರು ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಪುರಾತನ ಶಿವಶರಣರ ಸ್ಥಾನಗಳಿವೆ. ಅವುಗಳನ್ನು ನಾವು ಮುಂದಿನ ಲೇಖದಲ್ಲಿ ವಿವರಿಸಿ ಇವೆಲ್ಲ ಸ್ಥಾನಗಳ ಮೇಲಿಂದ ವೀರಶೈವ ಧರ್ಮದ ಜಾಗ್ರತಿ ಮತ್ತು ಪ್ರಸಾರ ಈ ಕಾರ್ಯಗಳು ಬಸವೇಶ್ವರನ ಕಾಲದಲ್ಲಿ ಹೇಗೆ ಜರಗಿದವೆಂಬ ವಿಷಯದ ಮೇಲೆ ಯಾವ ಪ್ರಕಾಶವು ಬೀಳುತ್ತದೆಂಬುದನ್ನು ಕುರಿತು ವಿವೇಚಿಸುವೆವು.



# ವೀರಶೈವರ ಲಿಂಗವೂ ಲಿಂಗಪೂಜೆಯೂ.

(ಲೇಖಕ:— ಶ್ರೀಯುತ ಬಸವಪ್ಪ ಚೆನ್ನಪ್ಪ ಹಟ್ಟೀದ- ಒಂಟಮುರಿ)

ಶಿವನನ್ನು ( ಲಿಂಗವನ್ನು ) ಆರಾಧಿಸುವವರು ಶೈವರು. ಆ ಲಿಂಗದಲ್ಲಿ ಅತ್ಯಂತ ಭಕ್ತಿಯನ್ನು ವಹಿಸಿದವರು ವೀರಶೈವರು. ಅಷ್ಟಾವರಣಗಳೇ ಅವರ ಮುಖ್ಯ ಚಿಹ್ನವು. ಅವುಗಳಲ್ಲಿ ಲಿಂಗವೇ ಪ್ರಧಾನವಾದುದು. ಉಳಿದವೆಲ್ಲ ಲಿಂಗಮುದ್ರಿಕ್ಯವಾಗಿಯೇ ಉಂಟು. ಆ ಲಿಂಗದ ಪೂಜೆಯೇ ಸಾಂಪ್ರತದ ಬರೆಹದ ವಿಷಯವು.

ಲಿಂಗವು ಗುರುಕರುಣೆಯ ಫಲವಾಗಿದೆ. ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ದೇಹಗಳಿರುವದರಿಂದ ಆತನು ಧರಿಸುವ ಲಿಂಗವಾದರೂ ಇಷ್ಟ-ಪ್ರಾಣ-ಭಾವಗಳೆಂಬ ಮೂರು ತೆರನಾಗಿ ಕ್ರಮದಿಂದ ಆ ದೇಹಗಳಿಗೆ ಸಂಬಂಧಿಸಲ್ಪಡುವದು. ಇವುಗಳಲ್ಲಿ ಸ್ಥೂಲ ದೇಹ ಮತ್ತು ಅದರ ಮೇಲೆ ಧರಿಸುವ ಇಷ್ಟಲಿಂಗ ಇವೆರಡು ಮಾತ್ರ ಪ್ರತ್ಯಕ್ಷ ಗೋಚರಿಸುತ್ತಿರುವದರಿಂದ, ಅವಷ್ಟೇ ಎಲ್ಲರಿಗೂ ಸುಲಭವಾಗಿ ಗೊತ್ತಾಗುವವು. ಆದರೆ ಉಳಿದೆರಡು ದೇಹಗಳೂ ಅವುಗಳಲ್ಲಿ ಧರಿಸಿದ ಲಿಂಗಗಳೂ ಅಪ್ರತ್ಯಕ್ಷ (ಆಂತರಿಕ) ವಾಗಿರುವದರಿಂದ, ಅವುಗಳ ಕಡೆಗೆ ಜನರ ಲಕ್ಷ್ಯವು ಹೋಗದಿರುವದು ಸ್ವಾಭಾವಿಕ! ಆದುದರಿಂದ ಸಾಮಾನ್ಯ ಜನಸಮೂಹವು— ಲಿಂಗವೆಂದರೆ ಇಷ್ಟಲಿಂಗ, ಅದರ ಪೂಜೆಯೆಂದರೆ ಜಲವೆರೆದು ವಿಭೂತಿ ಗಂಧಾದಿ ಧರಿಸಿ ಹೂಪತ್ರಿಗಳನ್ನಿಟ್ಟು ಧೂಪ-ದೀಪಾದಿ ಬೆಳಗಿ ಶಿವನಾಮ ಘೋಷದೊಡನೆ ವಂದಿಸಿ ನೈವೇದ್ಯ ತೋರಿಸುವದು; ಎಂಬದನ್ನಿಷ್ಟೇ ಬಲ್ಲುದು. ಆದರೆ ಇಂತಹ ಪೂಜೆಯಿಂದ ಒದಗುವ ಪ್ರಯೋಜನವೇನು? ಅದು ಮನುಷ್ಯನ ಆತ್ಯಂತಿಕ ಸುಖಕ್ಕೆ- ಉದ್ಧಾರಕ್ಕೆ ಕಾರಣವಾಗುವದೇ? ಎಂದೂ ಶಕ್ಯವಿಲ್ಲ. ಇದು ಲಿಂಗದ ಹಾಗು ಲಿಂಗಪೂಜೆಯ ಉಪಹಾಸ ಮಾತ್ರ ಮಾಡಿದ ಹಾಗಾಗುವದು! ಅಂತರ್ಲಿಂಗಗಳೊತ್ತಟ್ಟಿಗಿರಲಿ. ಇದರಿಂದ ಬಹಿರ್ಲಿಂಗದ ಪೂಜೆಯು ಸಹ ನೆರವೇರದು!! ವೀರಶೈವರು ಲಿಂಗಪೂಜೆಯ ದ್ವಾರವಾಗಿ ಗುರು-ಲಿಂಗ-ಜಂಗಮಕ್ಕೆ ಭಕ್ತಿ-ಜ್ಞಾನ-ವೈರಾಗ್ಯಗಳೊಡನೆ ತನು ಮನ-ಧನಗಳನ್ನು ನಿರ್ವಂಚನೆಯಿಂದ ಅರ್ಪಿಸಿ (ಅಂದರೆ ತ್ರಿವಿಧ ದಾಸೋಹವನ್ನು ಮಾಡಿ)

ಅವುಗಳ ಶುದ್ಧ-ಸಿದ್ಧ-ಪ್ರಸಿದ್ಧ. ಪ್ರಸಾದಗಳನ್ನು ಪಡೆದು ಕೃತಾರ್ಥರಾಗುವದಿರುತ್ತದೆಂಬದನ್ನು ಪೂರ್ಣ ನೆನಪಿಡತಕ್ಕದ್ದು. ಲಿಂಗಾಂಗಿಗಳಾದ ನಾವು ಇತರರಂತೆ ಪ್ರಪಂಚದ ವಿಷಯಗಳಿಗೆ ಮೋಹಿಸಿ ಅವುಗಳನ್ನನು ಭೋಗಿಸುವದೇ ಜನ್ಮದ ಇತಿಕರ್ತವ್ಯವೆಂದು ಅನ್ನುವವರಲ್ಲ. ಇದು, "ದೇಹವೇ ತಾನು" ಎಂದು ನಂಬುವ ಪ್ರಾಕೃತರ ವಿಚಾರವು. ನಾವು ಅಪ್ರಾಕೃತರು. (ತನುವು ನಾನಲ್ಲ. ಆತ್ಮನೇ ನಾನು ಎಂದು ಭಾವಿಸುವವರು.) ಮಾಡುವದೂ ಜೀವಿಸುವದೂ ಪಿಂಡಕ್ಕೋಸ್ಕರ (ನಶ್ವರ ಶರೀರದ ದೃಢತೆಗೆ) ಅಲ್ಲ; ಆತ್ಮೋದ್ಧಾರಕ್ಕೆ! ಆದುದರಿಂದ ವೀರಶೈವರು ಭಕ್ತಿಯನ್ನು ತಳೆದು ನಿವೃತ್ತಿಯನ್ನು ಧರಿಸಿ ಜ್ಞಾನಮಾರ್ಗದಿಂದಲೇ ವರ್ತಿಸತಕ್ಕವರು. ಅಂದರೆ ದೇಹಧಾರಣದ ಮಟ್ಟಿಗೆ ಮಾತ್ರ ವಿಷಯೋಪಭೋಗಗಳನ್ನು ಎಚ್ಚರವಿಡಿದು ಮಿತಿಯಿಂದ ಮಾಡಿ, ಸಾತ್ವಿಕತನದಿಂದ ಜೀವಿಸಿ, ಜನ್ಮಸಾಫಲ್ಯವನ್ನು ಸಾಧಿಸಿ, ಕೊನೆಗೆ ತಪ್ಪದೆ ಮುಕ್ತರಾಗತಕ್ಕವರು.

## ಇಷ್ಟಲಿಂಗ ಪೂಜೆಯು.

ಬಹಿರ್ಗತವಾದ ಈ ಇಷ್ಟಲಿಂಗವು ಭಕ್ತನ ದೇಹದ ಪ್ರತೀಕವು. ಅದು ತನುವಿನ ಪ್ರಮಾಣದಲ್ಲಿಯೇ ಪಂಚಸೂತ್ರಗಳುಳ್ಳದ್ದಾಗಿಯೂ, ಆಸನಹಾಕಿ ಎರಡೂ ಕೈಗಳನ್ನು ಮುಂದೆ ಚಾಚಿ ತಲೆ ನೆಟ್ಟಗೆ ಮಾಡಿ ನೀಟಾಗಿ ಕುಳಿತರೆ ತೋರುವ ಆಕಾರವುಳ್ಳದ್ದಾಗಿಯೂ ಇರುವದೆಂಬುದೇ ಇದಕ್ಕೆ ಸಾಕ್ಷಿಯಾಗಿದೆ. ಮೇಲಾಗಿ ವಚನಕಾರರು "ಆದಿಯೆಂದರೆ ಶಕ್ತಿ ತತ್ವ, ಅನಾದಿಯೆಂದರೆ ಶಿವತತ್ವ, ಶಕ್ತ್ಯಂಶವಾದುದೇ ಆಶಾಶ್ವತ ದೇಹ, ಶಿವಾಂಶಿಕವೇ ಶಾಶ್ವತವಾದ ಆತ್ಮನು. ದೇಹವೇ ಜೀವಂಗೆ ಒಡಲಾಗಿಹುದು. ಆತ್ಮನೇ ಪ್ರಾಣ, ತದ್ದೇಹಕ್ಕೆ ಚೈತನ್ಯ ಸ್ವರೂಪನಾಗಿರುವನು" ಎಂದೂ ಉಪನಿಷತ್ತು— "ಈಶಾವಾಸ್ಯಮಿದಂ ಸರ್ವಂ" ಅಂದರೆ ಈ ತೋರುವ ಜಗವೆಲ್ಲವೂ ಈಶನ ಗೃಹವಾಗಿದೆ" ಎಂದೂ ಪ್ರತಿಪಾದಿಸಿವೆ. ದೇಹಮೂಲಕವಾಗಿಯೇ ಮನುಷ್ಯರು ತಮ್ಮ ಇಷ್ಟಾರ್ಥಗಳನ್ನು ಪಡೆಯತಕ್ಕದ್ದಿರುವದರಿಂದ, ಅದರ ಪ್ರತೀಕವಾದ ದೃಶ್ಯಲಿಂಗಕ್ಕೆ ಇಷ್ಟಲಿಂಗವೆಂದು ಹೆಸರಿಟ್ಟಿದ್ದು ಸಾರ್ಥಕವದೆ. ಈ ಇಷ್ಟದ ಪೂಜೆಯನ್ನು ಮಾಡಬೇಕೆಂದರೆ ನಿಜವಾಗಿ ಸ್ಥೂಲದೇಹದ ಪೂಜೆಯನ್ನೇ ಮಾಡಬೇಕೆಂದು ಆಜ್ಞಾಪಿಸಿದಂತಾಯಿತೆಂಬದು ತಾನೇ ಸ್ಪಷ್ಟವಾಗು



ವದು. ಆದರೆ ದೇಹದ ಪೂಜೆಯು ಸ್ನಾನ-ವಸ್ತ್ರ-ವಿಭೂತಿ-ಗಂಧಾದಿ ಶೃಂಗಾರ-ಊಟ ತಿನಿಸುಗಳನ್ನು ಮಾಡಿದರೆ ಮಾತ್ರ ತೀರದು. ಇದು ಬರೇ ದೇಹದ ಜೋಪಾಸನೆಯಾಯಿತೇ ವಿನಾ, ಆರಾಧನೆಯಾಗಲಿಲ್ಲ. ಇಂತಹ ರಕ್ಷಣೆಯನ್ನು ಪಶ್ವಾದಿ ಕ್ರಿಮಿಕೀಟಾಂತ ಎಲ್ಲ ಪ್ರಾಣಿಗಳು ಮಾಡಿಕೊಳ್ಳುವದರಿಂದ ಅವು ಸಹ ಲಿಂಗಪೂಜೆ ಮಾಡುತ್ತವೆಂತಲೇ ಒಪ್ಪಬೇಕಾದೀತು; ಜ್ಞಾನಪ್ರಧಾನವಾದ ಮನುಷ್ಯಪ್ರಾಣಿಯ ತನುಪೂಜೆಯು ಭಿನ್ನವಾದುದಿರಲಿಕ್ಕೆಬೇಕೆಂಬದು ನಿರ್ವಿವಾದವು. ಇನ್ನು ಇಂತಹ ವಿಶಿಷ್ಟ ಸ್ವರೂಪದ ಶಾರೀರ ಪೂಜೆಯು ಆದಾವುದು? ಅಂಗದ್ವಾರವಾಗಿ ನಮ್ಮಿಂದ ಯಾವಾಗಲೂ ಸತ್ಕಾರ್ಯಗಳೂ ಸದಾಚರಣೆಯೂ ತಪ್ಪದೆ ಘಟಿಸಬೇಕೆಂಬುದೇ ಆ ಮಹತ್ವದ ಪೂಜೆಯು.

"ಆಚಾರಃ ಪ್ರಥಮೋ ಧರ್ಮಃ" ಎಂದು ಹೇಳಿರುವುದರಿಂದ, ಮನುಷ್ಯನು ಮೊದಲು ಆಚಾರವಂತ (ದೇಹದ ಮೂಲಕ ಪವಿತ್ರ ಕಾರ್ಯಗಳನ್ನು ಮಾಡುವವ) ನಾಗಬೇಕು. ಅನಾಚಾರಿಯಾಗಬಾರದು. "ಆಚಾರವೇ ಸ್ವರ್ಗ, ಅನಾಚಾರವೇ ನರಕ" ಎಂದು ಶ್ರೀಬಸವಣ್ಣನವರು ಸಾರಿದ್ದಾರೆ. ಆದರೆ ಸ್ವಾರ್ಥ ಪ್ರೇರಿತನಾಗಿ, ವಿಷಯಗಳ ಆಶೆಗೆ ಬಿದ್ದು, ನ್ಯಾಯಾನ್ಯಾಯಗಳನ್ನು ಧಿಕ್ಕರಿಸಿಯೇ ಮನುಷ್ಯನು ನಡೆಯುತ್ತಾನೆ. ಇದು ಅಜ್ಞಾನದ ಅತ ಏವ ಅಧರ್ಮದ ಪರಿಣಾಮವು! (೧) ದಿಟವನ್ನೇ ನುಡಿಯುವದು, ಸಟೆಯಾಡಬಾರದು (೨) ಪರದಾರ, ಪರದ್ರವ್ಯಗಳಿಂದ ದೂರಿರಬೇಕು. (೩) ಪರಪೀಡೆ, ಪರಹಿಂಸೆಗಳನ್ನು ಮಾಡಬಾರದು. ದಯಾ ಪರೋಪಕಾರಗಳನ್ನು ವಹಿಸಬೇಕು. (೪) ಆಲಸ್ಯವನ್ನು ಬಿಸುಟಿ, ಕಾಯಕಷ್ಟಗಳಿಂದ ಗಳಿಸಿಯೇ ಉಪಜೀವಿಸಬೇಕು. ಸಾಲ ಮಾಡ ಮಾಡಬಾರದು. (೫) ಭಿಕ್ಷೆಯನ್ನು ಎಂದೆಂದೂ ಬೇಡಬಾರದು. ಮೇಲಾಗಿ ಪ್ರತಿಯೊಬ್ಬನು ಸತ್ಪಾತ್ರದಾನವನ್ನು ಮಾಡಲೇ ಬೇಕು. (೬) ಸುರಾಪಾನಾದಿಗಳನ್ನು ವರ್ಜಿಸಬೇಕು. (೭) ಅರಿಷಡ್ವರ್ಗದ ಬಗ್ಗೆ ಬಲು ವಿವೇಕಿಯೂ ಜಾಗ್ರತನೂ ಆಗಿರಬೇಕು; ಇತ್ಯಾದಿ ನೀತಿ ತತ್ವಗಳನ್ನು ಪ್ರತಿ ನಿತ್ಯದ ವ್ಯವಹಾರದಲ್ಲಿ ತಪ್ಪದೆ ಪಾಲಿಸುವದೇ ಸದಾಚಾರವೆನಿಸುವದು. ಇವುಗಳ ವಿರುದ್ಧವಾದಾಚರಣೆಯೇ ದುರಾಚಾರವು. ಈ ಸದಾಚಾರವಲ್ಲದೆ ವೀರಶೈವರಾದ ನಮ್ಮಲ್ಲಿ ಇನ್ನೂ ನಾಲ್ಕು ಆಚಾರಗಳು ಹೇಳಲ್ಪಟ್ಟವೆ. ಅವು:— ಲಿಂಗಾಚಾರ, ಶಿವಾಚಾರ, ಗಣಾಚಾರ, ಭೃತ್ಯಾ

ಚಾರ; ಒಟ್ಟು ಪಂಚಾಚಾರಗಳನ್ನು ನಾವು ಪಾಲಿಸಬೇಕು. ಈ ಪಂಚಾಚಾರಗಳ ಬಗ್ಗೆ ಶ್ರೀಚೆನ್ನ ಬಸವೇಶ್ವರ ದೇವರು ಹೇಳಿದ್ದೇನೆಂದರೆ "ಲಿಂಗವೇ ಪರವೆಂದರಿದು ಅನ್ಯ ದೇವರ ಭಜನೆಯಿಲ್ಲದಿರ್ಪುದೇ ಲಿಂಗಾಚಾರ. ಸತ್‌ಕ್ರಿಯೆಯಿಂದ ಧನ ಸಂಪಾದಿಸಿ, ಗುರು-ಲಿಂಗ-ಜಂಗಮ ದಾಸೋಹ-ದಾನ-ಪರೋಪಕಾರ ಮಾಡುವದೇ ಸದಾಚಾರ. ಅಂಗದ ಮೇಲೆ ಲಿಂಗವಿರ್ಪ ಶಿವಭಕ್ತನೇ ಶಿವರೂಪನೆಂದರಿದು, ಅವರ ಮಂದಿರ ಹೊಕ್ಕು ಮಿಕ್ಕಿದನುಂಬುವದೇ ಶಿವಾಚಾರ. ಶಿವನಿಂದೆಯನ್ನು ಕಿವಿಯಲ್ಲಿ ಕೇಳದಿಪ್ಪುದೇ ಗಣಾಚಾರ. ತೊಟ್ಟಿಲಲ್ಲಿರ್ಪ ಶಿವಭಕ್ತರ ಶಿಶುವನ್ನು ಸಹ, ಯಜಮಾನನೆಂದರಿದು ನಮ್ರತೆಯಿಂದ ನಡಕೊಳ್ಳುವದೇ ಭೃತ್ಯಾಚಾರ. ಇಂತೀ ಪಂಚಾಚಾರ ಸಂಯುಕ್ತರಾಗಿ ನಡೆವ ಶಿವಭಕ್ತನೊಕ್ಕುಮಿಕ್ಕಿದನಿಕ್ಕಿ ಸಲಹೋ ಕೂಡಲಚೆನ್ನ ಸಂಗಮದೇವ!!"

ಧರ್ಮದ ತಳಹದಿಯಾಗಿರುವ ಈ ಪಂಚಾಚಾರಗಳನ್ನು ಸದ್ಯಕ್ಕೆ ವೀರಶೈವರು ಪಾಲಿಸುತ್ತಿರುವರೇ? ಎಂದು ಮನಕ್ಕೆ ಪ್ರಶ್ನಿಸಿ, ಪ್ರತಿಯೊಬ್ಬನು ಆತ್ಮಶೋಧನೆ ಮಾಡಹತ್ತಿದರೆ, ವಸ್ತು ಸ್ಥಿತಿಯು ಮೂರ್ತಿಮಂತಾಗಿ ಕಣ್ಣೆದುರು ನಿಲ್ಲುವದು. ಮಾತಿನಲ್ಲಿ ಮಾತ್ರ ಇವು ತೋರುವವೇ ಹೊರತು, ಆಚರಣೆಯಲ್ಲಿ ಇವುಗಳನ್ನು ಕೇಳಬಾರದು! ಸದಾಚಾರದ ವಿರುದ್ಧ ಅನಾಚಾರವೇ ಅಳತೆಗೆಟ್ಟಿರುವದು. ಲಿಂಗಾಚಾರಕ್ಕೆ ಪ್ರತಿಯಾಗಿ ಸ್ಥಾವರವೆನಿಸುವ ಕ್ಷೇತ್ರ ಲಿಂಗಗಳೂ ಗ್ರಾಮದೇವರು ಗೃಹದೇವರುಗಳೂ ಬಲಿಷ್ಠವಾಗಿ ಮುಂದೆ ಬಂದು ನಿಲ್ಲುವವು. ಶಿವಾಚಾರಕ್ಕೆ ಬದಲಾಗಿ ಉಚ್ಚ ನೀಚ ತತ್ವಗಳನ್ನೂ ಕಾಯಕಭೇದದಿಂದ ಅನೇಕ ಪಂಗಡಗಳನ್ನೂ ಕಲ್ಪಿಸಿಕೊಂಡು, ಸಮಾಜವನ್ನು ಒಡೆದು ಪುಡಿಪುಡಿ ಮಾಡಿ, ಮಣ್ಣುಕೂಡಿಸಿ ಪಾತಾಳಕ್ಕೆ ಮೆಟ್ಟಿರುವದು ಕಾಣುತ್ತದೆ. ಗಣಾಚಾರವು ಹೇಳಹೆಸರಿಲ್ಲದ್ದಾಗಿ ಅದೆಂತಹ ಅಪಮಾನವನ್ನೂ ಸಹ ನಿರ್ಲಜ್ಜತನದಿಂದ ಸಹಿಸುವ ಅಭಿಮಾನಶೂನ್ಯರಾಗಿದ್ದೇವೆ. ಭೃತ್ಯಾಚಾರದ ವಿರುದ್ಧವಾಗಿ "ನಾನೇ ದೊಡ್ಡವನು" ಎಂಬ ಅಹಂಭಾವವು ಪ್ರತಿಯೊಬ್ಬನಲ್ಲಿ ಬೇರು ಬಿಟ್ಟು ಬೆಳೆದು ನಿಂತಿದೆ. ಶ್ರೀಬಸವಣ್ಣನವರ "ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ........." ಎಂಬ ವಚನದ ಅರಿವೇ ಇಲ್ಲದಂತಾಗಿದೆ. ಈ ಪಂಚಾಚಾರಗಳನ್ನು ಬಿಟ್ಟದ್ದೇ ನಮ್ಮ ಈಗಿನ ಪರಮಾವಧಿ ಹೀನಾವಸ್ಥೆಯ ಮೂಲ ಕಾರಣವು.



ಇದೇ ಮೇರೆಗೆ ಪಂಚಸೂತಕಗಳು (ಜಾತಿ, ಜನನ, ಮರಣ, ರಜಸ್ಸು, ಉಚ್ಛಿಷ್ಟ,) ನಮ್ಮಲ್ಲಿರದಿದ್ದರೂ, ಬ್ರಾಹ್ಮಣಾನುಕರಣ ಪ್ರಿಯರು ಅವನ್ನು ಎದೆಗವಚಿಕೊಂಡು ಕೂತಿದ್ದಾರೆ. ಬ್ರಾಹ್ಮಣರಲ್ಲೇ ಹುಟ್ಟಿ ಬೆಳೆದ ಶ್ರೀಬಸವ ಮಹಾತ್ಮರು ಅವುಗಳಿಗೆ ಹೇಸಿ, ಅವನ್ನು ಬಿಸುಡಿ "ಲಿಂಗಾಧಾರೀ ಸದಾ ಶುಚಿಃ" ಎಂಬದನ್ನು ನೆನೆದು, ಅವುಗಳ ಸಮಾಧಿಯನ್ನು ಮಾಡಿಬಿಟ್ಟಿರಲಿಕ್ಕಾಗಿ, ಅವರ ಅನುಯಾಯಿಗಳು ಬಿಡದೆ ಪುನಃ ಹಿಡಿದಿರುವದು ಅದೆಷ್ಟು ನಾಣ್ಗೇಡೆಂಬದನ್ನು ಅವಶ್ಯವಾಗಿ ಆಲೋಚಿಸಬೇಕು.

ಇದಲ್ಲದೆ "ಪೂರ್ವಜನ್ಮವನಳಿದು ಪುನರ್ಜಾತನಾದ ಬಳಿಕ ಕುಲಬಂಧುಗಳು ಎನ್ನವರೆಂದರೆ ನಾಯಕ ನರಕ ಕೂಡಲಸಂಗಮ ದೇವಾ!" ಎಂದು ಶ್ರೀಬಸವೇಶ್ವರ ದೇವರು ಹಾಡಿದ್ದಾರೆ. ಪೂರ್ವಾಶ್ರಯವನ್ನು ನಿರಸನ ಮಾಡಬೇಕೆಂದು ವೀರಶೈವರಿಗೆ ಧರ್ಮಾಜ್ಞೆಯಿದೆ. "ರಕ್ತ ಸಂಬಂಧಿಗಳಷ್ಟೇ ನಮಗೆ ಬಾಂಧವರು. ಅಥವಾ ನಮ್ಮವರು" ಎಂಬ ತಿಳುವಳಿಕೆಯನ್ನು ಶಿವಭಕ್ತರು ಕಿತ್ತೊಗೆದಿರುವರು. ಗುರು ಬಾಂಧವ್ಯವೇ ನಮಗೆ ಮುಖ್ಯವಾದುದು. ಅಂತೇ ನಮ್ಮಲ್ಲಿ ರಕ್ತ ಸಂಬಂಧದ ಗೋತ್ರಗಳಿಲ್ಲ. ಗುರುಗೋತ್ರಗಳೇ ಗಣಿಸಲ್ಪಡುತ್ತವೆ. ಗುರುಪುತ್ರ (ಶಿವದೀಕ್ಷೆ ಹೊಂದಿದವ) ರೆಲ್ಲರೂ ಬಾಂಧವರೆಂದೂ ಅವರಲ್ಲಿ ಯಾವ ವಿಧದ ಭೇದವನ್ನೆಣಿಸದೆ ಸಾರ್ವತ್ರಿಕವಾಗಿ ಅನ್ನ ಕನ್ಯಾವ್ಯವಹಾರ ನಡಿಸಬೇಕೆಂದೂ ನಮ್ಮ ಧರ್ಮಶಾಸ್ತ್ರವು ಸಾರಿ ಸಾರಿ ಹೇಳುತ್ತದೆ. ಹೀಗೆ ನಡೆದಾಗ ಮಾತ್ರ ಆಣವ-ಮಲವು (ರಕ್ತ ಸಂಬಂಧವಾದ ಆಕುಂಚಿತ ಭಾವನೆಯ ದೋಷವು) ನಾಶವಾಗುವದು.

ಈ ಆಚಾರಗಳನ್ನೆಲ್ಲ ಶರೀರ ಮೂಲಕವಾಗಿ, ಶ್ರದ್ಧಾಪೂರ್ವಕ ಸುಚಿತ್ತವಿಡಿದು ನಾವು ಸರಿಯಾಗಿ ಆಚರಿಸಿದರೆ, ತನುವು ಶುದ್ಧವಾಗುವದು. ಆಗ ಅದು ಗುರುವಿಗೆ ಸಲ್ಲಲಿಕ್ಕೆ ಪಾತ್ರವಾಗುವದು. "ಅರುವೇ ಗುರುವು" ಎಂಬದು ಅನುಭವ ಸಿದ್ಧಶಾಸ್ತ್ರಸಮ್ಮತವಾದ ಮಾತಾಗಿರುತ್ತದೆ. ಆ ಗುರುವಿಗೆ ಅರ್ಥಾತ್ ಅರುವಿಗೆ (ಜ್ಞಾನಕ್ಕೆ) ತನುವನ್ನು ಅರ್ಪಿಸುವದೆಂದರೆ ಯಾವಾಗಲೂ ದೇಹದ್ವಾರವಾಗಿ ನಡೆಯತಕ್ಕ ಕಾರ್ಯಗಳು ಜ್ಞಾನವಿಡಿದು ಮಾಡಿದಂತಹವೇ ಆಗಿರಬೇಕೆಂಬರ್ಥ! ಹೀಗೆ ಜ್ಞಾನಕ್ಕೆ ಒಳಗಾಗಿ ದೇಹವು ನಡೆಯುತ್ತಿದ್ದರೆ, ಅದರಿಂದ ಅದಾವ

ದುಷ್ಕೃತ್ಯವೂ ಆಗಲಾರದು. ನಿರಂತರ ಸತ್ಕಾರ್ಯಗಳೇ ಜರಗುವವು;
ಎಂಬವರಲ್ಲಿ ಸಂದೇಹವಿಲ್ಲ. ಹೀಗಾದರೆ ಮಾತ್ರ ವೀರಶೈವನು ಗುರು
ವಿಗೆ ತನುವನ್ನು ಅರ್ಪಿಸಿ, ಅತನ ಶುದ್ಧ ಪ್ರಸಾದವನ್ನು ಪಡೆದ ಹಾಗಾ
ಗುವದು.

ಮೂಲ ಪರವಸ್ತುವು ಲೀಲಾವಿನೋದಕ್ಕಾಗಿ ತಾನು ಒಂದೇ
ಇದ್ದುದು ಎರಡಾಯಿತು. ಆ ಎರಡರಲ್ಲಿಯೂ ಮೂರು ಮೂರು,
ಮೂರಕ್ಕೆ ಆರು ಆಗಿ ಷಟ್‌ಸ್ಥಲಶಾಸ್ತ್ರದ ನಿರ್ಮಾಣವಾಗಿದೆ. ತದನು
ಸಾರವಾಗಿ ಇಷ್ಟಲಿಂಗದಲ್ಲಿ ಆಚಾರಲಿಂಗ-ಗುರುಲಿಂಗ ಎಂಬೆರಡು ಭೇದ
ಗಳಾದಂತೆ, ಅವರ ಆರಾಧಕನಾದ ತ್ಯಾಗಾಂಗನಲ್ಲಿಯೂ (ನಿವೃತ್ತಾಂಗ
ನಲ್ಲಿಯೂ) ಭಕ್ತ-ಮಹೇಶ್ವರ ಎಂಬೀರ್ವ ಪೂಜಕರಾದರು. ಶಿವದೀಕ್ಷೆ
ಯಿಂದ ಪೂರ್ವಜನ್ಮವಳಿದು ಪುನರ್ಜಾತನಾದವನೇ ಶಿವಭಕ್ತನು(ಭಕ್ತನು,
ಈತನನ್ನು ಪ್ರತ್ಯಕ್ಷ ಶಿವ (ಈಶ್ವರ) ನೆಂದೇ ಭಾವಿಸಿ, ತದನುಸಾರ
ಕೊಂಕಿಲ್ಲದೆ ವರ್ತಿಸಬೇಕೆಂದು ಶಿವಾಚಾರದಲ್ಲಿ ಶ್ರೀ ಚನ್ನಬಸವೇಶ್ವರರು
ಅಪ್ಪಣೆ ಕೊಡಿಸಿದ್ದಾರೆ. ಆಚಾರದಲ್ಲಿ ಸರಿಯಾದ ಶ್ರದ್ಧೆಯನ್ನು ತಾಳಿ,
ಆಚಾರಲಿಂಗದಲ್ಲಿ ಬೆರೆಯುವದೇ ಇವನ ಕರ್ತವ್ಯ. ಈ ಭಕ್ತನು ಬರು
ಬರುತ್ತ ಸುಬುದ್ಧಿವಿಡಿದು ಒಳ್ಳೇ ನೀತಿವಂತನಾಗಿ, ಆಚಾರದಲ್ಲಿ ಬಲ್ಲಿದ
ನೆನಿಸಿ, ಹೆಚ್ಚಾದ ನಿಷ್ಠೆಯನ್ನು ಅದರಲ್ಲಿ ವಹಿಸಿದರೆ, ಅವನನ್ನೇ ಮಹೇ
ಶ್ವರ (ಮಹಾ+ಈಶ್ವರ) ಅಂದರೆ ಆರಂಭದ ಭಕ್ತರಲ್ಲಿ ಮೇಲ್ತರಗತಿಗೇ
ರಿದವನೆಂದು ಕರೆದರು. ಈತನಲ್ಲಿ ಪರಧನ, ಪರಸತಿ, ಪರದೈವ,
ಪರನಿಂದೆ ಪರಹಿಂಸೆಗಳು ಚನ್ನಾಗಿ ಅಳಿದುಹೋಗಿ ಇಷ್ಟಲಿಂಗದಲ್ಲಿ
ಅಸಾಮಾನ್ಯವಾದ ನಿಷ್ಠೆ ಬೆಳೆಯಲಿಕ್ಕೆಬೇಕು. ಹೀಗೆ ಸಮಾಜದಲ್ಲಿ
ಕಡು ಪ್ರತಿಷ್ಠಾವಂತನಾಗಿ ಗುರುಲಿಂಗ (ಆಚಾರ ಶ್ರೇಷ್ಠಲಿಂಗ) ದಲ್ಲಿ
ಬೆರೆದು ಲೀನವಾಗುವದೇ ಇವನ ಧರ್ಮ.

ಇಂತಹ ಮಹೇಶ್ವರರು ಆರಂಭದ ಶಿವಭಕ್ತರಿಗೆ ಆಚಾರವನ್ನು
ಬೋಧಿಸುವ ಯೋಗ್ಯತೆಯನ್ನು ತಕ್ಕಷ್ಟು ಪಡೆದಿರುವರೆಂದರಿದು, ಇವ
ರಲ್ಲಿ ಕೆಲವರನ್ನು ಆರಿಸಿ ಸಮಾಜದ ಸೇವೆಗೆ ಅಂದರೆ ಆಚಾರಬೋಧೆ,
ಮೇಲ್ವಿಚಾರಣೆ, ಧರ್ಮಪ್ರಚಾರ ಹಾಗು ಪ್ರಸಾರ, ದೀಕ್ಷಾವಿವಾಹಾದಿ
ಸಂಸ್ಕಾರಗೊಳಿಸುವದು. ಇತ್ಯಾದಿಗಳಿಗಾಗಿ ನೇಮಿಸಿದರು. ಆ ಕಾರ್ಯವು
ಅವ್ಯಾಹತವಾಗಿ ನಡೆಯಬೇಕೆಂದು ಇವರನ್ನು ಬ್ರಹ್ಮಚರ್ಯದಲ್ಲಿಯೇ



ಇರಿಸಿದರು. ಇವರೇ ಕ್ರಮೇಣ ಕುಲಗುರುಗಳು (ಪಡದಪ್ಪ, ಚರಂ
ತೆಪ್ಪ) ಆದರು. ಪಡದಪ್ಪನ ಮಠವೇ ಊರಲ್ಲಿ ಹಿರೇಮಠವಾಯಿತು.
ಇವರೇ ವಿಶೇಷ ವೀರಶೈವರು (ಧರ್ಮಾಧಿಕಾರಿಗಳು). ಮಠಕ್ಕೆ ಬಂದ
ವರಿಗೆ ಆದರಾತಿಥ್ಯ ಮಾಡಲಿಕ್ಕೆಂದು ಇವರಿಗೆ ಜೋಳಿಗೆಯು (ಸಮಾ
ಜದಲ್ಲಿ ಭಿಕ್ಷೆಯು) ಕೊಡಲ್ಪಟ್ಟಿತು. ಇದಲ್ಲದೆ ಈ ಕಾರ್ಯಕ್ಕಾಗಿಯೇ
ಧರ್ಮಾದಾಯ-ಭೂಮಿಗಳು ನಡೆಯಹತ್ತಿದವು. ಹಾಗು ಶಿಷ್ಯರ ಮನೆ
ಗಳಲ್ಲಿ ಕಾಣಿಕೆಯೂ ಸಲ್ಲಹತ್ತಿತು. ಈ ಕುಲಗುರುಗಳು ಭಕ್ತರ ಮನೆಗೆ
ಹೋಗಿ (೧) ಆಚಾರಶೀಲತೆಯ ಮೇಲ್ವಿಚಾರಣೆ ಮಾಡಬೇಕು. ತಪ್ಪಾ
ಗಿದ್ದರೆ ತಿದ್ದಿ ಕ್ರಮಗೊಳಿಸಬೇಕು. (೨) ಶಿವದೀಕ್ಷೆಗೆ ತಕ್ಕವರಾದ ಚಿಕ್ಕ
ವರನ್ನು ದೀಕ್ಷಾವಂತರನ್ನಾಗಿ ಮಾಡಬೇಕು. (೩) ಸಮಯವನ್ನು ಸಾಧಿಸಿ
ಸ್ಥಾನಿಕ ಸಂಘ-ದೈವದವರನ್ನೊಳಗೊಂಡು ಧರ್ಮಪ್ರಚಾರ ಪ್ರಸಾರಗ
ಳನ್ನು ಅಲ್ಲಲ್ಲಿ ಜರಗಿಸಿ ಸಮಾಜವನ್ನು ಬೆಳಿಸಿ, ಸರಿಯಾದ ಮಾರ್ಗ
ದಲ್ಲಿ ನಡಿಸಿಕೊಂಡು ಹೋಗಬೇಕು; ಇವೇ ಇವರ ಕರ್ತವ್ಯಗಳು.

ಇಷ್ಟಲಿಂಗ ಪೂಜಕನಾದ ತ್ಯಾಗಾಂಗನ ಎಡಬಲ ಪಾರ್ಶ್ವಗಳಂತಿ
ರುವ ಈ ಭಕ್ತ-ಮಹೇಶ್ವರರುಭಯತರೂ ತನುಶುದ್ಧಿಯನ್ನೇ ಪಡೆದು
(ಆಚಾರವನ್ನು ಹೊಂದಿ) ಗುರುವಿನ (ಅರುವಿನ) ಶುದ್ಧ ಪ್ರಸಾದವನ್ನು
ಹೊಂದತಕ್ಕ ಒಂದೇ ವರ್ಗದವರೆಂಬುದು ಈ ವಿವರಣದಿಂದ ತಾನೇ
ವ್ಯಕ್ತವಾಗುವದು.

ದೀಕ್ಷಾಕಾಲದಲ್ಲಿ ನರಗುರುವು (ಅರುವಿನಿಂದೊಡಗೂಡಿದ ನರನು)
ಸರ್ವಲಕ್ಷಣ ಸಂಪನ್ನವಾದ ದೃಶ್ಯಲಿಂಗವನ್ನು ಸಂಸ್ಕಾರಗೊಳಿಸಿ ಶಿಷ್ಯನ
ಕರದಲ್ಲಿ ಕೊಡುವನು. ಇದು ಆ ಶಿಷ್ಯನ ಸ್ಥೂಲದೇಹದ ಪ್ರತೀಕವೆಂದು
ಹಿಂದೆ ಹೇಳಲಾಗಿದೆ. ಬಳಿಕ "ಮಂತ್ರ ಪೂತೇ ಕಲಾಂ ಶೈವೀಂ
ಯೋಜಯೇದ್ವಿಧಿನಾ ಗುರುಃ । ಶಿಷ್ಯಸ್ಯ ಪ್ರಾಣಮಾದಾಯ ಲಿಂಗೇ
ತತ್ರನಿಧಾಪಯೇತ್" ಎಂಬಂತೆ ಅವರಲ್ಲಿ, ಶಿಷ್ಯನ ಮಸ್ತಕದಲ್ಲಿರುವ
ಶಿವಕಲೆ ಎಂಬ ಭಾವಲಿಂಗವನ್ನೂ ಆತನ ಜೀವಕಲೆಯಾಗಿರುವ
ಪ್ರಾಣಲಿಂಗವನ್ನೂ ಆಕರ್ಷಿಸಿ, ವಿಧಿ ಪ್ರಕಾರ ಸ್ಥಾಪಿಸುವನು. ಆದರಿಂದ
ಆ ಮೂರ್ತಿಯು ಇಷ್ಟ-ಪ್ರಾಣ-ಭಾವಲಿಂಗ ತ್ರಯರೂಪವಾಗಿ ವಿರಾಜಿ
ಸುವದು. ವೀರಶೈವನು ತಾನೇ ಲಿಂಗರೂಪವಾಗಿರುವದನ್ನು ನೆನಿಸಿ
ತನ್ನಿಂದಲೇ ಲಿಂಗಪೂಜೆಗೆ ಆರಂಭಿಸುವನು ("ಅಯಮಾತ್ಮಾ ಬ್ರಹ್ಮ"

ಎಂದು ಶ್ರುತಿಯಾದರೂ ಕೂಗಿಲ್ಲವೇ!) ಮುಂದೆ ಕ್ರಮವಾಗಿ, ತೋರುವ
ವಿಶ್ವವೆಲ್ಲವೂ ತನ್ನ ಸ್ವರೂಪವೇ ಎಂಬ ಭಾವನೆಯನ್ನು ಬಲಿಸಿ ಸಮ
ರಸಪಡೆಯುವನು. ಈ ವೈಶಿಷ್ಟ್ಯವೂ ಸೌಕರ್ಯವೂ ಸ್ಥಾವರಲಿಂಗ
ದಲ್ಲಿಲ್ಲ. ಗುಡಿಯಲ್ಲಿ ನೆಟ್ಟ ಲಿಂಗವು ಬರೇ ಜಗತ್ಕರ್ತೃವಾದ ಮಹಾ
ದೇವನ ಅಧಿಷ್ಠಾನ ಮೂರ್ತಿಯಾಗಿದೆ. ಅದು ಶೈವಲಿಂಗವು. ಅದನ್ನು
ಪೂಜಿಸುವ ಭಕ್ತನು ದ್ವೈತ (ಅಂದರೆ ತಾನು ಬೇರೆ, ಆ ಲಿಂಗ
ಮೂರ್ತಿ ಬೇರೆ) ಭಾವನೆಯಿಂದಲೇ ಆರಾಧಿಸುವನು. ಅದು ಐಕ್ಯಸಾಧನೆಗೆ
ಅಯೋಗ್ಯ ಅನತೇ ವೀರಶೈವರು ಯಾವ ಕ್ಷೇತ್ರ ಲಿಂಗಕ್ಕೂ ಎಡೆತಾ
ಗದೆ, ತಮ್ಮ ಗುರುಕರುಣಿಸಿದ ಲಿಂಗದಲ್ಲಿಯೇ ನಿಷ್ಠಾಯುಕ್ತರಾಗಿ,
ಲಿಂಗಾಚಾರಿಗಳಾಗಿರುವವೇ ಶ್ರೇಯಸ್ಕರವು.

## ಪ್ರಾಣಲಿಂಗವು.

ಇದು ಜೀವ ಕಳೆಯು. ಜೀವಂಗೆ ಆತ್ಮವೇ ಪ್ರಾಣವು. ಆದು
ದರಿಂದ ಇದೇ ನಿಜವಾದ ಲಿಂಗವು. ಪ್ರಾಣವನ್ನೇ ಬಹಿಷ್ಕರಿಸಿ ಗುರುವು
ಕರದಲ್ಲಿ ಇಷ್ಟಲಿಂಗವನ್ನು ಮಾಡಿಕೊಟ್ಟಿರುವನು. ಎರಡಕ್ಕೂ ಅಭೇದ
ವೆಂದು ಶಾಸ್ತ್ರಕಾರರು ಸಾರುತ್ತಾರೆ. ಗುರುವಿನ ಚೈತನ್ಯವೇ ಲಿಂಗ
ವೆಂದು ಮಹಾನುಭಾವರು ಹೇಳುವರು. ಅರುವೇ ಗುರುವು. ಆ ಗುರು
ವಿನ (ಅರುವಿನ) ಚೈತನ್ಯವೇ ಅಂದರೆ ಪ್ರಜ್ಞಾನವೇ ಲಿಂಗವು. "ಪ್ರಜ್ಞಾನಂ
ಬ್ರಹ್ಮ" ಎಂದು ಶ್ರುತಿಯು ಉದ್ಘೋಷಿಸಿದೆ. ಮರವಿಗೀಡಾದ ಜೀವವು
ಮೂಲತಃ ಆತ್ಮವೇ ಇರುವದು. ಆತ್ಮವು ಸಚ್ಚಿದಾನಂದ ನಿತ್ಯ ಪರಿ
ಪೂರ್ಣರೂಪವು. ಆದಕಾರಣ ದೇಹವೆಂಬ ದೇಗುಲದಲ್ಲಿ ಪ್ರಾಣವು
ಲಿಂಗವಾಗಿ ಬೆಳಗುತ್ತದೆ. ಆದರೆ ಅದಕ್ಕೆ ಸೋಂಕಿದ ಜೀವಭಾವನೆ
ಯನ್ನು (ಅಹಂಕಾರ - ಮಮಕಾರಗಳನ್ನು ಹೋಗಲಾಡಿಸಿ ಪರಿಶುದ್ಧ
ಆತ್ಮಸ್ವರೂಪವನ್ನು ಭಕ್ತನು ಸಾಧಿಸಬೇಕಾಗಿದೆ. ಹೀಗೆ ಮಾಡಿಕೊ
ಳ್ಳುವದೇ ಪ್ರಾಣಲಿಂಗ ಪೂಜೆಯು.

ಈ ಪೂಜೆಯು ಅಂತರ್ಯದಲ್ಲಿ ನಡೆಯಬೇಕಾಗಿರುವದರಿಂದ
ಹೆಚ್ಚು ಕಠಿಣವಾದುದೆಂಬುದು? ಪ್ರಶ್ನೆವು. ಜೀವನು ಅಹಂಕಾರವಶನಾಗಿ
ಅಂದರೆ ಜಗತ್ತಿನಿಂದ ತನ್ನನ್ನು ಪ್ರತ್ಯೇಕಿಸಿಕೊಂಡು "ನಾನು" ಎಂಬ
ವ್ಯಕ್ತಿತ್ವದ ಭಾವನೆಯನ್ನು ತಾಳಿ ಮಾಯೆಗೆ ಒಳಗಾಗುವನು. ಆಗ
ಜಗತ್ತು ಭಿನ್ನ ಭಿನ್ನವಾಗಿ ಅದರಲ್ಲಿ ನಾನಾತ್ವವು ತೋರಹತ್ತುವದು.



ಪ್ರಪಂಚದ ಮೋಹಜಾಲಕ್ಕೆ ಸಂಪೂರ್ಣ ಸಿಗಬಿದ್ದು ದುಃಖಿಯಾಗು
ವನು. ಈ ದುಃಖನಿರಸಕ್ಕೆ "ನಾನು" ಎಂಬದನ್ನು ನಾಶಗೊಳಿಸಿ ಶುದ್ಧ
ಆತ್ಮಸ್ವರೂಪವನ್ನೈದುವದೊಂದೇ ಉಪಾಯವು. ಅದನ್ನು ಸಾಧಿಸುವದೇ
ಭಕ್ತನ ಗುರಿಯಾಗಿರುವದು. ಈ ಪ್ರಾಣಲಿಂಗಾರ್ಚನಕೆ ಭೋಗಾಂಗಿ
(ಅಂದರೆ ತನ್ನನ್ನು ಶಿವಾರ್ಪಣಮಾಡಿ ಶಿವನೊಳಡಗಿ ಶಿವನ ದ್ವಾರವಾಗಿ
ವಿಷಯಗಳನ್ನು ಭೋಗಿಸಿದವ) ಎಂಬ ಹೆಸರು ಪ್ರಾಪ್ತವಾಗಿರುವದು.
ಈ ಸ್ಥಳದಲ್ಲಿ ಪ್ರಸಾದಿ ಪ್ರಾಣಲಿಂಗಿ ಎಂಬೆರಡು ತರಗತಿಗಳುಂಟು.

ಪ್ರಸಾದಿ:— ಈತನು ನಾನು ಎಂಬುದನ್ನು ಕಳೆದುಕೊಳ್ಳಲಿಕ್ಕೆ
ಒಂದು ಯುಕ್ತಿಯನ್ನು ಯೋಜಿಸುತ್ತಾನೆ. ಅದಾವುದೆಂದರೆ— ಶಿವನಿಗೆ
(ಲಿಂಗಕ್ಕೆ) ಕಾಯವಿಲ್ಲ. ಅವನು ಅಕಾಯನು, ಇಲ್ಲವೆ ಭಕ್ತಕಾಯನು.
"ಅಕಾಯೋ ವಾ ಭಕ್ತಕಾಯೋ ವಾ" ಎಂದು ಆಗಮ ವಚನವಿದೆ. ಭಕ್ತ
ಕಾಯನೆಂದರೆ ಭಕ್ತನ ದೇಹವೇ ತನ್ನ ದೇಹವಾಗಿರುವವನು. ಆದಕಾರಣ
ಪ್ರಸಾದಿಯು ತನ್ನ ದೇಹವನ್ನೇ ಅವನಿಗೆ ಅರ್ಪಿಸುವನು. ಅರ್ಥಾತ್
ತನ್ನವಾಗಿದ್ದ ದೇಹ ಕರಣೇಂದ್ರಿಯಗಳೆಲ್ಲ ಶಿವನವೇ ಆಗಿಬಿಡುವವು.
ಒಳಗಿರುವ ಜೀವಾತ್ಮನೇ ಶಿವನಾಗಿರುವನು. ಇದರಿಂದ ಭಕ್ತನು ಕಾಯಾ
ರ್ಪಿತ ಮಾಡಿ, ಜೀವ ಅಥವಾ ನಾನು ಎಂಬದನ್ನೆಲ್ಲ ನೀಗಿ ಯಾವ
ದಕ್ಕೂ ತಾನು ಸಿಲುಕದೆ ನಿರ್ಲಿಪ್ತನಾಗಿ, ದುಃಖದಿಂದ ಮುಕ್ತನಾಗು
ವನು. ಬಳಿಕ ತನ್ನನ್ನು ಸಂಪೂರ್ಣವಾಗಿ ಮರೆತು ಬಿಟ್ಟು "ಶಿವನೇ
ಎಲ್ಲ ಕಾರ್ಯಗಳನ್ನು ಸಾಗಿಸುವನು, ಅವನೇ ಉಣ್ಣುವನು, ತಿನ್ನು
ವನು, ಮಲಗುವನು, ಏಳುವನು, ಮಾತಾಡುವನು, ಉಸುರಾಡಿಸುವನು
ಇತ್ಯಾದಿ ಸಕಲ ಕಾರ್ಯಗಳನ್ನು ನಡಿಸುವನು," ಎಂದು ಅನಾಸಕ್ತ
ನಾಗಿ ಭಾವಿಸುವನು. ಆದಕಾರಣ ಅವನು ಬೇಕಾದ ವಸ್ತುವನ್ನು
ಸೇವಿಸಿದರೂ ಅನುಭೋಗಿಸಿದರೂ, ಅವನಿಗೂ ಅದಕ್ಕೂ ಏನೇನು
ಸಂಬಂಧವಿಲ್ಲದೆ, ಅವನ ಉಪಜೀವನವನ್ನೆಲ್ಲ ಅನಾಯಾಸವಾಗಿ ಶಿವ
ನೊಡನೆ ತಾದಾತ್ಮ್ಯದಿಂದ ಸಾಗಹತ್ತುವದು. ಶಿವನ ಭೋಗದಲ್ಲಿಯೇ
ಭಕ್ತನ ಭೋಗವು ಬೆರೆದು ಹೋಗುವದು. ಈ ಪ್ರಕಾರ ಶಿವ ಪ್ರಸಾ
ದದಲ್ಲಿಯೇ ಸದಾ ತೃಪ್ತನಾಗಿರುವವನು ಪ್ರಸಾದಿಯೆನಿಸುವನು. ಇಲ್ಲಿ
ಅವನ ಜೀವ ಭಾವವು ಅಡಗಿ ಶಿವ (ಲಿಂಗ) ಭಾವನೆಯು ನೆಲಿಸು
ವದು. ಅಂದರೆ ತನ್ನನ್ನು ಶಿವರೂಪದಲ್ಲಿ ರೂಪಾಂತರಿಸಿಕೊಳ್ಳುವನು.

ಅಂದರೆ ತನ್ನನ್ನು ಶಿವರೂಪದಲ್ಲಿ ರೂಪಾಂತರಿಸಿಕೊಳ್ಳುವನು. ಇಂತು
ತನ್ನನ್ನು ಶಿವಸ್ಥಿತಿಗೆ ಒಯ್ದು ಲಿಂಗದಲ್ಲಿ ಏಕರೂಪವಾಗುವದರಿಂದ ಅವನು
ಶಿವಲಿಂಗದ ಆರಾಧಕನಾಗುವನು.

ಇದು ಹೇಳಲಿಕ್ಕೂ ಕೇಳಲಿಕ್ಕೂ ಬಹು ಸುಲಭವೆನಿಸುವದು.
ಆದರೆ "ಅಹಂ"ಕಾರವನ್ನು ಅಹೋರಾತ್ರಿಯಲ್ಲಿಯೂ ಸರ್ವದಾ ಮರಿ
ಮಾಜಿಕೊಂಡು, ಸರ್ವಾರ್ಪಣ ಬುದ್ಧಿಯಿಂದ ಆಚರಿಸುವದು ಅತ್ಯಂತ
ಕಠಿಣವಾದದ್ದು. ಅಂತೇ ಅವನು ಯಾವಾಗಲೂ ಬಹು ಅವಧಾನ
ದಿಂದ ತನ್ನ ಸಾಧನ ಕಾರ್ಯವನ್ನು ಮುಂದರಿಸಬೇಕಾಗುತ್ತದೆ. ಮಹಾ
ಭಾರತದಲ್ಲಿ ಪಾಂಡವರು ಅಜ್ಞಾತವಾಸ ಮಾಡಿದ ಕಥೆಯುಂಟು. ಅದೇ
ನಮಗೆ ಎಷ್ಟೋ ಬಿಗಿಯಾಗಿ ತೋರುತ್ತದೆ. ಅದು ಒಂದೇ ವರ್ಷದ
ಮಟ್ಟಿಗೆ ಮಾತ್ರ. ಆದರೆ ಈ ಭಕ್ತನು ಆ ಜೀವವಾಗಿ ಪ್ರಚ್ಛನ್ನವಾಗಿ
ರುವದು ಅದೆಷ್ಟು ಕಷ್ಟವಾದುದೆಂಬುದು ತಾನೇ ವ್ಯಕ್ತವಾಗುವದು.
ಇದರಲ್ಲಿ ಮತ್ತೂ ಒಂದು ವಿಶೇಷವೇನಂದರೆ, ಪಾಂಡವರು ತಮಗೆ
ತಾವು ಕಾಣಿಸಿಕೊಂಡು ಅನ್ಯರಿಗೆ ಮಾತ್ರ ತಿಳಿಯದಂತೆ ಇರುತ್ತಿದ್ದರು.
ಆದರೆ ಪ್ರಸಾದಿಯು ಇತರರಿಗಲ್ಲದೆ ಸ್ವಂತ ತನಗೂ ಸಹ ಅಗೋಚರ
ನಾಗಿಯೇ ಕಾಲಹರಣ ಮಾಡಬೇಕಾಗುತ್ತದೆ! ಪ್ರಸಾದಿಯು ತನ್ನ
ಎಲ್ಲ ಇಚ್ಛೆಗಳನ್ನು ಬದಿಗಿರಿಸಿ, ಬಂದುದೆಲ್ಲ ಶಿವಪ್ರಸಾದವೇ ಎಂದು
ಮನ್ನಿಸಿ, ಎಲ್ಲಕ್ಕೂ ಸಂತೋಷದಿಂದಲೇ ತಲೆಗೊಡುವನು. ಇದೇನು
ಸಾಮಾನ್ಯವೇ! ಹೀಗೆ ಮನವು ನಿಗ್ರಹಿಸಲ್ಪಟ್ಟು ಸ್ಥಿರವಾಗಬೇಕಾದರೆ,
ಅಧ್ಯಾತ್ಮ ವಿಷಯವನ್ನು ಸಂಪೂರ್ಣ ಅಭ್ಯಾಸಿಸಿ ಆತ್ಮಜ್ಞಾನವನ್ನು ನೆಲೆ
ಗೊಳಿಸಿಕೊಳ್ಳಲೇಬೇಕಾಗುವದು. ಹೀಗಾದರೆ ಮಾತ್ರ ಇಚ್ಛಾಶಕ್ತಿಯನ್ನು
ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳಬಹುದು. ಇಚ್ಛಾಶಕ್ತಿಯ ಒಡೆ
ಯನಾದಾಗಲೇ ಅವನು ಶಿವಲಿಂಗದಲ್ಲಿ ಬೆರೆಯುವನು.

ಪ್ರಾಣಲಿಂಗ:— ತನ್ನ ಜೀವಾತ್ಮನನ್ನು ಶಿವನಲ್ಲಿ ಬೆರಿಸಿ ತದ್ರೂ
ಪವಾದ ಪ್ರಸಾದಿಯು ತನ್ನ ಬೆಳೆಯುತ್ತಿರುವ ಸ್ವಾನುಭವದಿಂದ
ಮುಂದಕ್ಕೆ ಸಾಗಿ "ಆತ್ಮವತ್ ಸರ್ವಭೂತಾನಿ" ಅಂದರೆ ಎಲ್ಲ ಪ್ರಾಣಿ
ಗಳು ತನ್ನಂತೆಯೇ ಶಿವಲಿಂಗರೂಪವಿರುವವೆಂಬ ಭಾವನೆಯನ್ನು ದೃಢೀ
ಕರಿಸಿ, ಮನಗಂಡು ನಿಶ್ಚಯಿಸುತ್ತಾನೆ. ಹೀಗೆ ಸಕಲ ಪ್ರಾಣಿಗಳನ್ನು
ಲಿಂಗರೂಪವಾಗಿ ಕಾಣುವದರಿಂದ ಅವನು ಪ್ರಾಣಲಿಂಗಿ ಎನಿಸಿಕೊಳ್ಳು
ವನು. ಮತ್ತು ಚರಿಸುವ ಪ್ರಾಣಿಗಳೆಲ್ಲ ಲಿಂಗರೂಪವೆಂದು ನೆರೆನಂಬಿ,



ಅವುಗಳ ಆತ್ಮವೂ ತನ್ನ ಆತ್ಮವೂ ಒಂದೇ ಅಥವಾ ತನ್ನ ಆತ್ಮವಾಗಿ
ರುವದೇ ಅಲ್ಲೆಲ್ಲ ವಾಸಿಸುವದು ಎಂಬ ಐಕ್ಯಭಾವನೆಯುಳ್ಳವನಾದು
ದರಿಂದ, ಅವನು ಚರಲಿಂಗ (ಜಂಗಮಲಿಂಗ) ದಲ್ಲಿ ಬೆರೆಯುವನು.
ಹೀಗೆ ಸಕಲ ಪ್ರಾಣಿಗಳಲ್ಲಿ ಅಭೇದ ಬುದ್ಧಿಯುಂಟಾದ ಮೂಲಕ ಈತ
ನಲ್ಲಿ ಅಖಂಡಶಾಂತಿಯು ವಾಸಿಸುವದು. "ನಾನು-ನನ್ನದು" ಎಂಬ
ವೈಷಮ್ಯವು ಪ್ರಾಣಲಿಂಗಿಯಲ್ಲಿ ಎಳ್ಳಷ್ಟೂ ಹಣಿಕಿಕ್ಕದು. ಇವನಲ್ಲಿ
ಆತ್ಮಾನುಭವವು ಒಳಿತಾಗಿ ನೆಲೆಗೊಂಡಿರುವದು. ಆದಕಾರಣ ಈತನ
ಶಕ್ತಿಗಳೆಲ್ಲ ನಿಸ್ವಾರ್ಥವಾಗಿ ಜಗತ್ತಿನ ಹಿತಕ್ಕೆಯೇ (ಪರೋತ್ಕರ್ಷಕ್ಕೆಯೇ)
ಸಿದ್ಧವಾಗುವವು. ಹೀಗೆ ಏನೊಂದೂ ಉದ್ದೇಶವಿಲ್ಲದೆ ತನ್ನ ಶಕ್ತಿಯನ್ನು
ಈಶ್ವರನಂತೆ ಲೋಕಹಿತಾರ್ಥವಾಗಿ ಬಳಿಸುತ್ತಿರುವನು. ಇಂತಹ ಅಪೂರ್ವ
ಶಕ್ತಿಯು ಪ್ರಾಣಲಿಂಗಿಯಲ್ಲಿ ಕಂಡುಬರುವದರಿಂದ ಅದು ಆದಿಶಕ್ತಿ
ಎಂದು ಹೇಳಲ್ಪಡುವದು. ಈ ಶಕ್ತಿಯು ಉಳಿದೆಲ್ಲ ಶಕ್ತಿಗಳ ಉಗಮ
ಸ್ಥಾನವು. ಈ ಶಕ್ತಿಯ ಯೋಗದಿಂದಲೇ ಅವನು ಚರಲಿಂಗದಲ್ಲಿ ಏಕೀ
ಭವಿಸುವನು. ಇವನೇ ವಿಶ್ವಕುಟುಂಬಿಯು, ಮಹಾತ್ಮನು.

ಹೀಗೆ ಭೋಗಾಂಗನ ಪ್ರಾಣಲಿಂಗಪೂಜೆಯು ಸಾಂಗವಾಗುವದು.
ಪ್ರಾಣಲಿಂಗಪೂಜೆಗೆ ಶಾಂತಿಯೇ ಅಭಿಷೇಕ ಜಲ, ವಿವೇಕವೇ ವಸ್ತ್ರ,
ಸತ್ಯವೇ ಆಭರಣ, ವೈರಾಗ್ಯವೇ ಪುಷ್ಪಮಾಲೆ, ಚಿತ್ತೈಕಾಗ್ರತೆಯೇ
ಗಂಧ, ನಿರಹಂಕೃತಿಯೇ ಅಕ್ಷತೆ, ವಿಶ್ವಾಸವೇ ಧೂಪ, ಮಹಾಜ್ಞಾನವೇ
ದೀಪ, ಜಗವೆಲ್ಲ ಲಿಂಗರೂಪನೆಂಬ ಭಾವನೆಯೇ ನೈವೇದ್ಯ; ಹೀಗೆ
ಗುಣ-ರೂಪ ದ್ರವ್ಯಗಳು ಬೇಕೆಂದು ಸಿದ್ಧಾಂತ ಶಿಖಾಮಣಿಯು ನಿರೂಪಿ
ಸುತ್ತದೆ. ಇಂತಹನ ಮಾಯಾಮಲವು (ನಾನು, ತಾನು, ಇತ್ಯಾದಿ ಪರ
ಕೀಯತ್ವವು — ಭೇದ ಬುದ್ಧಿಯು) ಹೇಳ ಹೆಸರಿಲ್ಲದೆ ತೊಲಗುವದು.
ಮನವು ಲಿಂಗದಲ್ಲಿ ಬೆರೆದು ಘನವಾಗುವದು. ಹೀಗೆ ಆತ್ಮ ವಿಕಾಸ
ವಾಗಿ ಅದರ ವ್ಯಾಪ್ತಿಯು ಬೆಳೆದು ಜ್ಞಾನ ಮತ್ತು ಅನುಭವ ಇವೆ
ರಡೂ ಒಳಿತಾಗಿ ಸಿದ್ಧಿಸುವದರಿಂದ ಪ್ರಾಣಲಿಂಗಿಗೆ ಲಿಂಗದ (ಪ್ರಜ್ಞಾನದ)
ಸಿದ್ಧಪ್ರಸಾದವು ದೊರೆಯುವದರಲ್ಲೇನಾಶ್ಚರ್ಯವು!

## ಭಾವಲಿಂಗ.

ಇದು ಪರಮಾತ್ಮ ತತ್ವವು. ಪ್ರಾಣವು ವ್ಯಕ್ತಿಗತ ದೇಹದಲ್ಲಿ ಚೈತ
ನ್ಯವಾಗಿ ಬೆಳಗುವಂತೆ, ಈ ಪರತತ್ವವು ಸೃಷ್ಟಿಯ ಪ್ರಾಣವಾಗಿ ಅದಕ್ಕೆ

ಜೈತನ್ಯವನ್ನುಂಟುಮಾಡದೆ ಜಗತ್ತು ವಿವಿಧತ್ವವನ್ನು ಹೊಂದಿ ನಾನಾ
ವಸ್ತುಗಳಿಂದ ಕಂಗೊಳಿಸುವದು. ಆ ಪ್ರತಿಯೊಂದು ಪದಾರ್ಥದಲ್ಲಿ ಅಷ್ಟೇ
ಏಕೆ? ಅದರ ಅಣು-ಪರಮಾಣುಗಳಲ್ಲಿಯೂ ಸಹ ಇದು ವ್ಯಾಪಿಸಿರು
ವದು. ಪ್ರಾಣಿಗಳ ಶರೀರದಲ್ಲಿರುವ ಪರಮಾತ್ಮನ ಸ್ವರೂಪಕ್ಕೆ ಜೀವ
ಇಲ್ಲವೆ ಪ್ರಾಣವೆಂತಲೂ, ಜಗದ್ಭರಿತವಾಗಿ ಅದನ್ನು ಆಳುವ ಸ್ವರೂಪಕ್ಕೆ
ಈಶ್ವರನೆಂತಲೂ ಹೇಳುವದು ವಾಡಿಕೆಯಾಗಿದೆ. ಆದರೂ ತಾತ್ವಿಕ ದೃಷ್ಟಿ
ಯಿಂದ ಇವೆರಡೂ ಒಂದೇ. ಶಿಷ್ಯನ ಶಿರಸ್ಸಿನಿಂದ ಆಕರ್ಷಿಸಿ ಈ ಶಿವಕಳೆ
(ಚಿತ್‌ಕಳೆ) ಎಂಬ ತತ್ವವನ್ನು ಗುರುವು ಇಷ್ಟಲಿಂಗದಲ್ಲಿ ಸ್ಥಾಪಿಸುವನೆಂದು
ಈ ಮೊದಲೇ ಹೇಳಲಾಗಿದೆ. ಸೃಷ್ಟಿಯನ್ನೂ ಅದರ ಅಬಾಧಿತ ಕಾರ್ಯ
ಗಳನ್ನೂ ನಿರೀಕ್ಷಿಸಿ ತದ್ವಾರ, ಇದನ್ನು ಕೇವಲ ಭಾವದಿಂದಲೇ ಗ್ರಹಿಸ
ಬೇಕಾದುದರಿಂದ, ಇದಕ್ಕೆ ಭಾವಲಿಂಗವೆಂದು ಹೆಸರುಂಟಾಗಿದೆ. ಸದಾ
ಚಾರದ ಮೂಲಕ ಪಡೆಯುವ ತನುಶುದ್ಧಿಯಿಂದ ಇಷ್ಟ ಲಿಂಗೈಕ್ಯವೂ
ಆತ್ಮಜ್ಞಾನಾನುಭವಗಳ ಮುಖಾಂತರ ಉಂಟಾಗುವ ಮನಃ ಸ್ಥೈರ್ಯ
ದಿಂದ ಪ್ರಾಣಲಿಂಗದೊಡನೆ ಬೆರೆಯುವದೂ ನೆರವೇರುವಂತೆ, ಈ ಇಡೀ
ಜಗತ್ತು ಅಖಂಡವಾದ ಒಂದೇ ಒಂದು ಮಹಾಲಿಂಗ-ಪರಮಾತ್ಮ-ಸ್ವರೂಪ
ವಿರುವದೆಂಬ ಭಾವನೆಯುಳಪಡುವದರಿಂದ ಭಾವಲಿಂಗ ಸಮರಸೈಕ್ಯವು
ಘಟಿಸುವದು.

ಭಾವಲಿಂಗವನ್ನು ಭಜಿಸುವ ಭಕ್ತನು ಯೋಗಾಂಗಿಯು. ಯಾಕಂ
ದರೆ ಅಖಂಡ ಮಹಾಲಿಂಗ ಸ್ವರೂಪದಲ್ಲಿ ಇವನು ಕೂಡಿ ಬಿಡುವನು.
ಪ್ರಾಣಿಕೋಟಿಯನ್ನೆಲ್ಲ ಲಿಂಗರೂಪವಾಗಿ ಕಂಡ ಪ್ರಾಣಲಿಂಗಿಯು,
ಇನ್ನಿಷ್ಟು ಮುಂದೆ ಸಾಗಿ ಅಚರ ವಸ್ತುಗಳನ್ನು ಸಹ ಅವುಗಳಲ್ಲಿರುವ
ಚೈತನ್ಯದ ಮೂಲಕ ಅವೆಲ್ಲ ಲಿಂಗರೂಪ, ಪರಮಾತ್ಮ ಅರ್ಥಾತ್ ತನ್ನ
ಸ್ವರೂಪವೆಂದೇ ಅರಿತುಕೊಳ್ಳುವನು. ಯೋಗಾಂಗಿಯಲ್ಲಿಯೂ ಶರಣ-
ಐಕ್ಯ ಎಂದು ಎರಡು ವಿಧ ಉಂಟು.

ಶರಣನು:— ನಿರಂತರವಾಗಿ ಆನಂದದಲ್ಲಿರುವ ಪರಮ ಭಕ್ತನು.
ಇಡಿ ಜಗತ್ತನ್ನು "ಲಿಂಗರೂಪಮಿದಂ ಸರ್ವಂ" ಎಂದು ಅರಿತು ಅನು
ಭವಿಸುವ ಮಹಾ ಶಿವಯೋಗಿಯು. ಅಚರ ವಸ್ತುಗಳಲ್ಲಿ ವನಸ್ಪತಿ
ಕೋಟಿಯು ಚೈತನ್ಯಯುಕ್ತವೆಂಬದು ಪ್ರತ್ಯಕ್ಷವಾಗಿ ಗೋಚರಿಸುತ್ತದೆ.
ಅನ್ನ ಗೊಬ್ಬರ (ನೆಲ) ನೀರು, ಗಾಳಿ, ಪ್ರಕಾಶೋಷ್ಣತೆ, (ಅಗ್ನಿ) ಇವೆ



ಲ್ಲವುಗಳೇ ಮುಖ್ಯವಾಗಿ ಪ್ರಾಣಿ ಸಸ್ಯಾವಳಿಗಳ ಚೈತನ್ಯವನ್ನು ಪೋಷಿಸು
ತ್ತವೆಂಬದು ನಿರ್ವಿವಾದದ್ದು. ಆದಕಾರಣ ಇವಾದರೂ ಚೈತನ್ಯಸಹಿ
ತವೇ. ಆಕಾಶವು ಈ ಸಕಲ ವಸ್ತುಗಳಿಗೂ ತನ್ನಲ್ಲಿ ಇಂಬುಗೊಟ್ಟು
ಆಧಾರವಾಗಿರುವದು. ಇದನ್ನೆಲ್ಲ ವಿವೇಕದಿಂದ ಊಹಿಸಿ ಶರಣನು
ತನ್ನ ಸಿದ್ಧಾಂತವನ್ನು ಸ್ಥಿರಪಡಿಸಿಕೊಂಡು ನಲಿದಾಡುತ್ತಾನೆ. ಸತಿಯು
ಸರ್ವರೀತಿಯಿಂದಲೂ ಪತಿಯನ್ನೇ ಸರ್ವಸ್ವವೆಂದು ನಂಬಿ, ಆತನ ಇಚ್ಛೆ
ಯಲ್ಲಿಯೇ ತಾನು ಬೆರೆದು ಅವನ ಸೇವಾ ಶುಶ್ರೂಷೆಗಳಲ್ಲಿಯೇ ನೈಮ
ರೆಯುವಂತೆ, ಶರಣನು ಸಂಪೂರ್ಣವಾಗಿ ಪರಮಾತ್ಮನಿಗೆ (ಲಿಂಗಕ್ಕೆ)
ಶರಣಾಗತನಾಗುವನು. ಆ ಕಾರಣ ಅವನ ಅಂತಃಕರಣವು ಶಾಂತಿಯನ್ನು
ದಾಟಿ ಅದರ ಪರಿಣಾಮವಾದ ನಿತ್ಯವಾದ ಆನಂದದಲ್ಲಿಯೇ ನಿಮಗ್ನ
ವಾಗಿರುವದು. ಅಂತೇ ಅವನನ್ನು ಶಾಂತತೀತನೆಂದು ಬಣ್ಣಿಸಿರುವರು.
ಲಿಂಗ ವ್ಯತಿರಿಕ್ತ ಯಾವದನ್ನೂ ಕಾಣದಿರುವ ಸುಜ್ಞಾನವುಳ್ಳವನಾಗಿರು
ವದರಿಂದ ಸಮಗ್ರ ಶಿವಪ್ರಸಾದವನ್ನು (ಪ್ರಸಾದಲಿಂಗವನ್ನು) ಪಡೆದವ
ನೆಂಬುದರಲ್ಲೇನೂ ಸಂದೇಹವಿಲ್ಲ. ಶರಣನ ಅಂತಃಕರಣ ಪಂಚಕವು
ಪ್ರಪಂಚದಿಂದ ಸಂಪೂರ್ಣ ನಿವೃತ್ತವಾಗಿ ಲಿಂಗಮಯವಾಗಿರುವದರಿಂದ
ಅವನು ಪರಾ (ಮಿಗಿಲಾದ) ಶಕ್ತಿವಂತನಾಗಿ ಕಂಗೊಳಿಸುವನು. ಅವನ
ಶಕ್ತಿಗಳೆಲ್ಲ ಸ್ವಾಭಾವಿಕವಾಗಿಯೇ ಲೋಕೋದ್ಧಾರಾರ್ಥ ಜರಗುತ್ತಿರು
ವವು. ಈ ಸ್ಥಿತಿಯಲ್ಲಿ ಅವನು ಮಾಡುವ ಕಾರ್ಯಗಳೆಲ್ಲ ಫಲಾಶೆ
ದೊರೆದು ಅನಾಸಕ್ತಿಯಿಂದ ಕೇವಲ ಕರ್ತವ್ಯವೆಂದು ಆಚರಿಸಲ್ಪಡುವ
ಕಾರಣ ಅವುಗಳ ಲೇಪನವು ಅವನಿಗೆ ಆಗಲಾರದು. ದಗ್ಧವಸನದಂತೆ
ಅವು ಬರೇ ಗೋಚರವೇ ವಿನಾ, ಬಂಧಿಸಲಸಮರ್ಥವಾದವುಗಳು.
ಅವನು ಕಾರ್ಮಿಕ ಮಲದಿಂದ ಮುಕ್ತನಾಗುವನು. ಸಂಚಿತ ಕರ್ಮವು
ಮೊದಲೇ ಜ್ಞಾನಾಗ್ನಿಯಲ್ಲಿ ಉರಿದು ಹೋಗಿರುವದು. ಈತನ ಅಹಂ
ಕಾರ ಮಮಕಾರಗಳು ಸಂಪೂರ್ಣ ಅಡಗಿಹೋಗಿರುವದರಿಂದ ಇವ
ನಲ್ಲಿ ಹೊನ್ನು, ಹೆಣ್ಣು, ಮಣ್ಣು ಮುಂತಾದ ಯಾವ ವಿಷಯಗಳ
ಹಂಬಲವಿರುವದೂ ಶಕ್ಯವಿಲ್ಲ. ಎಲ್ಲೆಲ್ಲಿಯೂ ತಾನೇ ತಾನಾಗಿರುವನು.
ಈ ಸ್ಥಿತಿಯೇ ನಿಜವಾದ ವೈರಾಗ್ಯವು. ಇದೇ ವಿಷಯರೂಪ ಧನವ
ನ್ನೆಲ್ಲ ಜಂಗಮಕ್ಕೆ (ಜನತಾಜಗದೀಶನಿಗೆ) ಅರ್ಪಿಸುವ ಪರಿಯು; ಇಂತಹ
ಮೂರ್ತಿಗಳೇ ನಿರಾಭಾರಿಗಳು. ಜಂಗಮರು. ಜೀವನ್ಮುಕ್ತರು.

ಈ ವಿಧದ ಜ್ಞಾನಿಗಳ ಮಹಿಮರದೊಂದು ವರ್ಗವು ಸಮಾಜದ ಕಣ್ಮುಂದಿರಬೇಕೆಂದು ಸಮುದ್ದೇಶ ಪೂರ್ವಕವಾಗಿ ಪೂರ್ವಜರು ಅಲ್ಲಲ್ಲಿ ವಿರಕ್ತರ ಮಠಗಳನ್ನು ನಿರ್ಮಿಸಿದರು. ಅಲ್ಲಿರುವ ಮಹಂತರೇ ಚರ ಜಂಗಮರು (ಮಹಾಜ್ಞಾನಿಗಳಾದ ವಿತರ ಧುರೀಣರು) ಆದರೆ ಈಗಣ ಅವರ ಹೀನ ಸ್ಥಿತಿಯನ್ನು ನೋಡಿದರೆ ಯಾರಿಗಾದರೂ ಕಸಿಕರವೂ ದುಃಖವೂ ಉಂಟಾಗದಿರವು. ಇದು ಬಹುಶಃ ನಿಜವಿದ್ದರೂ ಅನೇಕ ಮಹಾಸ್ವಾಮಿಗಳು ತಮ್ಮ ಆಶ್ರಮ ಧರ್ಮವನ್ನರಿತು ಹೊಣೆಗಾರಿಕೆ ಕರ್ತವ್ಯತತ್ಪರರಾಗಿರುವರೆಂಬದನ್ನೂ ನೋಡುತ್ತೇವೆ. ಜಂಗಮರ ಪವಿತ್ರ ಕಾರ್ಯಗಳನ್ನು ಆ ಶಬ್ದದ ಈ ವ್ಯಾಖ್ಯೆಗಳೇ ಸೂಚಿಸುತ್ತವೆ. "ಜಾನಾತ್ಯ ತಿಶಯಪ್ವೇತು ಶಿವಂ ವಿಶ್ವ ಪ್ರಕಾಶಕಂ। ಸ್ವಸ್ವರೂಪತಯಾತೇತು ಜಂಗಮಾ ಇತಿ ಕೀರ್ತಿತಾಃ॥" ಇದು ಜ್ಞಾನಾರ್ಥದಲ್ಲಿಯೂ, 'ಸರ್ವ ಲೋಕೋಪಕಾರಾಯ ಯೋ ದೇವಃ ಪರಮೇಶ್ವರಃ। ಚರತ್ಯತಿಥಿ ರೂಪೇಣ ತಸ್ಮೈಜಂಗಮಾತ್ಮನೇನಮಃ॥' ಇದು ಗಮನಾರ್ಥದಲ್ಲಿಯೂ ಇರುವವು. ಇವುಗಳ ಮೇಲಿಂದ ಅವರು ತಮ್ಮ ಆತ್ಮ ಸ್ವರೂಪದ ಮೂಲಕ ವಿಶ್ವಪ್ರಕಾಶವಾದ ಶಿವಜ್ಞಾನವನ್ನು ಸಂಪಾದಿಸಿಕೊಂಡು ಸಾಕ್ಷಾತ್ ಪರಮೇಶ್ವರರಾಗಿ ಭಕ್ತೋದ್ಧಾರಾರ್ಥ ಸಂಚರಿಸುತ್ತಿರಬೇ ಕೆಂಬದು ತಾನೇ ವ್ಯಕ್ತವಾಗುತ್ತದೆ. ಸದಾ ಜ್ಞಾನೋಪದೇಶವನ್ನು ಮಾಡುತ್ತ ಜನರಿಗೆ ಷಟ್‌ಸ್ಥಲ ಮಾರ್ಗವನ್ನು ಬಿಂಬಿಸಿ ಕೊಟ್ಟು, ವೈರಾಗ್ಯ ಮೂರ್ತಿಗಳಾದ ತಮ್ಮನ್ನು ಅನುಕರಿಸುವಂತೆ ಪರಿಶುದ್ಧವಾಗಿ ನಡೆದು, ಭವಸಾಗರದಿಂದ ಭಕ್ತರನ್ನು ದಾಂಟಿಸಬೇಕು; ಇದೇ ಇವರ ಪವಿತ್ರ ವಾದ ಕರ್ತವ್ಯವು.

ಐಕ್ಯನುಃ— ತಾನು ಸಹಿತವಾಗಿ ತೋರುವ ವಿಶ್ವವನ್ನೆಲ್ಲ ಒಂದೇ ಒಂದಾದ ಅಖಂಡ ಮಹಾಲಿಂಗವನ್ನು ಮಾಡಿಕೊಂಡ ಶರಣನು ತಾನು ಅದರಲ್ಲಿ ಸಮರಸವಾಗಿ ಬೆರೆಯುವನು. ಹೀಗಾದರೆ ಅವನನ್ನೇ ಐಕ್ಯ ನೆಂದು ಹೇಳುವದುಂಟು. ಆನಂದದ ಅರಿವು ಸಹ ಉಳಿಯದಷ್ಟು ಅವನು ಲಿಂಗಲೀಯವಾಗಿರುವನು. ಇದೇ ಶಾಂತ್ಯತೀತೋತ್ತರ ಕಲೆಯ ಲಕ್ಷಣವು. ಯಾವ ವಿಧದ ಭಾವವೂ ತೋರದಂತೆ ಕೇವಲ ಬಯ ಲಾಗಿ ಕರ್ಪುರವು ಉರಿಯಲ್ಲಡಗಿದಂತೆ ಅಖಂಡಾದ್ವಯ ಜ್ಯೋತಿಃಸ್ವರೂ ಪನಾಗಿ ಬಿಡುವನು. ಇದೇ ಜಂಗಮದಿಂದ (ಜ್ಞಾನದ ಪರಮಾವಧಿ



ಯಿಂದ) ಪಡೆಯುವ ಪ್ರಸಿದ್ಧಪ್ರಸಾದವು. ಇದೇ ಜ್ಞಾನಶಿಖರಾಗ್ರದ (ಚಿತ್‌ಶಕ್ತಿಸ್ವರೂಪದ) ಅವಸ್ಥೆಯು; ಈ ನಿರ್ಭಾವ ನಿರ್ವಯಲ ಸ್ಥಿತಿಯೇ ಜ್ಞಾನಶೂನ್ಯವೆಂಬ ನೂರೊಂದನೆಯದಾದ ಕೊನೆಯ ಸ್ಥಳವು. ಈ ಸ್ಥಿತಿ ಅಳವಟ್ಟವನೇ ನೂರೊಂದಪ್ಪನು! ಶಿವಸಾಯುಜ್ಯವಂತನು! ಅಭವನು! ಕೃತಾರ್ಥನು!

ವೀರಶೈವರ ಲಿಂಗದ ಸ್ವರೂಪವೇನು? ಅದರ ಪೂಜೆಯ ಗೂಢ ವೇನು? ಎಂಬುದು ಈ ವಿವೇಚನೆಯಿಂದ ಸ್ಥೂಲವಾಗಿಯಾದರೂ ತಸ್ಸಮಕ್ಕೆಗೆ ನನ್ನ ಬಂಧುಗಳಿಗೆ ಒಡಮೂಡದೆ ಇರಲಾರದೆಂದು ನಾನು ಭಾವಿಸುತ್ತೇನೆ. ಈ ಅಪ್ರಾಪ್ಯಮಾನುಷ್ಯ ಜನ್ಮದಲ್ಲಿ, ಅದರಲ್ಲಿಯೂ ಮುಖ್ಯವಾಗಿ ವೀರಶೈವ ಸಮಾಜದಲ್ಲಿ ಹುಟ್ಟಿಬಂದವರೆಲ್ಲರೂ ಇಂತಹ ಲಿಂಗಪೂಜೆಯನ್ನೇ ಮಾಡಿ ಧನ್ಯರಾಗಬೇಕೆಂದು, ಬಸವಾದಿಪ್ರಮಥ ಪುಂಗವರು ದನಿ ಹರಿಯುವಂತೆ ಸಾರಿಸಾರಿ ಹೇಳಿದ್ದಾರೆ; ಅಲ್ಲದೆ ನಡೆದೂ ತೋರಿಸಿದ್ದಾರೆ. ನಮ್ಮ ಬಾಂಧವರು ಎಚ್ಚರಾಗಿ, ಭವಿಗಳಂತೆ ವರ್ತಿ ಸದೆ ತಾವು ಭಕ್ತರೆಂಬದನ್ನು ಲಕ್ಷಿಸಿ, ಈ ಶರಣ ಮಾರ್ಗದಲ್ಲಿ ನಡೆದು ಇದೇ ಜನ್ಮದಲ್ಲಿ ಅವಶ್ಯವಾಗಿ ಭವವಿಮುಕ್ತರಾಗಬೇಕು.

ಈ ತ್ರಿಲಿಂಗತದಂತರ್ಗತ ಷಡ್ಲಿಂಗ ಪೂಜೆಯನ್ನು ಕ್ರಮಕ್ರಮ ದಿಂದ ನೆರವೇರಿಸುತ್ತ ಹೋದರೆ ಈ ಜನ್ಮವು ಸಾಲದೆ ಹೋಗಬಹುದು. ಆದಕಾರಣ ಹಾಗೆ ತಪ್ಪದಾರಿ ತುಳಿಯದೆ ಶ್ರೀಬಸವಣ್ಣನವರ "ಭಕ್ತ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯನು ಮೆಲ್ಲಮೆಲ್ಲನೆ ಆದೆನೆಂಬನ್ನಬರ ನಾನು ವಜ್ರದೇಹಿಯೇ? ನಾನೇನು ಅಮೃತಸೇವಿ ಸಿದನೇ? ಆನು ಮರುಜೀವಣಿಯ ಕೊಂಡೆನೇ? ನುಡಿದ ನುಡಿಯೊ ಳಗೆ ಷಡುಸ್ಥಲ ಬಂದು ಎನ್ನ ಮನವ-ನಿಂಬುಗೊಡದಿದ್ದರೆ, ಸುಡುವೆನೀ ತನುವನು ಕೂಡಲಸಂಗಮದೇವಾ?" ಈ ವಚನದಂತೆ ಎಲ್ಲ ಧ್ಯೇಯ ವನ್ನು ಸರಿಯಾಗಿ ಮನಸಿನಲ್ಲಿ ತಂದುಕೊಂಡು, ಯಾವ ಸ್ಥಳದಲ್ಲಿದ್ದರೂ ಒಮ್ಮೆಲೇ ಎಲ್ಲ ಕಡೆಗೆ ದೃಷ್ಟಿಯನ್ನಿಟ್ಟು ನಡೆಯುವ ಪ್ರಯತ್ನ ಮಾಡ ತಕ್ಕದ್ದು. ಇದೇ ಉದ್ದೇಶವಿಡಿದು ಭಕ್ತಾದಿ ಪ್ರತಿಯೊಂದರಲ್ಲಿಯೂ ಆರಾರುವಿಧವಾಗಿ ಸ್ಥಲವಿಭಾಗಗಳನ್ನು ಕಲ್ಪಿಸಿರುವರೆಂಬದು ವಿಚಾರ ವಂತರಿಗೆ ಹೊಳೆಯದ ಇರದು.

ಕೊನೆಗೆ ಹಿರಿಯರಿಗೊಂದು ಬಿನ್ನಹಃ— ಈ ಗಹನ ವಿಷಯವು ನನ್ನ ತುತ್ತಲ್ಲ. ಆದರೂ ಈ ಬರೆಹವು ಅನೇಕ ದೋಷಗಳಿಂದ ತುಂಬಿದ್ದೇ ಇರಲಿ, ಅಸ್ತವ್ಯಸ್ತವಾದುದೇ ಇರಲಿ, ಹರಕುಮುರಕೇ ಇರಲಿ, ನನಗೆ ತಿಳಿದಷ್ಟಾದರೂ ನನಗಿಂತ ಹಿಂದಿರುವ ಜಿಜ್ಞಾಸುಗಳಾದ ನನ್ನ ಬಾಂಧವರಿಗೆ ಗೊತ್ತಾದರೆ ಅಲ್ಪಸ್ವಲ್ಪವಾದರೂ ಉಪಯುಕ್ತವಾದೀತು ಎಂದು ಬಗೆದು "ಕೋಳಿ ಒಂದು ಕುಟಕ ಕಂಡರೆ ಕರೆಯದೇ ತನ್ನ ಕುಲವೆಲ್ಲವನು?" ಎಂಬ ಮಹಾನುಭಾವರ ಉಪದೇಶವನ್ನು ನೆನಸಿ, ಇದನ್ನು ಪ್ರಸಿದ್ಧಿಸುವ ಧೈರ್ಯತಾಳಿರುವೆನು. ಆದುದರಿಂದ ಈ ಬರವಣಿಗೆಯನ್ನು ಓದಿ, ಉದಾಸೀನರಾಗದೆ ಲೋಕೋಪಕಾರಾರ್ಥವಾಗಿ ಮುಂದೆಬಂದು ಇದರೊಳಗಿನ ದೋಷಗಳನ್ನು ಬೈಲಿಗೆಳೆದು ತಿದ್ದಿ ದಯಮಾಡಿ ಪ್ರಸಿದ್ಧಿಸಬೇಕು. ನಮ್ಮ ಊರಲ್ಲಿ ಶಿವಾನುಭವ ಮಾಸಪತ್ರಿಕೆ, ನವಕರ್ನಾಟಕ, ಶರಣಸಂದೇಶಗಳೆಂಬ ವಾರಪತ್ರಿಕೆಗಳು ಬರುತ್ತವೆ. ಅವುಗಳಲ್ಲಿ ತಮ್ಮ ಅಭಿಪ್ರಾಯವು ಪ್ರಕಟವಾದರೆ ಸಕಾಲದಲ್ಲಿ ತಿಳಿದು ಮತ್ತೂ ಬಂದ ಸಂಶಯಗಳನ್ನು ಕೇಳಿ ನಿವಾರಿಸಿಕೊಳ್ಳಲಿಕ್ಕೆ ಒಳಿತಾಗುವದು.

---



# ಪದಮಂತ್ರ ಗೋಪ್ಯ.

[ಸಂಪುಟ ೧೪, ಸಂಚಿಕೆ ೧, ಪುಟ ೪೬ ರಿಂದ ಮುಂದೆಸಾಗಿದ್ದು.]

ಶ್ರೀಗುರು ಚನ್ನಬಸವೇಶ್ವರ ಸ್ವಾಮಿಗಳು ನಿರೂಪಿಸಿದ ವಸ್ತು ನಿರ್ದೇಶ ಪದಮಂತ್ರ ಗೋಪ್ಯ.

## ಶಿವಾದ್ವೈತ ಶರಣಪ್ರಕಾಶ.

ಗಗನದೊಳಗಣ ಚಂದ್ರ ಮುಗಿಲೊಳಗಣ ಮಿಂಚು। ಭುಗಿಲು ಭುಗಿಲೆನೆ ಸುಟ್ಟ ಪ್ರಭೆಯ ಬೆಳಗು ॥೧॥

ಸಂಚದೋವರಿಯೊಳಗೆ ಪಂಚಸೂತ್ರವು ಮಿಂಚಿ। ಕಂಚುಮಿಂಚಿನ ಸಂಚಲವ ನುಂಗಿ॥ ಪಂಚಸೂತ್ರವು ಮಿಂಚಿ ಸಂಚದೋವರಿಗೊಂಡು। ಪಂಚಮುಖ ಪರಮ ಗುರುವಾದ ಶರಣಾ ॥೨॥

ಪರಿಮಳವ ಹುವ್ವುಂಗಿ ಪರಮ ಪರಿಣಾಮವು ನುಂಗಿ। ಉರಿಕರ್ಪೂರವ ನುಂಗಿದಾ ತೆರದೊಳು॥ ಸರ ದಾರವನು ಮಣಿಯ ಮೂಲ ನುಂಗಿದ ತೆರದಿ। ಗುರುಗೋಪ್ಯವ ನುಂಗಿದಾ ತೆರದೊಳು ॥೩॥

ಇಂತು ಮಹಾಲಿಂಗದ ಚಿದ್ಬೆಳಗಿನೊಳಗೆ ಬೆರೆದು ಲಿಂಗ ಸುಖದ ತೃಪ್ತಿಯೊಳಗಿರುತಿರ್ದ ಶರಣ ಸುಖದರಿವು ಲಿಂಗಾರ್ಪಿತವಾಗಿ ಶರಣಸತಿ ಲಿಂಗಪತಿ ಎಂಬುಭಯ ಭಾವವಳಿದು ಕ್ಷೀರಕ್ಷೀರ ಬೆರೆದಂತೆ ಅವಿರಳ ಸಮರಸವನೈದಿರುತ್ತಿರಲು ಮುಂದೆ ಮಹಾಲಿಂಗೈಕ್ಯಸ್ಥಲವಾದುದು.

## ಮಹಾಲಿಂಗೈಕ್ಯ.

ಅಂಧಕಾರದ ಊರಿನ ಮಧ್ಯದೊಳಗೊಂದು। ಚಂದ್ರಮನುದಯವಾದುದ ಕಂಡೆನು॥ ಮಂದಮತಿಯಿಂದ ನೋಡಲು ಕಾಣಬಾರದದು। ಹೊಂದಿಹೊಂದದ ಬೆಳಗಿನ ಪ್ರಭೆಯು ತಾನು ॥೧॥

ಗಗನಮಂಡಲದ ಮಂಟಪದ ಮಧ್ಯದ ನಡುವೆ। ಮುಗಿಲೊಳಗೆ ಮಿಗೆವರಿದು ಮಿಂಚುದೋರೆ॥ ಜಗದ ಜೀವರು ಜಡರಿಗೆಯು ಕಾಣಬಾರದದು। ಸೊಗಸು ಸುಜ್ಞಾನಿಗಳಿಗಿದು ಸಹಜವು ॥೨॥

ಚತುರ್ವೇದ ಚತುರ್ಯೋಗ ಚತುರ್ವಿಧ ಮಂತ್ರದಿಂ। ದಶಿಶಯದಿ ನೋಡಿ ನೋಡಿಯು ಕಾಣದು॥ ಅತಿಮೂಢಮತಿ ಹೀನರಿಗೆ ಕಾಣಬಾರದದು। ಮತಿ ಸಂಧಾನವ ಬೆರಸಿದಾತ ಬಲ್ಲ ॥೩॥

ಮಾತು ಮಥನವ ನುಂಗಿ ನೀತಿ ನಿಜದಲ್ಲಿ ನಿಂದು । ಭ್ರಾಂತು ಭ್ರಮೆಗಳ ನಳಿದಡಾತ ಯೋಗಿ ॥ ಓತು ನಿಬ್ಬೆರಗು ನಿರ್ವಯಲ ನಿರ್ದೇಹಿನಿ । ಜ್ಞಾತ ಕೂಡಲ ಚನ್ನಸಂಗಯ್ಯನು ॥೪॥

ಇಂತು ಪರಿಪೂರ್ಣ ಪರಂಜ್ಯೋತಿ ಸ್ತಂಭಾಕಾರವೆಂಬ ಪರಬಿಂದುವಿನೊಡನೆ ಸಚ್ಚಿದಾನಂದ ಲಕ್ಷಣದಿಂ ಬೆರೆದು ಬೆಳಗುವ ಮಹಾಲಿಂಗದಲ್ಲಿ ಷಟ್‌ಸ್ಥಲಜ್ಞಾನಭಾವ ಸಮರಸದಿಂದ ಐಕ್ಯನಾದ ಶರಣಂಗೆ ಸದ್ರೂಪಿನ ಭಾವ ಅಸದ್ರೂಪಿನ ಭಾವವೆಂಬೆರಡು ಆ ಲಿಂಗದಲ್ಲಿ ನಷ್ಟವಾಯಿತ್ತಾಗಿ ಅರುಹಿನ ಜ್ಞಾನ ಅರುಹಿಸಿಕೊಂಬ ವಸ್ತು ಎರಡಿಲ್ಲದೆ ಕೇವಲ ಚಿದಾಕಾಶವನ್ನೈದುತ್ತಿರಲು ಮುಂದೆ ಜ್ಞಾನ ಶೂನ್ಯಸ್ಥಲವಾದುದು.

## ಜ್ಞಾನಶೂನ್ಯ

ಎಲೆ ಇಲ್ಲದ ವೃಕ್ಷ ಫಲವಿಲ್ಲದ ಹಣ್ಣು । ಮೆಲಲಿಲ್ಲದ ರುಚಿಯ ಸವಿದು ಸವಿದು ॥೧॥

ಸುಲಲಿತ ಸೂಕ್ಷ್ಮದ ನಿಲವು ನಿಜದೊಳಗಡಗಿ ಉಲುಹಡಗಿ ಉನ್ಮನಿಯ ಸ್ಥಾನದೊಳಗೆ ನೆನಹಳಿದು । ಮನವಳಿದು ತಾನೆ ತಾನಾದಲ್ಲಿ ವಾಙ್ಮ। ನಕ್ಕಗೋಚರವು ನಿರ್ವಯಲಾದುದು. ॥೨॥

ಆಗು ಹೋಗನೇ ಹರಿದು ಈಗ ಮೂಗನುವಾಗಿ । ಸಾಗರದ ಕೋಗಿಲೆಯು ನೀಗಿ ಕಂಡೆ ॥ ಮೇಘದೊಳು ಒಲಿದು ಬಾಗಿಲ ಬೀಗವನು ತೆಗೆದು । ಹೋಗಿ ಹೊಕ್ಕೆನು ಮಹಾಲಿಂಗದೊಳಗೆ ॥೩॥

ಸೊಡರಿಲ್ಲದ ಬೆಳಗು ಕುಡಿವರಿದ ಪ್ರಭೆಯೊಳಗೆ । ಹಿಡಿದ ಕರ್ಪುರದುರಿಯು ಮರೆದೊರಗಿತು ॥ ಗಡಣವಿಲ್ಲದ ಪ್ರಭೆಯ ಕುಡಿಯ ಬೆಳಗಿನ ನಡುವೆ । ಹಿಡಿ ಹಿಡಿಯೆ ಬಯಲಾದ ಸಂಗಯ್ಯನು ॥೪॥

ಇಂತು ಚನ್ನಬಸವೇಶ್ವರ ಸ್ವಾಮಿಗಳು ಪರಮೇಶ್ವರನ ಕುಮಾರ ಷಣ್ಮುಖ ಸ್ವಾಮಿಗಳು ಎಲ್ಲ ಪುರಾತನರಿಗೆ ಮಹಾನುಭಾವ ನಿಮಿತ್ತಾರ್ಥವಾಗಿ ಮರುಗಡ ಗಿಡದೋಪಾದಿಯಲ್ಲಿ ಸ್ವಾನುಭಾವ ಸದ್ವಾಸನೆಯ ಬೀರುತ್ತ, ಭಕ್ತಿ ಜ್ಞಾನ ವೈರಾಗ್ಯ ಸಂಪನ್ನನಾಗಿ ಪಿಂಡಾದಿ ಜ್ಞಾನಶೂನ್ಯಾಂತವಾದ ನೂರೊಂದು ಸ್ಥಲಕುಳಂಗಳ ಆಚರಣೆ ವಿಡಿದು ಆಚರಿಸುತ್ತಿದ್ದ ಚಿಕ್ಕದಂಡ ನಾಯಕರೆಂಬ ಮಹಾನುಭಾವ ದಿವ್ಯಕಾಂತಿ ಮೂರ್ತಿಯು ನಿರೂಪಿಸಿದ ನಿಲುಕಡೆಯು ತಮ್ಮಂತರಂಗದಲ್ಲಿ । ನೆಲಿಸಿರ್ಪ ಗುರುಲಿಂಗ ಜಂಗಮ ಚಿದ್ಬೆಳಗಿನಲ್ಲಿ ಪುಟ್ಟಿದ ಸ್ವಾನುಭಾವ ಪ್ರಕಾ



ಶವೇ ಉತ್ಕಟಿಸಿ ಮಾರ್ಗ ಕ್ರಿಯಾಚರಣೆಯ ನೊಳಕೊಂಡು ತಮ್ಮ ಚಿದಂಗ ಸ್ವರೂಪರಾದ ಮಹಾಜ್ಞಾನ ಶಿವಶರಣ ಗಣಂಗಳು ಆರಿದಾನಂದಿಸಿ ನಿತ್ಯ ಸುಖಿಗಳಾಗಲಿ ಎಂದು ಬೋಧಿಸಿದಂಥ ಪದಮಂತ್ರಗೋಪ್ಯದಿಂದ ಸ್ತೋತ್ರವ ಮಾಡಿದ ಮಹಾ ಪ್ರಸಾದವ ಎಲ್ಲ ಭಕ್ತ ಮಹೇಶ್ವರರ ಶರಣ ಗಣಂಗಳು ಶ್ರೋತ್ರಮುಖದಿಂದ ಕೇಳಿ ಮನೋಮುಖದಲ್ಲಿ ಹಾರೈಸಿ ಹೃದಯ ಮುಖದಿಂದ ತೃಪ್ತಿಯನೈದಿ ನಿಜಮೋಕ್ಷವೆಂಬ ಸುಧಾರಸದಲ್ಲಿ ಲೋಲುಪ್ತರಾಗಿ ನಿತ್ಯ ತೃಪ್ತಿಯನೈದಿ, ನಿಃಕಳಂಕ ಲಿಂಗದಲ್ಲಿ ಅಂಕುರಿಸಿ, ಶೂನ್ಯ ಲಿಂಗದಲ್ಲಿ ಪರಿಣಾಮಿಸಿ, ನಿರಂಜನ ಲಿಂಗದಲ್ಲಿ ಮತ್ತೆಂದಿನಂತೆ ಬಯಲಾದರು ನೋಡಾ ಸಂಗನ ಬಸವಣ್ಣನ ಮಹಾಪ್ರಸಾದ ಗುಹೇಶ್ವರ ಲಿಂಗದ ಬೆಳಗಿನೊಳಗೆ ಸಿದ್ಧರಾಮಣ್ಣ.

# ಕೊಡಗು ದೇಶದ ನಿಜವಾದ ಇತಿಹಾಸವು.

ಲೇಖಕರು:— ಶ್ರೀಯುತ ಸದಾಶಿವ ವೀರಭದ್ರಪ್ಪ ಹಂಜಿ, ಎಂ. ಎ.

ಲಾರ್ಡ ಉಯಲ್ಯಮ್ ಬೆಂಟಿಂಕನು ತನ್ನ ಕಾಲವಮಾನದಲ್ಲಿ ಕೊಡಗು ಅಥವಾ ಕುರ್ಗಪ್ರಾಂತವನ್ನು ಈಸ್ಟ ಇಂಡಿಯಾ ಕಂಪನಿಯವರ ಅಧೀನದಲ್ಲಿ ತಂದುಕೊಟ್ಟನು. ಪೂರ್ವಕಾಲದಲ್ಲಿ ಕುರ್ಗಪ್ರಾಂತದ ರಾಜರು ಇಕ್ಕೇರಿ ರಾಜ್ಯದ ಮಾಂಡಲಿಕರಾಗಿದ್ದರು. ಕೊಡಗು ದೇಶದ ರಾಜರ ಮನೆತನವು ಬಹುತರವಾಗಿ ಇಕ್ಕೇರಿ ಮನೆತನದ ಒಂದು ಶಾಖೆ ಇರಬಹುದು. ಅವರು ತಮ್ಮ ಪ್ರದೇಶದೊಳಗಿನ ಜನರಿಗೆ ಶೈವ ಮತ್ತು ಜಂಗಮ ಧರ್ಮದ ಅನುಯಾಯಿಗಳನ್ನಾಗಿ ಮಾಡಿದರು. ಆದರೂ ಬಹು ಜನರು ತಮ್ಮ ಜೀವಸಾಧನವಾದ ಕಾವೇರಿ ನದಿ ಮತ್ತು ಆ ಕಾವೇರಿ ಅಮ್ಮ ದೇವತೆಯನ್ನು ಬಿಡಲಿಲ್ಲ. ಅದರಂತೆ ಅವರು ತಮ್ಮ ಅಜ್ಜ ಮುತ್ತಜ್ಜರ ಕಾಲದ ಭೂತ, ಪಿಶಾಚ, ವನದೇವತೆ, ಗ್ರಾಮ ದೇವತೆ ಮೊದಲಾದ ಅನೇಕ ಪೂರ್ವದ ಆರಾಧ್ಯ ದೇವತೆಗಳನ್ನೂ ಸಹ ಬಿಡಲಿಲ್ಲ. ಈ ರಾಜರು ಕೊಡಗು ದೇಶಕ್ಕೆ ಬಂದಂದಿನಿಂದ ಅಲ್ಲಿಯ ದೊಡ್ಡ ದೊಡ್ಡ ಮನೆತನದವರ ಕೂಡ ಶರೀರ ಸಂಬಂಧವನ್ನು ಮಾಡಿ ಆ ದೇಶದವರಾದರು. ಅವರು ಲಿಂಗಾಯತ ಮತದವರಿದ್ದು ದೇಶ ಪದ್ಧತಿಯಂತೆ ಕೊಡಗು ದೇಶದ ಧರ್ಮ ಆಚಾರ ವಿಚಾರದಂತೆ ಆಚರಿಸುತ್ತಿದ್ದರು. ಆ ಪ್ರಾಂತದಲ್ಲಿ ಬ್ರಾಹ್ಮಣ ಧರ್ಮದ ಸಾವಿರಾರು ಶಾಖೆಗಳು ಪ್ರಸಾರವಾಗಿದ್ದವು. ತುಳುದೇಶದ ಹವೀಕರೆಂಬ ಧರ್ಮೋಪದೇಶಕರು ಕಾವೇರಿ ನದಿ ತೀರದಲ್ಲಿ ಬಹಳ ಇದ್ದರು. ಆದರೆ ಅವರು ಉಳಿದವರ ಕೂಡ ಶರೀರ ಸಂಬಂಧ ಮಾಡದ್ದರಿಂದ ಅವರ ಸಂಖ್ಯೆಯು ಕಡಿಮೆಯಾಗುತ್ತಾ ನಡೆದಿತ್ತು.

ಹೈದರ ಅಲ್ಲಿಯು ಇಕ್ಕೇರಿ ರಾಜ್ಯವನ್ನು ಗೆದ್ದನಂತರ ಅದಕ್ಕೆ ಹೈದರ ನಗರ ಎಂದು ಹೆಸರು ಇಟ್ಟಿದ್ದನು. ಅವನು ಆ ರಾಜ್ಯವನ್ನು ತನ್ನ ರಾಜ್ಯಕ್ಕೆ ಕೂಡಿಸಿಕೊಂಡು ತಾನು ಆ ಪ್ರಾಂತದ ರಾಜನೆಂದು ಅನ್ನಿಸಿಕೊಳ್ಳಹತ್ತಿದನು. ಮುಂದೆ ಬಹು ದಿವಸಗಳವರೆಗೆ ಅವನ ಅಧಿಪತ್ಯವನ್ನು ತೆಗೆದುಹಾಕುವದಕ್ಕಾಗಿ, ಆ ಗುಡ್ಡಗಾಡು ಪ್ರದೇಶದೊಳಗಿನ ಜನರು ಅವನ ಕೂಡ



ಯುದ್ಧ ಮಾಡಿದರು. ಆದರೆ ಕೊನೆಗೆ ಹೈದರ ಅಲ್ಲಿಯು ಕಪಟತನದಿಂ
ದಲೂ ಮತ್ತು ತನ್ನ ಸೈನ್ಯ ಬಲದಿಂದಲೂ ಅವರನ್ನು ಸೋಲಿಸಿ, ತನ್ನ
ಮಾಂಡಲಿಕರನ್ನಾಗಿ ಮಾಡಿಕೊಂಡನು. ಇ. ಸ. ೧೭೭೪ರಲ್ಲಿ ಹಲೇರಿ
ಯಾದ ಲಿಂಗರಾಜನು ಹೈದರ ಅಲ್ಲಿಗೆ ವರ್ಷಕ್ಕೆ ೨೪೦೦೦ ರೂಪಾಯಿಗ
ಳನ್ನು ಕಾಣಿಕೆಯನ್ನಾಗಿ ಕೊಡಲಿಕ್ಕೆ ಒಪ್ಪಿದನು. ೧೭೮೦ರಲ್ಲಿ ಲಿಂಗರಾ
ಜನು ಮರಣ ಹೊಂದಿದನು. ಅವನಿಗೆ ಇಬ್ಬರು ಗಂಡು ಮಕ್ಕಳಿದ್ದರು.
ಮೊದಲನೆಯವನು ವೀರರಾಜನು, ಎರಡನೆಯವನು ಲಿಂಗರಾಜನು.
೧೭೮೦ರಲ್ಲಿ ವೀರರಾಜನು ೧೭ ವರ್ಷದವನಿದ್ದನು. ಲಿಂಗರಾಜನುಸಣ್ಣವನಿ
ದ್ದನು. ಹೈದರ ಅಲ್ಲಿಯು ಕೊಡಗು ದೇಶದ ರಾಜರ ವಂಶವನ್ನು ಸಂಪೂ
ರ್ಣವಾಗಿ ನಿರ್ಮೂಲ ಮಾಡಿದ್ದನು. ಆದರೆ ಅವನೇ ಈ ಇಬ್ಬರು ರಾಜ
ಪುತ್ರರನ್ನು ತನ್ನ ಅಧೀನದಲ್ಲಿಟ್ಟುಕೊಂಡು ಅವರನ್ನು ಸಂರಕ್ಷಣೆ ಮಾಡುವ
ಭಾರವನ್ನು ವಹಿಸಿದ್ದನು. ಹೈದರಲ್ಲಿಯು ಸುಬ್ಬರಾಯನೆಂಬ ಹೆಸರಿನ
ಬ್ರಾಹ್ಮಣನನ್ನು ಕೊಡಗು ದೇಶದ ಮಾಮಲತದಾರನನ್ನಾಗಿ ನಿಯಮಿಸಿ
ದನು. ಈ ಬ್ರಾಹ್ಮಣನು ಬಹು ದಿನಗಳಿಂದ ಕೊಡಗಿನ ರಾಜರ ನೌಕರಿ
ಯಲ್ಲಿದ್ದನು. ಅದೇ ವರ್ಷ ಹೈದರ ಅಲ್ಲಿಯು ಆರ್ಕಾಟದ ಮೇಲೆ ದಾಳೀ
ಮಾಡಿದನು. ಕೊಡಗು ಪ್ರಾಂತದ ರೈತರಿಗೆ ತಮ್ಮ ಇಬ್ಬರು ರಾಜಪುತ್ರ
ರನ್ನು ಹೈದರನ್ನು ತನ್ನ ವಶಕ್ಕೆ ತಕ್ಕೊಂಡು ಬ್ರಾಹ್ಮಣನ ಕೈಯಲ್ಲಿ ಅಧಿ
ಕಾರ ಕೊಟ್ಟದ್ದು ಸಹನವಾಗಲಿಲ್ಲ ಇ. ಸ. ೧೭೮೩ರ ಮಳೆಗಾಲದಲ್ಲಿ
ಅವರು ಪ್ರತ್ಯಕ್ಷ ಬಂಡಾಯವೆಬ್ಬಿಸಿದರು. ಮಾಮಲತದಾರನು ಈ
ಬಂಡಾಯದ ಸಂಗತಿಯನ್ನು ಹೈದರ ಅಲ್ಲಿಗೆ ತಿಳಿಸಿದನು. ಆಗ ಹೈದ
ರನು ಆರ್ಕಾಟದಿಂದ ಹೀಗೆ ಉತ್ತರ ಕಳಿಸಿದನು "ಆ ಇಬ್ಬರು ರಾಜಪು
ತ್ರರನ್ನು ಮೈಸೂರು ಪ್ರಾಂತದೊಳಗಿನ ಗರುರು ಎಂಬ ದುರ್ಗದಲ್ಲಿ
ಸುರಕ್ಷಿತದಿಂದ ಇಡಬೇಕು ಹಿಂದಿನಿಂದ ಕೊಡಗು ದೇಶದ ರೈತರ ದುಃಖ
ವನ್ನು ವಿಚಾರ ಮಾಡುವದರಲ್ಲಿ ಬಂದೀತು" ೧೭೮೩ರಲ್ಲಿ ಆ ಇಬ್ಬರು
ರಾಜಪುತ್ರರನ್ನು ಗರುರು ದುರ್ಗಕ್ಕೆ ಮುಟ್ಟಿಸಿದನು. ಕೊಡಗಿನ ಜನ
ರಿಗೆ ಇದು ಸಹನವೇ ಆಗಲಿಲ್ಲ. ಅವರು ಖಡ್ಗಗಳನ್ನು ಕೂಡಿಸಿ ಒಂದರ
ಮೇಲೊಂದು ಬಂಡು ಮಾಡಿ ಮುಸಲ್ಮಾನರನ್ನು ಹಣ್ಣು ಹಣ್ಣು
ಮಾಡಿದರು. ೧೭೮೩ರ ಕೊನೆಗೆ ಹೈದರ ಅಲ್ಲಿಯು ತೀರಿಕೊಂಡನು.
೧೭೮೪ರಲ್ಲಿ ಟೀಪುನು ನಗರದಲ್ಲಿ ಜನರಲ್ ಮಾಥ್ಯು ಮತ್ತು ಅವನ

ಕೈಕೆಳಗಿನ ಅಧಿಕಾರಿಗಳನ್ನು ಕಪಟತನದಿಂದ ಹಿಡಿದನು. ಮತ್ತು ಮಂಗಳೂರನ್ನು ಕೈವಶಮಾಡಿಕೊಂಡನು. ಆ ಸಮಯದಲ್ಲಿ ಶ್ರೀರಂಗ ಪಟ್ಟಣಕ್ಕೆ ಹೋಗುವಾಗ ಕೊಡಗಿನ ರೈತರು ಕೈಯಲ್ಲಿ ಖಡ್ಗಗಳನ್ನು ಹಿಡಿದುಕೊಂಡು ದಂಗೆಯನ್ನು ಮಾಡುತ್ತಿದ್ದರು. ಅವರಿಗೆ ನಾಲ್ಕು ಸಾಮೋಪಚಾರದ ಮಾತುಗಳನ್ನು ಹೇಳಿದನು. ಆ ವೇಳೆಯಲ್ಲಿ ಆ ಇಬ್ಬರು ರಾಜಪುತ್ರರನ್ನು ಮತ್ತು ಅವರ ಕುಟುಂಬದೊಳಗಿನ ಜನರನ್ನು ಪೇರಿಯಾಪಟ್ಟಣದಲ್ಲಿ ಬಂದಿಗಳನ್ನಾಗಿ ಮಾಡಿ ಇಟ್ಟಿದ್ದನು. ಮತ್ತು ಅವರನ್ನು ಅಲ್ಲಿ ಬಹಳ ಕೆಟ್ಟ ರೀತಿಯಿಂದ ನಡಿಸಿಕೊಳ್ಳುತ್ತಿದ್ದನು. ಕೊಡಗು ದೇಶದೊಳಗಿನ ರಾಜಮನೆತನದ ಬಹು ಜನರ ದೇವಿಯ ಬಲದಿಂದ ಮರಣ ಹೊಂದಿದರು. ಈ ಪ್ರಕಾರ ರಾಜಮನೆತನದವರ ತೊಂದರೆಯು ಇರುತ್ತಿರಲು ಕೊಡಗಿನ ರೈತರು ಭಯಂಕರ ಸಿಟ್ಟಿಗೆದ್ದು ಮತ್ತೊಮ್ಮೆ ಕೂಡಕಿ ದೊಡ್ಡ ಬಂಡಾಯವನ್ನು ಎಬ್ಬಿಸಿದರು. ಅದರಲ್ಲಿ ಶ್ರೀರಂಗ ಪಟ್ಟಣದಿಂದ ಟೀಪುನು ಕಳಿಸಿದ ೨೦೦೦ ಸೈನ್ಯದ ಕಾಳು, ಮೇವು, ಇವುಗಳ ರಹದಾರಿಯನ್ನು ಬಂದು ಮಾಡಿ ಅವರನ್ನು ಸೋಲಿಸಿದರು. ಆದರೆ ಟೀಪೂನು ವಿಶ್ವಾಸಘಾತತನದಿಂದ ಅವರೊಳಗಿನ ಮುಖ್ಯ ಮುಖ್ಯ ಜನರನ್ನು ಹಿಡಿದು ಮೈಸೂರಿಗೆ ಒಯ್ದನಂತರ ಅವರು ಟೀಪೂವಿನ ಸ್ವಾಧೀನರಾದರು. ಕೊಡಗು ಪ್ರಾಂತದಲ್ಲಿಯ ದೊಡ್ಡ ದೊಡ್ಡ ಕುಲೀನ ಮನೆತನದವರನ್ನು ಟೀಪುವು ಮೈಸೂರಿಗೆ ಒಯ್ದು ಅವರ ಬದಲಾಗಿ ಮುಸಲ್ಮಾನರನ್ನು ತುಂಬಿದನು. ಅವರಿಗೆ ಏನಾದರೂ ಬೇಕಾದರೆ ಬಳ್ಳಾರಿ ಪ್ರಾಂತದೊಳಗಿನ ಆದವಾನಿಯಿಂದ ತಂದು ಪೂರೈಸುತ್ತಿದ್ದನು. ಇದೇ ವೇಳೆಗೆ ಸುಬ್ಬರಾಯನ ಮಗನಾದ ನಾಗಪ್ಪಯ್ಯನಿಗೆ ಟೀಪುವು ಮಾಮಲತಿಯನ್ನು ಕೊಟ್ಟನು. ಆದರೆ ಅವನು ಹಣ ತಿಂದನೆಂದು ಅವನ ಮೇಲೆ ಆರೋಪ ಬಂದದರಿಂದ ಅವನನ್ನು ಗಲ್ಲಿಗೇರಿಸುವ ಹುಕುಮಾಯಿತು. ಆದರೆ ಅವನು ಅಷ್ಟರಲ್ಲಿ ಮಲಥಲಮ ಎಂಬಲ್ಲಿಗೆ ಓಡಿಹೋದನು.

೧೭೮೮ರ ಡಿಸೆಂಬರ ತಿಂಗಳಲ್ಲಿ ದೊಡ್ಡ ವೀರರಾಜೇಂದ್ರ ಉದಯ ಇವನು ಕೊಡಗು ಪ್ರಾಂತದ ಬಹು ಜನ ರೈತರ ಸಹಾಯದಿಂದ ಪೆರಿಯಾ ಪಟ್ಟಣದಿಂದ ತನ್ನ ಕುಟುಂಬದೊಳಗಿನ ಜನರನ್ನು ಕರೆದುಕೊಂಡು ಕೈದಿನೊಳಗಿಂದ ಬಿಡಿಸಿಕೊಂಡು ಓಡಿಹೋದನು. ಅವನು ತನ್ನ ಕುಟುಂಬದೊಳಗಿನ ಜನರು ಸುರಕ್ಷಿತವಿರಲೆಂದು ಕಿಗ್ಗಡನಾಡದ



ಲ್ಲಿಯ ಲಕ್ಷ್ಮಣ ತೀರ್ಥದ ಹತ್ತರ ಕರ್ಚಿ ಎಂಬ ಸ್ಥಳದಲ್ಲಿ ಇಟ್ಟನು. ಈ ಪ್ರಕಾರ ತನ್ನ ಕುಟುಂಬದ ಜನರ ವ್ಯವಸ್ಥೆ ಮಾಡಿ ಮುಸಲ್ಮಾನರನ್ನು ಬಗ್ಗು ಬಡೆಯಲಿಕ್ಕೆ ಪ್ರಾರಂಭ ಮಾಡಿದನು. ಸ್ವಲ್ಪ ದಿನಗಳಲ್ಲಿಯೇ ಅವನು ಬಿಸಿಲ ಘಾಟದಿಂದ ಮನಂತವಾಡಿಯ ವರೆಗಿರುವ ದೇಶವನ್ನು ಮುಸಲ್ಮಾನರ ಆಳಿಕೆಯಿಂದ ಬಿಡುಗಡೆ ಮಾಡಿದನು. ತರುವಾಯ ಅವನು ಮೈಸೂರು ಪ್ರಾಂತದ ಮೇಲೆ ದಾಳೀ ಮಾಡಿದನು. ಅದರಲ್ಲಿ ಅವನಿಗೆ ಅನೇಕ ಸಾರೆ ಜಯ ದೊರೆಯಿತು. ಅಲ್ಲಿಂದ ಅವನು ದನಕರುಗಳನ್ನೂ ಕಾಳುಕಡಿಗಳನ್ನೂ ಸುಲಿದು ಕೊಡಗು ದೇಶಕ್ಕೆ ತಂದನು. ಮತ್ತು ತನ್ನ ಅನುಯಾಯಿಗಳಿಗೆಲ್ಲ ಹಂಚಿಕೊಟ್ಟನು. ಈ ಪ್ರಕಾರ ದೊಡ್ಡ ದೊಡ್ಡ ಸಾಹಸದ ಕೃತ್ಯಗಳನ್ನು ಮಾಡಿ, ಮೈಸೂರು ಪ್ರಾಂತದಲ್ಲಿ ದಾಳೀ ಮಾಡಿ ತಿರುಗಿ ಬರುವಾಗ ಕರ್ಚಿಯಲ್ಲಿ ಹೋಗಿ ನೋಡಲು ಅಲ್ಲಿ ರಾಜ ಕುಟುಂಬದೊಳಗಿನ ಎಲ್ಲ ಜನರ ಸಂಪೂರ್ಣ ನಾಶವಾಗಿತ್ತು. ಮತ್ತು ಖಜಾನೆಯನ್ನೆಲ್ಲ ಲೂಟ ಮಾಡಿಕೊಂಡು ಹೋಗಿದ್ದರು. ಈ ಎಲ್ಲ ಕೃತಿಯನ್ನು ಮಾವೆಲಿಕ್ಕೆ ಕೊಡಗಿನ ರಾಜರ ಕಡು ವೈರಿಯಾದ ಕೋಟೆ ಅರಸ ಈತನು ಟಾಕನೇರ ಜನರ ಒಂದು ಸುಲಿಯುವ ಟೋಳಿಯನ್ನು ಕಳಿಸಿಕೊಟ್ಟಿದ್ದನು. ಅವರಿಗೆ ಅಲ್ಲಿಯ ಒಬ್ಬ ಪದಚ್ಯುತ ಮಾಮಲತದಾರನು ಎಲ್ಲ ಹಾದಿಗಳನ್ನು ತೋರಿಸಿದ್ದನು. ಟೀಪುನು ಕೊಡಗು ದೇಶವನ್ನು ಪುನಃ ಸಂಪೂರ್ಣ ವಶಮಾಡುವದಕ್ಕಾಗಿ ಗೋಲಮ ಅಲ್ಲಿಯ ಸಂಗಡ ಬಹಳ ಸೈನ್ಯವನ್ನು ಕೊಟ್ಟು ಕಳಿಸಿದ್ದನು. ಗೋಲಮ ಅಲ್ಲಿಯು ಕೊಡಗು ಪ್ರಾಂತದಲ್ಲಿ ಹೋಗಿ ಬಹು ಜನರನ್ನು ಕೊಂದು ಹಾಕಿದನು. ಮತ್ತು ಊರುಗಳನ್ನು ಸುಟ್ಟನು. ಟೀಪುವಿನ ಸೈನ್ಯವು ಬಹಳ ವಿದ್ಯು ಉತ್ತಮ ಯುದ್ಧದ ಶಿಕ್ಷಣವನ್ನು ಪಡೆದಿತ್ತು. ಆದುದರಿಂದ ಸ್ವತಃ ವೀರರಾಜೇಂದ್ರನಿಗೂ ಸಹ ಆತನ ಸ್ವಾಧೀನವಾಗುವ ಪ್ರಸಂಗವು ಬಂದಿತ್ತು. ಆದರೆ ಇಷ್ಟರಲ್ಲಿ ಮಲಥಲಮ ರಾಜನು ಒಂಡು ಮಾಡಿದ್ದರಿಂದ ಟೀಪುನು ಅತ್ತ ಕಡೆಗೆ ಗೋಲಮ ಅಲ್ಲಿಯನ್ನು ವ್ಯವಸ್ಥೆ ಮಾಡಲಿಕ್ಕೆ ಕಳಿಸಿಕೊಡಬೇಕಾಯಿತು. ಹೀಗೆ ವೀರರಾಜೇಂದ್ರನು ಉಳಿದನು. ಟೀಪುನು ಗೋಲಮ ಅಲ್ಲಿಯನ್ನು ಕಳಿಸುವಾಗ ಅವನು ಕೊಡಗು ದೇಶದ ವ್ಯವಸ್ಥೆಯನ್ನು ನೋಡಬೇಕೆಂದು ಆಜ್ಞೆಮಾಡಿದ ಕಾರಣ ಆತನು ಹೋಗಹೋಗುತ್ತಾ ಜನರಿಗೆ ಬಹಳ ತೊಂದರೆ ಕೊಟ್ಟನು. ಅವನು ಟೀಪುನು ಕಳಿಸಿದ ಸ್ಥಳಕ್ಕೆ

ಹೋಗುವಾಗ ಕುಡಾನಪುರದ ದಾರಿಯ ಸಮೀಪ ಅವನ ಸೈನ್ಯದ ಮೇಲೆ ಕೊಡಗಿನ ಜನರು ಹಾವಳಿ ಮಾಡಿ ಬಹು ಜನರನ್ನು ಕೊಂದರು. ಇದನ್ನು ಕೇಳಿ ಟೀಪುನು ನಾಲ್ವರು ಸೇನಾಧಿಪತಿಗಳ ಸಂಗಡ ದಂಡು ಕೊಟ್ಟು ಗೋಲಮ ಅಲ್ಲಿಯ ಸಹಾಯಕ್ಕೆ ಕಳುಹಿದನು. ವೀರ ರಾಜನಿಗೆ ಈ ಸುದ್ದಿಯು ಹತ್ತಲು ಆತನು ಈ ಸೈನ್ಯವು ಹೋಗುವ ದಾರಿಯಲ್ಲಿ ಹೇಗಲಾ ಎಂಬ ಸ್ಥಳದಲ್ಲಿ ಇವರನ್ನು ಕಾಯುತ್ತಾ ಕೂತಿದ್ದನು. ಆ ಸ್ಥಳಕ್ಕೆ ಬಂದ ಕೂಡಲೆ ಆ ಸೇನಾಧಿಪತಿಗಳಿಗೂ ವೀರರಾಜನಿಗೂ ಘನಘೋರವಾದ ಸಂಗ್ರಾಮವೆಸಗಿತು. ಈ ಯುದ್ಧದಲ್ಲಿ ವೀರರಾಜನ ದಂಡಿನವರು ಟೀಪೂವಿನ ೮೦೦ ಸೈನಿಕರನ್ನು ಕೊಂದುಹಾಕಿದರು. ಮತ್ತು ೪೦೦ ಸೈನಿಕರನ್ನು ಗಾಯಗೊಳಿಸಿದರು. ಮತ್ತು ಅವರ ಮೇವು ಕಾಳು ಕಡಿಗಳನ್ನು ಲೂಟ ಮಾಡಿದರು. ಈ ಸಮಯದಲ್ಲಿ ಕೊಡಗಿನ ಸೈನಿಕರು ಟೀಪುವಿನ ಸೈನ್ಯವನ್ನು ಸಂಪೂರ್ಣವಾಗಿ ಸದೆಬಡೆಯುತ್ತಿದ್ದರು. ಆದರೆ ಅವರ ಲಕ್ಷವು ಕೊಲ್ಲುವದಕ್ಕಿಂತಲೂ ಸುಲಿಯುವದರ ಕಡೆಗೆ ಹೆಚ್ಚು ಇದ್ದದರಿಂದ ಅವರನ್ನು ಬಿಟ್ಟು ಹೋದರು. ಈ ಕಾಳಗದಲ್ಲಿ ವೀರರಾಜನು ಟೀಪುವಿನ ಬಂದಿಗಳಿಗೆ ಕೈದು ಮಾಡಿ ತಿರುಗಿ ಅವರನ್ನು ಮೈಸೂರಿಗೆ ಕಳಿಸಿಕೊಟ್ಟನು. ಇದನ್ನು ನೋಡಿ ಟೀಪೂನು ಬಹಳ ಗಾಬರಿಯಾದನು. ಮತ್ತು ಕೊಡಗು ದೇಶವನ್ನು ಗೆಲ್ಲುವದಕ್ಕಾ ತನ್ನ ಬೀಗನಾದ ಬನುರುದ್ದೀನನ ಕಡೆಗೆ ಅಪಾರ ಸೈನ್ಯ--ಸಾಮುಗ್ರಿಗಳನ್ನು ಕಳಿಸಿಕೊಟ್ಟನು. ಬನುರುದ್ದೀನನು ಆ ದಂಡನ್ನು ತಕ್ಕೊಂಡು ಕುಶಾಲನಗರದಿಂದ ತಿರುಗಿ ಬರುವಾಗ ಕೊಡಗಿನ ಜನರು ಅವರಿಗೆ ಗಂಟು ಬಿದ್ದು ಆ ಸೈನ್ಯದ ಧೂಳಿಹಾರಿಸಿಬಿಟ್ಟರು. ಅತಿಶಯ ಪ್ರಯತ್ನ ಮತ್ತು ಕಷ್ಟದಿಂದ ಅರ್ಧದಂಡು ಸಾಮುಗ್ರಿಗಳೊಡನೆ ಅವನು ಮರಕಾರಾ ದುರ್ಗಕ್ಕೆ ಬಂದು ಮುಟ್ಟಿದನು. ಇಲ್ಲಿಯವರೆಗೆ ವೀರರಾಜನು ಟೀಪೂನನ್ನು ಲಕ್ಷ್ಯಕ್ಕೆ ತಂದಿದ್ದಿಲ್ಲ. ಇತ್ತ ಕಡೆಗೆ ಈಸ್ಟ ಇಂಡಿಯಾ ಕಂಪನಿಯವರು ದಿನದಿನಕ್ಕೆ ಬಲಾಢ್ಯರಾಗಿ ಟೀಪೂವಿನ ಸಂಗಡ ಕಾಳಗ ಮಾಡುತ್ತಲೇ ಇದ್ದರು. ಇಂಥ ಪ್ರಸಂಗದಲ್ಲಿ ಕೊಡಗು ಮತ್ತು ಈಸ್ಟ ಇಂಡಿಯಾ ಕಂಪನಿಯವರು ಒಂದಾದರೆ ಕೊಡಗಿನ ರಾಜನ ಸ್ವತಂತ್ರ ರಕ್ಷಣೆಯನ್ನು ಮಾಡುವ ಸಲುವಾಗಿ ಕಂಪನಿಯವರು ಜಾಮೀನದಾರರು ಆಗುತ್ತಾರೆ. ಮತ್ತು ಟೀಪೂವಿನ ಕೂಡ ಸಲ್ಲಾ ಆದಲ್ಲಿ ಅವನಿಂದ ರಾಜ್ಯಾದ ಮತ್ತು ಎಲ್ಲ ರೀತಿ

(ಮುಂದೆ ಸಾಗುವದು.)



# ಬಸವೇಶ್ವರನ ಕಾಲ ನಿರ್ಣಯ

ಲೇಖಕರು:- ಶ್ರೀಮಾನ್ ಗೋವಿಂದ ಪೈ. ಮಂಜೇಶ್ವರ

ನಾವು ಹಿಂದಿನ ಸಂಚಿಕೆಯಲ್ಲಿ ಶ್ರೀಮಾನ್ ಎಸ್. ಶ್ರೀಕಂಠ ಶಾಸ್ತ್ರಿ ಎಂ. ಎ.-ಲೆಕ್ಚರರ ಮಹಾರಾಜಾ ಕಾಲೇಜ ಮೈಸೂರು ಇವರು 'ಬಿಜ್ಜಳ' ಈ ಶಿರೋಲೇಖದ ಕೆಳಗೆ ಬಸವೇಶ್ವರನು ಕಳಚೂರ್ಯ ಬಿಜ್ಜಳನ ಕಾಲದಲ್ಲಿರದೆ ಸಿಂದ ವಂಶದ ಬಿಜ್ಜಳನ ಆಸ್ಥಾನದಲ್ಲಿದ್ದನೆಂದು ಸಿದ್ಧ ಮಾಡಲು ಪ್ರಯತ್ನಿಸಿದ್ದಾರೆ. ಈ ಲೇಖವು ನಾವು ಆಗಷ್ಟ ತಿಂಗಳಿನ ಸಂಚಿಕೆಯಲ್ಲಿ ಇದೇ ವಿಷಯವಾಗಿ ನಾವು ಬರೆದ ಲೇಖಕ್ಕೆ ಉತ್ತರವಾಗಿದೆ. ಆದರೆ ಶ್ರೀಮಾನ್ ಶ್ರೀಕಂಠ ಶಾಸ್ತ್ರಿಗಳ ಈ ವಿಧಾನಗಳಿಗೆ ಉತ್ತರಗಳು ನಾವು ಕೆಳಗೆ ಪ್ರಸಿದ್ಧಿಸಿದ ಲೇಖದಲ್ಲಿ ದೊರೆಯುತ್ತಿವೆ. ಇದರಲ್ಲಿ ಅನೇಕ ಐತಿಹಾಸಿಕ ಮಹತ್ವದ ವಿಷಯಗಳು ಸವಿಸ್ತಾರವಾಗಿ ನಿರೂಪಿಸಲ್ಪಟ್ಟಿರುತ್ತವೆ. ಇದು "ಶರಣ ಸಾಹಿತ್ಯ" ಪತ್ರಿಕೆಯಲ್ಲಿ ಪ್ರಸಿದ್ಧವಾಗಿದ್ದು ಅದನ್ನೇ ನಾವು ಇಲ್ಲಿ ಶಿವಾನುಭವ ಪತ್ರಿಕೆಯ ವಾಚಕರಿಗೋಸ್ಕರ ಕೊಟ್ಟಿದ್ದೇವೆ.—

ಸಂಪಾದಕ.

ಸುಮಾರು ೫೦ ವರ್ಷಗಳ ಹಿಂದೆ ಬಸವೇಶ್ವರನ ಹೆಸರು ಸಾಹಿತ್ಯದಲ್ಲಿ ವಿನಾಶಾಸನಗಳಲ್ಲಿ ದೊರೆಯದೆ, ಆ ಸಾಹಿತ್ಯವೂ ಅವನ ಸಮಸಾಮಯಿಕವಾಗಿರದೆ, ಅವನ ಐತಿಹಾಸಿಕತೆಯನ್ನು ಕುರಿತು ಸಹಜವಾಗಿ ಇದ್ದ ಕೊರತೆಯಾದರೂ ಈಗೇನೂ ಹಾಗೆಯೇ ಉಳಿದಿಲ್ಲದೆ, ಆತನಿಗೆ ಕಿರಿಯ ಸಮಕಾಲೀನನಾದ ಹರಿಹರನ [೧] ಅಪೂರ್ಣವಾಗಿಯೇ ಆದರೂ ದೊರಕಿರುವ ಬಸವರಾಜ ದೇವರ ರಗಳೆಯಿಂದಲೂ ಈ ಕೆಲವು ಶಾಸನಗಳಿಂದಲೂ ಆ ತೊಡಕು ಸಾಕಲ್ಯವಾಗಿ ನೀಗುತ್ತದೆ.

---

೧ ಈಗ "ಶರಣ ಸಾಹಿತ್ಯದಲ್ಲಿ" ಪ್ರಕಟವಾಗಿರುವ 'ಹರಿಹರ-ರಾಘವಾಂಕರ ವಿಚಾರ' ದಲ್ಲಿ ಹರಿಹರನು (ಕ್ರಿ. ಶ. ೧೧೪೫—೧೨೨೦) ಬಸವೇಶ್ವರನ ಕಿರಿಯ ಸಮಕಾಲೀನನೆಂದೂ, ರಾಘವಾಂಕನೂ (ಕ್ರಿ. ಶ. ೧೧೬೦-೧೨೨೦) ಬಸವೇಶ್ವರನು ಕಾಲವಾಗುವ ಮುಂಚೆಯೇ ಹುಟ್ಟಿದನೆಂದೂ ನಿರ್ಣಯಿಸಿದೆ.

(೧) ಬಿಜಾಪುರದ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಗುಡಿಹಾಳ ಮತ್ತು ಕುಂಟೋಜಿ ಗ್ರಾಮಗಳ ನಡುವಣ ಗಡಿಕಲ್ಲಿನಲ್ಲಿ ೨ 'ಇದು **ಬಸವರಾಜ ದೇವರ ಮಾನ್ಯ**' ಎಂದಿರುವಲ್ಲಿ ಬಸವರಾಜ ದೇವರೆಂದರೆ ಬಸವೇಶ್ವರನೇ ಹೊರತು ಅನ್ಯನಲ್ಲ ಎಂಬುದರಿಂದ, ಈ ಮಾನ್ಯವು ಅವನದೇ ಎಂದು ಕಂಡಿತವಾದರೂ, ಇದಕ್ಕೆ ತೇದಿ ಇಲ್ಲದುದರಿಂದ ಇದು ಅವನ ಐತಿಹಾಸಿಕತೆಗೆ ಸಾಲುವಂತೆ ಅವನ ಕಾಲ ನಿರ್ಣಯಕ್ಕೆ ಸಾಲದು.

(೨) ಧಾರವಾಡ ಜಿಲ್ಲೆಯ ಸೊರಟೂರಿನ ಮಲ್ಲೇಶ್ವರದೊಂದು ಸ್ತಂಭದಲ್ಲಿ ೩ ದುರ್ಮುಖಿ ಸಂ। ಆಶ್ವಯುಜ ಶುದ್ಧ ೧೦ ಮಂಗಳವಾರದಂದು ಹೆಂದಿಗನೂರಿನ ಮಹಾನಾಯಕಾಚಾರ್ಯ ಸಿದೇನಾಯಕನ ಕೆಳಗಣ ಗಬ್ಬಿನಾಯಕನೆಂಬವನು ಅದೋ ಬೇರೆಯದೊ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿ ಅದರಲ್ಲಿ ಬಸವೇಶ್ವರನ ಮೂರ್ತಿಯನ್ನು ಪ್ರತಿಷ್ಠಿಸಿದನೆಂದಿದೆ. ಈ ಶಾಸನಕ್ಕೆ ಹಿಂದಿನಿಂದಲೆ ಬಸವೇಶ್ವರನ ವಿಗ್ರಹ ಮಾಡಿ ಪೂಜಿಸುತ್ತಿದ್ದರೆಂದು ಇದರಿಂದ ತೀದರೂ ಇದರಲ್ಲಿ ಶಕಸಂಖ್ಯೆಯಾಗಲಿ ಆಗಣ ಆಳರಸನ ಹೆಸರಾಗಲಿ ಇಲ್ಲದುದರಿಂದ ಇದು ಎಷ್ಟರ ಹಿಂದಣದೆಂದು ನಿರ್ಧರಿಸಲಾಗುವುದಿಲ್ಲ.

(೩) ಬಸವ ಪುರಾಣದಿಂದ (೪. ೫೬; ೫೭; ೫೯; ೭೧) ಸಂಗಮೇಶ್ವರನ ಮಗನೆಂದು ತಿಳಿವ ಬಸವೇಶ್ವರನನ್ನು ಕುರಿತು ಶಾ. ಸ. ೧೧೫೪=ಕ್ರಿ. ಶ. ೧೨೩೨ನೆಯ ಚೌಡದಾನಪುರದ ಶಾಸನದಲ್ಲಿ ೪

(.) ನೆಗಳ್ದಬ್ರಿಜೆ ಬಿನ್ನಪಂ ಶಿವ ಜಗಕ್ಕೀ ಮಾರ್ಗಮಂ ತೋರಬೇ। ಕೆನಲಾಗ ಪ್ರಭು ನಂದಿನಾಥನೆ ಮೊಗಂ ನೋಡಲ್ಕೆ (.) ಸಂಗಮೇಶನ ಪುತ್ರಂ **ಬಸವಯ್ಯ** ಬಂದ

ನೆಂಬಲ್ಲಿ ಸಂಗಮೇಶನ ಪುತ್ರನೆಂಬ ಬಸವೇಶ್ವರನು ಈ ಶಾಸನ ಕಾಲದಲ್ಲಿ, ಅತಎವ ಇದಕ್ಕೆ ತಕ್ಕಷ್ಟು ಹಿಂದಿನಿಂದಲೆ ನಂದಿಯ ಅವತಾರವೆಂದು

೨ Annual Report o Indian Epigraphy (SIE) 1930, Appendix E, ಪು. 65, ನಂ. 14. 3. SIE, 1927 Supplement (Supp.) ಪು. 6. 77

೪ ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ XXIII ಬಹುಧಾನ್ಯ ಸಂ ), ಪು. ೨೬೬



ಭಾವಿಸಲ್ಪಡುತ್ತಿದ್ದನೆಂದು ವ್ಯಕ್ತವಿರುವುದರಿಂದ, ಅವನು ಇದರ ಕೆಲವಾದರೂ ದಶಕಗಳ ಹಿಂದೆ ಆಗಿ ಹೋಗಿರಬೇಕು.

(೪) ಕ್ರಿ. ಶ. ೧೨೮೦ನೆಯ ಮರಡೀಪುರದ ಶಾಸನದಲ್ಲಿ ೪—

ಸಿರಿಯಾಳ ದಾಸಮರ್ಯ ಓಹಿಲ ಉದ್ಭಟ ನಂಬಿ ಕುಂಬಾರ ಗುಂಡ
ಅಂಡವಲ ಕರಿಕಾಲ ಚೋಳ. ಭೋಗದೇವ ಬಾಣ ಮಯೂರ
ಕಾಳಿದಾಸ ಕೇಶಿರಾಜ ದಣ್ಣಾಯಕ ಸುರಿಗೆ ಚೆಲ್ವಡರಾಯ **ಸಂಗನ**
**ಬಸವಯ್ಯ** ಲಿನಿಮಿತಿ ಕೇಶವರಾಜ ಜಗದೇವ ದಣ್ಣಾಯಕ
ಏಕಾಂತದ ರಾಮಯ್ಯ ಸೊನ್ನಲಿಗೆ ರಾಮಯ್ಯ ಹುಲಿಗೆರೆಯ
ಪೊನ್ನಯ್ಯ ನೆಲುವಿಗೆಯ ಸಾಂತಯ್ಯ (ಬಂ. ೧೭),

(೫) ಶಾ. ಶ. ೧೨೦೧ ಪ್ರಮಾಥಿ ಸಂ। ಆಶ್ವಯುಜ ಶುದ್ಧ ಹುಣಿಮೆ ಸೋಮವಾರ, ಚಂದ್ರಗ್ರಹಣ, ಅಂದರೆ ಇಲ್ಲಿ ಹೇಳಿದ ತಿಂಗಳು ಸರಿಯಾದರೆ ಕ್ರಿ. ೧೨೭೯ ಸಪ್ತಂಬರ ೨೧ ಗುರುವಾರ ಚಂದ್ರಗ್ರಹಣದಂದಿನ, ಸೋಮವಾರ ಸರಿಯಾದರೆ ಕ್ರಿ. ಶ. ೧೨೮೦ ಸಪ್ತಂಬರ ೧೦ ಸೋಮವಾರ ಭಾದ್ರಪದ ಶುದ್ಧ ಹುಣ್ಣಿಮೆಯ ಚಂದ್ರಗ್ರಹಣದಂದಿನ, ದೇವಗಿರಿಯ ಯಾದವ ವಂಶದ ರಾಮಚಂದ್ರನ (೧೨೭೧-೧೩೦೯) ಕಾಲದ ಕಲ್ಲೇದೇವರ ಪುರದ ಕಲ್ಲೇಶ್ವರ ದೇವಸ್ಥಾನದಲ್ಲಿಯ ಜಗಳೂರು ೩೦ ನೆಯ ಶಾಸನದಲ್ಲಿ—೫

ಚೇರ ಚೋಳ ನಂಬಿ ನಂಬಿ ಚಿಕ್ಕ ಕಕ್ಕ ಚೆಂನ ಹೊಂನ
ಬಂಕ **ಬಸವರಾಜ** ಭೋಜಾದಿ ಮರ್ತ್ಯ ಲೋಕದ ಮಹಾಗಣಾ
ಚಾರ (ಬಂ. ೧೧-೧೨)

(೬) ಶಾ. ಶ. ೧೧೮೧ ಕಾಳಯುಕ್ತ ಸಂ। = ಕ್ರಿ. ಶ., ೧೨೫೯ ನೆಯ ಹೊಯ್ಸಳ ವೀರ ನಾರಸಿಂಹ ಅಂದರೆ *III* ನರಸಿಂಹನ ೧೨೫೪-೯೧) ಕಾಲದ ಹಿರಿಯೂರು ಕುಂಜೇಶ್ವರ ದೇವಾಲಯದಲ್ಲಿಯ ಅರಸಿಕೆರೆ ೧೦೯ ನೆಯ ಶಾಸನದಲ್ಲಿ-೬

೫ Epigraphia Carnatica (E C) XI.

೬: EC, V. 7. ಶಿವಾನುಭವ ಗ್ರಂಥಮಾಲೆ, ನಂ. ೧ (೧೯೨೬) ಬಸವೇಶ್ವರನ ವಚನಗಳು

ಸಿರಿಯೊಪ್ಪ(೪೦) ಬಸವಯ್ಯ ನೊಪ್ಪಿಸೆವ......ಮಂ ಬಾಣನುಂ
ಧರಭೋಗಂ ಸಲೆ ಚೋಳ ನುದ್ಭಟನತರ್ಕ್ಯಂ ಸಿಂದ ಬಲ್ಲಾಳನಿಂ।
ಧರೆಕೊಂಡಾಡುವ ದಾಸಿಮಯ್ಯ ನೆನಿಸಿರ್ದೀ ಭಕ್ತ ಸಂದೋಹ......
(ಬಂ. ೫-೭)

ಎಂದಿರುವಲ್ಲಿ ಹರಿಹರನ ಬಸವರಾಜ ದೇವರ ರಗಳೆಯ ಪುಟ. ಪುಟಗಳಿಂದ ಬಸವ, ಬಸವಣ್ಣ, ಬಸವಯ್ಯ, ಬಸವರಸ, ಬಸವರಾಜ, ಬಸವಿದೇವನೆಂದೂ ಸಂಗಮ ಬಸವನೆಂದೂ ತಿಳಿವ ಬಸವೇಶ್ವರನ ವಚನಗಳಲ್ಲಿ ಈ ಪರಮ ಶಿವ ಶರಣರೆಂದಿರುವ ಬಾಣ, ಮಯೂರ, ಕಾಳಿದಾಸ, ಸಿರಿಯಾಳ, ಚೋಳ, ದಾಸಿಮಯ್ಯ, ಸಿಂದು ಬಲ್ಲಾಳ, ನಂಬಿ, ಚಿಕ್ಕ, ಕಕ್ಕ, ಚನ್ನ, ಓಹಿಲರೊಂದಿಗೆ ಬಸವೇಶ್ವರನೂ ಅವರಿಗೆ ಓರಗೆಯ ಶಿವಭಕ್ತನೆಂದು ಅಗ್ಗ, ಅತಏವ ಅದಕ್ಕಿಂತ ತಕ್ಕಷ್ಟಾದರೂ ಹಿಂದಿನಿಂದಲೇ, ಗಣಿಸಲ್ಪಡುತ್ತಿದ್ದನೆಂದು ವ್ಯಕ್ತವಾಗುತ್ತದೆ,

(೮) ಇವೆಲ್ಲವಕ್ಕೂ ಮೇಲಾದ ಶಾ. ಶ. ೧೧೮೨ ನೆಯ ಸಿದ್ಧಾರ್ಥಿ ಸಂ। ಚೈತ್ರ ಬಹುಳ ಅಮಾವಾಸ್ಯೆ ಸೋಮವಾರ ಸೂರ್ಯ ಗ್ರಹಣ= ಕ್ರಿ. ಶ. ೧೨೬೦ ಎಪ್ರಿಲ ೧೨ ಸೊಮವಾರದ ಸೂರ್ಯಗ್ರಹಣದಂದಿನ ದೇವಗಿರಿಯ ಯಾದವ ಕನ್ನರ ದೇವನ (೧೨೪೯-೬೦) ಕಾಲದ ಅರ್ಜುನವಾಡದ ಶಿಲಾಲೇಖದಲ್ಲಾದರೊ ಆ ಶಾಸನೋಕ್ತ ದಾನದ ಪ್ರತಿಗ್ರಾಹಿಯಾದ ಹಾಲ ಬಸವಿದೇವನ ಪೀಳಿಗೆಯಲ್ಲಿ—

ಮಾದಿರಾಜ
|
ದೇವರಾಜ ಮುನಿಪ — ಸಂಗನಬಸವ
|
ಕಾ(?) ವರಸ
|
ಕಲಿ ದೇವರಸ
|
ಹಾಲ ಬಸವಿದೇವ

ಪು. ೨೨; ೪೫; ೪೬; ೪೮; ೪೯; ೫೦; ೬೧; ೬೨; ೬೬; ೭೧; ೭೪; ೮೬; ೯೪; ೯೯;೧೦೫; ೧೦೯; ೧೧೧) 8. Epigraphia Indica (E.I) XXI, ಪು12-14



ಹರಿಹರನ ಬಸವರಾಜ ದೇವರ ರಗಳೆಯಿಂದ ಬಸವರಾಜನೆಂದೂ ಸಂಗನ ಬಸವನೆಂದೂ ತಿಳಿವ ಬಸವೇಶ್ವರನ ತಂದೆಯಾದ ಮಾದಿರಾಜನನ್ನೂ ಹರಿಹರನ ರಗಳೆಯಲ್ಲಿ (ಪು. ೫) 'ಅಗ್ರಹಾರಂ ಬಾಗೆವಾಡಿಯೊಳಗೆಸೆದಿರ್ಪ ಅಗ್ರೇಶ್ವರಂ.........ಮಾದಿರಾಜ' ಎಂದಿರುವುದಕ್ಕೂ, ಬಸವ ಪುರಾಣದಲ್ಲಿ (೩. ೪೫-೪೬) 'ಇಂಗಳೇಶ್ವರ ಬಾಗೇವಾಡಿಯಲ್ಲಿ ಆ ಮಹಾ ಬಹುಳಾಗ್ರಹಾರ ಗ್ರಾಮಣೀಮಣಿ......ಮಾದಿರಾಜ' ಎಂದಿರುವುದಕ್ಕೂ ಸರಿಯಾಗಿ—'ತರ್ದವಾಡಿ ಮಧ್ಯಗ್ರಾಮ ಬಾಗವಾಡಿ ಪುರವರಾಧೀಶ್ವರ' (ಬಂ. ೮) ಅಂದರೆ ಬಾಗೆವಾಡಿಯ ಊರೊಡೆಯನೆಂದೂ, ಆವನ ತನೂಜನಾದ ಬಸವರಾಜನನ್ನು (ಬಂ. ೯-೧೦)

ಮಂಗಳ ಕೀರ್ತಿ ಪುರಾತನ
ಜಂಗಮ ಲಿಂಗೈಕ ಭಕ್ತಿ ನಿರ್ಭರ ಲೀಲಾ।
ಸಂಗಂ ಸಂಗನ ಬಸವಂ

ಎಂದೂ ಈ ಸಂಗನ ಬಸವನ ಅಗ್ರಜನಾದ ದೇವರಾಜ ಮುನಿಪನ (ಬಂ. ೪೧-೪೩) ಮರಿಮಗನಾದ ಹಾಲ ಬಸವಿದೇವನನ್ನು (ಬಂ. ೩೫-೩೬), 'ತ್ರೇಸಟ ಪುರಾತನ ಪಾದಾರ್ಚಕರುಂ ಮಹಾಲಿಂಗ ಜಂಗಮ ಪ್ರಸಾದನಿಯತರುಂ ಸಮ್ಯಭಕ್ತಿ ಸಂಪನ್ನ ಶ್ರೀ ಬಸವರಾಜನಾನ್ವಯರುಂ' ಎಂದೂ ಹೇಳಿರುವುದರಿಂದ, ಈ ಬಸವರಾಜನೂ ಸಂಗನ ಬಸವನೂ ಎಂಬವನು ಬಸವೇಶ್ವರನೇ, ಅತಏವ ಇದರಲ್ಲಿ ವಿಸ್ತರಿಸಿರುವ ಪೀಳಿಗೆಯೂ ಆತನದೇ ಎಂದು ಬೇರೇ ಹೇಳಬೇಕೆಂದಿಲ್ಲ.

ಈ ಶಾಸನದಲ್ಲಿ (ಬಂ. ೩೮-೩೯) ಹಾಲ ಬಸವಿದೇವನನ್ನು

.........................ಮಾನವ ದೇವಂ।
ಗೆಲಿದಂ ಅಶನ ಬೆಸನವಂ
ಛಲರಧಿಕಂ ಹಾಲ ಬಸವಿದೇವ ಮುನೀಶಂ॥

ಎಂದಿರುವಲ್ಲಿ ಅಶನ ಬೆಸನವನ್ನು ಗೆದ್ದಿರಲೂ ಮುನೀಶನೆಂದು ಕರೆಯಲ್ಪಡಲೂ ಬೇಕಾದರೆ ಆತನಿಗೆ ಆಗ್ಗೆ ೬೦ರಷ್ಟಾದರೂ ಪ್ರಾಯವೆಂದೂ; ಆತನು ತನ್ನ ತಂದೆಯ ಸು. ೨೫ನೆಯ ವಯಸ್ಸಿನಲ್ಲಿ ಹುಟ್ಟಿರಬಹುದೆಂದೂ ಭಾವಿಸಿ, ಆತನ ಹಿಂದಣ ಪ್ರತ್ಯೇಕ ತಲೆಮಾರಿಗೂ ಹಾಗೆಯೇ ೨೫ ವರ್ಷಗಳಂತೆ ಎಡೆಬಿಟ್ಟು ಗಣಿಸಿದರೆ, ಹಾಲ ಬಸವಿದೇವನು ಕ್ರಿ. ಶ. ಸು. ೧೨೦೦ ರಲ್ಲಿಯೂ, ಕಲಿದೇವನು ಸು. ೧೧೭೫ ರಲ್ಲಿಯೂ

ಕಾ (?) ವರಸನು ಸು. ೧೧೫೦ ರಲ್ಲಿಯೂ ದೇವರಾಜ ಮುನಿಪನು ತಮ್ಮ ನಾದ ಬಸವೇಶ್ವರನು ಕ್ರಿ. ಶ. ಸು. ೧೧೩೦ರ ಆಚೀಚೆ ಹುಟ್ಟಿ ೧೨೦೦ ರೊಳಗೆ ಗತಿಸಿರಬೇಕೆಂದು ಕಂಡಿತವಾಗಿ ನಿಶ್ಚಯಿಸಬಹುದು.

ಕನ್ನಡ ಸಾಹಿತ್ಯದಲ್ಲಿ ಬಸವೇಶ್ವರನ ಚರಿತಾತ್ಮಕವಾದ ವೀರಶೈವರ ಬಸವರಾಜದೇವ ರಗಳೆ, ಬಸವ ಪುರಾಣ, ಮಲಬಸವಚಾರಿತ್ರವೆಂಬ ಸಿಂಗರಾಜ ಪುರಾಣ ಹಾಗೂ ಜೈನ ಬಿಜ್ಜಳರಾಯ ಚರಿತೆ ಮೊದಲಾದ ಗ್ರಂಥಗಳಲ್ಲಿ ಅವನ ಕಥೆ ಓರಂತೆ ಇಲ್ಲದೆ ಅನೇಕ ಸಂಗತಿಗಳಲ್ಲಿ ವ್ಯತ್ಯಾಸವೂ ಪರಸ್ಪರ ವಿರೋಧವೂ ಇದೆ. ಯಾದರೂ ಅವನ ಸಮಸಾಮಯಿಕನಾದ ಹಾಗೂ ಅವನು ಓಲಗಿಸಿದ ಅರಸನ ಹೆಸರು ಬಿಜ್ಜಳನೆಂಬ ಮಟ್ಟಿಗೆ ಅವೆಲ್ಲವೂ ಒಮ್ಮತವಾಗಿವೆ. ಅದಲ್ಲದೆ ಬಸವೇಶ್ವರನ ವಚನಗಳಲ್ಲಿಯೇ ೯ ಪ್ರಾಸಂಗಿಕವಾಗಿ ದೊರೆವ

(೧) ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹೆನೆಂದು ನುಡಿವರಯ್ಯ!

(೨) ಬಿಜ್ಜಳನ ಭಂಡಾರ ಎನಗೇಕಯ್ಯ?

(೩) ಆನೀ ಬಿಜ್ಜಳಂಗಂಜುವೆನೆ ಅಯ್ಯ?

ಎಂಬೀ ಮಾತುಗಳಿಂದ ಗದ್ದುಗೆ ಎಂಬ ಸಂಕೇತದಿಂದ ರಾಜನೆಂದು ತಿಳಿವ ಬಿಜ್ಜಳನೆಂಬ ಅರಸನನ್ನು ಬಸವಣ್ಣನು ಓಲಗಿಸಿರಬೇಕೆಂದೂ, ಆ ಬಿಜ್ಜಳನನ್ನು ಭವಿ ಎಂದುದರಿಂದ ಅವನು ವೀರಶೈವನಲ್ಲವೆಂದೂ ಆತನ ಭಂಡಾರ ತನಗೇಕೆ? ಎಂದು ಉಪೇಕ್ಷಿಸಿರುವುದರಿಂದ ಬಸವೇಶ್ವರನು ಪ್ರಾಯಶಃ ಆತನ ಭಂಡಾರದ ಉದ್ಯೋಗದಲ್ಲಿದ್ದನೆಂದೂ, ತಾನು ಅವನಿಗೆ ಅಂಜುವೆನೆ? ತಿರಸ್ಕರಿಸುವುದರಿಂದ ಅವರೊಳಗೆ ಕೊನೆಗೆ ವೈಮನಸ್ಯ ಉಂಟಾಗಿರಬೇಕೆಂದೂ ವ್ಯಕ್ತವಾಗುವುದರಿಂದ, ಬಸವೇಶ್ವರನು ಓಲಗಿಸಿದ ಅರಸನ ಹೆಸರು ಬಿಜ್ಜಳನೆಂಬಲ್ಲಿ ಸಂದೇಹವಿಲ್ಲ.

ಬಸವೇಶ್ವರನು ಇದ್ದ ಕ್ರಿ. ಶ. ೧೧೩೦—೧೨೦೦ ರೊಳಗೆ ಬಿಜ್ಜಳ ಎಂಬ ಹೆಸರಿನ ಒಬ್ಬನಲ್ಲ-ಇಬ್ಬರರಸರು ಕರ್ನಾಟಕದಲ್ಲಿ ಆಗಿ ಹೋದರು. ಕಳಚುರ್ಯ ವಂಶದ ಬಿಜ್ಜಳ ಮತ್ತು ಅವನ ದೌಹಿತ್ರನಾದ (ಬಡಗಣ)

೯. ಪು. ೧೦೪; ೧೧೦; ೧೦೮.



ಸಿಂದ ವಂಶದ ಬಿಜ್ಜಳ, ಇವರಿಬ್ಬರೇ ಇದ್ದ ಬಿಜ್ಜಳರಲ್ಲಿ ಬಸವೇಶ್ವರನ ಬಿಜ್ಜಳನು ಯಾವಾತನೆಂದು ನಿಶ್ಚಯಿಸಬೇಕು. ಇವರನ್ನು ಕುರಿತು ಐತಿಹಾಸಿಕ ವಿವರವು ಹೀಗಿದೆ.

ಕಳಚುರ್ಯ
|
ಪೆರ್ಮಾಡಿ
|
ಬಿಜ್ಜಳ
|
ಸೋಮೇಶ್ವರ ಸಂಕಮ ಆಹವಮಲ್ಲ ಸಿಂಘಣ ವಜ್ರದೇವ ಸಿರಿಯಾದೇವಿ .... II ಚಾವುಂಡ
ಅಥವಾ
ರಾಯಮುರಾರಿ
ಸೋವಿದೇವ

ಸಿಂದ
(ಸಿಂದ ಬಿಜ್ಜಳ)

ಕ್ರಿ. ಶ. ೧೧೨೮ನೆಯ ಇಂಗಳೇಶ್ವರದ ಶಾಸನದಿಂದ ೧೦ ಕಳಚುರ್ಯ ವಂಶದ ಪೆರ್ಮಾಡಿ ಎಂಬುವನು ಕಲ್ಯಾಣದ ಪಡುವಣ ಚಾಳುಕ್ಯ ಸಮ್ರಾಜನಾದ ಭೂಲೋಕಮಲ್ಲ III ಸೋಮೇಶ್ವರನ (೧೧೨೬-೩೭) ಕೆಳಗೆ ತರ್ದವಾಡಿಯ ಮಹಾಮಂಡಳೇಶ್ವರನಾಗಿದ್ದನೆಂದೂ ಚಾಳುಕ್ಯ ತ್ರೈಲೋಕ್ಯಮಲ್ಲ (ನೂರ್ಮಡಿ) III ತೈಲನ ಆಳಿಕೆಯ (೧೧೪೯-೬೩) ೨ನೆಯ ವರ್ಷದ ಕ್ರಿ. ಶ. ೧೧೫೧ನೆಯ ಬಿಜಾಪುರದ ಶಾಸನದಿಂದ ೧೧ ಪೆರ್ಮಾಡಿಯ ಮಗನಾದ ಕಳಚುರ್ಯ ಬಿಜ್ಜಳನು III ತೈಲನ ಮಹಾಮಂಡಲೇಶ್ವರನಾಗಿದ್ದು ತರ್ದವಾಡಿ ೧೦೦೦ ಸೀಮೆ ಆತನ ಹಿಡುವಳಿಯಲ್ಲಿ ಇದ್ದಿತೆಂದೂ III ತೈಲನ ಆಳಿಕೆಯ ಶತಸಂಖ್ಯೆಯೂ ಸಂವತ್ಸರದ ಹೆಸರೂ ಸವೆದುಹೋಗಿ ಮಾರ್ಗಶಿರದಮಾವಾಸ್ಯೆ ಸೋಮವಾರ ಸೂರ್ಯಗ್ರಹಣ ಎಂದಷ್ಟೇ ಇರುವ, ಅಂದರೆ ಕ್ರಿ. ಶ. ೧೧೫೫ ನವಂಬರ ೨೬ ಮಾರ್ಗಶಿರ ಬಹುಳ ಅಮಾವಾಸ್ಯೆ ಶನಿವಾರದ ಸೂರ್ಯಗ್ರಹಣದಂದಿನ ಶಿಕಾರಿಪುರ ೧೦೮ನೆಯ ಶಾಸನದಿಂದಲೂ ೧೨ ಬಿಜ್ಜಳನು III ತೈಲನ

೧೦ Fleet's Kanarese Dynasties (FKD.) ಪು. ೪೭೦, ೧೧. ಅದೇ ಪು. ೪೭೨, ೧೨ E. C. VII ಕ್ರಿ. ಶ. ೧೧೦೫ ನವಂಬರ ೨೬ ಆಚೆ ೧೧೦ರ ವರೆಗೆ ಮಾರ್ಗಶಿರ ಬಹುಳ ಅಮಾವಾಸ್ಯೆಯಂದೂ ೧೧೩೭ರ ವರೆಗೆ ಕಾರ್ತಿಕ ಬಹುಳ

ಮಹಾಮಂಡಲೇಶ್ವರನಾಗಿದ್ದು ಬನವಾಸಿ ೧೨೦೦೦ ಸೀಮೆ ಆತನ ರಾಜ್ಯದಲ್ಲಿ ಇದ್ದಿತೆಂದೂ ತಿಳಿಯುವುದರಿಂದ, ತನ್ನ ತಂದೆಯಾದ ಪೆರ್ಮಾಡಿಯ ಬಳಿಕ ಬಿಜ್ಜಳನು ಕ್ರಿ. ಶ. ೧೧೪೦-೪೫ರಿಂದಲೇ ಚಾಳುಕ್ಯರ ಮಹಾಮಂಡಲೇಶ್ವರನಾಗಿರಬೇಕು. ಶಾ. ಶ. ೧೦೬೯ = ಕ್ರಿ. ಶ. ೧೧೪೭ರ ಮಾಸವಾಡದ ಶಿಲಾಲೇಖದಿಂದ ೧೩ ಬಿಜ್ಜಳನ ಸ್ಥಿರಶಿಬಿರ, ಅಂದರೆ ರಾಜಧಾನಿ, ಮಂಗಳವಾಡ ಎಂದು ತಿಳಿಯುತ್ತದೆ. III ತೈಲನ ಆಳಿಕೆಯ ೬ನೆ ವರ್ಷದ ಯುವ ಸಂ। ಮಾಘದಮಾವಾಸ್ಯೆಯುತ್ತರಾಯಣ ಸಂಕ್ರಾಂತಿ ಸೋಮವಾರ ಅಂದರೆ, ಕ್ರಿ. ಶ. ೧೧೫೫ ದಶಂಬರ ೨೬ ಸೋಮವಾರದ (= ಮಾಘ ಶುದ್ಧ ಪಾಡ್ಯ ಮಕರಸಂಕ್ರಾಂತಿ) ಅಥವಾ ೧೧೫೬ ಜನವರಿ ೨೩ ಸೋಮವಾರದ (= ಮಾಘ ಬಹುಳ ಅಮಾವಾಸ್ಯೆ ಕುಂಭ ಸಂಕ್ರಾಂತಿ) ಶಿಕಾರಿಪುರ ೧೦೪ನೆಯ ಶಾಸನದಲ್ಲಿ ೧೪ ಆತನ ಮಹಾಮಂಡಳೇಶ್ವರನಾದ ಬಿಜ್ಜಳನು 'ಸಕಳ ದೇಶಂಗಳಂ... ಆಳುತ್ತಮಿರೆ, (ಬಂ. ೧೧ ಎಂದಿರುವುದರಿಂದ ಆಗ್ಗೆ ಬಿಜ್ಜಳನು III ತೈಲನ ರಾಜ್ಯಭಾರದಲ್ಲಿ ಹೆಚ್ಚುಕಡಿಮೆ ಆತನ ಸರ್ವಾಧಿಕಾರಿಯಂತಿರಬೇಕು.

ಆ ಮೇಲೆ ಬಿಜ್ಜಳನು ಕಳಚುರ್ಯವರ್ಷವೆಂಬ ತನ್ನದೇ ಒಂದು ಕಾಲಮಾನವನ್ನು ಆರಂಭಿಸಿದನು. ಈಶ್ವರ ಸಂ। ಉತ್ತರಾಯಣ = ಕ್ರಿ. ಶ. ೧೧೫೭ ಡಿಶಂಬರದ ಅಣ್ಣಿಗೆರೆಯ ಶಾಸನದಲ್ಲಿ ೧೫ ಆ ಸಂವತ್ಸರವನ್ನು ಈ ಕಾಲಮಾನದ ೨ನೆಯ ವರ್ಷವೆಂದಿರುವುದರಿಂದ, ಇದು ಕ್ರಿ. ಶ. ೧೧೫೬ನೆಯ ಧಾತೃ ಸಂವತ್ಸರದಲ್ಲಿ ಮೊದಲಾಗಿರಬೇಕು. ಈ ಶಾಸನದಲ್ಲಿ ಬಿಜ್ಜಳನನ್ನು ತ್ರಿಭುವನಮಲ್ಲ ಎಂದೂ ಭುಜಬಲ ಚಕ್ರವರ್ತಿ ಎಂದೂ ಅದರೊಂದಿಗೆ ಮಹಾಮಂಡಳೇಶ್ವರನೆಂದೂ ಹೇಳಿದೆ.

---

ಅಮಾವಾಸ್ಯೆಯುಂದೂ ಸೂರ್ಯಗ್ರಹಣವಿದ್ದಿಲ್ಲ; ಅದರ ಈಚೆ ೧೧೫೪ ನವಂಬರ ೨೯ನೇ ಸೋಮವಾರ ಕಾರ್ತಿಕ ಬಹುಳ ಅಮಾವಾಸ್ಯೆಯುಂದೂ ೧೧೭೪ ನವಂಬರ ೨೫ ಸೋಮವಾರ ಮಾರ್ಗಶಿರ ಬಹುಳ ಅಮಾವಾಸ್ಯೆಯುಂದೂ ಸೂರ್ಯಗ್ರಹಣಗಳಿದ್ದರೂ ಈ ವರ್ಷಗಳು III ತೈಲನ ಆಳಿಕೆಯನ್ನು ಮೀರುವುದರಿಂದ ಕಲ್ಲಿ ಸಲ್ಲವು. ೧೩ ಹರಿಹರದೇವ. ಪು. ೪೪. ೧೪ EC VII. ೧೫ FKD. ಪು. ೪೭.

(ಮುಂದುವರಿವುದು.)



ಮನದೊಳಗೆ ಕಣ್ಣೊಳಗೆ ತೀವಿ ನೆಲಸಿದ ಗುರುವೆ
ಕರ್ಮವಂ ಕೆಡಿಸಿದ ಸದ್ಧರ್ಮಿ ನೀನೆಲೆ ಗುರುವೆ
ನಿರ್ಮಳ ಜ್ಞಾನದೊಳ್ ನೆಲಿಸಿದುತ್ತಮ ಗುರುವೆ
ಭವಭವಂಗಳ ಬಳಲ್ಕೆಯನಾರಿಸಿದ ಗುರುವೆ
ನವನವ ಪ್ರೇಮದಿಂದೊಳಕೊಂಡ ಘನ ಗುರುವೆ
ವರಗುರುವೆ ಸದ್ಗುರುವೆ ಸತ್ಯ ಸಂಪದ್ಗುರುವೆ
ಹರಿಬೊಮ್ಮರಾದ್ಯಂತವರಿಯದ ಮಹಾ ಗುರುವೆ

ಎಂದು ಸವಿನುಡಿಗಳಿಂ ಹೊಗಳುತ್ತೆ ಹೊಂಗುತ್ತೆ
ಮಂದೈಸಿ ಪಲ್ಲೈಸಿ ಪುಳಕದಿಂ ಪೊಣ್ಮುತ್ತೆ
ಬಾಲಚೂತದ ನೆಳಲ ಪುಳಿನ ಸ್ಥಳದೊಳಂದು
ಬೋಳೈಸಿ ಕರೆದು ತಣಿಯದೆ ನೆನೆಯುತುಂ ಬಂದು
ಮಳಲಿಂದೆ ಶಿವಲಿಂಗಮಂ ಸಿಂಗರಂ ಮಾಡಿ
ಇಳಿವಶ್ರುಜಲದಿಂದೆ ಹಾರೈಸುತುಂ ನೋಡಿ
ಮುಂಡಾಡಿ ಮೋಹಿಸುತೆ ಮುದ್ದಿಸುತೆ ಬಿಗಿದಪ್ಪಿ
ಕೊಂಡಾಡಿ ಕೊನರುತ್ತೆ ಕೊರ್ಬುತ್ತೆ ಕವಿದಪ್ಪಿ
ಕುಣಿಯುತ್ತೆ ಕಕ್ಕೈಯಕ್ಕೈಗಳ ಪೂವಂ ತಂದು
ತಣಿವಿಲ್ಲದರ್ಚಿಸುತೆ ನಡೆ ನೋಡುತುಂ ನಿಂದು
ಪೂಜಿಸುತೆ ಪೂಜಿಸುತೆ ಕಣ್ಮುಚ್ಚಿ ಕರಗುತುಂ
ಸೋಜಿಗದ ನೇಹದಿಂ ನೆರೆ ಮುಟ್ಟಿ ಮರುಗುತುಂ।
ಎಳ್ದೆಳ್ದು ಕುಳ್ಳಿರ್ದು ಕುಣಿಕುಣಿದು ನೋಡುತುಂ
ಬಿಳ್ದು ಭರವಿಡಿದು ಸುಖಜಲದೊಳಗೆ ಮೂಡುತುಂ
ಕೈಯೆತ್ತಿ ಕೂಗಿಟ್ಟು ಕರೆಕರೆದು ಹಿಗ್ಗುತುಂ
ಮೈಯಿಕ್ಕಿ ಮುಡುಹಿಕ್ಕಿ ಕಡು ಹಿಗ್ಗಿ ಹೆಚ್ಚುತುಂ
ಶಶಿಧರಾ ಶಂಕರಾ ಬರ್ದುಕಿದೆಂ ಬರ್ದುಕಿದೆಂ
ಪಶುಪತಿಯೆ ಪುರಹರನೆ ಬರ್ದುಕಿದೆಂ ಬರ್ದುಕಿದೆಂ
ತರುಗಿರಿ ವನಂಗಳಿರ ಕಂಡಿರೇ ಪುಣ್ಯಮಂ
ಹರನೆನ್ನ ಕಯ್ಯೊಳರ್ಚಿಸಿಕೊಳ್ವ ಗಣ್ಯಮಂ
ಗಿಳಿಹಂಸೆ ಕೋಕಿಳಮೆ ನೋಡಿರೇ ಸಂಪದವ
ನಳಿಕುಳಂಗಳಿರ ಕಂಡಿರೇ ಎನ್ನ ಸಂಪದವ

ಸಾಹಾ ಮಹೇಶ್ವರಾ ಆಹಾ ಮದೀಶ್ವರಾ
ಆಹಾ ಕೃಪಾವಾರಿನಿಧಿ ಶಂಭು ಶಂಕರಾ

ಎಂದು ಪಶುಪತಿಗಿಂತು ಹಲುಬಿ ಸುಖಮಂ ನೆನೆದು
ಬಂದು ಕೊಳಲೂದಿ ಕರೆದು ಗೋಕುಲಮನಂದು
ಕರೆಯೆ ಮೇವಂ ಮರೆದು ಭೋಂಕನಾಲಿಸಿ ಕೇಳ್ದು
ನೊರೆವಾಯ್ಗಳಲರ್ದ ಕಿವಿ ನಟ್ಟ ದಿಟ್ಟಿಯ ತಾಳ್ದು
ಬಾಲಮಂ ಮೇಲ್ಕೆತ್ತಿಕೊಂಡು ಭೋಂಕನೆ ಬರಲ್
ಹಾಲಕಾಯ್ಗಳಿರ ಬನ್ನಿರೆ ಎಂದೆನುತ್ತಿರಲ್
ತಂಡತಂಡದಿ ಬಂದು ನಿಂದಲ್ಲಿ ಸೇರುತ್ತೆ
ಚಂಡಪಿಳ್ಳೆಯ ಮೆಯ್ಯನಳ್ಕರಿಂ ನಕ್ಕುತ್ತೆ
ಹೂಂಕರಿಸುತೆಡೆಗಲಿಸಿಕೊಂಡು ಶಿವಲಿಂಗಮಂ
ಲೋಕಕ್ಕೆ ಪೊಸತಿದೆಂಬಂತೆ ಸರ್ವಾಂಗಮಂ
ಸಡಲಿಸುತ್ತಂ ಕರೆದವಲ್ಲಿ ಲಿಂಗದ ಮೇಲೆ
ಮೃಡಭಕ್ತಿರಸಧಾರೆ ಎಂಬಂದದಿಂ ಮೇಲೆ
ಕಂಡೀಶ್ವರನ ಮುಂದೆ ಮೂಡಿರ್ದ ಲಿಂಗಕ್ಕೆ
ತಂಡದಿಂ ಸುರಭಿವಿಂಡೆಯ್ತಂದು ನೇಹಕ್ಕೆ
ಧರ್ಮಾರ್ಥಕಾಮಮೋಕ್ಷಂಗಳಂ ಕರೆವಂತೆ
ನಿರ್ಮಳದ ನಾಲ್ಕು ಮೊಲೆ ತೊರೆದು ಕರೆವುತ್ತಿಂತೆ
ಬಾಲಚಂದ್ರಂ ಮುಳುಗಿ ತೇಂಕಾಡುತಿರೆ ಕರೆದು
ನೀಲಗಳಮಲ್ಲಿ ಮಧುರತೆಯಾಗುತಿರೆ ಕರೆದು
ಶಿವಲಿಂಗಮಂ ಪುಣ್ಯ ಓಲೈಸೆ ಬಂದಂತೆ
ಶಿವನ ಜೂಟದ ಶಶಿಯು ಬೆಳ್ದಿಂಗಳಳಿವಂತೆ
ಕರೆಗೊರಲ ಮೃಡನು ನೆರೆ ಗೋನಿಕರ ಪಾಲ್ಗೊಂಡು
ಅರಕೆವಟ್ಟಾನಂದಮಯನಂತದಂ ಕಂಡು
ಗೋವುಗಳನೊರ್ಮೆ ಶಿವಲಿಂಗಮುಮನೊರ್ಮೊರ್ಮೆ
ಭಾವಿಸುತ್ತಪ್ಪಿಕೊಳುತಾರುತ್ತ ಪೊರ್ಮೊರ್ಮೆ
ಗುಡಿಗಟ್ಟಿ ಕುಣಿವುತುಂ ಮುಡುಗಟ್ಟಿ ಕರಗುತುಂ
ಗಡಿಗೆಟ್ಟ ಪುಳಕಂಗಳಿಂಡೆ ಪುದಿದೇಳುತುಂ



ಇಂತು ಶಿವಲಿಂಗಪೂಜಾರತಿಯೊಳಾಡುತುಂ
ಸಂತತಂ ಶಿವಭಕ್ತಿರಸದೊಳೋಲಾಡುತುಂ

ಇರಲಸ್ತಮಯವಾಗೆ ಗೋನಿಕರಮಂ ಕೊಂಡು
ಚರಿತದಿಂದಂ ಬಂದು ಪುರದತ್ತ ನಡೆಗೊಂಡು
ಬಂದವರವರ ಮನೆಗೆ ಪಶುಗಳಂ ಕಳಿಪುತ್ತೆ
ನಿಂದು ಮೆಲ್ಲನೆ ಮನೆಯ ಪುಗುತಂದು ಬಾಳುತ್ತೆ
ಈ ತೆರದೊಳುಂ ಪಲವು ದಿವಸಂಗಳಾಗುತಿರೆ
ಈ ತೆರದೊಳವರವರ ಮನೆಯ ಪಶು ಕರೆಯದಿರೆ
ಜೀವದನದೊಡೆಯರೆಲ್ಲಂ ಮನೆಗೆ ನಡೆತಂದು

ಓವೊ ಅಚ್ಚುತಭಟ್ಟರೇ ಪರಿ ಇದೇನೆಂದು
ಕರೆಯರೊಂದಿನಿಸಿಲ್ಲ ಪಾಲ ಮಾತಿನ್ನೇಕೆ
ಅರಿದಾಯ್ತು ಚಂಡಪಿಳ್ಳೆಯ ಕಾಹು ತಾನೇಕೆ
ಯೊಂದೆರಡು ದಿನಮದಕ್ಕೇನೆಂದೆನುತ್ತಿರಲ್
ಸಂದಿಸುತ್ತಿಂತು ಪಾಲ್ಬಚ್ಚೆಯಾಗುತ್ತಿರಲ್
ಮರುಗದುರೆ ಮಾಣ್ಬವೆಮ್ಮಕ್ಕಳ್ಗೆ ಯರೆದಿಲ್ಲ ಯರೆದಿಲ್ಲ
ಕರುವಿಂಗೆ ಮೊದಲಾಗಿಯೊಂದು ಹನಿ ಹಾಲಿಲ್ಲ
ಪಶುವೆಮಗೆ ಪಾಲ್ನಿಮಗಿದೇನೆಂಬ ಪರಿಯಯ್ಯ
ಪೊಸತೆಮಗೆ ಚಂಡಪಿಳ್ಳೆಯ ಕಾಹು ಬೇಡಯ್ಯ

ಎನೆ ಕೇಳ್ದು ಪುತ್ರನಂ ಕರೆದು ಪಿಡಿವಿಡಿಗೊಂಡು
ನಿನಗಿದೇಂ ಮಗನೆ ನಾವೆಂತಕ್ಕೆ ಕೂರ್ಗಂಡು
ಬರ್ದುಕಿದೆವೆನುತ್ತಿರಲಿದೇನನುದ್ಯೋಗಿಸಿದೆ
ಮುದದಿಂದೆ ಪೇಳಯ್ಯ ಪಶುವನೆಂತಾಡಿಸಿದೆ
ಹುಲ್ಲುಂಟು ನೀರುಂಟು ಹಾಲಿಲ್ಲದೇಂ ಮಗನೆ
ಎಲ್ಲಿರ್ದೆ ಎಲ್ಲಿ ಕಾವುತ್ತಿರ್ದೆ ಪೇಳ್ಮಗನೆ
ಎಂದೊಡೀ ಭವಿಗಳ್ಗೆ ಪೇಳಲೇಕೆಂಬಂತೆ
ಇಂದುಧರಪೂಜೆಯಂ ಬೀರೆ ನಾನೆಂಬಂತೆ
ಪಶುವಾರು ನೀವಾರಿದೇಕೆಂದು ಮುನಿವಂತೆ
ಪಶುಪತಿಯನರಿಯದವರೇನರಿವರೆಂಬಂತೆ

ಭಕ್ತಿಯಭಿಮಾನಿ ಪೂಜಾಮೌನಿ ಸುಮ್ಮನಿರೆ
ಯುಕ್ತಿಗೆಟ್ಟವರೆಲ್ಲ ಪೊಲ್ಲಂತೆ ನುಡಿವುತಿರೆ
ಅಂದು ಅದ್ಭುತಭಟ್ಟರೆಲ್ಲರ್ಗೆ ಕೈಮುಗಿದು
ಇಂದು ನಿಮ್ಮಯ ಮೇಲೆ ತಪ್ಪಿಲ್ಲೆನುತ್ತಗಿದು
ಕೇಳಿರೇ ನೀವಿಂದುವೆನ್ನ ಮಾತಂ ಸಲಿಸಿ
ನಾಳೆ ಕರೆಯದೊಡೆ ಬಳಿಕಿವನ ಕಾಹಂ ಬಿಡಿಸಿ
ಎಂದವರ್ಗಳಂ ಕಳುಪಿ ಚಿಂತೆಯಂ ಪಟ್ಟಿರಲ್
ಕಂದನಂ ನುಡಿಯಲಾರದೆ ಮೂಗುವಟ್ಟಿರಲ್

ಬೆಳಗಾದುದೀಶಂ ಪ್ರಸನ್ನನೆಂದೆಂಬಂತೆ
ಬೆಳಗಾಯ್ತು ಚಂಡಪಿಳ್ಳೆಗೆ ಶುಭೋದಯದಂತೆ
ಆಗಳೆಳ್ದೆಂದಿನಂದದೆ ಪಶುಗಳಂ ಕೂಡಿ
ಪೋಗಲೆಂದಿರ್ದ ಮಗನಂ ಹರುಷದಿಂ ನೋಡಿ
ಏನೆಂದೊಡಂ ನುಡಿಯೆ ಸುಮ್ಮನಿರ್ದಪೆ ಮಗನೆ
ನೀನೇವೆ ಎಮ್ಮ ವಿಧಿ ಮಾಡುತ್ತಲಿರೆ ಮಗನೆ
ಎಲೆ ಮಗನೆ ಸುಯಿಧಾನದಿಂದೆ ಕಾವುದು ಕಂದ
ಎಲೆ ಎಮ್ಮ ಬಾಯಕುಟುಕಂ ಕಳೆಯದಿರ್ ಕಂದ
ಎಂದಾತನಂ ಕಳುಪಿ ಕಾಣದಂದದಿ ಪಿಂದೆ
ಹಿಂದುಗೊಂಡೊಯ್ಯನೊಯ್ಯನೆ ಪೋಗುತವ ಮುಂದೆ
ಒಂದು ಮರನೇರಿ ನೋಡುವೆನಿವಂ ಮಾಳ್ಪುದಂ
ಅಂದಂದು ಪಾಲ್ಬಚ್ಚಿಯಾಗಿ ಬರಿದಪ್ಪುದಂ
ಎಂದೆನುತೊಂದು ಮರದೊಳಗವಿತುಕೊಂಡಿರಲ್
ಬಂದನೆಂದಿನ ತೆರದೆ ಗೋವುಗಳ್ಬರುತಿರಲ್

ಹೊಡೆದನೈ ಹುಲ್ಲುಳ್ಳ ಹೊಲದೊಳಗೆ ಪಶುಗಳಂ
ನಡೆದನೈ ಪೂಜಿಸುವ ಠಾವಿಂಗೆ ನಿಶ್ಚಳಂ
ಪಾಡುತುಂ ಪೊಗಳುತುಂ ಮಳಲಲ್ಲಿ ಲಿಂಗವಂ
ಮಾಡುತುಂ ಮನಮುಬ್ಬುತುಂ ಭಕ್ತಪುಂಗವಂ
ಸಿಂಗರಿಸಿ ಕಾಡಪೂಗಳನೈದೆ ತಿರಿತಂದು
ಹಿಂಗದೊಲವಿಂ ಪೂಜೆಯಂ ಮಾಡಿ ನಡೆತಂದು
ಎನ್ನ ಶಶಿಮೌಳಿಯಭಿಷೇಕದರಸಿಯರಿರಾ



ಎನ್ನ ಶಂಕರನ ಪಂಚಾಮೃತಪ್ರಿಯರಿರಾ
ಅಮೃತರಸಪೂರ್ಣಸ್ತನಾಧಿಕನಿಧಿಗಳಿರಾ
ಅಮೃತಕರಧರವಾಹನಪ್ರಿಯಾವಳಿಗಳಿರಾ
ಬನ್ನಿರೇ ಎಂದು ಕರೆವಾ ಕೊಳಲದನಿವಿಡಿದು
ಮುನ್ನವೇ ಮೊಗವೆತ್ತಿಕೊಂಡು ಸಂದಣಿವಡೆದು
ಭೋರೆಂದು ಬರೆ ಕಾಣುತೊಂದೊಂದನುಂ ಕರೆಯೆ
ಧಾರಯಿಸಿ ಶಿವಲಿಂಗದ ಮೇಲೆ ನೆರೆ ಕರೆಯೆ
ಕರೆಯ ನೊರೆ ಶೀವೃತ್ತಿ ಹಾಲಹಳ್ಳಂ ಹರಿಯೆ
ನೆರೆ ಮನದ ಭಕ್ತಂಗೆ ಸುಖರಸಂಗಳ್ಸುರಿಯೆ

ಇತ್ತಲಾ ಮರದಿಂದಲಿಳಿದನಾ ಪಾತಕಂ
ಚಿತ್ತದೊಳ್ಭಕ್ತಿವೇಧಿಸದಾತ್ಮಘಾತಕಂ
ಈ ಪರಿಯಲೇ ಮಾಳ್ಪೆ ಲೇಸು ಲೇಸೆಲೆ ಮಗನೆ
ಈ ಪರಿಯಲೆನ್ನ ಗಂಟಲನರಿವರೇ ಮಗನೆ
ಎನುತೆನುತೆ ಶಿವಶಿವನೆ ಹರಹರ ಮಹಾದೇವ
ಮನದೊಳೆಳ್ಳನಿತು ಭಕ್ತಿಯು ಇರದ ದುರ್ಭಾವ
ನೆಯ್ತಂದು ಶಿವಲಿಂಗವಂ ಮುಟ್ಟುತಿರೆ ಕಂಡು

ಸಯ್ತಿರದೆ ಚಂಡೇಶನುರಿದೆಳ್ದು ಕೋಲ್ಗೊಂಡು
ಎತ್ತಿದೊಡೆ ಪಿಡಿದಿರ್ದ ಕೋಲ್ಗೊಡಲಿಯಂತಿರಲ್
ಚಿತ್ತದೊಳ್ಮೆಚ್ಚಿ ಕರಿವದನನಿತ್ತಂತಿರಲ್
ಕೆಡೆಕೆಡೆ ಶಿವದ್ರೋಹಿ ಲಿಂಗವಂ ಮುಟ್ಟುವರೆ
ಫಡ ಕುನ್ನಿ ಭವಿನಾಯಿಯೊಡೆಯನಂ ಮುಟ್ಟುವರೆ
ಎನುತೆ ಹೊಡೆದಂ ಹೊಡೆದನಮ್ಮಮ್ಮ ಚಂಡೇಶ
ಮನವಾರಲಿತ್ತಲವತರಿಸುತ್ತ ಸರ್ವೇಶ
ನಾಗಲಿರದೆಯ್ತಂದು ಮೈನೊಂದುದೇ ತಂದೆ
ಪೂಗೆ ಮೃದುತರವಪ್ಪ ತನುಗುಂದಿತೇ ತಂದೆ
ಪಾಪಕರ್ಮಂ ಮುಟ್ಟಿದಂ ಮುಟ್ಟಿದನೆ ದೇವ

ತಾಪತ್ರಯದ ಮರುಳ್ಕೈಮುಟ್ಟಿದನೆ ದೇವ
ಎಂದಲ್ಲಿ ಮೆಲ್ಲಮೆಲ್ಲನೆ ಮುಟ್ಟಿ ನೋಡುತಿರೆ
ಇಂದುಶೇಖರನೆ ನೊಂದ್ಯೆ ತಂದೆ ಯೆನುತಮಿರೆ
ಇತ್ತಲೇರ್ವಡೆದ ಪಾರ್ವಂ ಮೆಲ್ಲನೆಚ್ಚತ್ತು
ಒತ್ತರಿಸಿದೇರಿಂದವೆಂತಕ್ಕೆ ಎಚ್ಚತ್ತು
ಕಂದಯ್ಯ ನೀನೆನ್ನನಿರಿವರೇ ಎನುತುಮಿರೆ
ನೊಂದು ಬಾಯಾರಿ ತಣ್ಣೀರ್ತಣಿ ಎನ್ನುತ್ತುಮಿರೆ
ಶಿವಶಿವ ಶಿವದ್ರೋಹಿ ಇನ್ನುಮಿರ್ದಪನೆನುತೆ
ಭವಿಪಾಪಿ ಪಾಪಿ ಪಾತಕ ಬೀಳು ಬೀಳೆನುತೆ
ತಲೆತೊಟ್ಟನುಡಿದುರುಳೆ ಹೊಯ್ದನಾ ತಂದೆಯಂ
ನಲನರಿಯೆ ಪರಿಹರಿಸಿ ಕಳೆದನಾ ತಂದೆಯಂ

ಹೊಯ್ದು ತಿರುಗಲ್ಕೆ ಪೊರಮಟ್ಟನಾ ಲಿಂಗದೊಳ್
ಅಯ್ದು ಮುಖವೀರೈದು ಭುಜವೆಸೆಯೆ ಲಿಂಗದೊಳ್
ಕೆಯ್ಯ ತಲೆ ಮೆಯ್ಯ ತಲೆ ಕಾಲಕಣ್ಣಿಂದೊಪ್ಪೆ
ಅಯ್ಯಯ್ಯ ನಿಂದಂ ವಿರೂಪಾಕ್ಷನಿಂತೊಪ್ಪೆ
ಇರಲು ಹೂಮಳೆ ಯೆರಗಿ ಸುರಿದುವಾ ಹೊಲದೊಳಗೆ
ತರತರದಿ ತನತನಗೆ ದುಂದುಭಿಕುಳಂ ಮೊಳಗೆ
ಕಹಳೆಗಳ್ಬೆರೆಯೆ ಶಂಖದ ನಾದಮುಣ್ಮುತಿರೆ
ಬಹು ವಿಧದ ರೂಪಿಂದೆ ಗಣಸಮಿತಿ ನೆರೆವುತಿರೆ
ನೋಡಯ್ಯ ನಂದೀಶ ನೋಡೇಕನಿಷ್ಠನಂ
ನೋಡುವಡೆ ಹರಿ ವಿರಿಂಚಿಗಳಿಂದ ಶ್ರೇಷ್ಠನಂ
ಕಡು ನಿಷ್ಠೆಯಿಂ ಹೊಲದೊಳಿಂತರ್ಚಿಸಿದರುಂಟೆ
ಪೊಡವಿಯೊಳ್ತಂದೆಯಂ ಕೊಂದು ತೋರ್ದವರುಂಟೆ
ಎನ್ನ ಭಕ್ತರ್ಗೆ ತಾಯ್ತಂದೆಗಳ್ಬೇರುಂಟೆ
ಎನ್ನ ಭಕ್ತರ್ಗೆ ಗತಿಮತಿಯಾಸೆ ಬೇರುಂಟೆ
ಎನಗೆ ಬಂಧುಂ ಬಳಗವೆನ್ನ ಭಕ್ತರ್ನೋಡ
ಎನಗೆ ಸತಿಯುಂ ಸುತರುಮೆನ್ನ ಭಕ್ತರ್ನೋಡ



ಎಂದು ನಂದೀಶಂಗೆ ಪೇಳುತುಂ ಹಿಗ್ಗುತುಂ
ಬಂದ ಗಣ ವೃಂದಕ್ಕೆ ತೋರುತುಂ ತೊಳಗುತುಂ
ಆನೆ ನಿನಗೆ ತಾಯಿ ತಂದೆ ಚಂಡೇಶ ಕೇಳೆಂದು
ಆನುಂಡ ಶೇಷ ಪ್ರಸಾದವದು ನಿನಗೆಂದು
ಚಂಡೇಶಪಿಳ್ಳೆಯುಗೋರ್ಲ್ಪು ಬೀಳುಡೆ ಇತ್ತು
ಕೊಂಡಾಡಿ ಮುಂಡಾಡಿ ಬಾಯತಂಬುಲವಿತ್ತು
ನಿನ್ನ ನೀಕ್ಷಿಸಿದವರ್ಗಿನ್ನೊಂದು ಭಯವುಂಟೆ
ನಿನ್ನ ಕೈಮುಟ್ಟಿದಂಗಿನ್ನೊಂದು ಸಾವುಂಟೆ
ಎತ್ತವನನೆತ್ತೆಂದು ಕರುಣದಿಂದೆತ್ತಿಸುತೆ
ಚಿತ್ತಜಹರಂ ಕೃಪಾದೃಷ್ಟಿಯಿಂದೀಕ್ಷಿಸುತೆ
ಆಡಿದ ಹೊಲಂಬೆರಸಿ ನೆಗೆದನಾಕಾಶಕ್ಕೆ
ನೋಡಿದ ಮೃಗಂಬೆರಸಿ ನೆಗೆದನಾಕಾಶಕ್ಕೆ
ಕರೆದ ಹಸುಗಳ್ವೆರಸಿ ನೆಗೆದನಾಕಾಶಕ್ಕೆ
ಕರೆ ಗೊರಲನಿರಲೊಲವಿಂದೆ ಕೈಲಾಸಕ್ಕೆ
ಬಂದು ಚಂಡೇಶಂಗೆ ಗಣಪದವಿಯಂ ಕೊಟ್ಟು
ನಿಂದ ಗಣಸಂತತಿಯ ನಡುವೆ ನೇಹಂಬಟ್ಟು
ಕೈಲಾಸದೊಳಗೆಲ್ಲ ಗುಡಿಗಳಂ ಕಟ್ಟಿಸುತೆ
ಶೈಲಜೆಗೆ ತೋರುತುಂ ಮೋಹದಿಂ ಮುದ್ದಿಸುತೆ
ತಾರಾದ್ರಿಯರಮನೆಯೊಳಪ್ರತಿಮನೊಪ್ಪಿದಂ
ಮಾರಮದಮಥನನಾನಂದಮಯನೊಪ್ಪಿದಂ
ಹರಿವಿರಿಂಚಾದ್ಯಮರಮಕುಟಪದನೊಪ್ಪಿದಂ
ಶರಣಜನಹೃದಯಸರಸಿಜಭಾನುವೊಪ್ಪಿದಂ
ಭಕ್ತಸಂತಾನಜಲನಿಧಿಚಂದ್ರನೊಪ್ಪಿದಂ
ಭಕ್ತಕುಲಕಲ್ಪಕುಜವನಚೈತ್ರನೊಪ್ಪಿದಂ
ಭಾಳಾಕ್ಷನೊಪ್ಪಿದಂ ಭೂತೇಶನೊಪ್ಪಿದಂ
ಶೂಲಧರನೊಪ್ಪಿದಂ ಶಶಿಮೌಳಿಯೊಪ್ಪಿದಂ
ಶಿವನೊಪ್ಪಿದಂ ಸದಾಶಿವ ಶಂಭುವೊಪ್ಪಿದಂ
ಭವನೊಪ್ಪಿದಂ ಭರ್ಗನೊಪ್ಪಿರ್ದನೊಪ್ಪಿದಂ
ಎನ್ನ ನಿಧಿ ಎನ್ನ ಸುಧೆ ಎನ್ನ ಗುರುವೊಪ್ಪಿದಂ

ಎನ್ನ ರಸ ಹಂಪೆಯ ವಿರೂಪಾಕ್ಷನೊಪ್ಪಿದಂ ॥

ಕಂದ॥ ಈಶಂ ಪಿತನೆಂದರಿದು ನಿ ।
ಜೇಶನ ಬೆಸನಿಂದೆ ತನ್ನ ಪಿತನನರಿದ ಚಂ ॥
ದೇಶನ ಸುತನೆಂದೆನಗೆ ಮ ।
ಹೇಶಂ ಕರುಣಿಸುಗೆ ಹಂಪೆಯ ವಿರೂಪಾಕ್ಷಂ ॥

---

# ವಚನಶಾಸ್ತ್ರಸಾರ ಭಾಗ ೨.

## ( ವೀರಶೈವ ಸಿದ್ಧಾಂತ. )

ರಾ॥ ಸಾ॥ ಫ. ಗು. ಹಳಕಟ್ಟಿಯವರು ರಚಿಸಿದ ಈ ಹೊಸ ಗ್ರಂಥದಲ್ಲಿ ವೀರಶೈವ ಶಿವಶರಣರ ಷಟ್‌ಸ್ಥಲ ಸಿದ್ಧಾಂತದ ತತ್ವಗಳು ಸವಿಸ್ತಾರವಾಗಿ ವಚನಗಳ ಮೂಲಕವೇ ನಿರೂಪಿಸಲ್ಪಟ್ಟಿರುತ್ತವೆ.

ಇದರಲ್ಲಿ ಸ್ಥಲ ವಿಭೇದಗಳು, ಏಕೋತ್ತರಶತಸ್ಥಲದ ವಿವೇಚನೆಗಳು, ಕರಣಹಸಿಗೆ, ಸಕೀಲಗಳು, ೩೬ ತತ್ವಗಳು, ಷಡಧ್ವಗಳು, ಸಾದಾಖ್ಯಗಳು ಮೊದಲಾದ ಮಹತ್ವದ ವಿಷಯಗಳು ವಚನಗಳ ಮೂಲಕ ಸವಿಸ್ತಾರವಾಗಿ ವಿವೇಚಿಸಲ್ಪಟ್ಟಿವೆ. ವೀರಶೈವ ಮತತತ್ವಗಳನ್ನು ತಿಳಿಯಲು ಇದು ಅತ್ಯಂತ ಸಹಾಯಕಾರಿಯಾದ ಗ್ರಂಥವಾಗಿದೆ.

ಪುಟಗಳ ಸಂಖ್ಯೆ ೬೨. **ಬೆಲೆ ರೂ. ೪—೮—೦**

ಪುಸ್ತಕ ದೊರೆಯುವ ಸ್ಥಳ:—

**ಹಿತಚಿಂತಕ ಪ್ರಿಂಟಿಂಗ ಪ್ರೆಸ್**
**ವಿಜಾಪುರ.**

ಇದನ್ನು ವಿಜಾಪುರದಲ್ಲಿ ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ಉಪಲೀಬುರುಜ ಓಣಿಯಲ್ಲಿರುವ ತಮ್ಮ ೧೬೨೦ (ಅ) ಮನೆಯಲ್ಲಿ ಪ್ರಸಿದ್ಧಿಸಿದರು.

R. N. B. 2554

ಶ್ರೀ

# ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೪ ] ಡಿಶೆಂಬರ ೧೯೩೯. [ ಸಂಚಿಕೆ ೩

## ವಿಷಯಾನುಕ್ರಮಣಿಕೆ.


| ವಿಷಯಗಳು. | ಲೇಖಕರು. | ಪುಟ. |
| --- | --- | --- |
| ೧ ಶಿವಶರಣರ ಸ್ಥಾನಗಳು | ರಾ. ಸಾ ಫ. ಗು. ಹಳಕಟ್ಟಿ | ೧೦೫-೧೧೦ |
| ೨ ಕೊಡಗು ದೇಶದ ನಿಜವಾದ ಇತಿಹಾಸವು | ಶ್ರೀ. ಸದಾಶಿವಪ್ಪ ಹಂಚಿ ಎಂ. ಎ. | ೧೧೧-೧೧೮ |
| ೩ ಶ್ರೀ ಬಸವೇಶ್ವರನ ಕಾಲ ನಿರ್ಣಯ | ಶ್ರೀಮಾನ್ ಗೋವಿಂದ ಪೈ ಮಂಜೇಶ್ವರ | ೧೧೯-೧೨೮ |
| ೪ ತೆಲಗು ಬಸವಪುರಾಣದ ಮುನ್ನುಡಿ | ಶ್ರೀ. ಎಸ್. ಹಂಪಯ್ಯ ಗುಳೂರು. | ೧೨೯-೧೩೬ |
| ೫ ಬಸವರಾಜದೇವ. | ಶ್ರೀ. ಎಸ್ ಎಸ್. ಮಾಳವಾಡ ಧಾರವಾಡ. | ೧೩೭-೧೪೫ |
| ೬ ವಚನಶಾಸ್ತ್ರಸಾರ ಭಾಗ ೨. | — — | ೧೪೬-೧೫೨ |
| ೭ ಸಂಕೀರ್ಣ ವಚನಗಳು | — — — | ೧-೯ |
| ೮ ಹರಿಹರನ ರಗಳೆ ಭಾಗ ೭ | — | ೫೫-೬೮ |

# ಶಿವಾನುಭವ.

ವರ್ಷ ೧೪] ಡಿಸಂಬರ ೧೯೩೯ [ಸಂಚಿಕೆ ೩

## ಶಿವಶರಣರ ಸ್ಥಾನಗಳು.

(ರಾ॥ ಸಾ॥ ಫ. ಗು. ಹಳಕಟ್ಟಿ ಬಿ. ಎ. ಎಲ್ ಎಲ್. ಬಿ. ವಿಜಾಪುರ)

[ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು.]

ಹಿಂದಿನ ಸಂಚಿಕೆಯಲ್ಲಿ ನಾವು ಶಿವಶರಣರ ಸ್ಥಾನಗಳನ್ನು ಕುರಿತು ವಿವೇಚಿಸಿದ್ದೇವೆ. ಅವುಗಳು ತರ್ದೆವಾಡಿಯಲ್ಲಷ್ಟೇ ಅಲ್ಲ, ಇದರ ಪೂರ್ವಕ್ಕಿರುವ ನಿಜಾಮನ ರಾಜ್ಯದಲ್ಲಿಯೂ ಕೂಡ ಹೆಚ್ಚಾಗಿ ದೊರೆಯುತ್ತವೆಂಬುದನ್ನು ನಾವು ಈ ಲೇಖದಲ್ಲಿ ವಿವರಿಸಲೆಣಿಸಿದ್ದೇವೆ. ಇವು ಮುಖ್ಯವಾಗಿ ವಿಜಾಪುರ ಜಿಲ್ಲೆಯ ಪೂರ್ವ ಮೇರೆಯಿಂದ ೩೦-೪೦ ಮೈಲು ಅಂತರದ ಮೇಲೆ ಹೆಚ್ಚಾಗಿ ಇದ್ದುದು ಕಂಡುಬರುತ್ತಿದೆ. ಆ ಸ್ಥಳಗಳು ಯಾವವೆಂದರೆ —

ಅರಳಗುಂಡಿಗಿ:— ಈ ಗ್ರಾಮವು ಸಿಂದಗಿ ತಾಲೂಕಿನ ಮುಖ್ಯ ಸ್ಥಳವಾದ ಸಿಂದಗಿ ಗ್ರಾಮದಿಂದ ೧೬ ಮೈಲುಗಳ ಮೇಲೆ ಪೂರ್ವದ ಕಡೆಗೆ ಇರುತ್ತಿದೆ. ಇದು ಶಿವಶರಣನಾದ ಕೇತಯ್ಯನ ಸ್ಥಾನವಾಗಿರುತ್ತದೆ.

ಮೂರಡಿಗೆ:— ಈ ಗ್ರಾಮವು ಅರಳಗುಂಡಿಗೆಯಿಂದ ಪೂರ್ವಕ್ಕೆ ೨೫ ಮೈಲುಗಳ ಮೇಲೆ ಇರುತ್ತದೆ. ಇದು ಮೂರುಡಿಗೆಯ ನಾಚಯ್ಯನೆಂದು ಪುರಾತನ ಕಾಲದಲ್ಲಿ ಬಹು ಪ್ರಸಿದ್ಧಿಗೆ ಬಂದ ಶಿವಶರಣನ ಸ್ಥಾನವಿರುತ್ತದೆ. ಈತನ ವಿಷಯವಾಗಿ ಹರಿಹರನು ಒಂದು ರಗಳೆಯನ್ನು ರಚಿಸಿರುತ್ತಾನೆ.

ಮುದನೂರಃ— ಈ ಗ್ರಾಮವು ಸಿಂದಗಿ ತಾಲೂಕಿನ ಮೇರೆಯಿಂದ ಪೂರ್ವಕ್ಕೆ ೪ ಮೈಲು ಮತ್ತು ಸಿಂದಗಿ ಗ್ರಾಮದಿಂದ ೩೦ ಮೈಲು ದೂರವಿರುತ್ತದೆ. ೧೧ ನೇ ಶತಮಾನದಲ್ಲಿ ರಾಜ್ಯವಾಳಿದ ಚಾಲುಕ್ಯ ರಾಜನಾದ ಜಯಸಿಂಹನ ಆಸ್ಥಾನದಲ್ಲಿ ಜೈನರೊಡನೆ ವಾದವಿವಾದ ಮಾಡಿ ವೀರಶೈವ ಮತವನ್ನು ಪ್ರಸಾರ ಗೊಳಿಸಿದ ದೇವರ ದಾಸಿಮಯ್ಯನ ಸ್ಥಾನವು ಇದಾಗಿರುತ್ತದೆ. ಏಕೋರಾಮಾರಾಧ್ಯನು ಇದ್ದೇ ಪಟ್ಟಣದವನೆಂದು ಆತನ ಪುರಾಣದಿಂದ ತಿಳಿದು ಬರುತ್ತದೆ. ಈತನು ಈ ಭಾಗದಲ್ಲಿ ಶಿವಭಕ್ತಿಯನ್ನು ನೆಲೆಗೊಳಿಸಿದ್ದರ ವಿವರಣೆಯು ಇದರಲ್ಲಿ ಇದೆ.

ಕೆಂಭಾವಿಃ— ಈ ಗ್ರಾಮವು ಮುದನೂರಿನ ಈಶಾನ್ಯಕ್ಕೆ ೪ ಮೈಲು ಮಾತ್ರ ದೂರವಿದೆ. ಕೆಂಭಾವಿ ಭೋಗಣ್ಣನೆಂಬ ಶಿವಶರಣನು ಇಲ್ಲಿ ಪ್ರಸಿದ್ಧಿಗೆ ಬಂದನು. ಆತನ ವಿಷಯವಾಗಿ ಹರಿಹರ ಕವಿಯು ಒಂದು ರಗಳೆಯನ್ನು ರಚಿಸಿದ್ದಾನೆ.

ಅಗ್ನಿಃ— ಈ ಗ್ರಾಮವು ಮುದನೂರಿನ ನೈಋತ್ಯಕ್ಕೆ ೪ ಮೈಲು ದೂರ ಇರುತ್ತದೆ. ಇಲ್ಲಿ ಅಗ್ಗಣಿಯ ಹೊನ್ನಯ್ಯನೆಂಬ ಶಿವಶರಣನು ವಾಸವಾಗಿದ್ದನು.

ಕೋಳೂರು:— ಈ ಗ್ರಾಮವು ಮುದನೂರಿನಿಂದ ಪೂರ್ವಕ್ಕೆ ೨೫ ಮೈಲು ದೂರ ಇರುತ್ತದೆ. ಮತ್ತು ಸುರಪುರದಿಂದ ಈಶಾನ್ಯಕ್ಕೆ ೧೫ ಮೈಲುಗಳ ಮೇಲೆ ಇದೆ. ಇದು ಕೋಳೂರು ಕೊಡಗೂಸು ಎಂದು ಹೆಸರು ಪಡೆದ ಬಾಲಕಿಯ ಸ್ಥಾನವಿರುತ್ತದೆ. ಹರಿಹರನು ಇವಳ ಚರಿತ್ರೆಯನ್ನು ತನ್ನ ರಗಳೆಯಲ್ಲಿ ಬಣ್ಣಿಸಿರುತ್ತಾನೆ.

ನವಲಿಃ— ಇದು ಮುದ್ದೇಬಿಹಾಳ ತಾಲೂಕಿನ ಸೀಮೆಗೆ ಹೊಂದಿಯೇ ಇದೆ. ನಾಲತವಾಡ ಈ ಗ್ರಾಮದಿಂದ ೬ ಮೈಲುಗಳ ಮೇಲೆ ಕೃಷ್ಣಾ ನದಿಯ ತಟಾಕದಲ್ಲಿ ಇರುತ್ತದೆ. ಇಲ್ಲಿ ಜಯಸಿಂಹನ ಕಾಲದಲ್ಲಿ ಪ್ರಸಿದ್ಧಿಗೆ ಬಂದ ಶಂಕರದಾಸಿಮಯ್ಯನು ವಾಸವಾಗಿದ್ದನು. ಈತನು ದೇವರ ದಾಸಿಮಯ್ಯನ ಸಮಕಾಲೀನನು.

ಮರಟಃ— ನವಲಿಯಿಂದ ಪೂರ್ವಕ್ಕೆ ಸುಮಾರು ೫೦ ಮೈಲುಗಳ ಮೇಲೆ ಈ ಗ್ರಾಮವಿದ್ದು ಇಲ್ಲಿ ಮರಟದ ಬಂಕಯ್ಯನೆಂದು ಪ್ರಸಿದ್ಧಿಗೆ ಬಂದ ಶಿವಶರಣನು ವಾಸವಾಗಿದ್ದನು. ಈ ಗ್ರಾಮವು ಈಗ ಲಿಂಗ



ಸೂರ ತಾಲೂಕಿಗೆ ಸೇರಿದ್ದಿರುತ್ತದೆ. ಲಿಂಗಸೂರಿಂದ ಇದು ೩೦ ಮೈಲು ಮಾತ್ರ ದೂರವಿರುತ್ತದೆ.

ಏಲೇರಿಃ— ಈ ಗ್ರಾಮವು ಏಲೇಶಕೇತಯ್ಯನೆಂದು ಪ್ರಸಿದ್ಧಿಗೆ ಬಂದ ಶಿವಶರಣನ ಸ್ಥಾನವಿರುತ್ತದೆ. ಇದು ಯಾದಗಿರಿಯ ಆಗ್ನೇಯಕ್ಕೆ ೧೨ ಮೈಲುಗಳ ಮೇಲೆ ಇರುತ್ತದೆ.

ಗೊಬ್ಬೂರಃ— ಈ ಗ್ರಾಮವು ಸಿಂದಗಿ ತಾಲೂಕಿನ ಈಶಾನ್ಯಮೂಲೆಯಲ್ಲಿದ್ದ ದೇವಣಗಾವ ಎಂಬ ಗ್ರಾಮದಿಂದ ಪೂರ್ವಕ್ಕೆ ೨೦ಮೈಲು ದೂರವಿರುತ್ತದೆ. ಮತ್ತು ಕಲಬುರ್ಗಿಯ ಪಶ್ಚಿಮಕ್ಕೆ ೧೨ ಮೈಲ ದೂರವಿರುತ್ತದೆ. ಇದು ಬಿಬ್ಬಿ ಬಾಚಯ್ಯನ ಸ್ಥಳವಿರುತ್ತದೆ. ದೇವರದಾಸಿಮಯ್ಯನ ಹೆಂಡತಿಯಾದ ದುಗ್ಗಳೆಯ ಜನ್ಮಸ್ಥಳವಾದರೂ ಇದೇ ಇರುತ್ತಿದೆ.

ಆಲ್ದಿಃ— ಈ ಗ್ರಾಮವು ಈಗಿನ ಅಕ್ಕಲಕೋಟ ಪಟ್ಟಣದ ಪೂರ್ವಕ್ಕೆ ೨೫ ಮೈಲುಗಳಮೇಲೆ ಇರುತ್ತದೆ. ಇಲ್ಲಿಯೇ ಏಕಾಂತದ ರಾಮಯ್ಯನು ಜನಿಸಿದನು. ಮುಂದೆ ಅವನು ಧಾರವಾಡ ಜಿಲ್ಲೆಯಲ್ಲಿರುವ ಅಬ್ಬಲೂರಿಗೆ ಹೋಗಿ ವೀರಶೈವ ಮತವನ್ನು ಆ ಭಾಗದಲ್ಲಿ ವಿಸ್ತರಿಸಿದನು. ಶಿಲಾಲೇಖದಲ್ಲಿ ಈ ಗ್ರಾಮಕ್ಕೆ ಆಲಂದೆ ಎಂದು ಹೆಸರು ಇದೆ.

ಮೋಳಗಿಃ— ಈ ಗ್ರಾಮವು ಕಲ್ಯಾಣದಿಂದ ಅನತಿ ದೂರದಲ್ಲಿದೆ. ಇಲ್ಲಿ ಕಾಶ್ಮೀರ ದೇಶದಿಂದ ಬಂದ ಮೋಳಗೆ ಮಾರಯ್ಯನು ವಾಸವಾಗಿದ್ದನೆಂದು ಜನರಲ್ಲಿ ಪ್ರತೀತಿ ಇದೆ.

ಮುಸುಡಿ:— ಇದಾದರೂ ಕಲಬುರ್ಗಿ ಜಿಲ್ಲೆಯಲ್ಲಿದ್ದು ಮುಸುಡಿಯ ಚೌಡಯ್ಯನೆಂಬ ಶಿವಶರಣನು ಇಲ್ಲಿ ಪ್ರಸಿದ್ಧಿಗೆ ಬಂದನು.

ನೀರೂರ:— ನಿಂಬೆವ್ವನೆಂಬ ಶಿವಶರಣೆಯು ಈ ಗ್ರಾಮದಲ್ಲಿ ವಾಸವಾಗಿದ್ದಳು.

ರಟಗಲ್ಲುಃ— ಇದು ರೇವಣಸಿದ್ಧೇಶ್ವರನ ಸ್ಥಾನವೆಂದು ಪ್ರತೀತಿ ಇದೆ. ಇದಾದರೂ ಕಲಬುರ್ಗಿ ಜಿಲ್ಲೆಯಲ್ಲಿರುತ್ತದೆ.

ಈ ಪ್ರಕಾರ ಶಿವಶರಣರ ಸ್ಥಾನಗಳು ನಿಜಾಮನ ರಾಜ್ಯದಲ್ಲಿರುವುದು ಕಂಡು ಬರುತ್ತಿದೆ. ಮೇಲ್ಕಂಡ ವಿವರಣೆಯಿಂದ ಇವುಗಳಲ್ಲಿ ಬಹುತರ ಎಲ್ಲ ಗ್ರಾಮಗಳು ವಿಜಾಪುರ ಜಿಲ್ಲೆಯ ಮೇರೆಗೆ ಹೊಂದಿಯೇ

ಇರುತ್ತವೆಂದು ವಾಚಕರಿಗೆ ಕಂಡುಬರದೆ ಇರಲಾರದು ಈ ಮೇರೆಯ
ಪೂರ್ವಕ್ಕೆ ೨೦-೩೦ ಮೈಲು ಮತ್ತು ಪಶ್ಚಿಮಕ್ಕೆ ೫೦-೬೦ ಮೈಲಿನವರೆಗೆ
ಇದ್ದ ಭೂಪ್ರದೇಶದಲ್ಲಿ ಬಸವೇಶ್ವರನಕಾಲಕ್ಕೆ ಬಹುಜನ ಶಿವಶರಣರು
ಉದ್ಭವಿಸಿದರೆಂದು ಕಂಡುಬರುತ್ತದೆ. ಆದರೆ ಈಪ್ರದೇಶದ ಹೊರಗೆ ಅಂದರೆ
ಅದರ ದಕ್ಷಿಣಕ್ಕಿರುವ ಯಲಬುರ್ಗಿ ನಾಡು, ಅದರ ಪೂರ್ವಕ್ಕಿರುವ ರಾಯ
ಚೂರ ಬೀದರ ಜಿಲ್ಲೆಗಳು ಮತ್ತು ಉತ್ತರಕ್ಕೆ ಉಸ್ಮಾನಾಬಾದ ಜಿಲ್ಲೆ.
ಈ ಭಾಗಗಳಲ್ಲಿ ಶಿವಶರಣರು ಹೆಚ್ಚಾಗಿ ಉದಯವಾದದ್ದು ಕಂಡು ಬರು
ವದಿಲ್ಲ. ಇಲ್ಲವೆಂದರೂ ಸಲ್ಲುವದು. ಈ ಎಲ್ಲ ಶಿವಶರಣರ ವೃತ್ತಾಂತಗ
ಳನ್ನು ನಾವು ಪರೀಕ್ಷಿಸಿದಲ್ಲಿ ಈಗಿನ ವಿಜಾಪುರ ಜಿಲ್ಲೆಯ ಉತ್ತರಭಾಗ,
ಸೊಲ್ಲಾಪುರ ಮತ್ತು ಸುರಪುರ ಈ ತಾಲೂಕುಗಳಲ್ಲಿ ೧೨ ನೇ ಶತಮಾನ
ದಲ್ಲಿ ಒಂದು ಅತ್ಯಂತ ಪ್ರಖರವಾದ ಧಾರ್ಮಿಕ ಚಳವಳಿಯು ಉತ್ಪನ್ನವಾ
ಯಿತೆಂಬ ಅನುಮಾನವು ಉಂಟಾಗುತ್ತದೆ. ಹೀಗಿಲ್ಲದಿದ್ದರೆ ಇಷ್ಟುಜನ ಶಿವ
ಶರಣರು ಇಲ್ಲಿ ಉತ್ಪನ್ನವಾಗುತ್ತಿದ್ದಿಲ್ಲ. ೧೧ ನೇ ಶತಮಾನದಲ್ಲಿ ಪ್ರಕಾ
ಶಕ್ಕೆ ಬಂದ ದೇವರದಾಸಿಮಯ್ಯ ಮತ್ತು ಶಂಕರದಾಸಿಮಯ್ಯ ಇವರ
ಸ್ಥಾನಗಳೂ ರೇವಣಸಿದ್ಧೇಶ್ವರನು ಅನೇಕ ಮಹತ್ಕಾರ್ಯಗಳನ್ನು ಮಾಡಿದ
ಪಟ್ಟಣಗಳೂ ಅವನ ನಾನಾ ಸ್ಥಾನಗಳೂ ಇವರ ತರುವಾಯ ಉದ್ಭವಿಸಿದ
ಬಸವೇಶ್ವರ ಮಡಿವಾಳ ಮಾಚಿದೇವ ಮೊದಲಾದವರ ಜನ್ಮಸ್ಥಳಗಳೂ
ಈ ಭಾಗದಲ್ಲಿಯೇ ಇರುತ್ತವೆ. ದೇವರದಾಸಿಮಯ್ಯ ಶಂಕರದಾಸಿಮ
ಯ್ಯಗಳು ಚಾಲುಕ್ಯ ಜಯಸಿಂಹನ ಕಾಲದಲ್ಲಿ ಮೊದಲು ಪ್ರಸಿದ್ಧಿಗೆ
ಬಂದು ಶಿವಮತವನ್ನು ಉದ್ಧರಿಸಿದರು. ಮುಂದೆ ಕೆಲಕಾಲವಾದ ಬಳಿಕ
ಮಂಗಳವಾಡದಲ್ಲಿ ಬಿಜ್ಜಳನ ತಂದೆಯಾದ ಪೆರ್ಮಾಡಿಯೂ ಅವನ ತರು
ವಾಯ ಬಿಜ್ಜಳನೂ ಚಾಲುಕ್ಯರಾಜರಿಗೆ ಮಾಂಡಲಿಕರಾಗಿ ರಾಜ್ಯಗೆ
ಯ್ಯುತ್ತಿದ್ದಾಗ್ಗೆ ಒಂದು ದೊಡ್ಡ ಧಾರ್ಮಿಕ ಚಳವಳಿಯು ಈ ಭಾಗದಲ್ಲಿ
ಉದ್ಭವಿಸಿತು. ಅದರ ಪ್ರಭಾವದಿಂದಲೇ ಅಸಂಖ್ಯ ಶಿವಶರಣರು ಇಲ್ಲಿ
ಉತ್ಪನ್ನರಾದರು. ಮುಂದೆ ಬಿಜ್ಜಳನು ಚಾಲುಕ್ಯರಾಜನನ್ನು ಪಟ್ಟದಿಂದ
ತಳ್ಳಿ ಕಲ್ಯಾಣದಲ್ಲಿ ನೆಲಸಿದಬಳಿಕ ಬಸವನು ಅವನಲ್ಲಿ ಶ್ರೇಷ್ಠಾಧಿಕಾರ
ದಲ್ಲಿ ಆರೂಢನಾಗಲು ತರ್ದೇವಾಡಿ ನಾಡಿನಲ್ಲಿದ್ದ ಅವನ ಜತೆಗಾರರೆ
ಲ್ಲರೂ ಅವನೊಡನೆ ಮಿಲಿತರಾಗಿ ವೀರಶೈವ ಧರ್ಮವನ್ನು ಎಲ್ಲಕಡೆಗೂ
ವಿಸ್ತರಿಸಿದರೆಂದು ಹೇಳಲಿಕ್ಕೆ ಯಾವ ಪ್ರತ್ಯವಾಯವೂ ಕಂಡುಬರುವದಿಲ್ಲ.
ಈ ಸಂಗತಿಗಳ ಮೇಲಿಂದ ಬಸವನು ಕಲ್ಯಾಣಕ್ಕೆ ಬರುವ ಪೂರ್ವದಲ್ಲಿಯೇ



ವೀರಶೈವ ಧರ್ಮವು ಈ ನಾಡಿನಲ್ಲಿ ನೆಲ್ಲಗೆ ನೆಲೆಗೊಳ್ಳಹತ್ತಿತ್ತೆಂದು
ತೋರುತ್ತದೆ. ಆದ್ದರಿಂದಲೇ ಬಸವನು ತನ್ನ ಮೊದಲಿನ ಮಾರ್ಗವನ್ನು
ತ್ಯಜಿಸಿ ವೀರಶೈವ ದೀಕ್ಷೆಯನ್ನು ತಳೆದು ಅದನ್ನು ಪ್ರಸಾರ ಮಾಡಲು
ಮುಂದೆ ಆನುವಾದನು. ಒಂದುವೇಳೆ ಬಸವನು ಕಲ್ಯಾಣಪಟ್ಟಣದಲ್ಲಿ
ಆರೂಢನಾದ ಬಳಿಕ ಅವನು ಮೊದಲು ವೀರಶೈವ ಧರ್ಮವನ್ನು ನೆಲೆಗೊ
ಳಿಸಿದ್ದರೆ ಆ ಪಟ್ಟಣದ ಪೂರ್ವೋತ್ತರ ದಕ್ಷಿಣ ಭಾಗಗಳಲ್ಲಿ ಶಿವಶರಣರ
ಸ್ಥಾನಗಳು ನಿಬಿಡವಾಗಿ ಹಬ್ಬಿರಬೇಕಾಗಿತ್ತು. ಆದರೆ ಹಾಗೆ ಇದ್ದದ್ದು
ಕಂಡು ಬರುವದಿಲ್ಲ. ಇದರಿಂದ ಈ ಭಾಗಗಳಲ್ಲಿ ವೀರಶೈವ ಚಳವ
ಳಿಯು ಮೊದಲು ಉತ್ಪನ್ನವಾಗಲಿಲ್ಲೆಂಬ ಅನುಮಾನವು ಉಂಟಾಗುತ್ತದೆ.

ಆದರೆ ಈಚೆಗೆ ಕೆಲವರು ಬಸವೇಶ್ವರನು ಯಲಬುರ್ಗಿಯ ಸಿಂದರಾಜರ
ವಂಶದಲ್ಲಿ ಜನಸಿದ ಒಬ್ಬ ಬಿಜ್ಜಳನ ಆಸ್ಥಾನದಲ್ಲಿದ್ದು ವೀರಶೈವ ಧರ್ಮ
ವನ್ನು ವಿಸ್ತರಿಸಿದನೆಂದು ಅಭಿಪ್ರಾಯ ಪಡುತ್ತಾರೆ. ಈ ಯಲಬುರ್ಗಿಯು
ಗದಗ ಹೊಸಪೇಟ ರೇಲ್ವೆಯ ಉತ್ತರಕ್ಕೆ ಎಳೆಂಟು ಮೈಲುಗಳ ಮೇಲೆ
ಇದ್ದು ಇಲ್ಲಿಯ ಈ ಮಾಂಡಲಿಕರ ಆಳಿಕೆಯು ಈಗಿನ ಬಳ್ಳಾರಿ
ಮತ್ತು ಚಿತ್ರಕಲ್‌ದುರ್ಗ ಜಿಲ್ಲೆಗಳಲ್ಲಿ ಮತ್ತು ಬದಾಮಿ, ರೋಣ ಈ
ತಾಲೂಕಗಳು ಇದ್ದ ಭಾಗಗಳಲ್ಲಿ ಹೆಚ್ಚಾಗಿ ಪಸರಿಸಿತ್ತು. ಆದರೆ ಈ
ಪ್ರದೇಶಗಳಲ್ಲಿ ಬಳ್ಳಾರಿಯ ಬಳ್ಳೇಶಮಲ್ಲಯ್ಯ, ಮರುಳಸಿದ್ಧ ಇವರಿಬ್ಬರ
ಹೊರತು ಯಾವ ಶಿವಶರಣರೂ ಉದ್ಭವಿಸಿದ್ದು ಅಥವಾ ವಾಸ ಮಾಡಿದ್ದು
ಕಂಡು ಬರುವದಿಲ್ಲ. ಈ ಉಭಯತರೂ ಕೂಡ ಶಿವಾನುಭವ ಮಂಟಪ
ದಲ್ಲಿ ಇದ್ದಿದ್ದಿಲ್ಲ. ಆದರೆ ಬಸವೇಶ್ವರನ ಕಾಲದಲ್ಲಿ ಅನೇಕ ಮಹತ್ಕೃತ್ಯ
ಗಳನ್ನು ಮಾಡಿದವರೂ ಶಿವಾನುಭವ ಮಂಟಪದಲ್ಲಿದ್ದವರೂ ತರ್ದೇ
ವಾಡಿ ನಾಡಿನಲ್ಲಿ ಜನಿಸಿದವರೇ ಇದ್ದು ಅವರು ಬಹ ತರವಾಗಿ ಮುಂದೆ
ಕಲ್ಯಾಣಕ್ಕೆ ಬಸವೇಶ್ವರನಲ್ಲಿಗೆ ಹೋದರೆಂದು ಅವರ ಎಲ್ಲ ಚರಿತ್ರೆಗಳೂ
ಹೇಳುತ್ತವೆ. ಆದರೆ ಅವರು ಯಲಬುರ್ಗಿ ಸಿಂದರಾಜನಲ್ಲಿಗೆ ಹೋದ
ರೆಂಬ ಉಲ್ಲೇಖಗಳು ಎಲ್ಲಿಯೂ ದೊರೆಯುವದಿಲ್ಲ. ಆದದರಿಂದ ಬಸವೇ
ಶ್ವರನು ಯಲಬುರ್ಗಿಯ ಬಿಜ್ಜಳನಲ್ಲಿರದೆ ಕಲಚೂರ್ಯ ಬಿಜ್ಜಳನಲ್ಲಿಯೇ
ಇದ್ದನೆಂಬ ಅನುಮಾನದಲ್ಲಿ ಹೆಚ್ಚಿಗೆ ತಥ್ಯಾಂಶವು ತೋರುತ್ತದೆ.

ಧಾರವಾಡ ಜಿಲ್ಲೆಯಲ್ಲಿ ಪುಲಿಗೆರೆ, ಅಬ್ಬಲೂರ ಈ ಕಡೆಗೆ ಪುರಾ
ತನ ಶಿವಶರಣರ ಹೆಸರುಗಳು ಉಪಲಬ್ಧವಾಗುತ್ತವೆ. ಆದರೆ ಅವರು

ಅಲ್ಲಿಗೆ ಹೊರಗಿನಿಂದ ಬಂದವರಿದ್ದು ತರ್ದೇವಾಡಿ ನಾಡಿನಲ್ಲಿ ಕ್ರಾಂತಿ
ಯುದ್ಭವಿಸಿದ ಬಳಿಕ ಅದರ ಪ್ರಭಾವದ ಮೂಲಕ ಧಾರವಾಡ, ಬೆ
ಗಾವಿ ಜಿಲ್ಲೆಗಳಲ್ಲಿ ಸಹ ವೀರಶೈವ ಧರ್ಮವು ಒಡಮೂಡಿರಲಿಕ್ಕೆಬೇಕು.
ಹೇಗೆ ತರ್ದೇವಾಡಿ ನಾಡಿನಲ್ಲಿ ಚಳವಳಿಯು ಉತ್ಪನ್ನವಾಯಿತೋ ಹಾಗೆಯೇ
ಬನವಸೆ ನಾಡಿನಲ್ಲಿಯೂ ವೀರಶೈವ ಧರ್ಮದ ಜಾಗ್ರತಿಯು ಉದ್ಭವಿಸಿದ
ಹಾಗೆ ತೋರುತ್ತದೆ. ಇವರಿಂದ ಅಲ್ಲಿಯೂ ಅನೇಕ ಶಿವಶರಣರು
ಉತ್ಪನ್ನರಾಗಿ ಧರ್ಮ ಪ್ರಸಾರದ ಕಾರ್ಯವನ್ನು ಕೈಕೊಂಡಿದ್ದು ಕಂಡು
ಬರುತ್ತವೆ.

ಶಿವಶರಣರ ಸ್ಥಾನಗಳನ್ನು ನಾವು ಸೂಕ್ಷ್ಮ ದೃಷ್ಟಿಯಿಂದ ನಿರೀ
ಕ್ಷಿಸಿದಲ್ಲಿ ಕರ್ನಾಟಕ ದೇಶದಲ್ಲಿ ವೀರಶೈವ ಧರ್ಮದ ಉದ್ಭವವು ಮೊ
ದಲು ತರ್ದೇವಾಡಿ ನಾಡಿನಲ್ಲಿ ಉಂಟಾಗಿ ಮುಂದೆ ಕಲ್ಯಾಣಪಟ್ಟಣದಲ್ಲಿ,
ಆ ಮೇಲೆ ಬಸವೇಶ್ವರನ ಪ್ರಭಾವದಿಂದ ಇಡೀ ಕರ್ನಾಟಕ ದೇಶದಲ್ಲಿ,
ಅದರಲ್ಲಿ ಮುಖ್ಯವಾಗಿ ಚಾಲುಕ್ಯರ ಆಗಿನ ರಾಜ್ಯದಲ್ಲಿ, ಕ್ರಮೇಣ ಪ್ರಸಾರ
ಹೊಂದುತ್ತ ನಡೆಯಿತೆಂದು ತೋರುತ್ತದೆ.

---



# ಕೊಡಗು ದೇಶದ ನಿಜವಾದ ಇತಿಹಾಸವು.

ಲೇಖಕರು:—ಶ್ರೀಯುತ ಸದಾಶಿವ ವೀರಭದ್ರಪ್ಪ ಹಂಜಿ, ಎಂ. ಎ.

ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು.

ಇಂಥ ಕಠಿಣ ಪ್ರಸಂಗದಲ್ಲಿ ಈಸ್ಟ ಇಂಡಿಯಾ ಕಂಪನಿಯವರಿಗೂ
ಕೂಡ ಕೊಡಗು ಸಂಸ್ಥಾನದ ಸಹಾಯದ ಅವಶ್ಯಕತೆಯು ಸಂಪೂರ್ಣ
ವಾಗಿ ತಿಳಿದಿತ್ತು. ಕಂಪನಿಯ ತೆಲಿಚರಿಯಲ್ಲಿ ವಜಾಲಖಾನನ ಕೈಕೆ
ಳಗಿನ ಸೈನ್ಯದಕೂಡ ಭಯಂಕರ ಕಾಳಗವು ಪ್ರಾರಂಭವಾಗಿತ್ತು. ಅಲ್ಲಿ
ವಜಾಲಖಾನನ ದಂಡಿನ ಸಂಗಡ ಕಂಪನಿಯವರು ಬಹಳ ಕಷ್ಟದಿಂದ
ಹಾಗೂಹೀಗೂ ತಡಕೊಂಡು ಬಂದಿದ್ದರು. ಮುಂಬಯಿಯ ಗವರ್ನರ
ರಾದ ಕರ್ನಲ್ ಆಬರಕ್ರೊಂಬಿ ಈತನು ಮೈಸೂರ ಮೇಲೆ ಪಶ್ಚಿಮದ ಕಡೆ
ಯಿಂದ ದಾಳೀ ಮಾಡಬೇಕೆಂದು ಪ್ರಯತ್ನಪಡುತ್ತಿದ್ದನು. ಕಾನಾನೂರ
ಅಥವಾ ತೆಲಿಚೆರಿಯಲ್ಲಿಂದ ಮೈಸೂರು ಕಡೆಗೆ ಹೋಗುವ ತೀರ ಸಮೀ
ಪದ ಹಾದಿಯು ಕೊಡಗು ಪ್ರಾಂತದಲ್ಲಿಯೇ ಇರುವದೆಂದು ಅವನಿಗೆ
ಸಂಪೂರ್ಣವಾಗಿ ಗೊತ್ತಾಗಿತ್ತು. ಆದುದರಿಂದ ಕೊಡಗಿನ ರಾಜನಿಗೂ
ತನಗೂ ವೈಮನಸ್ಸು ಉಂಟಾದರೆ ಆ ದಾರಿಯನ್ನು ಅವನು ಸಹಜ
ವಾಗಿ ಬಂದು ಮಾಡಬಹುದಾಗಿತ್ತು. ಇತ್ತ ಕೊಡಗಿನ ರಾಜನಿಗೆ ಟೀಪು
ವಿನ ದೊಡ್ಡ ಹೆದರಿಕೆಯಿತ್ತು. ಮತ್ತು ಅವನು ಟೀಪೂವಿಗೆ ಬಹಳ
ಅಂಜುತ್ತಿದ್ದನು. ಮತ್ತು ಮನಃಪೂರ್ವಕವಾಗಿ ಅವನನ್ನು ದ್ವೇಷಿಸುತ್ತಿ
ದ್ದನು. ಟೀಪೂವಿನಿಂದ ತನಗೆ ಯಾವದಾದರೊಂದು ಉಪಕಾರವಾದೀ
ತೆಂಬ ಮಾತೇ ಬೇಡ, ಈ ಟೀಪೂವಿಗೂ ಕಂಪನಿಯವರಿಗೂ ಯುದ್ಧವು
ಪ್ರಾರಂಭವಾಗಿರುತ್ತದೆ, ಅವನು ಬಹಳ ಕಠಿಣಪರಿಸ್ಥಿತಿಯಲ್ಲಿದ್ದು ತನ್ನ
ಪಕ್ಷಕ್ಕೆ ಸಹಾಯ ಮಾಡಬೇಕು ಇಲ್ಲದಿದ್ದರೆ ಇಂಗ್ಲೀಷರಿಗಾದರೂ ಸಹಾ
ಯ ಮಾಡಬಾರದು ಹೀಗೆ ಬಹಳ ಮಾತು ಹೇಳಬಹುದು ಮತ್ತು
ಲಂಚ ಕೊಟ್ಟು ಆಶೆ ಹಚ್ಚಬಹುದು ಆದರೆ ಕೆಲಸ ತೀರಿದ ಮೇಲೆ ಅವನು
ತನ್ನ ಕೂಡ ಯುದ್ಧ ಮಾಡುವ ಸಿದ್ಧತೆಯನ್ನು ಮಾಡಬಹುದು, ಎಂಬ
ಸಂಗತಿಯು ವೀರರಾಜನಿಗೆ ಚನ್ನಾಗಿ ಗೊತ್ತಿತ್ತು. ಆದುದರಿಂದ
ವೀರರಾಜನು ಯಾವನಾದರೂ ಒಬ್ಬ ಬಲವುಳ್ಳವನ ಸ್ನೇಹ ಮಾಡ

ಬೇಕೆಂದು ವಿಚಾರಮಾಡುತ್ತಿದ್ದನು. ಕೊನೆಗೆ ಅವನಿಗೆ ಹೀಗೆ ಅನಿಸಿತು, ಈಸ್ಟ ಇಂಡಿಯಾ ಕಂಪನಿಯವರು ದಿನದಿನಕ್ಕೆ ಪ್ರಬಲರಾಗುತ್ತಿದ್ದಾರೆ. ಆದಕಾರಣ ಅವರನ್ನು ಕೂಡಿದರೆ ತನಗೆ ಟೀಪುವಿನಿಂದ ಏನೂ ಆಗಲಿಕ್ಕಿಲ್ಲ. ಕಂಪನಿಯವರಿಗಾದರೂ ಟೀಪುವಿನ ಕೂಡ ಯುದ್ಧ ಮಾಡುವದಕ್ಕಾಗಿ ಏನಾದರೂ ಸಹಾಯವು ಬೇಕಾಗಿಯೇ ಇರುವದು. ಆಗ ಟೀಪುವಿನ ಬಗ್ಗೆ ದ್ವೇಷಮಾಡುವ ಕಂಪನಿಯವರಿಗೂ ವೀರರಾಜನಿಗೂ ಗೆಳೆತನವು ಸಹಜವಾಗಿ ಆಯಿತು. ಮಧು ಭಟ್ಟನೆಂಬ ವೀರರಾಜನ ಆಶ್ರಿತನು ಉತ್ತಮ ಕುದುರೆಗಳನ್ನು ಮತ್ತು ಇತರ ವಸ್ತುಗಳನ್ನು ಕೊಳ್ಳಲಿಕ್ಕೆ ತೆಲಚೆರಿಗೆ ಬಂದಿದ್ದನು. ಆ ವೇಳೆಗೆ ತೆಲಿಚೆರಿಯಲ್ಲಿ ರಾಬರ್ಟಟೇಲರ ಎಂಬ ಹೆಸರಿನ ಕಂಪನಿಯವರ ಅಧಿಕಾರಿಯು ಇರುತ್ತಿದ್ದನು. ಅವನು ಈ ಮಧುಭಟ್ಟನಿಗೆ ಕಂಪನಿ ಸರಕಾರ ಮತ್ತು ಟೀಪು ಇವರ ನಡುವೆ ಬಹಳ ದಿವಸಗಳಿಂದ ನಡೆದುಬಂದ ಜಗಳದ ವೃತ್ತಾಂತವನ್ನು ಹೇಳಿದನು.

ರಾಬರ್ಟಟೇಲರನು ಈ ಪ್ರಕಾರ ಹೇಳಿದನು:—“ಟೀಪುಸುಲ್ತಾನನ ಪ್ರಾಬಲ್ಯವು ಕಂಪನಿಯವರಿಗೂ ಕೊಡಗಿನವರಿಗೂ ಇಬ್ಬರಿಗೂ ಅತ್ಯಂತ ಹಾನಿಕರವೇ ಸರಿ. ಆದುದರಿಂದ ಇಬ್ಬರೂ ಅವನ ನಾಶಮಾಡುವವರ ಸಲುವಾಗಿ ಒಬ್ಬರಿಗೊಬ್ಬರು ತೀರ ಮಿತ್ರಭಾವದಿಂದಿರಬೇಕು.” ಮಧು ಭಟ್ಟನು ತಿರುಗಿ ಕೊಡಗಿಗೆ ಹೋದಾಗ ಆ ಸಾಹೇಬನು ರಾಜನಿಗೆ ಕಂಪನಿಯವರು ಮತ್ತು ರಾಜನು ಇವರು ಒಳ್ಳೇ ಸ್ನೇಹದಿಂದಿರಬೇಕೆಂದು ಅವನಕಡೆಗೆ ಪತ್ರಬರೆದು ಕೊಟ್ಟಿದ್ದನು. ಈ ಪತ್ರವು ಮುಟ್ಟಿದ ಕೂಡಲೇ ವೀರರಾಜನಿಗೆ ಅತ್ಯಾನಂದವಾಯಿತು. ಮತ್ತು “ತಾವು ಬರೆದದು ನಮಗೆ ಎಲ್ಲ ರೀತಿಯಿಂದಲೂ ಮಾನ್ಯವಿರುವದೆಂದು” ರಾಬರ್ಟಟೇಲರನಿಗೆ ಅವನು ಉತ್ತರ ಕಳಿಸಿದನು. ಅವನು ಮುಂಬಯಿ ದಂಡಿನ ಸಹಾಯಕ್ಕೆ ಕುದುರೆ ಮೊದಲಾದವುಗಳನ್ನು ಪೂರೈಸಿಕೊಡಲಿಕ್ಕೆ ಒಪಿಕೊಂಡನು. ಮತ್ತು ಮೈಸೂರ ಪ್ರಾಂತದಮೇಲೆ ದಾಳೀ ಮಾಡಲಿಕ್ಕೆ ಪ್ರಾರಂಭಿಸಿದನು. ಮುಂಬಯಿಯಿಂದ ಕುದುರೆಗಳನ್ನು ತರಿಸಿದಕಾರಣ ಅವು ಕೊಡಗಿನ ಕುದುರೆಗಳಿಗಿಂತ ‘ಬಹಳ’ ಉತ್ತಮವಿದ್ದವು. ಸ್ವಲ್ಪ ದಿವಸಗಳಲ್ಲಿಯೇ ಅವನು ೫೦೦ ಕುದುರೆಗಳನ್ನು ತೆಲಿಚೇರಿಗೆ ಕಳಿಸಿದನು. ಅಷ್ಟರಲ್ಲಿ ಅವನಿಗೆ ಒಂದು ಪತ್ರ ಬಂದು ಮುಟ್ಟಿತು. ಮುಂಬಯಿಯಿಂದ



ಇಂಗ್ಲಿಷ ಸರಕಾರದವತಿಯಿಂದ ಕೊಡಗು ರಾಜನ ಕೂಡ ಕೊಲ್ಲುವದು ಮತ್ತು ರಕ್ಷಣೆ ಮಾಡುವದು ಇದರ ಬಗ್ಗೆ ಒಪ್ಪಂದ ಮಾಡುವದು ತೆಲಿಚೇರಿಯಲ್ಲಿಯ ಅಧಿಕಾರಿಯ ಕಡೆಗೆ ಪತ್ರ ಬಂದು ಮುಟ್ಟಿರುವದು. ಇದನ್ನು ಕೇಳಿ ವೀರರಾಜನು ೧೭೯೦ ರಲ್ಲಿ ಅಕ್ಟೋಬರ ತಿಂಗಳ ಪ್ರಾರಂಭಕ್ಕೆ ತೆಲಿಚೇರಿಗೆ ಹೋದನು. ಆಗ ಅವನ ಸಂಗಡ ಕ್ಯಾಪ್ಟನ್ ಬ್ರಾವುನ್ ಎಂಬ ಸಾಹೇಬನು ಇದ್ದನು. ಅಲ್ಲಿ ಹೋದನಂತರ ಒಪ್ಪಂದವಾಯಿತು. ಅದರ ಕರಾರುಗಳು ಹೀಗೆ ಅವೆ.

೧ ಆಕಾಶದಲ್ಲಿ ಸೂರ್ಯ ಚಂದ್ರರು ವಿರಾಜಮಾನರಾಗಿರುವ ವರೆಗೂ ಒಪ್ಪಂದ ಮಾಡಿಕೊಳ್ಳುವ ಉಭಯ ಪಕ್ಷದವರ ಕಡೆಯಿಂದ ತಮ್ಮ ತಮ್ಮ ವಚನಗಳನ್ನು ಮುರಿಯಗೊಡಲಿಕ್ಕಿಲ್ಲ.

೨ ಟೀಪು ಮತ್ತು ಅವನ ಸಹಾಯಕರು ವೈರಿಗಳೆಂದು ತಿಳಿದು ಕೊಡಗಿನ ರಾಜನು ತನ್ನ ಕಡೆಯಿಂದ ತನಗೆ ಸಾಧ್ಯವಿದ್ದಷ್ಟುಮಟ್ಟಿಗೆ ಟೀಪುನನ್ನು ನಾಶ ಮಾಡಲಿಕ್ಕೆ ಸಹಾಯ ಮಾಡಬೇಕು.

೩ ಕೊಡಗದ ರಾಜನು ತನ್ನ ಕಡೆಯಿಂದ ಎಲ್ಲ ತರದ ಸಹಾಯವನ್ನು ಇಂಗ್ಲಿಷರಿಗೆ ಮಾಡಿ ಎರಡನೆಯ ಟೊಪ್ಪಿಗೆಯವರ ಸಂಗಡ ಸ್ವಲ್ಪಾದರೂ ಸಂಬಂಧವನ್ನು ಇಡಕೂಡದು.

೪ ಕೊಡಗಿನ ರಾಜನ ಸ್ವತಂತ್ರ ರಕ್ಷಣೆಯನ್ನು ಮಾಡುವ ಸಲುವಾಗಿ ಕಂಪನಿಯವರು ಜಾಮೀನದಾರರು ಆಗುತ್ತಾರೆ. ಮತ್ತು ಟೀಪೂವಿನ ಕೂಡ ಸಲ್ಲಾ ಆದಲ್ಲಿ ಅವನಿಂದ ರಾಜ್ಯದ ಮತ್ತು ಎಲ್ಲ ರೀತಿಯಿಂದ ರಾಜನ ಲಾಭದ ರಕ್ಷಣ ಮಾಡುವ ವಿಷಯದಲ್ಲಿ ಈ ಕಂಪನಿಯವರು ಜಾಮೀನದಾರರಾಗಿರುತ್ತಾರೆ.

೫ ಟೀಪೂನ ನಾಶ ಆಗಿ ಎಲ್ಲಕಡೆಗೆ ಶಾಂತತೆಯುಂಟಾಗುವ ವರೆಗೆ ಕೊಡಗಿನ ರಾಜನ ಮತ್ತು ಅವನ ಕುಟುಂಬದೊಳಗಿನ ಎಲ್ಲ ಜನರಿಗೆ ಮರ್ಯಾದೆಪೂರ್ವಕ ತೆಲಿಚೇರಿಯಲ್ಲಿ ಆಶ್ರಯ ಕೊಡುವದರಲ್ಲಿ ಬರುವದು.

ಪರಮೇಶ್ವರ, ಸೂರ್ಯ, ಚಂದ್ರ, ಪೃಥ್ವಿ
ಇವರು ತಹನಾಮೆಯ ಸಾಕ್ಷಿ ಇರಲಿ.

ಮುಂಬಯಿ ಮದ್ರಾಸ ಬಂಗಾಲ ಸರಕಾರದ ವತಿಯಿಂದ
ರಾಬರ್ಟಟೇಲರನ ಸಹಿ
ಕೊಡಗಿನ ರಾಜನಾದ ವೀರರಾಜೇಂದ್ರನ ಸಹಿ

ಸರ ಆಬರಕ್ರೋಂಬಿಯು ಸಮುದ್ರದ ದಂಡೆಗೆ ಬಂದು ಮುಟ್ಟಿದ
ಕೂಡಲೆ ರಾಜನಿಗೆ ಮಾತಾಡುವ ಸಲುವಾಗಿ ಹೇಳಿಕಳಿಸಿದನು. ಮತ್ತು
ಹೋಗುವಾಗ ಅವನನ್ನು ಮುಟ್ಟಿಸುವ ಸಲುವಾಗಿ ಶಿಪಾಯಿಗಳ ಒಂದ
ಗುಂಪನ್ನೂ ಮತ್ತು ಒಬ್ಬ ಅಧಿಕಾರಿಯನ್ನೂ ಕಳಿಸಿಕೊಟ್ಟಿದ್ದನು.

ಮುಂಬಯಿಯಿಂದ ಟೀಪುವಿನ ರಾಜ್ಯಕ್ಕೆ ಹೋಗಲಿಕ್ಕೆ ಕೊಡಗು
ಪ್ರಾಂತದೊಳಗಿನ ದಾರಿಯು ತೀರ ಸಮೀಪದ್ದೆಂದು ಈ ಮೊದಲೇ
ಹೇಳಿರುತ್ತವೆ. ಅದನ್ನು ಚನ್ನಾಗಿ ದುರಸ್ತ ಮಾಡಿಸಿ ಅದೇ ದಾರಿಯು
ದಂಡು ಹೋಗಿ ಬರಲಿಕ್ಕೆ ಉತ್ತಮವಿರುವದೆಂದು ನಿಶ್ಚಯಿಸಿದರು.
ಮತ್ತೊಮ್ಮೆ ವೀರರಾಜನು ಮೈಸೂರು ಮೊದಲಾದ ಪ್ರಾಂತಗಳಿಂದ
೧೦೦೦ ದನಕರುಗಳನ್ನು ತಂದು ಕಂಪನಿಯವರಿಗೆ ಕೊಟ್ಟನು. ಸರ
ಆಬರಕ್ರೋಂಬಿಯು ಹೆಗಲಾ ಘಟ್ಟವನ್ನು ಹತ್ತಿ ಬಂದ ಸಮಯದಲ್ಲಿಯೇ
ವೀರರಾಜನು ನಾಲಕನಾಡಿನಿಂದ ಅವನ ಎದುರಿಗೆ ಬಂದಿದ್ದನು. ಅವನು
ಕಾಳು, ಮೇವುಗಳನ್ನು ಚನ್ನಾಗಿ ಸಂಗ್ರಹ ಮಾಡಿ ಅವುಗಳನ್ನು ಕಂಪ
ನಿಯ ಅಮುಲದಾರರಿಗೆ ಕೊಟ್ಟನು. ವೀರರಾಜನು ರಾಬರ್ಟಸಾಹೇಬರ
ಕೂಡ ಶ್ರೀರಂಗ ಪಟ್ಟಣದವರೆಗೆ ಹೋಗಿದ್ದನು. ೧೭೯೧ ರಲ್ಲಿ ಮಳೆಗಾ
ಲವು ಪ್ರಾರಂಭವಾದದ್ದರಿಂದ ಯುದ್ಧದ ಪ್ರಸಂಗವು ಬಂದು ಆಯಿತು.
ಮತ್ತು ಲಾರ್ಡ ಕಾರ್ನವಾಲಿಸನು ಬೆಂಗಳೂರಿಗೆ ಮತ್ತು ಸರ ರಾಬ
ರ್ಟನು ಮುಂಬಯಿಗೆ ಬಂದುಬಿಟ್ಟರು. ಆಗ ಮುಂಬಯಿ ಸೈನ್ಯದ
ತೋಪಖಾನೆ, ಮದ್ದು ಗುಂಡು ಮೊದಲಾದ ಎಲ್ಲ ಸಾಮುಗ್ರಿಗಳನ್ನು
ವೀರರಾಜನ ವಶದಲ್ಲಿ ಕೊಟ್ಟಿದ್ದರು. ಇದಲ್ಲದೆ ಮಳೆಗಾಲದಲ್ಲಿ ವೀರರಾ
ಜನು ತನ್ನ ಇಡೀ ಪ್ರಾಂತದಲ್ಲಿ ಮತ್ತು ಮೈಸೂರು ಪ್ರಾಂತದಲ್ಲಿ ಪೆಂಡಾ
ರಿಗಳಿಂದ ಸಿಕ್ಕಷ್ಟು ಕಾಳುಗಳನ್ನು ಕೂಡಿಸಿ ಇಟ್ಟಿದ್ದನು. ಈ ರೀತಿ
ಯಿಂದ ಕೊಡಗಿನ ರಾಜನು ಬೇಗನೆ ತನ್ನ ನಾಶದ ಸಲುವಾಗಿ ಇಂಗ್ಲೀ
ಷರಿಗೆ ಸಹಾಯ ಮಾಡುತ್ತಿರುವನೆಂದು ತಿಳಿದ ಕೂಡಲೆ ಟೀಪೂನು
ತನ್ನ ಸಹಿಯುಳ್ಳ ಒಂದು ಪತ್ರವನ್ನು ವೀರರಾಜನ ಸ್ನೇಹಿತನಾದ
ಕೇದಾರಖಾನ ಕೇಸಜಿಯ ಕೈಯಲ್ಲಿ ಕೊಟ್ಟು ಅವನನ್ನು ವೀರರಾಜನ
ಕಡೆಗೆ ಕಳಿಸಿದನು. ಅದರಂತೆ ತನ್ನ ವಸೂಲಿ ಕೆಲಸದ ಮುಖ್ಯ ಅಧಿಕಾ
ರಿಯಾದ ಪೂರ್ಣಯ್ಯ ದಿವಾಣಸಾದಕ ಇವನಕಡೆಯಿಂದ "ಈಹೊತ್ತಿನ
ವರೆಗೆ ನಾವು ನಿಮಗೆ ಮಾಡಿದ ಅಪರಾಧಗಳನ್ನು ಕ್ಷಮಿಸಬೇಕು. ಮತ್ತು



ಪುನಃ ನಾವು ಮಿತ್ರತ್ವದಿಂದ ಇರಬೇಕು" ಎಂದು ಪತ್ರ ಬರೆಯಿಸಿ ಅದನ್ನು
ವೀರರಾಜನಕಡೆಗೆ ಕಳಿಸಿದನು. ವೀರರಾಜನು ಈ ಪತ್ರವನ್ನು ರಾಬ
ರ್ಟನಕಡೆಗೆ ಕಳಿಸಿದನು. ಮತ್ತು ಸ್ವತಃ ತಾನು ಟೀಪೂವಿಗೆ ಉತ್ತರ
ಕೊಟ್ಟನು. ಅದು ಈ ಪ್ರಕಾರ ಇರುವದು. "ಇದೇ ಪ್ರಕಾರ ತಾವು
ಸವಿ ಸವಿ ಮಾತುಗಳನ್ನಾಡಿ ಮೋಸಗೊಳಿಸಿದಿರಿ. ಮತ್ತು ಕೊಡಗು
ಪ್ರಾಂತವನ್ನು ನಾಶಮಾಡಿದಿರಿ. ಪರಮೇಶ್ವರನು ನನಗೆ ಒಂದು ನಾಲಿ
ಗೆಯನ್ನು ಕೊಟ್ಟಿದ್ದಾನೆ. ಆದುದರಿಂದ ನನಗೆ ಕಂಪನಿಯವರ ಕೂಡ
ಒಂದೇ ವಚನದಿಂದ ಇರಬೇಕಾಗಿದೆ. ನಾನು ನಿಮ್ಮಹಾಗೆ ಒಳಗೊಂದು
ಹೊರಗೊಂದು ಮಾಡಲಾರೆನು." ಈ ಪ್ರಕಾರ ವೀರರಾಜನು ಟೀಪೂ
ನಿಗೆ ಉತ್ತರ ಕಳಿಸಿದನು. ಈ ಮೊದಲು ಟೀಪೂನು ವೀರರಾಜನಸಂಗಡ
ಅಪ್ರಮಾಣಿಕತನದಿಂದ ವರ್ತಿಸಿದ ಫಲವೇ ಇದು. ವೀರರಾಜನು
ಕಂಪನಿ ಸರಕಾರದವರ ಕೂಡ ಬಹಳ ಪ್ರಾಮಾಣಿಕತನದಿಂದ ನಡೆದನು.
ಅವನು ಅಫಗಾನರಂತೆ ವಿಶ್ವಾಸಘಾತ ಮಾಡದೆ ತನ್ನ ರಾಜ್ಯದೊಳಗಿಂದ
ಹಾದಿ ಕೊಟ್ಟನು. ಆದುದರಿಂದ ಕಂಪನಿ ಸರಕಾರದವರಿಗೆ ತಮ್ಮ ಸೈನ್ಯ
ವನ್ನು ಮುಂಬಯಿಯಿಂದ ಸುಲಭವಾಗಿ ತೀರ ಮೈಸೂರ ಸಮೀಪಕ್ಕೆ
ಒಯ್ಯಲು ಅನುವಾಯಿತು. ಲಾರ್ಡ ಕಾರ್ನವಾಲೀಸನು ಶ್ರೀರಂಗಪಟ್ಟ
ಣದಲ್ಲಿ ಟೀಪುಸುಲ್ತಾನನ ಸಂಗಡ ಬಹಳ ಕಠಿಣವಾದ ಒಡಂಬಡಿಕೆಯನ್ನು
ಮಾಡಿಕೊಂಡನು. ಅದು ಈಪ್ರಕಾರ ಇರುವದು. "ಟೀಪುಸುಲ್ತಾನನು
ಮೂರು ಕೋಟಿ ರೂಪಾಯಿಗಳನ್ನು ಕೊಡಬೇಕು. ಅದರಂತೆ ಕಂಪ
ನಿಯವರ ಗೆಳೆಯರಾದ ನೈಜಾಮ, ಪೇಶವೆ ಇವರಿಗೆ ಕಂಪನಿಯ
ಸಮೀಪ ರಾಜ್ಯದೊಳಗಿನ ಅರ್ಧ ರಾಜ್ಯವನ್ನು ಕೊಡಬೇಕು. ಈ
ಸಂಬಂಧದಿಂದ ಕೊಡಗು ಪ್ರಾಂತವು ಟೀಪುಸುಲ್ತಾನನ ವಶದಲ್ಲಿದ್ದರೆ
ಅದರ ನಾಶವಾಗುವ ವೇಳೆಯು ಬಂದಿತ್ತು. ಆದರೆ ಸರ
ರಾಬರ್ಟ, ಆಬರ ಕ್ರೋಂಬಿಯು ಇವರು ಅತಿಶಯ ಪ್ರಯತ್ನ ಮಾಡಿ
ವೀರರಾಜನಿಗೆ ಕೊಟ್ಟ ವಚನವನ್ನು ಪಾಲಿಸುವದಕ್ಕಾಗಿ ಗವರ್ನರ
ಜನರಲ್ಲನಿಗೆ ಬಹಳ ಹೇಳಿ ಟೀಪುಸುಲ್ತಾನನಿಗೆ ಕೊಡಗು ಪ್ರಾಂತವು
ಕಂಪನಿ ರಾಜ್ಯದ ಹತ್ತರ ಇಲ್ಲವಾದರೂ ಅದನ್ನು ತಮ್ಮ ಕಡೆಗೆ
ಕೊಡಬೇಕೆಂದು ಹಿಂದಿನಿಂದ ಹೇಳಿದರು. ಇದರ ಕಾರಣವೇನಂದರೆ
ಒಂದು ವೇಳೆ ಆ ಪ್ರಾಂತವನ್ನು ಟೀಪೂವಿನ ಕಡೆಗೆ ಇಟ್ಟಿದ್ದರೆ ಈ
ಒಪ್ಪಂದ ಆದಕೂಡಲೇ ಆ ರಾಜನು ಇಂಗ್ಲೀಷರಿಗೆ ಸಹಾಯ ಮಾಡಿ

ದನೆಂದು ಟೀಪುನು ಮೊದಲು ವೀರರಾಜನ ಸಮಾಚಾರವನ್ನು ತಕ್ಕೊ
ಳ್ಳಬಹುದು. ಇವನ ಹೊಸ ಬೇಡಿಕೆಯನ್ನು ಕೇಳಿ ಟೀಪೂವಿನ ಸಿಟ್ಟು
ಅಂಗಾಲಿನಿಂದ ನಡುನೆತ್ತಿಯ ವರೆಗೆ ಏರಿತು. ಅವನು ಅಂದದ್ದೇ
ನಂದರೆ "ನಮ್ಮ ನಿಮ್ಮದು ಕಂಪನಿರಾಜ್ಯದ ಹತ್ತರವಿದ್ದ ರಾಜವನ್ನು
ಕಂಪನಿಯವರಿಗೆ ಮತ್ತು ಅವರ ಗೆಳೆಯರಿಗೆ ಕೊಡಬೇಕೆಂದು ಠರಾವು
ಆಗಿರುತ್ತದೆ. ಹೀಗಿದ್ದು ಕೊಡಗು ಪ್ರಾಂತವು ಕಂಪನಿರಾಜ್ಯದ ಹತ್ತರ
ಇರದಿದ್ದರೂ ನೀವು ಅದನ್ನು ಯಾವ ಆಧಾರದಿಂದ ಬೇಡುವಿರಿ?"
ಈ ಪ್ರಕಾರ ಕೈಗೆಕ್ಕೈ ಹತ್ತುವ ಪ್ರಸಂಗ ಬಂದುದರಿಂದ ಒಡಂಬಡಿಕೆ
ಯು ಮುರಿಯುವದೆಂದು ತಿಳಿಸಿತು. ಆದರೆ ಲಾರ್ಡ ಕಾರ್ನವಾಲಿಸನು
ಹಾಗೆಯೇ ಅವನ್ನೇ ಗಟ್ಟಿ ಹಿಡಿದುಕೊಂಡು ಕೂತನು. ತಿರುಗಿ ಕಳಿಸಿದ
ತೋಪುಗಳನ್ನು ಇಂಗ್ಲೀಷರು ಪುನಃ ತರಿಸಿದರು. ಇತ್ತ ಟೀಪುಸು
ಲ್ತಾನನು ತನ್ನ ಸಂರಕ್ಷಣೆಯ ಸಿದ್ಧತೆಯನ್ನು ಮಾಡಿಕೊಳ್ಳಲಿಕ್ಕೆ ಹತ್ತಿ
ದನು. ಕೊನೆಗೆ ಟೀಪುನು ಇಂಗ್ಲಿಷರ ಮಾತಿಗೆ ಒಪ್ಪಿಕೊಂಡನು. ಮತ್ತು
ಒಪ್ಪಂದವಾಯಿತು. ಆಗ ವೀರರಾಜನಿಗೆ ಅವನು ಟೀಪುನ ಕಡೆಯಿಂದ
ತೆಗೆದುಕೊಂಡ ಪ್ರಾಂತಗಳನ್ನು ಪುನಃ ತಿರುಗಿ ಕೊಡಲಿಕ್ಕೆ ಕಂಪನಿಯ
ವರು ಹೇಳಿದರು. ಮತ್ತು ಅವನಿಗೆ, ಇಂಗ್ಲಿಷ ಸರಕಾರಕ್ಕೆ ಕಪ್ಪ
ಕಾಣಿಕೆಯನ್ನು ಕೊಡಬೇಕಾದೀತು ಎಂದು ತಿಳಿಸಿದರು. ವೀರರಾಜ
ನಿಗೆ ಇಂಗ್ಲಿಷರ ಈ "ಕಾಮಾ ಪೂರ್ತಿ ಮಾಮಾ" ಈ ತರದ ಹೀನ
ತರದ ವರ್ತನವನ್ನು ಕಂಡು ಬಹಳ ಸಿಟ್ಟು ಬಂತು. ಮತ್ತು ಅದ
ರಲ್ಲಿ ಈ ಎರಡು ಸೂಚನೆಗಳನ್ನು ಕೇಳಿಯಂತೂ ಆತನ ಚಿತ್ತವು
ಬಹಳೇ ಕ್ಷೋಭೆಗೊಂಡಿತು. ಸರ ಅಬರಕ್ರೊಂಬಿ ಸಾಹೇಬನು ಕಠಿಣ
ಪ್ರಸಂಗದಲ್ಲಿ ಉತ್ತಮ ರೀತಿಯಿಂದ ಸಹಾಯಮಾಡಿದ ಈ ಶೂರ ಮಿತ್ರ
ನಿಗೆ ಸಮಾಧಾನಗೊಳಿಸಲಿಕ್ಕೆ ಅತಿಶಯ ಪ್ರಯತ್ನಪಟ್ಟನು. ಆದರೆ
ಕೊಡಗದ ರಾಜನು ಇಂಗ್ಲಿಷರ ಆಧೀನದಲ್ಲಿದ್ದದರಿಂದ ಆತನ ಸ್ವಾತಂ
ತ್ರ್ಯವನ್ನು ಅವನಿಗೆ ಕೊಡುವದು ಅಸಾಧ್ಯವಾಯಿತು. ಆದರೆ ಸರ ರಾಬರ್ಟ
ಈತನು ಮುಂಬಯಿಯಿಂದ ಕಲಕತ್ತೆಗೆ ಹೋಗುವ ವೇಳೆಗೆ ಕಾನಾನೂರ
ಈ ಸ್ಥಳದಲ್ಲಿ ಇಳಿದಾಗ ಆತನು ೧೭೯೨ನೆಯ ಮಾರ್ಚ ತಿಂಗಳಲ್ಲಿ
ರಾಜನಿಗೆ ಒಂದು ಠರಾವು ಬರೆದು ಕೊಟ್ಟು ಆತನನ್ನು ಸಂತೋಷ
ಪಡಿಸಿದನು. ಆ ಕಾಗದ ಪತ್ರದಲ್ಲಿ ರಾಜನಿಗೆ "ಕೊಡಗು ಸಂಸ್ಥಾ
ನವು ಸ್ವತಂತ್ರವಿರುತ್ತದೆ. ಮತ್ತು ಅವನು ಮೈಸೂರು ಸರಕಾರಕ್ಕೆ



ಕಪ್ಪಗಾಣಿಕೆಯನ್ನು ಕೊಟ್ಟಿಲ್ಲ. ಆದರೆ ಕಂಪನೀ ಸರಕಾರದವರು
ಟೀಪೂವಿನಿಂದ ಆತನನ್ನು ಸಂರಕ್ಷಣಮಾಡಿ ಉಳಿಸಿದ್ದರಿಂದ ಅವನೇ
ಸ್ವತಃ ೮೦೦೦ ಪಾಗೋಟಾ (೧ ಪಾ. ೭ ಶಿ. ೪ ಪೆ! ಉತ್ಪನ್ನವನ್ನು
ಕೊಡಲಿಕ್ಕೆ ಸಿದ್ಧನಿರುವನು" ಹೀಗೆ ಬರೆದು ಕೊಡಲಿಕ್ಕೆ ಅವನು ಪರ
ವಾನಗಿ ಕೊಟ್ಟಿದ್ದನು. ಕಂಪನಿಯವರೂ ಸಹ "ನಾವು ಕೊಡಗಿನ
ಮತ್ತು ಆತನ ರಾಜ್ಯಕಾರಭಾರದಲ್ಲಿ ಕೈಹಾಕುವದಿಲ್ಲೆಂದೂ ರಾಜನಿಗೆ
ಯಾವದೇ ರೀತಿಯಿಂದ ತೊಂದರೆಯನ್ನು ಕೊಡುವದಿಲ್ಲೆಂದೂ (ಇದರಿಂದ
ರಾಜನು ತಾನು ಸ್ವತಃ ರಾಜ್ಯವಾಳಲಿಕ್ಕೆ ಯೋಗ್ಯನಿದ್ದನು.) ಮತ್ತು ತೆಲ
ಚೇರಿಯಲ್ಲಿ ರಾಜನು ಕಂಪನಿಯವರಿಗೆ ಪ್ರತಿವರ್ಷ ೮೦೦೦ ಪಾಗೋಡಾ
ಕಾಣಿಕೆಯನ್ನು ಕೊಡಬೇಕೆಂತಲೂ ಕರಾರು ಮಾಡಿಕೊಂಡಿದ್ದರು.
ಸಾಯುವ ವರೆಗೂ ವೀರರಾಜೇಂದ್ರನಿಗೂ ಕಂಪನೀ ಸರಕಾರದವರಿಗೂ
ಗೆಳೆತನವು ಇತ್ತು. ೧೭೯೦ರಲ್ಲಿ ಕೊಡಗಿನ ರಾಜನು ಇಂಗ್ಲಿಷರಿಗೆ,
ಟೀಪು ಸುಲ್ತಾನನು ಅವರ ವಿನಾಶದ ಸಲುವಾಗಿ ಮರಾಠರ ಕೂಡ
ಸಂಧಾನ ನಡಿಸಿರುವನೆಂದು ತಿಳಿಸಿದ್ದನು. ಅದರಂತೆ ಕೊಡಗಿನ ರಾಜ
ನನ್ನು ಬಗ್ಗು ಬಡಿಯಲಿಕ್ಕೆ ಟೀಪುನು ಕೆಲವೊಂದು ಸೈನ್ಯವನ್ನು ಕಳಿಸಿದ್ದನು.
೧೭೯೨ರಲ್ಲಿ ನಾಟಕ ನಾಡು ಎಂಬಲ್ಲಿ ತನ್ನ ಹೊಸ ವಾಡೆಯನ್ನು ಕಟ್ಟಿ
ಸಿದ್ದನು. ಮತ್ತು ಅಲ್ಲಿ ಇರಲಿಕ್ಕೆ ಹೋದನು. ಮರುವರ್ಷ ಅವನು
ಎರಡನೇ ಲಗ್ನವಾದನು. ೧೭೯೯ರಲ್ಲಿ ಅರಸನು ಇಂಗ್ಲಿಷರಿಗೆ—
ಶ್ರೀರಂಗ ಪಟ್ಟಣಕ್ಕೆ ಹೋಗಲಿಕ್ಕೆ ಸಹಾಯ ಮಾಡಿದನು. ಜನ
ರಲ್ ಸ್ಟುಅರ್ಟ ಇವನು ಕೊಡಗಿನಲ್ಲಿ ಮುಂಬಯಿಯಿಂದ ಬಂದ
ಸೈನ್ಯದಲ್ಲಿ ಅಜಾರಿ ಬಿದ್ದವರ ಸಲುವಾಗಿ ಒಂದು ದವಾಖಾನೆಯನ್ನು
ಕಟ್ಟಿಸಿದ್ದನು. ಮತ್ತು ತಾನು ಶ್ರೀರಂಗ ಪಟ್ಟಣವನ್ನು ಮುತ್ತಿಗೆ ಹಾಕ
ಲಿಕ್ಕೆ ಹೋದನು. ಇಂಗ್ಲಿಷರು ಮೈಸೂರಿಗೆ ಹೋಗುವ ವರೆಗೂ ಅವರ
ಸಂಗಡ ಹೋಗಲಿಕ್ಕೆ ವೀರರಾಜನು ಸಿದ್ಧನಾದನು. ಆದರೆ ಆ ವೇಳೆ
ಯಲ್ಲಿ ಯಾರೋ ದುಷ್ಟರು "ನಿಮ್ಮ ಸೈನ್ಯವನ್ನು ತಕ್ಕೊಂಡು ನಿಮ್ಮ
ಸೈನ್ಯ ಹಾಗು ಕೊಡಗ ಪ್ರಾಂತದ ರಕ್ಷಣೆ ಮಾಡಿರಿ" ಎಂದು ಹೇಳಿ
ದರು. ಉತ್ತಮ ರೀತಿಯಿಂದ ಯುದ್ಧ ಕಲೆಯನ್ನು ಬಲ್ಲ ಇಂಗ್ಲಿಷ
ಸೈನಿಕರಿಗೆ ಕೊಡಗು ಪ್ರಾಂತದ ಜನರ ಸಹಾಯವು ಮರಾಠರಷ್ಟೇ
ಉಪಯೋಗವಿಲ್ಲೆಂದರೂ ಅನ್ನಬಹುದು. ವೀರರಾಜೇಂದ್ರನ ರೆಸಿಡೆಂಟ
ನಾದ ಕ್ಯಾಪ್ಟನ್ ಮೋಹನೀ ಇವನು ವೀರರಾಜನಿಗೆ ಗವರ್ನರ ಜನ

ರಲ್‌ನಾದ ಅರ್ಲ ಅಫ್ ಮಾರ್ನಿಂಗಟನ್ ಇವನ ಟೀಪೂನ ಸಂಗಡ ಆದ ಯುದ್ಧದ ಸಂಬಂಧ ಜಾಹೀರನಾಮೆಯನ್ನು ಓದಿ ತೋರಿಸಿದನು. ಅದರಲ್ಲಿ ಈ ಪ್ರಕಾರ ಬರೆದಿತ್ತು. "ಒಂದು ವೇಳೆ ಟೀಪೂವಿಗೆ ಜಯ ದೊರೆತರೆ ಇಂಗ್ಲಿಷರಿಗಷ್ಟೇ ಆಗುವ ಹಾನಿಯು ಕೊಡಗಿನ ರಾಜನದು ಆದೀತು. ಆದುದರಿಂದ ಟೀಪೂವಿನ ನಾಶಕ್ಕಾಗಿ ನೀವು ಪ್ರತಿಯೊಂದು ರೀತಿಯಿಂದ ಸಹಾಯ ಮಾಡಲಿಕ್ಕೆ ಚನ್ನಾಗಿ ಸಿದ್ಧರಾಗಬೇಕು." ಮಾರ್ಚ ತಿಂಗಳೊಳಗಾಗಿಯೇ ಟೀಪೂನು ಕೊಡಗುಪ್ರಾಂತದ ಸರಹದ್ದಿನ ಮೇಲಿನ ಮುಂಬಯಿಯ ಇಂಗ್ಲಿಷ ಸೈನ್ಯದ ಮೇಲೆ ದಾಳೀ ಮಾಡಿದನು. ಟೀಪೂನು ಪರಿಪಾಡಿಭಾನಿನಲ್ಲಿ ತಳವೂರಿದ್ದನು. ಆ ಮೇಲೆ ಸಿದನೂರಿನಲ್ಲಿ ಒಂದು ಯುದ್ಧವಾಯಿತು. ಇಲ್ಲಿ ಕರ್ನಲ ಮಾನ್‌ಟ್ರೇಸ್ರ್ಯೂರ ಮತ್ತು ಮೇಜರ ಡಿನೆ ಇವರು ಟೀಪೂವಿನ ಸೈನ್ಯದ ಸಂಗಡ ಮಧ್ಯಾಹ್ನದ ಎರಡು ಗಂಟೆಯ ವರೆಗೂ ಒಂದೇ ಸವನೆ ಕಾದಿದರು. ಆ ವೇಳೆ ಕರ್ನಲ ಸ್ಟುಅರ್ಟ ಸಾಹೇಬನು ಅವರ ಸಹಾಯಕ್ಕೆ ಯುರೋಪಿಯನ್ ಸೈನ್ಯವನ್ನು ಒಯ್ದನು. ಆಗ ೩ ತಾಸುಗಳ ವರೆಗೆ ಒಳ್ಳೇ ಜೋರಿನಿಂದ ಯುದ್ಧವಾಯಿತು. ಅದರಲ್ಲಿ ಟೀಪೂವಿನ ಅಪಜಯವಾಯಿತು. ಮಾರ್ಚ ತಿಂಗಳ ೧೧ಕ್ಕೆ ಟೀಪೂನು ಶ್ರೀರಂಗ ಪಟ್ಟಣಕ್ಕೆ ಹೋದನು. ಸಿದ್ದೇಶ್ವರದ ಯುದ್ಧದಲ್ಲಿ ವೀರರಾಜನು ಹಾಜರಿದ್ದನು. ಇಂಗ್ಲಿಷರು ಶ್ರೀರಂಗ ಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ ವೀರರಾಜನು ಸುಬ್ಬರಾಯ ಮತ್ತು ಬಾಪು ಇವರ ಕೈಕೆಳಗೆ ಕೆಲವು ಸೈನಿಕರನ್ನು ಕೊಟ್ಟು ತುಲು ತಾಲೂಕನ್ನು ಸ್ವಾಧೀನ ಮಾಡಿಕೊಳ್ಳಲಿಕ್ಕೆ ಕಳಿಸಿಕೊಟ್ಟನು. ತುಲು ತಾಲೂಕನ್ನು ಕೊಡಗಿನ ರಾಜನು ಮುಸಲ್ಮಾನರ ಕಡೆಯಿಂದ ಕಾದಾಡಿ ತಕ್ಕೊಂಡಿದ್ದನು. ಮೇ ೪ನೇ ತಾರೀಖಿನ ದಿವಸ ಶ್ರೀರಂಗ ಪಟ್ಟಣದಲ್ಲಿ ಭಯಂಕರ ಯುದ್ಧವಾಯಿತು. ಅದರಲ್ಲಿ ಟೀಪೂ ಸೋತು ಹೋದನು.

[ಮುಂದುವರಿಯುವುದು.]

---



# ಬಸವೇಶ್ವರನ ಕಾಲ ನಿರ್ಣಯ.

ಲೇಖಕರು:—ಶ್ರೀಮಾನ್ ಗೋವಿಂದ ಪೈ. ಮಂಜೇಶ್ವರ

( ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು )

ಆ ಮೇಲೆ ಬಿಜ್ಜಳನು ಕಳಚುರ್ಯವರ್ಷವೆಂಬ ತನ್ನದೇ ಒಂದು ಕಾಲಮಾನವನ್ನು ಆರಂಭಿಸಿದನು. ಈಶ್ವರ ಸಂ। ಉತ್ತರಾಯಣ ಕ್ರಿ. ಶ. ೧೧೫೭ ದಶಂಬರದ ಅಣ್ಣಿಗೆರಿಯ ಶಾಸನದಲ್ಲಿ ೧೫ ಆ ಸಂವತ್ಸರವನ್ನು ಈ ಕಾಲಮಾನದ ೨ ನೆಯ ವರ್ಷವೆಂದಿರುವುದರಿಂದ, ಇದು ಕ್ರಿ. ಶ. ೧೧೫೬ ನೆಯ ಧಾತೃ ಸಂವತ್ಸರದಲ್ಲಿ ಮೊದಲಾಗಿರಬೇಕು. ಈ ಶಾಸನದಲ್ಲಿ ಬಿಜ್ಜಳನನ್ನು ತ್ರಿಭುವನಮಲ್ಲ ಎಂದೂ ಭುಜಬಲ ಚಕ್ರವರ್ತಿ ಎಂದೂ ಅದರೊಂದಿಗೆ ಮಹಾಮಂಡಳೇಶ್ವರನೆಂದೂ ಹೇಳಿದೆ. ಕ್ರಿ. ಶ ೧೧೫೬–೫೭ರ ಹುಲಗೂರು ಹಾಗೂ ಹಾವೇರಿಯ ಶಾಸನಗಳಿಂದ ೧೬ ಈಚೆಯಲ್ಲಿ III ತೈಲನ ಇತರ ಮಹಾಮಂಡಳೇಶ್ವರರ ಹೆಸರಿನೆಯಾದರೂ ಆತನ ಚಕ್ರವರ್ತಿತ್ವವು ಅಷ್ಟು ದ್ಯೋತಕವಾಗಿಲ್ಲ. ಶಾ. ಶ. ೧೦೮೦ ಬಹುಧಾನ್ಯ ಸಂ। = ಕ್ರಿ. ಶ. ೧೧೫೮ ರ ಶಿಕಾರಿಪುರ ೧೨೩ ನೆಯ ಶಾಸನದಲ್ಲಿ ೧೭ ಚಾಳುಕ್ಯ III ತೈಲನ ಹೆಸರಿಯಾದರೂ (ಬಂ. ೧೩) ಆತನಿಗೂ ಬಿಜ್ಜಳನಿಗೂ ಇದ್ದ ಪರಸ್ಪರ ಸಂಬಂಧವನ್ನು ಹೇಳಿಲ್ಲ ಮಾತ್ರವಲ್ಲ, ಬಿಜ್ಜಳನನ್ನು ಮಹಾಮಂಡಳೇಶ್ವರನೆನ್ನದೆ ಮಹಾರಾಜಾಧಿರಾಜನೆಂದೂ (ಬಂ. ೧೫) ಭುಜಬಳ ಚಕ್ರವರ್ತಿ ತ್ರಿಭುವನಮಲ್ಲ ಬಿಜ್ಜಲದೇವರಸನೆಂದೂ (ಬಂ. ೧೭)ಹೇಳಿದೆ. ೧೦೮೧ ಬಹುಧಾನ್ಯ ಸಂ। ಬಾದ್ರಪದಮಾವಾಸ್ಯೆ ಸೂರ್ಯಗ್ರಹಣ=ಶಾ. ಶ. ೧೦೮೦ ಸಪ್ಟಂಬರ ೩ ಶುಕ್ರವಾರ ಸೂರ್ಯಗ್ರಹಣದಂದಿನ ಶಿಕಾರಿಪುರ ೧೮ ನೆಯ ಶಾಸನದಲ್ಲಿ ೧೮ III ತೈಲನನ್ನು ಹೆಸರಿಸದೆ, ಬಿಜ್ಜಳನನ್ನು ಮಹಾಮಂಡಳೇಶ್ವರನೆಂದೂ ಭುಜಬಳ ಚಕ್ರವರ್ತಿ ತ್ರಿಭುವನಮಲ್ಲ ಬಿಜ್ಜಳದೇವರಸನೆಂದೂ ಹೇಳಿದೆ. ಹಾಗೆಯೇ ಬಿಜ್ಜಳನ ೬ ನೆಯ ವರ್ಷದ ವಿಷು ಸಂ॥ ಪುಷ್ಯಮಾಸದಮಾವಾಸ್ಯೆ ಸೂರ್ಯಗ್ರಹಣ=ಕ್ರಿ. ಶ. ೧೧೬೨ ಜನವರಿ ೧೭ ಬುಧವಾರ ಸೂರ್ಯಗ್ರಹಣದಂದಿನ ಶಿಕಾರಿಪುರ ೧೦೨ ನೆಯ ಶಾಸನದಲ್ಲಿ ೧೯ ಚಾಳುಕ್ಯ III ತೈಲನ ಹೆಸರು

---

೧೫. FKD. ಪು. ೪೭೪ ೧೬. ಅದೇ ಪು. ೪೬೧ ೧೭. ECVII ೧೮ ಅದೇ
೧೯ ಅದೇ.

ಇಲ್ಲಿವೆ ಬಿಜ್ಜಳನನ್ನು ಮಹಾಮಂಡಳೇಶ್ವರ ಭುಜಬಲಚಕ್ರವರ್ತಿ ತ್ರಿಭುವನಮಲ್ಲ ಬಿಜ್ಜಲದೇವರಸನೆಂದದೆ. ಆಮೇಲಣ ಚಿತ್ರಭಾನು ಸಂ॥ ಪೌಷ ಕೃಷ್ಣ ೨ ಸೋಮವಾರ ಉತ್ತರಾಯಣ ಸಂಕ್ರಾಂತಿ = ಕ್ರಿ. ಶ. ೧೧೪೨ ದಶಂಬರ ೨೫ರ ಹೊಲಿಯ ಶಾಸನದಲ್ಲಿ ೨೦ III ತೈಲನ ಹೆಸರಿತ್ತದೆ, ಬಿಜ್ಜಳನನ್ನು ಮಹಾಮಂಡಳೇಶ್ವರನೆನ್ನದೆ ಮಹಾರಾಜಾಧಿರಾಜ ಪರಮೇಶ್ವರ ಎಂದು ಹೇಳಿದೆ. ಇವಲ್ಲಿಯ ಶಿಕಾರಿಪುರ ೧೩೩ ರಲ್ಲಿಯೂ (ಬಂ. ೧೪) ಹಾಗೆಯೇ III ತೈಲನ ಹೆಸರೂ ಬಿಜ್ಜಳ ಕ್ಷೋಣೀಪಾಲನ ಹೆಸರೂ (ಬಂ. ೨೫) ಇದ್ದು ಅವರೊಳಗಣ ಸಂಬಂಧವನ್ನಾಗಲಿ ಬಿಜ್ಜಳನನ್ನು ಮಹಾಮಂಡಳೇಶ್ವರನೆಂದಾಗಲಿ ಹೇಳದ ದಾವಣಗೆರೆ ೩೫ ರಲ್ಲಿಯೂ ೨೧ (ಬಂ. ೨೫-೨೯)

ಪುಸಿಯಲ್ತು ವೀರಭೋಜ್ಯಾ
ವಸುಂಧರಾಯೆಂಬ ವಾಕ್ಯವೆನೆ ಧರೆಯಂ ಸಾ।
ಧಿಸಿದಂ ತೆಂಕಬ್ಧಿತೆ ಬಡ
ಗ ಸೀಮೆ ಚಾಳುಕ್ಯಕಟಕವೆನೆ ಬಿಜ್ಜನೃಪಂ ॥

ಎಂದಿರುವಲ್ಲಿ ತೆಂಕಲಲ್ಲಿ ಪಶ್ಚಿಮ ಸಮುದ್ರಕ್ಕೂ ಬಡಗಲಲ್ಲಿ ಚಾಳುಕ್ಯರ ರಾಜಧಾನಿಗೂ ನಡುವಣ ಸೀಮೆಯೆಂದರೆ ಪ್ರತ್ಯಕ್ಷತಃ ಚಾಳುಕ್ಯರ ಸಾಮ್ರಾಜ್ಯದಲ್ಲಿ ಒಳಪಟ್ಟ ಸೀಮೆ ಎಂದು ತಿಳಿಯುವುದರಿಂದ, ಬಿಜ್ಜಳನು ಅದನ್ನು ಚಾಳುಕ್ಯರ ಸಾಮ್ರಾಜ್ಯದಿಂದ ತಾನೆ ಸಾಧಿಸಿಕೊಂಡಿರಬೇಕು. ಅತಏವ ಅನುಮಕೊಂಡದ ಶಾಸನದಿಂದ ೨೨ ತಿಳಿವ ಮೇರೆಗೆ ಕ್ರಿ. ಶ ಸು. ೧೧೫೫ರಲ್ಲಿ ಕಾಕತೀಯ ವಂಶದ II ಪ್ರೋಲನಿಂದ (೧೧೬೨. ೬೩) ೨೩ ಸೋಲಿಸಲ್ಪಟ್ಟ ಚಾಳುಕ್ಯ III ತೈಲನು ಆ ಅಪಜಯದಿಂದು ಬಲಗುಂದಿದ್ದಾಗ ಆತನ ಸರ್ವಾಧಿಕಾರಿಯಾದ ಬಿಜ್ಜಳನು ಆ ಸುಸಂಧಿಯನ್ನು ಸಾಧಿಸಿ ತನ್ನ ಒಡೆಯನಿಗೆ ದ್ರೋಹವೆಣಿಸಿ ಆತನ ಸೈನ್ಯವನ್ನೇ ಆತನಿಗೆ ಎದುರಾಯಿಸಿ ತನ್ನ ಸ್ವತಂತ್ರತೆಯನ್ನೂ ಆತನ ರಾಜ್ಯದ ಬಹುಭಾಗವನ್ನೂ ಸೆಳೆಕೊಂಡುದಲ್ಲದೆ, ಬಿಜ್ಜಳನ ಕಾಲಾನಂತರದ ಕ್ರಿ. ಶ. ೧೧೭೩ನೆಯ ಹರಸೂರು ಹಾಗೂ ಕಾಳಗಿಯ ಶಾಸನಗಳಿಂದ ೨೪ ತಿಳಿವ ಮೇರೆಗೆ ಆಮೇಲೆ ಚಾಳುಕ್ಯರನ್ನು ಕಿತ್ತೊಗೆದು ಸಮಗ್ರ ಕುಂತಳದ

೨೦ FKD. ಪು. ೪೭೫; ೨೧ ECXI, ೨೨ FKD ಪು. ೪೭೨ ೨೩ Historical Inscriptions of South India, ಪು. ೧೨೦; ೩೫೫ ೨೪ DKF ಪು. ೪೭೨ f. n. 25



ಚಕ್ರವರ್ತಿಯಾದನೆಂಬ ಬಿಜ್ಜಳನು ಕ್ರಿ. ಶ. ೧೧೫೬ ರಿಂದ ೧೧೬೨ ರೊಳಗೆ ಚಾಳುಕ್ಯ ರಾಜ್ಯಾಪಹಾರವನ್ನು ಪೂರ್ತಿಗೊಳಿಸಿ III ತೈಲನ ಸಾಮ್ರಾದಲ್ಲಿ ತನ್ನ ಒಡೆತನವನ್ನು ಸ್ಥಾಪಿಸಿರಬೇಕು. ಕ್ರಿ. ಶ. ೧೧೬೫ ನೆಯ ಬಾಳಬೇಡಿನ ಹಾಗೂ ಮಂತಗಿಯ ಶಾಸನಗಳಿಂದಲೂ ೨೫ ತೇದಿಯಿಲ್ಲದ ಸೊರಬ ೩೪೬ ರಿಂದಲೂ ೨೬ ಬಿಜ್ಜಳನ ರಾಜಧಾನಿ ಕಲ್ಯಾಣವೆಂದು ತಿಳಿಯುವುದರಿಂದ ತಾನು ಚಕ್ರವರ್ತಿಯಾಗುತ್ತಲೇ, III ತೈಲನು ಕ್ರಿ. ಶ. ೧೧೬೩ ರ ವರೆಗೆ ಬದುಕಿದ್ದನಾದರೂ ಅವನ ೧೧೫೭ ರಿಂದ ಈಚೆಯ ಶಾಸನಗಳಲ್ಲಿ ಅವನ ರಾಜಧಾನಿ ಕಲ್ಯಾಣವೆನ್ನದೆ ಅದನ್ನು ಇತರತ್ರ ಹೇಳಿರುವುದರಿಂದ, ೧೧೬೨-೬೩ ರಲ್ಲಿ ಆತನು ಕಲ್ಯಾಣವನ್ನು ಬಿಟ್ಟು ಹೋಗಿಯೋ ಅಥವಾ ಆತನನ್ನು ಅಲ್ಲಿಂದ ಹೊರಗಟ್ಟಿಯೋ ತನಗೆ ಕೆಯ್ವಾರ್ತಿಸಿದ ಕಲ್ಯಾಣವನ್ನು ಬಿಜ್ಜಳನು ತನ್ನ ರಾಜಧಾನಿ ಮಾಡಿಕೊಂಡನು.

ಕ್ರಿ. ಶ. ೧೧೬೫ನೆಯ ಯಕ್ಸಂಬದ ಶಾಸನದಿಂದ ೨೭ ಬಿಜ್ಜಳನ ಮಹಾಪ್ರಧಾನನೂ ಸೇನಾಧಿಪತಿಯೂ ಆದ ಸಿದ್ದಪಯ್ಯ ದಂಡನಾಯಕನೆಂಬುವನು ಆಗ್ಗೆ ಬಿಜ್ಜಳನ ಕೆಯ್ಕೆಳಗೆ ಹಾನುಂಗಲ್ಲಿನ ಹೆಗ್ಗಡೆಯಾಗಿದ್ದನೆಂದೂ ಕ್ರಿ. ಶ. ೧೧೬೩ನೆಯ ಪಟ್ಟದಕಲ್ಲಿನ ಶಾಸನದಲ್ಲಿ ೨೮ III ತೈಲನ ಮಹಾಮಂಡಳೇಶ್ವರನೆಂದಿರುವ (ಬಡಗಣ) ಸಿಂದ ವಂಶದ II ಚಾವುಂಡನು ಶಾ. ಶ. ೧೦೮೮ ವ್ಯಯ ಸಂ॥ ಪುಷ್ಯಮಾಸದಮಾವಾಸ್ಯೆ ಸೋಮವಾರ ಉತ್ತರಾಯಣ ಸಂಕ್ರಾಂತಿ, ಅಂದರೆ ಇದರಲ್ಲಿ ಹೇಳಿದ ಸಂಕ್ರಾಂತಿ ಸರಿಯಾದರೆ ಕ್ರಿ. ಶ. ೧೧೬೭ ಜನವರಿ ೨೩ ಸೋಮವಾರ ಮಾಘ ಶುದ್ಧ ಪಾಡ್ಯ ಉತ್ತರಾಯಣದಲ್ಲಿಯ ಕುಂಭ ಸಂಕ್ರಾಂತಿಯಂದಿನ, ಅಥವಾ ಇದರಲ್ಲಿ ಹೇಳಿದ ಅಮಾವಾಸ್ಯೆ ಸರಿಯಾದರೆ ಕ್ರಿ. ಶ. ೧೧೬೬ ಜನವರಿ ೩ ಸೋಮವಾರ ಉತ್ತರಾಯಣವಾರಂಭಿಸುವ ಮಕರ ಮಾಸದಲ್ಲಿಯ ಪುಷ್ಯ ಬಹುಳ ಅಮಾವಾಸ್ಯೆಯಂದಿನ ಬೆಣಚಮಟ್ಟಿಯ (ಏ) ಶಾಸನದಿಂದ ೨೯ ಬಿಜ್ಜಳನ ಮಹಾಮಂಡಳೇಶ್ವರನಾಗಿದ್ದನೆಂದೂ ಐಹೊಳೆ, ರೋಣ, ಹಾಗೂ ಸೂಡಿಯ್ಯ ಶಾಸನಗಳಿಂದ

೨೫ ಅದೇ. ಪು. ೪೭೬ f. n. 2 ೨೬ EC VIII ೨೭. F K D. ಪು. ೪೭೬, f. n. 1. ೨೮. ಅದೇ, ಪು. ೪೬೦; ೫೭೫. ೨೯. E I. XX, ಪು. ೧೧೫-೧೧೬.

[೩೦] ಈ II ಚಾವುಂಡನು ಬಿಜ್ಜಳನ ಮಗನಾದ ಸಿರಿಯಾ ದೇವಿಯನ್ನು ಮದುವೆಯಾಗಿದ್ದನೆಂದೂ ತಿಳಿಯುತ್ತದೆ.

ಬಿಜ್ಜಳನ ಹೆಸರು ಬಿಜ್ಜಳ ಎಂದು ಮಾತ್ರವಲ್ಲ, ಬಿಜ್ಜಣ [೩೧] ಎಂದೂ ಬಿಜ್ಜ [೩೨] ಎಂದೂ ಶಾಸನಗಳಲ್ಲಿದೆ. ಇವಲ್ಲಿ ಬಿಜ್ಜ ಎಂಬುದು ವಿಜಯ ಎಂಬುವರ ತದ್ಭವ ಅಥವಾ ಪ್ರಾಕೃತರೂಪ ಎಂದು ಪ್ರತ್ಯಕ್ಷ ವಿದೆ. ಅದಕ್ಕೆ ಸ್ವಾರ್ಥದ ಅಥವಾ ವಾತ್ಸಲ್ಯಾರ್ಥದ ಅಳ-ಅಣ ಪ್ರತ್ಯ ಯಗಳನ್ನು ಹಚ್ಚುತ್ತಲೆ ಬಿಜ್ಜಳ-ಬಿಜ್ಜಣ ಎಂದಾಗುತ್ತದೆ. (ಉದಾಃ- ವಿಷ್ಣು=ವಿಟ್ಟು+ಅಳ=ವಿಟ್ಟಳ; ಶಂಕರ=ಸಂಕ+ಅಣ=ಸಂಕಣ) ವಿಷ್ಣುವರ್ಧನ ಎಂಬ ಹೆಸರು ಸಣ್ಣಿಸಿ ವಿಷ್ಣು ಎಂದೂ ಅದು ತದ್ಭವಿಸಿ ಬಿಟ್ಟ (ಬಿಟ್ಟಿ) ಎಂದೂ ಅದುದಕ್ಕೆ ಇಗ-ಪ್ರತ್ಯಯವನ್ನು ಹಚ್ಚಿ ಬಿಟ್ಟಿಗ ಎಂದಾದ ಮೇರಿಗೆ, ಪ್ರಾಯಶಃ ವಿಜಯಾದಿತ್ಯ ಎಂದೇ ಇದ್ದ ಪೂರ್ಣ ನಾಮವು ಸಣ್ಣಿಸಿ ವಿಜಯ ಎಂದೂ ಅದು ತದ್ಭವಿಸಿ ಬಿಜ್ಜ ಎಂದೂ ಅಲ್ಲಿಂದ ಬಿಜ್ಜಳ-ಬಿಜ್ಜಣ ಎಂದೂ ಆಗಿರಬೇಕು.

ಶಿಕಾರಿಪುರ ೯೨ ರಲ್ಲಿ [೩೩] 'ಮಹಾರಾಜಾಧಿರಾಜ ಪರಮೇಶ್ವರ ಪರಮ ಭಟ್ಟಾರಕ' (ಬಂ. ೪) 'ಶ್ರೀಮದ್ಭುಜಬಳ ಚಕ್ರವರ್ತಿ ತ್ರಿಭುವನ ಮಲ್ಲ ಬಿಜ್ಜಣದೇವಂ' (೮) 'ಇಂತದ್ವಿತೀಯ ಸ್ವಾಮಿತ್ವದಿಂ ವಸುಧಾ ವಳಯಮಂ ಸುಖದಿನೇಕಚ್ಛತ್ರದಿಂ ರಾಜ್ಯಂಗೆಯ್ಯುತ್ತಿರ್ದ್ದಾತ್ಮ ರಾಜ್ಯಭರ ನಿರೂಪಣಂ [೩೪] ಮಾಡಿದಾಮಹಾರಾಜ ಪ್ರಿಯತನಯ' (೧೧-೧೩) 'ರಾಯಮುರಾರಿ ಸೋವಿದೇವ ಚಕ್ರೇಶ್ವರಂ' (೧೭) ಎಂದಿರುವುದರಿಂದ ಕೊನೆಗೆ ಬಿಜ್ಜಳನು ತನ್ನ ರಾಜ್ಯಾಧಿಕಾರಕ್ಕೆ ತನ್ನ ಮಗನಾದ ರಾಯ ಮುರಾರಿ ಸೋವಿದೇವನೆಂಬ ಸೋಮೇಶ್ವರನನ್ನು ನಿರೂಪಿಸಿ, ಅಂದರೆ ಆತನು ತನ್ನ ಉತ್ತರಾಧಿಕಾರಿ ಎಂದು ತೋರಿಸಿಕೊಟ್ಟು, ತನ್ನ ಅಧಿ ಕಾರವನ್ನು ಆತನಿಗೆ ಬಿಟ್ಟುಕೊಟ್ಟು ತಾನು ರಾಜ್ಯಭಾರದಿಂದ ನಿವೃತ್ತ ನಾದನೆಂದು ತಿಳಿಯುತ್ತದೆ. ಈ ಶಾಸನದ ತೇದಿ ಕಳಚುರ್ಯ ವರ್ಷದ ೧೬ನೆಯ ಸರ್ವಧಾರಿ ಸಂ॥ ವೈಶಾಖ ಪೂರ್ಣಿಮೆ ಆದಿತ್ಯವಾರ ಚಂದ್ರ

೩೦—೩೧ E C V III, ಸೊರಬ ೬; ೧೧೭; ೨೬೭; ೨೮೭; ೩೬೨; ೫೬೮.
೩೨. E C. VII ಶಿಕಾರಿಪುರ ೧೨೩; E C I X ದಾವಣಗೆರೆ ೩೫. ೩೩. E. C. VII, ೩೪. ನಿರೂಪಣಂ ವಿಚಾರಾವಲೋಕನಯೋರ್ನಿದರ್ಶನೇ (ಹೇಮ ಚಂದ್ರನ ಅನೇಕಾರ್ಥಸಂಗ್ರಹ-ಶ್ಲೋ.) ೧೯೫೩.



ಗ್ರಹಣ ಸಂಕ್ರಮಣ ಎಂದಿದೆ. ಕಳಚುರ್ಯ ವರ್ಷಗಣನೆಯನ್ನು ಸ್ವಯಂ ಬಿಜ್ಜಳನೇ ಕ್ರಿ. ಶ ೧೧೫೬ ನೆಯ ಧಾತೃ ಸಂವತ್ಸರದಲ್ಲಿ ಸ್ಥಾಪಿಸಿದ ನೆಂದು ಮೇಲೆ ಕಂಡಿರುವುದರಿಂದ, ಅಂದಿನಿಂದ ಅವನ ಆಳಿಕೆಯ ವರ್ಷಗಳ ಸಂಖ್ಯೆಯೂ ಆ ಕಾಲಮಾನದ ವರ್ಷಗಳ ಸಂಖ್ಯೆಯೂ ಒಂದೇ ಆಗಿರಬೇಕು ಮಾತ್ರವಲ್ಲ, ಆ ಮೇರಿಗೆ ಸರ್ವಧಾರಿ ಸಂವತ್ಸ ರವು ಅದರ ೧೩ನೆಯ ವರ್ಷವಾಗುತ್ತದಲ್ಲದೆ ೧೬ನೆಯದಲ್ಲ ಯಲಿಸಿ ರೂರಿನ ಭೋಗೀಶ್ವರ ದೇವಾಲಯದಲ್ಲಿಯ ಬಿಜ್ಜಳನ ೧೨ನೆಯ ವರ್ಷದ ಸರ್ವಜಿತು ಸಂ॥ ಆಶ್ವಯುಜ ಶುದ್ಧ ಹುಣ್ಣಿಮೆ ರವಿವಾರ ಚಂದ್ರಗ್ರಹಣ= ಕ್ರಿ. ಶ. ೧೧೬೭ ಸಪ್ಟಂಬರ ೨೯ ಶುಕ್ರವಾರದ ರಾತ್ರಿಯ ಚಂದ್ರಗ್ರಹಣ ದಂದಿನ ಶಾಸನದಿಂದ [೩೫] ಸರ್ವಜಿತು ಸಂವತ್ಸರವು ಬಿಜ್ಜಳನ ಆಳಿಕೆಯ ೧೨ನೆಯ ವರ್ಷ, ಆತಏವ ಕಳಚುರ್ಯ ಕಾಲದ ೧೨ನೆಯ ವರ್ಷ ಎಂದು ತಿಳಿವುದರಿಂದ, ಸರ್ವಧಾರಿ ಸಂವತ್ಸರವು ಕಳಚುರ್ಯ ವರ್ಷದ ೧೩ನೆಯ ಕ್ರಿ. ಶ. ೧೧೬೮ ಆಗಬೇಕು. ಶಿಕಾರಿಪುರ ೯೨ ಕ್ಕೆ ಸರಿಯಾದ ತೇದಿಯನ್ನು ಗೊತ್ತುಹಚ್ಚುವಲ್ಲಿ ಡಾ॥ ಫ್ಲೀಟರು (Dr Fleet) ಕ್ರಿ. ಶ. ೧೧೬೮ ಏಪ್ರಿಲ್ ೨೪ ಎಂದಿರುತ್ತಾರೆ. [೩೬] ಇದು ಸರಿಯಲ್ಲ, ಏಕೆಂದರೆ ಆ ಏಪ್ರಿಲ್ ೨೪ ರಂದು ವೈಶಾಖ ಪೂರ್ಣಿಮೆಯ ತಿಥಿಯು ವೃಷಭ ಸಂಕ್ರಾಂ ತಿಯೂ ಇದ್ದುದಾದರೆ ಅಂದು ಶಾಸನದಲ್ಲಿ ಹೇಳಿರುವ ಚಂದ್ರಗ್ರಹ ಣವೂ ಇದ್ದಿಲ್ಲ, ವಾರವೂ ಬುಧವಾರವಲ್ಲದೆ ಆದಿತ್ಯವಾರವಲ್ಲ. ಕ್ರಿ. ಶ. ೧೧೫೮ ರಿಂದ ೧೧೭೫ ರ ವರೆಗೆ ವೈಶಾಖ ಪೂರ್ಣಿಮೆಯಂದು ಗ್ರಹಣ ವಿದ್ದಿಲ್ಲದುದರಿಂದ, ಆ ಸರ್ವಧಾರಿಯಲ್ಲಿ ವೈಶಾಖದ ಹಿಂದಣ ಇಲ್ಲವೆ ಮುಂದಣ ಹುಣ್ಣಿಮೆಯಲ್ಲಾದರೂ ಗ್ರಹಣವಿದ್ದಿತೇ ಎಂದು ನೋಡಿ ದರೆ, ಚೈತ್ರ ಶುಕ್ಲ ಹುಣ್ಣಿಮೆ ಆದಿತ್ಯವಾರ ಮೇಷ ಸಂಕ್ರಮಣ, ಅಂದರೆ ಕ್ರಿ. ಶ. ೧೧೬೮ ಮಾರ್ಚ ೨೪ ಆದಿತ್ಯವಾರದ ರಾತ್ರಿಯಲ್ಲಿ ಚಂದ್ರಗ್ರಹಣ ವಿತ್ತು. ಅದೇ ಈ ಶಾಸನದ ನಿಷ್ಕೃಷ್ಟವಾದ ತೇದಿಯಾಗಿರಬೇಕು. ಇದ ರಲ್ಲಿ (ಬಂ. ೧೭—೧೮) ರಾಯಮುರಾರಿ ಸೋವಿದೇವ ಚಕ್ರೇಶ್ವರಂ ಸಮಸ್ತ ಪ್ರಧಾನರಿಂ ಪರಿವೇಷ್ಟಿತನಾಗಿ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರ್ದ' ನೆಂಬುದರಿಂದ, ಬಿಜ್ಜಳನು ಆ ಮುಂಚೆಯೆ ರಾಜ್ಯಾಧಿಕಾರದಿಂದ ನಿವೃತ್ತನಾಗಿ ಆಗ್ಗೆ ಅವನ ಮಗನಾದ ಸೋವಿ

೩೫. SIE (Supp.) ೧೯೨೭, ಪು. ೫; ನಂ. ೬೫. ೩೬. F K D ಪು. ೪೬೭.

ದೇವನ ಪಟ್ಟದಲ್ಲಿದ್ದನೆಂದು ತಿಳಿಯುತ್ತದೆ. ಲಕ್ಕುಂಡಿಯ ಜೈನಬಸದಿಯಲ್ಲಿಯ ಶಾ. ಶ. ೧೦೯೪ ನಂದನ ಸಂ। ಪುಷ್ಯ ಶುದ್ಧ ಹುಣ್ಣಿವೆ ಸೋಮವಾರ ಚಂದ್ರಗ್ರಹಣ=ಕ್ರಿ. ಶ. ೧೧೭೨ ದಿಶಂಬರ ೩೧ ಆದಿತ್ಯವಾರದ ರಾತ್ರಿಯ ಚಂದ್ರಗ್ರಹಣದ ಮಾರನೆಯ ೧೧೭೩ ಜನವರಿ ೧ ಸೋಮವಾರದ ಶಾಸನವು ೩೭ ಸೋವಿದೇವನ ಆಳಿಕೆಯ ೬ನೆಯ ವರ್ಷವೆಂದೂ ಅಲ್ಲಿಯ ಚಂದ್ರಮೌಳೀಶ್ವರ ದೇವಾಲಯದಲ್ಲಿಯ ಜಯ ಸಂ। ಮಾರ್ಗಶಿರ ಅಮಾವಾಸ್ಯೆ ಸೂರ್ಯ ಗ್ರಹಣ=ಕ್ರಿ. ಶ. ೧೧೭೪ ನವಂಬರ ೨೫ ಸೋಮವಾರ ಸೂರ್ಯಗ್ರಹಣದಂದಿನ ಶಾಸನವು ೩೮ ಅವನ ೮ನೆಯ ವರ್ಷವೆಂದೂ ಅವಲ್ಲಿ ಹೇಳಿರುವುದರಿಂದ, ಆತನು ಕ್ರಿ. ಶ ೧೧೬೭ನೆಯ ಸರ್ವಜಿತು ಸಂವತ್ಸರದಲ್ಲಿಯೇ ಪಟ್ಟವೇರಿರಬೇಕು. ಅಂದರೆ ಮೇಲೆ ಕಂಡಿರುವ ಭೋಗೀಶ್ವರ ದೇವಾಲಯದಲ್ಲಿಯ ಸ್ವಯಂ ಬಿಜ್ಜಳನ ಆಳಿಕೆಯ ಶಾಸನದ ಕ್ರಿ. ಶ. ೧೧೬೭ ಸಪ್ಟಂಬರ ೨೯ ರ ಹಾಗೂ ಶಿಕಾರಿಪುರ ೯೭ನೆಯ ಶಾಸನದ ಕ್ರಿ ಶ. ೧೧೬೮ ಮಾರ್ಚಿ ೨೪ ರ ನಡುವೆ ಬಿಜ್ಜಳನು ರಾಜ್ಯಾಭಾರದಿಂದ ನಿವೃತ್ತನಾಗಿ ಸೋವಿದೇವನು ಪಟ್ಟವೇರಿರಬೇಕು. ಅತಏವ ಅದೇ ೧೧೬೮ ಮಾರ್ಚಿ ೨೪ ರ ಚಂದ್ರಗ್ರಹಣದಂದು ಬಿಜ್ಜಳನು ಕಲ್ಯಾಣದಲ್ಲಿ ಕೆಲವು ಜೈನರಿಗೆ ದತ್ತಿ ಬಿಟ್ಟನೆಂದು ನದಿಹರನ ಹಳ್ಳಿಯ ಶಾಸನದಲ್ಲಿ ೩೯ ಹೇಳಿರುವಲ್ಲಿ, ಆಗ್ಗೆ ಬಿಜ್ಜಳನು ಇನ್ನೂ ಅರಸನಾಗಿ ಕಲ್ಯಾಣದಲ್ಲಿ ಆಳುತ್ತಿದ್ದನೆಂದಲ್ಲ, ಆಗ್ಗೆಯೂ ಜೀವಂತನಾಗಿದ್ದನಷ್ಟೇ ಎಂದು ತಿಳಕೊಳ್ಳಬೇಕು.

ಶಾ. ಶ. ೧೦೯೪ ನಂದನ ಸಂ॥ ಚೈತ್ರಶುದ್ಧ ದಶಮಿ ಸೋಮವಾರ= ಕ್ರಿ. ಶ. ೧೧೭೨ ಮಾರ್ಚಿ ೬ ಸೋಮವಾರದ ಸೊರಬ ೩೮೯ ರಲ್ಲಿಯೂ ೪೦ ತೇದಿಯಿಲ್ಲದ ಶಿಕಾರಿಪುರ ೧೬೧ ರಲ್ಲಿಯೂ ೪೧ ಸೋವಿದೇವನ ನೆಲೆವೀಡು ಅಂದರೆ ರಾಜಧಾನಿ ಕಲ್ಯಾಣವೆಂದೂ ಕ್ರಿ. ಶ. ೧೧೭೦ ಕುಕ್ಕನೂರಿನ ಹಾಗೂ ೧೧೭೩ ರ ಕಾಳಗಿಯ ಶಾಸನಗಳಲ್ಲಿ ೪೨ ಮೊದೆಗನೂರು ಅವನ ನೆಲೆವೀಡೆಂದೂ ಕ್ರಿ. ಶ. ೧೧೭೩ ಜೂನು ೧೮ ರ ಶಾಸ

೩೭. S I E (Supp) ೧೯೩೬ ಪು. ೩. ನಂ. ೩೦. ೩೮ ಅದೇ ಪು. ೪ ನಂ; ೪೭. ೩೯ ಕ. ಸಾ ಪತ್ರಿಕೆ XXIII, ಪು. ೨೭೨ ೪೦. EC VII ೪೧. ECVII ೪೨. FKD. ಪು. ೪೮೫, F. N. 4.



ನದಲ್ಲಿ ೪೩ ಅವನು ಮಂಗಳವಾಡದಲ್ಲಿ ಆಳುತ್ತಿದ್ದನೆಂದೂ ಭಿವಶಾ ಟದ ಶಾಸನದಲ್ಲಿ ೪೪ ಅವನು ಮಂಗಳವಾಡದಲ್ಲಿ ಸ್ಥಿರ ಶಿಬಿರದಲ್ಲಿದ್ದನೆಂದೂ ಹೇಳಿರುವುದರಿಂದ, ಕಲ್ಯಾಣ ಮಾತ್ರವಲ್ಲ ಮೊದೆಗನೂರು ಮಂಗಳವಾಡವೂ ಅವನ ರಾಜಧಾನಿಗಳಾಗಿರಬೇಕು. ತೇದಿಯಿಲ್ಲದ ಹಾವೇರಿಯ ಒಂದು ಕಲ್ಲಿನ ೪೫ ಸಿದ್ಧಪಯ್ಯನೆಂಬುವನು ಸೋವಿದೇವನ ದಂಡನಾಯಕನಾಗಿದ್ದನೆಂದು ಹೇಳಿದೆ. ಈತನು ಬಿಜ್ಜಳನಲ್ಲಿಯೂ ದಂಡನಾಯಕನಾಗಿದ್ದನೆಂದು ಮೇಲೆ ಕಂಡಿರುವ ಸಿದ್ಧಪಯ್ಯನಾಗಿರಬಹುದು.

ಕ್ರಿ. ಶ. ೧೧೭೭ರಲ್ಲಿ ಸೋವಿದೇವನು ಕಾಲವಾದ ಮೇಲೆ ಅವನ ತಮ್ಮನಾದ ನಿಶ್ಶಂಕಮಲ್ಲ ಸಂಕಮನು ಆಳಿದನು. ಶಾ. ಶ. ೧೧೦೨ ಶಾರ್ವರಿ ವೈಶಾಖ ಶುದ್ಧ ೮ ಸೋಮವಾರ = ಕ್ರಿ. ಶ. ೧೧೭೯ ಏಪ್ರೀಲ್ ೧೬ ಸೋಮವಾರ ಹೊನ್ನಾಳಿ ೫೦ರಿಂದಲೂ ೪೬ ತೇದಿಯಿಲ್ಲದ ದಾವಣಗೆರೆ ೪೪ ರಿಂದಲೂ ೪೭ ಕಲ್ಯಾಣವು ಸಂಕಮನ ನೆಲೆವೀಡೆಂದೂ ಕ್ರಿ. ಶ. ೧೧೭೮ನೆಯ ಕುಕ್ಕನೂರಿನ ಶಾಸನದಿಂದ ೪೮ ಅವನ ನೆಲೆವೀಡು ಮೊದೆಗನೂರೆಂದೂ ತಿಳಿಯುವುದರಿಂದ ಅವನಿಗೆ ಎರಡಾದರೂ ರಾಜಧಾನಿಗಳಿರಬೇಕು. ಕ್ರಿ. ಶ. ೧೧೮೧ರಲ್ಲಿ ಸಂಕಮನ ಕಾಲಾನಂತರ ಅವನ ತಮ್ಮನಾದ ವೀರನಾರಾಯಣ ಆಹವಮಲ್ಲನು ಆಳತೊಡಗಿದನು. ಶೋಭಕೃತು ಸಂ। ಆಷಾಡ ಬಹುಳ ಪಂಚಮಿ ಸೋಮವಾರ = ಕ್ರಿ. ಶ. ೧೧೮೩ ಜುಲಾಯಿ ೧೧ ಸೋಮವಾರದ ಶಿಕಾರಿಪುರ ೧೯೯ನೆಯ ಶಾಸನವು ೪೯ ಆಹವಮಲ್ಲನ ಆಳಿಕೆಯ ಕೊನೆಯದೆಂದು ತೋರುತ್ತದೆ. ಕ್ರಿ. ಶ. ೧೧೮೩ರಲ್ಲಿ ಆಹವಮಲ್ಲನು ಕಾಲವಾದ ಅವನ ತಮ್ಮ ಸಿಂಘಣನು ೫೦ ಆಳತೊಡಗಿದ ಕಿರುಗಾಲದಲ್ಲಿಯೇ ಆ ಮುಂಚೆ ಸೋವಿದೇವನ ಕೆಯ್ಕೆಳಗೆ ಮಹಾಪ್ರಧಾನನೂ ಸೇನಾಧಿಪತಿಯೂ ಆಗಿದ್ದ ಬಮ್ಮ ದೇವರಸನೆಂಬುವನು ಈಗ ಚಾಳುಕ್ಯ ರಾಜ್ಯ ಪ್ರತಿಷ್ಠಾಪಕನೆಂದು ಮುಂದೆ ಬಂದು ಕಳಚುರ್ಯ ಅರಸನನ್ನು ಕೆಳತಳ್ಳಿ ಚಾಳುಕ್ಯ

೪೩. ಕ. ಸಾ. ಪತ್ರಿಕೆ XXIII ಪು. ೨೭೯. ೪೪. ಹರಿಹರದೇವ, ಪು. ೪೪. ೪೫. SIE (Aqpendixd) ಪು ೯೯ ನಂ. ೬೯ ೪೬. E C VII, ೪೭. E C XI ೪೮. F K D ಪು. ೪೩೭ ೪೯. E C VII ೫೦. ಕ್ರಿ. ಶ. ೧೧೮೪ ಅಕ್ಟೋಬರ ೧೮ ನೆಯ ಚೀಹಟ್ಟಿ ಅದೊಂದೇ ಸಿಂಘಣ ಶಾಸನವಿದೆ. (F KD ಪು. ೪೮೯.)

III ತೈಲನ ಮಗನಾದ ತ್ರಿಭುವನಮಲ್ಲ IV ವೀರ ಸೋಮೇಶ್ವರನನ್ನು ಚಾಳುಕ್ಯ ಚಕ್ರವರ್ತಿ ಎಂಬ ಬಿರುದಿನೊಂದಿಗೆ ಕ್ರಿ. ಶ. ೧೧೮೪ರಲ್ಲಿ ಅವನ ಹಿರಿಯರ ಸಿಂಹಾಸನದಲ್ಲಿ ಕುಳ್ಳಿರಿಸುತ್ತಲೆ ಕಳಚುರ್ಯರ ಸಾಮ್ರಾಜ್ಯವು ವಿಧ್ವಸ್ತವಾಯಿತು.

ಚಾಳುಕ್ಯ IV ಸೋಮೇಶ್ವರನ ಆಳಿಕೆಯ ಪ್ರಾಯಶಃ ಮೊತ್ತಮೊದಲಿನ ಕ್ರಿ. ಶ. ೧೧೮೪ ನವಂಬರ ೫ ರ ಮಲಕಪುರದ ಶಾಸನದಿಂದ [೫೦] ಸೌಮ್ಯ ಸಂ। ಜ್ಯೇಷ್ಠ ಶುದ್ಧ ೩ ಸೌರಿ (= ಶನಿ)ವಾರ = ಕ್ರಿ. ಶ. ೧೧೮೯ ಏಪ್ರೀಲ್ ೩೦ರ ಸೊರಬ ೧೭೯ನೆಯ ಶಾಸನದ ವರೆಗಣ ಶಾಸನಗಳಿಂದ ತೋರುವ ಮೇರೆಗೆ ಆನಡುವೆ ಆತನ ಸಾಮ್ರಾಜ್ಯವು ಅಷ್ಟರ ಮಟ್ಟಿಗೆ ಕುಂದಿಲ್ಲವಾದರೂ ಆ ಮೇಲಣ ಕ್ರಿ. ಶ. ೧೧೮೯ರ ಮುತ್ತಗೆಯ ಹಾಗೂ ಅಣ್ಣಿಗೆರೆಯ ಶಾಸನಗಳಿಂದ [೫೨] ದೇವಗಿರಿಯ ಯಾದವ ವಂಶದ ಭಿಲ್ಲಮನು (೧೧೮೭–೯೧) ಚಾಳುಕ್ಯ ರಾಜ್ಯದ ಬಡಗಣ ಮತ್ತು ಮೂಡಣ ಭಾಗಗಳನ್ನು ಕ್ರಿ. ಶ. ೧೧೯೨ರ ಗದುಗಿನ ಹಾಗೂ ಬೆಳಗಾಮಿಯ ಶಾಸನಗಳಿಂದ [೫೩] ಹೊಯ್ಸಳ II ವೀರಬಲ್ಲಾಳನು (೧೧೭೩-೧೨೨೦) ತೆಂಕಣ ಭಾಗಗಳನ್ನೂ ಗೆದ್ದುಕೊಂಡರೆಂದು ತಿಳಿಯುವುದರಿಂದ, ೧೧೮೯ರಿಂದ ಮುಂದೆ ಚಾಳುಕ್ಯ ರಾಜ್ಯವು ದಿನೇದಿನೇ ಹ್ರಸ್ವವಾಗುತ್ತಲಿರಬೇಕು. IV ಸೋಮೇಶ್ವರನ ಆ ಮೇಲಣ ಶಾಸನಗಳು ಆತನ ರಾಜ್ಯದ ಬಡಗಲಲ್ಲಿ ದೊರೆಯದೆ ತೆಂಪಡುವಲಲ್ಲಿ ಮಾತ್ರ ಕೆಲವೇನೋ ದೊರೆವುದರಿಂದ, ಅವುಗಳಲ್ಲಿ (ಉದಾ— ಮುಂದೆ ಕಾಣುವ ಕ್ರಿ. ಶ. ೧೧೯೮ರ ಚಿತ್ರದುರ್ಗ ೩೬) ಆತನಿಗೆ 'ಮಹಾರಾಜಾಧಿರಾಜ ರಾಜಪರಮೇಶ್ವರ ಪರಮಭಟ್ಟಾರಕ' ಎಂಬ ಚಕ್ರವರ್ತಿತ್ವದ ಬಿರುದನ್ನು ಹೇಳಿದೆಯಾದರೂ, ಆತನು ಕ್ರಿ. ಶ. ೧೧೯೮ರಿಂದ ಮುಂದೆ ಹೆಸರಿಗಷ್ಟೇ ಚಕ್ರವರ್ತಿಯಾಗಿದ್ದು ತನ್ನ ರಾಜ್ಯದ ತೆಂಪಡುವಣ ಕೆಲವು ಸೀಮೆಗಳನ್ನಷ್ಟೇ ಆಳುತ್ತಿರಬೇಕು. ಆತನ ಕಟ್ಟಕಡೆಯದಾದ ಶಾ. ಶ. ೧೧೨೧ ಕಾಳಯುಕ್ತ ಸಂ। ಮಾಘ ಶುದ್ಧ ಪಾಡ್ಯ ಸೋಮವಾರ ಸೂರ್ಯಗ್ರಹಣದಂದಿನ, ಅಂದರೆ (ಕ್ರಿ. ಶ. ೧೧೮೧ರಿಂದ ೧೨೨೭ರ ವರೆಗೆ ಪುಷ್ಯ

೫೦. Indian Antiquary (I A), ೪೮ (೧೯೧೯), ಪು. ೫ ೫೧. EC VIII
೫೨. FKD ಪು. ೪೬೭ ೫೩. ಅದೇ ಪು. ೪೬೬



ಬಹುಳ ಅಮಾವಾಸ್ಯೆಯಂದು ಗ್ರಹಣವಿದ್ದಿಲ್ಲದುದರಿಂದ) ಕ್ರಿ. ಶ. ೧೧೯೮ ಫೆಬ್ರುವರಿ ೮ ಆದಿತ್ಯವಾರ ಮಾಘ ಬಹುಳ ಅಮಾವಾಸ್ಯೆಯ ಸೂರ್ಯಗ್ರಹಣದ ಮಾರನೆಯ ಫೆಬ್ರುವರಿ ೯ ಫಾಲ್ಗುಣ ಶುದ್ಧ ಪಾಡ್ಯ ಸೋಮವಾರದ ದಿನ ಚಿತ್ರದುರ್ಗ ೩೬ನೆಯ ಶಾಸನದಲ್ಲಿ [೫೪] ಆತನ ನೆಲೆವೀಡು ಜಯಂತೀಪುರ ಅಂದರೆ ಬನವಾಸಿ ಎಂದಿರುವುದರಿಂದ, ಪ್ರಾಯಶಃ ಆ ಮುಂಚಿನಿಂದಲೆ ಬನವಾಸಿ ಆತನ ರಾಜಧಾನಿಯಾಗಿರಬೇಕು. ಇದರ ಬಳಿಕ ಆತನ ಶಾಸನವೂ ಇಲ್ಲ, ಆತನ ಬಳಿಕ ಚಾಳುಕ್ಯರ ರಾಜ್ಯವೂ ಇಲ್ಲ.

IV ಸೋಮೇಶ್ವರನ ಶಾಸನಗಳಿಂದ ಅವನ ಮೊತ್ತ ಮೊದಲಿನ ರಾಜಧಾನಿ ಧಾರವಾಡ ಜಿಲ್ಲೆಯ ಅಣ್ಣಿಗೆರಿ ಎಂದು ತಿಳಿಯುತ್ತದೆ. ಕ್ರಿ. ಶ. ೧೧೮೫ ರ ಪ್ರಾಯಶಃ ಅದೊಂದು ಶಾಸನದಲ್ಲೇನೋ [೫೫] ಅವನು ಕಲ್ಯಾಣದ ನೆಲವೀಡಿನಲ್ಲಿ ಇದ್ದನೆಂದರೂ ಶಾ. ಶ. ೧೧೦೮ ಪ್ಲವಂಗ ಸಂ। ಆಶ್ವಯುಜ ಪೂರ್ಣಿಮೆ ೭ ವಾರ(= ಶನಿವಾರ) ಚಂದ್ರಗ್ರಹಣ = ಕ್ರಿ. ಶ ೧೧೮೬ ಸಪ್ತಂಬರ ೧೮ ಶುಕ್ರವಾರದ ರಾತ್ರಿಯ ಚಂದ್ರಗ್ರಹಣದ ಮೂರನೆಯ ಸಪ್ತಂಬರ ೧೯ ಶನಿವಾರದಂದಿನ ಚಿತ್ರದುರ್ಗ ೩೩ ನೆಯ ಶಾಸನದಲ್ಲಿಯೂ [೫೭] ಮೇಲೆ ಕಂಡಿರುವ ಕ್ರಿ. ಶ. ೧೧೯೮ ಫೆಬ್ರುವರಿ ೯ ರ ಚಿತ್ರದುರ್ಗ ೩೬ ನೆಯ ಶಾಸನದಲ್ಲಿಯೂ ಜಯಂತೀಪುರವೆಂಬ ಬನವಾಸಿಯನ್ನು ಅವನ ನೆಲೆವೀಡು ಎಂದಿರುವುದರಿಂದ, ಪ್ರಾಯಶಃ ೧೧೮೬ ರಿಂದಲೆ ಬನವಾಸಿ ಅವನ ರಾಜಧಾನಿಯಾಗಿರಬೇಕು. ಹೇಗೂ ಕಲ್ಯಾಣವು ಅವನ ರಾಜಧಾನಿಯಾಗಿತ್ತಾದರೂ ಹೆಚ್ಚಾದರೆ ಒಂದೆರಡು (೧೧೮೫- ೮೬) ವರ್ಷಗಳಿಗಷ್ಟೇ. ಅತಏವ ಚಾಳುಕ್ಯ ಸಾಮ್ರಾಜ್ಯವನ್ನು ಇತ್ತಣಿಂದ ಒಬ್ಬ, ಅತ್ತಣಿಂದ ಒಬ್ಬನಂತೆ ಬಾಚಿ ಹರಿಹಂಚಿಕೊಂಡ II ವೀರಬಲ್ಲಾಳನಾಗಲಿ ಹೇಮಾದ್ರಿಯ ವ್ರತಖಂಡದಿಂದ [೫೮] 'ಕಲ್ಯಾಣಶ್ರಿಯಮಪ್ಯವಾಪ್ಯ' ಎಂದು ತಿಳಿವ ಭಿಲ್ಲಮನಾಗಲಿ ಕಲ್ಯಾಣವನ್ನು ರಾಜಧಾನಿ ಮಾಡಿಕೊಂಡಿಲ್ಲದುದರಿಂದ, ಪಡುವಣ ಚಾಳುಕ್ಯ I ತೈಲನಿಂದ (೯೭೩ ೯೯೭) III ತೈಲನ (೧೧೪೯-೬೩) ವರೆಗೆ ಆ ಚಾಳುಕ್ಯರ ರಾಜ

೫೪. EC XI, ೫೫. FKD ಪು. ೪೬೫ ೫೬. ಅದೇ f, n 6 ೫೭. E CXI ೫೮. Bhandarkar's Early History of the Dekkan (EHD) ೧೯೨೮ Appendix C, ಪು. ೨೪೩.

ಧಾನಿಯೂ ಆಮೇಲೆ ಕಳಚುರ್ಯರ ರಾಜಧಾನಿಯೂ ಆಗಿದ್ದ ಕಲ್ಯಾಣದ ದೀರ್ಘ ಸೌಭಾಗ್ಯಕ್ಕೆ IV ಸೋಮೇಶ್ವರನ ರಾಜ್ಯವು ಆಳಿದಂದಿನಿಂದಲೂ ಅಲ್ಲ, ಆತನು ತನ್ನ ರಾಜಧಾನಿಯನ್ನು ಇತರತ್ರ ಒಯ್ದಂದಿನಿಂದಲೂ ಅಲ್ಲ, ಕಳಚುರ್ಯ ಸೋವಿದೇವನೂ ಅವನ ಸೋದರರೂ ಕಲ್ಯಾಣದಲ್ಲಿ ಅಷ್ಟು ಆಸ್ಥೆಯಿಲ್ಲದೇನೋ ತಮ್ಮ ರಾಜಧಾನಿಗಳನ್ನು ಅನ್ಯತ್ರವೂ ಇರಿಸಿದಂದಿನಿಂದ, ಹೇಗೂ ಕಳಚುರ್ಯರ ಉತ್ಪಾಟನವಾದಂದಿನಿಂದ, ಇಳಿಗಾಲಾಗಿರಬೇಕು, ಭಿಲ್ಲಮನು ಕಲ್ಯಾಣವನ್ನು ಕೊಂಡಂದಿನಿಂದ ಅದರ ಜೀವಕಳೆಗೆ ಇತಿಶ್ರೀ ಆಗಿರಬೇಕು.

(ಮುಂದುವರಿಯುವುದು)

---



# ತೆಲುಗು ಬಸವಪುರಾಣದ ಮುನ್ನುಡಿ.

ಅನುವಾದಕರು:—ಶ್ರೀಯುತ ಎಸ್. ಹಂಪಯ್ಯ ಏಜೆಂಟ್
ಶ್ರೀಮನ್ನಿಡುಮಾಮಿಡಿಯ ಮಠ ಗೂಳೂರು.

(ಹಿಂದಿನಿಂದ ಮುಂದೆ ಸಾಗಿದ್ದು.)

## ಸಾಧನೆಯು.

ಸಾಧಕನಿಗೆ ದುಃಖವನ್ನು ತೊಲಗಿಸಿ ಸುಖಪ್ರಾಪ್ತಿಯನ್ನುಂಟು ಮಾಡುವದಕ್ಕೆ ಶಿವಾತ್ಮಕವಾದ ವಿಶ್ವವು ಸಿದ್ಧವಾಗಿರುತ್ತಿದೆ. ದೇಶಕಾಲಗಳ ಮತ್ತು ಪಾತ್ರಾಪಾತ್ರರುಗಳ ಸಂಸ್ಕಾರಕ್ಕನುರೂಪವಾಗಿ ಅನೇಕ ವಿಧಗಳಾದ ಸಾಧನೆಗಳನ್ನು ಮಹಾನುಭಾವರು ಕಲ್ಪಿಸಿರುತ್ತಾರೆ. ಇವುಗಳನ್ನು ಅನುಸರಿಸಿ ಸಾಧಕರು ತಮ್ಮ ಕರ್ತವ್ಯಗಳನ್ನು ಸಾಧಿಸಬಹುದು. ವೈದಿಕ, ಬೌದ್ಧ, ಜೈನ, ಶೈವ, ವೈಷ್ಣವ, ಶಾಕ್ತೇಯಾದಿ ಭಾರತೀಯ ಮತಗಳೂ, ಯೂಧ, ಕ್ರೈಸ್ತ, ಮಹಮ್ಮದೀಯ ಮತಗಳೂ, ಷಡ್ದರ್ಶನಗಳೂ, ಕರ್ಮ, ಜ್ಞಾನ, ಭಕ್ತಿ, ಹಟ, ಸನ್ಯಾಸಾದಿ ಯೋಗಗಳೂ ಸಹಾ ಕೈವಲ್ಯಪ್ರಾಪ್ತಿಗೆ ಸಾಧನಗಳಾಗಿರುತ್ತಿರುವವು. ಸಾಧಕನಿಗೆ ಧರ್ಮಕ್ಷೇತ್ರವಾದ ಶರೀರದಲ್ಲಿಯೇ ಸಕಲ ಸಾಧನಗಳೂ ಪ್ರತ್ಯಕ್ಷವಾಗುತ್ತಿವೆ. ದೇಹೇಂದ್ರಿಯವಶೀಕರಣವು ಸಾಧನೆಗಳಿಗೆಲ್ಲಾ ಮೂಲವಾದದ್ದು. ಸಾಧಕನು ಜೀವಯಾತ್ರೆಯಲ್ಲಿ ದೇಹೇಂದ್ರಿಯಸಾಧನಗಳನ್ನು ದೇಹಯಾತ್ರೆಗೆ ವಿನಿಯೋಗಿಸುವದಾದರೆ ದುಃಖವೂ, ಆತ್ಮಯಾತ್ರೆಗಾಗಿ ವಿನಿಯೋಗಿಸುವದರೆ ಅದರಿಂದ ಸುಖವೂ ದೊರೆಯುತ್ತದೆ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಜೀವಯಾತ್ರೆ ಮತ್ತು ಆತ್ಮಯಾತ್ರೆಗಳನ್ನು ಆಚರಿಸತಕ್ಕ ವಿಧಾನವನ್ನು ಸ್ಪಷ್ಟವಾಗಿ ಬೋಧಿಸಿರುವನು.

ಶ್ಲೋ॥ ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ
ತದರ್ಥಂ ಕರ್ಮಕೌಂತೇಯ ಮುಕ್ತಸಙ್ಗಸ್ಸಮಾಚರ
ಯಜ್ಞಶಿಷ್ಟಾಶಿನಸ್ಸಂತೋ-ಮುಚ್ಯಂತೇ ಸರ್ವಕಿಲ್ಬಿಷೈಃ
ಯೇಽಪದಸ್ತ್ವಾತ್ಮಕಾರಣಾತ್॥
ತೇತ್ವಘಂಭುಞ್ಜತೇ ಪಾಪಾಃ

ಮಾನವರು ಆತ್ಮಾರ್ಥವಾದ ಯಜ್ಞವನ್ನಾಚರಿಸುವದಾದರೆ ಪುಣ್ಯವೂ, ಕರ್ಮ ದೇಹಾರ್ಥವಾಗಿ ಆಚರಿಸುವದಾದರೆ ಪಾಪವನ್ನೂ ಹೊಂದುತ್ತಾರೆ.

ಗಳನ್ನು ಪರಹಿತಾರ್ಥವಾಗಿ ಮಾಡುವವರಿಂದ ಮೋಕ್ಷವನ್ನೂ, ಸ್ವಕಾ
ಮ್ಯಾರ್ಥವಾಗಿ ಮಾಡುವವರಿಂದ ಬಂಧನವನ್ನೂ ಹೊಂದುವರು. ಎಂ
ಗೀತಾವಾಕ್ಯಗಳ ಪವಿತ್ರಭಾವವನ್ನೇ ವೀರಶೈವವು ಗುರು, ಲಿಂಗ,
ಜಂಗಮ ರೂಪಗಳಲ್ಲಿ ಸಾರ್ಥಕಪಡಿಸುತ್ತಿದೆ. ಸಾಧಕನು ಲಿಂಗರೂ
ಪವನ್ನು ಆರಾಧಿಸುವದರಲ್ಲಿ ಪ್ರಪಂಚವನ್ನೂ ದೇಹ ಭ್ರಾಂತಿಯನ್ನೂ
ಮರೆಸಿ ಶಿವಧ್ಯಾನ ತತ್ಪರನಾಗುತ್ತಾನೆ. ದೇಹದಲ್ಲಿ ಕರ್ಮೇಂದ್ರಿಯಗಳೂ,
ಜ್ಞಾನೇಂದ್ರಿಯಗಳೂ, ಪಂಚಭೂತಗಳನ್ನು ಆಶ್ರಯಿಸಿ, ವಿಷಯಾದಿಗ
ಳನ್ನು ಭೋಗಿಸುತ್ತ, ಜೀವಸ್ವರೂಪವನ್ನು ಮರೆಮಾಜುತ್ತಿರುವವು.
ಜೀವಸ್ವರೂಪವನ್ನು ಕಂಡುಹಿಡಿಯುವುದಕ್ಕೆ ವಿಷಯಾದಿಗಳೆಲ್ಲವನ್ನೂ
ಆತ್ಮಾರ್ಪಣ ಮಾಡುತ್ತ ಮನೋನಿಗ್ರಹವನ್ನು ಸಾಧಿಸುವದೇ ಮುಖ್ಯ
ಮಾರ್ಗವೆಂದು ಮಹಾತ್ಮರುಗಳು ಬೋಧಿಸಿರುವರು. ವೇದಾಂತಿಗಳು
ವೇದಗಳಿಂದಲೂ, ಯೋಗಿಗಳು ಯೋಗಮಾರ್ಗದಿಂದಲೂ, ಕರ್ಮೋಪಾ
ಸಕರು ಯಜ್ಞಗಳಿಂದಲೂ, ಆಗಮಜ್ಞರು ಆಗಮಗಳಿಂದಲೂ, ಈ ಪರಮ
ರಹಸ್ಯಗಳನ್ನು ಬೋಧಿಸುತ್ತಿರುವರು. ಸಾಧಕರು ಇಂದ್ರಿಯಗಳನ್ನು
ಮನಸ್ಸಿನಲ್ಲಿಯೂ, ಮನಸ್ಸನ್ನು ಚಿತ್ತವಿಕಾಸದಲ್ಲಿಯೂ, ಚಿತ್ತವನ್ನು ಬುದ್ಧಿ
ಯಲ್ಲಿಯೂ, ಬುದ್ಧಿಯನ್ನು ಅಹಂಕಾರದಲ್ಲಿಯೂ ಲಯವಾಗುವಂತೆ
ಮಾಡಿ ಬ್ರಹ್ಮಾನಂದವನ್ನು ಅನುಭವಿಸುವುದಕ್ಕೆ ಲಿಂಗನಿರೀಕ್ಷಣೆಯು
ಪರಮ ಸಾಧನವೆಂದು ವೀರಶೈವವು ಬೋಧಿಸುತ್ತಿರುವದು. ಸಹಸ್ರಾ
ರದಲ್ಲಿ ಪರಂಜ್ಯೋತಿಯಾಗಿ ಪ್ರಕಾಶಿಸುತ್ತಿರುವ ಪರಬ್ರಹ್ಮವನ್ನು ಸಂದ
ರ್ಶಿಸುವುದಕ್ಕೆ ದೇಹೇಂದ್ರಿಯಗಳು ಜ್ಯೋತಿಸ್ವರೂಪವನ್ನು ಹೊಂದಬೇಕು.
ಇಂದ್ರಿಯಾದಿಗಳನ್ನು ಜಯಿಸಿ ಆತ್ಮಪ್ರಸಾದವನ್ನು ಪಡೆಯುವವಕ್ಕೆ
ದೇಹವು ಮಂತ್ರಪೂರಿತವಾಗಿ ಚಿನ್ಮಯ ರೂಪವನ್ನು ಪಡೆಯಬೇಕು.
ಭೂತಶುದ್ಧಿ ಯೋಗವು ಪ್ರತಿಪಾದಿಸಿರುವ ಷಟ್‌ಚಕ್ರ ನಿರೂಪಣವನ್ನು
ವೀರಶೈವವು ಷಟ್‌ಸ್ಥಲಪೂಜ, ಷಟ್‌ಲಿಂಗದರ್ಶನ ರೂಪದಿಂದ ಭಕ್ತ
ರಿಗೆ ಸಮನ್ವಯಮಾಡುತ್ತಿರುವದಾಗಿದೆ. ವೈದಿಕ ಮತದಲ್ಲಿಯೂ ಕಾಮ್ಯಾ
ರ್ಥಗಳಿಗೂ, ಮೋಕ್ಷಸಾಧನೆಗೂ ಮಂತ್ರೋಪಾಸನೆಯೇ ಪ್ರಾಮುಖ್ಯವೆಂ
ಬುವ ವಿಧಾನವನ್ನು ವೇದಗಳೂ, ವೇದಾಂಗಗಳೂ, ವಿಶದಪಡಿಸುತ್ತಿರು
ವವು. ಭೂತಶುದ್ಧಿಗೂ, ಕೈವಲ್ಯಪದವಿಗೂ, ಪಂಚಾಕ್ಷರೀ ಮಂತ್ರವೇ
ಪ್ರಧಾನವೆಂದು ವೀರಶೈವವು ವ್ಯಕ್ತಪಡಿಸುತ್ತಿದೆ. ಆ ಮಹಾ ಮಂತ್ರವು
ಷಟ್‌ಚಕ್ರಗಳನ್ನೂ, ಷಟ್‌ಸ್ಥಲಗಳನ್ನೂ ಭೇದಿಸಿ ನಾದರೂಪದಿಂದ



ಸಹಸ್ರಾರ ಚಕ್ರದಲ್ಲಿ ಸದಾಶಿವನ ರೂಪದಿಂದ ಬೆಳಗುತ್ತಿರುವ ವಿಧಾನ
ವನ್ನು ಶಂಕರಾಚಾರ್ಯರು ಸೌಂದರ್ಯಲಹರಿಯಲ್ಲಿ ಮನೋಹರವಾಗಿ
ವರ್ಣಿಸಿದ್ದಾರೆ.

( ಸೌಂದರ್ಯಲಹರಿ. ೧೪ )

ಶ್ಲೋ॥ ಕ್ಷಿತೌಷಟ್ಪಞ್ಚಾಶದ್ದ್ವಿಸಮಧಿಕ ಪಞ್ಚಾಶದುದಕೇ
ಹುತಾಶೇದ್ವಾಷಷ್ಟಿಶ್ಚತುರಧಿಕಪಞ್ಚಾಶದನಿಲೇ
ದಿವಿದ್ವಿಷ್ಷಟ್ತ್ರಿಂಶನ್ಮನಸಿಚ ಚತುಷ್ಷಷ್ಟಿರಿತಿಯೇ
ಮಯೂಖಾಸ್ತೇಷಾಮಪ್ಯುಪರಿತ ಪಸಾದಾಮ್ಬುಜಯುಗಮ್

೩೫. ಶ್ಲೋ॥ ಮನಸ್ತ್ವಂವ್ಯೋಮತ್ವಂ ಮರುದಸಿಮರುತ್ಸಾರಥಿರಸಿ
ತ್ವಮಾಪಸ್ತ್ವಂಭೂಮಿಸ್ತ್ವಯಿ ಪರಿಣತಾಯಾಂ ನಹಿಪರಮ್
ತ್ವಮೇವ ಸ್ವಾತ್ಮಾನಂ ಪರಿಣಮಯಿತುಂ ವಿಶ್ವವಪುಷಾ
ಚಿದಾನನ್ದಾಕಾರಂ ಶಿವಯುವತಿಭಾವೇನವಿಭೃಷೇ

( ಭಗವದ್ಗೀತೆ ೩ ಅ. ೧೦-೧೧ )

ಶ್ಲೋ॥ ಸಹಯಜ್ಞಾಃಪ್ರಜಾಸ್ಸೃಷ್ಟ್ವಾಪುರೋವಾಚ ಪ್ರಜಾಪತಿಃ
ಅನೇನಪ್ರಸವಿಷ್ಯಧ್ವಮೇಷವೋಽಸ್ತ್ವಿಷ್ಟಕಾಮಧುಕ್
ದೇವಾನ್ಭಾವಯತಾನೇನತೇದೇವಾ ಭಾವಯನ್ತುವಃ
ಪರಸ್ಪರಂ ಭಾವಯನ್ತಶ್ರೇಯಃ ಪರಮವಾಪ್ಸ್ಯಥ

ಮಾನವರ ಪುರೋಭಿವೃದ್ಧಿಗಾಗಿ ಭಗವಂತನು ಕರ್ಮಗಳನ್ನು ಸಾಧನಗ
ಳಾಗಿ ನಿರ್ಮಿಸಿದನು. ಆ ಕರ್ಮಗಳು ದೇವತಾರಾಧನೆಗೆ ವಿನಿಯೋಗಿಸಲ್ಪ
ಡುವದಾದರೆ ಶ್ರೇಯಃ ಪ್ರಾಪ್ತಿಗೆ ಸಾಧನಗಳಾಗುವವು.

## ಸಹಸ್ರಾರವು.

ಓಮ್ ಸತ್ಯಮ್

ಷಡ್ಲಿಂಗಗಳುಃ— ಮಹಾಲಿಂಗವು, (ಸತ್ಯ) ಪ್ರಸಾದಲಿಂಗವು, ಚರ
ಲಿಂಗವು, ಶಿವಲಿಂಗವು, ಗುರುಲಿಂಗವು, ಆಚಾರಲಿಂಗವು

ಷಟ್‌ಸ್ಥಲಗಳುಃ— ಐಕ್ಯ, ಶರಣ, ಪ್ರಾಣಲಿಂಗಿ, ಪ್ರಸಾದಿ, ಮಾಹೇ
ಶ್ವರ, ಭಕ್ತ.

ಷಡಕ್ಷರಿಃ— ಓಮ್, ಯ, ವಾ, ಶಿ, ಮಃ, ನ.

ಷಟ್‌ಚಕ್ರಗಳು:-ಆಜ್ಞಾ, ವಿಶುದ್ಧ, ಅನಾಹತ, ಮಣಿಪೂರಕ,
ಸ್ವಾಧಿಷ್ಠಾನ, ಮೂಲಾಧಾರ.

ಷಡ್ವ್ಯಾಹೃತಿಗಳು:—ಓಮ್ ತಪಃ, ಓಮ್ ಜನಃ, ಓಮ್ ಮಹಃ,
ಓಮ್ ಸುವಃ, ಓಮ್ ಭುವಃ, ಓಮ್ ಭೂಃ

ಸಾಧಕನು ಆಜ್ಞಾಚಕ್ರವರ್ತಿಯಾಗಿ ತಪೋಲೋಕದಲ್ಲಿ ದಿವ್ಯದೃಷ್ಟಿ
ಯನ್ನು ಹೊಂದಿ ಮಹಾಶಿವಲಿಂಗವನ್ನು ದೃಷ್ಟಿಸುತ್ತಿರುವಾಗ್ಯೆ ಓಜ್ಞಾ
ರಾತೀತವಾದ ಸದಾಶಿವೈಕ್ಯಮಯವಾದ ಸಾಯುಜ್ಯವುಂಟಾಗುತ್ತದೆ.
ಸಹಸ್ರಾರವು ಲಿಂಗೈಕ್ಯಕ್ಕೆ ಮುಖವಾಗಿರುತ್ತೆ. ವೀರಶೈವಾಗಮಗಳಲ್ಲಿ
ದೇಹಾಂತಮಂತ್ರಶಾಸ್ತ್ರಗಳ ರಹಸ್ಯಗಳೆಲ್ಲವೂ ವ್ಯತ್ಯಸ್ತರೀತಿಯಲ್ಲಿ ಅನು
ಸರಣೆ ಹೊಂದುತ್ತ ಭಕ್ತಿಯೋಗದ ಪ್ರಭಾವವನ್ನು ನಿತ್ಯಜೀವನದಲ್ಲಿ
ಪ್ರಕಾಶಪಡಿಸುತ್ತಿರುವವು. ಆತ್ಮವಿಕಾಸಕ್ಕೂ, ಸಂಘಶಕ್ತಿಗೂ, ಭಕ್ತೋ
ದ್ಧಾರಕ್ಕೂ ಮತ್ತು ಶಿವಸಾಯುಜ್ಯಪದವಿಗೂ ಸಹ ವೀರಶೈವವು ಪರಮ
ಸಾಧನವಾಗಿ ಏರ್ಪಟ್ಟಿದ್ದಾಗಿರುತ್ತೆ. ಪರಮಾತ್ಮನನ್ನು ಕಾಣುವದಕ್ಕೆ
ಭಕ್ತಿಯೇ ಪರಮ ಸಾಧನವೆಂದು ಮತಗಳೆಲ್ಲವೂ ತಿಳಿಸುತ್ತಿರುವವು. ವಿಶ್ವ
ರೂಪ ಸಂದರ್ಶನಕ್ಕೆ ಭಕ್ತಿಯೇ ಪರಮ ಸಾಧನವೆಂದು ಶ್ರೀಕೃಷ್ಣನು
ಪರಮ ಭಕ್ತನಾದ ಅರ್ಜುನನಿಗೆ ಉಪದೇಶಿಸಿರುವ ವಿಧಾನ ಭಕ್ತಿಯ
ಪ್ರಭಾವಕ್ಕೆ ನಿದರ್ಶನವಾಗಿದೆ.

( ಭಗವದ್ಗೀತೆ ೧೧ ಅಧ್ಯಾಯ ೫೪ - ೫೫ )

ಶ್ಲೋ॥ ಭಕ್ತ್ಯಾತ್ವನನ್ಯಯಾಶಕ್ಯ ಅಹಮೇವಂ ವಿಧೋಽರ್ಜುನ
ಜ್ಞಾತುಂ ದ್ರಷ್ಟುಂಚ ತತ್ವೇನಪ್ರವೇಷ್ಟುಂಚ ಪರನ್ತಪ?
ಮತ್ಕರ್ಮಕೃನ್ಮತ್ಪರಮೋಮದ್ಭಕ್ತಸಂಗವರ್ಜಿತಃ
ನಿರ್ವೈರಸ್ಸರ್ವಭೂತೇಷುಯಸ್ಸಮಾಮೇತಿಪಾಂಡವ

ಶ್ರೀಕೃಷ್ಣಪರಮಾತ್ಮನು ಉಪದೇಶ ಮಾಡಿದ ಭಕ್ತಿಮಾರ್ಗವನ್ನೇ
ಲಿಂಗಧಾರಣೆಯ ರೂಪದಲ್ಲಿ ವೀರಶೈವವು ವ್ಯಕ್ತಪಡಿಸುತ್ತಿದೆ. ಸಾಧಕನು
ಚಿತ್ತವನ್ನು ಶಿವನಲ್ಲಿ ಲಯಮಾಡುವುದಕ್ಕೆ ನಿರಂತರವಾದ ಶಿವಧ್ಯಾನವು
ಸಾಧನವಾಗಿದೆ. ಅಭ್ಯಾಸಬಲದಿಂದಲೂ, ಜಂಗಮಾರ್ಚನೆಯಿಂದಲೂ
ಕರ್ಮಫಲತ್ಯಾಗವೂ, ಶಿವಸಂದರ್ಶನವೂ ಉಂಟಾಗುವುದು. ಅಂತರಬಾಹ್ಯ
ಗಳಲ್ಲಿಯೂ, ಗುರುಲಿಂಗಜಂಗಮಾರ್ಚನೆಗಳಿಂದ ಸಾಧಕನಿಗೆ ಭಕ್ತಿಸ್ವರೂ



ಪವು ಗೋಚರಿಸುತ್ತದೆ. ಜನಸಾಮಾನ್ಯರೂ ಮಹಾಶಿವಭಕ್ತರಾಗಿದ್ದು
ಶಿವಸಾಯುಜ್ಯವನ್ನು ಹೊಂದಿದ ರೀತಿಯು ಬಸವ ಚರಿತ್ರೆಯಲ್ಲಿ ಮನೋ
ಹರವಾಗಿ ವಿವರಿಸಿರುತ್ತೆ. ಬಸವನ ಮತವು ವೈದಿಕಮತವನ್ನು ಪ್ರತಿ
ಘಟಿಸಿದಾಗ್ಯೂ ನಿಗಮಾಗಮ ಪುರಾಣಗಳಲ್ಲಿ ಪ್ರತಿಪಾದಿತನಾಗಿರುವ
ಸಾಧನೆಗಳನ್ನು ಅಂಗೀಕರಿಸಿ ಲಿಂಗಧಾರಣೆಗೆ ಪ್ರಾಮುಖ್ಯತೆಯನ್ನುಂಟು
ಮಾಡಿರುತ್ತೆ. ವೀರಶೈವವು ಕೆಲವು ಕಾಲದಲ್ಲಿಯೇ ಬಹು ವಿಸ್ತಾರವಾಗಿ
ಹರಡಿಕೊಂಡಿತು. ಕಾಲಕ್ರಮೇಣ ಚಿನ್ಮಯದೀಕ್ಷೆ ಮತ್ತು ಲಿಂಗಧಾರಣೆ
ಇವುಗಳು ಕುಲಾಚಾರಗಳಂತೆ ಭೇದಗಳನ್ನು ಕಲ್ಪಿಸಿಕೊಂಡ ಕಾರಣ
ವ್ಯಕ್ತಿವಿಕಾಸಕ್ಕೂ, ಸಮಾಜದ ಉನ್ನತಿಗೂ, ಮಾನವರ ಕ್ಷೇಮಕ್ಕೂ
ನಿಷ್ಪ್ರಯೋಜನಕರವಾಗಿ ಪರಿಣಮಿಸಿ ವೀರಶೈವದ ಪ್ರಭಾವಕ್ಕೆ ಕುಂದುಂ
ಟಾಗಿರುತ್ತೆ.

## ಸಾಧ್ಯವು.

ಜೀವಯಾತ್ರೆಯಲ್ಲಿ ಜೀವನು ಶಿವಸ್ವರೂಪವನ್ನು ಹೊಂದುವಿಕೆ
ಯಿಂದ ಜೀವಯಾತ್ರೆಗೆ ಮುಖ್ಯ ಪ್ರಯೋಜನವುಂಟು. (ಅಹಂ ಬ್ರಹ್ಮಾಸ್ಮಿ)
(ತತ್ವಮಸಿ) (ಶಿವೋಹಂ) ಇತ್ಯಾದಿ ಮಹಾವಾಕ್ಯಾರ್ಥಗಳನ್ನು ಜೀವ
ಯಾತ್ರೆಯಲ್ಲಿ ಸಾರ್ಥಕಪಡಿಸುವುದಕ್ಕೆ ವೀರಶೈವವು ಪ್ರಧಾನವಾಗಿದೆ.
ಲಿಂಗಧಾರಣವು ಶಿವಭಕ್ತರಲ್ಲಿ ದ್ವೈತಭಾವವನ್ನು ಬಿಡಿಸಿ, ಅದ್ವೈತ
ಭಾವವನ್ನು ವ್ಯಕ್ತಪಡಿಸುತ್ತಿದೆ. ಶಿವಜೀವ ಪ್ರಕೃತಿ, ಆತ್ಮಜೀವದೇಹ,
ಗುರುಲಿಂಗಜಂಗಮ, ಭಾವಲಿಂಗ ಪ್ರಾಣಲಿಂಗ ಇಷ್ಟಲಿಂಗ, ಲಿಂಗ
ಶರೀರ, ಸೂಕ್ಷ್ಮಶರೀರ, ಸ್ಥೂಲಶರೀರ, ನಾದಬಿಂದುಕಳೆ, ಇತ್ಯಾದಿ
ತ್ರಿವಿಧಭಾವನಾ ರೂಪಗಳಿಂದ ಪ್ರಪಂಚವೆಲ್ಲವೂ ಆವರಿಸಿರುತ್ತೆ. ಸೃಷ್ಟಿಗೆ
ವ್ಯಕ್ತರೂಪವಾದ ನಾದವು ಪ್ರಪಂಚದಲ್ಲಿ ಲಿಂಗರೂಪದಲ್ಲಿಯೇ ಆವರಿಸಿ
ರುತ್ತ ಕಳಾಸ್ವರೂಪವನ್ನು ವ್ಯಕ್ತಪಡಿಸುವುದು. ಚೈತನ್ಯಕಳಾರೂಪದಲ್ಲಿ
ನಾದವು ಸಹಸ್ರಾರದಲ್ಲಡಿಗಿರುತ್ತಾ ಪ್ರಾಣಕಳೆಗಳನ್ನು ಆಕರ್ಷಿಸುತ್ತಿದೆ.
ಪ್ರಪಂಚಕ್ಕೆಲ್ಲಾ ಚೈತನ್ಯ ಸ್ವರೂಪಗಳಾದ ಸ್ಥಾವರ ಜಂಗಮರೂಪಗಳನ್ನು
ಉದ್ಭವ ಮಾಡುತ್ತ ಅಭಿವೃದ್ಧಿಯ ಸಾಧನವಾಗಿದೆ. ಬಾಹ್ಯಾಂತರಂಗ
ಗಳಲ್ಲಿಯೂ ಲಿಂಗಧಾರಣೆಯು ಪಂಚಭೂತಗಳನ್ನೂ, ದಶೇಂದ್ರಿಯಗ
ಳನ್ನೂ, ಅಂತಃಕರಣ ಚತುಷ್ಟಯಗಳನ್ನೂ ಜಯಿಸಿ ನಿರ್ವಾಣ ಪದವನ್ನು
ಹೊಂದುವುದಕ್ಕೆ ಸಾಧನವಾದದ್ದೆಂದು ವೀರಶೈವವು ಬೋಧಿಸುತ್ತಿದೆ.

ಲಿಂಗಾಂಗಿಯಾದವನು ಜಂಗಮ ಲಿಂಗ ಪ್ರಸಾದದಿಂದ ಇಷ್ಟಾರ್ಥಸಿದ್ಧಿ
ಯನ್ನೂ, ಗುರುಲಿಂಗ ಪ್ರಸಾದದಿಂದ ಭಾವಾರ್ಥಸಿದ್ಧಿಯನ್ನೂ ಪಡೆದು,
ನಿಷ್ಕರ್ಮ್ಯಫಲಸಿದ್ಧಿಯನ್ನು ಹೊಂದಿದವನಾಗಿ ಶಿವಕೈವಲ್ಯವನ್ನು ಹೊಂದು
ವನಾಗುತ್ತಾನೆ. ಸಾಧಕನು ಲಿಂಗಾಂಗಸಾಮರಸ್ಯವನ್ನು ಹೊಂದಿ
ದ್ವೈತ ಭಾವವನ್ನು ಬಿಟ್ಟು ಗುರುಲಿಂಗಜಂಗಮದ ತೀರ್ಥಪ್ರಸಾದಗಳನ್ನು
ಸೇವಿಸುತ್ತ, ಅದ್ವೈತ ಸಿದ್ಧಿಯನ್ನು ಹೊಂದುವನು. ವೀರಶೈವ ಮತ
ಸಂಪ್ರದಾಯಗಳು ತೀರ್ಥಪ್ರಸಾದಗಳ ಮಹಿಮೆಯನ್ನು ಹೆಚ್ಚಾಗಿ ಬೋಧಿ
ಸುತ್ತಿರುವವು. ಶ್ರೀಗುರು ಪ್ರಸಾದವು ಸ್ಥೂಲರೂಪದಿಂದಲೂ, ಭಾವನಾ
ರೂಪದಿಂದಲೂ, ಸಾಧಕನನ್ನು ಚಿನ್ಮಯರೂಪನನ್ನಾಗಿ ಮಾಡಿ ಶಿವಭಕ್ತ
ಗಣದಲ್ಲಿ ಬೆರೆಸುತ್ತಿರುವದು. ಜಂಗಮಾರ್ಪಿತವಾದ ಪದಾರ್ಥಗಳೆಲ್ಲವೂ,
ಶಿವಾರ್ಪಿತವಾದವುಗಳಾಗಿ, ಮಹಾಪ್ರಸಾದ ಭಾವನೆಯಿಂದ ಸಾಧಕನಿಗೆ
ಶಿವಪ್ರಸಾದ ಲಭ್ಯವಾಗುವಂತೆ ಮಾಡುವವು. ಮಾನವರ ಸುಖದುಃಖ
ಗಳಿಗೆ ಕೋಪ, ಪ್ರಸಾದಗಳು ಕಾರಣಗಳಾಗಿವೆ. ಕೋಪವು ಪಶುಲಕ್ಷ
ಣವಾಗಿರುತ್ತ ದುಃಖಕರವಾಗುತ್ತೆ. ಪ್ರಸಾದವು ಈಶ್ವರ ಲಕ್ಷಣಯುಕ್ತ
ವಾಗಿರುತ್ತ ಸುಖ ಪ್ರಾಪ್ತಿಯನ್ನುಂಟು ಮಾಡುತ್ತ ಭಕ್ತಿಯುಕ್ತವಾದ
ಶ್ರೀಗುರುಲಿಂಗಜಂಗಮ ಪ್ರಸಾದವು ಶಿವಸಾಯುಜ್ಯಪದವಿಗೆ ಸಾಧನವಾ
ಗಿರುವುದು. ಭಾವ ಪ್ರಾಣ ಇಷ್ಟಲಿಂಗಪರವಾದ ಶ್ರೀಗುರುಲಿಂಗಜಂಗಮ
ಐಕ್ಯವುಳ್ಳ ವೀರಶೈವ ತತ್ವವು ಶಿವಾದ್ವೈತವನ್ನು ಪ್ರತಿಪಾದಿಸುತ್ತದೆ.
ಶೈವ ಸಿದ್ಧಾಂತವು ದ್ವೈತವನ್ನು ಪ್ರತಿಪಾದಿಸುವದೆಂತಲೂ, ದ್ವೈತಾ
ದ್ವೈತ ಪ್ರತಿಪಾದಿತವೆಂತಲೂ, ಅದ್ವೈತ ಪ್ರತಿಪಾದಿತವೆಂತಲೂ, ಭಿನ್ನಾ
ಭಿಪ್ರಾಯಗಳುಂಟಾಗಿರುತ್ತಿವೆ. ವೀರಶೈವವು ಶಿವಾದ್ವೈತವನ್ನೇ ಪ್ರತಿ
ಪಾದಿಸುತ್ತಿರುವದೆಂದು ಪಂಡಿತರ ಅಭಿಪ್ರಾಯವಾಗಿರುತ್ತೆ. ವೀರಶೈವಕ್ಕೆ
ಲಿಂಗಧಾರಣೆಯೇ ಬೀಜವು. ಲಿಂಗಭಕ್ತಿಯೇ ಶಕ್ತಿಯು. ಗುರುಲಿಂಗ
ಜಂಗಮ ಪ್ರಸಾದವೇ ಮೂಲವು. ಶೈವವು ಮಾತ್ರ ಪ್ರಾಚೀನವೈದಿಕ
ಮಾರ್ಗದಿಂದ ಕರ್ಮಗಳನ್ನೂ, ವರ್ಣಾಚಾರಗಳನ್ನೂ, ಅವಲಂಬಿಸಿ
ಕೊಂಡು ಬೆಳೆದಿರುವದಾಗಿರುತ್ತೆ. ವೀರಶೈವವಾದರೋ ಕರ್ಮಸಂಸ್ಕಾರ
ಗಳನ್ನೂ, ಜಾತಿಭೇದಗಳನ್ನೂ ವಿರೋಧಿಸುತ್ತಲೂ, ಲಿಂಗಧಾರಣ ದೀಕ್ಷೆ
ಯನ್ನು ಸ್ಥಾಪಿಸುತ್ತಲೂ, ಶೈವಕ್ಕೆ ನವೀನ ಶಕ್ತಿಯನ್ನುಂಟುಮಾಡಿರುತ್ತದೆ.
ಇಷ್ಟಲಿಂಗ ಪೂಜೆಯು ಕೈವಲ್ಯಪ್ರಾಪ್ತಿಗೆ ಸಾಧನವಾಗಿರುವ ವಿಧಾನವನ್ನು
ವೀರಶೈವವು ಉಪದೇಶ ಮಾಡುತ್ತಿರುವದಾಗಿದೆ.



ಬಸವೇಶ್ವರನ ಕಾಲದಲ್ಲಿ ಜೈನ ಬೌದ್ಧ ಮತಗಳ ಪ್ರಾಬಲ್ಯವು
ತಗ್ಗಿತು. ಶ್ರೀಶಂಕರಾಚಾರ್ಯರು ವೈದಿಕ ಮತವನ್ನು ಪುನರುದ್ಧಾರ
ಮಾಡಿದರಾದರೂ ಇದರಿಂದ ಜನಸಾಮಾನ್ಯರಿಗೆ ಉಪಯೋಗಕರವಾ
ಗಲಿಲ್ಲ. ಶೈವಾಚಾರ್ಯರುಗಳು ಶಿವಲಿಂಗಾರ್ಚನೆಯ ರೂಪದಲ್ಲಿ ಶೈವವನ್ನು
ಕಾಪಾಡುತ್ತಿದ್ದಾಗ್ಯೂ ಶೈವಕ್ಕೆ ಏಳಿಗೆ ಇರಲಿಲ್ಲ. ಆಳ್ವಾರರುಗಳೂ,
ರಾಮಾನುಜಾಚಾರ್ಯರೂ ಸಹಾ ವೈಷ್ಣವಮತ ವ್ಯಾಪನೆಯಲ್ಲಿ ತೊಡ
ಗಿದರು. ಪ್ರಾಚೀನವಾದ ಆಚಾರಧರ್ಮಗಳು ಕೆಡುವಂತೆ ಪರಿಣಮಿಸಿತು.
ಹೊಸ ಮತಗಳ ಪ್ರಾಬಲ್ಯಕ್ಕೆ ಅವಕಾಶವಾಯಿತು. ಕುಲಭೇದಗಳೂ,
ಜಾತಿಭೇದಗಳೂ, ಪ್ರಬಲಿಸಿದ್ದರಿಂದ ಸಾಮಾನ್ಯ ಜನರ ಮನಸ್ಸಿನಲ್ಲಿ
ನಿರಾಶೆಯುಂಟಾಯಿತು. ಇಂತಹ ವಿಷಾದ ಪರಿಸ್ಥಿತಿಯ ಸಮಯದಲ್ಲಿ
ವೀರಶೈವವು ಸಂಘಶಕ್ತಿಗೆ ತಕ್ಕ ಚಿತ್ಕಳಾಪ್ರಭಾವವನ್ನುಂಟುಮಾಡಿ ಜನ
ಸಾಮಾನ್ಯರನ್ನು ಆಕರ್ಷಣೆಮಾಡಿತು. ಶಿವಭಕ್ತಿಚಿಹ್ನೆಯಾದ ಲಿಂಗ
ಧಾರಣೆಯು ವೀರಶೈವವನ್ನು ವೀರ್ಯವಂತವನ್ನಾಗಿ ಮಾಡಿರುತ್ತೆ. ಹರ
ಗುರು ಪ್ರಸಾದರೂಪವಾದ ಭಕ್ತಿಭಾವನೆಗಳು ಜಂಗಮ ಪೂಜೆಯಿಂದ
ಸಾರ್ಥಕಗೊಳ್ಳುತ್ತ ವೀರಶೈವದಲ್ಲಿ ಭಕ್ತಿರಸಾವೇಶವನ್ನುಂಟುಮಾಡಿದವು.
ಲಿಂಗಧಾರಿಗಳಾದ ವೀರಶೈವರಲ್ಲಿ ಮೇಲು ಕೀಳುಗಳೆನ್ನುವ ಕುಲಭೇದ
ಗಳೇನೂ ಇಲ್ಲದೆ ತೀರ್ಥಪ್ರಸಾದಗಳನ್ನು ಸ್ವೀಕರಿಸುತ್ತ ಲಿಂಗಧಾರಿಗಳೆ
ಲ್ಲರೂ ಶಿವಸ್ವರೂಪರೇ ಎಂಬುವ ಧೃಢಭಾವನೆಯಿಂದ ಶಿವಸಾಯುಜ್ಯ
ವನ್ನು ಹೊಂದುವರಾದರು. ವೀರಶೈವ ಸಿದ್ಧಾಂತ ರೂಪವಾದ ಶಿವಭಕ್ತಿ
ಪ್ರಸಾದವು ಜಂಗಮಾರ್ಚನೆಯ ಕ್ರಿಯಾರೂಪದಲ್ಲಿ ಸಾರ್ಥಕವಾಗುತ್ತಿರು
ವುದು. ಬಸವಪುರಾಣದಲ್ಲಿ ವರ್ಣಿತವಾಗಿರುವ ಪುರಾತನ ಭಕ್ತರುಗಳ
ಚರಿತ್ರೆಗಳು ಈ ಮತದ ಪ್ರಭಾವವನ್ನು ವಿಶದಪಡಿಸುತ್ತಿದೆ. ಬಸವೇ
ಶ್ವರನು ಮಹಸೀಯ ಪುರುಷನಾಗಿರುವನು. ಬ್ರಾಹ್ಮಣ ಕುಲದಲ್ಲಿ
ಹುಟ್ಟಿದವನಾದಾಗ್ಯೂ ತನ್ನ ಕುಲವನ್ನು ತಿರಸ್ಕರಿಸಿದ ದೃಢ ಸಂಕಲ್ಪ
ಮಾಡಿದನು. ಪರಮ ಶಿವಭಕ್ತನಾದಾಗ್ಯೂ ತನ್ನ ಕುಲವನ್ನು ತಿರಸ್ಕ
ರಿಸಿದ ಧೃಢಸಂಕಲ್ಪ ಮಾಡಿದನು. ಪರಮ ಶಿವಭಕ್ತನಾದಾಗ್ಯೂ ಈ
ಬಸವೇಶ್ವರನು ಬಿಜ್ಜಳ ರಾಜನಲ್ಲಿ ಮಂತ್ರಿತ್ವವನ್ನು ಅಂಗೀಕರಿಸಿ
ರಾಜ್ಯಭಾರ ನಿರ್ವಹಣೆಗೆ ಸಹಾಯಕರ್ತನಾಗಿ ಪ್ರಬಲಶಾಲಿಯಾಗಿದ್ದನು.
ರಾಮದಾಸ ಮಹಾತ್ಮನು ತನ್ನ ಸರ್ವಸ್ವವನ್ನೂ ರಾಜ್ಯಭಾಂಡಾರವನ್ನೂ
ಶ್ರೀರಾಮ ಮೂರ್ತಿಯ ಸೇವೆಗೆ ಅರ್ಪಿಸಿದ ರೀತಿಯಲ್ಲಿ ಬಸವೇಶ್ವರನು

ಲಿಂಗಾಂಗಿಯಾದವನು ಜಂಗಮ ಲಿಂಗ ಪ್ರಸಾದದಿಂದ ಇಷ್ಟಾರ್ಥಸಿದ್ಧಿ
ಯನ್ನೂ, ಗುರುಲಿಂಗ ಪ್ರಸಾದದಿಂದ ಭಾವಾರ್ಥಸಿದ್ಧಿಯನ್ನೂ ಪಡೆದು,
ನಿಷ್ಕರ್ಮ್ಯಫಲಸಿದ್ಧಿಯನ್ನು ಹೊಂದಿದವನಾಗಿ ಶಿವಕೈವಲ್ಯವನ್ನು ಹೊಂದು
ವನಾಗುತ್ತಾನೆ. ಸಾಧಕನು ಲಿಂಗಾಂಗಸಾಮರಸ್ಯವನ್ನು ಹೊಂದಿ
ದ್ವೈತ ಭಾವವನ್ನು ಬಿಟ್ಟು ಗುರುಲಿಂಗಜಂಗಮರ ತೀರ್ಥಪ್ರಸಾದಗಳನ್ನು
ಸೇವಿಸುತ್ತ, ಅದ್ವೈತ ಸಿದ್ಧಿಯನ್ನು ಹೊಂದುವನು. ವೀರಶೈವ ಮತ
ಸಂಪ್ರದಾಯಗಳು ತೀರ್ಥಪ್ರಸಾದಗಳ ಮಹಿಮೆಯನ್ನು ಹೆಚ್ಚಾಗಿ ಬೋಧಿ
ಸುತ್ತಿರುವವು. ಶ್ರೀಗುರು ಪ್ರಸಾದವು ಸ್ಥೂಲರೂಪದಿಂದಲೂ, ಭಾವನಾ
ರೂಪದಿಂದಲೂ, ಸಾಧಕನನ್ನು ಚಿನ್ಮಯರೂಪನನ್ನಾಗಿ ಮಾಡಿ ಶಿವಭಕ್ತ
ಗಣದಲ್ಲಿ ಬೆರಸುತ್ತಿರುವದು. ಜಂಗಮಾರ್ಪಿತವಾದ ಪದಾರ್ಥಗಳೆಲ್ಲವೂ,
ಶಿವಾರ್ಪಿತವಾದವುಗಳಾಗಿ, ಮಹಾಪ್ರಸಾದ ಭಾವನೆಯಿಂದ ಸಾಧಕನಿಗೆ
ಶಿವಪ್ರಸಾದ ಲಭ್ಯವಾಗುವಂತೆ ಮಾಡುವವು. ಮಾನವರ ಸುಖದುಃಖ
ಗಳಿಗೆ ಕೋಪ, ಪ್ರಸಾದಗಳು ಕಾರಣಗಳಾಗಿವೆ. ಕೋಪವು ಪಶುಲಕ್ಷ
ಣವಾಗಿರುತ್ತ ದುಃಖಕರವಾಗುತ್ತೆ. ಪ್ರಸಾದವು ಈಶ್ವರ ಲಕ್ಷಣಯುಕ್ತ
ವಾಗಿರುತ್ತ ಸುಖ ಪ್ರಾಪ್ತಿಯನ್ನುಂಟು ಮಾಡುತ್ತ ಭಕ್ತಿಯುಕ್ತವಾದ
ಶ್ರೀಗುರುಲಿಂಗಜಂಗಮ ಪ್ರಸಾದವು ಶಿವಸಾಯುಜ್ಯಪದವಿಗೆ ಸಾಧನವಾ
ಗಿರುವುದು. ಭಾವ ಪ್ರಾಣ ಇಷ್ಟಲಿಂಗಪರವಾದ ಶ್ರೀಗುರುಲಿಂಗಜಂಗಮ
ಐಕ್ಯವುಳ್ಳ ವೀರಶೈವ ತತ್ವವು ಶಿವಾದ್ವೈತವನ್ನು ಪ್ರತಿಪಾದಿಸುತ್ತದೆ.
ಶೈವ ಸಿದ್ಧಾಂತವು ದ್ವೈತವನ್ನು ಪ್ರತಿಪಾದಿಸುವದೆಂತಲೂ, ದ್ವೈತಾ
ದ್ವೈತ ಪ್ರತಿಪಾದಿತವೆಂತಲೂ, ಅದ್ವೈತ ಪ್ರತಿಪಾದಿತವೆಂತಲೂ, ಭಿನ್ನಾ
ಭಿಪ್ರಾಯಗಳುಂಟಾಗಿರುತ್ತಿವೆ. ವೀರಶೈವವು ಶಿವಾದ್ವೈತವನ್ನೇ ಪ್ರತಿ
ಪಾದಿಸುತ್ತಿರುವದೆಂದು ಪಂಡಿತರ ಅಭಿಪ್ರಾಯವಾಗಿರುತ್ತೆ. ವೀರಶೈವಕ್ಕೆ
ಲಿಂಗಧಾರಣೆಯೇ ಬೀಜವು. ಲಿಂಗಭಕ್ತಿಯೇ ಶಕ್ತಿಯು. ಗುರುಲಿಂಗ
ಜಂಗಮ ಪ್ರಸಾದವೇ ಮೂಲವು. ಶೈವವು ಮಾತ್ರ ಪ್ರಾಚೀನವೈದಿಕ
ಮಾರ್ಗದಿಂದ ಕರ್ಮಗಳನ್ನೂ, ವರ್ಣಾಚಾರಗಳನ್ನೂ, ಅವಲಂಬಿಸಿ
ಕೊಂಡು ಬೆಳೆದಿರುವದಾಗಿರುತ್ತೆ. ವೀರಶೈವವಾದರೋ ಕರ್ಮಸಂಸ್ಕಾರ
ಗಳನ್ನೂ, ಜಾತಿಭೇದಗಳನ್ನೂ ವಿರೋಧಿಸುತ್ತಲೂ, ಲಿಂಗಧಾರಣ ದೀಕ್ಷೆ
ಯನ್ನು ಸ್ಥಾಪಿಸುತ್ತಲೂ, ಶೈವಕ್ಕೆ ನವೀನ ಶಕ್ತಿಯನ್ನುಂಟುಮಾಡಿರುತ್ತದೆ.
ಇಷ್ಟಲಿಂಗ ಪೂಜೆಯು ಕೈವಲ್ಯಪ್ರಾಪ್ತಿಗೆ ಸಾಧನವಾಗಿರುವ ವಿಧಾನವನ್ನು
ವೀರಶೈವವು ಉಪದೇಶ ಮಾಡುತ್ತಿರುವದಾಗಿದೆ.



ಬಸವೇಶ್ವರನ ಕಾಲದಲ್ಲಿ ಜೈನ ಬೌದ್ಧ ಮತಗಳ ಪ್ರಾಬಲ್ಯವು
ತಗ್ಗಿತು. ಶ್ರೀಶಂಕರಾಚಾರ್ಯರು ವೈದಿಕ ಮತವನ್ನು ಪುನರುದ್ಧಾರ
ಮಾಡಿದರಾದರೂ ಇದರಿಂದ ಜನಸಾಮಾನ್ಯರಿಗೆ ಉಪಯೋಗಕರವಾ
ಗಲಿಲ್ಲ. ಶೈವಾಚಾರ್ಯರುಗಳು ಶಿವಲಿಂಗಾರ್ಚನೆಯ ರೂಪದಲ್ಲಿ ಶೈವವನ್ನು
ಕಾಪಾಡುತ್ತಿದ್ದಾಗ್ಯೂ ಶೈವಕ್ಕೆ ಏಳಿಗೆ ಇರಲಿಲ್ಲ. ಆಳ್ವಾರರುಗಳೂ,
ರಾಮಾನುಜಾಚಾರ್ಯರೂ ಸಹಾ ವೈಷ್ಣವಮತ ವ್ಯಾಪನೆಯಲ್ಲಿ ತೊಡ
ಗಿದರು. ಪ್ರಾಚೀನವಾದ ಆಚಾರಧರ್ಮಗಳು ಕೆಡುವಂತೆ ಪರಿಣಮಿಸಿತು.
ಹೊಸ ಮತಗಳ ಪ್ರಾಬಲ್ಯಕ್ಕೆ ಅವಕಾಶವಾಯಿತು. ಕುಲಭೇದಗಳೂ,
ಜಾತಿಭೇದಗಳೂ, ಪ್ರಬಲಿಸಿದ್ದರಿಂದ ಸಾಮಾನ್ಯ ಜನರ ಮನಸ್ಸಿನಲ್ಲಿ
ನಿರಾಶೆಯುಂಟಾಯಿತು. ಇಂತಹ ವಿಷಾದ ಪರಿಸ್ಥಿತಿಯ ಸಮಯದಲ್ಲಿ
ವೀರಶೈವವು ಸಂಘಶಕ್ತಿಗೆ ತಕ್ಕ ಚಿತ್ಕಳಾಪ್ರಭಾವವನ್ನುಂಟುಮಾಡಿ ಜನ
ಸಾಮಾನ್ಯರನ್ನು ಆಕರ್ಷಣೆಮಾಡಿತು. ಶಿವಭಕ್ತಿಚಿಹ್ನೆಯಾದ ಲಿಂಗ
ಧಾರಣೆಯು ವೀರಶೈವವನ್ನು ವೀರ್ಯವಂತವನ್ನಾಗಿ ಮಾಡಿರುತ್ತೆ. ಹರ
ಗುರು ಪ್ರಸಾದರೂಪವಾದ ಭಕ್ತಿಭಾವನೆಗಳು ಜಂಗಮ ಪೂಜೆಯಿಂದ
ಸಾರ್ಥಕಗೊಳ್ಳುತ್ತ ವೀರಶೈವದಲ್ಲಿ ಭಕ್ತಿರಸಾವೇಶವನ್ನುಂಟುಮಾಡಿದವು.
ಲಿಂಗಧಾರಿಗಳಾದ ವೀರಶೈವರಲ್ಲಿ ಮೇಲು ಕೀಳುಗಳೆನ್ನುವ ಕುಲಭೇದ
ಗಳೇನೂ ಇಲ್ಲದೆ ತೀರ್ಥಪ್ರಸಾದಗಳನ್ನು ಸ್ವೀಕರಿಸುತ್ತ ಲಿಂಗಧಾರಿಗಳೆ
ಲ್ಲರೂ ಶಿವಸ್ವರೂಪರೇ ಎಂಬುವ ದೃಢಭಾವನೆಯಿಂದ ಶಿವಸಾಯುಜ್ಯ
ವನ್ನು ಹೊಂದುವರಾದರು. ವೀರಶೈವ ಸಿದ್ಧಾಂತ ರೂಪವಾದ ಶಿವಭಕ್ತಿ
ಪ್ರಸಾದವು ಜಂಗಮಾರ್ಚನೆಯ ಕ್ರಿಯಾರೂಪದಲ್ಲಿ ಸಾರ್ಥಕವಾಗುತ್ತಿರು
ವುದು. ಬಸವಪುರಾಣದಲ್ಲಿ ವರ್ಣಿತವಾಗಿರುವ ಪುರಾತನ ಭಕ್ತರುಗಳ
ಚರಿತ್ರೆಗಳು ಈ ಮತದ ಪ್ರಭಾವವನ್ನು ವಿಶದಪಡಿಸುತ್ತಿದೆ. ಬಸವೇ
ಶ್ವರನು ಮಹಸೀಯ ಪುರುಷನಾಗಿರುವನು. ಬ್ರಾಹ್ಮಣ ಕುಲದಲ್ಲಿ
ಹುಟ್ಟಿದವನಾದಾಗ್ಯೂ ತನ್ನ ಕುಲವನ್ನು ತಿರಸ್ಕರಿಸಿದ ದೃಢ ಸಂಕಲ್ಪ
ಮಾಡಿದನು. ಪರಮ ಶಿವಭಕ್ತನಾದಾಗ್ಯೂ ತನ್ನ ಕುಲವನ್ನು ತಿರಸ್ಕ
ರಿಸಿದ ದೃಢಸಂಕಲ್ಪ ಮಾಡಿದನು. ಪರಮ ಶಿವಭಕ್ತನಾದಾಗ್ಯೂ ಈ
ಬಸವೇಶ್ವರನು ಬಿಜ್ಜಳ ರಾಜನಲ್ಲಿ ಮಂತ್ರಿತ್ವವನ್ನು ಅಂಗೀಕರಿಸಿ
ರಾಜ್ಯಭಾರ ನಿರ್ವಹಣೆಗೆ ಸಹಾಯಕರ್ತನಾಗಿ ಪ್ರಬಲಶಾಲಿಯಾಗಿದ್ದನು.
ರಾಮದಾಸ ಮಹಾತ್ಮನು ತನ್ನ ಸರ್ವಸ್ವವನ್ನೂ ರಾಜ್ಯಭಾಂಡಾರವನ್ನೂ
ಶ್ರೀರಾಮ ಮೂರ್ತಿಯ ಸೇವೆಗೆ ಅರ್ಪಿಸಿದ ರೀತಿಯಲ್ಲಿ ಬಸವೇಶ್ವರನು

ಜಂಗಮಾರ್ಚನೆಗೆ ಉಪಯೋಗಿಸುತ್ತಿದ್ದನು. ಶಿವಾನುಗ್ರಹದಿಂದ ಬಿಜ್ಜಳ
ರಾಯನ ಭಂಡಾರದಲ್ಲಿನ ದ್ರವ್ಯವು ತಗ್ಗದೆ ಏರುತ್ತಿದ್ದಿತು. ಆತನು
ಇಷ್ಟಲಿಂಗಾರ್ಚನೆ ಮತ್ತು ಜಂಗಮಾರ್ಚನೆಗಳ ಸಲುವಾಗಿ ತನ್ನ
ಸರ್ವಸ್ವವನ್ನೂ ಭಕ್ತರಿಗೆ ಸಮರ್ಪಿಸುತ್ತ, ತಾನು ರಾಜ್ಯಾಧಿಕಾರಿ ಎಂಬುವ
ಅಹಂಕಾರಪಡದೆ, ತ್ಯಾಗಶೀಲನಾಗಿ ಜಂಗಮಸೇವೆಯನ್ನು ಮಾಡಿದನು.
ಕೇವಲ ವೈರಾಗ್ಯ ಶೀಲವಾಗಿ ಜಡಸ್ಥಿತಿಯಲ್ಲಿದ್ದ ಸಮಾಜದಲ್ಲಿ ಬಸವೇ
ಶ್ವರನು ಚೈತನ್ಯಕಳೆಯನ್ನು ಹುಟ್ಟಿಸಿ ಶಿವಯೋಗ ಪ್ರವೃತ್ತಿಯನ್ನು
ಉದ್ಧಾರಮಾಡಿದನು. ಜೈನ ಬೌದ್ಧರುಗಳ ಸಂಘವು ಸನ್ಯಾಸ ರೂಪ
ದಲ್ಲಿ ವೈರಾಗ್ಯವನ್ನು ಬೋಧಿಸುತ್ತ ಪ್ರಜಾಭಕ್ತಿ ಗೌರವಗಳಿಗೆ ಕಾವಿ
ವಸ್ತ್ರಗಳೇ ಗುರುತೆನ್ನಿಸಿದರು. ಭಿಕ್ಷಾಟನವು ಪೂಜ್ಯವಾದ ವೃತ್ತಿಯಾಗಿ,
ಗೃಹಸ್ಥಧರ್ಮವು ಬೇಡವೆನ್ನಿಸುವಂತೆ ಪ್ರಯತ್ನ ಮಾಡಿದ್ದರಿಂದ ಜನ
ಸಾಮಾನ್ಯರಲ್ಲಿ ನಿರಾಶೆಯುಂಟಾಗಿ ನಿರ್ಬಲವಾದ್ದರಿಂದ ಜೈನ ಬೌದ್ಧ
ಧರ್ಮಗಳು ಕ್ಷೀಣಗತಿಯನ್ನು ಹೊಂದಿದವು. ಭಗವದ್ಭಕ್ತಿಯು ಸಾರ್ಥಕ
ವಾಗಬೇಕಾದರೆ ಮಾನವ ಸೇವೆಯೇ ಸಾಧನವಾಗಿರುವುದು. ಬಸವೇ
ಶ್ವರನು ನಿತ್ಯಜಂಗಮಾರ್ಚನೆಯಲ್ಲಿಯೇ ಆತ್ಮಪೂಜೆ ಶಿವಪೂಜೆ, ಸಂಘ
ಪೂಜೆ ಇವುಗಳನ್ನು ಮಿಶ್ರಿತವಾಗಿ ಆಚರಣೆಗೆ ತಂದು ಸಂಕುಚಿತ ಸ್ಥಿತಿ
ಯಲ್ಲಿದ್ದ ಭಕ್ತಿಮಾರ್ಗವನ್ನೂ, ಸಮಾಜಬಲವನ್ನೂ, ಅಭಿವೃದ್ಧಿಗೊಳಿ
ಸಿದನು. ನಿರ್ಬಲವಾಗಿದ್ದ ಸಮಾಜವು ವೀರ್ಯವಂತವಾಯಿತು. ಬಸ
ವೇಶ್ವರನ ರಾಜ್ಯಾಧಿಕಾರವೂ, ದೃಢಸಂಕಲ್ಪವೂ, ತ್ಯಾಗಶೀಲವೂ, ಕುಲ
ಗಳ ಪರಿತ್ಯಾಗವೂ, ಜಂಗಮರಲ್ಲಿ ಭಕ್ತಿಭಾವನೆಯೂ ವೀರಶೈವ ವ್ಯಾಪ
ನೆಗೆ ಸಾಧನವಾದ ಮಹತ್ವಯುಳ್ಳದ್ದಾಯಿತು. ಬಸವನ ಅವತಾರದಿಂದ
ಪ್ರಸಿದ್ಧಿ ಹೊಂದಿದ ಮಹಿಮಾವಿಶೇಷಗಳನ್ನು ವೀರಶೈವ ಚರಿತ್ರೆಯು ತಿಳಿ
ಸುತ್ತಿದೆ. ಕರ್ಣಾಟಕ, ಆಂಧ್ರ ಭಾಷೆಗಳಲ್ಲಿರುವ ವೀರಶೈವ ವಾಙ್ಮಯ
ವನ್ನು ಪಂಡಿತರು ಪರಿಶೋಧಿಸಿ, ವೀರಶೈವ ಮತತತ್ವಗಳನ್ನು ವ್ಯಕ್ತಪ
ಡಿಸುವರಾಗಬೇಕು. ವೀರಶೈವಾತ್ಮಕವಾದ ಬಸವಪುರಾಣವು ತೆಲುಗು
ಗ್ರಂಥಗಳ ಮಾಲಿಕೆಯಲ್ಲಿ ನಾಲ್ಕನೆಯ ಸ್ಥಾನದಲ್ಲಿದ್ದು ಪ್ರಸಿದ್ಧಿಹೊಂ
ದಿರುತ್ತೆ. ಪ್ರಸಿದ್ಧವಾದ ಸೋಮನಾಥನ ರಚಿತವಾದ ಈ ಬಸವ ಪುರಾ
ಣಕ್ಕೆ ತೆಲುಗು ದೇಶದವರೆಲ್ಲರೂ ಗೌರವವನ್ನಿತ್ತು ಸುಸ್ವಾಗತ ಮಾಡಿ
ಆದರಿಸಬೇಕೆಂದು ಬೇಡಿಕೊಳ್ಳುವೆನು.

---



# ಬಸವರಾಜದೇವ.

ಲೇ.:—ಪ್ರೊ॥ ಎಸ್. ಎಸ್. ಮಾಳವಾಡ ಎಮ್. ಏ.
ಕರ್ನಾಟಕ ಕಾಲೇಜ ಧಾರವಾಡ

(೧೯೩೯ ಎಪ್ರಿಲ್ ಸಂಚಿಕೆಯಿಂದ ಮುಂದುವರಿದದ್ದು.)

೫

ಮುಂದೆ ಬಸವನು ಮಂಗಳವಾಡದಲ್ಲಿ ಬಿಜ್ಜಳರಾಯನಿಂದ ಕನಕ
ಭಾಂಡಾರಾಜ್ಞೆಯನ್ನೂ ದಂಡನಾದ ಸಮಗ್ರ ಪ್ರಭುವೃತ್ತಿಯನ್ನೂ ಸಕಲ
ಸಂಪದ್ವೈಭವವನ್ನೂ ಪಡೆದು ಸುಖದಿಂದ ಇದ್ದನು. ಕೆಲವು ದಿನಗಳು
ಕಳೆದಮೇಲೆ ಸತ್ಕುಲಸಾದೃಶ್ಯಸುಶೀಲೆಯರಾದ ಗಂಗಾದೇವಿ ಮಾಯಿ
ದೇವಿಯರನ್ನು ವಿವಾಹವಾದನು.

ಒಂದು ದಿವಸ 'ಪ್ರಭಾತಸಮಯ, ಸಮುಚಿತ ಪ್ರಕ್ಷಾಳನ ಕರ ಚರಣ
ವದನ ಸರೋರುಹನಾಗಿ ನಿತ್ಯನೇಮದಂತೆ ಸಂಗಮೇಶ್ವರನ ಶ್ರೀಪಾದ
ದರ್ಶನ ಸ್ಪರ್ಶನ ಪಡೆದು ಸರ್ವಾಂಗಗಳಲ್ಲಿ ರುದ್ರಾಕ್ಷಿಗಳನ್ನು ಧರಿಸಿ
ಬಿಜ್ಜಳನ ಅರಮನೆಗೆ ಪೊರಮಟ್ಟನು. ಈತನು ಹೊರಟಾಗ ನೆಲವನ್ನು
ಅದುರಿಸುವ ಅಂಗರಕ್ಷಕರು, ಶಿಷ್ಯರು, ಸೇವ್ಯರು, ಅಧಿಕಾರಿಗಳು ಇವರ
ಸಮೂಹವು ಇವನನ್ನು ಸುತ್ತುಗಟ್ಟಿತ್ತು. ಬೀದಿಗಳಲ್ಲಿ ಆಳುಗಳು ಪಡಿ
ಯರರು ಜನರ ಗುಂಪಿಗೆ ಅತ್ತಿತ್ತ ತೊಲಗಲು ಹೇಳುತ್ತಿದ್ದರು. ಮುಂದೆ
ಆಯುಧ ಹಿಡಿದ ವೀರಭಟರು ನಡೆದಿದ್ದರು. ಅರಮನೆಯನ್ನು ಪ್ರವೇ
ಶಿಸುವಾಗ ರಾಜಪುತ್ರರೂ ದಂಡನಾಥರೂ ಈತನಿಗೆ ಪೊಡಮಡುತ್ತಿ
ದ್ದರು. ಒಡ್ಡೋಲಗದ ನಡುವೆ ಬರುತ್ತಿರುವ ಬಸವರಾಜದೇವನ ಶಿವ
ಕಲಾ ಪರಿಪೂರ್ಣ ತೇಜಃಪ್ರತಾಪದ ರೂಪಕ್ಕೆ ಬಿಜ್ಜಳನು ಮನದಲ್ಲಿಯೇ
ಎರಗಿದನು. ತನಗಾಗಿ ತಂದಿರಿಸಿದ ಸಮಗದ್ದುಗೆಯಮೇಲೆ ಗಂಭೀರ
ಶಿರೋಮಣಿ, ವಿಳಾಸನಿಧಿ, ಪ್ರಸನ್ನದಂಡನಾಥ ಬಸವದೇವನು ಕುಳಿ
ತನು. ಬಿಜ್ಜಳನ ಒಡ್ಡೋಲಗವು ವೈಭವದಿಂದ ನಡೆದಿತ್ತು. ಎರಡೂ
ಪಕ್ಕಗಳಲ್ಲಿ ನಿಂತು ಚಾಮರವನ್ನು ಬೀಸುವ ವಿಲಾಸಿನಿಯರ ಕಂಕಣದ
ಝಣತ್ಕಾರದ ಸವಿದನಿಯು ಹೊರಸೂಸುತ್ತಿತ್ತು. ಇತ್ತರದೊಳು ಒತ್ತ
ರದಿಂ ಕುಳ್ಳಿರ್ದ ಅನೇಕ ರಾಜಪುತ್ರರ, ಸಚಿವರ, ದಂಡನಾಥರ, ಮಂಡ

ಕೇಶ್ವರರ, ಮಹಾಸಾಮಂತರ, ಬಿರುದವಾಹಕರ, ರಾಯರಾವುತರ,
ಗಜಾರೋಹಕರ, ಧೀರರ, ಪಾಠಕರ, ಗಣಿಕೆಯರ, ಜಟ್ಟಿಗಳ, ಬಹು
ವಿಧದ ಆಯುಧಗಳ ಬಂಟರ, ಕವಿಗಳ, ಗಮಕಿಗಳ, ನಾದಿಗಳ, ವಾಗ್ಮಿ
ಗಳ, ಮುಗ್ಧೆಯರ, ವಿದಗ್ಧೆಯರ, ಗಾಯಕರ, ಚಿತ್ರಕರ, ನರ್ತಕರ,
ವರ್ತಕರ ಇವರೆಲ್ಲರ ಬಹು ದೊಡ್ಡ ಸಮೂಹದಿಂದ ಸಭಾಸ್ಥಾನದಲ್ಲಿ
ಗದ್ದಲ ತುಂಬಿತ್ತು. ದಂಡಧಾರಿಗಳು ಮಾಳವ, ಗೌಳ, ಲಾಳ, ಗುರ್ಜರ,
ನೇಪಾಳ, ಕಳಿಂಗ, ಬಂಗಾಳ ದೇಶದವರನ್ನು ಸಮಾಧಾನವಾಗಿರಿಸುತಿ
ದ್ದರು. ಸಕಲ ದೇಶಾಧಿಪತಿಗಳು ಕಳಿಸಿದ ಪಾವುಡ ಕನಕರತ್ನಾಭರಣ
ಗಳನ್ನು ಬಸವರಾಜನು ಭಂಡಾರಕ್ಕೆ ತೆಗೆಯಿಸಿ ಅರಸುಮಕ್ಕಳಿಗೆ ಬಹು
ಮಾನ ಕೊಟ್ಟು ವೀರ ಭಟರನ್ನು ಸಮಾಧಾನಗೊಳಿಸಿ ಮುಕುಟವದನ
ರನ್ನು ಕಂಡು ಸನ್ಮಾನಿಸಿ ಸುಖದಿಂದ ಇದ್ದನು. ಮಧ್ಯಾಹ್ನ ಸಮ
ಯದ ವಾದ್ಯಧ್ವನಿಯು ಕೇಳಿಬರಲಾಗಿ ಓಲಗವನ್ನು ಮುಗಿಯಿಸಿ ಬಿಜ್ಜಳ
ರಾಯನೊಡನೆ ಆಪ್ತಮಂತ್ರಾಲೋಚನೆ ನಡೆಯಿಸಿ ಅರಮನೆಯಿಂದ
ಪೊರಮಟ್ಟು ತನ್ನ ಮಹಮನೆಗೆ ಬಂದನು.

ಬಸವಣ್ಣನ ಭಕ್ತಿಯ ಪರಿಯನ್ನರಿತು ದೇಶದೇಶದ ಪತ್ತೆಂಟುಗಾ
ವುದ ಮಾಹೇಶ್ವರರು ಕರುಣಿಸಿ ಅವನಲ್ಲಿಗೆ ಬಂದರು. ಆಗ ಬಸವನು
ಘೋಂಕನೆ ಕಂಡು ಗದ್ದುಗೆಯಿಂದ ಇಳಿದು ದೈನ್ಯವದನನಾಗಿ ಅವರೆ
ಲ್ಲರನ್ನು ನಿಜನಿಳಯ ಮಧ್ಯಸ್ಥಿತ ಭದ್ರಾಸನಂಗಳೊಳು ಬಿಜಯಂಗೆಯ್ಸಿ
ಅವರ ಚರಣಂಗಳಂ ತೊಳೆದು ಪಾದೋದಕವಂ ಪಡೆದು ಲಿಂಗಾ
ರ್ಚನೆ ಮಾಡಿ ಪ್ರಸಾದ ಭರಿತ ಪ್ರಮೋದ ಹೃದಯನಾಗಿದ್ದನು. ಹಾಗೂ
ಸತ್ಶರಣರ ಸಮಾರಾಧನೆಗೆಯ್ಯುತ್ತ ನಿತ್ಯ ಶಿವರಾತ್ರಿ ವ್ರತವನ್ನು ಪಾಲಿ
ಸಿದನು.

ಒಂದು ದಿನ ಒಡ್ಡೋಲಗದೊಳು ಬಸವನೂ ಆತನ ದ್ವೇಷಿಗಳಾದ
ಬಿಜ್ಜಳನ ಗುರುವಾದ ನಾರಾಯಣ ಭಟ್ಟಾದಿಗಳೂ, ಬಿಜ್ಜಳ ಅರಸನೂ
ಇದ್ದಾಗ ಓರ್ವ ಮಾಲೆಗಾರನು ಒಂದು ಸುವರ್ಣ ಕೇತಕೀ ಕುಸುಮ
ವನ್ನು ಅರಸನ ಕೈಗೆ ಕೊಟ್ಟನು. ಅರಸನು ಅದರಲ್ಲಿಯ ಒಂದು ಎಸಳನ್ನು
ಬಸವರಾಜನಿಗೆ ಕೊಡಲು ಅವನು ತನ್ನ ಲಿಂಗಕ್ಕೆ ಸಮರ್ಪಿಸಿ ನಂತರ
ತಾನು ಸ್ವೀಕರಿಸಿದನು. ಶೈವಾಗಮಂಗಳಲ್ಲಿ ಕೇತಕೀ ಕುಸುಮವನ್ನು
ಭೂತೇಶ್ವರಂಗೇರಿಸಲಾರದೆಂಬ ನುಡಿಯನ್ನು ಬಸವರಾಜನು ಮೀರಿದು



ದನ್ನು ನಾರಾಯಣ ಭಟ್ಟಾದಿಗಳು ಬಿಜ್ಜಳನು ವ್ಯಂಗದಿಂದ ಮಾತನಾ
ಡಿದರು. ಆಗ ಬಸವಣ್ಣನವರು 'ದೇವ ಸುಭಕ್ತರ್ ಕೊಟ್ಟಡೆ ಕೈಕೊಳ್ವಂ'
ಎಂದು ಹೇಳಿ ಸಹಸ್ರ ಮಾಹೇಶ್ವರರ ಲಿಂಗಗಳ ಮೇಲೆ, ಮಂಗಳ
ವಾಡದ ಮಹಾಶಿವಲಿಂಗದಂಘ್ರಿಗಳಲಿ ತಾನು ಏರಿಸಿದ ಕೇತಕಿಯ
ಎಸಳನ್ನು ತೋರಿಸಿದನು. ಬಿಜ್ಜಳನು ಕಂಡು ಬೆರಗಾಗಿ ಬಸವನ ಪದ
ತಳಕ್ಕೆರಗಿ ತಪ್ಪುದಂಡಕ್ಕೆ ಪನ್ನಿಚ್ಛಾಸಿರ ಹೊನ್ನನ್ನು ಕೊಟ್ಟ ಅಂದಿನಿಂದ
ಅವರನ್ನು ಭಂಡಾರಿಗಳೆಂಬುದನ್ನು ಮರೆತು ಸಂಗಮೇಶ್ವರನೆಂದೆ ಕಂಡು
ಕೊಂಡಾಡುತಿದ್ದನು.

೭

ಭಂಡಾರಿ ಬಸವನು ಬಿಜ್ಜಳರಾಯನ ರಾಜಧಾನಿಯಲ್ಲಿ ಸಜ್ಜನ
ಸ್ನೇಹದಿಂದ ಶರಣರ್ಗೆ ಎರಡಿಲ್ಲದಂತೆ ಬೆಸಕೆಯ್ವುತಿರ್ದಪನೆಂಬ ವಾರ್ತಾ
ವಿಶೇಷವು ಜಗದ್ಭರಿತವಾಯಿತು. ಇದನ್ನು ಕೇಳಿ ಸಕಲ ದೇಶದ ಶರಣಾ
ವಳಿಯು ಕರುಣದಿಂದ ಹರಭಕ್ತಿ ಸರೋನಿಧಿಯು ತೆರೆಮಸಗಿ ಮೀರಿ
ಬರುವಂತೆ ಮಂಗಳವಾಡದ ನಾಲ್ಕು ದಿಕ್ಕುಗಳಲ್ಲಿಯೂ ತುಂಬಿ ಬಂದಿತು.
ಬಸವನು ಶರಣರನ್ನು ಅತಿಶಯದ ಭಕ್ತಿಯಿಂದ ಇದಿರ್ಗೊಂಡು 'ಭಾಪು
ಭಾಗ್ಯವೇ ನರಜನ್ಮದೊಳು ಬಂದು ಗುರುಕರುಣವಂ ಹೊತ್ತು ಹರ
ಕಿಂಕರನಾಗಿ ಶರಣರ ಬರವಂ ಪಡೆದೆಂ' ಎಂದು ಉಬ್ಬಿ, ಕೊಬ್ಬಿ
ಉತ್ಸಾಹಗೊಂಡು ಸಕಲ ಶರಣರನ್ನು ನಿಜನಿಳಯಕ್ಕೆ ಬಿಜಯಂಗೆಯ್ಸಿ
ದನು. ಅವರಿಗೆ ಕೈಮುಗಿದು 'ದೇವ ದೇವ ನಿಮ್ಮ ಕಂಡವಂ ಆವ
ಲೋಕಕ್ಕೆ ಕಣ್ಣಾಗಂ? ದೇವ, ನಿಮಗೆ ತೊತ್ತಾದಂಗೆ ತೊತ್ತಾಗದ ಲಕ್ಷ್ಮಿ
ಯಾವಳು? ನಿಮ್ಮಂ ಸ್ತುತಿಗೆಯ್ದ ನಾಲಗೆಗೆ ಮರುಳಾಗದ ಸರಸ್ವತಿ
ಯಾವಳು? ನಿಮ್ಮಂ ಸಿಂಗರಿಸಿದಂಗೆ ಆಳಾಗದ ಚೆಲುವು ಯಾವದು?
ನಿಮ್ಮಂ ಪೊಗಳಲೆನ್ನಳವಲ್ಲ. ನಿಮ್ಮೊಳು ಸಂಗನೊಳು ವಿಭೇದವಿಲ್ಲ. ನಿಮ್ಮಂ
ನೆನೆವುದೆ ಶಿವಚಿಂತೆ. ನೀವೇ ಗತಿ, ನೀವೇ ಮತಿ, ನೀವೇ ಪ್ರಾಣ'
ಎಂದು ಹರ್ಷಾತಿರೇಕದಿಂದ ಜಂಗಮಪ್ರಾಣಿ ಸಂಗನಬಸವನು
ಕಳೆಯೇರುತ, ಕಂಪಿಸುತ, ಪುಳಕಿಸುತ್ತ ಶರಣರನ್ನು ಸ್ತುತಿಸುತ್ತ
ಪರಮ ಸುಖಿಯಾಗಿರ್ದನು. ಶರಣ ಸರೋಜಸಂಕುಳಕ್ಕೆ ಸೂರ್ಯ
ನಂತೆ ಶರಣಾಬ್ಧಿಗೆ ಚಂದ್ರನಂತೆ, ಶರಣಸಮಾಜ ಚಾತಕಕ್ಕೆ ಸುಧಾ
ವರುಷದಂತೆ ಇರುವ ಬಸವಣ್ಣನು ಶರಣಸನ್ನಿಹಿತನಾಗಿ ಒಪ್ಪಿದನು.

ಹನ್ನೆರಡು ಸಾವಿರ ಶರಣರಿಗೆ ನಾನಾವಿಧದ ರಸಪಕ್ವಾನ್ನಗಳು ನಡೆ
ದವು. ಓಗರದ ರಾಶಿಗಳು, ಮಂಡಿಗೆಗಳ ಒಟ್ಟಿಲುಗಳು, ಗಾರಿಗೆಯ
ಬಣವೆಗಳು, ಹೂರಿಗೆಯ ಲಡ್ಡಿಗೆಯ ಬೆಟ್ಟಗಳು, ಹಾಲುಂಡೆ ಘೃತಪೂ
ರದಾಲಯವು, ಹಾಲೋಗರ, ಒಡೆ, ಸಣ್ಣಸೇವಗೆಗಳು, ಸರವಳಿಗೆ,
ಸಣ್ಣ ಸರವಳಿಗೆ, ಮಣಿಸರವಳಿಗೆ, ಮೇಲೋಗರದ ಹಿರಿಯ ರಾಶಿ, ಹಾಲು
ತುಪ್ಪದ ಕೋಟಿ ಕೊಪ್ಪರಿಗೆ ಇಂತಿವೆಲ್ಲವೂ ಚನ್ನಾಗಿ ಒಪ್ಪಿ ಶಿವಲಿಂಗಕ್ಕೆ
ಸಂಪಿಟ್ಟವು. ಭಕ್ತ್ಯೈಕನಿಧಿ ಬಸವನು ಹರುಷದಿಂ ಶರಣರ ಪದಂಗಳನು
ತೊಳೆವುತ್ತ ಪಾದೋದಕಗಳನ್ನು ಹೊಂದುತ್ತ ಅರ್ಚನೆಗೆ ಎಡೆಮಾಡಿದನು.
ಬೇರೆ ಬೇರೆ ಶರಣರಿಗೆ ಬೇರೆ ಬೇರೆ ಅಗ್ಘವಣಿ ಪುಷ್ಪಗಳನ್ನು ಕೊಟ್ಟ
ಎಲ್ಲರಿಗೂ ನಮಸ್ಕರಿಸಿ ಕಿಂಕರತೆಯನ್ನು ಸೂಚಿಸಿ ಅವರನ್ನು ಎಡೆಮಾ
ಡಿದ ಎಡೆಗಳಲಿ ಕುಳ್ಳಿರಿಸಿದನು; ಪರಿಪರಿಯ ಕುಸುಮುಗಳನು ಅವರಿ
ಗಾಗಿ ಕೊಟ್ಟನು. ಅಳಿಗಳು ಎರಗದ, ರವಿಕರವು ಮುಟ್ಟದ, ಹೂವುಗ
ಳನ್ನು ಸಲ್ಲಿಸಿದನು. ಭಸಿತ, ಅಗ್ಘವಣಿ, ರುದ್ರಾಕ್ಷೆ, ಸಿರಿಗಂಧ, ಸಂಪ
ಗೆಯ ಮುಗುಳ್ಗಳು, ಧೂಪಗಳನು ದೇವರಿಗಾಗಿ ಬೇಡುವ ಶರಣರೆಲ್ಲರ
ಇಚ್ಛೆಯನ್ನು ಬಸವನು ಪೂರೈಸಿದನು. ಶರಣರನ್ನು ನೋಡಿ ಹರುಷ
ದಿಂದ ಹಿಗ್ಗಿದನು. ಜಲಚರವು ಸೋಂಕದ ನೀರು, ಕರುವು ಉಣ್ಣದ
ಹಾಲು, ದೇವಲೋಕದ ಕಮಲ, ಮರುಗಗಳು, ಕರಿಯಮಲ್ಲಿಗೆಗಳು
ತಮ್ಮ ವ್ರತವೆಂದು ಹೇಳಿದವರ ಇಚ್ಛೆಯನ್ನು ಸಮಾಧಾನಗೊಳಿಸಿದನು.
ಕಾಮದಹನದ ವಿಭೂತಿಯನ್ನು ಸಲ್ಲಿಸಿದನು. ಹೇಮದ ಅಕ್ಷತೆಯ ನೇಮ
ವನ್ನು ಪಾಲಿಸಿದನು. ತಾರಜದ ತಂತುವಿನ ಬತ್ತಿಯನ್ನು ಕೊಟ್ಟನು.
ಅಸಾಧ್ಯವಸ್ತುಗಳನ್ನು ಶರಣರು ಬೇಡಿದಾಗ ಬಸವನು 'ಕೋಡಿದನೆ,
ಕೊಂಕಿದನೆ, ಕಂದಿದನೆ, ಕುಂದಿದನೆ, ಬಾಡಿದನೆ, ಬಳ್ಕಿದನೆ, ಬೆದರಿದನೆ,
ಬೆಚ್ಚಿದನೆ'—ಇಲ್ಲ, ಸಂಗನಂ ನೆನೆದು ಸುಖದಿಂದ ಬೇಡಿದುದೆಲ್ಲವನ್ನೂ
ಇಲ್ಲೆನ್ನದೆ ಸಲ್ಲಿಸಿದನು. ಹೀಗೆ ಕೊಡುತ್ತಿರಲು ಶರಣತತಿ ಸಂತಸದಿಂದ
ತಮ್ಮ ಪೂಜೆಯನ್ನು ನಡೆಯಿಸಿತು. ಅವರು ಉತ್ಸಹದಿಂದ ಮೆಯ್ಯುಬ್ಬಿ
ಪುಳಕಿತರಾದರು; ಹಾಡುತ್ತ, ನೋಡುತ್ತ, ಕುಣಿಯುತ್ತ, ಶಿವಶಬ್ದವಂ
ಕೇಳಿ ಪುಳಕಿಸುತ್ತ, ಪೂಜೆಗೆಯ್ದರು. ಶಿವಲಿಂಗವನ್ನು ಎವೆಯಿಕ್ಕದೆ
ನೋಡಿದರು. ಒಮ್ಮೊಮ್ಮೆ ಧೂಪವಂ ಮರೆದು ಆರತಿಯನೆತ್ತಿದರು.
ದೀಪವನ್ನೇ ಧೂಪವೆಂದರ್ಚಿಸಿದರು. ಹೀಗೆ ಶಿವಲಿಂಗ ಪೂಜಾಸಂಭ್ರ
ಮವು ಹೆಚ್ಚಲು ಬಸವರಾಜನು ಹಿಗ್ಗಿದನು. ಘಂಟೆಗಳ ಧಣಧಣತ್ಕಾರ



ಕಾಸಾಳದ ಘಳತ್ಕಾರ, ಮುರಜದ ಕಹಳೆಯ ದನಿ, ಶಂಖದ ಘನಧ್ವನಿ,
ಇವುಗಳು ತುಂಬಿ ಭಕ್ತಿಸ್ವಯಂವರದ ಪುಣ್ಯವೀಥಿಯಂತೆ, ಮುಕ್ತಿಸ್ವ
ಯಂವರದ ಶಿವಯೋಗಿಗಳಂತೆ ಪೂಜಾಸಂಭ್ರಮವು ತೋರಿತು. ನಂತರ
ಸರಸಪಕ್ವಾನ್ನ ಘೃತಗಳನ್ನು ಬಡಿಸಿದ ಪರಿಪರಿಯ ಪರಿಯಾಣಗಳಲಿ
ಊಟದ ಸಂಭ್ರಮವು ಮೊದಲಾಯಿತು ನವಸುಧಾಕಿರಣಚಯದಂತೆ
ತೋರುವ ಓಗರ, ಸತಿಗೆ ಸವಿಯನ್ನು ಕೊಡುವ ಮೇಲೋಗರ, ಒಳ್ಳೆಯ
ಹಾಲು, ಸಕ್ಕರೆ ಕೆನೆಮೊಸರು ಮಜ್ಜಿಗೆಗಳನ್ನು ಬಡಿಸಿ ಚಂದ್ರಮಂಡ
ಲದೊಳಗೆ ಅಮೃತವನಿಕ್ಕಿ ಕೊಡುವಂತೆ ಶುಭ್ರವಾದ ಪರಿಯಾಣಗಳಲಿ
ಭಕ್ಷ್ಯಗಳು ಇಡಲ್ಪಟ್ಟವು ಪರಿಚಾರಕ ಪ್ರಕರವು ನೀಡುತ್ತಿತ್ತು. ಬಸವ
ರಾಜನು ಪುಷ್ಪಾಂಜಲಿಯನೀಯುತ್ತಿದ್ದನು. ಶಿವಭಕ್ತಕುಲವು ಪರ
ಕೆಯನೀಯುತ್ತಿತ್ತು. 'ಉಘೇ ಚಾಂಗು' ಎನ್ನುತ್ತ ಮಾರಾರಿಯಾದ
ಶಂಭುವನ್ನು ಬಣ್ಣಿಸುತ್ತ ಶರಣರು ಶಿವಲಿಂಗಗಳಿಗೆ ಪಕ್ವಾನ್ನಗಳನ್ನು
ಅರ್ಪಿಸಹತ್ತಿದರು. ಆತ್ಮೀಯ ರೀತಿಯಿಂದ ದೇವನಿಗೆ ಭಕ್ಷ್ಯಗಳನ್ನು ಸ್ವೀಕ
ರಿಸಲು ಶರಣರು ಬೇಡಿಕೊಂಡರು. "ದೇವ ಇನ್ನೊಂದು ತುತ್ತು ಎನ್ನಾಣೆ
ಕೊಳ್. ಕೊಟ್ಟ ಪಕ್ವಾನ್ನಮಂ ಮೆಲ್ಲಲೊಲ್ಲೆಯೇಕೆ, ದೃಷ್ಟಿಯಾಯ್ತೇ?
ಉಪ್ಪಾರತಿಯನೆತ್ತಬೇಕೆ" ಎಂದು ಕೇಳಹತ್ತಿದರು. 'ಮೇಲೋಗರವ
ಸವಿದುನೋಡು. ಮಜ್ಜಿಗೆ ಮುಂದಗಿವೆ, ಸ್ವೀಕರಿಸು. ನಿನಗೆ ಕೆನೆಮೊಸರು
ಪ್ರೀತಿ, ಸ್ವೀಕರಿಸು' ಎಂದು ಹೇಳುವ ಶರಣರಿಚ್ಛೆಗೆ ಕಾರುಣ್ಯನಿಧಿ ಗಿರಿಜೆ
ದೇವನು ಗಣತತಿವೆರಸಿ ಅವತರಿಸಿ ಮನಪಾರೆ ಉಂಡನು. ಶರಣರು
ಸಂತೋಷಭರಿತರಾದರು. ಕೆಲವರು ಸವಿಸವಿದು ರುಚಿಯನರ್ಪಿಸಿದು.
ಕೆಲವರು ಬಸವನನ್ನು ಹರಸಿದರು. ಕೆಲವರು ತುತ್ತಿಟ್ಟು ಕುಣಿವುತಿರ್ದರು.
ಲಿಂಗಪ್ರಸಾದಿಗಳು, ಶರಣಪ್ರಸಾದಿಗಳು, ಸಂಗಪ್ರಸಾದಿಗಳು, ಶಬ್ದಪ್ರ
ಸಾದಿಗಳು, ಗೀತಪ್ರಸಾದಿಗಳು, ನೋಟಪ್ರಸಾದಿಗಳು, ಅಚ್ಚಪ್ರಸಾದಿಗಳು,
ನಿಚ್ಚಪ್ರಸಾದಿಗಳು, ಸರ್ವ ಪ್ರಸಾದಿಗಳು— ಇವರೆಲ್ಲರ ಪುಣ್ಯೋದರಗಳು
ಪ್ರಸಾದದಿಂದ ತಣಿದವು; ಬಸವಕೀರ್ತಿಗಳಿಂದ ಕಿವಿಗಳು ತಣಿದವು; ಬಸ
ವನ ನೆನಹಿನಿಂದ ಅವರೆಲ್ಲರ ಮನಗಳು ತಣಿದವು. ಶರಣ ವೃಂದವೂ
ಪ್ರಸಾದದೋಕುಳಿಮಾಡಿ ಬಸವಣ್ಣನನ್ನು ಹೊಗಳುತ್ತಿದ್ದರು. "ಬಸವನ
ಮಾತೆ, ಮಾತು. ಬಸವಣ್ಣನ ಭಕ್ತಿಯ ಓಜೆ, ಓಜೆ. ಬಸವನ ರೀತಿ,
ರೀತಿ. ಬಸವನ ಬಟ್ಟೆ, ಬಟ್ಟೆ. ಬಸವನ ನಿಷ್ಠೆ, ನಿಷ್ಠೆ. ಬಸವನ ಗೀತಿ
ಗೀತಿ. ಬಸವನ ಬುದ್ಧಿ, ಬುದ್ಧಿ. ಬಸವನ ಪೆರ್ಮೆ, ಪೆರ್ಮೆ. ಬಸ

ವನ ಯುಕ್ತಿ, ಯುಕ್ತಿ. ಬಸವನ ಭಕ್ತಿ, ಭಕ್ತಿ." ಎಂದು ಮುಂತಾಗಿ ಶರಣ ತತಿಯು ಬಸವನನ್ನು ಹೊಗಳಹತ್ತಿತು. ಆಗ ಬಸವನು ಶರಣರ ಮುಂದೆ ಮನಂಗುಂದಿ ಕಂದಿ, ಕೈಮುಗಿದು ತಗ್ಗಿ ಕುಗ್ಗಿ ಹೀಗೆ ನುಡಿದನುಃ—"ದೇವರ್ ನೀವೇ ಪ್ರಾಣಂ, ನೀವೇಕಣ್ ನೀವೇಮಾತು, ನೀವೇ ಗತಿ, ನೀವೇ ಪತಿ, ನೀವೇ ಮತಿ" ಅಲ್ಲದೆ ಶರಣರ ಪಾದವೆ ತನಗೆ ತೊಟ್ಟಿಲು. ತಾನು ಶರಣರ ಕಿಂಕರರ ಕಿಂಕರರ ಕಿಂಕರನು, ಲೆಂಕರ ಲೆಂಕನು, ಶರಣರ ತೊತ್ತು, ತನಗೆ ಬೇರೆ ಗತಿ ಮತಿಯಿಲ್ಲವೆಂದು ಹೇಳಿದನು. ಆ ಮೇಲೆ ದಂಡನಾಥ ಚೂಡಾಮಣಿ, ಭಕ್ತಕುಲತಿಲಕ, ಸತ್ಯಸಾಮ್ರಾಜ್ಯ ಸಾರ್ವಭೌಮ, ಬಸವರಾಜನು ಎಲ್ಲ ಶರಣರಿಗೆ ದಿವ್ಯಚಂದನವನ್ನು ಲೇಪಿಸಿ, ಪರಿಮಳದ ಅಲರ್ಗಳನ್ನು ಕೊಟ್ಟು, ನೊಸಲೊಳು ಮುಂಡಾಡಿ ಬಿಜ್ಜಳನ ಭಂಡಾರದ ಚಿನಿ, ಮಹಾಚಿನಿ ದೇವಾಂಗ, ಲತಾವಳಿ, ಹಂಸಾವಳಿ, ಗಜಾವಳಿ ಮೊದಲಾದ ಪಟ್ಟಾವಳಿಯ ದಿಂಡುಗಳನ್ನು ತರಿಸಿ ಪರಿಪರಿಯ ದಿವ್ಯ ವಸ್ತ್ರಗಳನ್ನು ತೆಗೆದು ಶರಣರ ಮಯ್ಯೊಳು ಹೊದಯಿಸಿದನು. ಆಭರಣಗಳನ್ನು ತರಿಸಿಕೊಟ್ಟನು. ಹಾರಗಳನ್ನು ಹಾಕಿದನು. ಪೊಂಗಳಂ ಮೃಡಭಕ್ತರ ಮೆಲ್ಲಡಿಗಳೊಳು ಸುರಿಸುರಿದು ಪುಣ್ಯಲೋಭಿ, ಶರಣರ ಸಂಗದ ಶಾಶ್ವಿತನೆನಿಪ ಬಸವರಾಜನು ಕಣ್ ತೀವಿ ನೋಡಿ, ಮೈತೀವಿ ಮುಟ್ಟಿ, ನಾಲಗೆ ತೀವಿ ಹೊಗಳಿ, ಮನಂ ತೀವಿ ನೆನೆದು, ಬುದ್ಧಿ ತೀವಿ ಬೆಚ್ಚು, ಅಹಂಕಾರ ತೀವಿ ಪೆಚ್ಚಿ, ಚಿತ್ತ ತೀವಿ ಅಚ್ಚೊತ್ತಿ, ಮತ್ತೆ ಇತ್ತಿತ್ತ ತಣಿಯದೆ ಲಿಂಗ ಜಂಗಮಪ್ರಸಾದ ಹೃದಯನಾಗಿ ಶರಣರೊಳು ಸದ್ಗೋಷ್ಠಿಯಿಂದಿದ್ದನು. ಹಾಗೂ ತಾನು ಕಿಂಕರನೆಂದು ಹಸುಳನೆಂದೂ ತಪ್ಪಂ ನೋಡದೆ ಕರುಣಿಸಬೇಕೆಂದೂ ಹೇಳಿದನು. ಆಗ ಬಸವಂಗೆ ಮೆಚ್ಚಿದ ಮಾಹೇಶ್ವರರು ಬಸವನನ್ನು ಹೀಗೆ ಹೊಗಳಿದರುಃ—'ಎಲೆ ಬಸವ, ಬಸವಣ್ಣ ಬಸವಯ್ಯ, ಬಸವರಸ ಬಸವರಾಜ, ಬಸವದೇವ ಕೇಳಯ್ಯ. ನಿನ್ನ ನೇಮವು ಬೇರೆಯಾರಿಗೆ ಉಂಟು! ಗುರುಲಿಂಗದೊಳು ಎರಡಿಲ್ಲದೆ ಇಪ್ಪೆ. ಶರಣರಂ ಸಂಗನೆಂದೆ ಕಾಣ್ಬೆ. ಬಂದ ಭಕ್ತರನು ಆದರಿಪೆ. ಬಪ್ಪ ಭಕ್ತರಂ ಹರುಷದೊಳು ಇದಿರ್ಗೊಂಬೆ. ಶರಣರಿಗೆ ಬೇಡಿದುದ ಇಲ್ಲೆನದೆ ಈವೆ. ಬೇಡಲೊಲ್ಲದವರ್ಗೆ ಮಿಗಿಲಾಗಿ ಆರಾಧಿಪೆ. ಜಾಗ್ರತ ಸ್ವಪ್ನ ಸುಷುಪ್ತಿ ಅವಸ್ಥೆಗಳಲ್ಲಿ ಶರಣರಂ ಸಂಗನೆಂದಲ್ಲದೆ ಕಾಣೆ. ನಿಚ್ಚಶಿವರಾತ್ರಿಯಂ ಅಚ್ಚರಿಯಿಂ ಮಾಳ್ಪೆ. ಜಂಗಮ ಪ್ರಾಣಿಯಾಗಿಪ್ಪೆ. ಶಿವಲಿಂಗಾರ್ಪಿತವಲ್ಲದುದನು ಅಘ್ರಾಣಿಸೆ, ನೋಡೆ



ನುಡಿಯೆ, ಮುಟ್ಟೆ, ಕೇಳೆ. ಶಿವಸಮಯವನುದ್ಧರಿಸುವೆ. ಲಿಂಗದಲ್ಲಿ ಕಠಿನಮಂ ಕೇಳೆ. ಜಂಗಮದಲ್ಲಿ ಜಾತಿಯನರಸೆ. ಪ್ರಸಾದದಲ್ಲಿ ಅಪವಿತ್ರತೆಯನರಿಯೆ. ಪರಾಂಗನೆಯರು ಹೆತ್ತ ತಾಯ್ಗಳೆಂಬೆ. ಪರದ್ರವ್ಯಮಂ ಕಿಲ್ಬಿಷವೆಂಬೆ. ನಡೆದು ತಪ್ಪೆ. ನುಡಿದು ಹುಸಿಯೆ. ಹಿಡಿದು ಬಿಡೆ. ಬಿಟ್ಟು ಹಿಂಗಲೀಯೆ. ಕೊಟ್ಟು ನೆನೆಯೆ. ನಟ್ಟು ಕೀಳೆ. ಮುಟ್ಟಿ ಹಿಂದೆ ಹೋಗುವದಿಲ್ಲ. ಕೂಡಿ ತಪ್ಪೆ. ನೋಡಿ ನಿರಾಕರಿಸೆ. ಮನದೊಳು ಮುಚ್ಚುಮರೆಯಿಲ್ಲ. ಬುದ್ಧಿಯಲಿ ಚಾಂಚಲ್ಯವಿಲ್ಲ. ಕಾಮವಿಲ್ಲ. ಕೋಪದ ಮಾತೇಕೆ ? ಲೋಭದ ಗಾಳಿ ತೀಡದು. ಮೋಹಕೆ ತೆರಹು ಇಲ್ಲ. ಮದದ ಸೊಗಡು ಹೊದ್ದದು. ಮತ್ಸರಕ್ಕೆ ಇಂಬು ಇಲ್ಲ. ಬಸವರಾಜ ನಿನ್ನ ಗುಣಂಗಳನು ಬಣ್ಣಿಸಲಿಮ್ಮಳವಲ್ಲ. ಈಶನ ಮೀಸಲಪ್ಪ ಭಕ್ತ, ನಿನಗೆ ಎಣೆಯಿಲ್ಲ, ಪಡಿಯಿಲ್ಲ, ಪಾಸಟಿಯಿಲ್ಲ. ಪಾಷಂಡಿಭೂಮಿಯೊಳು ಶಿವಭಕ್ತಿಯನು ಆರಂಭಿಸಿ, ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳನು ಬೆಳೆದು ಗಣಪರ್ವಂಗಳನು ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು."

ಬಸವರಾಜನು ಶರಣರ ಚರಣಂಗಳನು ಬಿಗಿಯಪ್ಪಿ ಅವರ ಹೊಗಳಿಕೆಗೆ ತಲ್ಲಣಿಸಿ ತಗ್ಗಿದನು.

೨

ಬಸವರಾಜನಿಂದ ದಾನ ಸನ್ಮಾನಗಳನ್ನು ಪಡೆದ ಶರಣರ ವೃಂದವು ಅವನ ಮನೆಯಿಂದ ಹೊರಟು ಮಂಗಳವಾಡದ ಹಲವು ರಾಜವೀಥಿಗಳಲಿ ಸುಳಿದಾಡಹತ್ತಿದರು. ಅವರು ಹೊದ್ದ ದೇವಾಂಗದಿಂದ, ತೊಟ್ಟ ದಿವ್ಯಾಭರಣದಿಂದ ರುದ್ರಲೋಕದ ರಾಜಪುತ್ರರಂತೆ, ಕೈಲಾಸದ ಕಮನೀಯರಂತೆ, ರಜತಗಿರಿಯ ವಿಜಯರಂತೆ, ಮೇರುವಿನ ಧೀರರಂತೆ ಶೋಭಿಸುತ್ತಿದ್ದರು. ಆ ಮಹಾದೇವನ ಮುಕುಟವರ್ಧನರು, ಮದನಹರನ ಮದಕರಿಗಳು, ಹರನ ಶರಭಂಗಳು, ನರಲೋಕದೇವೇಂದ್ರರು, ಸುತ್ತಲೂ ಸುಳಿದಾಡುತ್ತಿರುವಾಗ ಪುರಜನಗಳು ಪರಸಮಯದವರು ಕೌತುಕದಿಂದ ಆ ನೆರವಿಯನ್ನು ನೋಡಹತ್ತಿದರು. ಬಿಜ್ಜಳನ ಗುರುಗಳು ಅದನ್ನು ಕಂಡು ಅಸೂಯೆ ಪಟ್ಟು, ಅಹಂಕಾರದೊಳುಬ್ಬಿ, ಮತ್ಸರದೊಳು ಬಿರಿದು ಹರಭಕ್ತರ ಸಂಪದಮಂ ನೋಡಲಾರದೆ, ಸೈರಿಸಲಾರದೆ, ಕುದಿಕುದಿದು ಕೋಟಲೆಗೊಂಡು, ಅನುತಾಪದೊಳು ಉರಿದು, ಬುದ್ಧಿ

ಬರಿದಾಗಿ, ನಿಲಲಾರದೆ ಬಿಜ್ಜಳನೆಡೆಗೆ ಬಂದು "ಎಲೆ ಎಲೆ ಮರುಳರಸ,
ಪುರದೊಳು ಸುಳಿವ ಶಿವಭಕ್ತರ ಸಿರಿಯಂ ಏನೆಂದು ಹೇಳಬೇಕು ?
ನೀನಿಕ್ಕಲಾರದ ನಿನ್ನ ಭಂಡಾರದಲ್ಲಿಯ ಪದಕಗಳು ಶರಣರ ಎದೆಯ
ಮೇಲಿವೆ. ನೀನು ಮುಟ್ಟಲಂಜುವ ಹಾರಗಳು ಭಕ್ತರ ಕೊರಳಲ್ಲಿವೆ.
ನೀನು ಸ್ವೀಕರಿಸದ ವಜ್ರಕಂಕಣಗಳು ಶರಣರ ಕರಗಳಲ್ಲಿವೆ. ನೀನು
ಧರಿಸದ ದಿವ್ಯಾಭರಣಗಳು ಅವರ ಮೈಮೇಲಿವೆ. ನೀನು ಉಡಲಾರದ
ನವವಸ್ತ್ರಗಳು ಶರಣರ ಅಂಗಗಳ ಮೇಲಿವೆ. ಬಸವಂಗೆ ಮರುಳಾದೆ.
ಭಂಡಾರವು ಹಾಳಾಯ್ತು. ಭಕ್ತರಿಗಾಗಿ ಬರಿದಾಯ್ತು. ಅವರ ತೇಜ
ಹೆಚ್ಚಿತು. ಷಡ್ದರ್ಶನಂಗಳು ಕೀಳಾದವು. ನೃಪದರ್ಶನವು ಮೇಲಾಯ್ತು.
ಇದಂ ವಿಚಾರಿಸದೆ ಕ್ಷತ್ರಿಯ ಧರ್ಮವಂ ಕೆಡಿಸುವರೇ? ಈ ರಾಜ್ಯವನ್ನು
ಉದಾಸೀನ ಮಾಡಬೇಕೇ? ಇದನ್ನು ನೀನು ಸೈರಿಸುವದಾದರೆ ನಮ್ಮನ್ನು
ಬಿಟ್ಟುಗೊಟ್ಟು ಬಸವನೊಂದಿಗೆ ಸುಖದಿಂದ ಇರು" ಎಂದು ಹೇಳಿದರು.
ಭಂಡಾರದ ಲೆಕ್ಕವನು ನೋಡಬೇಕೆಂದು ಬೋಧಿಸಿದರು. ಈ ಬೋಧೆ
ಯಿಂದ ಬಿಜ್ಜಳನು ಮರುಳಾಗಿ ಚಿತ್ತವು ಕಲಕಿ ಬಸವರಾಜನನ್ನು ಕರೆ
ಯಲು ಚಾರರನ್ನು ಕಳಿಸಿದನು. ವಿಭೂತಿಯ ಸುಭಟಂ, ರುದ್ರಾಕ್ಷಿಯ
ರುದ್ರಂ, ಪಂಚಾಕ್ಷರಿಯ ಪಂಚ ಮುಖನೆನಿಪ ಬಸವರಾಜನು ಬಂದು
ಬಿಜ್ಜಳನೊಡನೆ ಸಮುಗದ್ದುಗೆಯಲ್ಲಿ ಕುಳಿತನು. ಬಿಜ್ಜಳನು ಮೆಲ್ಲಮೆಲ್ಲನೆ
ಲೆಕ್ಕದ ಮಾತನ್ನು ತೆಗೆದನು. ಕರಣಿಕರನ್ನು ಬೆದರಿಸಿ ಭಂಡಾರದ
ಆದಾಯ ವ್ಯಯಗಳನ್ನು ನೋಡಲಾಗಿ ಬಸವನ ಮೇಲೆ ಹದಿನೆಂಟು
ಕೋಟಿ ದ್ರವ್ಯವು ಸ್ಥಿತವಾಯಿತು ಆಗ ಬಿಜ್ಜಳನು ದಣ್ಣಾಯಕರ
ಮೊಗವಂ ನೋಡುತ್ತ ಆಕ್ಷೇಪದಿಂದ 'ನಿಮ್ಮನ್ನು ನಂಬಿ ಭಂಡಾರವನ್ನು
ಕೊಟ್ಟರೆ ಹೀಗೆ ಕೆಡಿಸಬೇಕೇ ? ಶಿವಭಕ್ತರ್ಗೆ ಕೊಟ್ಟು ರಾಜ್ಯವನ್ನು
ನೀರಲ್ಲಿ ಹಾಕಬೇಕೆ? ಬಹಳ ಮಾತುಗಳೇಕೆ? ಈಗ ಕಡಿಮೆಯಾಗಿರುವ
ಹೊನ್ನಿಗೆ ನಿರ್ಣಯವನ್ನು ಕೊಡಬೇಕು' ಎಂದು ಕೇಳಿದನು. ಆಗ
ಬಸವನು ವಿರೋಧಿಗಳ ನುಡಿ ಕೇಳಿ ಬಿಜ್ಜಳನು ಮರುಳಾಗಿರುವನೆಂದು
ತಿಳಿದು 'ಎಲೆ ಭೂಪ, ಉದಧಿ ನದಿಯ ನೀರಂ ನುಂಗುವದೇ, ಭಾಸ್ಕ
ರನು ಕನ್ನಡಿಯ ಬೆಳಕನ್ನು ಆಶಿಸುವನೇ, ಶಿವಭಕ್ತರು ನಿನ್ನ ಒಡವೆಗೆ
ಆಶೆ ಮಾಡುವರೇ? ತಮ್ಮೊಡವೆಯನ್ನು ತಾವು ತೆಗೆದುಕೊಂಡರು. ನಡೆನಡೆ'
ಎಂದು ಹೇಳಿ ಬಿಜ್ಜಳನೊಂದಿಗೆ ಭಂಡಾರದ ಮನೆಗೆ ಬಂದು ಮುದ್ರಿಸಿದ
ಪೆಟ್ಟಿಗೆಗಳನ್ನು ತೆಗೆಯಿಸಿ ಕೋಟ್ಯಾನುಕೋಟಿಯಾಗಿ ಎಣಿಸಹತ್ತಿದನು.



ಕಡಿಮೆಯಾಗಿರುವ ಹದಿನೆಂಟು ಕೋಟಿಗೆ ಪ್ರತಿಯಾಗಿ ಮೂವತ್ತಾರು
ಎಪ್ಪತ್ತೆರಡು ಕೋಟಿ, ಇಮ್ಮಡಿ ನೂರು ಮಡಿ ಸಾವಿರ ಮಡಿಯಾಗಿ
ದ್ರವ್ಯವು ಹೆಚ್ಚುತ್ತಿರುವುದನ್ನು ಬಿಜ್ಜಳನಿಗೆ ತೋರಿಸಿದನು. ಗಣಕರು
ಲೆಕ್ಕಿಸಲಾರದೆ ಬೆರಗಿದರು. ವಿರೋಧಿಗಳ ಮೋಗವು ಬೆಳ್ಪೇರಿತು. ಬಿಜ್ಜ
ಳನ ಮೊಗವು ಲಜ್ಜೆಯೇರಿತು; ಶರಣರ ಮೊಗಂಗಳು ಹರುಷವೇರಿದುವು
ಆಗ ಬಸವನು ಬಿಜ್ಜಳನನ್ನು ಕುರಿತು 'ಮುಗ್ಧಭೂಪ, ಕೇಳು ನಿನ್ನ
ದೊಂದು ಅರ್ಥವೆಂದು ಮರುಳಾಗಬೇಕೇ? ಸರ್ವ ಬ್ರಹ್ಮಾಂಡ ಸಾರ್ವ
ಭೌಮನೆನಿಪ ಶ್ರೀ ಸಂಗಮೇಶ್ವರ ಲಿಂಗದ ಅಂಘ್ರಿಯಂ ಮಹಾಪದವಿ
ಗಳು ಬಂದು ಓಲಗಿಸುತಿರುವಾಗ ಸಂಪತ್ತಿನಲ್ಲಿ ಎಳ್ಳಷ್ಟು ಕೊಡಲಾಗಿ
ಕುಬೇರನಾದನು. ಕಾಂತಿಯೊಳಗೆ ಇನಿತು ಈಯೆ ಭಾಸ್ಕರನಾದನು.
ಚೆಲುವಿನೊಳು ಇನಿತು ಕೊಡೆ ಕಾಮನಾದನು. ನೀನು ಎತ್ತಣ ಪರ
ಮಾಣು? ಶಿವನ ಮನೆಯ ತೊತ್ತಿನ ಮನೆಯ ತೊತ್ತಾಗಿರುವ ಮಾಯೆ
ಆಡಿಸುವ ಮಣ್ಣರೂಪು, ಕಲ್ಲಜಂತ್ರ, ಹುಲ್ಲಗೊಂಬೆ, ತೆಗೆ ತೆಗೆ' ಎಂದು
ಜರಿದನು. ಬಿಜ್ಜಳನು ಧರೆಗಿಳಿದು ಜೀವನ್ಮೃತನಾಗಿ ಬಸವನ ಚರ
ಣದೊಳು ದೊಪ್ಪನೆ ಬಿದ್ದು 'ಶರಣರನರಿಯದ ಸರ್ವಾಪರಾಧಿಯಾನು
ಕರುಣಿಸುವುದು' ಎಂದು ಹೇಳಿ ಹನ್ನೆರಡುಸಾವಿರ ಲಕ್ಷ ವಸ್ತುಗಳನ್ನು
ಬಸವಣ್ಣನವರ ಚರಣದ ಮೇಲೆ ಸುರಿದು ಅವರನ್ನು ಮನೆಗೆ ಕಳು
ಹಿಸಿ ವಿಸ್ಮಿತ ಚಿತ್ತನೂ, ಕೌತುಕ ಹೃದಯನೂ ಆಗಿ, ತನ್ನ ಅರಮನೆಗೆ
ಬಂದನು. ಇತ್ತ ಶರಣಸ್ತೋಮವು ರಾಜಶೇಖರ ಚರಣಸರಸೀರುಹ
ಮಕರಂದಮಧುಕರಾಯಮಾಣನೂ ಜಂಗಮಪ್ರಾಣಿಯೂ ಆದ ಬಸ
ರಾಯ ದೇವನನ್ನು ತಮ್ಮ ನಡುವೆ ಇಟ್ಟುಕೊಂಡು ಆತನ ಸತ್ಯಗುಣ
ವನ್ನು ಸಾಮರ್ಥ್ಯವನ್ನು ತೇಜದುನ್ನತಿಯನ್ನು ದಾನದತಿಶಯವನ್ನು ಬಣ್ಣಿ
ಸಹತ್ತಿದರು. ಗಣ ಸಂತಾನವು ಒಲಿದು ಕೊಂಡಾಡುತ್ತಿರಲು ಬಸವರಾ
ಜನು ಕೇಳಿ ಕೈಮುಗಿದು ವಿನಯದಿಂದ 'ಶಿಶುವನ್ನು ಹೀಗೆ ಹೊಗಳಿ
ಘಾತಿಸಬೇಕೇ' ಎಂದು ಹೇಳಹತ್ತಿದನು.

(ಮುಂದೆವರಿಯುವುದು.)

# ವಚನಶಾಸ್ತ್ರಸಾರ ಭಾಗ ೩. (ಪೂರ್ವಾರ್ಧ)

ಶಿವಶರಣರ ಬಗ್ಗೆ ಆದರಭಾವವು ಸಮಾಜದಲ್ಲಿ ಈಗ ಹೆಚ್ಚೆಚ್ಚಿಗೆ ಉತ್ಪನ್ನವಾಗುತ್ತ ಹೋಗುತ್ತಿರುವದು ಸುಚಿನ್ಹವಾಗಿದೆ. ಹೋದ ಅಕ್ಟೋಬರ ತಿಂಗಳಲ್ಲಿ ವಚನಶಾಸ್ತ್ರಸಾರ ಗ್ರಂಥದ ಮೂರನೆಯ ಭಾಗವು ಪ್ರಕಟವಾಯಿತು. ಅದರ ಪ್ರತಿಗಳನ್ನು ನಾವು ಕೆಲವು ಮಹನೀಯರಿಗೆ ಕಾಣಿಕೆಯಾಗಿ ಕಳಿಸಿಕೊಟ್ಟದ್ದರ ಮೇಲೆ ಅವರು ತಮ್ಮ ಅಭಿಪ್ರಾಯಗಳನ್ನು ಸ್ವಯಂಪ್ರೇರಣೆಯಿಂದ ಬರೆದು ನಮಗೆ ಕಳಿಸಿ ತಮ್ಮ ಆದರಭಾವವನ್ನು ವ್ಯಕ್ತಪಡಿಸಿದ್ದಕ್ಕೋಸ್ಕರ ನಾವು ಅವರಿಗೆ ಬಹಳ ಆಭಾರಿಯಾಗಿದ್ದೇವೆ. ಅವುಗಳನ್ನು ನಾವು ಕೆಳಗೆ ಪ್ರಸಿದ್ಧಿಸಿದ್ದೇವೆ.

ಜನತೆಯಲ್ಲಿ ವಚನವಾಙ್ಮಯಕ್ಕೋಸ್ಕರ ಪ್ರೀತಿಯೂ ಆದರವೂ ಹೀಗೆ ಹೆಚ್ಚುತ್ತಲಿದ್ದರೂ, ಅದರಲ್ಲಿಯ ವಿಚಾರಗಳು ಜನಸಮುದಾಯದಲ್ಲಿ ಪ್ರಸಾರಹೊಂದಲಿಕ್ಕೆ ಆಗಬೇಕಾದಷ್ಟು ಪ್ರಯತ್ನಗಳು ಇನ್ನೂ ಜರುಗಿರುವದಿಲ್ಲ. ಈ ಕಾರ್ಯದಲ್ಲಿ ಸಂಶೋಧನ ಮತ್ತು ಪ್ರಸಾರ ಹೀಗೆ ಎರಡು ವಿಧದ ಕಾರ್ಯಗಳಿದ್ದು ಅವುಗಳನ್ನು ಬಲವಾಗಿ ಸಾಗಿಸದೆ ಇದ್ದಲ್ಲಿ ಈ ವರೆಗೆ ನಡೆದ ಪ್ರಯತ್ನಗಳು ಅಪೂರ್ಣವಾಗಿ ಉಳಿದು ಅವು ಮುಂದೆ ಫಲಕಾರಿಯಾಗುವ ಸ್ಥಿತಿಯು ತಪ್ಪಿಹೋಗುವ ಸಂಭವವಿದೆ. ಆದರೆ ವೀರಶೈವ ಸಮಾಜದಲ್ಲಿ ಇಂಥ ಸಂಸ್ಕೃತಿಪೋಷಣೆಗೋಸ್ಕರ ಒಲವುಗಳು ಈಚೆಗೆ ಅನೇಕ ಕಾರಣಗಳ ಮೂಲಕ ದುರ್ಬಲವಾಗುತ್ತ ನಡೆದಿವೆಂಬುದು ಖೇದಕರವಾಗಿರುತ್ತದೆ. ಇದಕ್ಕೆ ಮಾನಸಿಕ ಉನ್ನತಿಯು ಅತ್ಯವಶ್ಯವಾದುದು. ಈ ಉನ್ನತಿಯು ಮನುಷ್ಯನ ನಿಃಸ್ವಾರ್ಥತೆ, ಉತ್ಕೃಷ್ಟ ಜೀವನ, ಗುಣಗ್ರಾಹಕತನ ಇವುಗಳ ಮೇಲೆ ಹೆಚ್ಚಾಗಿ ಅವಲಂಬಿಸಿರುತ್ತದೆ. ಆದರೆ ಈಗಿನ ಒಂದು ಬಗೆಯ ವಾತಾವರಣದ ಮೂಲಕ ಅನೇಕ ತರದ ರಾಜಕೀಯ ಮತ್ತು ಸಾಮಾಜಿಕ ಹೋರಾಟಗಳು ನಡೆಯುತ್ತಿದ್ದು ಅವುಗಳ ಮೂಲಕ ಸಂಸ್ಕೃತಿ ಪೋಷಣದ ಕಾರ್ಯಗಳು ಹಿಂದೆ ಬೀಳುತ್ತಾ ಇವೆ. ಈಗಿನ ಶಿಕ್ಷಣಕ್ರಮದಲ್ಲಿ ಕನ್ನಡ ಭಾಷೆಯ ಅಭ್ಯಾಸವು ಸೇರ್ಪಡೆಯಾದರೂ ಅದರಲ್ಲಿರುವ ಕರ್ನಾಟಕ ಸಂಸ್ಕೃತಿಯ ಅಭ್ಯಾಸದ ರೀತಿಯು ಅದನ್ನು



ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮನದಟ್ಟು ಮಾಡುವಂತೆ ಅದರ ಯೋಜನೆಯು ಇರದ್ದರಿಂದ ನಮ್ಮ ದೇಶದಲ್ಲಿ ಜನರಲ್ಲಿ ಇರಬೇಕಾದ ಸಂಸ್ಕೃತಿಯ ಜ್ಞಾನವು ಸರಿಯಾಗಿ ಆಗುವದಿಲ್ಲ. ಈ ಸ್ಥಿತಿಯಲ್ಲಿ ಸಮಾಜದವರೇ ಈ ಬಗ್ಗೆ ಆವಶ್ಯಕ ಏರ್ಪಾಡುಗಳನ್ನು ಮಾಡಿ ಜನತೆಯಲ್ಲೆಲ್ಲ ಅದನ್ನು ಹರವಬೇಕಾಗಿರುತ್ತದೆ. ವಿವಿಧ ಸಮಾಜಗಳುಳ್ಳ ಹಿಂದುಸ್ತಾನದಲ್ಲಿ ಈ ಬಗೆಯ ಏರ್ಪಾಡನ್ನು ಮಾಡುವದು ಬಹು ಅವಶ್ಯವಿದ್ದು ಇದರ ಭಾರವು ಆಯಾ ಸಮಾಜಗಳ ಮೇಲೆ ಸ್ವಾಭಾವಿಕವಾಗಿಯೇ ಹೆಚ್ಚಾಗಿ ಇರುತ್ತದೆ.

ಮೇಲೆ ಹೇಳಿದ ಪರಿಸ್ಥಿತಿಯನ್ನು ನಾವು ವಿಚಾರಿಸಿದಲ್ಲಿ ಕರ್ನಾಟಕದಲ್ಲೆಲ್ಲ ಇನ್ನೂ ಉಪಲಬ್ಧವಿರುವ ಗ್ರಂಥಗಳನ್ನು ನಾವು ಒತ್ತಟ್ಟಿಗೆ ಶೇಖರಿಸಬೇಕಾಗಿರುತ್ತದೆ. ಹೀಗೆ ಶೇಖರಿಸಿ ಅವುಗಳನ್ನು ಶುದ್ಧಗೊಳಿಸಿ ಪ್ರಸಿದ್ಧಿಸಬೇಕಾಗಿರುತ್ತದೆ. ಇಷ್ಟೇ ಅಲ್ಲ, ಅವುಗಳ ಸಾರವನ್ನು ಮತ್ತು ಅಭಿಪ್ರಾಯಗಳನ್ನು ಆಧುನಿಕ ಭಾಷೆಯಲ್ಲಿ ಜನರಿಗೆ ಸುಲಭವಾಗಿ ತಿಳಿಯುವಂತೆ ಅನೇಕ ತರದ ಗ್ರಂಥಗಳನ್ನು ರಚಿಸಬೇಕಾಗುತ್ತದೆ. ಸಮಾಜದವರು ಮಾಡಬೇಕಾದ ಈ ಅತ್ಯಾವಶ್ಯಕ ಕಾರ್ಯದಲ್ಲಿ ಈ ವರೆಗೆ ಕೊನೆಗಂಡ ಅಂಶವು ಅತ್ಯಲ್ಪವಾಗಿರುತ್ತದೆ. ಇದನ್ನು ಪೂರ್ತಿಮಾಡದೆ ಹೋದಲ್ಲಿ ಒಂದು ಮಹತ್ವದ ವಾಙ್ಮಯದ ಪ್ರಕಾಶನ ಕಾರ್ಯವು ಇಲ್ಲಿಯೇ ನಿಂತುಹೋಗುವ ಸಂಭವವಿದೆ. ಈ ಸಂಗತಿಯನ್ನು ವಾಚಕರ ನಿದರ್ಶನಕ್ಕೆ ತರುವ ಉದ್ದಿಶ್ಯವಾಗಿ ನಾವು ನಮಗೆ ಬಂದ ಕೆಲ ಮಹನೀಯರ ಪತ್ರಗಳನ್ನು ನಾವು ಇಲ್ಲಿ ಕೊಡುತ್ತೇವೆ. ನಾವು ಅವರ ಅಪ್ಪಣೆಯನ್ನು ತೆಗೆದುಕೊಳ್ಳದೆ ಹೀಗೆ ಮಾಡಿದ್ದಕ್ಕೋಸ್ಕರ ಅವರ ಕ್ಷಮಾಪಣೆಯನ್ನು ನಾವು ಕೇಳಿಕೊಳ್ಳುತ್ತೇವೆ.

## ಶ್ರೀಮಂತ ಬಾಬಾಸಾಹೇಬ ಲಖಮಗೌಡಾ ಸರದೇಸಾಯಿ ಒಂಟಮುರಿ ಇವರ ಪತ್ರ

“ತಾವು ವಚನಶಾಸ್ತ್ರಸಾರ ಭಾಗ ೩ ಈ ಗ್ರಂಥವನ್ನು ನಮ್ಮ ತಂದೆಯವರ ಹೆಸರಿನಿಂದ ಕಾಣಿಕೆಯಾಗಿ ಕಳಿಸಿದ್ದಕ್ಕೋಸ್ಕರ ನಾವು ಬಹಳ ಆಭಾರಿಯಾಗಿದ್ದೇವೆ. ಈ ಗ್ರಂಥವು ನಿಶ್ಚಯಪೂರ್ವಕವಾಗಿ ಉತ್ತಮತರದ್ದಿರಲಿಕ್ಕೆ ಬೇಕು. ವಚನಶಾಸ್ತ್ರಸಾರದ ಎಲ್ಲ ಭಾಗಗಳನ್ನು ಮತ್ತು

ಶಿವಾನುಭವ ಪತ್ರಿಕೆಯನ್ನು ಈವರೆಗೆ ಪ್ರಕಟ ಮಾಡಿ ಕನ್ನಡ ವಾಙ್ಮಯ
ದಲ್ಲಿ ಒಂದು ಮಹತ್ತರವಾದ ಗ್ರಂಥ ಸಾಮಗ್ರಿಯನ್ನು ನೀವು ಉಂಟು
ಮಾಡಿದ್ದೀರಿ. ವೀರಶೈವ ಸಮಾಜಕ್ಕೆ ತಾವು ಹೀಗೆ ಒಂದು ಉತ್ಕೃಷ್ಟ
ಸೇವೆಯನ್ನೂ ಮಾಡಿರುವಿರಿ.

ಶಿವಾನುಭವ ಪತ್ರಿಕೆಯ ಪ್ರಾರಂಭದ ಕಾಲದಲ್ಲಿ ನನ್ನ ತಂದೆಯವರು
೧೦೦ ರೂಪಾಯಿಗಳನ್ನು ನಿಮಗೆ ಕೊಟ್ಟದ್ದನ್ನು .ದಯವಿಟ್ಟು ಉಲ್ಲೇಖಿ
ಸಿರುವಿರಿ. ಆದರೆ ಈ ಅವಧಿಯಲ್ಲಿ ಈ ಪತ್ರಿಕೆಯನ್ನು ತಾವು ನಮಗೆ
ಕಳಿಸುತ್ತಾ ಇರುವದಲ್ಲದೆ ಅನೇಕ ಗ್ರಂಥಗಳನ್ನೂ ಕೂಡ ಕಳಿಸಿದ್ದೀರಿ.
ಈ ಗ್ರಂಥಗಳನ್ನು ಸಾಮಾನ್ಯಜನರು ಅಷ್ಟು ಲಕ್ಷಪೂರ್ವಕವಾಗಿ ಓದು
ತ್ತಿರಲಿಕ್ಕಿಲ್ಲ. ಮತ್ತು ಹೀಗೆ ಓದುವವರ ಸಂಖ್ಯೆಯೂ ಬಹಳವಿರಲಿಕ್ಕಿಲ್ಲ.
ಆದರೂ ಕೆಲವರಾದರೂ ಅವುಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ ಅವು
ಗಳ ಸ್ವಾದವನ್ನು ರುಚಿಸುತ್ತಿರಬೇಕೆಂದು ನನ್ನ ಮನವರಿಕೆಯಿದೆ.

ನಾನು ಈಗ ತಮಗೆ ತಮ್ಮ ಶ್ರಮದ ಪ್ರತಿಫಲಕ್ಕೋಸ್ಕರ ೧೮೦
ರೂಪಾಯಿಗಳನ್ನು ಕಳಿಸಿರುತ್ತೇನೆ. ತಮ್ಮಿಂದ ಜನಸಾಮಾನ್ಯಕ್ಕೂ
ನಮ್ಮ ಸಮಾಜಕ್ಕೂ ಇನ್ನೂ ಹೆಚ್ಚಿಗೆ ಸೇವೆಯು ಘಟಿಸುವದಕ್ಕೋಸ್ಕರ
ತಮಗೆ ಇನ್ನೂ ಹೆಚ್ಚಿಗೆ ಆಯುಷ್ಯವನ್ನು ದೇವರು ಕೊಡಲೆಂದು ನಾನೂ
ನನ್ನ ತಂದೆಯವರೂ ಇಚ್ಛಿಸುತ್ತೇವೆ.

ನನ್ನ ತಂದೆಯವರ ಪ್ರಕೃತಿಯು ಮುಪ್ಪಿನ ಸಲುವಾಗಿ ಅಷ್ಟು ಸರಿ
ಯಾಗಿ ಇಲ್ಲ. ನಾವೆಲ್ಲರೂ ಚನ್ನಾಗಿ ಇದ್ದೇವೆ. ನಿಮ್ಮ ಚಿರಂಜೀವನಿಗೆ
ನಮ್ಮ ನೆನಪು ಮಾಡಿರಿ."

ಮಿ॥ ವೀರಭದ್ರಪ್ಪ ಹಾಲಭಾವಿ, ಬಿ. ಎ. ಎಲ್. ಎಲ್. ಬಿ.
ರಿಟಾಯರ್ಡ ೧ನೇ ವರ್ಗ ಸಬಜಜ್ಜ ಧಾರವಾಡ.

"ತಾವು ವಚನ ಶಾಸ್ತ್ರ ಸಾರ ಮೂರನೇ ಭಾಗವನ್ನು ನನಗೆ
ಕಳಿಸಿ ಕೊಟ್ಟದ್ದಕ್ಕೆ - ಅತ್ಯಾನಂದವಾಯಿತು. ಅದಕ್ಕೋಸ್ಕರ ನಾನು
ತಮಗೆ ಬಹಳ ಆಭಾರಿಯಾಗಿದ್ದೇನೆ. ಇನ್ನು ಮೇಲೆ ನೀವು ನಿಮ್ಮ ಶ್ರಮ
ವನ್ನು ನಿಲ್ಲಿಸಿ ಬಿಡುವೆವೆಂದು ಬರೆದಿದ್ದೀರಿ. ಆದರೆ ನಿಮ್ಮ ದೇಹದಲ್ಲಿ
ಉಸಿರು ಇರುವ ವರೆಗೂ ನೀವು ನಿಮ್ಮ ಶ್ರಮದಿಂದ ಬಿಡುಗಡೆ ಹೊಂ



ದುವದಿಲ್ಲೆಂದು ಹೇಳಲು ನಾನು ಧೈರ್ಯ ತಾಳಿದ್ದೇನೆ. ನಿಜವಾಗಿ
ಈ ನಿಮ್ಮ ಶ್ರಮವು ನಿಮ್ಮ ಆಯುಷ್ಯದ ಸಾರವೇ ಆಗಿರುತ್ತದೆ. ಈ
ಮಹತ್ತರವಾದ ಪೃಥ್ವಿಯಲ್ಲಿ ಇಂಥ ಅಸಂಖ್ಯ ಉದಾಹರಣೆಗಳಿವೆ. ಹೀಗೆ
ಕಾರ್ಯ ಮಾಡುವ ನಿಮಗೆ ಮೊದಲು ನನ್ನಿಂದ ಸ್ವಲ್ಪ ಸಹಾಯವಾ
ದದ್ದಕ್ಕೆ ನನಗೆ ಸಮಾಧಾನವೆನಿಸುತ್ತದೆ. ನಿಮ್ಮ ಶ್ರಮದ ಮೂಲಕ
ಎರಡು ವಿಷಯಗಳಲ್ಲಿ ಅಂದರೆ ಧರ್ಮ ಮತ್ತು ವಾಙ್ಮಯ ಇವುಗಳಲ್ಲಿ
ಹೊಸ ಕಳೆಯು ಉಂಟಾಗಿ ಸಮಾಜದಲ್ಲಿ ಕ್ರಾಂತಿಯುಂಟಾಯಿತು.
ನೀವು ಇನ್ನೂ ಹೆಚ್ಚಿಗೆ ಶ್ರಮವಹಿಸುವಂತೆ ನಿಮಗೆ ಆರೋಗ್ಯವೂ ದೀರ್ಘಾ
ಯುವೂ ಉಂಟಾಗಲೆಂದು ನಾನು ದೇವರನ್ನು ಬೇಡಿಕೊಳ್ಳುತ್ತೇನೆ."

## ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಹಾಲಕೆರೆ ಅನ್ನದಾನಿ ಮಹಾಸ್ವಾಮಿಗಳವರು

ರಾವಸಾಹೇಬ ಹಳಕಟ್ಟಿ ಸಾಹೇಬರಿಗೆ
"ನಮ್ಮ ಕೃಪಾಪಾತ್ರರಾದ
ಆಶೀರ್ವಾದ ಪೂರ್ವಕ ಅಪ್ಪಣೆಕೊಡಿಸುವದೇನಂದರೆ— ಇಷ್ಟು ದಿವಸ
ಗಳ ವರೆಗೆ ಶ್ರೀ ಶಿವಯೋಗ ಮಂದಿರದ ಭಿಕ್ಷೆಯ ಸಲುವಾಗಿ ಫಿರ್ತಿ
ಮೇಲೆ ಇರೋಣಾಗಿತ್ತು. ನೀವು ಕಳುಹಿಸಿದ ವಚನಶಾಸ್ತ್ರ ಭಾಗವು
ಇಲ್ಲಿ ಈ ಒಳಗಾಗಿ ಬಂದು ಮುಟ್ಟಿದೆ. ಮತ್ತು ನಿಮ್ಮ ಪತ್ರವಾದರೂ
ಮುಟ್ಟಿರುವದು. ನಾವು ತಡಮಾಡಿ ಇಲ್ಲಿಗೆ ದಯಮಾಡಿಸಿದ ಕಾರಣ
ನಿಮಗೆ ಉತ್ತರ ಕೊಡಲಿಕ್ಕೆ ತಡವಾಯಿತು ನೀವು ಕಳಿಸಿದ ಗ್ರಂಥವನ್ನು
ಅವಲೋಕಿಸಿದ್ದಾಯಿತು. ವಿಷಯಗಳ ವಿವರಣೆಯು ಬಹು ಚೆನ್ನಾಗಿದೆ.
ಈ ಸ್ತುತ್ಯ ಕಾರ್ಯವನ್ನು ಕೊನೆಗಾಣಿಸಿದ ಬಗ್ಗೆ ತಮ್ಮ ಸಾಹಸವೂ,
ಭಕ್ತಿಯೂ, ಸ್ವಾರ್ಥತ್ಯಾಗವೂ ಅವರ್ಣನೀಯವಾಗಿರುವವು. ಈ ಬಗ್ಗೆ
ಹೆಚ್ಚಾಗಿ ಪತ್ರದಲ್ಲಿ ಬರೆಯುವ ಅವಶ್ಯಕತೆ ಇಲ್ಲ ತಾವು ಕೈಕೊಂಡ
ಶಿವನ ಕಾರ್ಯಕ್ಕೆ ಶಿವನು ತಾನೇ ಸಹಾಯ ಮಾಡುವನೆಂಬ ನಿಶ್ಚಯ
ವಿದೆ. ಈಗ ಹನ್ನೊಂದು ರೂಪಾಯಿಗಳನ್ನು ಮನಿ ಆರ್ಡರದಿಂದ ಇವೊ
ತ್ತಿನ ದಿವಸ ಕಳಿಸಲಾಗಿದೆ. ದೇವರು ಈ ನೀವು ಕೈಕೊಂಡ ಶಿವ
ಕಾರ್ಯವನ್ನು ಮುಂದಾದರೂ ಇದರಂತೆ ಕೈಗೂಡಿಸಿಕೊಡುವದಕ್ಕಾಗಿ
ನಿಮಗೆ ಆತನು ಆಯುರಾರೋಗ್ಯ ಸಂಪತ್ತನ್ನು ದಯಪಾಲಿಸಲೆಂದು
ನಮ್ಮ ಕೃಪಾಪೂರಿತ ಆಶೀರ್ವಾದವದೆ."

ಶ್ರೀಮನ್ನಿರಂಜನ ಶ್ರೀಮಹಾದೇವಸ್ವಾಮಿಗಳು ಬೆಂಗಳೂರು.

"ತಾವು ವಚನಶಾಸ್ತ್ರಸಾರ ೩ನೇ ಭಾಗದ ಪೂರ್ವಾರ್ಧವನ್ನು ಆತ್ಯಾ ದರದಿಂದ ಸ್ವೀಕರಿಸಿದ್ದೇವೆ. ಈ ಪುಸ್ತಕವು ವೀರಶೈವರ ಆಚಾರವನ್ನು ಸಕಲರಿಗೂ ಸುಲಭವಾಗಿ ತಿಳಿಯುವಂತೆ ಬೋಧಿಸುತ್ತದೆ. ಮತ್ತು ಅನೇಕ ಶಿವಶರಣರ ಅನುಭವ ಪೂರ್ಣಗಳಾದ ವಚನಗಳಿಂದ ತುಂಬಿಕೊಂಡಿ ರುವದು. ಅಷ್ಟಾವರಣಗಳಲ್ಲಿ ಗುರುಲಿಂಗಜಂಗಮದ ಯಥಾರ್ಥಸ್ವ ರೂಪವು ಸಕ್ರಮವಾಗಿ ಪ್ರತಿಪಾದಿಸಲ್ಪಟ್ಟಿರುಹದು. ವೇಧಾ, ಮಂತ್ರ, ಕ್ರಿಯಾದೀಕ್ಷೆಗಳಲ್ಲಿ ೩೧ ದೀಕ್ಷೆಯ ಸ್ವರೂಪವೂ, ನವಲಿಂಗಗಳ ನಿರ್ಣ ಯವೂ, ೩೬ ಸಕೀಲಗಳ ನಿಜಸ್ಥಿತಿಯೂ, ಬಹಳೇ ಚನ್ನಾಗಿ ನಿರ್ಣಯಿ ಸಲ್ಪಟ್ಟಿರುವವು. ಪ್ರತಿಯೊಬ್ಬ ವೀರಶೈವನು ಅವಶ್ಯವಾಗಿ ಓದತಕ್ಕದಾ ಗಿರುತ್ತದೆ. ನಾವು ಪ್ರತಿನಿತ್ಯ ಪ್ರವಚನ ಮಾಡಿಸಿ ಎಲ್ಲರಿಗೂ ತಿಳಿಯು ವಂತೆ ಬೋಧಿಸಿದೆವು. ಎಲ್ಲರೂ ಕೇಳಿ ಸಂತೋಷಪಟ್ಟರು. ಈ ಕಡೆಗೆ ಕ್ರಮವಾಗಿ ಪ್ರಚಾರಕ್ಕೆ ತರುವ ಪ್ರಯತ್ನ ಮಾಡುತ್ತೇವೆ."

ಮ. ರಾ ರಾ. ವೀರಪ್ಪ ಬಸಪ್ಪ ಬಿಳೇಸಂಗಡಿ ಬಿ. ಎ. ಎಲ್. ಎಲ್. ಬಿ.

"ತಾವು ಆದರ ಪೂರ್ವಕವಾಗಿ ಕಳಿಸಿದ ವಚನಶಾಸ್ತ್ರಸಾರವೆಂಬ ಗ್ರಂಥದ ೩ನೆ ಭಾಗ ಪೂರ್ವಾರ್ಧವನ್ನು ನೋಡಿ ಮನಸ್ಸಿಗೆ ಆನಂದವಾ ಯಿತು. ಯಾವದೋ ಒಂದು ಕಾಲದಲ್ಲಿ ಮುತ್ತು ರತ್ನಗಳಿಂದ ತುಂಬಿದ ಹಡಗವು ಜಲಸಮಾಧಿಯನ್ನು ಕಂಡಿದ್ದು, ಒಬ್ಬ ಬಲಾಢ್ಯ ನಾವಿಕನು ಜಲಶೋಧ ಮಾಡಲು ಹೊರಡಲನುವಾದ ಸಾಹಸಿಯೂ ಆದವನ ಕೈಗೆ ಆ ಹೂಳಿದ ಮುತ್ತು ರತ್ನಗಳ ರಾಶಿಯು ಕೈಸೇರುವಂತೆ, ಎಂದೋ ಮರೆತು ಹೋದ ಶಿವಶರಣರ ಜ್ಞಾನಭಾಂಡಾರವು ಇಂದು ನಿಮ್ಮಿಂದ ಲೋಕಪ್ರಪಂಚದ ಉಪಯೋಗಕ್ಕಾಗಿ ನೀಡಿದುದು ಒಂದು ಮಹದು ಪಕಾರವೆಂದು ನಾನು ಭಾವಿಸುತ್ತೇನೆ. ಯಾವ ಸಿಂಹಾಸನಾಧಿಪತಿಯೂ ಯಾವ ಜಗದ್ಗುರುವೂ ಸಮಾಜದ ದುಡ್ಡು ತಿಂದು ತೇಗಿ ಮೆರೆದಾಡಿ ದಾಗ್ಯೂ ಈ ನಿಧಿಯ ಕಡೆಗೆ ಅವರ ದೃಷ್ಟಿಯೇ ಹೋಗಲಿಲ್ಲ. ಇನ್ನಾ ದರೂ ಈ ಬೆಲೆಯುಳ್ಳ ವಸ್ತುವಿನ ಕಡೆಗೆ ಅವರ ಲಕ್ಷ್ಯವು ಹೋಗಲೊ ಲ್ಲದು. ಇದಕ್ಕಾಗಿ ನನಗೊಂದು ನಿರಾಶಾಜನಕ ವಾತಾವರಣವು ತೋರ ಹತ್ತಿದೆ. ಆತ್ಮ ಪೌರುಷಕ್ಕಾಗಿ ತಮ್ಮ ಹೆಸರಿಗಾಗಿ ಸಹಸ್ರಾವಧಿ ಹಣ



ವೆಚ್ಚ ಮಾಡತಕ್ಕ ಸ್ವಾಮಿಗಳು ಈ ಕೆಲಸಕ್ಕೆಂದರೆ ಬರಿಗೈಯನೀಡುವರು. ಇದು ಸಮಾಜದ ದುರ್ದೆಶೆ

ಸಮಾಜದಲ್ಲಿ ಬಲ್ಲವರೂ ಆಚಾರಸಂಪನ್ನರೂ ವಿದ್ವಾಂಸರೂ ಎನಿ ಸಿಕೊಂಡು ಅನೇಕ ಸಮಾಜ ಕಾರ್ಯಗಳನ್ನು ಮಾಡಿ ಕೀರ್ತಿಯನ್ನು ಪಡೆದು ಲಿಂಗೈಕ್ಯರಾದ ಸಿದ್ಧರಾಮಪ್ಪನವರು ಪಾವಟೆ ಇವರನ್ನು ಬಿಟ್ಟರೆ ನೀವೊಬ್ಬರೇ ಈಗ ವೀರಶೈವ ವಾಙ್ಮಯ ಸಾಗರವನ್ನು ಸುತ್ತುವ ನಾವಿ ಕರು. ಈಗಿನ ಪದವೀಧರರು ಬೇರೆ ಕಡೆ ಚಿತ್ತವೃತ್ತಿಯುಳ್ಳವರಾಗಿದ್ದಾರೆ. ನಿಮ್ಮಿಂದ ಮಹತ್ತರವಾದ ಕಾರ್ಯವು ನಿಮ್ಮ ತರುವಾಯ ಸಾಂಗವಾಗಿ ನಡೆಯುವದಕ್ಕಾಗಿ ಒಂದು ಮರ್ಯಾದಿತ ವಿದ್ವಾಂಸಮಂಡಲಿಯನ್ನು ಏರ್ಪಡಿಸತಕ್ಕದ್ದು. ಆ ಮಂಡಲವು ಮೇಲಿಂದ ಮೇಲೆ ನೆರೆದು ಪರಸ್ಪರ ಬೆರೆದು ಕಾರ್ಯತತ್ಪರವಾಗಬೇಕು. ಅದಕ್ಕಾಗಿ ಒಂದು ನಿಧಿಯು ನೀವಿ ರುವಾಗಲೇ ಏರ್ಪಡಬೇಕು. ಗ್ರಂಥಸಂಗ್ರಹಾಲಯವು ಬೆಳೆಯಬೇಕು. ಅದಕ್ಕೆ ಶಿವಾನುಭವ ಮಂದಿರವೆಂಬ ಹೆಸರು ಬರಬೇಕು. ಈ ಕಾರ್ಯ ವನ್ನು ನೀವು ಅಗತ್ಯವಾಗಿ ಮಾಡಬೇಕು.

ಈಗ ನಮ್ಮ ಸಮಾಜದಲ್ಲಿ ಗೌರವಾಸ್ಪದ ಸಂಸ್ಥೆ ಯಾವದೂ ಇಲ್ಲ ದ್ದರಿಂದ ನಮ್ಮ ಸಮಾಜದ ಹಿತವು ಎಷ್ಟು ಸಾಧಿಸಲ್ಪಡಬೇಕೋ ಅಷ್ಟು ಸಾಧಿಸುವದಿಲ್ಲ. ಸರಕಾರದ ಮತ್ತು ಇತರ ಸಮಾಜಗಳ ದೃಷ್ಟಿಗೆ ಇದು ಮೊದಲಿನಂತೆ ಬಾರದಾಗಿದೆ. ಕಾರಣ ವೀರಶೈವ ಮಂಡಲವೊಂ ದನ್ನು ನಾವೆಲ್ಲರೂ ಕೂಡಿ ರಚಿಸಿ ಅದರ ಲಾಭ ಪಡಕೊಳ್ಳಬೇಕಾಗಿದೆ. ಮುಖಂಡರೆಂದು ಕರೆಯಲ್ಪಡುವವರಲ್ಲಿ ತಾಳಮೇಳವಿಲ್ಲ. ಅವರಲ್ಲಿ ನಿಜ ವಾದ ನಿಃಸ್ವಾರ್ಥವಾದ ಸಮಾಜಾಭಿಮಾನವೂ ಇಲ್ಲ ಕೆಲಸಕ್ಕೆ ಬಾರದ ಸ್ವಾರ್ಥಪರಾಯಣತೆಯೇ ಅವರ ಮುಖ್ಯ ಗುರಿ. ಈ ವಿಷಾದಕರ ವಾತಾ ವರಣವನ್ನು ಚದರಿಸಿ ಬೇರೊಂದು ವಾತಾವರಣವನ್ನು ತರಬೇಕು. ಅಂದರೆ ನಮ್ಮ ಸಮಾಜಕ್ಕೆ ಗೌರವಸ್ಥಾನ ಬರುವದು.

ನಿಮ್ಮ ವಚನಶಾಸ್ತ್ರಸಾರದಲ್ಲಿಯ ಸುಗಂಧ ಪುಷ್ಪಗಳನ್ನು ಆಯ್ದು ಇಂಗ್ಲಿಷ ಬಲ್ಲವರ ಮುಂದೆ ಇಡಬೇಕೆಂದು ನನ್ನ ಹವ್ಯಾಸ. ಅದನ್ನು ಪೂರೈಸಿಕೊಡುವದು ಶಿವನ ಇಚ್ಛೆ.

ನೀವು ಪ್ರೀತಿಪೂರ್ವಕವಾಗಿ ಕಾಣಿಕೆಯಾಗಿ ಕಳಿಸಿದ್ದಕ್ಕೆ ನಾನು ತುಂಬಾ ನಿಮಗೆ ಋಣಿಯಾಗಿದ್ದೇನೆ. ಮೇಲೆ ಬರೆದ ಸೂಚನೆಗಳಿಗೆ ನೀವು ಬೇಗನೆ ಗಮನಕೊಟ್ಟು ಕಾರ್ಯರಂಗದಲ್ಲಿ ತರಬೇಕೆಂದು ಆಶಿಸುತ್ತೇನೆ.

ನೀವು ಈ ಸಾರೆ ದಸರಾ ಮಹೋತ್ಸವಕ್ಕೆ ಮೈಸೂರು ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ಹೋದದ್ದು ನೋಡಿ ನನಗೆ ಆನಂದವಾಯಿತು.

**ಮ. ರಾ. ರಾ. ಶಿವಪ್ಪ ಕೊಪ್ಪಳ ಮು. ಕೋಡಿಕೊಪ್ಪ**

ಅಜರಾಮರ ಕೀರ್ತಿಸಂಪನ್ನ (ಕಾಯ) ರಾವಸಾಹೇಬ ಫ. ಗು. ಹಳಕಟ್ಟಿ ಇವರಿಗೆ—

ಪರಮಪೂಜ್ಯ ಸನ್ನಿಧಿಯಲ್ಲಿ ತಾವು ಕಾಣಿಕೆಯಾಗಿ ಅರ್ಪಿಸಿದ ಬಸವಾದಿ ಪ್ರಮಥರ ವಚನಾಮೃತವೆಂಬ ಸಮುದ್ರವನ್ನು ಮಥನಿಸಿ ಆಯ್ದಿಟ್ಟೈದು ಅನೇಕ ಶಿವಶರಣರ ಮಣಿ ಮೌಕ್ತಿಕಗಳಂತಿರುವ ವಚನಗಳನ್ನು ಸಂಗ್ರಹಿಸಿ ಮಾಲೆಯಾಗಿ ರಚಿಸಲ್ಪಟ್ಟ ರತ್ನಹಾರದಂತಿರುವ ವಚನಶಾಸ್ತ್ರಸಾರ ೩ನೆಯ ಭಾಗವೆಂಬುವ ಗ್ರಂಥವನ್ನು ನೋಡಿ ಸಂತೋಷಿತನಾದೆನು. ಈ ಕಾಲದಲ್ಲಿ ಈ ರೀತಿಯಾಗಿ ಶ್ರಮವಹಿಸಿ ವಚನ ವಾಙ್ಮಯ ಸೇವೆಯನ್ನು ಮಾಡುವದನ್ನು ನೋಡಿವರೆ ತಮ್ಮನ್ನು ಆ ಮಹಿಮರಾದ ಶಿವಶರಣರ ವಂಶಜರೆಂದೇ ಹೇಳಬಹುದಲ್ಲದೆ ಬೇರೆಯಲ್ಲವು. ತಾವು ವೀರಶೈವರನ್ನು ಎಚ್ಚರಿಸಿದುದನ್ನು ನೋಡಿದರೆ ತಮ್ಮ ಉಪಕಾರವು ಚಿರಸ್ಮರಣೀಯುವಾದುದು ನೂತನವಾಗಿ ಶೋಧಿತವಾದ ಗ್ರಂಥವು ಅಚ್ಚಾಗುವದಿದ್ದರ ಖರ್ಚಿನ ಹಣವನ್ನು ಸಹಾಯ ಮಾಡಬೇಕೆಂದು ಇಚ್ಛೆಯಾಗಿದೆ. ತಿಳಿಸುವ ಕೃಪೆಯಾಗಬೇಕು.

ಮೇಲ್ಕಂಡ ಮಹನೀಯರು ಸಹಾನುಭೂತಿಪೂರ್ವಕವಾಗಿ ನನಗೆ ಹೀಗೆ ಪತ್ರಗಳನ್ನು ಬರೆದದ್ದಕ್ಕೋಸ್ಕರ ನಾನು ಅವರೆಲ್ಲರಿಗೆ ಬಹಳ ಆಭಾರಿಯಾಗಿದ್ದೇನೆ.

—ಫ. ಗು. ಹಳಕಟ್ಟಿ.

---

# ಪ್ರಸ್ತಾವನೆ.

ಮಧುವರಸನು ಬಿಜ್ಜಳನ ಸೈನ್ಯದಲ್ಲಿ ಒಬ್ಬ ದಂಡಾಧೀಶನಾಗಿದ್ದು ಅವನ ಕೈಕೆಳಗೆ ಅನೇಕ ವರ್ಷ ಸೇವೆ ಮಾಡುತ್ತ ಬಂದನೆಂದು ಅವನ ಬಗ್ಗೆ ದಂತಕಥೆಗಳಿವೆ. ಇವನ ಮೂಲ ಗ್ರಾಮವು ಮಂಗಳವಾಡವು. ಇದು ಈಗ ವಿಜಾಪುರ ಪಟ್ಟಣದಿಂದ ವಾಯುವ್ಯದಿಕ್ಕಿಗೆ ೫೦ ಮೈಲುಗಳ ಮೇಲೆ ಇದ್ದು, ಇದು ಸಾಂಗಲಿ ಸಂಸ್ಥಾನದ ಒಂದು ಮುಖ್ಯ ಗ್ರಾಮವಾಗಿದೆ. ಈ ಮಂಗಳವಾಡದಲ್ಲಿಯೇ ಬಿಜ್ಜಳನು ತರ್ದೇವಾಡಿ ನಾಡಿನಲ್ಲಿ ಚಾಲುಕ್ಯರ ಮಹಾಮಂಡಲೇಶ್ವರನಾಗಿ ರಾಜ್ಯವಾಳುತ್ತಿದ್ದನು. ಅವನಲ್ಲಿಯೇ ಮಧುವರಸನು ಒಂದು ಅಧಿಕಾರಸ್ಥಾನವನ್ನು ಹೊಂದಿ ದಂಡಾಧಿಪತಿಯಾಗಿದ್ದಂತೆ ತೋರುತ್ತದೆ. ಮುಂದೆ ಬಿಜ್ಜಳನು ಚಾಲುಕ್ಯರ ರಾಜ್ಯವನ್ನು ಆಕ್ರಮಿಸಿ ಕಲ್ಯಾಣ ಪಟ್ಟಣದಲ್ಲಿ ರಾಜನಾಗಿ ಆಳಹತ್ತಿದ ಬಳಿಕ ಮಧುವರಸನಾದರೂ ಅವನೊಡನೆ ಅಲ್ಲಿಗೆ ಹೋಗಿರಲಿಕ್ಕೆಬೇಕು.

ಬಸವೇಶ್ವರನು ಬಿಜ್ಜಳನಲ್ಲಿ ಮಂತ್ರಿಪದಾರೂಢನಾದ ಬಳಿಕ ಅನೇಕ ಶಿವಶರಣರು ಅವನಲ್ಲಿಗೆ ಬಂದು ವೀರಶೈವ ಧರ್ಮ ಪ್ರಸಾರ ಕಾರ್ಯಗಳನ್ನು ಕೈಕೊಂಡರು. ಅವರಲ್ಲಿ ಹರಳಯ್ಯನೂ ಒಬ್ಬನಾಗಿದ್ದು ಅವನು ತನ್ನ ಚರ್ಮಕಾರ ಉದ್ಯೋಗವನ್ನು ಕೈಕೊಂಡು ಉಪಜೀವಿಸುತ್ತಿದ್ದನು. ಅವನು ಒಂದು ದಿನ ಒಂದು ಮೋಚ್ಚೆಯ ಜೋಡನ್ನು ಸಿದ್ಧ ಪಡಿಸಿಕೊಂಡು ಕಲ್ಯಾಣಪಟ್ಟಣದಲ್ಲಿ ಹೋಗುತ್ತಿರುವಾಗ ಮಧುವರಸನು ಅವನನ್ನು ಮಾರ್ಗದಲ್ಲಿ ಕಂಡು, ಅವನ ಕೈಯ್ಯಲ್ಲಿದ್ದ ಆ ಜೋಡನ್ನು ಬಲಾತ್ಕಾರದಿಂದ ಕಸೆದುಕೊಂಡು ಹೋದನು. ಶಿವಶರಣನಾದ ಆ ಹರಳಯ್ಯನ ಮನಸ್ಸಿಗೆ ಅದರಿಂದ ವ್ಯಥೆಯಾಗಲಾಗಿ, ಮಧುವರಸನ ದೇಹದಲ್ಲಿ ತೊನ್ನಿನ ಬೇನೆಯು ಉತ್ಪನ್ನವಾಗಿ, ಅದರ ದಾಹದಿಂದ ಅವನು ಬಹಳ ಕಷ್ಟಪಡಹತ್ತಿದನು. ಆಗ ಅವನ ಮೈಮೇಲೆ ಎಷ್ಟು ನೀರನ್ನು ಹೊಯ್ದರೂ, ಆ ವಿಕಾರವು ನಿಲ್ಲದೇ ಹೋಯಿತು. ಒಂದುದಿನ ಅವನ ದಾಸಿಯೊಬ್ಬಳು ಅವಸರದಲ್ಲಿ ಆಕಸ್ಮಾತ್ತಾಗಿ ಹರಳಯ್ಯನ ಮನೆಯ ಬಚ್ಚಲ ಗುಂಡಿಯಲ್ಲಿ ನಿಂತಿದ್ದ ನೀರನ್ನೆತ್ತಿಕೊಂಡು ಬಂದು ಮಧುವರಸನ ಸ್ನಾನಕ್ಕೆ

ಹಾಕಲು, ಅವನ ಮೈಯ್ಯಲ್ಲಿದ್ದ ಬೇನೆಯು ಕೂಡಲೇ ಅಡಗಿಹೋಯಿತು. ಇದರ ಕಾರಣವನ್ನು ಅವನು ಆಶ್ಚರ್ಯಯುಕ್ತನಾಗಿ ಪರೀಕ್ಷಿಸುತ್ತಿರಲು ಮಧುವರಸನಿಗೆ ನಿಜಸ್ಥಿತಿಯು ತಿಳಿದುಬರಲು ಅವನು ಹರಳಯ್ಯನಿಗೆ ಶರಣು ಹೊಕ್ಕು ಅವನ ಮಗನಿಗೆ ತನ್ನ ಮಗಳನ್ನು ಕೊಟ್ಟು ಲಗ್ನ ಮಾಡಿದನು. ಮಧುವರಸನು ಜನ್ಮತಃ ಬ್ರಾಹ್ಮಣನಿದ್ದು ಬಸವೇಶ್ವರನ ಪ್ರಭಾವದಿಂದ ವೀರಶೈವಧರ್ಮಾನುವರ್ತಿಯಾಗಿದ್ದನು. ಆದರೂ ಕೂಡ ಕಲ್ಯಾಣಪಟ್ಟಣದಲ್ಲಿದ್ದ ಬ್ರಾಹ್ಮಣರು ಮಧುವರಸನು ಮಾಡಿದ ಈ ತರದ ವಿವಾಹದ ಮೂಲಕ ಅತ್ಯಂತ ಖತಿಗೊಂಡು ಅವನ ಕೃತಿಯ ಬಗ್ಗೆ ಬಿಜ್ಜಳನಲ್ಲಿ ದೂರಿಟ್ಟರು. ಆಗ ಬಿಜ್ಜಳನು ಬಸವೇಶ್ವರನನ್ನು ಬರಮಾಡಿಕೊಂಡು, ಶಿವಶರಣರು ಪಟ್ಟಣದಲ್ಲಿ ನಡೆಯಿಸಿರುವ ಈ ಬಗೆಯ ಅನಾಚಾರವರ್ತನೆಗಳನ್ನು ನಿಷೇಧಿಸಿ ನುಡಿಯಲು ಅದಕ್ಕೆ ಬಸವೇಶ್ವರನು ಶಿವಶರಣರಲ್ಲಿ ಜಾತಿ ಕುಲಭೇದಗಳಿಲ್ಲೆಂದು ತಿಳಿಯಪಡಿಸಿದರೂ, ಬಿಜ್ಜಳನು ಅದನ್ನು ಮನ್ನಿಸದೆ ಮಧುವರಸ ಹರಳಯ್ಯ ಇವರೀರ್ವರನ್ನು ಹಿಡತರಿಸಿ ಅವರನ್ನು ಆನೆಯ ಕಾಲಿನಿಂದ ತುಳಿಯಿಸಿ ಕ್ರೂರತನದಿಂದ ಕೊಲ್ಲಿಸಿದನು. ಕೆಲವು ವೀರಶೈವ ವೃತ್ತಾಂತಗಳಲ್ಲಿ ಬಿಜ್ಜಳನು ಅವರ ಕಣ್ಣನ್ನು ಕಿತ್ತಿಸಿದನೆಂದು ಹೇಳಲ್ಪಟ್ಟಿದೆ. ಹೀಗೆ ಬಿಜ್ಜಳನು ಕಲ್ಯಾಣದಲ್ಲಿ ಇಬ್ಬರು ಶಿವಶರಣರ ಮೇಲೆ ನಡೆಯಿಸಿದ ಕ್ರೂರ ಕೃತ್ಯಕ್ಕೋಸ್ಕರ ಶಿವಶರಣರೆಲ್ಲ ಖತಿಗೊಂಡರು. ಮತ್ತು ಪಟ್ಟಣದಲ್ಲೆಲ್ಲ ಒಂದು ದೊಡ್ಡ ಆಕ್ರೋಶವು ಎದ್ದಿತು. ಅರಸನೊಡನೆ ವೀರಶೈವರು ಯುದ್ಧ ಹೂಡುವ ಭೀತಿಯು ದೇಶದಲ್ಲೆಲ್ಲ ಉತ್ಪನ್ನವಾಯಿತು. ಬಸವೇಶ್ವರನಾದರೂ ಅರಸನು ನಡೆಯಿಸಿದ ಈ ಹಿಂಸೆಯನ್ನು ಕಂಡು ಇನ್ನು ಮುಂದೆ ಕಲ್ಯಾಣದಲ್ಲಿರಕೂಡದೆಂದು ಅಲ್ಲಿಂದ ಹೊರಟು ಕಪ್ಪಡಿಸಂಗಮೇಶ್ವರನಲ್ಲಿಗೆ ಹೋಗಿ ಅಲ್ಲಿಯೇ ಐಕ್ಯ ಹೊಂದಿದನು. ಆ ಮೇಲೆ ಕೆಲ ತಿಂಗಳುಗಳಾದ ಮೇಲೆ ಬಿಜ್ಜಳನು ಘಾತಿಸಲ್ಪಟ್ಟನೆಂದು ವೀರಶೈವ ಮತ್ತು ಜೈನ ಗ್ರಂಥಗಳಿಂದ ತಿಳಿದುಬರುತ್ತಿದೆ.

ಹೀಗೆ ಮಧುವರಸನ ಉದ್ವೇಗಕರವಾದ ವೃತ್ತಾಂತವಿದ್ದು ಅವನ ಪರ್ಯವಸಾನವು ಅಂತ್ಯದಲ್ಲಿ ದುಃಖಮಯವಾಗಿ ಜರಿಗಿತು. ಆದರೆ ಅವನು ನಡಿಸಿದ ಕಾರ್ಯಕ್ಕೋಸ್ಕರ ಅವನು ವೀರಶೈವರ ಸಾಮಾಜಿಕ ಇತಿಹಾಸದಲ್ಲಿ ಅತ್ಯಂತ ಉನ್ನತ ಸ್ಥಾನವನ್ನು ಪಡೆದಿರುತ್ತಾನೆ. ಅವನು



ಶಿವಾನುಭವ ಮಂಟಪದಲ್ಲಿದ್ದುಕೊಂಡು ಅನೇಕ ವಚನಗಳನ್ನು ರಚಿಸಿದನು. ಅವನ ಮುದ್ರಿಕೆಯು ಅರ್ಕೇಶ್ವರನೆಂದು ಇದೆ. ನಮಗೆ ದೊರೆತ ಅವನ ವಚನಗಳನ್ನು ಆಯ್ದು ನಾವು ಈ ಗ್ರಂಥದಲ್ಲಿ ಪ್ರಕಟಿಸಿದ್ದೇವೆ. ಅವುಗಳು ಇನ್ನೂ ಅನೇಕವಾಗಿ ಇರಬಹುದೆಂದು ನಮಗೆ ತೋರುತ್ತಿದೆ. ಅವನು ತನ್ನ ಧಾರ್ಮಿಕ ವಿಚಾರಗಳನ್ನು ಬೆಡಗಿನ ರೀತಿಯಿಂದ ಹೇಳಿರುತ್ತಾನೆ. ಅವು ಉಚ್ಚತರಗತಿಯವಾಗಿರುತ್ತವೆ. ಅವುಗಳಿಗೆ ಯಾರೋ ಒಬ್ಬರು ಭಾವಾರ್ಥವನ್ನೂ ಕೂಡ ಬರೆದಿದ್ದು ಈ ವಚನಕಾರರ ಅಭಿಪ್ರಾಯವನ್ನು ತಿಳಿಯಲು ಅವು ಬಹು ಸಹಾಯಕಾರಿಯಾಗಿರುತ ದೆ.

---

# ಸತ್ಯಕ್ಕನ ವಚನಗಳು.

# ಪ್ರಸ್ತಾವನೆ.

ನಾವು ಈಗ ಇದರಲ್ಲಿ ಸತ್ಯಕ್ಕನ ವಚನಗಳನ್ನು ಪ್ರಸಿದ್ಧಿಸಿದ್ದು ಈಕೆಯು ನಾವು ಪ್ರಸಿದ್ಧಿಸಿದವರಲ್ಲಿ ಮೂರನೆಯ ಸ್ತ್ರೀವಚನಕಾರಳಾಗಿದ್ದಾಳೆ. ನಾವು ಈ ಮೊದಲೇ ಮಹಾದೇವಿಯಕ್ಕನ ವಚನಗಳು, ಲಿಂಗಮ್ಮನ ವಚನಗಳು ಎಂದು ಎರಡು ಗ್ರಂಥಗಳನ್ನು ಸ್ವತಂತ್ರವಾಗಿ ಮುದ್ರಿಸಿದ್ದೇವೆ. ಬಸವೇಶ್ವರನ ಕಾಲದಲ್ಲಿ ಶಿವಶರಣರ ತತ್ವಗಳು ಸ್ತ್ರೀ ಸಮಾಜದ ಮೇಲೆ ಅತ್ಯಂತ ಪರಿಣಾಮಕಾರಿಯಾದವೆಂದು ತೋರುತ್ತದೆ. ಅವರಲ್ಲಿ ಕೆಲವರು ವೀರಶೈವ ಮತವನ್ನು ಸ್ವೀಕರಿಸಿದ್ದರಿಂದ ಬೇರೆ ಮತವನ್ನು ಅವಲಂಬಿಸಿದಂಥ ತಮ್ಮ ತಂದೆ ತಾಯಿ, ಪತಿ ಪುತ್ರ, ಬಾಂಧವರಿಂದ ಅತ್ಯಂತ ಹಿಂಸೆಯನ್ನು ಹೊಂದಿದ್ದು ಕಂಡುಬರುತ್ತದೆ. ಶಿವಶರಣರ ಚರಿತ್ರೆಗಳಲ್ಲಿ ಇಂಥ ಉದಾಹರಣೆಗಳು ಅನೇಕವಾಗಿ ದೊರೆಯುತ್ತವೆ. ವೀರಶೈವ ಧರ್ಮಪ್ರವರ್ತಕರು, ಸ್ತ್ರೀಪುರುಷರು ಸಮಾನರು ಎಂಬ ಅಭಿಪ್ರಾಯಗಳನ್ನು ಸಮಾಜದಲ್ಲಿ ಪ್ರಸಾರ ಮಾಡಿದ್ದರಿಂದ, ಈ ವಿಧವಾಗಿ ಆಗಿನ ಸ್ತ್ರೀಯರಲ್ಲಿ ಒಂದು ವಿಲಕ್ಷಣ ಜಾಗ್ರತೆಯು ಉತ್ಪನ್ನವಾಯಿತು. ಬಸವೇಶ್ವರನ ಕಾಲದಲ್ಲಿ ವೀರಶೈವ ಧರ್ಮವು ಭರದಿಂದ ಪ್ರಸಾರವಾಗಲು ಇದೊಂದು ಮುಖ್ಯ ಕಾರಣವಾಗಿರುತ್ತದೆ. ಸತ್ಯಕ್ಕನ ಒಂದು ವಚನವು ಸ್ತ್ರೀ ವಿಷಯವಾಗಿ ಇರುವದೇನಂದರೆ:—

"ಮೊಲೆ ಮುಡಿ ಇದ್ದುದೇ ಹೆಣ್ಣೆಂದು ಪ್ರಮಾಣಿಸಲಿಲ್ಲ. ಕಾಸೆ ಮೀಸೆ ಕಠಾರಿ ಇದ್ದುದೇ ಗಂಡೆಂದು ಪ್ರಮಾಣಿಸಲಿಲ್ಲ. ಅದು ಜಗದ ಹೋಹೆ. ಬಲ್ಲವರ ನೀತಿಯಲ್ಲ. ಏತರ ಹಣ್ಣಾದರೂ ಮಧುರವೇ ಕಾರಣ. ಚಂದವಿಲ್ಲದ ಕುಸುಮಕ್ಕೆಯೂ ವಾಸನೆಯೇ ಕಾರಣ. ಇದರಂದವ ನೀನೇ ಬಲ್ಲೆ ಶಂಭುಜಕ್ಕೇಶ್ವರಾ."

ಹೀಗೆ ಹೇಳಿದ್ದರಲ್ಲಿ ಸ್ತ್ರೀಪುರುಷರ ಬಾಹ್ಯ ಅವಯವಗಳ ಮೂಲಕ ಅವರಲ್ಲಿ ಹೆಚ್ಚುಕಡಿಮೆ ಎಂದು ಭಾವಿಸದೆ ಅವರಲ್ಲಿಯ ಯೋಗ್ಯತೆಯನ್ನು ಎಣಿಸಬೇಕೆಂದು ಸತ್ಯಕ್ಕನು ಇಲ್ಲಿ ಕೆಲವು ಸುಂದರವಾದ ಉದಾಹರಣೆಗಳನ್ನು ಕೊಟ್ಟು ನುಡಿದಿದ್ದಾಳೆ.

ವಚನಕಾರರು ದೇವರು ಒಬ್ಬನೇ ಇದ್ದಾನೆ, ಅವನು ನಿರಾಕಾರನಾಗಿದ್ದಾನೆ, ಎಂಬ ತತ್ತ್ವವನ್ನು ಪ್ರತಿಪಾದಿಸಿದ್ದರಿಂದ ಅವರ ಕಾಲದಲ್ಲಿ ರೂಢವಾಗಿದ್ದ ಅನೇಕ ದೇವತೆಗಳ ಪೂಜೆಯನ್ನು ಅವರು ನಿರಾಕರಿಸಬೇಕಾಯಿತು. ಬಸವೇಶ್ವರನ ಕಾಲದಲ್ಲಿ ಕರ್ನಾಟಕದಲ್ಲಿ ವಿಷ್ಣುವಿನ ಆರಾಧನೆಯು ಪ್ರಬಲವಾಗಿದ್ದರಿಂದ ಈ ಆಚರಣೆಯನ್ನು ವಚನಕಾರರು ವಿರೋಧಿಸುವ ಪ್ರಸಂಗಗಳು ಉಂಟಾದವು ಅವರು ಹೀಗೆ ವಿಷ್ಣುವಿನ ಪೂಜೆ ಮಾತ್ರವಲ್ಲ, ಶಿವನ ಪೂಜೆಯನ್ನೂ ಕೂಡ ವಿರೋಧಿಸಿದ್ದುಂಟು. ಇಂಥ ಉಕ್ತಿಗಳು ವಚನಕಾರರಲ್ಲಿ ಹೇರಳವಾಗಿ ದೊರೆಯುತ್ತವೆ. ಸತ್ಯಕ್ಕನಾದರೂ ತನ್ನ ವಚನಗಳಲ್ಲಿ ಇವೇ ತತ್ತ್ವವನ್ನು ಪ್ರತಿಪಾದಿಸಿದ್ದಾಳೆ. ಹೀಗೆ ಶಿವಶರಣರು ಪೌರಾಣಿಕ ದೇವತೆಗಳನ್ನು ನಿರಾಕರಿಸಿ ಒಬ್ಬನೇ ದೇವರೆಂದು ಸಾರಿದ್ದರಿಂದ ಆಗಿನ ಕಾಲದ ಮತಸ್ತರಲ್ಲಿ ಒಂದು ದೊಡ್ಡ ಚಳವಳಿಯು ಎದ್ದಿರಬೇಕೆಂದು ತೋರುತ್ತಿದೆ.

ಸತ್ಯಕ್ಕನ ವಚನಗಳು ಕೆಲವು ಮಾತ್ರ ನಮಗೆ ದೊರೆತಿವೆ. ಅವುಗಳ ರಚನೆಯು ಅತ್ಯಂತ ಲಲಿತವೂ ಮನೋಹರವೂ ಆಗಿರುತ್ತವೆ. ಸ್ತ್ರೀ ಸ್ವಭಾವದ ಸೌಂದರ್ಯವು ಅವುಗಳಲ್ಲಿ ರೂಪುಗೊಂಡಿರುತ್ತದೆ. ಈ ಗ್ರಂಥದಲ್ಲಿ ನಾವು ಕಾಣಿಸಿರುವ ಬಹುತರ ಎಲ್ಲ! ವಚನಗಳು ಅನೇಕ ಸಂಗ್ರಹಗಳಲ್ಲಿ ಆಗಿಂದಾಗ್ಗೆ ದೊರಕುತ್ತವೆ. ಈಕೆಯ ಗ್ರಾಮವು ಜಂಬೂರು. ಇದು ಯಾವಲ್ಲಿದೆ ಎಂಬುದು ನಮಗೆ ಇನ್ನೂ ಗೊತ್ತಾಗಿಲ್ಲ. ಆಕೆಯ ವೃತ್ತಾಂತವು ಭೈರವೇಶ್ವರ ಕಥಾಮಣಿ ಸೂತ್ರದ ರತ್ನಾಕರದಲ್ಲಿ ಇದ್ದುದನ್ನೇ ನಾವು ಇಲ್ಲಿ ಎತ್ತಿ ಬರೆದಿರುತ್ತೇವೆ.

## ಸತ್ಯಕ್ಕನ ವೃತ್ತಾಂತ.

ಜಂಬೂರೆಂಬ ಪುರದಲ್ಲಿ ಸತ್ಯಕ್ಕನೆಂಬ ಶಿವಶರಣೆಯು ಇರುತಿರ್ದು ಶಿವಭಕ್ತಿನೈಷ್ಠೆಯಿಂದ, ಶಿವನ ಶಬ್ದವಲ್ಲದೆ ಅನ್ಯ ಶಬ್ದವ ಕೇಳಲೊಲ್ಲೆನೆಂಬಾಶೆಯಂ ಮಾಡಿಕೊಂಡಿರುತ, ಶಿವಭಕ್ತರ ಮನೆಯ ಅಂಗಳವನುಡುಗಿ ಮನೆಯ ಸಮ್ಮಾರ್ಜನೆಯ ಮಾಡಿ ಅವರು ಕೊಟ್ಟ ಧಾನ್ಯದಿಂದ ಜಂಗಮಾರ್ಚನೆಯಮಾಡುತ್ತ ಭಸ್ಮ, ರುದ್ರಾಕ್ಷಿ, ಶಿವಮಂತ್ರಸ್ಮರಣೆಯೊಡನೆ ಕೂಡಿರುತ ಭವಿ ಜನರ ಕಂಡರೆ ನುಡಿಯಲೊಲ್ಲದೆ ದಾರಿಯಂ ತೊಲಗಿ ಪೋಗುತ್ತ ಶಿವಭಕ್ತಿಯಿಂದಾಚರಿಸಲೊಂದುದಿನ ಶಿವನು ಅನ್ಯ



ಶಬ್ದವ ಕೇಳಲೊಲ್ಲದ ಭಕ್ತೆಯ ಮನವ ನೋಡುವೆನೆಂದು ಕಂಥೆ ಕಮಂಡಲು ದಂಡ ಕೋಲು ಗುಂಡಗಪ್ಪರವೆರಸಿ ಭಿಕ್ಷುಕ.ಮೂರ್ತಿಯಾಗಿ ಬಂದು ಸತ್ಯಕ್ಕನ ಮನೆಯ ಮುಂದೆ ನಿಂದಿರಲಾಗ ಹುಟ್ಟಿನಲ್ಲಿ ಭಿಕ್ಷವ ತರಲು ಜೋಳಿಗೆಯನಾಂತು ಭಿಕ್ಷವ ನೀಡುವಾಗ ಹರಿದ ಜೋಳಿಗೆಯಿಂದೊಂದಗುಳು ನೆಲಕ್ಕೆ ಬೀಳಲಾಗ ತಾ ಭಕ್ತೆ ಕೇಳುವಂತೆ ಹರಿದ ಹರಿಯಿಂದ ನೆಲಕ್ಕೆ ಬಿದ್ದಿತು, ಜೋಳಿಗೆಯಾಚಿಲೆ ಹರಿ, ಈ ಚಿಂತೆ ಹರಿ, ಹರಿಯಿಂದೆ ಭಿಕ್ಷೆ ಸೂಸಿತ್ತೆನಲು ಹರನ ವೇಷವ ತೊಟ್ಟು ಗುರುಮೂರ್ತಿಯಾಗಿರ್ದು ಹರಿಹರಿ ಎಂಬ ಹರಿನಾಮವನು ನುಡಿದನಲಾಯೆಂದು ಕರದಲ್ಲಿರ್ದ ಸಟ್ಟುಗದಿಂದ ಹೊಯ್ಯಲು, ದಂತ ಮುರಿಯೆ ಮೊರೆಯೋಯೆಂದು ಮೊರೆಯಿಡುತ ಬೀದಿಗೆ ಬರಲು ಪುರಜನಂ ನೆರೆದು ನೋಡುವಾಗ ಸತ್ಯಕ್ಕನು ಸತ್ಯೆಯುಳ್ಳ ಭಕ್ತೆಯೆಂದು ಭಿಕ್ಷಕ್ಕೆ ಪೋದೆನು, ಎನ್ನ ನೀಪರಿಯಲ್ಲಿ ಹಿಂಸೆಬಡಿಸಿದಳೆಂದು ಪೇಳಲವರು ಸತ್ಯಕ್ಕನ ಭಕ್ತಿಯನರಿಯದೆ ಭಿಕ್ಷುಕನ ಕೊಲ್ಲಲಹುದೇ ಎಂದು ನುಡಿಯಲು ಆ ಸತ್ಯಕ್ಕನು ಅನ್ಯ ಶಬ್ದವ ನುಡಿದಡೆ ಹಿಂಸಿಸಿದೆನೆನಲದೇನೆಂದು ಜನರು ಚರಮೂರ್ತಿಯಂ ಕೇಳಲು ಹಿಂದೆ ಮುಂದೆ ನೋಡಿ ಹೆದರಿ ನಡಗುತ್ತ ಹರಿದ ಹರಿಕಿನಲ್ಲಿ ಒಂದಗುಳು ಚೆಲ್ಲಿತೆಂದೊಡೆ ಕೊಂದಳೆಂದು ಪೇಳುವಾಗ ನೆರೆದ ಜನರು ನೋಡುವಂತೆ ಭರದಿಂದ ಪೊಡೆಯಲು ಹರ ತನ್ನ ನಿಜರೂಪವ ತೋರಿ ಮೆಚ್ಚಿದೆ ಬೇಡು ಎನಲು ಕುಕ್ಷೆಯ ಕ್ಷುಧಿಗೆ ನೀನು ಭಿಕ್ಷಕ್ಕೆ ಬಂದು ಎನ್ನ ಹುಟ್ಟಿನಲ್ಲಿ ಹೊಡೆದ ಸಿಟ್ಟಿನಿಂದ ನೀ ನೊಂದೆ, ಎಲಾ ಶಿವಶಿವಾ, ಎನ್ನನೊಂದು ಭಿಕ್ಷೆಯಂ ಮಾಡಿ ನಿನ್ನ ಕುಕ್ಷಿಯೊಳಿಂಬಿಡೆನಲಾಗ ನರ ಸುರ ಮುನಿಕುಲ ನೋಡುವಂತೆ ಪೂಮಳೆ ಸುರಿಯಲು ಶಿವನು ಸತ್ಯಕ್ಕನ ತನ್ನ ಕುಕ್ಷಿಯೊಳಗಿಂಬಿಟ್ಟು ನಿತ್ಯವಾದ ನಿಜಪದವಂ ಕೊಟ್ಟನು.

---

# ಅಮರನೀತಿಯ ರಗಳೆ.

ಕಂದ॥ ಧರೆ ಪೊಗಳಲೊರೆದು ಕೂಗಿದ।
ಮರನೀತಿಗಳೆಂಬ ಪರಮ ಭಕ್ತನ ಕಥೆಯಂ॥
ವಿರಚಿಸುವೆಂ ಭರದಿಂ ಸಾ।
ದರದಿಂ ಕೇಳಯ್ಯ ಹಂಪೆಯ ವಿರೂಪಾಕ್ಷಾ॥

## ರಗಳೆ.

ಶ್ರೀಸಕಲ ದೇಶದೊಳಗಧಿಕವೆನಿಸುವ ಚೋಳ
ದೇಶದೊಳಗೆಸೆದಿರ್ಪನೋರ್ವ ಭಕ್ತಂ ಕೇಳ
ಎಸೆವ ತಿರುನಲ್ಲೂರೊಳಿರ್ಪನಾನಂದದಿಂ
ಶಶಿಧರನ ಭಕ್ತನಿಕರದ ಭಾಗ್ಯದಂದದಿಂ
ತನ್ನ ಪೆಸರಮರನೀತಿಗಳೆಂಬುದೀ ಜಗಕ್ಕೆ
ತನ್ನ ಸಂಪದವು ಮಿಗಿಲೆನಿಪುದೀ ಕಲಿಯುಗಕ್ಕೆ

ಇಂತಿರ್ದು ಶಿವನನರ್ಚಿಸಲೆಂದು ಮನದಂದು
ಚಿಂತಿಸಿದನೊಂದು ತೆರನಂ ಚಿತ್ತದೊಳಗಂದು
ವಸ್ತ್ರಕ್ಕೆ ಸುಲಭಮಪ್ಪುದು ಭಕ್ತಿ ದಾಸನಿಂ
ವಸ್ತ್ರವಿತ್ತೊಡೆ ಭಕ್ತಿಬರ್ಪುದು ಮಹೇಶನಿಂ
ಎಂದು ತತ್ಸುತನನಾ ವ್ಯವಹಾರದೊಳಗಿರಿಸಿ
ಬಂದನೀಶ್ವರನಾಲಯಕ್ಕೆ ತಾನುರವಣಿಸಿ
ಬಂದು ಭಸಿತೋದ್ಧೂಳನಂ ಮಾಡಿ ನಲವಿಂದೆ
ನಿಂದು ಪ್ರದಕ್ಷಿಣಂ ಮಾಡಿ ಸಂತಸದಿಂದೆ
ರಂಗಮಂಟಪದೊಳ್ ನಮಸ್ಕಾರಮಂ ಮಾಡಿ
ಲಿಂಗಕ್ಕೆ ಪರಿಪರಿಯ ಪೂಜೆಗೆಂದನುಮಾಡಿ

ತರಿಸಿದ ಮಹಾ ಚೀನಿ ಎನಿಪ ವಸ್ತ್ರಾವಳಿಯ
ಹರುಷದಿಂದಂ ಲತಾವಳಿಯ ಪುಷ್ಪಾವಳಿಯ
ನೇತ್ರಾವಳಿಯ ಗಜಾವಳಿಯ ಸಿಂಹಾವಳಿಯ

ಚಿತ್ರಾವಳಿಯ ಸುರಾವಳಿಯ ಹಂಸಾವಳಿಯ
ಬಂದ ದಿಂಡುಗಳನೊಯ್ಯಾರದಿಂದಿರಿಸುತುಂ
ನಿಂದವಂ ನೋಡಿ ಮನದಿಂದಲಂಕರಿಸುತುಂ
ಅವರೊಳಗೆ ಮಿಗಿಲೆನಿಪ ವಸ್ತ್ರಂಗಳಂ ಕೊಂಡು
ನವ ಪುಷ್ಪನಿಕರದಿಂ ಪೊದೆದು ಪರಿಮಳವುಂಡು
ಮಘಮಘಿಪ ವಸ್ತ್ರಂಗಳಂ ತಂದು ತರದಿಂದೆ
ಬಗೆವೆರ್ಚೆ ಪೂಜೆಯಂ ಮಾಡುತುಂ ನಲವಿಂದೆ
ಬಿಳಿಯ ಪಟ್ಟಾವಳಿಯ ಪೊಸ ಸಪುರಮಂ ಪೊದಿಸಿ
ತೊಳಗುವ ದುಕೂಲಂಗಳಂ ತೆಗೆದು ಬಿಗಿದುಡಿಸಿ
ಚಂದನದ ಪರಿಮಳವನೊಯ್ಯನೊಯ್ಯನೆ ಪೂಸಿ
ಅಂದು ಕರಣಂಗಳಂ ಹರನತ್ತ ಕೈವೀಸಿ
ಇಂಡೆಯಂ ದಂಡೆಯಂ ವಸ್ತ್ರಂಗಳಂ ಕಟ್ಟಿ
ತಂಡತಂಡದ ಪೂಜೆಗಳ್ಚಿತ್ರಮಂ ಮುಟ್ಟಿ
ಮನದೊಳಗೆ ತರ್ಕೈಸಿ ಮುಂಡಾಡಿ ಕೊಂಡಾಡಿ
ಮುನಿವುತುಂ ಜಿನುಗುತುಂ ಜೀವಿಸುತೆ ನಡೆ ನೋಡಿ
ಹಾರೈಸಿ ಕುಸುಮತತಿಯಾಗೆನಯ್ಯೋ ಎನುತೆ
ಸೀರೆಗಳ ಡೂಷಾರವಾಗೆನಯ್ಯೋ ಎನುತೆ
ರಸವೊಸರ್ವ ಗುಗ್ಗುಳದ ಹೊಸ ಕಂಪಿನಿಂ ಸುತ್ತಿ
ಮಿಸುಗುತಿರ್ಪಾ ಬೆಳಗಿನೊಸೆದಾರತಿಯನೆತ್ತಿ
ಸೊಗಯಿಸುವ ದೇವಾನ್ನ ದಿವ್ಯಾನ್ನದೊಳಗಿರ್ಪ
ಮಿಗಿಲೆನಿಸುವಮೃತಾನ್ನ ಷಡ್ರಸಂಗಳೊಳಿರ್ಪ
ಸವಿಗಳಂ ತಂದು ತಂದಾರಯ್ಸಲಿಕ್ಕುತುಂ
ನವ ಪರಿಮಳಂಗಳಂ ಕೈಘಟ್ಟಿಗೀವುತುಂ
ಒಂದೆರಡು ಬಣ್ಣದೊರೆ ಬರ್ಪ ಬಿಳಿಯೆಲೆಗಳಂ
ತಂದು ಪೋಳಿಸಿದ ಪರಿಪರಿಯ ಭೋಗಂಗಳಂ
ಪಚ್ಚ ಕರ್ಪುರದ ಪರಿಮಳದ ಹಳುಕಂಬೆರಸಿ
ಮೆಚ್ಚುತ್ತೆ ಶಿವಗಿತ್ತು ಮನದ ನೇಹಂಬೆರಸಿ
ಇಂತು ಶಂಕರನನರ್ಚಿಸುತಮುರನೀತಿಗಳ್
ಸಂತಸದೊಳಿರಲಿತ್ತ ಶಿವಭಕ್ತವಿತತಿಗಳ್



ಬಂದು ತೀವಿತ್ತಲ್ಲಿ ರಂಗಮಂಟಪದೊಳಗೆ
ನಿಂದು ನೆರೆದಿತ್ತು ತೆರಹಿಲ್ಲೆನಿಸಿ ಪುರದೊಳಗೆ
ಉಗ್ರರುಂ ಶಾಂತರುಂ ಮೃದುಗಳುಂ ಮಧುರರುಂ
ವ್ಯಗ್ರರುಂ ನ್ಯಾಯನಿಷ್ಠುರರುಂ ಸಮರ್ಥರುಂ
ನೆರದಮಾರನೀತಿಯಂ ಪರಸುತಿರ್ಪರ್ ಕೆಲರ್
ಪರಸಲೇಕೆಮಗೋಸುಗೀಯನೆಂಬರ್ಕೆಲರ್
ಆದಡೇನಿಂತಪ್ಪರುಂಟೇ ಎಂಬರ್ಕೆಲರ್
ಮಾದೇವನಿತ್ತೊಡರಿದಾವುದೆಂಬರ್ ಕೆಲರ್
ಇಂತು ನುಡಿವುತ್ತಿರ್ಪ ಗಣನಿಕರಮಂ ಕಂಡು
ಸಂತಸದೆ ಮೆಯ್ಯಿಕ್ಕಿ ನಿಲುತುಂ ಭಯಂಗೊಂಡು

ಆಹ ಎನ್ನಾಕ್ಷರಪ್ರತಿಮಃ ಶರಣರ್ಬಂದ
ರಾಹ ಎನ್ನಾನೆಗಳ್ ಎನ್ನ ನಿಧಿಗಳ್ಬಂದ
ರೆಮ್ಮ ಶಂಕರನ ನೆನಹಂಗಳೊಲವಿಂ ಬಂದ
ರೆಮ್ಮ ಶಶಿಧರನ ಸದ್ಭಕ್ತರೆಲ್ಲರ್ಬಂದ
ರೆನುತೆ ಪುಳಕಿಸುತೆ ನಯನಾಶ್ರುವಂ ಸುರಿಸುತ್ತೆ
ಮನವಾರೆ ಇದಿರ್ಗೊಂಡು ಕೈಗಳಂ ಮುಗಿವುತ್ತೆ
ಕೂಡೆ ಘನ ಸಿಂಹಾಸನವನಿಕ್ಕಿಯುಬ್ಬುತ್ತೆ
ನೋಡಿ ದಳವೇರುತ್ತೆ ಕೊಂಡಾಡಿ ಕರಗುತ್ತೆ
ನೆವದಿಂದೆ ಸೋಂಕುತುಂ ನುಡಿಸಿ ಮೈವೆರ್ಚುತುಂ
ಪವಣಿಲ್ಲದುತ್ಸಾಹದಿಂದುರ್ಕಿ ಸೊರ್ಕುತುಂ
ಬಂದ ಗಣಮಧ್ಯದೊಳ್ನಿಂದು ದಿಂಡಂಬಿಡಿಸಿ
ಸಂದಣಿಪ ಪಟ್ಟಾವಳಿಯನೊಪ್ಪದಿಂದಿರಿಸಿ

ಏನೇನನೆಳಸಿದರ್ಗಮ್ಮಡಿಯನೀವುತುಂ
ಮೌನದಿಂದಿರ್ದರ್ಗೆ ನಾಲ್ಮಡಿಯನೀವುತುಂ
ಆನಂದವಿರ್ಮಡಿಸಿ ನೂರ್ಮಡಿಯನೀವುತುಂ
ನಾನಾ ಮುಖಂಗಳಂ ಪೆರ್ಚೆ ಸಿರಿದೀವುತುಂ
ಪುಳಕಿಸುತ್ತೀವುತುಂ ಪುಟವೇಳುತೀವುತುಂ
ದಳವೇರುತೀವುತುಂ ತೊಳತೊಳಗುತೀವುತುಂ

ಕೊಂಡವರ್ತಲೆದೂಗಿ ಬೆರಗಾಗಲೀವುತುಂ
ಕಂಡವರಿದವ್ಭುತದ ದಾನವೆನಲೀವುತುಂ
ಕುಣಿದಾಡುತೀವುತುಂ ಮಣಿದಾಡುತೀವುತುಂ
ಎಣಿಕೆಗಟ್ಟೀವುತುಂ ಗಣಕುಲಕ್ಕೀವುತುಂ
ದೇವಾಂಗ ವಸ್ತ್ರಮುಂ ದೇವರ್ಗೆ ಈವುತುಂ
ಆವುದಾನೊಳ್ಳಿತಂ ಕೋವಣಕ್ಕೀವುತುಂ
ಅನ್ನಂ ಸುವರ್ಣಂ ಸುವಸ್ತ್ರಮುಮನೀವುತುಂ
ಎನ್ನನೀವೆಂ ಬೇಳ್ವರಿಲ್ಲೆಂದು ಸುಯ್ವುತುಂ
ಮನೆಯ ಮಕ್ಕಳ್ಗೆ ಸತಿಯರ್ಗೆಯುಡಲೀವುತುಂ
ನೆನೆದರ್ಗೆ ನುಡಿದರ್ಗೆ ಬೇಡಿದರ್ಗೀವುತುಂ
ಕೊಡಕಲಸಿಯುಂ ಕೊಡಿಸಿಯುಂ ಕೊಟ್ಟವುಂ ದಣಿಯ
ಉಡಕಲಿಸಿಯುಂ ಉಡಿಸಿಯುಂ ತೊಡಿಸಿಯುಂ ದಣಿಯ

ಇಂತಿಂತು ಪಲಕೆಲವು ವತ್ಸರಂ ಮಾಡುತಿರೆ
ಅಂತಂತು ದಿನದಿನಕೆ ಮಿಗಿಲೆನಿಸಲೀವುತಿರೆ
ಇಲ್ಲಿ ಭಕ್ತರ್ಗೆ ಮಾಡಿತ್ತು ಕೈಲಾಸಕ್ಕೆ
ಪಲ್ಲವಿಸಿ ಪರ್ವಿ ಹರನಡಿಗಯ್ದುವನಿತಕ್ಕೆ
ಪೊದೆದ ಗಜಚರ್ಮವುಂ ಪಟ್ಟಾವಳಿಯದಾಗೆ
ಪುದಿದುಟ್ಟ ಪುಲಿದೊವಲ್ ದೇವಾಂಗ ತಾನಾಗೆ
ಹರನರಸಿಯುಟ್ಟುದುಂ ಪಟ್ಟಾವಳಿಯದಾಗೆ
ಹರನ ಗಣ ಉಟ್ಟು ಪೊದೆದಿರ್ದುವುಂ ತಾವಾಗೆ
ಕಾಣುತೆ ವಿರೂಪಾಕ್ಷನತಿ ಕೌತುಕಂಬಟ್ಟು
ಕ್ಷೋಣಿಯೊಳಗಿದು ಪೊಸತೆನುತ್ತೆ ಹರುಷಂಬಟ್ಟು

ಪೋಗಿ ನೋಡುವೆನಮರನೀತಿಗಳ ಭಕ್ತಿಯಂ
ರಾಗದಿಂದೆನ್ನವರ್ಗೀವ ನವ ಯುಕುತಿಯಂ
ಕಂಡೊರೆದು ತೂಗಿ ನೋಡುವೆನವನ ಭಕ್ತಿಯಂ
ಕೊಂಡು ಬರ್ಪೆಂ ಕರುಣದಿಂದಮರನೀತಿಯಂ

ಎಂದು ಶಂಕರನೊಂದು ವೇಷಮಂ ಕೆಯ್ಕೊಂಡು
ಅಂತು ಶತವೃದ್ಧಭಾವವನೊಪ್ಪಿ ಕೆಯ್ಕೊಂಡು

ಶ್ರೀ

# ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೪ ] ಅಕ್ಟೋಬರ ೧೯೩೯. [ ಸಂಚಿಕೆ ೧

## ವಿಷಯಾನುಕ್ರಮಣಿಕೆ.


| ವಿಷಯಗಳು. | ಲೇಖಕರು. | ಪುಟ. |
|---|---|---|
| ೧ ಆತ್ಮನಿವೇದನೆಯು | ಸಂಪಾದಕ | ೧ |
| ೨ ಬಟ್ಟೆ (ಕವಿತೆ) | ಶ್ರೀ. ಈಶ್ವರ ಸಣಕಲ್ಲ | ೫ |
| ೩ ಬಿಜ್ಜಳ | ಶ್ರೀ. ಎಸ್. ಶ್ರೀಕಂಠಶಾಸ್ತ್ರಿ | ೬ |
| ೪ ಬಸವೇಶ್ವರನು ನಿರ್ಮಿಸಿದ ಸರ್ವಾಂಗಸುಂದರವಾದ ಸಮಾಜಮಂದಿರ | ಶ್ರೀ. ಎಸ್. ವ್ಹಿ. ಹಂಜಿ ಬೈಲಹೊಂಗಲ | ೧೧ |
| ೫ ವೀರಶೈವ ಸಾಹಿತ್ಯದ ವೈಶಿಷ್ಟ್ಯ | ಶ್ರೀ. ಎಲ್. ಜಿ ಹಿರೇಮಠ | ೧೬ |
| ೬ ತೆಲಗು ಬಸವಪುರಾಣದ ಮುನ್ನುಡಿ | ಶ್ರೀ. ಎಸ್. ಹಂಪಯ್ಯ | ೨೨ |
| ೭ ಈ ದ್ರಾವಿಡ ಪ್ರಾಣಾಯಾಮವೇತಕ್ಕೆ? | ಶ್ರೀ. ವೀರೇಶ್ವರ ಬೆಂಗಳೂರ | ೩೩ |
| ೮ ಸಂಗೀತ ವಚನಗಳು | ಶ್ರೀ. ಪಿ. ವ್ಹಿ. ಪಾಟೀಲ ವಿಜಾಪುರ | ೪೨ |
| ೯ ಪದಮಂತ್ರ ಗೋಪ್ಯ | | ೪೪ |
| ೧೦ ಮಧುವರಸನ ವಚನಗಳು | | ೪೬ |
| ೧೧ ಹರಿಹರನ ರಗಳೆ ಭಾಗ ೬ | (೧) ಸಂಸಾರ ವ್ಯಾಮೋಹ ನಿರಸನ (೨) ಚಂಡೇಶಪಿಳ್ಳೆ | ೪೯ |

# ವಚನಶಾಸ್ತ್ರಸಾರ ಗ್ರಂಥಗಳು.

( ರಾ| ಸಾ| ಫ. ಗು. ಹಳಕಟ್ಟಿ ಇವರಿಂದ ವಿರಚಿತವಾದವುಗಳು. )

(೧) ವಚನಶಾಸ್ತ್ರಸಾರ ಭಾಗ ೧ ಪೂರ್ವಾರ್ಧ ೨—೮—೦

(೨) ,, ,, ಉತ್ತರಾರ್ಧ ೧—೧೨—೦

ಈ ಎರಡು ಗ್ರಂಥಗಳ ಮೂಲಕ ವೀರಶೈವ ಧರ್ಮದ ಸಾಮಾನ್ಯ ತತ್ವಗಳನ್ನು ಅರಿಯಬಹುದು.

(೩) ವಚನಶಾಸ್ತ್ರಸಾರ ಭಾಗ ೨ ೪—೮—೦

ಇದರಲ್ಲಿ ಷಟ್‌ಸ್ಥಲ ಸಿದ್ಧಾಂತದ ನಿರೂಪಣೆ ಇದೆ.

(೪) ವಚನಶಾಸ್ತ್ರಸಾರ ಭಾಗ ೩ ಪೂರ್ವಾರ್ಧ ೨—೪—೦

ಇದರಲ್ಲಿ ವೀರಶೈವರ ಕ್ರಿಯೆಗಳ ಮತ್ತು ಅಷ್ಟಾವರಣಗಳ ಸಾಮಾನ್ಯ ನಿರೂಪಣೆ ಇರುವದಲ್ಲದೆ ಗುರು, ಲಿಂಗ, ಜಂಗಮ ಇವುಗಳ ಸವಿಸ್ತಾರವಾದ ವಿವರಣೆ ಇರುತ್ತದೆ.

ಈ ನಾಲ್ಕು ಗ್ರಂಥಗಳ ಒಟ್ಟು ಪುಟ ಸಂಖ್ಯೆ ೧೫೮೩ ಇದ್ದು ಇವುಗಳ ಬೆಲೆಯು ೧೧ ರೂಪಾಯಿ ಇರುತ್ತದೆ. ಆದರೆ ಈ ಗ್ರಂಥಗಳೆಲ್ಲವನ್ನೂ ಏಕಕಾಲಕ್ಕೆ ತೆಗೆದುಕೊಂಡಲ್ಲಿ ಅವುಗಳು ಮೂರುನಾಲ್ಕಾಂಶ ಬೆಲೆಗೆ ಅಂದರೆ ಒಟ್ಟು ೮—೪—೦ ರೂಪಾಯಿಗಳಿಗೆ ದೊರೆಯುವವು ಟಪಾಲಖರ್ಚು ಪ್ರತ್ಯೇಕ.

ದೊರೆಯುವ ಸ್ಥಳ—

**ಹಿತಚಿಂತಕ ಪ್ರಿಂಟಿಂಗ ಪ್ರೆಸ್ ವಿಜಾಪುರ.**

ಇದನ್ನು ವಿಜಾಪುರದಲ್ಲಿ ರಾ| ಸಾ| ಫ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ಉಪಲೀ ಬುರುಜ ಓಣಿಯಲ್ಲಿರುವ ತಮ್ಮ ೧೬೨೦ (ಅ) ಮನೆಯಲ್ಲಿ ಪ್ರಸಿದ್ಧಿಸಿದರು.

R. N. B. 2554

ಶ್ರೀ

# ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೪ ] ಜನವರಿ ೧೯೪೦. [ ಸಂಚಿಕೆ ೪

## ವಿಷಯಾನುಕ್ರಮಣಿಕೆ.


| ವಿಷಯುಗಳು. | ಲೇಖಕರು. | ಪುಟ. |
|---|---|---|
| ೧ ಶ್ರೀ ಬಸವೇಶ್ವರನ ಕಾಲ ನಿರ್ಣಯ | ಶ್ರೀಮಾನ್ ಗೋವಿಂದ ಪೈ ಮಂಜೇಶ್ವರ | ೧೫೩ |
| ೨ ವೀರಶೈವರ ಪೂರ್ವದ ಹೆಸರು ಯಾವದು ? | ಶ್ರೀ ಮಲ್ಲಿಕಾರ್ಜುನ ದೇಶಿಕರು ಮೈಲೇಶ್ವರ | ೧೬೪ |
| ೩ ಹಿಂದಿನ ಲೇಖದ ವಿಮರ್ಶೆ | ರಾ. ಸಾ ಫ. ಗು. ಹಳಕಟ್ಟಿ | ೧೭೪ |
| ೪ ಹಿರಿಮೆ (ಕವಿತೆ) | ಶ್ರೀ ಸಿಂಪಿ ಲಿಂಗಣ್ಣ | ೧೭೯ |
| ೫ ಬಸವಣ್ಣನವರಿಂದ ಉಂಟಾದ ಸ್ತ್ರೀ ಸ್ವಾತಂತ್ರ್ಯ | ಶ್ರೀ ವೀರೇಶ್ವರ ಬೆಂಗಳೂರ | ೧೮೦ |
| ೬ ಕೊಡಗು ದೇಶದ ಇತಿಹಾಸ | ಶ್ರೀ ಸದಾಶಿವಪ್ಪ ಹಂಜಿ | ೧೯೦ |
| ೭ ಶಿವಶರಣರ ಕಾಲ | ರಾ. ಸಾ. ಫ. ಗು. ಹಳಕಟ್ಟಿ | ೨೦೪ |
| ೮ ಲಿಂಗಕ್ಕೆ ಶರಣೆನ್ನು ಮನವೇ | ಶ್ರೀ ವೀರೇಶ್ವರ ಬೆಂಗಳೂರು | ೨೧೨ |

# ಶಿವಾನುಭವ.

ವರ್ಷ ೧೪] ಜನವರಿ ೧೯೪೦ [ಸಂಚಿಕೆ ೪

## ಬಸವೇಶ್ವರನ ಕಾಲ ನಿರ್ಣಯ.

ಲೇಖಕರು :— ಶ್ರೀಮಾನ್ ಗೋವಿಂದ ಪೈ. ಮಂಜೇಶ್ವರ

( ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು )

ಸಿಂದರಾಜರ ವಂಶ ವೃಕ್ಷವು ಕೆಳಗೆ ಕಾಣಿಸಿದಂತೆ ಇದೆ. ಅದು ಯಾವದೆಂದರೆ :—

ಸಿಂದ II ಆಚರಸ ಅಥವಾ ಆಚುಗಿ

ಪೆರ್ಮ | ದೇಮಲದೇವಿ+II ಚಾವುಂಡ+ಸಿರಿಯಾದೇವ ( ಕಳಚುರ್ಯ ಬಿಜ್ಜಳ )

III ಆಚುಗಿ | ಪೆರ್ಮಾಡಿ | ವೀರಬಿಜ್ಜಳ | ವೀರವಿಕ್ರಮಾದಿತ್ಯ

ಕಿಸುಕಾಡು ೭೦, ಬಾಗೆ ಅಥವಾ ಬಾಗಡಗೆ ೭೦, ಕೆಳವಾಡಿ ೩೦೦, ನರೆಯಂಗಲ್ಲು ೧೨ನ್ನು ಕೂಡ [೬೦] ಬಳಕೊಂಡ (ಬಡಗಣ) ಸಿಂದವಾಡಿ ಎಂಬ ನಾಡನ್ನು ಆಳುತ್ತಿದ್ದ ( ಬಡಗಣ ) [೬೧] ಸಿಂದವಂಶದ ಅರಸ

---

60 FKD ಪು. 576 ಇವಲ್ಲದೆ ಹಂಗರಗೆ ೧೨ ಹಾಗೂ ಕಟಗೇರಿಯ ಶಾಸನಗಳಿಂದ ತಿಳಿಯುತ್ತದೆ. (SIE 1929, App E. ಪು. 50. ನಂ. 147 ಮತ್ತು (151).

61. ಈ ಸಿಂದರಲ್ಲದೆ ಈಗಣ ಶಿವಮೊಗ್ಗೆ, ಚಿತ್ರದುರ್ಗ, ಬಳ್ಳಾರಿ, ಮೊದಲಾದ ಜಿಲ್ಲೆಗಳ ಆಯಾ ಭಾಗಗಳನ್ನು ಒಳಕೊಂಡ ರಾಜ್ಯವನ್ನು ಇವ

ರಲ್ಲಿ ಕ್ರಿ. ಶ. ೧೧೨೩ ರಿಂದ ೧೧೩೫ ರ ವರೆಗಣ ಶಾಸನಗಳುಳ್ಳ II ಆಚುಗಿ ಅಥವಾ ಆಚರಸನೂ ಅವನ ಬಳಿಕ ಅವನ ಹಿರೇಮಗನಾದ ೧೧೪೪ರ ಶಾಸನದ ಪೆರ್ಮನೂ[೬೨] ಆಳಿದ ಮೇಲೆ II ಆಚುಗಿಯ ಮತ್ತೊಬ್ಬ ಮಗನಾದ II ಚಾವುಂಡನು ಆಳತೊಡಗಿದನು. ಚಾಲುಕ್ಯ ವಿಕ್ರಮ ವರ್ಷ ೭೬ನೆಯ ಪ್ರಜಾಪತಿ ಸಂ। ಪುಷ್ಯ ಬಹುಳ ೨ ಬುಧವಾರ ಉತ್ತರಾಯಣ ಸಂಕ್ರಾಂತಿ ಕ್ರಿ. ಶ. ೧೧೫೧ ದಶಂಬರ ೨೬ ಬುಧವಾರದ ಅರಸೀಬೀಡಿಯ ಶಾಸನದಲ್ಲಿ[೬೩] ಚಾಳುಕ್ಯ III ತೈಲನ ಮಹಾಮಂಡಳೇಶ್ವರನೆಂದಿರುವ ಈ ಚಾವುಂಡನನ್ನು ಮೇಲೆ ಕಂಡಿರುವಂತೆ ಕ್ರಿ. ಶ. ೧೧೬೩ರ ಪಟ್ಟದಕಲ್ಲಿನ ಶಾಸನದಲ್ಲಿಯೂ III ತೈಲನ ಮಹಾಮಂಡಳೇಶ್ವರನೆಂದೂ ೧೧೬೬-೬೭ರ ಬೆಣಚಮಟ್ಟಿಯ (ಎ) ಶಾಸನದಲ್ಲಿ ಕಳಚುರ್ಯ ಬಿಜ್ಜಳನ ಮಹಾಮಂಡಳೇಶ್ವರನೆಂದೂ ಹೇಳುವುದರಿಂದ, ಇವನು ಕ್ರಿ. ಶ. ೧೧೫೧ರ ಮುಂಚೆಯೇ ಚಾಳುಕ್ಯರ ಮಹಾಮಂಡಳೇಶ್ವರನಾಗಿ ಪಟ್ಟವೇರಿ ಚಾಲುಕ್ಯರ ಪತನಾಂತರ ಬಿಜ್ಜಳನ ಮಹಾಮಂಡಳೇಶ್ವರನಾಗಿರಬೇಕು. ಈ (ಬಡಗಣ)ಸಿಂದರ ರಾಜಧಾನಿ ಎರಂಬರಗೆ, ಅಂದರೆ ಈಗಣ ನಿಜಾಮ ಸರಕಾರದಲ್ಲಿರುವ ಯೆಲ್ಬುರ್ಗ. ಶಾ. ಶ. ೧೧೦೧ ವಿಳಂಬಿ ಸಂ। ಶ್ರಾವಣ ಶುದ್ಧ ಹುಣ್ಣಿಮೆ ಸೋಮವಾರ= ಕ್ರಿ. ಶ. ೧೧೭೯ ಜುಲಾಯಿ ೩೧ ಸೋಮವಾರದ ಕಟಗೇರಿಯ ಶಾಸನದಿಂದಲೂ[೬೪] ಮೇಲೆ ಹೇಳಿರುವ ಇತರ ಶಾಸನಗಳಿಂದಲೂ II ಚಾವುಂಡನು ಕಳಚುರ್ಯ ಬಿಜ್ಜಳನ ಮಗಳಾದ ಸಿರಿಯಾದೇವಿಯನ್ನು ಮದುವೆಯಾಗಿ ಆಕೆಯಲ್ಲಿ ಅವನಿಗೆ ವೀರಬಿಜ್ಜಳನೆಂದೂ ವೀರವಿಕ್ರಮಾದಿತ್ಯನೆಂದೂ ಇಬ್ಬರು ಮಗಂದಿರು ಇದ್ದರೆಂದು ತಿಳಿಯುತ್ತದೆ. ತನ್ನ ಹಿರೇ ಹೆಂಡತಿಯಾದ ದೇಮಲದೇವಿಯಲ್ಲಿ ಹುಟ್ಟಿದ ತನ್ನ ಹಿರೇ ಮಗನಿಗೆ ತನ್ನ ತಂದೆಯ ಆಚುಗಿ ಎಂದು ಕಿರಿಯವನಿಗೆ ತನ್ನ ಅಣ್ಣನ

ರಂತೆಯೋ ಮಹಾಮಂಡಳೇಶ್ವರರಾಗಿ ಈಗಣ ಹೊನ್ನಾಳಿ ತಾಲ್ಲೂಕಿನಲ್ಲಿಯ ಬೆಳಗವರ್ತಿ ಎಂಬ ತಮ್ಮ ರಾಜಧಾನಿಯಿಂದ ಆಳುತ್ತಿದ್ದ ಸಿಂದರೂ ಇದ್ದರು. ಅವರ ರಾಜ್ಯದ ಹೆಸರೂ ಸಿಂದವಾಡಿ ಎಂದೇ (Mysore & Coorg from Inscriptions, ಪ. 147) ಇವೆರಡೂ ಶಾಖೆಗಳನ್ನು ಪ್ರತ್ಯೇಕಿಸಲೆಂದೇ ಕಿಸುಕಾಡು ಇತ್ಯಾದಿಯ ರಾಜ್ಯದ ಸಿಂದರನ್ನು ಇಲ್ಲಿಯ ಬಡಗಣ ಸಿಂದರೆಂದಿದೆ.

62. EI XX ಪು. 112, 114, 63. SIE. 1929. App. E. ಪು. 43 ನಂ. 33. 64. ಅದೇ ಪು. 50. ನಂ. 151. EI. XX. ಪು. 111.



ಪೆರ್ಮ-ಪೆರ್ಮಾಡಿ ಎಂದು II ಚಾವುಂಡನು ಹೆಸರಿಕ್ಕಿದ್ದಂತೆ, ತನ್ನ ಕಿರೇ ಹೆಂಡತಿಯ ಹಿರೇ ಮಗನಿಗೆ ಆಕೆಯ ತಂದೆಯ ಬಿಜ್ಜಳ ಎಂಬ ಹೆಸರಿಕ್ಕಿದುದು ಲೋಕರೂಢಿಗೆ ವಿಹಿತವಾಗಿದೆ. ಶಾ. ಶ. ೧೦೯೧ ವಿರೋಧಿ ಸಂ। ಪುಷ್ಯ ಶು॥ ೩ ಗುರುವಾರ ಉತ್ತರಾಯಣ ಸಂಕ್ರಾಂತಿ=ಕ್ರಿ. ಶ. ೧೧೬೯ ದಶಂಬರ ೨೫ ಗುರುವಾರದ ಹಿರೇಮುನ್ನೂರಿನ ಶಾಸನದಲ್ಲಿ[೬೫] II ಚಾವುಂಡನನ್ನು ಮಹಾಮಂಡಳೇಶ್ವರನೆಂದೂ ಕಳಚುರ್ಯ ರಾಯಮುರಾರಿ ಸೋವಿದೇವನ ೫ನೆಯ ವರ್ಷದ ಶಾ. ಶ. ೧೦೯೪ ಖರ ಸಂ। ಪುಷ್ಯ ಬಹುಳ ೧೩ ಸೋಮವಾರ = ಕ್ರಿ. ಶ. ೧೧೭೨ ದಶಂಬರ ೨೭ರ ನಿಡಗುಂದಿಯ ಶಾಸನದಲ್ಲಿ[೬೬] II ಚಾವುಂಡನ ಮಗಂದಿರಾದ ಬಿಜ್ಜಳನನ್ನೂ ವಿಕ್ರಮನನ್ನೂ ಆವರ ಸೋದರಮಾವನಾದ ಸೋವಿದೇವನ ಮಹಾಮಂಡಳೇಶ್ವರರೆಂದೂ ಹೇಳುವುದರಿಂದ, II ಚಾವುಂಡನು ಕ್ರಿ. ಶ. ೧೧೭೦-೭೧ರಲ್ಲಿ ಕಾಲವಾಗಿರಬೇಕು. ನಿಡಗುಂದಿಯ ಈ ಶಾಸನದಲ್ಲಿಯೂ ಶಾ. ಶ. ೧೦೯೬ ಜಯ ಸಂ। ಮಾರ್ಗಶಿರ ಶುದ್ಧ ಹುಣ್ಣಿಮೆ ಆದಿತ್ಯವಾರ ಚಂದ್ರಗ್ರಹಣ=ಕ್ರಿ. ಶ. ೧೧೭೪ ನವಂಬರ ೧೦ ಆದಿತ್ಯವಾರ ಚಂದ್ರಗ್ರಹಣದಂದಿನ ಅಲ್ಲಿಯ ಮತ್ತೊಂದು ಶಾಸನದಲ್ಲಿಯೂ[೬೭] ಬಿಜ್ಜಳನನ್ನೂ ವಿಕ್ರಮನನ್ನೂ ಕುಮಾರರೆಂದು ಅವರ ತಾಯಿ ಸಿರಿಯಾದೇವಿಯನ್ನು ಪಟ್ಟಮಹಾದೇವಿ ಎಂದೂ ಹೇಳಿರುವುದರಿಂದ, ಆಗ್ಗೆ ಅವರಿನ್ನೂ ಎಳೆಯರಾಗಿದ್ದು ಪ್ರಾಯಶಃ ಅವರ ತಾಯಿಯೇ ರಾಜ್ಯಧರಳಾಗಿ (regent) ಸಿಂದವಾಡಿಯನ್ನು ಆಳುತ್ತಲಿರಬೇಕು. ದೇವಗಿರಿಯ ಯಾದವ ಸಿಂಘಣನ (೧೨೧೦-೪೭) ಆಳೊತ್ತಿನ ವಿಕ್ರಮ ಸಂ। ಕಾರ್ತಿಕ ಹುಣ್ಣಿಮೆ ಸೋಮವಾರ= ಕ್ರಿ. ಶ. ೧೨೨೧ ನವಂಬರ ೧೪ ಕಳಕಪ್ಪನ ಗುಡ್ಡದ ಶಿಲಾಲೇಖದಿಂದ[೬೮] ಈ ಸಿಂದ ಸೋದರರಲ್ಲಿಯ ವಿಕ್ರಮಾದಿತ್ಯನು ಆಗ್ಗೆ ಸಿಂಘಣನ ಮಹಾಮಂಡಳೇಶ್ವರನಾಗಿದ್ದನೆಂದು ತಿಳಿಯುವುದರಿಂದ, ಆಗ್ಗೆ ಆತನಿಗೆ ೬೦ ವರ್ಷವೇದರೂ ಕ್ರಿ ಶ. ೧೧೭೪ರಲ್ಲಿ ಈ ಸೋದರರಿಗೆ ಇನ್ನೂ ಪ್ರಾಯ ತುಂಬಿರದು. ಸಿರಿಯಾದೇವಿಯ ಸೋದರನಾದ ರಾಯಮುರಾರಿ ಸೋವಿದೇವನ ಆಳಿಕೆಯ ೭ನೆಯ ವರ್ಷದ ವಿಜಯ ಸಂ। ಕಾರ್ತಿಕ ಹುಣ್ಣಿಮೆ ಸೋಮವಾರ = ಕ್ರಿ. ಶ. ೧೧೭೩ ಅಕ್ಟೋಬರ ೨೩ರ ವೀರಬಿಜ್ಜಳನೆಂಬ ಈ

65. SIE 1928, App. E ಪು. ೨೦, ನಂ. ೪, 66 SIE 1937 (Supp), ಪು. ೧೬, ನಂ. ೨೦೮. 67. ಅದೇ, ಪು. ೧೬, ನಂ. ೨೦೫; EI. XX ಪು.೨೧೩ 68. SIE. 1938, App. E. ಪು.೨೩, ನಂ. ೩೬.

ಸಿಂಹ ಬಿಜ್ಜಳನ ಕಣ್ಣೆಯ ಶಾಸನದಲ್ಲಿ [೬೯] ಅಂದರೆ ಆತನಿನ್ನು ಎಳೆ ಯವನಾಗಿದ್ದಂದಿನ ಶಾಸನದಲ್ಲಿ ಆತನನ್ನು ಓಲಗಿಸುತ್ತಿದ್ದನೆಂಬ ಬಲದೇವ ನಾಯಕನು II ಚಾವುಂಡನ ಕಾಲದಿಂದಲೊ ಅದಕ್ಕು ಹಿಂದಿನಿಂದಲೊ ಈ ಸಿಂದರ ಕಯ್ಯೊಳಗಣ ಅಧಿಕಾರಿಯಾಗಿರಬೇಕು.

ಕ್ರಿ. ಶ. ೧೧೦೨ ವಿಕಾರಿ ಸಂ। ಅಶ್ವಯುಜ ಅಮಾವಾಸ್ಯೆ ಸೋಮವಾರ=ಕ್ರಿ. ಶ. ೧೧೮೦ ಅಕ್ಟೋಬರ ೨೦ರ ಕಳಚುರ್ಯ ಸಂಕಮನ ರೋಣದ ಶಾಸನದಲ್ಲಿ [೭೦] ಸಿಂದ ಬಿಜ್ಜಳನೂ ಅವನ ತಮ್ಮ ವಿಕ್ರಮಾದಿತ್ಯನೂ ಅವರ ಸೋದರಮಾವನಾದ ಸಂಕಮನ ಮಹಾಮಂಡಳೇಶ್ವರರೆಂದಿರುವಲ್ಲಿಯೂ ವಿಶ್ವಾವಸು ಸಂ। ಮಾಘ ಬಹುಳ ಅಮಾವಾಸ್ಯೆ ಸೋಮವಾರ ಕ್ರಿ. ಶ. ೧೧೮೪ ಫೆಬ್ರವರಿ ೧೩ ರ ಸುಳಭಾವಿಯ ಶಾಸನದಲ್ಲಿಯೂ [೭೧] ಶಾ. ಶ. ೧೧೦೯ ಪ್ಲವಂಗ......ಚತುರ್ದಶಿ ಸೋಮವಾರ ಸಂಕ್ರಾಂತಿ=ಕ್ರಿ. ಶ. ೧೧೮೭ ಮಾರ್ಚಿ ೨೪ (ಚೈತ್ರ ಶುದ್ಧ ಚತುರ್ದಶಿ ಮೇಷ ಸಂಕ್ರಾಂತಿ) ಸೋಮವಾರದ ಬೆಣಚಮಟ್ಟಿಯ (ಬಿ) ಶಾಸನದಲ್ಲಿಯೂ [೭೨] ಸಿರಿಯಾದೇವಿಯ ಹೆಸರಿಲ್ಲದೆ ಈ ಸಿಂದ ಸೋದರರ ಹೆಸರುಗಳು ಒಟ್ಟಿಗೆ ಇರುವುದರಿಂದ, ಕ್ರಿ. ಶ. ೧೧೮೦ ರಷ್ಟಕ್ಕೆ ಇವರು ಆಳತಕ್ಕ ಪ್ರಾಯಕ್ಕೆ ಬಂದು ಜತೆಯಾಗಿ ಆಳುತ್ತಿದ್ದರೆಂದೂ ಇವರ ರಾಜಧಾನಿ ಎರಂಬರಗೆ ಎಂದೂ ತಿಳಿಯುತ್ತದೆ. ಮುಂಚಿನಿಂದ ಮಹಾಮಂಡಳೇಶ್ವರರಾಗಿದ್ದ ಸಿಂದರು ಚಾಳುಕ್ಯರ ಒಡೆತನದಲ್ಲಿ ಅವರ ಮಹಾಮಂಡಳೇಶ್ವರರೂ ಆಗಿದ್ದರೂ, ಬೆಣಚಮಟ್ಟಿಯ (ಬಿ) ಶಾಸನದಲ್ಲಿಯೂ ಈ ಸಿಂದ ಸೋದರರನ್ನು ಮಹಾಮಂಡಳೇಶ್ವರರೆಂದದೆಯಾದರೂ ಯಾವನಾದರೂ ಅಧಿರಾಜನ ಹೆಸರಿಲ್ಲದ ಈ ಶಾಸನದಲ್ಲಿ ಇವರಲ್ಲಿಯು ವಿಕ್ರಮಾದಿತ್ಯನನ್ನು (ಬಂ. ೬)

........ಚಕ್ರವರ್ತಿ ಪದವೀಪತಿ ಯೀ।
ನ್ನೀತನೆನಲೆಸೆವನೂರ್ವೀ
ಖ್ಯಾತಯಶಂ ವೀರ ವಿಕ್ರಮಾವನಿಪಾಲಂ ॥

ಎಂದಿರುವುದರಿಂದ, ಆತಕ್ಕ ರಾಜ್ಯವೈಶಲ್ಲವಿಲ್ಲದ ಇವರು ಚಕ್ರವರ್ತಿತ್ವಕ್ಕೆ

69. SIE 1928 (Supp) ಪು. ೧೦, ನಂ. ೧೯ A 70. ಅದೇ. ಪು. ೧೪, ನಂ. ೧೬೪. 71. SIE 1929, App. E. ಪು. ೪೬, ನಂ. ೬೫, 72. EI XX; ಪು. ೧೧೬-೧೧೮.



ಅನರ್ಹರೇ ಆದರೂ ಕಳಚುರ್ಯರ ಪತನಾನಂತರ ಈ ಶಾಸನ ಕಾಲದ ವರೆಗಾದರೂ ಈ ಸೋದರರು ಯಾರಿಗಾದರೂ ಉಪರಾಜರಾಗಿರಲಿಲ್ಲವೆಂದು ಭಾವಿಸಬಹುದು.

ಶಾ. ಶ. ೧೧೧೩ ಸೌಮ್ಯ (?) ಸಂ। ಪುಷ್ಯ ಬಹುಳ ೧೧ ಆದಿತ್ಯವಾರ ಕ್ರಿ. ಶ. ೧೧೯೨ ಜನವರಿ ೧೨ರ ಚನ್ನರಾಯ ಪಟ್ಟಣ ೧೭೯ ನೆಯ ಶಾಸನದಲ್ಲಿ [೭೩] ಹೊಯ್ಸಳ II ವೀರಬಲ್ಲಾಳನು ಸೇವುಣರಿಂದ, ಅಂದರೆ ದೇವಗಿರಿಯ ಯಾದವರಿಂದ, ಯುದ್ಧ ಮುಖದಲ್ಲಿ ಗೆದ್ದುಕೊಂಡನೆಂದಿರುವ ಸೊರಟೂರಿಂದ ಬೆಳ್ವೊಲ ವರೆಗಣ ಪ್ರಾಂತದಲ್ಲಿ ಎರಂಬರಗೆಯೂ ಇದೆ; ಶಾ. ಶ. ೧೧೧೭ ರಾಕ್ಷಸ ಸಂ। ಫಾಲ್ಗುಣ ಶುದ್ಧ ಹುಣ್ಣಿಮೆ ವಡ್ಡವಾರ=ಕ್ರಿ. ಶ. ೧೧೯೬ ಫೆಬ್ರವರಿ ೧೫ ಗುರುವಾರದ ಅರಸಿಕೆರೆ ೧೦೪ರಲ್ಲಿ [೭೪] II ವೀರಬಲ್ಲಾಳನು 'ಎರಂಬರಗೆಯ ನೆಲೆವೀಡಿನೊಳು ಪೃಥ್ವೀರಾಜ್ಯಂಗೆಯ್ಯುತ್ತಮಿರೆ' (ಬಂ. ೧೭-೧೫) ಎಂದಿದೆ. ಆದಕಾರಣ ಕ್ರಿ. ಶ. ೧೧೯೨ರ ಮುಂಚೆಯೇ II ವೀರಬಲ್ಲಾಳನು ಎರಂಬರಗೆಯನ್ನು, ಅತಏವ ಎರಂಬರಗೆ ರಾಜಧಾನಿಯಾಗಿದ್ದ, ಸಿಂದರ ರಾಜ್ಯವನ್ನು, ಸಿಂದರಿಂದಲ್ಲ, ಸೇವುಣರಿಂದ, ಅಂದರೆ ದೇವಗಿರಿಯ ಯಾದವರಿಂದ ಗೆದ್ದುಕೊಂಡಿರಬೇಕು. ಕ್ರಿ ಶ. ೧೧೮೯ ರ ಅಣ್ಣಿಗೆರೆಯ ಮತ್ತು ೧೧೯೧ ರ ಗದುಗಿನ ಶಾಸನಗಳಲ್ಲಿ [೭೫] ದೇವಗಿರಿಯ ಯಾದವ ಭಿಲ್ಲಮನು ಮಲಪ್ರಭಾ ಮತ್ತು ಕೃಷ್ಣಾನದಿಗಳ ತೆಂಕಣ ಹಾಗೂ ಬಡಗಣ ಪ್ರಾಂತಗಳನ್ನು ಗೆದ್ದುಕೊಂಡನೆಂಬಲ್ಲಿ ಅವಲ್ಲಿ ಸಿಂದವಾಡಿಯೂ ಆತನ ಕೆಯ್ವಶವಾಗಿರಬೇಕೆಂದು ಪ್ರತ್ಯಕ್ಷವಿರುವುದರಿಂದ, ಆತನು ಸಿಂದವಾಡಿಯನ್ನು ಕ್ರಿ. ಶ. ೧೧೮೮ರಲ್ಲಿ ಸಿಂದರಿಂದ ಕಿತ್ತುಕೊಂಡಿದ್ದು II ವೀರಬಲ್ಲಾಳನು ಭಿಲ್ಲಮನಿಂದ ಅದನ್ನು ೧೧೯೦ ರಲ್ಲಿ ಸೆಳಕೊಂಡಿರಬೇಕು.

ಕ್ರಿ. ಶ. ೧೧೮೭ ರ ಬೆಣಚಮಟ್ಟಿಯ (ಬಿ) ಶಾಸನದಿಂದೀಚೆ ಸಿಂದ ಬಿಜ್ಜಳನ ಹೆಸರುಳ್ಳ ಶಾಸನವಿಲ್ಲ. ಮೇಲೆ ಕಂಡಿರುವ ೧೨೨೧ ರ ಕಳಕಪ್ಪನಗುಡ್ಡದ ಶಾಸನದಲ್ಲಿ ಅವನ ತಮ್ಮನಾದ ವಿಕ್ರಮಾದಿತ್ಯನನ್ನು ಭಿಲ್ಲಮನ ಮೊಮ್ಮಗನಾದ ಸಿಂಘಣನ (೧೨೧೦-೪೭) ಮಹಾಮಂಡಳೇಶ್ವರನೆಂದದೆ, ಅತಏವ ಬಿಲ್ಲಮನ ಜೈತ್ರಯಾತ್ರೆಯಲ್ಲಿ ಸಿಂದ ಬಿಜ್ಜಳನು

73. E. C. V. 74. ಅದೇ 75. F K D. ಪು. ೫೦೪.

ಮಾಡಿದಿರಬೇಕು. ಆ ಮೇಲೆ ಆತನ ತಮ್ಮನಾದ ವಿಕ್ರಮಾದಿತ್ಯನು ಆನಡುವೆ ಹೊಯ್ಸಳರಿಂದ ಯಾದವರು ಮೂಕೊಂಡ ಸಿಂದವಾಡಿಯಲ್ಲಿ ಆ ಯಾದವರ ಮಹಾಮಂಡಳೇಶ್ವರನಾಗಿ ಆಳುತ್ತಿರಬೇಕು. ಆ ಮೇಲಣ ಶಾ. ಶ. ೧೧೫೦ ವಿಜಯ (ಅಂದರೆ ಉತ್ತರ ಸಂಪ್ರದಾಯದ ವಿಜಯ) ಸಂ। ಚೈತ್ರ ಶುದ್ಧ ಹುಣ್ಣಿಮೆ ಆದಿತ್ಯವಾರ-ಕ್ರಿ. ಶ. ೧೨೧೫ ಮಾರ್ಚ ೧೧ರ ನಿಡಗುಂದಿಯ ಬಸವಣ್ಣನ ಗುಡಿಯಲ್ಲಿಯ ಶಾಸನದಿಂದ[೭೬] ಯಾದವ ಸಿಂಘಣನ ಮಹಾಪ್ರಧಾನನಾದ ವಾಸುದೇವನಾಯಕನು (ಸಿಂದವಾಡಿಯಲ್ಲಿಯ) ಕಿಸುಕಾಡು ೭೦ನ್ನು ಎರಂಬರಗೆಯ ರಾಜಧಾನಿಯಿಂದ ಆಳುತ್ತಿದ್ದನೆಂದು ತಿಳಿವುದರಿಂದ, ಕ್ರಿ. ಶ. ೧೨೨೧-೧೨೨೫ ರ ನಡುವೆ, ಪ್ರಾಯಶಃ ಬಿಜ್ಜಳನ ತಮ್ಮನಾದ ವಿಕ್ರಮಾದಿತ್ಯನೊಂದಿಗೆಯೇ ಏನೋ ಬಡಗಣ ಸಿಂದರ ಆಳಿಕೆ ನಾಮಶೇಷವಾಗಿ ಆವರ ಸಿಂದವಾಡಿಯನ್ನು ಸಿಂಘಣನು ತನ್ನ ಸಾಮ್ರಾಜ್ಯಕ್ಕೆ ಕೂಡಿಸಿಕೊಂಡಿರಬೇಕು.

ಹೇಮಾದ್ರಿಯ ವ್ರತಖಂಡದಲ್ಲಿ[೭೭] ದೇವಗಿರಿಯ ಯಾದವ ಭಿಲ್ಲಮನನ್ನು ಕುರಿತು,

**ಯೋ ವಾ ಮಂಗಲವೇಷ್ಟಕಂ ಕ್ಷಿತಿಪತಿಂ ಶ್ರೀ ಬಿಲ್ಲಣಂ (ವಜ್ರಣಂ) ಜಘ್ನಿವಾನ್**

ಎಂದಿರುವಲ್ಲಿ ಬಿಲ್ಲಣ ಎಂಬ ಹೆಸರಿನ ಯಾವೊಬ್ಬ ಅರಸನಾದರೂ ಕರ್ಣಾಟಕದಲ್ಲೇ ಏಕೆ ದಕ್ಷಿಣಾಪಥದಲ್ಲಿಯೇ ಇದಿಲ್ಲದುದರಿಂದ, ಬಿಜ್ಜಣ ಎಂಬ ಹೆಸರನ್ನು ಬರೆವಲ್ಲಿ ಸಂಪ್ರತಿಕಾರರು ಬಿಲ್ಲಣ ಎಂದು ಎಡಹಿರಬೇಕೆಂದು ಊಹಿಸಲಿಕ್ಕೆ ತಕ್ಕಷ್ಟು ಆಸ್ಪದವಿರುವುದರಿಂದಲೂ, ಬಿಲ್ಲಣಂ ದ್ವಿತೀಯೈಕವಚನದ ಪಾಠಾಂತರವಾಗಿ ದೊರೆವ ವಜ್ರಣಂ ಎಂಬುದು ಪ್ರಾಯಶಃ ಬಿಜ್ಜಣಂ ಎಂಬುದರ ಸಂಸ್ಕೃತಿಸಿದ ರೂಪವೆಂದು ಸಾಕಷ್ಟು ಪ್ರತ್ಯಕ್ಷವಿರುವುದರಿಂದೀ ಭಿಲ್ಲಮನು ಮಡುಹಿದ ಈ ಅರಸನ ಹೆಸರು ಬಿಜ್ಜಣ ಎಂದಿರಬೇಕೆಂದು ನಿಶ್ಚಯಿಸಲಾಗುವುದರಿಂದ, ಈ ಬಿಜ್ಜಣನನ್ನು ಭಿಲ್ಲಮನ ಕಾಲದಲ್ಲಿ (೧೧೮೭-೯೧) ಬಿಜ್ಜಣನೆಂಬ ಹೆಸರಿನ ಅದೊಬ್ಬನೇ ಇದ್ದ ಹಾಗೂ ಮೇಲೆ ಕಂಡಿರುವಂತೆ ಭಿಲ್ಲಮನಿಂದ ಹತನಾದ ಸಿಂದ ಬಿಜ್ಜಳನೊಂದಿಗೆ ಸಮೀಕರಿಸಬಹುದು ಎನಿಸುತ್ತದೆ. ಹೇಮಾದ್ರಿ ಈತನನ್ನು ಮಂಗಲವೇಷ್ಟಕನೆನ್ನಬೇಕಾದರೆ ಈತನ ರಾಜಧಾನಿಯ ಹೆಸರು ಮಂಗಲವೇಷ್ಟಕ=ಮಂಗಳವೇಡೆ (ಮಂಗಳವಾಡ ?) ಎಂದಿರಬೇಕು. ಆದರೆ ಕಳಚುರ್ಯ ಬಿಜ್ಜಳನು ಕಲ್ಯಾಣವನ್ನು ಚಾಲುಕ್ಯರಿಂದ ಕಿತ್ತು

(Supp). ಪು. ೧೫, ನಂ. ೨೦೦; E. I. XX. ಪು, ೧೧೯, 76.S I E 1927



ಕೊಳ್ಳುವ ಮುಂಚೆ ತಾನಿನ್ನೂ ಮಹಾಮಂಡಳೇಶ್ವರನಾಗಿದ್ದಾಗ ಮಂಗಳವಾಡವು ಅವನ ರಾಜಧಾನಿಯಾಗಿತ್ತೆಂದೂ ಅವನ ಮಗನಾದ ಸೋವಿದೇವನ ರಾಜಧಾನಿಗಳಲ್ಲಿಯೂ ಮಂಗಳವಾಡವು ಒಂದಾಗಿತ್ತೆಂದೂ ಮೇಲೆ ಕಂಡಿರುವೆವಲ್ಲದೆ, ಸಿಂದರ ಯಾವ ಶಾಸನದಲ್ಲಾದರೂ, ಏವಂಚ II ಚಾವುಂಡನ ಹಾಗೂ ಅವನ ಮಗಂದಿರಾದ ಬಿಜ್ಜಳ ಮತ್ತು ವಿಕ್ರಮಾದಿತ್ಯನ ಶಾಸನಗಳಲ್ಲಿ, ಎರಂಬರಗೆಯನ್ನೇ ಅವರ ರಾಜಧಾನಿ ಎಂದದೆ ವಿನಾ ಮಂಗಳವೇಡೆಯ ಹೆಸರು ಹೇಗೂ ಇಲ್ಲವಷ್ಟೆ, ಅವರಿಗೆ ಮತ್ತೊಂದು ರಾಜಧಾನಿಯನ್ನೂ ಹೇಳಿಲ್ಲದುದರಿಂದಲೂ ಭಿಲ್ಲಮನಿಂದ ಸಿಂದವಾಡಿಯನ್ನು ಗೆದ್ದ II ವೀರಬಲ್ಲಾಳನು ಬೀಡುಬಿಟ್ಟುದೂ ಎರಂಬರಗೆಯಲ್ಲಿ ಸಿಂದರ ಅವಸಾನಾನಂತರ ಸಿಂಘಣನ ಮಹಾಪ್ರಧಾನ ವಾಸುದೇವ ನಾಯಕನ ರಾಜಧಾನಿ ಇದ್ದುದೂ ಎರಂಬರಗೆಯಲ್ಲಿ ಎಂದು ಮೇಲೆ ಕಂಡಿರುವುದರಿಂದಲೂ ಹೇಮಾದ್ರಿಯಬಿಲ್ಲಣನು ಸಿಂದ ಬಿಜ್ಜಳನೇ ಎಂದಾದರೆ ಕಳಚುರ್ಯರ ವಿಧ್ವಂಸದ ಮತ್ತು ಚಾಲುಕ್ಯ IV ಸೋಮೇಶ್ವರನ ಪ್ರತಿಷ್ಠಾಪನೆಯ ನಡುವಣ ಸಂದುಕಟ್ಟಿನಲ್ಲಿ ಆ ಸಿಂದ ಬಿಜ್ಜಳನು ತನ್ನ ಮಾತಾಮಹನ ಹಾಗೂ ಸೋದರಮಾವಂದಿರ ರಾಜ್ಯದಿಂದ ಮಂಗಳವೇಡೆಯ (ಅಥವಾ ಮಂಗಳವಾಡದ) ಪ್ರಾಂತವನ್ನು ತನ್ನ ಕೈಯ್ವಶಮಾಡಿಕೊಂಡಿದ್ದು ಭಿಲ್ಲಮನಿಂದ ಪರಾಜಿತನಾಗುವಂದಿಗೆ ಈ ಸತ್ಕಾಲಕ್ಕಾದರೂ ಅಲ್ಲಿಯ ನೆಲೆವೀಡಿನಲ್ಲಿ ಇದ್ದನೇನೋ ಎಂದು ಊಹಿಸಬಹುದಷ್ಟೇ ವಿನಾ ಪ್ರಮಾಣಿಸಲಾಗುವುದಿಲ್ಲ. ಅನ್ಯತ್ರ ಕ್ರಿ. ಶ. ೧೧೭೯ರ ರೊಣದ ಮತ್ತು ೧೧೮೦ರ ಸೂಡಿಯ ಶಾಸನಗಳಿಂದ[೭೮] ಕಳಚುರ್ಯ ಬಿಜ್ಜಳನ ಮಗನೆಂದು ತಿಳಿದ ಹಾಗೂ ಕಲ್ಯಾಣದ ಸಿಂಹಾಸನದಲ್ಲಿ ಕುಳ್ಳಿರದ ವಜ್ರದೇವನ ಹೆಸರೇ ಹೇಮಾದ್ರಿಯ ಆ ಶಾರ್ದೂಲ ವಿಕ್ರೀಡಿತದ ಚರಣದಲ್ಲಿ ಛಂದೋನುಕೂಲವಾಗಿ ವಜ್ರಣಂಎಂದೂ ಪಾಠಾಂತರದ ತದ್ಭವದಲ್ಲಿ ವಜ್ರ(ನ್) ಎಂಬುದರ ಸ್ವರ ವಿಪರ್ಯಾಸದಿಂದ ಬಿಜ್ಜ(ಣಂ) ಎಂದೂ ಆ ಬಿಜ್ಜಣವು ಬರೆವಣಿಗರ ತಪ್ಪಿನಿಂದ ಬಿಲ್ಲಣಂ ಎಂದೂ ಆಗಿರಬಹುದೆಂದೂ ತೋರುವುದರಿಂದ, ಕಳಚುರ್ಯರ ಪತನಾನಂತರ ಈ ವಜ್ರದೇವನು ಪ್ರಾಯಶಃ ಚಾಲುಕ್ಯ IV ಸೋಮೇಶ್ವರನ ಉಪರಾಜನಾಗಿ ಮಂಗಳವೇಡಿಯ ಹಾಗೂ ಅದರ ಕೆಲಬಲದ ಸೀಮೆಯನ್ನು ಆಳು

78. FKD ಪು. 477.

ತ್ರಿದ್ದರೆ (ಆದರೆ ಈ ಕುರಿತು ಶಾಸನಾಧಾರವೂ ಇಲ್ಲ; ವಜ್ರದೇವನದೇ ಎಂಬ ಶಾಸನವೂ ಇಲ್ಲ), ಭಿಲ್ಲಮನಿಂದ ಹತನಾದ ಮಂಗಳವೇಡಿಯ ಅರಸನು ಈತನೇನೋ ಎಂದೂ ಊಹಿಸಬಹುದಲ್ಲದೆ ಇದನ್ನೂ ಪ್ರಮಾಣಿಸಲಾಗುವುದಿಲ್ಲ. ಹೀಗಾಗಿ ಹೇಮಾದ್ರಿಯ ಮಂಗಲವೇಷ್ಟಕನಾದ ಬಿಲ್ಲಣ (೦) ಅಥವಾ ವಜ್ರಿ (ಣಂ) ಎಂಬವನು ಇಂಥವನೇ ಎಂದು ಸುನಿಶ್ಚಿತವಾಗಿ ತೀರ್ಮಾನಿಸಲಾಗುವುದಿಲ್ಲ.

ಬೆಣಚಮಟ್ಟಿಯ (ಬಿ) ಶಾಸನದಲ್ಲಿ (ಬಂ. ೪) ಸಿಂದ ಬಿಜ್ಜಳನನ್ನು

ನಂಬಿಗೆಯ ತೆರದಿಂ ಶಿವನಂ
ನಂಬಿದನೋಹಿಲನ ತೆಂದೆನೋಹಿಲ್ಲದ ಭ।
ಕ್ತಂ ಬಾಣನಂತೆ ಜಾಣಂ
ಕಿಂಬಹುನಾ ವೀರಬಿಜ್ಜಳಾವನಿಪಾಲಂ॥

ಎಂದು ಬಸವೇಶ್ವರನ ವಚನಗಳಿಂದಲೂ ಹರಿಹರನ ರಗಳೆಗಳೇ ಮೊದಲಾದ ವೀರಶೈವ ಗ್ರಂಥಗಳಿಂದಲೂ ಪರಮ ಶಿವಭಕ್ತರೆಂದು ತಿಳಿವ ನಂಬಿ, ಓಹಿಲ, ಬಾಣರೊಂದಿಗೆ ಹೋಲಿಸಿರುವುದರಿಂದ ಆತನು ಪ್ರಾಯಶಃ ವೀರಶೈವನೇ ಆಗಿದ್ದನೇನೋ. ಕಳಚುರ್ಯ ಬಿಜ್ಜಳನ ಮತವಾವುದೆಂದು ನಿರ್ಣಯಿಸುವಲ್ಲಿ ಅವನ ಮಗಂದಿರ ಸೋಮೇಶ್ವರ (ಸೋವಿದೇವ) ಹಾಗೂ ಶಂಕರ (ಸಂಕಮ) ಎಂಬ ಹೆಸರುಗಳೂ [೭೯] ಅವನ ಸುವರ್ಣ ವೃಷಭ ಧ್ವಜವೂ [೮೦] ಇತನು ಜೈನನಲ್ಲವೆಂಬುದಕ್ಕೆ ತಕ್ಕಷ್ಟು ದ್ಯೋತಕವಾಗಿವೆ. ಮುಂದೆ ಕಾಣುವ ಮೇರೆಗೆ ಕಳಚುರ್ಯ ಬಿಜ್ಜಳನು ಜೈನರ ವಾದವನ್ನು ಅಲ್ಲಗಳೆದು ಪರಮ ಶೈವನಾದ ಏಕಾಂತದ ರಾಮಯ್ಯನ ಕಾಲು ತೊಳೆದು ಅವನು ಅಬ್ಬಲೂರಿನ ಜೈನ ಬಸದಿಯಲ್ಲಿಯ ಜಿನ ಮೂರ್ತಿಯನ್ನು ಕೆಡವಿ ಅಲ್ಲಿ ಶಿವಲಿಂಗವನ್ನು ಪ್ರತಿಷ್ಠಿಸಿದ ಆದೇ ವೀರ

79. ಜೈನರಲ್ಲಿ ಶಂಕರ ಎಂಬ ಹೆಸರಿತ್ತೆಂದು ತಿಳಿಯುತ್ತದಾದರೂ ಉದಾ— ಅಜಿತಪುರಾಣದಲ್ಲಿ (XII ೯ ಶಂಕರಗಂಡ, ಶಿಕಾರಿಪುರ ೧೯೭ರಲ್ಲಿ (EC VII ಬಂ ೧) ಜಿನಸಮಯೋಚ್ಚಿಂತಾಮಣಿ ಶಂಕರ ಸಾಮಂತ, ಅಬ್ಲೂರಿನ ಶಾಸನದಲ್ಲಿ ಹೇಳಿರುವ ಜೈನರ ಮುಂಬಿಗನಾದ ಸಂಕಗಾವುಂಡ ಇತ್ಯಾದಿ– ಅವರಲ್ಲಿ ಸೋಮೇಶ್ವರ ಎಂಬ ಹೆಸರಿದ್ದಂತಾಗಲಿ ಜೈನ ಅರಸರಿಗೆ ವೃಷಭ ಧ್ವಜವಿದ್ದಂತಾಗಲಿ ತಿಳಿದಿಲ್ಲ, 80 ಉದಾ – E. C. VII ಶಿಕಾರಿಪುರ ೧೮, ೯೨. ೧೦೨. ೧೬೦. ೧೯೮. ೨೪೨. ಇತ್ಯಾದಿ.



ಸೋಮನಾಥ ದೇವಾಲಯಕ್ಕೆ ಸತ್ತಳಿಗೆ ೭೦ರಲ್ಲಿಯ ಗೋಗಾವೆ ಎಂಬ ಹಳ್ಳಿಯನ್ನು ದತ್ತಿ ಬಿಟ್ಟನೆಂಬ ಅಬ್ಬಲೂರಿನ ಶಾಸನದ [೮೧] ಹೇಳಿಕೆಯಿಂದ ಬಿಜ್ಜಳನು ಜೈನನಾಗಿರದೆ ಶಿವಭಕ್ತನಾಗಿದ್ದನೆಂದು ತಿಳಿಯುತ್ತದೆ. ದಕ್ಷಿಣ ದಿಗ್ಭಾಗಮಂ ಸಾಧಿಸಲೆಂದು ಬಿಜ್ಜಲ ಮಹಾರಾಜಂ ಬಿಜಯಂಗೆಯ್ದು ಬಳ್ಳಿಗಾವಿಯೊಳು ಬೀಡಂಬಿಟ್ಟು ಸುಖಸಂಕಥಾವಿನೋದದಿಂದಮಿರ್ಪ್ಪುದುಮನಿಬರುಮೊಂದಾಗಿ ಬಂದು ಕುಳ್ಳಿರ್ದ್ದ ಕೋಡಿಯ ಮಠದ ಧರ್ಮ ಪ್ರಸಂಗಮಂ ಮಾಪ್ಪುದುಮಾ ಪ್ರಸ್ತಾವದೊಳು, (ಬಂ. ೩೪-೩೫) ಆ ಕೋಡಿಯ "ಮಠದೊಳೀನಾನುಂ ಧರ್ಮಮಂ ದೇವಮ್ಮಾಡಿದೊಡದು ಚಂದ್ರಾರ್ಕಸ್ಥಾಯಿಯಾಗಿ ನಡೆವುದು" (ಬಂ. ೪೪-೪೫) ಎಂದ ತನ್ನ ಪಾದಪದ್ಮೋಪಜೀವಿಯಾದ ಕಸಪಯ್ಯನಾಯಕನ ವಿಜ್ಞಾಪನೆಯ ಮೇರೆಗೆ ಕಳಚುರ್ಯ ಬಿಜ್ಜಳ ಮಹೀಪಾಲನು "ದಕ್ಷಿಣ ಕೇದಾರೇಶ್ವರ ದೇವರಂಗಭೋಗಕ್ಕಂ ತಪೋಧನರಾಹಾರದಾನಕ್ಕಂ ವಿದ್ಯಾದಾನಕ್ಕಂ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಂ ಶಿಷ್ಟೇಷ್ಟಂ ಸಂತರ್ಪಣಕಂ" (ಬಂ. ೪೫-೪೬) ದತ್ತಿ ಬಿಟ್ಟನೆಂಬ ಅವನ ಆಳಿಕೆಯ ೬ನೆಯ ವರ್ಷದ ವಿಷು ಸಂ। ಪುಷ್ಯಮಾಸದಮಾವಾಸ್ಯೆ ಸೂರ್ಯಗ್ರಹಣ = ಕ್ರಿ. ಶ ೧೧೬೨ ಜನವರಿ ೧೭ ಬುಧವಾರ ಸೂರ್ಯಗ್ರಹಣದಂದಿನ ಶಿಕಾರಿಪುರ ೧೦೨ನೆಯ ಶಾಸನದಿಂದ [೮೨] ಬಿಜ್ಜಳನು ಶಿವಭಕ್ತನೆಂದು ಸ್ಪಷ್ಟವಾಗುತ್ತದೆ. ಈ ಬಿಜ್ಜಳನ ಮಗನಾದ ಕಳಚುರ್ಯ ಆಹವಮಲ್ಲನ (೧೧೮೧-೮೩) ದಂಡನಾಥನಾದ ಜೈನ ರೇಚನ ಅಥವಾ ರೇಚಿದೇವರಸನ ತೇದಿಯಿಲ್ಲದ ಶಿಕಾರಪುರ ೧೯೭ನೆಯ ಶಾಸನದ [೮೩] ಅವತಾರಿಕೆಯಲ್ಲಿ ಎಲ್ಲನೆಂಬಂತೆ ಜೈನ ಶಾಸನಗಳು ಮೊದಲಾಗುವ ಶ್ರೀಮತ್ಪರಮಗಂಭೀರೇತ್ಯಾದಿ ಶ್ಲೋಕವೂ ಆಮೇಲೆ (ಬಂ. ೨-೩) 'ಧರ್ಮ್ಮಂ ಶಾತಿ ಸತ್ಕುಂಥುವೆಂಬೀ ರತ್ನತ್ರಯ ದೇವರ' ಅಂದರೆ ಧರ್ಮನಾಥ, ಶಾಂತಿನಾಥ, ಕುಂಥುನಾಥ ಎಂಬೀ ಮೂರು ಜೈನ ತೀರ್ಥಂಕರರ ಹೆಸರೂ ಇದ್ದು ಅದು ಪ್ರತ್ಯಕ್ಷ ಜೈನ ಶಾಸನವೇ ಆದರೂ, ಅದರಲ್ಲಿ ಕೊಟ್ಟಿರುವ ಕಳಚುರ್ಯವಂಶಾವಳಿಯಲ್ಲಿ ಯಾವೊಬ್ಬನನ್ನೂ ಜೈನನೆಂದಿಲ್ಲ. ಅವರೆಲ್ಲರಾಗಲಿ ಅಥವಾ ಅವರಲ್ಲಿ ಯಾರೊಬ್ಬನಾಗಲಿ ಜೈನರಾಗಿದ್ದರೆ, ಆ ಜೈನ ಶಾಸನದಲ್ಲಿ ಅದನ್ನೆಂದಿಗೂ ಪ್ರಕಾಶಿಸದೆ ಇರುತ್ತಿದ್ದಿಲ್ಲ. ಎಂಬುದಿಷ್ಟು

81. FKD, ಪುಟ ೪೮೩, 82. EC. VII. 83. ಅದೇ,

ಕಂಡಿತವಿರುವುದರಿಂದ, ಕಳಚುರ್ಯ ಬಿಜ್ಜಳನಾಗಲಿ ಅವನ ಮಕ್ಕಳಾಗಲಿ ಜೈನರಾಗಿರಲಿಲ್ಲವೆಂದು ಬೇರೆ ಹೇಳಬೇಕೆಂದಿಲ್ಲ. ಮೇಲೆ ಕಂಡಿರುವ ನವಿಹರಳ ಹಳ್ಳಿಯ ಶಾಸನದಲ್ಲಿ[೮೪] ಕಳಚುರ್ಯ ಬಿಜ್ಜಳನು ಜೈನರಿಗೆ ಬಿಟ್ಟ ದತ್ತಿಯನ್ನು ಹೇಳಿದೆಯಾದರೆ, ಅದರಿಂದ ಆತನು ಪರಧರ್ಮಸಹಿಷ್ಣುವೆಂದೇ ಹೊರತು ಜೈನನೆಂದಾಗದು. ಹೀಗೆ ಬಸವೇಶ್ವರನ ಸಮಸಾಮಯಿಕರಾಗತಕ್ಕ ಕಳಚುರ್ಯ ಬಿಜ್ಜಳನೂ ಅವನ ದೌಹಿತ್ರನಾದ ಹಿಂದ ಬಿಜ್ಜಳನೂ ಇವರಿಬ್ಬರೇ ಬಿಜ್ಜಳರಲ್ಲಿ ಯಾವಾತನಾದರೂ ಜೈನನಲ್ಲನೆಂದು ಇಷ್ಟು ಸ್ಪಷ್ಟವಿರುವುದರಿಂದ, ಬಸವೇಶ್ವರನು ಓಲಗಿಸಿದ ಬಿಜ್ಜಳನನ್ನು ಕ್ರಿ. ಶ. ೧೫೮೪ರ ವೀರಶೈವ ವಿರೂಪಾಕ್ಷ ಪಂಡಿತನ ಚನ್ನಬಸವಪುರಾಣದಲ್ಲಿ (೧-೫-೬) ಜಿನ ಬಿಜ್ಜಳನೆಂದೂ ಕ್ರಿ. ಶ. ಸು. ೧೬೫೦ರ ಜೈನ ಧರಣಿ ಪಂಡಿತನ ಬಿಜ್ಜಳರಾಯ ಚರಿತ್ರೆಯಲ್ಲಿ[೮೫]

ಜೈನಶಾಸನ ವಾರ್ಧಿವರ್ಧನ ಚಂದ್ರಮ

ಜೈನವಂಶಾನ್ವಯ ತಿಲಕ

ಜೈನ ಮಾರ್ಗಾನಂದಪರ

ನೆಂದೂ ಹೇಳಿರುವುದಾದರೊ ಇತಿಹಾಸದ ದೃಷ್ಟಿಯಿಂದ ತೀರ ಅಯಥಾರ್ಥವೇ ಸೈ. ಆತಏವ 'ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳಿರ್ದು ಓಲೈಸಿಹೆನೆಂದು ನುಡಿವರಯ್ಯ' ಎಂಬ ಬಸವೇಶ್ವರನ ವಚನದಲ್ಲಿಯು[೮೬] ಭವಿ ಎಂಬುದಕ್ಕೆ ವೀರಶೈವೇತರನೆಂದೇ ವಿನಾ ಜೈನನೆಂದು ಅರ್ಥವಲ್ಲ.

ಇನ್ನೂ ಹೇಳುವದಾದರೆ, ಕೂಡಲ ಸಂಗಮೇಶ್ವರನೇ ಬಸವೇಶ್ವರನ ಕನಸಿನಲ್ಲಿ ಸ್ವಯವಾಗಿ 'ಎಲೆ ಮಗನೆ ಬಸವ ಬಸವಣ್ಣ ಬಸವಿದೇವಿ.........ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು' ಎಂದು ಆಜ್ಞಾಪಿಸಿದನೆಂದು ವೀರಶೈವನಾದ ಹಾಗೂ ಬಸವೇಶ್ವರನ ಕಿರಿಯ ಸಮಕಾಲೀನನಾದ ಹರಿಹರನ ಬಸವೇಶ್ವರನ ಕಿರಿಯ ಸಮಕಾಲೀನನಾದ ಹರಿಹರನ ಬಸವರಾಜದೇವರ ರಗಳೆಯಲ್ಲಿ (ಪು. ೨೧) ಹೇಳಬೇಕಾದರೆ, ವೀರಶೈವವು ಇನ್ನೂ ಸ್ಥಾಪಿತವಾಗಿಲ್ಲದ ಕಾಲದ ಆ ಕನಸಿನಂದಿನ ಬಿಜ್ಜಳನು ಶಿವಭಕ್ತನೇ ಆಗಿರಬೇಕಲ್ಲದೆ ಜೈನನಲ್ಲ. ಆ ಬಿಜ್ಜಳನಿಗೂ ಬಸವೇಶ್ವರನಿಗೂ ಕೊನೆಗೆ ತಾಗಿ ಬಂದ ವೈಮನಸ್ಯವನ್ನು

84. ಕ. ಸಾ. ಪ. ಪತ್ರಿಕೆ XXIII, ಪು. ೨೭೮,

85. ಕವಿಚರಿತೆ ೨, ಪು. ೪೧೭—೪೧೮ , 86. ಪು. ೧೦೪, ನಂ.೬



ಕೂಡ ಹೇಳಿರುವ ಬಸವಪುರಾಣದಲ್ಲಿಯು (ಕ್ರಿ. ಶ. ೧೩೬೯)—ಉದಾ. ಏಕಾಂತದ ರಾಮಯ್ಯನ ಪ್ರಸಂಗದಲ್ಲಿ (೫೩ ೪೮) ಜೈನರು ಬಿಜ್ಜಳನಲ್ಲಿಗೆ ಒಯ್ದುವಾದವು ಬಿದ್ದುಹೋಗಲು ಶಿವಭಕ್ತರು ಬಿಜ್ಜಳನ ರಾಜಧಾನಿಯಲ್ಲಿಯೇ

ಅವಿರತಂ ಕಲ್ಯಾಣದೊಳಗೆಣೆ

ಸುವರೆ ಜಿನನುಂ ಬಸದಿಯೆಂಬೀ

ಜವಳಿನುಡಿಯಿಲ್ಲೆನಲು ಹುಡಿಹುಡಿ

ಮಾಡಿದರು— ಎಂಬಿತ್ಯಾದಿ ಪ್ರಸ್ತಾವಗಳಿಂದ ತೋರವಂತೆ ಬಿಜ್ಜಳನು ಜೈನನೂ ಅಲ್ಲ, ಅವರ ವೈಮನಸ್ಯಕ್ಕೆ ಭಿನ್ನಮತೀಯತೆಯೂ ಕಾರಣವಲ್ಲ. ಆತಏವ ಬಸವೇಶ್ವರನ ಬಿಜ್ಜಳನು ವಾಸ್ತವಿಕವಾಗಿಯೂ ಜೈನನಾಗಿದ್ದರೆ, ಚನ್ನಬಸವಪುರಾಣ ಹಾಗೂ ಬಿಜ್ಜಳರಾಯ ಚರಿತೆಗಿಂತ ಅವರ ಕಾಲಕ್ಕೆ ಶಾನೆ ಸಮೀಪತರವಾದ ಬಸವರಾಜ ದೇವರ ರಗಳೆ ಹಾಗೂ ಬಸವಪುರಾಣಗಳಲ್ಲಿ ಅದನ್ನು ಕಂಡಿತವಾಗಿಯೂ ಪ್ರಕಟವಾಗಿ ಹೇಳದೆ ಇರುತ್ತಿದ್ದಿಲ್ಲ ಎಂಬುದರಿಂದ, ಕಳಚುರ್ಯರ ಕಾಲದ ಶಾಸನಗಳಲ್ಲಿ ಹೇಗೋ ಹಾಗೆ ಈ ಕಾವ್ಯಗಳಲ್ಲಿಯೂ ಜೈನನೆನ್ನದ ಬಿಜ್ಜಳನು ಸರ್ವಥಾ ಜೈನನಲ್ಲ.

[ಮುಂದುವರಿವುದು.]

# ವೀರಶೈವರ ಪೂರ್ವದ ಹೆಸರು ಯಾವುದು?.

(ಲೇ. ಶ್ರೀ ಮಲ್ಲಿಕಾರ್ಜುನ ದೇಶಿಕರು ವೈಲೇಶ್ವರ. ಮುಕ್ಕಾಂ ಹುಬ್ಬಳ್ಳಿ.)

ಇತ್ತಿತ್ತಲೀಗ ವೀರಶೈವಮತವು ಬಸವಣ್ಣನವರಿಗಿಂತ ಪೂರ್ವದಲ್ಲಿರದೆ ಶೈವಮತ, ಶೈವಾಂತರ್ಗತ, ಕಾಳಾಮುಖ, ಲಕುಲೀಶಾದಿ ಶೈವ ಪಂಥಗಳೇ ಇದ್ದವೆಂದೂ ಬಸವೇಶ್ವರನ ಕಾಲದಿಂದೀಚೆಗೆ ವೀರಶೈವ ಮತವು ಉಂಟಾಯಿತೆಂತಲೂ ಹೇಳುವದಲ್ಲದೆ ಲೇಖಗಳನ್ನು ಸಹ ಬರೆಯುತ್ತಿದ್ದಾರೆ.

ಇನ್ನು ಮತ್ತೊಬ್ಬರು ಬಸವೇಶ್ವರನಿಗಿಂತ ಪೂರ್ವದಲ್ಲಿಯಾಗಲಿ ಬಸವೇಶ್ವರನ ಕಾಲದಲ್ಲಿಯಾಗಲಿ ಈಗಿನಂತೆ ವೀರಶೈವ ಅಥವಾ ಲಿಂಗಾಯತ ಲಿಂಗವಂತ ಎಂದೆನಿಸಿಕೊಳ್ಳದೆ ಶಿವಸಮಯ ಮುಂತಾದ ಸಾಮಾನ್ಯ ನಾಮಗಳಿಂದ ವೀರಶೈವವು ಕರೆಯಿಸಿಕೊಳ್ಳುತ್ತಿದ್ದಿತೆಂತಲೂ ಬರೆಯುತ್ತಿದ್ದಾರೆ.

ಶಿವಾನುಭವ ಸಂಪುಟ (೧೪) ಸಂಚಿಕೆ (೧)ರಲ್ಲಿ ಬೆಂಗಳೂರ ಶ್ರೀ. ವೀರೇಶ್ವರೆಂಬುವವರು 'ದ್ರಾವಿಡ ಪ್ರಾಣಾಯಾಮವೇತಕ್ಕೆ' ಎಂಬ ಲೇಖದಲ್ಲಿ ಬಸವೇಶ್ವರನಿಗಿಂತ ಪೂರ್ವದಲ್ಲಿಯಾಗಲಿ ಬಸವೇಶ್ವರನ ಕಾಲದಲ್ಲಿಯಾಗಲಿ ಈಗಿನಂತೆ ವೀರಶೈವ ಅಥವಾ ಲಿಂಗಾಯತವೆನಿಸಿಕೊಳ್ಳದೇ ಶಿವಸಮಯ ಮುಂತಾದ ನಾಮಗಳಿಂದೇ ಕರೆಯಿಸಿಕೊಳ್ಳುತ್ತಿದ್ದಿತೆನ್ನುವವರ ಮತವನಲ್ಲಗಳೆದು ಹಾಗೆ ಕರೆಯಿಸಿಕೊಂಡಿದ್ದು ಕಾಳಾಮುಖ ಲಕುಲೀಶಾದಿ ಶೈವಪಂಥಗಳೇ ವಿನಾ ಬೇರೆ ಅಲ್ಲವೆಂದು ಹಲಕೆಲವು ಕಾರಣಗಳನ್ನು ತೋರಿಸಿ ಆಹ್ವಾನಿಸಿದ್ದಾರೆ.

ಈ ಎಲ್ಲ ಪಕ್ಷದವರು ವಚನಶಾಸ್ತ್ರಗಳೇ ವೀರಶೈವಮತಕ್ಕೆ ಮುಖ್ಯವಾದ ಆಧಾರ ಗ್ರಂಥಗಳು, ಉಳಿದ ವೇದಾಗಮಾದಿ ಸಂಸ್ಕೃತ ಗ್ರಂಥಗಳು ಅವಿಶ್ವಾಸದಾಯಕಗಳೆಂದು ಅಭಿಪ್ರಾಯಪಡುವಂತೆ ತೋರುತ್ತದೆ. ಆದರೆ ಈ ಉಭಯಪಕ್ಷಾಶ್ರಿತರು ವಚನಶಾಸ್ತ್ರಗಳನ್ನು ವಿಮರ್ಶಕ ಬುದ್ಧಿಯಿಂದ ಚನ್ನಾಗಿ ಶೋಧಮಾಡಿದ್ದರೆ ಈ ರೀತಿ ಬರೆಯುತ್ತಿದ್ದಿಲ್ಲ.



ವಚನಕಾರರು ವೇದಾಗಮ ಪುರಾಣ ಮುಂತಾದವುಗಳ ಆಧಾರಗಳನ್ನು ಎತ್ತಿ ಎತ್ತಿ ತಾವು ಹೇಳುವ ವೀರಶೈವ ಸಿದ್ಧಾಂತವು ವೇದಾಗಮ ಪುರಾಣ ಸಮ್ಮತವೆಂದು ಅಂದಿಂದಿನ ಸ್ವಮತ ಪರಮತದವರಿಗೆ ಮತನಿಷ್ಠೆಯ ಆಹ್ವಾನವನ್ನು ಕೊಡುತ್ತಿದ್ದಾರೆ. ವಚನಕಾರರು ತಮ್ಮ ವಚನಗಳಲ್ಲಿ ಎತ್ತಿಕೊಂಡಿರುವ ವೇದಾಗಮಾದಿ ಪ್ರಮಾಣಗಳನ್ನು ಅಂಥ ಪ್ರಮಾಣಗಳನ್ನು ಬಿಳುಗನ್ನಡದಲ್ಲಿ ಹಾಡಿರುವದನ್ನು ಸಂಗ್ರಹಿಸಿ ವೀರಶೈವ ಮತವಾಗಲೀ ವೀರಶೈವ ಶಬ್ದವಾಗಲೀ ಬಹು ಪ್ರಾಚೀನವೆಂಬುದನ್ನು ಆಗಮಜ್ಞರ ಕಾಲದಿಂದಲೂ, ಪುರಾತನಕಾಲದಿಂದಲೂ, ವಚನಕಾರರ ಕಾಲದಿಂದಲೂ ಇರುವದನ್ನು ಮಂಡಿಸುವಾ.

ಶ್ರೀಯುತ ಹಳಕಟ್ಟಿಯವರಂತೆ ಶೋಧನಮಾಡಿ ವೀರಶೈವರ ಪೂರ್ವದ ನಾಮಗಳನ್ನು ಪೂರ್ವಾನುವಾದದಿಂದ ವಾಚಕರ ಅವಗಾಹನಕ್ಕಾಗಿ ದಿಗ್ದರ್ಶನಮಾಡಿ ತೋರಿಸಿದರೇನೇ ಮುಂದಿನ ವಿಚಾರಕ್ಕೆ ತಳಹದಿ ಎಂದು ತಿಳಿದು ಇಲ್ಲಿ ಅವುಗಳನ್ನು ಕೊಡುವೆವು. ಹೆಚ್ಚು ನೋಡಲಿಚ್ಛಿಸುವವರು ಶಿವಾನುಭವ ಸಂಚಿಕೆಗಳಲ್ಲಿಯ ಲೇಖಗಳನ್ನು ನೋಡಿಕೊಳ್ಳಬಹುದು.

ಉಕ್ತ ನಾಲ್ಕು ಶಿಲಾಶಾಸನಗಳು ಬಸವೇಶ್ವರನ ವಚನಕಿಂತ ಯಜಮಾನತ್ವವನ್ನು ವಹಿಸಿಲ್ಲವು ಇವುಗಳಿಗಿಂತಲೂ ಬಸವಣ್ಣನವರ ವಚನವು ಹಿರಿದು. ಬಸವಣ್ಣನವರ ವಚನದ ಕಾಲವು ಕ್ರಿ. ಶ. (೧೧೬೫). ಶಾಸನಗಳ ಕಾಲವು ಕ್ರಿ. ಶ. ೧೨೨೦ರಿಂದ ೧೨೬೦ರ ವರೆಗೆ. ಇದರಿಂದ ಅವು ೫೫ ರಿಂದ ೧೦೦ ವರುಷ ಕಿರಿಯತನದವುಗಳು. ಇದು ಅವುಗಳ ಕಾಲಗಣಿತವು.

ಆ ಶಾಸನಗಳಲ್ಲಿಯ ಮುಖ್ಯ ನಾಮಗಳು ಇಂತಹವು. ಶಿವಸಮಯ ಪ್ರಕಾಶನು, ಶಿವಯೋಗಯುಕ್ತನು, ಶಿವಾಚಾರವುಳ್ಳವನು, ಲಿಂಗವೇಧಕನು ಪುರಾತನರಲ್ಲಿಯೂ ಜಂಗಮರಲ್ಲಿಯೂ ಲಿಂಗದಲ್ಲಿಯೂ ಭಕ್ತಿಯುಳ್ಳವನು, ಮುನಿಪತಿ, ಆರೂಢವ್ರತಿ, ಶಿವಯೋಗಸಿದ್ಧ ಇತ್ಯಾದಿ ಶಾಸನಗಳಲ್ಲಿ ಯಾವ ನಾಮಗಳು ಬಂದರೂ ವೀರಶೈವ, ಲಿಂಗಾಯತ ಈ ನಾಮಗಳು ದೊರೆಯಲಿಲ್ಲವು.

ಇನ್ನು ಬಸವಣ್ಣನವರ ವಚನದಲ್ಲಿ ಲಿಂಗವಂತ, ಸಮಯಾಚಾರಿ ಸಮಯಾಚಾರ, ಶಿವಾಚಾರ, ಲಿಂಗಭಕ್ತ, ಲಿಂಗಪಥ, ಸಮಯ ವ್ರತ,

ಗಳು, ನಿಜವ್ರತ, ಇವುಗಳ ವ್ಯತಿರಿಕ್ತ ವೀರಶೈವ ಶಬ್ದವಾದರೂ ಎಲ್ಲಿಯೂ ದೊರೆಯಲಿಲ್ಲವು. ಬಸವಣ್ಣನವರ ವಚನಗಳ ನಾಲ್ಕೆಡೆ ಬಂದ ಲಿಂಗವಂತ ನಾಮವೂ ಶಾಸನಗಳೊಂದೆಡೆಯು ಬರಲಿಲ್ಲವು. ಅಂದಮೇಲೆ ಬಸವನ ಕಾಲದಲ್ಲಿದ್ದ ಲಿಂಗವಂತ ನಾಮವು ಶಾಸನಗಳ ಕಾಲದಲ್ಲಿ ಎಲ್ಲಿ ಅಡಗಿತ್ತು ? ಇದನ್ನು ಶೋಧಕರು ಸ್ಪಷ್ಟಪ್ತಿಗೊಳ್ಳಲಿಲ್ಲ. ಇನ್ನಾದರೂ ಮರಳಿ ಉತ್ತರಿಸಲಿ.

ವೀರಶೈವದ ವ್ಯತಿರಿಕ್ತ ಶಾಸನಗಳಲ್ಲಿ ಮತ್ತು ವಚನದಲ್ಲಿ ಶಿವಸಮಯ, ಶಿವಾಚಾರ, ಶಿವಯೋಗ, ಸಮಯಾಚಾರ, ಸಮಯಾಚಾರಿ ಮುಂತಾದ ನಾಮಗಳು ವೀರಶೈವ ಮತಕ್ಕೇನೇ ಸಂಬಂಧಪಟ್ಟವುಗಳೆಂದು ಶ್ರೀಯುತ ಹಳಕಟ್ಟಿಯವರೇ ಒಪ್ಪಿದ್ದಾರೆ. ಪುನಃ ನಾವು ಅವುಗಳನ್ನು ತೋರಿಸುವದು ಅವಶ್ಯಕತೆಯಿಲ್ಲವು. ತೋರಿಸಬೇಕೆಂದಲ್ಲಿ ಹೇರಳವಾಗಿ ತೆಗೆದು ತೋರಿಸುವೆವು. ನಾವು ಇಲ್ಲಿ ಇಡೀ ವಚನಗಳನ್ನೇ ಕೊಡದೆ ವೀರಶೈವ ಶಬ್ದದ ಮಟ್ಟಿಗೆ ವಾಕ್ಯಗಳುಳ್ಳವುಗಳನ್ನೇ ಆರಿಸಿಕೊಂಡು ಉದಾಹರಿಸುವೆವು ಹೆಚ್ಚು ನೋಡಲಿಚ್ಛಿಸುವ ವಾಚಕರು ಅವರವರ ವಚನಗಳಲ್ಲಿ ನೋಡಿಕೊಳ್ಳಬಹುದು. ನಾವು ಇಲ್ಲಿ ಕೊಡುವ ವೀರಶೈವ ವಚನಗಳೆಲ್ಲವೂ ಬಸವೇಶ್ವರನ ಸಮಕಾಲೀನರಾದ ಇತರ ವಚನಕಾರರ ವಚನಗಳನ್ನೇ ಆರಿಸಿ ಕೊಟ್ಟಿರುವೆವು.

## ಶ್ರೀ ಚನ್ನಬಸವಣ್ಣನವರ ವಚನ.

ಪುಟ ೨೧ ವಚನ ೬.

ಗುರುಮಾರ್ಗವೇ ತನಗೆ ಸಮ್ಮತವಾಗಿ । ತನ್ನಮಾರ್ಗವೇ ಗುರುವಿಗೆ ಸಮ್ಮತವಾಗಿ । ವೀರಶೈವಾಚಾರಸಂಪನ್ನನಾಗಿರಬಲ್ಲಡೆ ! ಆತ ಮಹೇಶ್ವರನಪ್ಪನಯ್ಯಾ ಕೂಡಲ ಚನ್ನಸಂಗಮದೇವಾ ॥

ಪುಟ ೩೬ ವಚನ ೭.

ಇಷ್ಟ ಬ್ರಹ್ಮವೇ ಮುಖವಾಗಿ । ವೀರಶೈವಾಚಾರಸಂಪನ್ನರಾಗಿರ್ದ । ಸದ್ಭಕ್ತವೀರಮಾಹೇಶ್ವರರ ಮೇಲೆ ರತಿ ಇಲ್ಲದೆ ॥

ಪುಟ ೫೫ ವಚನ ೭.

ಇಂತೀ ವೇಷ ಡಂಭಕ ಗುರುಶಿಷ್ಯರ ಮೆಚ್ಚುವರೇ ವೀರಶೈವಾಚಾರಸಂಪನ್ನರಾದ ನಿಜಶರಣರು ॥



ಪುಟ ೫೬ ವಚನ ೧೧.

ಇಂತೀ ವೀರಶೈವಾಚಾರ ಸಂಪನ್ನನಾದ ಸಿದ್ಧಾಂತಿಗಿದು ಚಿನ್ಹವು॥

ಪುಟ ೬೬ ವಚನ ೧.

ಕೋಟಿಸುಕೃತದ ಫಲವು । ಒಂದುವೇಳೆ ಕೈಸಾರದಂತಿರ್ದದ ವೀರಶೈವಾಚಾರ ಸಂಪನ್ನರಾದ ಘನಮಹಿಮರೇ ಬಲ್ಲಯ್ಯ ॥

ಪುಟ ೬೬ ವಚನ ೩.

ವೀರಶೈವಸಂಪನ್ನರೆನಿಸುವ ಪರಮ ಸದ್ಭಕ್ತರಿಂಗೆ ಅನುಭಾವವೇ ಅರಿವಿನ ಗೊತ್ತು ॥

ಪುಟ ೭೫ ವಚನ ೧೫

ವೀರಶೈವ ಸಮ್ಮತವಾಗಿ ನಿಂದು ॥ಸಾಕ್ಷಿ। ಇಂದ್ರಾವದ್ರಿಯೋ ಹಸ್ತಪೀಠ ನಿಜಲಿಂಗ ನಿಷ್ಟಂ । ವಿನಸ್ಯತಲ್ಲೀನಮ ಪ್ರವೇಶಾ ॥ ಬಾಹ್ಯಕ್ರಿಯಾ ಸಂಕುಲ ನಿಸ್ಪೃಹಾತ್ಮಾ। ಸಂಪೂಜಯೇತ್ಸಂಗಯೋ ವೀರಶೈವಂ ॥ ಉಕ್ತ ಶ್ಲೋಕು. ಇಲ್ಲಿ ಅಶುದ್ಧಬಿದ್ದಿದೆ ಈ ಪ್ರಮಾಣವು ಆಗಮಗಳಲ್ಲಿಯೂ ಶಂಕರಸಂಹಿತಾ, ವೇದಾಂತಸಾರ ವೀರಶೈವ ನಿರ್ಣಯ ಚಿಂತಾಮಣಿ, ಶೈವರತ್ನಾಕರ, ವೀರಶೈವಸದಾಚಾರಸಂಗ್ರಹ, ಅನಾದಿ ವೀರಶೈವಸಾರ ಸಂಗ್ರಹ ಮುಂತಾದ ಗ್ರಂಥಗಳಲ್ಲಿ ಪ್ರಸಿದ್ಧವಿದೆ.

॥ಯೋಹಸ್ತಪೀಠೇ ನಿಜಲಿಂಗಮಿಷ್ಟಂ । ವಿನ್ಯಸ್ಯ ತಲ್ಲೀನ ಮನಃ ಪ್ರಚಾರಃ॥ ಬಾಹ್ಯಕ್ರಿಯಾ ಸಂಕುಲ ನಿಸ್ಪೃಹಾತ್ಮಾ। ಸಂಪೂಜಯತ್ಯಂಗ ಸ ವೀರಶೈವಃ ॥

(ಶಂಕರಸಂಹಿತೆ ಅಧ್ಯಾಯ ೮೮ ಶ್ಲೋಕ ೩೬ ತಾಡವಲಿ ಪ್ರತಿ)

ಶ್ರೀ ಚನ್ನಬಸವಣ್ಣನವರೇ ವೀರಶೈವ ಸಿದ್ಧತೆಗಾಗಿ ಈ ಪ್ರಮಾಣವನ್ನು ತಮ್ಮ ವಚನದಲ್ಲಿ ಎತ್ತಿ ಹೇಳುವಲ್ಲಿ ಬಸವಣ್ಣನವರ ಹಿಂದೆ ವೀರಶೈವ ಮತವಿಲ್ಲೆನ್ನುವ ವಾದಿಗಳು ಬಸವನ ಕಾಲದಲ್ಲಿ ವೀರಶೈವವಿದ್ದಿಲ್ಲವೆನ್ನುವವರು ಈ ಪ್ರಮಾಣವನ್ನು ಮನನಂಗೊಳಲಿಪ್ಪುದು.

ಪುಟ ೭೯ ವಚನ ೩

ಇದು ಕಾರಣ ವೀರಶೈವ ಸಿದ್ಧಾಂತದಲ್ಲಿ ಶಬ್ದಮುಗ್ಧವಾಗಿರಬೇಕು ॥

ಪುಟ ೯೩ ವಚನ ೩

ವೀರಶೈವ ಸಂಪನ್ನರಾದ ಪರಮ ಸದ್ಭಕ್ತರಿಂದೆ ಪಾದೋದಕ, ಪ್ರಸಾದ ಕೊಳ್ಳರು । ಅಂಗದ ಮೇಲೆ ಲಿಂಗವಂ ಬಿಜಯಂಗೈಸಿ ಕೃತಕೃತ್ಯನಂ ಮಾಡಿದ ನಮ್ಮ ವೀರಶೈವಗುರು ಕೂಡಲ ಚನ್ನಸಂಗಮದೇವಾ॥

ವಚನಶಾಸ್ತ್ರಸಾರ ಭಾಗ ೧ ಪುಟ ೭೭ ವಚನ ೮

ಶ್ರೀ ಗುರು ಆ ಶಿವಕಳಾತ್ಮಂಗೆ ಪೂರ್ವದ ಶೈವ ಮಾರ್ಗವ ಬಿಡಿಸಿ ನಿಜ ವೀರಶೈವದ ದೀಕ್ಷೆಯನಿತ್ತ ಕೂಡಲ ಚನ್ನಸಂಗಮದೇವಾ ॥

ನಿಜಾಚಂಣೆಯ ವಚನ ಪ.ಟ ೧೩೨ ವಚನ ೩೩

ವಾಚಕರಿಗೆ ಚನ್ನಬಸವಣ್ಣನವರ ಉಕ್ತ ೧೧ ವಚನಗಳಿಂದ ವೀರಶೈವ ವನ್ನು ಮುಂದಿಟ್ಟೆವು.

## ಶ್ರೀ ಸಿದ್ಧರಾಮೇಶ್ವರನ ವಚನ.

ಪುಟ ೬೦ ವಚನ ೩೩೨

ತನ್ನ ತಾ ತಿಳಿವ ನೇಮದವರು ವೀರಶೈವಾಗ್ರಣ್ಯರು ಕಪಿಲಸಿದ್ಧ ಮಲ್ಲಿಕಾರ್ಜುನ ॥

ಪುಟ ೬೦ ವಚನ ೩೩೩

ತನ್ನ ತಿಳಿವ ವೀರಶೈವ ಭವಕ್ಕೆ ಬಂದನೆಂಬ ದ್ವಿರುಕ್ತಿಯನ್ನು ಬಲ್ಲರೆ ಹೇಳಿರಯ್ಯಾ । ಕಪಿಲಸಿದ್ಧಮಲ್ಲಿಕಾರ್ಜುನ ಸಾಕ್ಷಿಯಾಗಿ ॥

ಪುಟ ೮೮ ವಚನ ೫೨೨ ತಿಳಿದನುಭಾವಿಯೇ ಪರಮ ವೀರಶೈವ ॥

ಪುಟ ೯೯ ವಚನ ೫೫೫

ಚತುರ್ವರ್ಣವಾದರೇನು ಚತುರ್ವರ್ಣಾತೀತನೇ ವೀರಶೈವ

ಪುಟ ೧೯೫ ವಚನ ೬೭೩

ಕುಲದಲ್ಲಿ ಶೂದ್ರನಾದಡೇನು ಮನದಲ್ಲಿ ಮಹಾದೇವ ನೆಲೆಗೊಂಡ ವನೇ ವೀರಶೈವ ॥

ಪುಟ ೧೯೯ ವಚನ ೬೮೫

ಪರ್ವತಲಿಂಗವ ವೀರಶೈವ ಪೂಜಿಸಿದ॥ ಇಲ್ಲಿ ಶ್ರೀಶೈಲ ಶಿಲೆಯಿಂದ ನಿರ್ಮಿತವಾದ ಲಿಂಗವನ್ನು ವೀರಶೈವರು ಪೂಜಿಸಿದರೆಂಬರ್ಥ.

ಶ್ರೀ ಸಿದ್ಧರಾಮನ ಉಕ್ತ ೬ ವಚನಗಳಲ್ಲಿ ವೀರಶೈವವು ಸಿಕ್ಕಿತು.

## ಶ್ರೀ ಅಕ್ಕಮಹಾದೇವಿಯರ ವಚನ.

ಪುಟ ೧೧ ವಚನ ೨

ಇತಿ ಮುವತ್ತೆರಡು ಕಳೆಗಳ ಸದ್ಗುರು ಮುಖದಿಂದರಿದ ಬಸವ ಮೊದಲಾದ ಸಮಸ್ತ ಗಣಂಗಳೆಲ್ಲ ನಿರಾಭಾರಿ ವೀರಶೈವ ಮಾರ್ಗ ಪಿಡಿದಾಚರಿಸಿದರು । ಚನ್ನಮಲ್ಲಿಕಾರ್ಜುನಯ್ಯಾ ॥



ಪುಟ ೨೦ ವಚನ ೫

ನಮ್ಮ ಬಸವಣ್ಣನು ಜಗದ್ಹಿರ್ಥನಾಗಿ ಮರ್ತ್ಯಕ್ಕೆ ಬಂದು ವೀರ ಶೈವ ಮಾರ್ಗವನರುಹಿದಕ್ಕೆ ಚನ್ನಮಲ್ಲಿಕಾರ್ಜುನಯ್ಯಾ ॥

## ಮಡಿವಾಳ ಮಾಚಿದೇವರ ವಚನ

ಪುಟ ೩೮ ವಚನ ೫೪

ಪುರಾತನರು ಶುದ್ಧ ಸುಶೀಲ ನಿರಾಭಾರಿ ವೀರಶೈವರು ಮೆಚ್ಚು ವರೇ ಕಲಿದೇವರ ದೇವ ॥

ಪುಟ ೪೭ ವಚನ ೬೪

ಅಯ್ಯಾ ನಾವು ಪುರಾಣ ಪುಸ್ತಕಮಾಡಿಸಬೇಕೆಂದು ನಿರಾಭಾರಿ ವೀರಶೈವಕ್ಕೆ ಹೊರಗಾಗಿ ಕಲಿದೇವರದೇವ ॥

ಪುಟ ೬೧ ವಚನ ೮೯

ಶೈವ ಮಾರ್ಗದ ಅಷ್ಟಾಂಗ ಯೋಗವನುಳಿದು । ವೀರಶೈವ ಶಿವ ಯೋಗಸಂಪನ್ನರಾಗಿ ಆಚರಿಸುವದು ಕಲಿದೇವರದೇವ ॥

ಮಾಚಿದೇವರ ಮೂರು ವಚನಗಳಲ್ಲಿ ವೀರಶೈವವು ಸಿಕ್ಕಿತು.

## ಅರಿವಿನಮಾರಿತಂದೆಗಳ ವಚನ

(ತಾಡವಾಲಿ ಪ್ರತಿಯಿಂದ)

ವಚನ ೪೪

ವೀರಶೈವ ಗುರುವಾಗಿ ಶುದ್ಧ ಶೈವಕ್ಕೆ ಹೊರಗಾಗಬೇಕು । ಅಂಗ ಲಿಂಗಾತ್ಮನಲ್ಲಿ ಕೂಡಿದ ಕಾರಣ ವೀರಶೈವವೆಂಬ ಹೆಸರಾಯ್ತು ॥ ಸದಾಶಿವಮೂರ್ತಿ ಲಿಂಗವನರಿತಲ್ಲಿ ।

ವಚನ ೪೫

ವೀರಶೈವಪೂಜೆ ಅಂಗದ ಮೇಲೆ ಹಿಂಗದೇ ಲಿಂಗವ ಧರಿಸಬಹುದು. ಸದಾಶಿವಮೂರ್ತಿಲಿಂಗಕ್ಕೆ ಒಳಗು

ಈ ವಚನವು. ಶ್ರೀಯುತ ಹಳಕಟ್ಟಿಯವರಿಂದ ಮುದ್ರಿತವಾಗಿದೆ. ಪುಟ. ೧೦೨, ೧೦೮ ವಚನ ೪೫.೧೦೫.

## ಶ್ರೀ ಅಂಬಿಗರ ಚವುಡಯ್ಯನವರ ವಚನ.

ಪುಟ ೧೧೭ ವಚನ ೧೪೦

ಶಾಸ್ತ್ರದಲ್ಲಿ ಸಂಪನ್ನನೆಂದು ಕ್ರಿಯೆಯಲ್ಲಿ ವೀರಶೈವನೆಂದು । ನಿರಾಭಾರಿ ಎಂದು ಅಂಬಿಗರ ಚವುಡಯ್ಯ ॥ ಇಲ್ಲಿಯೂ ವೀರಶೈವವು ಸಿಕ್ಕಿತು

## ಶ್ರೀಪ್ರಸಾದಿ ಭೋಗಣ್ಣಗಳ ವಚನ.

(ತಾಡವಾಲಿ ಪ್ರತಿಯಿಂದ ವಚನ ೧೦)

ಶೈವವಾರು ವೀರಶೈವ ಮೂರು. ಚನ್ನಬಸವಣ್ಣ ಪ್ರಿಯ । ಭೋಗಮಲ್ಲಿಕಾರ್ಜುನಲಿಂಗ । ವಿಭೇದವಾದಭೇದ ॥

ವಚನ ೨೯.

ಸರ್ವಂ ಖಲ್ವಿದಂ ಬ್ರಹ್ಮ ತೆರಹಿಲ್ಲದ ಸಂಗ ವೀರಶೈವ.

ವಚನ ೫೧

ಅನಾದಿ ಪರಶಿವನ ಭೇದರೂಪ ಬಸವಣ್ಣ । ಅಭೇದ ರೂಪು ಚನ್ನಬಸವಣ್ಣನಾಗಿ । ವೀರಶೈವ ಸಿದ್ಧಾಂತವೆಂಬುದ ಲಕ್ಷೀಕರಿಸಿ । ಚನ್ನಬಸವಣ್ಣ । ಕ್ರಿಯಭೋಗ ಮಲ್ಲಿಕಾರ್ಜುನಲಿಂಗವೇ ನಿನ್ನ ಲೀಲಾಭಾವ ॥

## ಶ್ರೀ ಮೋಳಿಗಿ ಮಾರಯ್ಯಗಳ ವಚನ

( ಉಕ್ತತಾಡವಾಲಿ ಪ್ರತಿಯಿಂದ )

ವಚನ ೨೩೭

ಇಂತೀ ಆರು ಶೈವವ ಹೊದ್ದದ ವೀರಶೈವವೆಂದು ಮತ್ತೆ ಇವ ವಿೂರಲಿಲ್ಲ । ಪಂಚಾಚಾರ ಶುದ್ಧಂಗೆ ನಿಃಕಳಂಕ ಮಲ್ಲಿಕಾರ್ಜುನಾ ॥

## ಶ್ರೀ ಆದಿಶೆಟ್ಟಿಗಳ ವಚನ

(ತಾಡವಾಲಿ ಪ್ರತಿ ಅಂದಾಜು ೩೯೦)

ಶೈವ ವೀರಶೈವ ಮಾರ್ಗವಿಡಿದು ಆಚರಿಸಿ ಹೋದರು ನೋಡಾ ಅರವತ್ತುಮೂರು ಮಂದಿ ಪುರಾತನರು ಸೌರಾಷ್ಟ್ರ ಸೋಮೇಶ್ವರ ॥



## ಶ್ರೀ ಪ್ರಭುದೇವರ ವಚನ

ಜ್ಯೋತಿರ್ಮಯ ಶಾಂಭವಿಜ್ಞಾನ । ದೀಕ್ಷಾಬೋಧೆ ಎಂಬ ಗ್ರಂಥವನ್ನು ೧೩ನೇ ಶತಮಾನದಂತ್ಯದಲ್ಲಿ ಪಾಲ್ಕುರಿಕೆಯ ಸೋಮನಾರಾಧ್ಯರು ಸಂಗಯ್ಯನೆಂಬ ಶಿಷ್ಯನಿಗೆ ಪ್ರಭುದೇವರ ೩೭ ವಚನಗಳನ್ನು ಆರಿಸಿಕೊಂಡು ೧೦ನೇ ಪ್ರಕರಣದಲ್ಲಿ ಉಪದೇಶಿಸಿರುವರು. ಈ ಗ್ರಂಥವನ್ನು ಸದ್ಧರ್ಮ ಪ್ರದೀಪಿಕಾ ಸಂಪಾದಕರಾದ ಶ್ರೀಯುತ ಚನ್ನಮಲ್ಲಪ್ಪನವರು ಮುದ್ರಿಸಿರುವರು.

ಅನಂತಕೋಟಿ ವೇದ, ಶಾಸ್ತ್ರ, ಪುರಾಣಾಗಮಾದಿ ಮಂತ್ರಾರ್ಥಸಾರಸುಧಾರಸವಾದ ವೀರಶೈವ ಪುಸ್ತಕವ ಹಸ್ತದಲ್ಲಿ ಪಿಡಿದ ಶ್ರೀ ಗುರುಮೂರ್ತಿಯಂ ಕಂಡೆ । ಗುಹೇಶ್ವರ ॥ ಉಕ್ತಗ್ರಂಥ ಪುಟ ೧೩. ವಚನ ೧೨

ಪುಟ ೧೬. ವಚನ ೨೧.

ವೀರಶೈವ ಸಿದ್ಧಾಂತದಲ್ಲಿ । ತನುತ್ರಯ ವಿಕಾರವು ತೊಲಗುವದು । ಗುಹೇಶ್ವರಾ ॥

ಪುಟ ೧೭ ವಚನ ೨೨

ಅಂತಪ್ಪ ಮಲತ್ರಯವ ಜಗಜ್ಜೀವರಿಗೆ । ತೊಲಗಿಸುವ ಜಾಣ್ಮೆಯುಳ್ಳಾತನೇ ವೀರಶೈವ. ಇದು ವೀರಶೈವ ಸಿದ್ಧಾಂತವು । ಗುಹೇಶ್ವರಲಿಂಗದಲ್ಲಿ ಶ್ರೀಮದ್ವೀರಶೈವ ಕ್ರಿಯಾಚಾರ ಜ್ಞಾನ ಸದ್ಭಕ್ತಿಯುಳ್ಳವರ ಪೂಜಿಸುವದು ಕಾಣಾ ಗುಹೇಶ್ವರಾ ॥

(ನಿಜಾಚರಣೆಯ ವಚನ ಪುಟ ೧೦೧ ವಚನ ೧೯)

## ಶ್ರೀ ಬಸವಣ್ಣನವರ ವಚನ

ನಿರಾಭಾರಿ ವೀರಶೈವನಿರ್ವಾಣ ಸದ್ಭಕ್ತ ಜಂಗಮ । ಶರಣರುಗಳು ಕೂಡಲಸಂಗಮದೇವಾ ॥ ನಿಜಾಚರಣೆಯ ವಚನ ಪುಟ ೧೨೩ ವಚನ ೨೬

## ಶ್ರೀ ಘಟ್ಟಿವಾಳಯ್ಯಗಳ ವಚನ

ಅರುವಿನ ಮನದ ಕೊನೆಯಲ್ಲಿ । ನಿಂದು ಪೂಜಿಸಿಕೊಂಬುದು ವೀರಶೈವ ಲಿಂಗಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ । ಇಲ್ಲ ।

## ಬಹುರೂಪಿ ಚವುಡಯ್ಯಗಳ ವಚನ

ಶೈವ ಗುರುವಿನ ಕೈಯಲ್ಲಿ ಸಾಹಿತ್ಯವಾದ ಲಿಂಗವನ್ನು । ವೀರ ಶೈವ ಗುರುವಿನ ಕೈಯಲ್ಲಿ ಕೊಟ್ಟು। ಮರುಳಿ ಕೊಂಡೊಡೆ ಆತ ಇಹ ಲೋಕ ಪೂಜ್ಯನು ರೇಕಣ್ಣ ಪ್ರಿಯನಾಗಿನಾಥ ॥ ವಚನಶಾಸ್ತ್ರಸಾರ ಭಾಗ ೧ ಪುಟ ೭೭ ವಚನ ೯

## ಬಾಲಸಂಗಯ್ಯಗಳ ವಚನ

ಕಿರಾತಸಂಗಯ್ಯ ಪಾದೋದಕ ಮಹಿಮೆ ಹೇಳುವಡೆನಗೆ ಅಸಾಧ್ಯ ಕೇಳಯ್ಯಾ ॥ ಅದೆಂತೆಂದಡೆ। ವೀರಾಣಾಂ। ವೀರಶೈವಾನಾಂ ಭವತ್ರೇವ ವರಾನೇನೆ। ಪಾದೋದಕಂ ವಿನಾಯುಸ್ತು । ಭುಕ್ತೆ ಸತತಂ ಮಾನವಾಃ। ಭೂತ್ವಾಸುರರೋ । ಭುಕ್ತೇನರಕಂ ಸಪ್ತಜನ್ಮನಿ ಎಂಬ ವಚನವ ನಂಬಿ ಕಿರಾತೇಶ್ವರಲಿಂಗದ ಪಾದಾಂಬುವ ನಂಬಿ ಪಡೆದು ಪಾಪದೂರನಾದೆ ಪ್ರಭುಲಿಂಗವೆ ॥

ಸಿದ್ಧರಾಮನ ನಿರಾಭಾರಿ ಪಟ್ಟಾಭಿಷೇಕ ಪುಟ ೭೭ ವಚನ ೩೮೭

ಬಾಲಸಂಗಯ್ಯನು ಎತ್ತಿಕೊಂಡ ಪೂರ್ವದ ಪ್ರಮಾಣದಲ್ಲಿ ವೀರಶೈವವು ವಾಚಕರು ನೋಡಿದರು. ಹಿಂದೆ ನಾವು ತೋರಿಸಿದ ಚನ್ನಬಸವಣ್ಣನವರ ವಚನದಲ್ಲಿ ವೀರಶೈವ ವಿಷಯಕ ಪ್ರಮಾಣವು ಬಂದದು ಲಕ್ಷ್ಯದಲ್ಲಿರಬಹುದು. ಬಸವಣ್ಣನವರ ಪುತ್ರನು ಬಾಲಸಂಗಯ್ಯನು. ಬಸವಣ್ಣನವರ ಸೋದರಳಿಯನು ಚನ್ನಬಸವಣ್ಣನು. ಇವರಿಬ್ಬರು ಬಾಲಕರು ತಜ್ಞರು. ಈ ಉಭಯತರು ಕೊಟ್ಟಿರುವ ವೀರಶೈವಕ ಪ್ರಮಾಣಗಳ ಸಾಕ್ಷಿತ್ವವು. ಬಸವಣ್ಣನ ಕಾಲದ ವೀರಶೈವವನ್ನು ಸಿದ್ಧಿಸುವವೋ ಬಸವಣ್ಣನವರ ಹಿಂದಿನ ವೀರಶೈವವನ್ನು ಸಿದ್ಧಿಸುವವೋ ಬಲ್ಲ ವಾಚಕರು ಇಲ್ಲಿ ನಿರ್ಣಯಿಸಲು ಹಿರಿಯತನವನ್ನು ವಹಿಸಿಕೊಟ್ಟಿದೆ.

## ವಚನಶಾಸ್ತ್ರಸಾರ ಭಾಗ ೨

ಪುಟ ೧೭೩-೧೭೭-೧೮೭-೧೯೮ ೧೯೯-೨೦೦ ರಲ್ಲಿ ಚಕ್ರಗಳ ವಿವರ ವರ್ಣಗಳ ವಿವರ; ಹಸ್ತಗಳ ವಿವರ; ಕಲೆಗಳ ವಿವರ; ಮುಖಗಳ ವಿವರ; ಇವುಗಳ ವಿವೇಚನೆಯಲ್ಲಿ ವೀರಶೈವ ಶಬ್ದಕ್ಕೆ ಆಳವಿಲ್ಲವು. ಅವುಗಳನ್ನು ಇಲ್ಲಿ ಉದಾಹರಿಸಲು ಆ ವಚನಗಳು ಮುದ್ರಿಕೆಗಳಿಲ್ಲದೆ ಅನಿಶ್ಚಿತ ಕಾಲದವುಗಳು ಇರುವುದರಿಂದ ನಿರ್ಣಯದಲ್ಲಿ ಸಹಾಯಕಗಳಾಗದ್ದರಿಂದಿಲ್ಲಿ ಅವುಗಳನ್ನು ಕೊಡಲಿಲ್ಲವು.



ಸಮಾಜದ ಬಂಧು ಭಗಿನಿಯರಾದ ವಾಚಕ ಮಹಾಜನಗಳೆದುರಿಗೆ ಇಲ್ಲಿಯ ವರೆಗೂ ವೀರಶೈವವನ್ನು ಬಗೆಯುತ್ತ ನಾವು ಸಾಗಿಬಂದಂತೆ ತಾವು ಓದುತ್ತ ನಮನ್ನು ಹಿಂಬಾಲಿಸುತ್ತ ಬಂದುದು ನೋಡಿ ನನಗೆ ವಿಶ್ರಮಿಸಬೇಕೆಂದು ಇಚ್ಛೆ ಹರಿಯುವಲ್ಲಿ ತಮ್ಮದೇನು ಹಿರಿದಲ್ಲ. ಆದರೆ ಬಸವೇಶ್ವರನ ಕಾಲದಲ್ಲಿ ವೀರಶೈವವೆಂದು ಹೇಳಿಕೊಳ್ಳುತ್ತಿದ್ದಿತೆನ್ನುವಲ್ಲಿ ನಿದರ್ಶನಸಿದ್ಧಿಗೆ ಮೂರುನಾಲ್ಕು ವಚನಗಳು ಸಾಕಾಗುತ್ತಿದ್ದವು. ಇಷ್ಟು ವಿಸ್ತೃತವು ಏಕೆಂದರೆ ನಮ್ಮ ಸಮಾಜದಲ್ಲಿ ಇತ್ತಿತ್ತಲೀಗ ಬರುವ ಲೇಖಗಳನ್ನೋದಿ ಹೀಗೆ ವಿಸ್ತೃತವಾಗಿ ವಿವೇಚಿಸಿದೆನು.

ಇದಲ್ಲದೆ ಶಿವಾನುಭವದಲ್ಲಿಯ ಕೆಲ ಲೇಖಕರು ತಪ್ಪು ಲೇಖಗಳನ್ನು ಈಚೆಗೆ ಪ್ರಕಟಿಸಿರುವರು. ಉದಾಹರಣೆ:– ಸಂಪುಟ ೧೩ ಸಂಚಿಕೆ ೧೨ ಇದರಲ್ಲಿ ಸಿದ್ಧಗಂಗಾಕ್ಷೇತ್ರದ ಇತಿಹಾಸವೆಂದು ಶ್ರೀ ಎಂ. ಜಿ. ನಂಜುಡಾರಾಧ್ಯ ಶಿದ್ಧಗಂಗಾ ಇವರು ಬರೆದ ಲೇಖದಲ್ಲಿ ಮಾಸಿಕ ಪುಟ ೫೧೮ ಗೋಪಸಿದ್ಧೇಶ್ವರಸ್ವಾಮಿಗಳು ಸುಮಾರು ೧೨೫೦ ರಲ್ಲಿ ಇವರು ಐಯ್ಯನ ಹಳ್ಳಿಯ ಪುರಾಧೀಶ್ವರನಾದ ಪಂಚವಕ್ತ್ರಗಣೇಶ್ವರನಿಗೆ ಲಿಂಗ ಧಾರಣೆಯನ್ನು ಮಾಡಿದ್ದರಿಂದ ಆವನ ವಂಶಜರು ಶ್ರೀಯವರಿಗೆ ಅಲ್ಲಿಯೇ ಒಂದು ಮಠವನ್ನು ಕಟ್ಟಿಕೊಟ್ಟರೆಂದು, ಅದಕ್ಕೆ ವಾಣಿಜ್ಯಪುರ, ನಂತರ ಹರದನಹಳ್ಳಿ ಎಂದು ಬಂದಿತೆಂದಿತ್ಯಾದಿಯಾಗಿ ನಿರಂಜನ ವಂಶರತ್ನಾಕರದಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ ಎಂದು ಸೂಚಿಸಿದ್ದಾರೆ!

ಈ ಲೇಖಕರು ನಿರಂಜನ ವಂಶರತ್ನಾಕರವನ್ನು ನಿದ್ರಾವಸ್ಥೆಯೊಳಗೆ ನೋಡಿದಂತೆ ಕಾಣುತ್ತದೆ. ಯಾರಿಂದ ಯಾರಿಗೆ ಲಿಂಗಧಾರಣವಾಯಿತೆನ್ನುವರೋ ಅವನ ಸಿದ್ಧಿಗೋಸುಗ ಆ ಗ್ರಂಥಕಾರನು ಯಾವ ಗ್ರಂಥದ ಆಧಾರವನ್ನು ಎತ್ತಿ ತೋರಿಸಿರುವನು? ಗೋಸಲ ಸಿದ್ಧೇಶ್ವರ ಸ್ವಾಮಿಗಳಿಂದ ಆವನಿಗೆ ಅಲ್ಲಿ ಲಿಂಗಧಾರಣವನ್ನು ಆ ಗ್ರಂಥಕಾರನು ಹೇಳಿರುವನೋ? ಲೇಖಕರು ಐಯ್ಯನಹಳ್ಳಿ ಎಂದು ಬರೆದಿರುವರು. ನಿರಂಜನ ವಂಶಾವಳಿಯಲ್ಲಿ ಹೀಗಿದೆಯೇ? ಪಟ್ಟದಕಲ್ಲು ಐಯ್ಯವಳ್ಳಿ ಮತ್ತು ಐಯ್ಯನಹಳ್ಳಿ, ಇವೆರಡು ಒಂದೇ ಗ್ರಾಮಗಳೇ? ಹೂವಿನಹಡಗಲಿ ತಾಲೂಕಪೈಕಿ ಐಯ್ಯನಹಳ್ಳಿ, ಹರಪನಹಳ್ಳಿ ತಾಲೂಕ ಪೈಕಿ ಐಯ್ಯನಹಳ್ಳಿ, ಚಿತ್ರಕಲ್ಲದುರ್ಗ ಜಿಲ್ಹಾ ಪೈಕಿ ಐಯ್ಯನಹಳ್ಳಿ, ಹೀಗೆ ಐಯ್ಯನಹಳ್ಳಿಗಳು ಹಲವಿದ್ದು ಮುಂದೆ ಇತಿಹಾಸದಲ್ಲಿ ಯಾವ ಗ್ರಾಮವೆಂದು

ತಿಳಿಯಬೇಕು? ನಿಜವಿದ್ದ ಪಟ್ಟದಕಲ್ಲು ಐವಳ್ಳಿಯು ಹೋಗಿ ವಿವಾದ ಹುಟ್ಟಲಿಲ್ಲವೇ? ಬಣಜಿಗರ ಇತಿಹಾಸವನ್ನು ಆ ಗ್ರಂಥಕಾರನು ಹೇಳ ಹೋಗಿ ಅವರ ಮೂಲಪುರುಷನ ಹೆಸರೆತ್ತಿದಾಕ್ಷಣವೇ ಗೋಸಲ ಸಿದ್ಧೇಶ್ವರಸ್ವಾಮಿಗಳಿಂದ ಲೇಖಕರು ಲಿಂಗವನ್ನು ಧರಿಸಿಬಿಟ್ಟರು! ಲೇಖವನ್ನು ಬರೆದವರ ಲೇಖವು ತಪ್ಪಿದೆಯೋ, ಒಪ್ಪಿದೆಯೋ ನೋಡಿ ಪ್ರಕಟಿಸಲಿ.

---

# ಹಿಂದಿನ ಲೇಖದ ವಿಮರ್ಶೆ.

(ಲೇಖಕರು:— ರಾ। ಸಾ। ಪಿ. ಜಿ. ಹಳಕಟ್ಟಿ)

ಶ್ರೀಮಲ್ಲಿಕಾರ್ಜುನ ಶಾಸ್ತ್ರಿಗಳವರು ಹಿಂದಿನ ಲೇಖದಲ್ಲಿ ವೀರಶೈವ ಈ ಶಬ್ದವು ಬಹು ಪುರಾತನ ಕಾಲದಿಂದಲೂ ಪ್ರಚಲಿತವಾಗಿದ್ದಿತೆಂದು ಭಾವಿಸಿ, ವಚನ ಗ್ರಂಥಗಳಲ್ಲಿ ಉಪಯೋಗಿಸಲ್ಪಟ್ಟಿರುವ ಆ ಹೆಸರನ್ನು ಅಲ್ಲಲ್ಲಿ ಕಂಡುಹಿಡಿದು ಆ ಸಂದರ್ಭಗಳನ್ನು ವಿವರಿಸಿರುತ್ತಾರೆ. ಅವರ ಪರಿಶ್ರಮವು ಪ್ರಸಂಶನೀಯವಾಗಿರುತ್ತದೆ. ವೀರಶೈವ ಸಮಾಜದ ಪೂರ್ವೇತಿಹಾಸವನ್ನು ಕಂಡುಹಿಡಿಯುವ ವಿಷಯದಲ್ಲಿ ಇದರ ಶೋಧವು ಬಹು ಅವಶ್ಯವಾಗಿರುತ್ತದೆ.

ಶಿವಾನುಭವ ಪತ್ರಿಕೆಯಲ್ಲಿ ನಾವು ಪ್ರಕಟಿಸಿರುವ ಈ ವಿಷಯದ ಕೆಲವು ಲೇಖಗಳಲ್ಲಿ ವೀರಶೈವ ಶಬ್ದವು ಶಿಲಾಲೇಖಗಳಲ್ಲಿ ಮತ್ತು ಬಸವೇಶ್ವರನ ವಚನದಲ್ಲಿ ಬಂದಿಲ್ಲೆಂಬುದನ್ನು ನಾವು ವಾಚಕರ ನಿದರ್ಶನಕ್ಕೆ ಈ ಮೊದಲಿಗೆ ತಂದಿರುತ್ತೇವೆ. ಆ ಶಬ್ದದ ಬದಲು ಶಿವಭಕ್ತರು, ಶಿವಸಮಯದವರು, ಲಿಂಗವಂತರು, ಎಂಬ ಸಾಮಾನ್ಯಾರ್ಥವುಳ್ಳ ಶಬ್ದಗಳೇ ಅವುಗಳಲ್ಲಿ ಉಪಯೋಗಿಸಲ್ಪಟ್ಟಿರುತ್ತವೆ. ಇದಕ್ಕೆ ಕಾರಣವೇನೆಂಬುದನ್ನು ನಾವು ಕಂಡುಹಿಡಿಯುವದು ಅವಶ್ಯವದೆ. ಆದರೆ ಶ್ರೀಮಲ್ಲಿಕಾರ್ಜುನ ಶಾಸ್ತ್ರಿಗಳು ಇದರ ಬಗ್ಗೆ ತಮ್ಮ ಲೇಖದಲ್ಲಿ ಯಾವ ವಿವರಣೆಯನ್ನು ಮಾಡಿರುವದಿಲ್ಲ.

ಈ ಮೇರೆಗೆ ಶಿಲಾಲೇಖಗಳಲ್ಲಿಯೂ ಬಸವೇಶ್ವರನ ವಚನಗಳಲ್ಲಿಯೂ, ವೀರಶೈವ ಈ ಶಬ್ದವು ಬರುವದಿಲ್ಲಷ್ಟೇ ಅಲ್ಲ, ಅದರಂತೆಯೇ



ಹರಿಹರನ ರಗಳೆಗಳಲ್ಲಿಯೂ ಕೂಡ ಅದು ಬರುವದಿಲ್ಲ. ಇದಾದರೂ ಲಕ್ಷಿಸತಕ್ಕ ಸಂಗತಿಯಾಗಿದೆ. ಹರಿಹರನು ವೀರಶೈವ ಶಬ್ದದ ಬದಲು ತನ್ನ ಗ್ರಂಥಗಳಲ್ಲಿ ಯಾವ ಶಬ್ದಗಳನ್ನು ಉಪಯೋಗಿಸಿದ್ದಾನೆಂಬದನ್ನು ಕುರಿತು ನಾವು ಇನ್ನೊಂದು ಲೇಖದಲ್ಲಿ ಸವಿಸ್ತಾರವಾಗಿ ನಿರೂಪಣೆಯನ್ನು ಮಾಡುವೆವು.

ಬಸವೇಶ್ವರನ ಕಾಲದಲ್ಲಿ ಆಗಿಹೋದ ಕೆಲವು ವಚನಕಾರರು ರಚಿಸಿರುವ ವಚನಗಳಲ್ಲಿ ವೀರಶೈವ ಎಂಬ ಶಬ್ದವು ಬರುತ್ತಿರುವದು ನಿಜವಿದೆ. ಅಂಥವುಗಳನ್ನು ಶ್ರೀಮಲ್ಲಿಕಾರ್ಜುನ ಶಾಸ್ತ್ರಿಗಳವರು ತಮ್ಮ ಈ ಲೇಖದಲ್ಲಿ ಉಲ್ಲೇಖಿಸಿದ್ದಾರೆ. ಒಂದು ವೇಳೆ ಅವು ಬಸವೇಶ್ವರನ ಕಾಲದಲ್ಲಿಯೇ ರಚಿಸಲ್ಪಟ್ಟಿದ್ದರೆ, ವೀರಶೈವ ಶಬ್ದವು ಆವ ಸಂದರ್ಭದಲ್ಲಿ ಬರುತ್ತಿದೆ, ಅದರ ಬದಲು ಇನ್ನಾವಾದರೂ ಶಬ್ದಗಳು ಆ ಗ್ರಂಥಗಳಲ್ಲಿ ಬರುತ್ತವೋ ಹೇಗೆ, ಒಂದು ವೇಳೆ ಬರುತ್ತಿದ್ದರೆ ಅವು ಯಾವವು, ಎಂಬದನ್ನು ಕೂಡ ಅವರು ತಮ್ಮ ಲೇಖದಲ್ಲಿ ವಿವೇಚಿಸುವದು ಅವಶ್ಯವಾಗಿತ್ತು. ಅವರು ತಮ್ಮ ಮತ್ತೊಂದು ಲೇಖದಲ್ಲಿ ಹಾಗೆ ಮಾಡುವರೆಂದು ನಾವು ಸೂಚಿಸುತ್ತೇವೆ.

ಒಂದು ವೇಳೆ ವೀರಶೈವ ಶಬ್ದವು ಬಸವೇಶ್ವರನ ಕಾಲದಲ್ಲಿ ಪ್ರಚಲಿತವಾಗಿತ್ತೆಂದು ಸಿದ್ಧವಾದ ಪಕ್ಷದಲ್ಲಿ ವೀರಶೈವರಿಗೆ ಆ ಕಾಲದಲ್ಲಿ ಶಿವಸಮಯದವರು, ಶಿವಾಚಾರದವರು, ಎಂಬ ಹೆಸರುಗಳೊಡನೆ ವೀರಶೈವ ಈ ಶಬ್ದವೂ ಕೂಡ ಉಪಯೋಗಿಸಲ್ಪಡುತ್ತಿತ್ತೆಂದು ನಾವು ತಿಳಿಯಬೇಕಾಗುತ್ತದೆ. ಶಿವನಲ್ಲಿ ವಿಶೇಷ ಭಕ್ತಿಯುಳ್ಳವರೆಂದು ತೋರಿಸುವ ಸಂದರ್ಭದಲ್ಲಿ ಈ ವೀರಶೈವ ಶಬ್ದವು ಉಪಯೋಗಿಸಲ್ಪಡುತ್ತಿರಬೇಕೆಂದು ನಾವು ತಿಳಿಯಬೇಕಾಗುತ್ತಿದೆ.

ಆದ್ದರಿಂದ ಶಿವಭಕ್ತರು, ಶಿವಸಾಂಪ್ರದಾಯದವರು, ಶಿವಸಮಯದವರು, ಶೈವರು, ಎಂಬ ಶಬ್ದಗಳು ಈ ಹಳೇ ಗ್ರಂಥಗಳಲ್ಲಿ ಬಂದ ಕೂಡಲೇ ಅವು ವೀರಶೈವ ದ್ಯೋತಕವಲ್ಲವೆಂದು ನಿಶ್ಚಿತವಾಗಿ ಹೇಳಲಿಕ್ಕೆ ಬರಲಾರದು. ಹರಿಹರನ ರಗಳೆಯಲ್ಲಿ ರೇವಣಸಿದ್ಧ, ಶಂಕರದಾಸ, ಬಸವ, ಮೊದಲಾದವರು ಶಿವಭಕ್ತರು, ಶೈವರು ಎಂದು ಹೇಳಲ್ಪಟ್ಟಿದೆ. ಇಷ್ಟರಿಂದಲೇ ಅವರು ವೀರಶೈವರಲ್ಲೆಂದು ಅನೇಕರು ಈಗ ಅಭಿಪ್ರಾಯಪಡು

ತ್ತಾರೆ. ಇವರ ಮೇಲಿಂದ ಈ ವಿಷಯದ ವಿವೇಚನೆಯು ಎಷ್ಟು ಮಹತ್ವದ್ದಿರುತ್ತದೆಂಬದು ವಾಚಕರಿಗೆ ಗೊತ್ತಾಗದೆ ಇರದು.

ಈಗಲೂ ಸಹ ವೀರಶೈವರನ್ನು ಶಿವಭಕ್ತರು, ಶಿವಾಚಾರಣನರು, ಎಂದು ಪ್ರಚಾರದಲ್ಲಿ ಕರೆಯುವ ರೂಢಿಯುಂಟು. ೫೦, ೬೦ ವರ್ಷಗಳ ಹಿಂದೆ ವೀರಶೈವ ಈ ಶಬ್ದವು ಹೆಚ್ಚಾಗಿ ಜನರಲ್ಲಿ ಪ್ರಚಾರದಲ್ಲಿರಲಿಲ್ಲ. ಆಗಿನ ಕಾಲದ ಗ್ರಂಥಗಳಲ್ಲಿ ಮತ್ತು ಪತ್ರ ಪುಸ್ತಕಗಳಲ್ಲಿ ಲಿಂಗವಂತ ಎಂಬ ಶಬ್ದವು ಮುಖ್ಯವಾಗಿ ಉಪಯೋಗಿಸಲ್ಪಡುತ್ತಿತ್ತು. ಆದರೆ ಈಚೀಚೆಗೆ ವೀರಶೈವ ಶಬ್ದವು ಮಹತ್ವದ ಸ್ಥಾನವನ್ನು ಹೊಂದಿರುತ್ತದೆ. ಇದೇ ರೀತಿಯಾಗಿ ಬಸವೇಶ್ವರನ ಕಾಲದಲ್ಲಿಯೂ ಇತ್ತೆಂದು ತಿಳಿಯಬೇಕಾಗುತ್ತದ.

ಶ್ರೀ ಮಲ್ಲಿಕಾರ್ಜುನ ಶಾಸ್ತ್ರಿಗಳಂತೆ ಅಭಿಪ್ರಾಯ ಪಡುವವರು ವೀರಶೈವ ಈ ಶಬ್ದವು ಪುರಾತನಕಾಲದಿಂದಲೂ ಉಪಯೋಗದಲ್ಲಿತ್ತೆಂದು ಭಾವಿಸಿ ಅದರಿಂದ ವೀರಶೈವತ್ವದ ಪುರಾತನತ್ವವನ್ನು ಸಿದ್ಧಪಡಿಸಲು ಪ್ರಯತ್ನಿಸುವದುಂಟು. ಆದರೆ ಶಿವಸಾಂಪ್ರದಾಯಕರಾದವರ ಶಿಲಾಶಾಸನಗಳು ಕರ್ನಾಟಕ ಪ್ರಾಂತದಲ್ಲಿ ಹೇರಳವಾಗಿ ದೊರಕುತ್ತಿವೆ. ಆದರೆ ಅವುಗಳಲ್ಲಿ ಈ ವರೆಗೆ ಯಾವುದರಲ್ಲಿಯೂ ವೀರಶೈವ ಈ ಶಬ್ದವು ಇದ್ದದ್ದು ಕಂಡು ಬರುವದಿಲ್ಲ. ಇದನ್ನು ಲಕ್ಷಿಸಿದಲ್ಲಿ ಶ್ರೀ ಮಲ್ಲಿಕಾರ್ಜುನ ಶಾಸ್ತ್ರಿಗಳವರಂತೆ ಅಭಿಪ್ರಾಯವುಳ್ಳವರ ವಿಧಾನವು ಅಂದರೆ ವೀರಶೈವ ಶಬ್ದವು ಜನತೆಯಲ್ಲಿ ಪುರಾತನ ಕಾಲದಿಂದಲೂ ಉಪಯೋಗದಲ್ಲಿತ್ತೆಂದು ತಿಳಿಯುವದು ತಪ್ಪೆಂಬುದು ಸಿದ್ಧವಾಗುತ್ತದೆ.

ಬಸವೇಶ್ವರನ ಕಾಲದಲ್ಲಿ ಮತ್ತು ಅವನ ಪೂರ್ವದಲ್ಲಿ ಕರ್ನಾಟಕದಲ್ಲಿ ಶೈವ ಮತಗಳಿದ್ದವೆಂಬದು ನಿರ್ವಿವಾದವು. ಆದರೆ ಅವು ಯಾವ ತರದ ಶಿವಮತಗಳಿದ್ದವು. ಅವು ಯಾವ ಯಾವ ಹೆಸರುಗಳಿಂದು ಕರೆಯಲ್ಪಡುತ್ತಿದ್ದವು, ಎಂಬದನ್ನು ನಿರ್ಧರಿಸುವದು ಬಹು ಅವಶ್ಯವಾಗಿದೆ. ಈ ವರೆಗೆ ಪ್ರಕಟವಾಗಿರುವ ಶಿಲಾಶಾಸನಗಳಿಂದ ಕರ್ನಾಟಕದಲ್ಲಿ ಲಕುಲೀಶರು, ಪಾಶುಪತರು, ಕಾಳಾಮುಖರು ಇವರಲ್ಲದೆ, ಬೇರೆ ಶೈವಪಂಥಗಳೂ ಇದ್ದದ್ದು ತಿಳಿದುಬರುತ್ತದೆ. ಮೊದಲಿನ ಮೂರು ಶೈವ ಪಂಗಡದವರ ಶಿಲಾಶಾಸನಗಳನ್ನು ಅವುಗಳಲ್ಲಿಯ ಒಕ್ಕಣಿಕೆಗಳ ಸಹಾಯದಿಂದ ಗುರುತಿಸಲಿಕ್ಕೆ ಶಕ್ಯವಿದೆ. ಆದರೆ ಶೈವರೆಂದು ಸಾಮಾನ್ಯವಾಗಿ ಕರೆ



ಯಲ್ಪಡುವವರು ಯಾರು ಎಂಬುದನ್ನು ನಿರ್ಧರಿಸುವದು ಬಹು ಮಹತ್ವದ ಪ್ರಶ್ನೆಯಾಗಿದೆ. ಈಗ ನಮ್ಮಲ್ಲಿಯ ಒಂದು ಪಕ್ಷದವರು ಅವರು ವೀರಶೈವರೇ ಅಲ್ಲವೆಂತಲೂ, ಇಂಥ ಅನೇಕ ಶೈವ ಮತಗಳನ್ನು ಒಂದುಗೂಡಿಸಿದವರು ಬಸವನ ಕಾಲದ ಶಿವಶರಣರೆಂತಲೂ, ಆಗ್ಗೆಯೇ ವೀರಶೈವ ಧರ್ಮವು ಪ್ರಾದುರ್ಭವಿಸಿತೆಂತಲೂ ತಿಳಿಯುತ್ತಾರೆ. ಆದರೆ ಬೇರೊಂದು ಮತದವರು ಈ ವಿಧಾನವು ಪೂರ್ಣ ತಪ್ಪಾದುದು, ವೀರಶೈವ ಧರ್ಮವು ಮತ್ತು ಸಮಾಜವು ಪುರಾತನ ಕಾಲದಿಂದಲೂ ಇತ್ತು, ವೀರಶೈವ ಈ ಹೆಸರು ಹಿಂದಿನ ಕಾಲದಲ್ಲಿ ಸಹ ಇತ್ತು, ಎಂದು ಭಾವಿಸುತ್ತಾರೆ. ಆದರೆ ಈ ಎರಡನೆಯ ಪಕ್ಷದವರು ತಮ್ಮ ಈ ವಿಧಾನವನ್ನು ಸಮರ್ಥಿಸಬೇಕಾದರೆ ಶಿಲಾಶಾಸನಗಳಲ್ಲಿ ಮತ್ತು ಕೆಲವು ಮಹತ್ವದ ವಚನಗಳಲ್ಲಿ ವೀರಶೈವ ಶಬ್ದವು ಏಕೆ ಬರುವದಿಲ್ಲೆಂಬುದನ್ನು ಕುರಿತು ಅವರು ಸಕಾರಣವಾಗಿ ತಮ್ಮ ವಿಧಾನವನ್ನು ಸಮರ್ಥಿಸಬೇಕಾಗುತ್ತದೆ.

ಅವರು ಆಗಮ ಗ್ರಂಥಗಳಲ್ಲಿ ವೀರಶೈವ ಶಬ್ದವು ಮೇಲಿಂದ ಮೇಲೆ ಬರುತ್ತಿರುವದನ್ನು ನಿರ್ದೇಶಿಸುವದುಂಟು. ಕರ್ನಾಟಕದಲ್ಲಿ ಪ್ರಕಟವಾದ ಸೂಕ್ಷ್ಮಾಗಮ, ಪಾರಮೇಶ್ವರಾಗಮ ಮತ್ತು ವಾತುಲಾಗಮ ಈ ಗ್ರಂಥಗಳಲ್ಲಿ ವೀರಶೈವ ಶಬ್ದವು ಹೇರಳವಾಗಿ ಬರುವದು ನಿಜವು. ಆದರೆ ಕರ್ನಾಟಕ ಪ್ರಾಂತದ ಹೊರಗಿನ ಪ್ರದೇಶದಲ್ಲಿ ಕೆಲವು ಆಗಮ ಗ್ರಂಥಗಳು ಪ್ರಕಟವಾಗಿರುತ್ತವೆ. ಅವುಗಳನ್ನು ಸಹ ಈ ಪಕ್ಷದವರು ಪರಿಶೀಲಿಸಿ ಅವುಗಳಲ್ಲಿ ವೀರಶೈವಧರ್ಮದ ವಿವೇಚನೆಯು ಬಂದಿದೆಯೋ ಹೇಗೆ, ಬಂದಿದ್ದರೆ ವೀರಶೈವರು ಹೇಗೆ ಅಲ್ಲಿ ಕರೆಯಲ್ಪಟ್ಟಿರುವರು, ಎಂಬುದನ್ನು ಪರಿಶೋಧಿಸಿ ಪ್ರಕಟಿಸುವದು ಅವಶ್ಯವಿದ್ದು ಅವರು ಹಾಗೆ ಮಾಡಬೇಕೆಂದು ನಮ್ಮ ನಮ್ರ ಸೂಚನೆ ಇದೆ.

ಈಚೆಗೆ ನಾವು ಇಂಥ ಐತಿಹಾಸಿಕ ಸಂಶೋಧನೆಯ ಕಾರ್ಯಗಳಲ್ಲಿ, ಜನ ಸಮುದಾಯದಲ್ಲಿ ರೂಢವಾಗಿರುವ ಅಭಿಪ್ರಾಯಗಳಲ್ಲಿ ಹೀಗೆ ತೊಡಕನ್ನುಂಟುಮಾಡುವದು ಯೋಗ್ಯವಲ್ಲೆಂದು ಅನೇಕರ ಆಕ್ಷೇಪಣೆಇದೆ. ಆದರೆ ಇದು ನಮಗೆ ಅಪರಿಹಾರ್ಯವಾಗಿದೆ. ಹೀಗೆಮಾಡದೆ ಹೋದರೆ ವೀರಶೈವ ಧರ್ಮದ ನಿಜವಾದ ಮೂಲವು ತಿಳಿಯದೆ ಉಳಿಯುತ್ತಿದೆ.

ಈ ಬಗ್ಗೆ ನಮ್ಮ ಅಭಿಪ್ರಾಯವನ್ನು ನಾವು ಮೊದಲಿನಿಂದಲೂ ತಿಳಿಸುತ್ತಲೇ ಬಂದಿರುತ್ತೇವೆ. ಅದು ಯಾವದೆಂದರೆ, ವೀರಶೈವ ಧರ್ಮವು

ಬಸವಣ್ಣನ ಕಾಲದಲ್ಲಿ ಆದವಲ್ಲ. ಅದರ ತತ್ವಗಳು ಮೊದಲಿನಿಂದಲೂ ಇದ್ದವು. ಆದರೆ ಅವುಗಳ ಬಾಹ್ಯಸ್ವರೂಪದಲ್ಲಿ ಕಾಲಕಾಲಕ್ಕೆ ಬದಲಾವಣೆಗಳಾಗುತ್ತ ಬಂದವು. ಕರ್ನಾಟಕದಲ್ಲಿ ಹಿಂದಿನ ಕಾಲಕ್ಕೆ ಅನೇಕ ಶೈವ ಪಂಥಗಳೂ, ಜೈನ ಬ್ರಾಹ್ಮಣ ಮತಗಳೂ ಇದ್ದು ಅವುಗಳಲ್ಲಿ ಯುಕ್ತವಾದ ತತ್ವಗಳನ್ನು ವೀರಶೈವರು ಸಂಗ್ರಹಿಸಿ ಬಸವೇಶ್ವರನ ಕಾಲದಲ್ಲಿ ಶೈವಧರ್ಮದಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಿದರು. ವೀರಶೈವ ಮತವು ಬೌದ್ಧ, ಕ್ರೈಸ್ತ, ಮಹಮ್ಮದೀ ಧರ್ಮಗಳಂತೆ ಬಸವೇಶ್ವರನೆಂಬ ಒಬ್ಬಾನೊಬ್ಬ ವ್ಯಕ್ತಿಯಿಂದ ಸಂಸ್ಥಾಪಿಸಲ್ಪಟ್ಟಿರುವದಿಲ್ಲ. ಆದರೆ ಅದು ಒಂದು ಶೈವಮತದಲ್ಲಿ ವಿಶಿಷ್ಟಸ್ವರೂಪವನ್ನು ಹೊಂದಿದ ಮತವಾಗಿರುತ್ತದೆ. ಶಿವಮತದೊಳಗಿಂದಲೇ ವೀರಶೈವ ಮತವು ಪ್ರಾದುರ್ಭವಿಸಿರುತ್ತದೆ. ಅದಕ್ಕೆ ಮೊದಲು ಶಿವಮತವೆಂಬ ಸಾಮಾನ್ಯ ಹೆಸರು ಇದ್ದಿರಬೇಕು. ಆದರೆ ಈ ಸಾಮಾನ್ಯಾರ್ಥಸೂಚಕ ಶಬ್ದದೊಂದಿಗೆ ಮುಂದೆ ವೀರಶೈವವೆಂಬ ಹೆಸರು ಪಾದುರ್ಭವಿಸಿರಬೇಕು. ಆದ್ದರಿಂದ ಶೈವ ಅಥವಾ ಶಿವಸಮಯದವರು, ಶಿವಭಕ್ತರು ಎಂಬ ಶಬ್ದಗಳು ಶಿಲಾಶಾಸನಗಳಲ್ಲಿ ಅಥವಾ ಹಿಂದಿನ ಗ್ರಂಥಗಳಲ್ಲಿ ಬಂದಕೂಡಲೆ ಆ ಶಬ್ದಗಳು ವೀರಶೈವ ಸಮಾಜವನ್ನು ಪ್ರತ್ಯೇಕಿಸಲಾರವು. ವೀರಶೈವ ಈ ಶಬ್ದವು ಬಸವೇಶ್ವರನ ಕಾಲದಲ್ಲಿ ಇದ್ದರೂ ಇರಬಹುದು, ಇದ್ದರೆ ಅದು ಹೆಚ್ಚಾಗಿ ರೂಢವಾಗಿರಲಿಕ್ಕಿಲ್ಲ. ಆದ್ದರಿಂದ ಅದು ಆಗಿನ ಗ್ರಂಥಗಳಲ್ಲಿ ಹೆಚ್ಚಾಗಿ ಬರುವದಿಲ್ಲ ಆದರೆ ಬರಬರುತ್ತ ಮುಂಚಿನ ಶಿವಸಮಯದವರು, ಶೈವರು, ಎಂಬ ಶಬ್ದಗಳು ಗ್ರಂಥಗಳಲ್ಲಿ ಉಪಯೋಗಿಸುವದು ಕಡಿಮೆಯಾಗಿ ವೀರಶೈವ ಎಂಬ ಶಬ್ದವು ಹೆಚ್ಚಾಗಿ ಉಪಯೋಗಿಸಲ್ಪಡಹತ್ತಿತು. ಆದರೂ ಜನಸಾಮಾನ್ಯರಲ್ಲಿ ವೀರಶೈವ ಈ ಶಬ್ದಕ್ಕಿಂತಲೂ ಶಿವಭಕ್ತರು, ಶಿವಾಚಾರದವರು, ಶಿವಸಮಯದವರು ಎಂಬ ಶಬ್ದಗಳು ಬಹು ಕಾಲದವರೆಗೂ ರೂಢಿಯಲ್ಲಿ ಉಳಿದವೆಂದು ತೋರುತ್ತಿದೆ.

---



# ಹಿರಿಮೆ

ಭೂಮಿತಾಯ ತೊಡೆಯ ಮೇಲೆ
ನನ್ನದೊಂದು ಚಿಕ್ಕಗೂಡು.
ಪುಟ್ಟಮನೆಗೆ ಮುಗಿಲೆ ಛತ್ತು!
ಮೇಲೆ ಹೊಳೆವ ಚಿಕ್ಕೆ ಕಳಸ!
ತಿರೆಯ ಕಣ್ಣು ಚಂದ್ರಸೂರ್ಯ
ನನ್ನ ಮನೆಗೆ ಬೆಳಕ ನೀವರು ॥
ಪಂಚತತ್ವಗಳಲಿ ವಾಯು
ನಿತ್ಯ ಕಸವನುಡುಗಬೇಕು.
ಅಗ್ನಿ ಅಡಿಗೆ ಮನೆಯ ಆಳು.
ನೀರೆ ಅಂಗಸೇವೆಗಾರ್ತಿ
ಪ್ರಕೃತಿದೇವಿ ಅಡಿಗೆಯವಳು.
ನವಗ್ರಹಗಳೆ ಮಂತ್ರಿವರ್ಗ.
ದಿನದ ಕಜ್ಜಕೃತಿಯ ಬರೆಯೆ
ಚಿತ್ರಗುಪ್ತ ಬರಹಗಾರ.
ಮುಗಿಲಿನಟ್ಟದಲ್ಲಿ ಕುಳಿತು
ವಾದ್ಯ ಬಾರಿಸುವರು ಬೇರೆ.
ಗಾಳಿ ಓಲೆಕಾರ ಮತ್ತೆ
ಮೇಘರಾಜ ತೋಟದಾಳು.
ಬೆಂಕಿಯನ್ನು ಕಡ್ಡಿತುದಿಗೆ
ಕಟ್ಟಿ ಕೂಡಿಸಿರುವೆ ಅವನು
ಕರೆಯೆ ಬರುವನು ॥
ತಂತಿಯಲ್ಲಿ ಹಾಕಿ ಮಿಂಚ
ಹಂಚಿಕೆಯಲಿ ಕಟ್ಟೆ ಇರುವೆ
ಇರುಳು ದೀಪ ಹೊತ್ತಿಸುವನು
ಇಂತು ಅರಸುಮಗನಿಗೆಂದು
ತಂದೆ ಇತ್ತ ಪುಟ್ಟ ರಾಜ್ಯ.
ಇಲ್ಲಿ ಆಳ್ವ ಶಕ್ತಿ ಪಡೆಯೆ
ಹಿರಿದು ರಾಜ್ಯಕಾನೆ ಒಡೆಯ
ಆಗ ಸಾರ್ವಭೌಮ ನಾನೆ!

— ಸಿಂಪಿ ಲಿಂಗಣ್ಣ.

# ಶ್ರೀ ಬಸವಣ್ಣನವರಿಂದ ಉಂಟಾದ ಸ್ತ್ರೀಸ್ವಾತಂತ್ರ್ಯ.

ಲೇಖಕರು:- ಶ್ರೀ ವೀರೇಶ್ವರ, ಬೆಂಗಳೂರನಗರ.

ಮಹಾನುಭಾವರಾದ ಶ್ರೀ ಬಸವಣ್ಣನವರ ಮಹತ್ಕ್ರಾಂತಿಯ ಫಲವಾಗಿ ನಮ್ಮ ನಾಡಿನ ಜನತೆಯನ್ನಾವರಿಸಿದ್ದ ಮೌಢ್ಯದ ಕರೆಯು ಹರಿದು ಸ್ತ್ರೀ ಸಮಾನತೆ, ಅಂತ್ಯಜೋದ್ಧಾರ, ಸ್ವಾವಲಂಬನ, ಉದ್ಯೋಗಶೀಲತೆ, ಮೇಲು ಕೀಳುಗಳೆಂಬ ಭೇದ ಬುದ್ಧಿಯ ನಿರಾಕರಣೆ, ಸತ್ಯ, ಸದಾಚಾರ, ಸುವಿಚಾರಗಳ ಪ್ರಾಬಲ್ಯ ಮುಂತಾದ ಜನಾಂಗದ ಉನ್ನತ ಶ್ರೇಷ್ಠ ಶೀಲ ಸಂಪಾದನೆಯಿಂದ ಬೆಳಗಿ ವಿರಾಜಿಸುತ್ತೆಂಬುದಾಗಿ ಇಂದು ಜಾತಿಮತ ದೇಶಖಂಡಗಳ ಭೇದವಿಲ್ಲದೆ ಆಂಗ್ಲೇಯರಾದಿಯಾಗಿ ಸರ್ವದೇಶೀಯರೂ ಸರ್ವ ಧರ್ಮೀಯರೂ ಮುಕ್ತ ಕಂಠದಿಂದ ಉದ್ಘೋಷಿಸುತ್ತಿರುವುದು ಸರ್ವಶ್ರುತವಷ್ಟೆ.

ಹೀಗಿರುವಲ್ಲಿ ಇದೇ ಪ್ರಮಾಥಿನಾಮ ಸಂವತ್ಸರದ ಆಶ್ವಯುಜಮಾಸದ "ಶರಣ ಸಾಹಿತ್ಯ" ಈ ಮಾಸಪತ್ರಿಕೆಯಲ್ಲಿ ಕಲ್ಬುರ್ಗಿಯ ಶ್ರೀ ಕಪಟ್ರಾಳ ಕೃಷ್ಣರಾಯರೆಂಬುವರು "ಬಸವೇಶ್ವರನೂ ಸ್ತ್ರೀಸ್ವಾತಂತ್ರ್ಯವೂ" ಎಂಬ ಲೇಖನವನ್ನು ಬರೆದು ಬಸವಣ್ಣನವರು ಸ್ತ್ರೀಯರಿಗೆ ಸಮತೆ ಸ್ವಾತಂತ್ರ್ಯ ಗೌರವಾದಿಗಳನ್ನೇನೂ ಕೊಟ್ಟಿಲ್ಲವೆಂದೂ ಆ ಬಗೆಯ ಗೌರವಾದಿಗಳು ಬಹುಪುರಾತನ ಕಾಲದಿಂದಲೂ ಹಿಂದೂ ಸ್ತ್ರೀಯರಿಗಿದ್ದುವೆಂದೂ, ಬಸವೇಶ್ವರನೇನೂ ಹೊಸದಾಗಿ ಕೊಟ್ಟಿಲ್ಲವೆಂದೂ, ಅವರು ಸ್ತ್ರೀಯರನ್ನು ಮತ್ತಷ್ಟು ನಿಂದಿಸಲಾಗಿರುವುದನ್ನು ಕಾಣಬಹುದೆಂದೂ ಮುಂತಾಗಿ ಅರ್ಥಬರುವಂತೆ ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಕಪಟ್ರಾಳರು ಅರ್ಥವಿಲ್ಲದ ಈ ಅಭಿಪ್ರಾಯವನ್ನೇಕೆ ಪ್ರಕಟಿಸಿದರೆಂಬುದೇ ತಿಳಿಯದಾಗಿದೆ. ಅವರು ಕೊಂಚ ದೂರದರ್ಶಿಗಳಾಗಿ ಸಮಾಧಾನ ಚಿತ್ತದಿಂದ ಶ್ರೀ ಬಸವಣ್ಣನವರ ಜೀವಿತದ ಉದ್ದೇಶ, ರೀತಿ, ನೀತಿ, ಧ್ಯೇಯ, ದೇಶ, ಕಾಲ, ವರ್ತಮಾನಗಳನ್ನು ಕುರಿತು ಅಧ್ಯಯನ ಮಾಡಿದ್ದರೆ ಈ ಬಗೆಯ ಉಚಿತವಲ್ಲದ ಅಭಿಪ್ರಾಯವನ್ನು ಪ್ರಕಟಿಸಲು ಬರುತ್ತಿರಲಿಲ್ಲವೆಂದು ಹೇಳಬಹುದಾಗಿದೆ.



ಶ್ರೀ ಕಪಟ್ರಾಳರು ಲೇಖನವನ್ನು ಪ್ರಾರಂಭಿಸುತ್ತಾ ಈಗಿನ ಕಾಲದಲ್ಲಿ ಸ್ತ್ರೀ ಸ್ವಾತಂತ್ರ್ಯವೆಂದೊಡನೆ ಲೌಕಿಕ ವ್ಯವಹಾರಗಳಲ್ಲಿ ಪುರುಷರಿಗಿರುವಷ್ಟು ಹಕ್ಕು ಬಾಧ್ಯತೆಗಳು ಸಮಾನತೆಯು ಸ್ತ್ರೀಯರಿಗೂ ಇರಬೇಕು ಎಂಬರ್ಥವು ಅದರಲ್ಲಿ ಅಡಕವಾಗಿದೆ. ವಿವಾಹ ಪದ್ಧತಿಯಲ್ಲಿ ಪುರುಷರಂತೆ ಸ್ತ್ರೀಯರು ಸ್ವತಂತ್ರರಾಗಿರಬೇಕು. ಆರ್ಥಿಕ ಬಂಧನದಿಂದ ಮುಕ್ತರಾಗಿರಬೇಕು ............ ...ಸ್ತ್ರೀ ಸ್ವಾತಂತ್ರ್ಯದ ವಿಷಯದಲ್ಲಿ ಈ ತೆರದ ಕಲ್ಪನೆಯು ಬಸವೇಶ್ವರನ ಕಾಲದಲ್ಲಿತ್ತೆಂದೂ ಬಸವೇಶ್ವರನು ಇಪ್ಪತ್ತನೆಯ ಶತಮಾನದ ವಿಚಾರ ಸರಣಿಯಂತೆ ಉಪದೇಶ ಮಾಡಿದನೆಂದೂ ತಿಳಿದುಕೊಳ್ಳುವುದು ಅನೈತಿಹಾಸಿಕವಾದ ಮಾತು ಮುಂತಾಗಿ ಬರೆದು ಕೊನೆಯಲ್ಲಿ ಬಸವಣ್ಣನವರು ಹೆಣ್ಣನ್ನು ಹೀಯಾಳಿಸುವರೆಂಬದನ್ನು ಧೃಡಪಡಿಸಲು ಹೊರಟು,

"ಊರ ಸೀರೆಗೆ ಅಗಸ ಬಡಿವಡೆದಂತೆ ಹೊನ್ನೆನ್ನದು ಹೆಣ್ಣೆನ್ನದು
ಮಣ್ಣೆನ್ನದು ಎಂದು ಮರುಳಾದೆ ..............."
"ಟೇವಕ ಟೆಂಬಕನನಾಡಿಸುತ್ತಿದ್ದಿತಯ್ಯಾ ನಿನ್ನ ಮಾಯೆ, ಕೂಡಲ
ಸಂಗಮದೇವಯ್ಯಾ ಹೊನ್ನು ಹೆಣ್ಣು ಮಣ್ಣು ತೋರಿ"
"ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ ವೃಥಾ
ಬರುದೊರೆಹೋಹ ಕೆಡುಕಹಾರುವ ನಾನಲ್ಲ................."

ಎಂಬೀ ವಚನಗಳನ್ನು ಉದಹರಿಸಿ ಕೊನೆಯಲ್ಲಿ ಸ್ತ್ರೀ ಸ್ವಾತಂತ್ರ್ಯ ಮುಂತಾದ ಆಧುನಿಕ ಕಲ್ಪನೆಗಳನ್ನು ಬಸವೇಶ್ವರನಲ್ಲಿ ಆರೋಪಿಸಿ ನಮ್ಮ ಮನದಾಸೆಯನ್ನು ಪೂರೈಸಿಕೊಳ್ಳುವ ಯತ್ನಮಾಡಿದರೆ ವಚನಗಳ ಅಪಾರ್ಥಮಾಡಿದಂತಾಗುವುದು ಎಂಬುದಾಗಿ ಬರೆದಿದ್ದಾರೆ.

ಶ್ರೀ ಕಪಟ್ರಾಳರು ಈ ರೀತಿ ಬರೆಯುವ ಮೊದಲು ಸ್ತ್ರೀಸ್ವಾತಂತ್ರ್ಯವೆಂದರೆ ಎಷ್ಟು ಮಾತ್ರ, ಆಧುನಿಕ ಕಲ್ಪನೆಗಳೆಂದರೆ ಯಾವ ಬಗೆಯವು? ಎಂಬುದನ್ನು ಕೊಂಚ ಯೋಚಿಸಬೇಕಾಗಿದ್ದಿತು.

ಸ್ತ್ರೀ ಸ್ವಾತಂತ್ರ್ಯ ಮತ್ತು ಆಧುನಿಕ ಕಲ್ಪನೆಗಳೆಂದರೆ ಒಬ್ಬೊಂಟಿಗರಾದ ನವಯುವತಿಯರು ಮೋಹಕವಾದ ಬಗೆಬಗೆಯ ಪೋಷಾಕುಗಳನ್ನು ಧರಿಸಿ ಸುಗಂಧ ದ್ರವ್ಯಗಳನ್ನು ಪೂಸಿಕೊಂಡು ನಗರಗಳ ಮುಖ್ಯ ಮುಖ್ಯ ಬೀದಿಗಳಲ್ಲೂ ಉದ್ಯಾನವನಗಳಲ್ಲೂ ವಿಹಾರ ಸ್ಥಾನಗಳಲ್ಲಿಯೂ

ವಿಟರ ಬೇಟೆಗಾಗಿ ಹೊಂಚುಹಾಕುವಂತಹ ಸ್ತ್ರೀಸ್ವಾತಂತ್ರ್ಯವೇ? ಅಥವ ಪುರುಷರನ್ನು ಮನೆಗೆಲಸಕ್ಕೆ ನಿಯಮಿಸಿ ವ್ಯಾಪಾರ ಉದ್ಯೋಗಾದಿಗಳನ್ನೆಲ್ಲ ಸ್ತ್ರೀಯರೇ ಆಕ್ರಮಿಸಿಕೊಂಡು ಪುರುಷರನ್ನು ಅಧೀನರನ್ನಾಗಿರಿಸಿಕೊಳ್ಳುವಂಥ ಸ್ವಾತಂತ್ರ್ಯದ ಕಲ್ಪನೆಯೋ?

ಶ್ರೀ ಕಪಟ್ರಾಳರು ಸ್ತ್ರೀಸ್ವಾತಂತ್ರ್ಯ, ಆಧುನಿಕ ಕಲ್ಪನೆಗಳು ಎಂಬ ಮಾತಿಗೆ ಮೇಲೆ ಹೇಳಿದ ವಿಚಾರಗಳನ್ನೇ ಅರ್ಥವನ್ನಾಗಿ ಭಾವಿಸಿಕೊಂಡಿದ್ದರೆ ಆ ಅರ್ಥದ ಸ್ವಾತಂತ್ರ್ಯ ಮತ್ತು ಕಲ್ಪನೆಗಳನ್ನು ಶ್ರೀ ಬಸವಣ್ಣನವರೇನೂ ಉಂಟು ಮಾಡಿಕೊಟ್ಟಿಲ್ಲ. ಸುಧಾರಣೆಯ ಶಿಖರಕ್ಕೆ ಮುಟ್ಟುತ್ತಿರುವ ಇಂದಿನ ಈ ಉನ್ನತ್ತನೆಯ ಶತಮಾನದಲ್ಲಿಯೂ ಸಹ ಆ ಅರ್ಥದ ಭಾವನೆಯ ಸುಧಾರಣೆ ಮತ್ತು ಕಲ್ಪನೆಗಳನ್ನು ಸ್ವಾಗತಿಸುವುದಕ್ಕೆ ಯಾವ ಸಭ್ಯ ಜನಾಂಗವೂ, ಸಮಾಜವೂ, ಮುಂದೆ ಬರುವುದಿಲ್ಲವೆಂಬುದನ್ನು ಲಕ್ಷ್ಯದಲ್ಲಿಡಬೇಕಾಗಿದೆ.

ಆದರೆ ಶ್ರೀಯುತರು ಬರೆದಿರುವ "ಬಸವೇಶ್ವರನು ಉಪದೇಶ ಮಾಡಿದನೆಂದು ತಿಳಿದುಕೊಳ್ಳುವುದು ಅನೈತಿಹಾಸಿಕವಾದ ಮಾತು" ಎಂಬುದು ಮಾತ್ರ ನಿಜ. ಏಕೆಂದರೆ ಶ್ರೀ ಬಸವಣ್ಣನವರು ಯಾವುದನ್ನೂ ಸ್ವತಃ ಯಾರಿಗೂ ಉಪದೇಶ ಮಾಡಿದವರಲ್ಲ, ಅವರು ಪ್ರತಿಯೊಂದನ್ನೂ ಕಾರ್ಯತಃ ಮಾಡಿತೋರಿಸಿರುವರು. ಅವರ ವಚನಗಳಾದರೂ ತಮಗಾಗಿಯೇ ಹೇಳಿಕೊಂಡ ಮತ್ತು ದೇವರಲ್ಲಿ ಬಿನ್ನೈಸಿಕೊಂಡ ರೀತಿಯಲ್ಲಿವೆ. ಎಲ್ಲಿಯೋ ಕೆಲವು ವಚನಗಳು ಮಾತ್ರ ಅನ್ಯರಿಗಾಗಿ ಸಾಮೂಹಿಕವಾಗಿ ಹೇಳಿದಂತಿವೆ. ಆದುದರಿಂದ "ಶ್ರೀ ಬಸವಣ್ಣನವರು ಉಪದೇಶ ಮಾಡಿದರೆಂದು ತಿಳಿದುಕೊಳ್ಳುವುದು ಅನೈತಿಹಾಸಿಕವಾದ ಮಾತು" ಎಂಬುದು ನಿಜವಾಗಿಯೂ ಒಪ್ಪತಕ್ಕ ಮಾತು

ಆದರೆ ಶ್ರೀಬಸವಣ್ಣನವರು ಲೌಕಿಕ ವ್ಯವಹಾರದಲ್ಲಿ ಸ್ತ್ರೀಯರಿಗೆ ಪುರುಷರಿಗಿರುವಷ್ಟು ಹಕ್ಕುಬಾಧ್ಯತೆಗಳನ್ನು ಕೊಟ್ಟಿಲ್ಲವೆ? ಸಮಾನತೆಯು ಸ್ಥಿತಿಲ್ಲವೆ? ವಿವಾಹವಾಗುವ ವಿಚಾರದಲ್ಲಿ ಸ್ತ್ರೀಯರಿಗೆ ಸ್ವಾತಂತ್ರವನ್ನುಂಟು ಮಾಡಿಲ್ಲವೆ? ಸ್ತ್ರೀಯರಿಗೆ ಅರ್ಥಸಂಪಾದನೆಗೆ ಅವಕಾಶವಿಲ್ಲದಂತೆ ಮಾಡಿದ್ದಾರೆಯೆ? ಸ್ತ್ರೀಯರು ಕಾಯಕದಲ್ಲಿ ನಿರತರಾಗಲು ಅವಕಾಶ ಕಲ್ಪಿಸಿಲ್ಲವೆ? ಮುಂತಾದ ವಿಚಾರಗಳನ್ನು ಶ್ರೀಕಪಟ್ರಾಳರು



ಚೆನ್ನಾಗಿಯೋಚಿಸಬೇಕಾಗಿದ್ದಿತು ಈಗ ಅವರ ವಿಚಾರಗಳನ್ನು ಒಂದೊಂದಾಗಿ ಪರಿಶೀಲಿಸೋಣ.

ಸ್ತ್ರೀಯರಿಗೆ ಉದ್ಯೋಗ ಸ್ವಾತಂತ್ರ್ಯ:— ಈ ಪ್ರಶ್ನೆಗೆ ಶ್ರೀ ಬಸವಣ್ಣನವರ ಕಾಲದಲ್ಲಿ ಸ್ವತಂತ್ರ ಕಾಯಕಗಳನ್ನು ಕೈಗೊಂಡು ಜೀವಿಸುತ್ತಿದ್ದ, ಕದಿರೆ ರೆಮ್ಮವ್ವೆ, ಕೊಟ್ಟಣದ ಸೋಮವ್ವೆ, ಕನ್ನಡಿ ಕಾಯಕದ ರೇಮವ್ವ, ಕಾಲುಕಣ್ಣಿಯ ಕಾಯಮ್ಮ. ಮೊದಲಾದ ಕೆಲವರ ಹೆಸರುಗಳೇ ಸಾಕಾಗಿವೆಯಲ್ಲದೆ ಇಂದಿಗೂ ಲಿಂಗಾಯತ ಸಮಾಜದಲ್ಲಿ ಸತ್ಯ ಸದಾಚಾರಗಳಿಗೆ ಲೋಪಬಾರದ ಯಾವ ಉದ್ಯೋಗವನ್ನಾದರೂ ಸ್ತ್ರೀಯರು ಅವಲಂಬಿಸಬಹುದಾಗಿದೆ. ಅಸಂಖ್ಯ ಮಹಿಳೆಯರು ಸ್ವತಂತ್ರ ಉದ್ಯೋಗದಿಂದಲೇ ಜೀವಿಸುತ್ತಿದ್ದಾರೆ.

ಧಾರ್ಮಿಕ ಹಕ್ಕು ಬಾಧ್ಯತೆಗಳು:— ಸ್ತ್ರೀಸಮುದಾಯದ ವಿಚಾರವಾಗಿ ಶ್ರೀ ಬಸವಣ್ಣನವರು ಉನ್ನತ ದರ್ಜೆಯ ಆದರ್ಶಭಾವನೆಯನ್ನಿಟ್ಟುಕೊಂಡಿದ್ದರು. ಪುರುಷರು ಹೇಗೆ ವೀರಶೈವ ದೀಕ್ಷಾನುಗ್ರಹಕ್ಕೆ ಪಾತ್ರರೋ ಹಾಗೆಯೇ ಸ್ತ್ರೀಯರೂ ಪಾತ್ರರೆಂಬುದನ್ನು ಕಾರ್ಯತಃ ಆಚರಿಸಿ ತೋರಿಸಿದ್ದಾರೆ. ಸ್ತ್ರೀಪುರುಷರಿಬ್ಬರೂ ಸಮಾನ ಧರ್ಮಾಚಾರಿಗಳಾಗದಿದ್ದರೆ ಆ ಸಮಾಜದ ಸ್ವರೂಪವು ಹೇಗಿರುವುದೆಂಬುದನ್ನು "ಗಂಡ ಶಿವಲಿಂಗದೇವರ ಭಕ್ತ ಹೆಂಡತಿ ಮಾರಿಮಸಣಿಯ ಭಕ್ತೆ...... ಹೆಂಡದ ಮಡಿಕೆಯ ಹೊರಗೆ ತೊಳೆದಂತಾಯಿತ್ತು ....." ಎಂಬ ವಚನದಿಂದ ಸ್ಪಷ್ಟವಾಗಿ ತಿಳಿಸಿದ್ದಾರೆ.

"ಉಭಯ ದೃಷ್ಟಿಯಿಂದ ದೃಷ್ಟವ ಕಾಂಬಂತೆ ದಂಪತಿ ಏಕಭಾವವಾಗಿ ನಿಂದಲ್ಲಿ ಗುಹೇಶ್ವರ ಲಿಂಗಕ್ಕೆ ಅರ್ಪಿತವಾಗಿತ್ತು. ಸಂಗನ ಬಸವಣ್ಣ" ಎಂಬ ಶ್ರೀ ಪ್ರಭುದೇವರ ದಿವ್ಯವಾಣಿಯನ್ನು ಜನಾಂಗದ ಆಚರಣೆಯಲ್ಲಿ ಹಬ್ಬಿಸಿದ್ದರು. ಅವರ ಫಲವಾಗಿಯೇ ಆದ್ಯ ಜಗದ್ಗುರುಗಳೆನಿಸಿದ ಶ್ರೀ ಪ್ರಭುದೇವರಂಥಹ ಮಹಾಶಿವಾನುಭವಿಗಳನ್ನೂ ಸಹ "ನೀನೇನು ನನಗೆ ಸಮಾಧಾನ ಹೇಳಬಲ್ಲೆ ಹೋಗತ್ತ" ಎಂದು ಇದಿರು ನುಡಿಯುವ ಸಾಮರ್ಥ್ಯವು ಮುಕ್ತಾಯಕ್ಕಗಳಿಗೂ, ಗಂಡನಿಗೆ ಲಿಂಗಾಂಗ ಸಾಮರಸ್ಯ ತತ್ವವನ್ನು ತಿಳಿಸಿ ಒಪ್ಪಿಸುವ ಸಾಮರ್ಥ್ಯವು ಮೋಳಿಗೆ ಮಾರಯ್ಯಗಳ ಪುಣ್ಯಾಂಗನೆ ಶ್ರೀ ಮಹಾದೇವಿಯಮ್ಮಗಳಲ್ಲಿಯೂ, ಪತಿ

ದೇವರಾದ ಅಯ್ದಕ್ಕಿ ಮಾರಯ್ಯಗಳಿಗೆ, ಅಹಂಕಾರಗುಣವಳಿದು ತ್ರಿವಿಧ ದಾಸೋಹ ಮಾಡುವುದೇ ಐಕ್ಯದ ಮಾರ್ಗವು. ಅಹಂಕಾರವೇ ಭವದ ಮೂಲದಬೇರು, ಅದು ನಷ್ಟವಾದಲ್ಲಿ ಮುಂದಿನ ಭವಾಂಕುರವೇ ನಿಲ್ಲುವದು, ಮುಂದೊಂದ ಕಲ್ಪಿಸದೆ ಹಿಂದೊಂದ ಭಾವಿಸದೆ ಸತಿ ಸಂದಿದ್ದಾಗಲೇ ಮುಕ್ತಿಯು ಆಶಿಯು ಎಂದು ಉಪದೇಶಿಸುವ ಸಾಮರ್ಥ್ಯವು ಲಕ್ಕಮ್ಮಗಳಿಗೂ ಉಂಟಾದುದು.

ಇಂದಿಗೂ ಲಿಂಗಾಯತರಲ್ಲಿ ದೊಡ್ಡ ದೊಡ್ಡ ಸಭೆಗಳ ಮುಂದೆ (ಶಿವಕಥೆಗಳನ್ನು ಮಾತ್ರವಲ್ಲ) ಶಿವಾನುಭವ ಪ್ರವಚನಗಳನ್ನು ನಡೆಯಿಸಿ ಜನತೆಗೆ ಜೀವನ್ಮುಕ್ತಿಯ ಮಾರ್ಗವನ್ನುಪದೇಶಿಸಬಲ್ಲ ಅನೇಕ ಮಹಿಳೆಯರಿರುವರೆಂಬುದು ಕನ್ನಡ ನಾಡಿಗೇ ಭೂಷಣಪ್ರದವಾದ ವಿಚಾರವಲ್ಲವೆ? ಇದಕ್ಕಿಂತಲೂ ಹೆಚ್ಚಾದ ಸ್ತ್ರೀ ಧಾರ್ಮಿಕ ಸ್ವಾತಂತ್ರ್ಯವನ್ನು ಇಂದಿನ ಇಪ್ಪತ್ತನೆಯ ಶತಮಾನದಲ್ಲಿಯಾದರೂ ಯಾವ ಸಭ್ಯ ಸ್ತ್ರೀ ಸಮಾಜವಾದರೂ ಅಪೇಕ್ಷಿಸುತ್ತಿದೆಯೆ? (ಅದಕ್ಕಿಂತಲೂ ಹೆಚ್ಚಿನ ಸ್ತ್ರೀಸ್ವಾತಂತ್ರ್ಯವೆಂಬುದಿದ್ದರಲ್ಲವೇ? ಅಪೇಕ್ಷಿಸುವುದ: ?)

ವಿವಾಹ ಸ್ವಾತಂತ್ರ್ಯ:— ಈ ವಿಚಾರವೆತ್ತಿದ ಕೂಡಲೇ ಪ್ರತಿಯೊಬ್ಬ ಕನ್ನಡಿಗನ ಸ್ಮೃತಿಪಥದಲ್ಲಿ ಕನ್ನಡ ನಾಡಿನ ವೀರವಿರಾಗಿಣಿಯರಾದ ಉಡುತಡಿಯ ಮಹಾದೇವಿಯಕ್ಕಗಳ ದಿವ್ಯ ಚಕ್ರವು ಸುಳಿದಾಡುತ್ತದೆ. ಶ್ರೀ ಮಹಾದೇವಿಯಕ್ಕಗಳು ಭಕ್ತಿ, ಜ್ಞಾನ, ವೈರಾಗ್ಯಗಳ ಶಿಖರವನ್ನೇರಿದ್ದ ಉಜ್ವಲ ಶಿವಾನುಭವಿಗಳಾಗಿ ಸಮಸ್ತ ಶಿವಶರಣೆಯರ ಸಮೂಹಕ್ಕೆ ಮುಕುಟಮಣಿಯಂತಿದ್ದು ಪರಿಶುದ್ಧವೂ, ಸಾತ್ವಿಕವೂ, ತೇಜಃಪುಂಜವೂ, ಆದ ಜೀವಿತದಿಂದ ತೊಳಗಿ ಬೆಳಗಿದವರೆಂಬುದು ನಿರ್ವಿವಾದವೂ ಸಮಸ್ತಪಂಡಿತನಿಕರವೂ ಒಪ್ಪಿದ ವಿಚಾರವೂ ಆಗಿದೆ. ಅಲ್ಲದೆ ಶ್ರೀ ಬಸವಣ್ಣನವರೂ ಚನ್ನಬಸವಣ್ಣನವರೂ ಪ್ರಭುದೇವರು ಮೊದಲಾದ ಸಮಸ್ತ ಶರಣಸಂಕುಳವೂ ಮಹಾದೇವಿಯಕ್ಕಗಳ ಪರಿಶುದ್ಧ ಜೀವನವನ್ನೂ, ಜ್ಞಾನದ ಹೆಚ್ಚಳವನ್ನೂ, ಮುಕ್ತಕಂಠದಿಂದ ಭಕ್ತಿಭಾವದಿಂದ ಹಾಡಿ ಹರಸಿ ನಲಿದಿದ್ದಾರೆ.

ಮಹಾದೇವಿಯಕ್ಕಗಳ ಜೀವಿತವು ಇಷ್ಟೊಂದು ಉನ್ನತವಾದ ಅಂತಸ್ತಿನಲ್ಲಿದ್ದರೂ ಅವರು ಒಳ್ಳೇ ನಿಷ್ಠೆಯಿಂದ ಕೂಡಿದ ಬ್ರಹ್ಮಚರ್ಯ ಜೀವನದಿಂದ ಏಕಾಂಗಿಗಳಾಗಿಯೇ ಇದ್ದುಕೊಂಡು ಸರ್ವ ಶರಣಂಗ



ಳನ್ನೂ ಅರುವಿಂಗೆ ಆಹುತಿಯನಿಕ್ಕಿ "ಚನ್ನಮಲ್ಲಿಕಾರ್ಜುನನೇ ಗಂಡನೆನಗೆ, ಮಿಕ್ಕಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯ." ಎಂದು ಹೇಳಿರುವುದನ್ನು ಸರ್ವರೂ ಲಕ್ಷದಲ್ಲಿಡತಕ್ಕದ್ದಾಗಿದೆ.

ಇದನ್ನೆಲ್ಲಾ ಲಕ್ಷಿಸಿದರೆ ಯೋಗ್ಯರೀತಿಯಿಂದ ವಿವಾಹವಾಗುವುದಕ್ಕೂ, ವಿವಾಹಿತರಾಗದೇ ಇರುವದಕ್ಕೂ, ವಿವಾಹತ್ಯಾಗಕ್ಕೂ ಶ್ರೀ ಬಸವಣ್ಣನವರು ಸ್ತ್ರೀಯರಿಗೆ ಸ್ವಾತಂತ್ರ್ಯವನ್ನು ಉಂಟುಮಾಡಿಕೊಟ್ಟಿದ್ದರೆಂಬುದು ನಿರ್ವಿವಾದವಾಗುತ್ತದೆಯಲ್ಲವೇ? ಇತ್ತೀಚೆಗೂ ಲಿಂಗಾಯತ ಸಮಾಜದಲ್ಲಿ ಎಷ್ಟೋ ಜನ ಅವಿವಾಹಿತ ಶರಣೆಯರು ಮಹಾಮಹಿಮೆಯರಾಗಿ ಬಾಳಿ ಹೋಗಿರುವುದೂ, ಇಂದಿಗೂ ಅಲ್ಲಲ್ಲಿ ದೇಶ ಮಧ್ಯದಲ್ಲಿ ಅವಿವಾಹಿತೆಯರಾದ ಶರಣೆಯರು ಪರಿಶುದ್ಧವಾದ ಶಿವಾನುಭವ ಜೀವನದಿಂದ ಸರ್ವರಿಂದಲೂ ಪೂಜ್ಯರೆನ್ನಿಸಿಕೊಂಡು ದಿವ್ಯಜೀವನವನ್ನು ನಡೆಸುತ್ತಿರುವುದೂ, ಇಂದಿಗೂ ಲಿಂಗಾಯತ ಸಮಾಜದಲ್ಲಿ ಹೆಣ್ಣು ಮಕ್ಕಳಿಗೆ ಇಂತಿಷ್ಟೇ ವರ್ಷಗಳೊಳಗಾಗಿ ವಿವಾಹವಾಗಲೇಬೇಕೆಂಬ ನಿರ್ಬಂಧವಾಗಲೀ, ವಿವಾಹಿತರಾಗದೆ ಪರಿಶುದ್ಧಜೀವನದಿಂದಿರುವ ಸ್ತ್ರೀಯರನ್ನು ಸಹ ಗೌರವಿಸಕೂಡದೆಂಬ ಶುಷ್ಕ ಪದ್ಧತಿಯಾಗಲೀ, ಶಾಸ್ತ್ರವಾಕ್ಯ ಸಂಪ್ರದಾಯಗಳಾಗಲೀ ಇಲ್ಲದೆ ಅಂತಹ ಪರಿಶುದ್ಧ ಜೀವಿಗಳಾದ ಸ್ತ್ರೀಯರಿಗೆ ಮತ್ತೂ ಹೆಚ್ಚಾದ ಗೌರವಸ್ಥಾನವೂ ಪೂಜ್ಯತೆಯೂ ಸಲ್ಲುತ್ತಿರುವುದೂ ಶ್ರೀ ಬಸವಣ್ಣನವರು ಸ್ತ್ರೀಯರಿಗೆ ವಿವಾಹ ಸ್ವಾತಂತ್ರ್ಯವನ್ನುಂಟುಮಾಡಿಕೊಟ್ಟುದರ ನಿದರ್ಶನಗಳಲ್ಲವೇ?

ಇನ್ನು ಶ್ರೀ ಕಪಟ್ರಾಳರು ಉದಹರಿಸಿರುವ ವಚನಗಳ ವಿಚಾರ:— ಶ್ರೀಯುತರು ಉದಹರಿಸಿದ ನಾಲ್ಕು ವಚನಗಳ ಸಾರಾಂಶವು, ಹೊನ್ನು, ಹೆಣ್ಣು ಮಣ್ಣುಗಳನ್ನು ಶಾಶ್ವತವೆಂದು ನಂಬಿ ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆ, ಎಂಬುದಾಗಿ ಶ್ರೀ ಬಸವಣ್ಣನವರು ದೇವದೇವನಲ್ಲಿ ಹೇಳಿಕೊಂಡಂತಿದೆ.

ಸ್ತ್ರೀ ಮತ್ತು ಪುರುಷರ ಕಾಮ ಸೌಂದರ್ಯವು ಪರಸ್ಪರರಿಗೆ ಅತ್ಯಂತ ಆಕರ್ಷಣೀಯವೆಂಬುದೂ, ಆ ಸೌಂದರ್ಯವನ್ನು ಉಪಾಸನೆ ಮಾಡಿದ ಹಾಗೆಲ್ಲಾ ಆ ಕಾಮ ಸೌಂದರ್ಯೋಪಾಸನೆಯ ದಾಹವು ಮತ್ತಷ್ಟು ಅಧಿಕಾಧಿಕವಾಗುತ್ತಾ ನಡೆದು ಅದರಲ್ಲಿಯೇ ಮನವು ಸದಾ ಲೀನವಾಗಿ

ದೈವಚಿಂತನದ ಕಡೆಗೆ ಮನಸ್ಸು ಹರಿಯುವದಿಲ್ಲವೆಂಬುದೂ, ತತ್ಫಲವಾಗಿ ಸ್ತ್ರೀಪುರುಷರಾದಿಯಾಗಿ ಮಾನವರು ಅಷ್ಟ ಮದಗಳಿಗೂ ಷಡ್ರಿಪುಗಳಿಗೂ ವಶರಾಗಿ ಅವರ ಜೀವನವೂ ಅಧೋಗತಿಗಿಳಿಯುವುದೆಂಬುದೂ, ಶ್ರೀ ಬಸವಣ್ಣನವರ ಧರ್ಮಕ್ರಾಂತಿಯ ಆರಂಭ ಕಾಲಕ್ಕೆ ಮೊದಲು ಜನಜೀವನವು ಆ ಬಗೆಯ ಕಾಮ ಸೌಂದರ್ಯೋಪಾಸನೆಯ ಮೂಲಕವೂ ಅಧೋಗತಿಯನ್ನು ಹೊಂದಿದ್ದಿತೆಂಬುದೂ, ಸರ್ವಶ್ರುತವಷ್ಟೆ.

ಹಾಗೆಯೇ ಧನಾರ್ಜನೆ ಮತ್ತು ರಾಜ್ಯಾರ್ಜನೆಗಳಲ್ಲಿಯೂ ಮಾನವರು ವಿಪರೀತವಾಗಿ ಆಸಕ್ತರಾದವರೂ ಸಹ ಆಗಲೂ ದೈವಚಿಂತನದ ಕಡೆಗೆ ಮನವು ಹರಿಯದೆ ಕೇವಲ ಆರ್ಜನೆಯಲ್ಲೇ ಆಸಕ್ತರಾಗಿ ಮಾಡಬಾರದ ಕಾರ್ಯಗಳಲ್ಲೆಲ್ಲಾ ಮನವು ಹರಿದು ಜೀವನವು ಆಗಲೂ ಅಧೋಗತಿಗೆ ಎಳೆಯಲ್ಪಡುತ್ತದೆಂಬುದೂ ನಿರ್ವಿವಾದ.

ಈ ಕಾರಣಗಳಿಂದಲೇ ಶ್ರೀ ಬಸವಣ್ಣನವರು ಹೊನ್ನು, ಹೆಣ್ಣು, ಮಣ್ಣು ಈ ಮೂರನ್ನೂ "ಶಾಶ್ವತ" ವೆಂದು ನಂಬಿ ದೇವನನ್ನು ಮರೆತೆನೆಂದು ಹಂಬಲಿಸಿದ್ದಾರೆ. ಅವರ ವಚನಗಳ ಅರ್ಥವು ಹೊನ್ನು ಹೆಣ್ಣು ಮಣ್ಣುಗಳನ್ನೇ "ಶಾಶ್ವತ"ವೆಂದು ನಂಬಿ ಅವುಗಳಲ್ಲಿ ವಿಪರೀತಾಸಕ್ತಿಯನ್ನು ವಹಿಸದೆ ಜೀವನಕ್ಕೆ ಅವಶ್ಯಕವಾಗುವಷ್ಟು, ಯೋಗ್ಯರೀತಿಯಲ್ಲಿ "ಮೋಹವಿಲ್ಲದ ಸ್ನೇಹವನ್ನಿಟ್ಟು" ಆದಷ್ಟು ಹಿತವಾಗಿಯೂ ಮಿತವಾಗಿಯೂ ಅವುಗಳನ್ನು ಬಳಸುತ್ತಾ ದೇವರನ್ನೂ ಮರೆಯದೆ ಜೀವನ್ಮುಕ್ತಿಯನ್ನು ಪಡೆಯಬೇಕೆಂಬುದೇ ಆಗಿದೆ. ಆ ಮಹಾನುಭಾವರ ಈ ಬಗೆಯ ಉದ್ದೇಶವು ಪುರುಷಸಹಜವಾದುದೇ ಆಗಿದೆ. ಏಕೆಂದರೆ ಅವರು ಪುರುಷರಾದುದರಿಂದ ಹೆಣ್ಣನ್ನು ಕುರಿತು ಹೇಳಿದ್ದಾರೆಯೇ ಹೊರತು, ಹೆಣ್ಣು ಕುಲದ ಮೇಲಣ ತಿರಸ್ಕಾರ ಭಾವನೆಯಿಂದಲ್ಲ.

ಹಾಗೆ ಹೆಣ್ಣುಕುಲದ ಮೇಲೆ ಅವರಿಗೆ ಹೀಯಾಳಿಕೆಯ ಭಾವನೆಯಿದ್ದಿದ್ದರೆ "ಪರವಧುವ ಮಹದೇವಿ ಎಂಬೆ" ಎಂದು ಹೇಳಿ ಸ್ತ್ರೀಕುಲವನ್ನು ಗೌರವಿಸುತ್ತಿರಲಿಲ್ಲ. ಹಾಗೆಯೇ ಹೊನ್ನು ಮಣ್ಣುಗಳನ್ನಾದರೂ ಅವರು ಜೀವನಕ್ಕೆ ಎಷ್ಟು ಅವಶ್ಯಕವೋ ಅಷ್ಟನ್ನು ಮಾತ್ರ ಆರ್ಜಿಸಿ ಬಳಸಬೇಕೆಂದು ಹೇಳಿದ್ದಾರೆಯೇ ಹೊರತು ಸಂಪೂರ್ಣವಾಗಿ ನಿಷೇಧಿಸಿ ಕಾಡಿಗೆ ಹೊರಟುಹೋಗಬೇಕೆಂದು ಹೇಳಿಲ್ಲ. "ಕಾಯಕವೇ ಕೈಲಾಸ"ವೆಂದು ಬೋಧಿಸಿ ಪ್ರತಿಯೊಬ್ಬರೂ ಸ್ತ್ರೀಪುರುಷ ಭೇದವಿಲ್ಲದೆ



ಕಾಯಕವನ್ನಾಚರಿಸಿ "ಹೊನ್ನನ್ನು" ಗಳಿಸಿ ಜೀವನವನ್ನು ನಿರ್ವಹಿಸಿ ಮಿಕ್ಕುದನ್ನು ಜಂಗಮಸೇವೆಗಾಗಿ ವಿನಿಯೋಗಿಸಬೇಕೆಂದೇ ಹೇಳಿದ್ದಾರೆ. ಅನೇಕ ರಾಜರುಗಳು ಸಹ ತಮ್ಮ ಸಮಸ್ತವನ್ನೂ ಜಂಗಮಸೇವೆಗೆ ಸಲ್ಲಿಸಿ ಬಸವಣ್ಣನವರ ಸಾನ್ನಿಧ್ಯದಲ್ಲಿದ್ದು ಕಾಯಕವನ್ನಾಚರಿಸಿ ಹೊನ್ನನ್ನು ಗಳಿಸಿ ಜಂಗಮ (ಸಮಾಜ) ಸೇವೆಮಾಡುತ್ತಿದ್ದರೆಂಬುದಂತೂ ಸರ್ವತ್ರ ಪ್ರಸಿದ್ಧವೇ ಇದೆ. ಹೀಗಿರುವಾಗ ಅವರು ಹೊನ್ನುಮಣ್ಣುಗಳನ್ನು ಸಹ ಅಷ್ಟೊಂದು ತುಚ್ಛೀಕರಿಸಿರುವರೆಂದು ತಿಳಿಯುವುದು ವಿಹಿತವಲ್ಲ. ಆದರೆ ಅವುಗಳಲ್ಲಿಯೂ "ಮೋಹವಿಲ್ಲದ ಸ್ನೇಹ" ಸಂಬಂಧವನ್ನಿಡಬೇಕೆಂಬುದೇ ಆ ಮಹಾನುಭಾವರ ಅಪೇಕ್ಷೆಯಾಗಿದ್ದಿತಲ್ಲವೇ?

ಅನೇಕ ಶರಣಶರಣೆಯರೂ ಸಹ ತಮ್ಮ ತಮ್ಮ ವಚನಗಳಲ್ಲಿ ಸ್ತ್ರೀಗೆ ಪುರುಷನಾಗಿ ಕಾಡಿತ್ತು ಮಾಯೆ, ಪುರುಷಂಗೆ ಸ್ತ್ರೀಯಾಗಿ ಕಾಡಿತ್ತು ಮಾಯೆ,......" "ಕಾಯಭಾವ ಉಳ್ಳನ್ನಕ್ಕ ಮಾಯಾಪಾಶ ಬಿಡದು ನೋಡಾ ಅಯ್ಯಾ" "ಬಲ್ಲೆನೆಂಬುದು ಮಾಯೆ, ಅರಿಯೆನೆಂಬುದು ಮಾಯೆ, ಒಲ್ಲೆನೆಂಬುದು ಮಾಯೆ, ಒಲಿವೆನೆಂಬುದು ಮಾಯೆ, ಜೀವನೆಂಬುದು ಮಾಯೆ, ಮುಕ್ತನೆಂಬುದು ಮಾಯೆ, ಸತಿ, ಸುತ, ಪಿತ, ಮಾತೆ ಇವರೆಲ್ಲರೂ ಮಾಯೆ, ಭೃತ್ಯ ಭ್ರಾತ್ರಾದಿಗಳೆಲ್ಲ ಮಾಯೆ, ಆನೆಂಬುದು ಮಾಯೆ, ನೀನೆಂಬುದು ಮಾಯೆ......... ತಾನೆಂಬುದು ಮಾಯೆ" ಮುಂತಾಗಿ ಹಾಡಿಕೊಂಡಿದ್ದಾರೆ.

ವಚನಕಾರರ ತಿಳಿವಳಿಕೆಯೂ, ಅರ್ಥವೂ, ಭಾವವೂ, ಈ ಬಗೆಯದಾಗಿರುವಾಗ ಶ್ರೀ ಕಪಟ್ರಾಳರು "ಮಾಯೆ" ಎಂಬ ಶಬ್ದವನ್ನು "ಸ್ತ್ರೀ"ಯರಿಗೆ ಮಾತ್ರ ಅನ್ವಯಿಸಲು ಹೊರಟು, ಅದರಲ್ಲಿಯೂ ಸ್ತ್ರೀಯರನ್ನು ಈ ಮಾಯೆ, ಎಂಬ ಶಬ್ದದ ಮೂಲಕ ಹೀಯಾಳಿಸಲಾಗಿದೆ ಎಂದು ಹೇಳುವ ಸಾಹಸಕ್ಕೆ ತೊಡಗಿರುವುದನ್ನು ನೋಡಿದರೆ ಅವರ ಆ ಸಾಹಸವು ಆಶ್ಚರ್ಯಕರವಾಗಿ ಕಾಣುತ್ತಿದೆಯಲ್ಲದೆ ಅವರ ಲೇಖನದ ಉದ್ದೇಶವೇ ತಿಳಿಯದಂತಾಗಿದೆ.

ಕಡೆಯದಾಗಿ:— ಶ್ರೀ ಕಪಟ್ರಾಳರು ಶ್ರೀ ಬಸವಣ್ಣನವರಿಗಿಂತ ಬಹುಕಾಲದ ಹಿಂದೆಯೇ ಸ್ತ್ರೀಯರಿಗೆ ಬೇಕಾದಷ್ಟು ಸ್ವಾತಂತ್ರ್ಯವಿದ್ದಿತೆಂದೂ ಬಸವಣ್ಣನವರೇನೂ ಹೊಸದಾಗಿ ಅವರಿಗೆ ಸ್ವಾತಂತ್ರ್ಯವನ್ನುಂಟು

ಮಾಡಿಲ್ಲವೆಂದೂ ಹೇಳಲು ಹೊರಟು ಜನಕರಾಜ–ಸುಲಭೆಯರ ಯೌಗಿಕ ಸಂವಾದವನ್ನೂ, ಮಹಾರಾಷ್ಟ್ರದ ಮುಕ್ತಾಬಾಯಿ, ಉತ್ತರ ಹಿಂದುಸ್ಥಾನದ ಮೀರಾಬಾಯಿಯರನ್ನೂ, ಉದಾಹರಣೆಗಾಗಿ ಸೂಚಿಸಿದ್ದಾರೆ. ಆದರೆ ಅಂತಹ ಅಸಂಖ್ಯಾತ ಮಹಿಳೆಯರು ಕನ್ನಡನಾಡಿನಲ್ಲಿ ಅದರಲ್ಲಿಯೂ ಶ್ರೀ ಬಸವಣ್ಣನವರ ಮತದಲ್ಲಿ ಆಗಿಹೋಗಿದ್ದಾರೆಂಬುದನ್ನು ಮಾತ್ರ ಮರೆತುಬಿಟ್ಟಿದ್ದಾರೆ! ಪಾಪ! ಶ್ರೀ ಕಪಟ್ರಾಳರು ಇನ್ನೂ ಕೊಂಚ ಆಳವಾಗಿ ಹಿಂದುಸ್ಥಾನದ ಸ್ತ್ರೀಯರ ಇತಿಹಾಸವನ್ನು ಅಧ್ಯಯನ ಮಾಡಿದ್ದರೆ ಇನ್ನೂ ಕೆಲವು ಹೆಸರುಗಳು ದೊರೆಯುತ್ತಿದ್ದುವು. ಅದೇನು ಕಾರಣವೋ ಅವರು ಹಾಗೆ ಮಾಡಿಲ್ಲ.

ಶ್ರೀ ಕಪಟ್ರಾಳರು ಹೇಳಿರುವವು ಕೇವಲ ಇತ್ತೀಚಿಗಿನ ಒಂದೆರಡು ಹೆಸರುಗಳು ಮಾತ್ರವಾಗಿವೆ. ಆದರೆ ಸುಮಾರು ಕ್ರಿ. ಪೂ. ಎರಡು ಸಾವಿರ ವರ್ಷಗಳ ಹಿಂದೆಯೇ ಕೆಲವು ಸ್ತ್ರೀಯರು ವೇದಮಂತ್ರಗಳನ್ನು ರಚಿಸಿ ಪುರುಷರ ಸಮಾನವಾಗಿ ಮಂತ್ರದ್ರಷ್ಟಾರರೆನಿಸುವ ಘನತೆಗೌರವಗಳನ್ನು ಪಡೆದಿದ್ದರು. ಅವರಲ್ಲಿ ಘೋಷಾ, ವಿಶ್ವವಾರಾ, ಲೋಪಾಮುದ್ರಾ, ಗೋಧಾ, ಅಪಾಲಾ, ರೋಮಶಾ, ಶಾಶ್ವತಿ, ಮುಂತಾದ ಕೆಲವರು ಮುಖ್ಯರು. ಅದೇ ರೀತಿ ಸುಲಭಾ, ವಡವಾ, ಪ್ರಾಥಿಕೇಯಿ, ಮೈತ್ರೇಯಿ, ಗಾರ್ಗಿ, ಕಾಶಕೃತ್ಸ್ನಿ, ಮುಂತಾದವರು ಬ್ರಹ್ಮವಾದಿನಿಯರೂ ಆಗಿದ್ದರು. ಇವರುಗಳು ಮಹಾತತ್ವದರ್ಶಿನಿಯರೂ, ಯೋಗಿನಿಯರೂ, ಜ್ಞಾನವಿಚಕ್ಷಣೆಯರೂ, ವಿದುಷೀಮಣಿಯರೂ ಆಗಿದ್ದರಲ್ಲದೆ, ಆಗ ಬಾಲಕರಂತೆಯೇ ಬಾಲಿಕೆಯರೂ ಉಪನಯನ ಸಂಸ್ಕಾರವನ್ನು ಹೊಂದಿ ವಿಧಿಪೂರ್ವಕ ವೇದಾಧ್ಯಯನ ಮಾಡುತ್ತಿದ್ದರು.

ಆದರೆ ನಮ್ಮ ದೇಶದ ರಾಜಕೀಯ ಮತ್ತು ಸಾಮಾಜಿಕ ವಿಭಿನ್ನತೆಗಳ ಫಲವಾಗಿ ಮೇಲೆ ಕಂಡ ಸ್ತ್ರೀಯರ ಉತ್ಕರ್ಷಸ್ಥಿತಿಯು ಬಹುಕಾಲ ಶಾಶ್ವತವಾಗಿ ನಿಲ್ಲಲಿಲ್ಲ. ಕಾಲಚಕ್ರವು ಉರುಳಿದಂತೆಲ್ಲಾ ನಮ್ಮ ರಾಷ್ಟ್ರದ ನಾರೀಕುಲದ ಉತ್ಕರ್ಷಸ್ಥಿತಿಯು ಖಿಲವಾಗುತ್ತಾ ನಡೆದು ಕ್ರಮಕ್ರಮವಾಗಿ ಸ್ತ್ರೀಯರು ವಿಲಾಸ ಸಾಮಗ್ರಿಗಳಾಗಿಯೂ, ದಾಸಿಯರಾಗಿಯೂ, ಸಂತಾನಯಂತ್ರಗಳಾಗಿಯೂ, ಮಾಡಲ್ಪಟ್ಟರು. ಅವರು ವಿದ್ಯಾಭ್ಯಾಸ ಮಾಡಕೂಡದೆಂದಾಯಿತು. ಮಂತ್ರಗಳನ್ನುಚ್ಚರಿಸಕೂಡದೆಂದಾಯಿತು. ಸ್ವತಃ ದೇವರನ್ನು ಪೂಜಿಸಕೂಡದೆಂದಾಯಿತು. ಕಡೆಗೆ



ತಲೆಯನ್ನು ನುಣ್ಣಗೆ ಬೋಳಿಸಿಕೊಂಡು ಕೆಂಪುಸೀರೆಯನ್ನುಟ್ಟು ಮಡಿಹೆಂಗಸರಾಗಿ ಮೂಲೆಯಲ್ಲಿರಬೇಕೆಂತಲೂ ಆಯಿತು. ಇನ್ನೇನಾಗಬೇಕು ನಾರೀಕುಲದ ಅಪಕರ್ಷಕ್ಕೆ? ಯಾವ ಮಹಾನುಭಾವರು 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ' ಎಂಬುದಾಗಿ ಹಾಡಿ ಹೆಂಗಸರನ್ನು ದೇವತ್ವಕ್ಕೇರಿಸಿ ಅವರ ಉತ್ಕರ್ಷಕ್ಕೆ ಕಾರಣರಾದರೋ ಆ ಮಹಾನುಭಾವರ ಸಂತಾನದ ಮಹಾ ಮಹಾ ಪ್ರಭೃತಿಗಳೇ ತಮ್ಮ ಸ್ವಾರ್ಥಸಾಧನೆಗಾಗಿ ಸ್ತ್ರೀಯರ ಸ್ಥಾನಮಾನಗಳನ್ನು ಅಂಧ ಕೂಪದಲ್ಲಿಳಿಸಿ ಅವರ ಅಪಕರ್ಷಕ್ಕೂ ತಮ್ಮ ಅರ್ಥಾತ್ ರಾಷ್ಟ್ರದ ವಿನಾಶಕ್ಕೂ ಕಾರಣರಾದರು.

ಈ ಬಗೆಯ ರಾಷ್ಟ್ರವಿನಾಶಕಾರಕವಾದ ಅನೇಕ ದುರಾಚಾರ ದುರ್ವಿಚಾರಗಳ ನಿವಾರಣೆ ಮತ್ತು ಜನಾಂಗದ ಉನ್ನತಿಗೆ ಅವಶ್ಯಕವಾದ ಸದಾಚಾರ ಸುವಿಚಾರಗಳ ಪ್ರಸಾರಣೆಗಳನ್ನು ಮಾಡುವದಕ್ಕಾಗಿಯೇ ಮಹಾನುಭಾವರಾದ ಶ್ರೀಬಸವಣ್ಣನವರು ಎಲ್ಲ ವಿಚಾರಗಳಲ್ಲಿಯೂ ಶ್ರೇಷ್ಠತರವಾದ ಕ್ರಾಂತಿಯನ್ನುಂಟು ಮಾಡಿದ ತಮ್ಮ ದಿವ್ಯ ಭವ್ಯ ಮತಧರ್ಮವನ್ನು ಸ್ಥಾಪಿಸಿದುದು.

ತತ್ಫಲವಾಗಿಯೇ ಹಿಂದುಸ್ಥಾನದ ಇತರ ಮತಗಳಲ್ಲಿ ಸಹಸ್ರ ಸಹಸ್ರ ವರ್ಷಗಳ ಪೂರ್ವದಲ್ಲಿ ಅಸಂಖ್ಯಾತ ವಿದುಷಿಯರೂ, ಯೋಗಿಣಿಯರೂ, ಬ್ರಹ್ಮವಾದಿನಿಯರೂ ಇದ್ದು, ಇಂದು ಅದೇ ಮತಗಳಲ್ಲಿ ಯೋಗಿನಿಯರನ್ನೂ ಬ್ರಹ್ಮವಾದಿನಿಯರನ್ನೂ ಕಾಣಬೇಕಾದರೆ ನೂರೆಂಟು ಹಿಲಾಲುಗಳ ಬೆಳಕಿನ ಸಹಾಯವನ್ನು ಪಡೆಯುವಂಥ ಸ್ಥಿತಿಯು ಬಂದೊದಗಿದ್ದರೂ ಸಹ, ಶ್ರೀ ಬಸವಣ್ಣನವರ ಮತ (ಅರ್ಥಾತ್ ವೀರಶೈವ ಜನಾಂಗ) ದಲ್ಲಿ ಮಾತ್ರ ಇಂದಿಗೂ ಬ್ರಹ್ಮಚಾರಿಣಿಯರಾಗಿ, ಪರಮ ಶಿವಾನುಭಾವೆಯರಾಗಿ ಸಮಾಜದ ಗೌರವ ಆದರ ಪೂಜ್ಯತೆಗಳಿಗೆ ಪಾತ್ರರಾಗಿ ಜೀವಿಸುತ್ತಿರುವ ಅಸಂಖ್ಯಾತ ಮಹಿಳೆಯರನ್ನು ನಿರಾಯಾಸವಾಗಿ ದರ್ಶನ ಮಾಡಿ ಧನ್ಯರಾಗಬಹುದು.

. ಸ್ವತಂತ್ರೋದ್ಯೋಗಿಗಳಾಗಿ ಸಮಾಜದಲ್ಲಿ ಗೌರವವೂ ಗಣ್ಯವೂ ಆದ ಸ್ಥಾನಮಾನಗಳಿಂದ ಬಾಳುತ್ತಿರುವ ಮಹಿಳೆಯರನ್ನು ಬೇಕಾದಷ್ಟು ಕಾಣಬಹುದು.

ಇನ್ನು ಧರ್ಮದೀಕ್ಷೆಯಂತೂ ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಎಲ್ಲರಿಗೂ ಒಂದೇವಿಧವಾಗಿ ನೆರವೇರುತ್ತದೆಂಬುದು ಸರ್ವಶ್ರುತ.

ಪತಿವಿಹೀನೆಯರಾದ ಸ್ತ್ರೀಯರೂ ಸ್ವತಂತ್ರೋದ್ಯೋಗಿಗಳಾಗಿ ಗೌರವದಿಂದ ಜೀವಿಸುತ್ತಿದ್ದಾರೆ. ಈ ಯಾವ ಯೋಗ್ಯ ಪದ್ಧತಿಗಳನ್ನು ವಿರೋಧಿಸುವ ಶಾಸ್ತ್ರ ವಾಕ್ಯಗಳಾಗಲಿ, ಪರಂಪರಾಪದ್ಧತಿ ಎಂಬುದಾಗಲಿ, ಈ ಮತದಲ್ಲಿಲ್ಲವಿಷ್ಟೇ ಅಲ್ಲ, ಸ್ವಾರ್ಥಸಾಧನೆಗಾಗಿಯಾದರೂ ಈ ಸಮಾಜಧರ್ಮಗಳನ್ನು ಬಹಿರಂಗವಾಗಿ ವಿರೋಧಿಸುವ ಧೈರ್ಯವೂ ಸಹ ಯಾರಲ್ಲಿಯೂ ಹುಟ್ಟುವ ಹಾಗಿಲ್ಲ.

ಈ ಇಪ್ಪತ್ತನೆಯ ಶತಮಾನದ ಯಾವ ಸಭ್ಯಸ್ತ್ರೀ ಜನಾಂಗವಾದರೂ ಇದಕ್ಕಿಂತಲೂ ಹೆಚ್ಚಿನ ಧಾರ್ಮಿಕ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ, ಉದ್ಯೋಗಸ್ವಾತಂತ್ರ್ಯ, ವಿವಾಹ ಸ್ವಾತಂತ್ರ್ಯಗಳನ್ನು ಅಪೇಕ್ಷಿಸುವರೇ?

ಹಾಗೆ ಅಪೇಕ್ಷಿಸುವುದಿಲ್ಲವೆಂಬುದೂ, ಇದಕ್ಕಿಂತಲೂ ಹೆಚ್ಚಿನ ಸ್ತ್ರೀಸ್ವಾತಂತ್ರ್ಯವೆಂಬುದಿಲ್ಲವೇ ಇಲ್ಲವೆಂಬುದೂ, ಶ್ರೀ ಕಪಟ್ರಾಳರಿಗೆ ತಿಳಿದಿದ್ದರೂ ಸಹ ಅದೇಕೆ ಶ್ರೀಬಸವಣ್ಣನವರು ಸ್ತ್ರೀಯರಿಗೆ ಸ್ವಾತಂತ್ರ್ಯವನ್ನುಂಟು ಮಾಡಿಕೊಡಲಿಲ್ಲವೆಂಬ ಆಕ್ಷೇಪಣಾಯುಕ್ತವಾದ ಲೇಖನವನ್ನು ಬರೆದರೋ ಅವರ ಉದ್ದೇಶವೇ ತಿಳಿಯದಾಗಿದೆ. ಇನ್ನಾದರೂ ಅವರು ಈಗಿನ ಅಭಿಪ್ರಾಯವನ್ನು ತಿದ್ದಿಕೊಂಡು ನಿಜದ ತಿಳಿವನ್ನು ಅಭಿವೃದ್ಧಿಗೊಳಿಸಿಕೊಳ್ಳಲೆಂದು ಹಾರೈಸಲಾಗಿದೆ.

---

# ಕೊಡಗು ದೇಶದ ಇತಿಹಾಸವು.

ಲೇಖಕರು:— ಶ್ರೀಯುತ ಸದಾಶಿವ ವೀರಭದ್ರಪ್ಪ ಹಂಜಿ ಎಂ. ಎ.

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು.)

ಮೇ ತಿಂಗಳ ೧೩ನೆಯ ತಾರೀಖಿನ ದಿವಸ ಇಂಗ್ಲಿಷ ಸೈನ್ಯದ ಕಮಾಂಡರ ಇನ್‌ಚೀಫನಾದ ಜನರಲ್ ಹ್ಯಾರೀಸನು ವೀರರಾಜನಿಗೆ ಟೀಪೂವಿನ ಒಂದು ಸ್ವಂತ ಕುದುರೆ ಒಂದು ಪಲ್ಲಕ್ಕಿ ಮತ್ತು ಅಂಬಾರಿಯನ್ನು ಕಾಣಿಕೆಯಾಗಿ ಕೊಟ್ಟನು. ಹಾಗೆಯೇ ಟೀಪೂವಿನ ಸಂಪೂರ್ಣ ನಾಶವಾಗುವ ವರೆಗೆ ಇಂಗ್ಲಿಷರು ಕೊಡಗು ದೇಶವನ್ನು ತಮ್ಮ ಕಡೆಗೇ ಇಟ್ಟುಕೊಂಡಿದ್ದರು. ಮತ್ತು ಮೊದಲಿನಂತೆ ಅವರ ಸ್ವಾಧೀನ ಮಾಡುವೆವೆಂದು ಅಭಿವಚನ ಕೊಟ್ಟಿದ್ದರು. ಟೀಪೂವಿಗೆ ಕೊಡತಕ್ಕ ಕಪ್ಪಕಾಣಿಕೆಯನ್ನು ವೀರರಾಜನು ಇಂಗ್ಲಿಷರಿಗೆ ಕೊಡುತ್ತಿದ್ದನು. ಆದರೆ ಟೀಪೂನನ್ನು ನಾಶಮಾಡಲಿಕ್ಕೆ ವೀರರಾಜನು ಸಹಾಯ ಮಾಡಿದ್ದರಿಂದ ಅವರು ಅದನ್ನು ತಕ್ಕೊಳ್ಳದೆ ತಿರುಗಿ ಕಳಿಸುತ್ತಿದ್ದರು. ಮತ್ತು ಆ ಕಪ್ಪಕಾಣಿಕೆಯ ಬದಲಾಗಿ ಒಂದು ಆನೆಯನ್ನು ಮಾತ್ರ ಪ್ರತಿವರ್ಷ ಅವನ ಕಡೆಯಿಂದ ತಕ್ಕೊಳ್ಳುತ್ತಿದ್ದರು. ಇತ್ತ ಇಂಗ್ಲಿಷರು ಟೀಪೂವಿನ ರಾಜ್ಯವನ್ನು ತಕ್ಕೊಂಡ ನಂತರ ಅದನ್ನು ವಿಭಾಗ ಮಾಡಿ ಕೆಲವು ಭಾಗವನ್ನು ಪೂರ್ವದ ಮೈಸೂರ ಅರಸನ ಮಕ್ಕಳಿಗೆ ಕೊಟ್ಟರು. ಮತ್ತು ಆ ರಾಜ್ಯದ ಕಾರಭಾರವನ್ನು ಪೂರ್ಣಯ್ಯನೆಂಬ ಬ್ರಾಹ್ಮಣನ ಕಡೆಗೆ ಕೊಟ್ಟರು. ಟೀಪೂನ ಸಂಗಡ ಯುದ್ಧ ಮಾಡಿದಾಗ ದೊರೆತ ರಾಜ್ಯವನ್ನು ಮತ್ತು ಕಣಿಕ ಸುಬ್ಬರಾಯನು ತಕ್ಕೊಂಡ ತುಳು ತಾಲೂಕನ್ನು ಬಿಟ್ಟುಕೊಡಬೇಕೆಂದು ಇಂಗ್ಲಿಷರು ವೀರರಾಜನಿಗೆ ಹೇಳಿದರು.

ವೀರರಾಜನು ಇಂಗ್ಲಿಷರ ಕಡುಹಗೆಯಾದ ಟೀಪೂನನ್ನು ನಾಶಮಾಡುವದಕ್ಕೆ ಅಂತಃಕರಣಪೂರ್ವಕವಾಗಿ ಸಹಾಯ ಮಾಡಲು ಆದರೆ ಆದೇ ಇಂಗ್ಲಿಷರು ಈಗ ತಮ್ಮ ಕಾರ್ಯವಾದ ನಂತರ ಪೂರ್ವದ ಉಪಕಾರವನ್ನು ಮರೆತು ತನ್ನ ಪರಾಕ್ರಮದಿಂದ ಸ್ವಾಧೀನ ಪಡಿಸಿಕೊಂಡ ಮೈಸೂರನ್ನು ಬೇಡುವರೆಂದು ಗೊತ್ತಾದ ಕೂಡಲೇ, ವೀರರಾ

ಜನು ಇಂಗ್ಲಿಷರು ತನಗೆ ಬಹಳೇ ಅಪಮಾನವನ್ನು ಮಾಡುವರೆಂದು ತಿಳಿದುಕೊಂಡನು. ಮುಂದೆ ಕೆಲವು ದಿವಸಗಳ ತರುವಾಯ ಅಲ್ಲಿಯ ಪ್ರತ್ಯೇಕ ರೆಸಿಡೆಂಟನನ್ನು ಕಡಿಮೆ ಮಾಡಿ ಅವನ ಎಲ್ಲ ಕಾರ್ಯಗಳನ್ನು ಮೈಸೂರಿನ ರೆಸಿಡೆಂಟನಾದ ಕರ್ನಲ ಕ್ಲೋಜ ಇವನ ಮುಖಾಂತರ ನಡಿಸಬೇಕೆಂದು ಠರಾವು ಮಾಡಿದರು. ಆಗಂತೂ ಅವನಿಗೆ ಅಪಮಾನವೆನಿಸಿ ಮನಸ್ಸಿಗೆ ಬಹಳೇ ಹಚ್ಚಿಕೊಂಡನು ಆದರೂ ಸಹ ವೀರರಾಜನು ಕಂಪನಿಯವರ ಮೇಲಿನ ಮೊದಲಿನ ಪ್ರೇಮವನ್ನು ಎಳ್ಳಷ್ಟಾದರೂ ಕಡಿಮೆಮಾಡಲಿಲ್ಲ. ೧೮೧೧ ರಲ್ಲಿ ವೀರರಾಜನಿಗೆ ಮೊದಲಿನ ರಾಣಿಯ ಹೊಟ್ಟೆಯಿಂದ ಹುಟ್ಟಿದ ರಾಜಕುಮಾರಿ ಕನ್ನೆಯ ವಿವಾಹವು ಸೋಡಿಯ ರಾಜನಾದ ಬಸವಲಿಂಗನ ಕೂಡ ಆಯಿತು. ವೀರರಾಜನು ಈ ಲಗ್ನದ ವೇಳೆಯಲ್ಲಿ ಗವರ್ನರ ಜನರಲ್ಲನಿಗೆ ಈ ಲಗ್ನದ ಉದ್ದೇಶವನ್ನೂ ಮತ್ತು ಸೋಡಿಯ ರಾಜನಿಗೆ ೧ ಲಕ್ಷ ರೂಪಾಯಿ ಜಹಾಗೀರು ರಾಜಕುಮಾಜಿಯ ಹೆಸರಿನಿಂದ ಕೊಟ್ಟ ಬಗ್ಗೆಯೂ ತಿಳಿಸಿದ್ದನು.

೧೮೦೪ ರಲ್ಲಿ ಕ್ಯಾಪ್ಟನ್ ಮೊಹನೀ ಇವನು ಮೆರ್ಕಾರಾ ಎಂಬಲ್ಲಿ ಬಂದನು. ಅವನು ಬರುವಾಗ ಗವರ್ನರ ಜನರಲ್ಲನ ಪತ್ರವನ್ನು ತಂದಿದ್ದನು. ಮತ್ತು ಅದರಲ್ಲಿ ಈ ಪ್ರಕಾರ ಬರೆದಿತ್ತು. "ವೀರರಾಜೇಂದ್ರನು ಟೀಪೂವಿನ ಸಂಗಡ ಆದ ಯುದ್ಧದಲ್ಲಿ ಇಂಗ್ಲಿಷರಿಗೆ ಸಹಾಯ ಮಾಡಿದ್ದರಿಂದ ಮಂಗಳೂರದ ಕಲೆಕ್ಟರನು ಕಾನಾರ ಪ್ರಾಂತದಲ್ಲಿಯ ೬ ಪರಗಣೆಗಳನ್ನು ಕೊಡತಕ್ಕದ್ದು. ಈ ಪ್ರಕಾರ ವೀರರಾಜೇಂದ್ರನಿಗೆ ದೊರೆತ ಪರಗಣೆಗಳ ಉತ್ಪನ್ನವು ೬೮೮೯೭ ಪಾಗೋಡಾ ಇತ್ತು. ಮತ್ತು ಅದೇ ವರ್ಷ ಕೊಡಗು ಮತ್ತು ಮೈಸೂರು ಇವುಗಳ ನಡುವಿನ ಸುಬ್ರಮ್ಮಣ್ಯ ಪ್ರದೇಶದ ಸರಹದ್ದಿನ ನಿಶ್ಚಯವು ಆಯಿತು. ೧೮೦೫ ರಲ್ಲಿ ಸೋಡಿಯ ರಾಜನಿಗೆ ಒಬ್ಬ ಪುತ್ರನು ಜನಿಸಿದನು. ಅವನ ಹೆಸರು ಸದಾಶಿವರಾಜನೆಂದು ಇಟ್ಟರು.

ಈ ವೇಳೆಯಲ್ಲಿ ವಿರರಾಜನಿಗೆ ತನ್ನ ರಾಜ್ಯದ ಮೇಲೆ ಸಂಪೂರ್ಣ ಸ್ವತಂತ್ರ ಅಧಿಕಾರವಿತ್ತು. ಅವನು ಮೈಸೂರಿನ ರೆಸಿಡೆಂಟ, ಮದ್ರಾಸದ ಗವರ್ನರನಾದ ಸರಜಾರ್ಜ ಬಾರ್ಲೊ ಮತ್ತು ಗವರ್ನರ ಜನರಲ್ಲನಾದ ಲಾರ್ಡ ಉಯಲ್ಯಮ ಬೆಂಟಿಂಕ, ಮಾರ್ಕ್ವಿಸ್ ವೆಲ್ಲಸ್ಲಿ ಮೊದಲಾದವರ ಕೂಡ ಒಳ್ಳೇ ಸ್ನೇಹದಿಂದ ನಡಕೊಳ್ಳುತ್ತಿದ್ದನು. ವೆಲ್ಲಸ್ಲಿಯು ಆತ



ನಿಗೆ ಒಂದು ಖಡ್ಗವನ್ನು ಕಾಣಿಕೆಯನ್ನಾಗಿ ಕೊಟ್ಟಿದ್ದನು. ಸೋಢಿಯ ರಾಣಿಯ ಹೊಟ್ಟೆಯಲ್ಲಿ ಮೊಮ್ಮಗನು ಜನಿಸಿದಾಗ ವೀರರಾಜನು ತನ್ನ ನೂತನ ಪತ್ನಿಯಾದ ಮಹಾದೇವಿ ರಾಣಿಯನ್ನು ಅತಿಶಯ ಪ್ರೀತಿಸುತ್ತಿದ್ದನು. ಅವಳ ಹೊಟ್ಟೆಯಿಂದ ಅವನಿಗೆ ಇಬ್ಬರು ಹೆಣ್ಣು ಮಕ್ಕಳು ಜನಿಸಿದರು. ಹೀಗೆಯೇ ಅವನು ಇದ್ದಿದ್ದರೆ ಅವನಿಗೆ ಹೆಚ್ಚು ಸುಲಭವು ಆಗುತ್ತಿತ್ತು. ಆದರೆ-ಅವನಿಗೆ ವಾರಸದಾರನಾದ ಮಗನು ಇದ್ದಿಲ್ಲ. ಆದುದರಿಂದ ಅವನು ತನ್ನ ಎಲ್ಲ ಆಪ್ತ ಇಷ್ಟರಿಗೆ ತೊಂದರೆ ಕೊಟ್ಟನು. ಮತ್ತು ತನ್ನ ಸಿಟ್ಟಿನ ಸ್ವಭಾವದನುಗುಣವಾಗಿ ಮರ್ಯಾದೆಗೆ ಸಲ್ಲದ ಕೃತಿಗಳನ್ನು ಮಾಡಿದನು. ಆದುದರಿಂದಲೇ ಅವನು ಮುಂದೆ ಅನೇಕ ಸಂಕಟಗಳನ್ನು ಅನುಭವಿಸಬೇಕಾಯಿತು. ತನಗೆ ಯಾರಾದರೂ ವಿಷ ಹಾಕಬಹುದೆಂದು ಅವನು ಪ್ರತಿದಿನ ಬಹಳ ವಿಚಾರದಿಂದ ಇರುತ್ತಿರುತ್ತಿನು. ಇದರ ಬಗ್ಗೆ ಆತನಿಗೆ ಯಾವಾಗಲೂ ಹೆದರಿಕೆಯಿತ್ತು. ಮತ್ತು ಅವನಿಗೆ ಭಯಂಕರ ಉನ್ಮಾದವಾದಾಗ ಯಾರಾದರೂ ವಿಷಹಾಕಿದರೋ ಏನೋ ಎಂಬದು ನಿಜವಾಗಿ ಹೇಳಲಿಕ್ಕೆ ಬರುವದಿಲ್ಲ. ೧೮೦೭ ರಲ್ಲಿ ಆತನು ತನ್ನ ಮನೆತನದ ಇತಿಹಾಸವನ್ನು ಬರೆಸಿದನು. ಮತ್ತು ಅದು ಈಗ್ಯೂ ಅದೆ. ಅದನ್ನು ಅಬರಕ್ರೊಂಬಿಯು ಇಂಗ್ಲಿಷದಲ್ಲಿ ಭಾಷಾಂತರ ಮಾಡಿದ್ದಾನೆ. ಅದರಲ್ಲಿ ಒಂದು ಕಡೆಗೆ ಹೀಗೆ ಅದೆ:—

೧೮೦೬ನೆಯ ಇಸವಿಯ ರಕ್ತಾಕ್ಷಿ ಸಂವತ್ಸರದ ಪೌಷ್ಯ ತಿಂಗಳ ಸಪ್ತಮಿಗೆ ಕ್ಯಾಪ್ಟನ್ ಮೋಹನನು ವೆಲಸ್ಲಿಯು ಕೊಟ್ಟ ಖಡ್ಗವನ್ನು ಅರಸನ ನಡುವಿಗೆ ಕಟ್ಟಿದನು. ಮಾಘ ಮಾಸದಲ್ಲಿ (೧೮೦೬ ಫೆಬ್ರುವರಿ) ಕ್ಯಾಪ್ಟನ್ ಮೋಹನನಿಗೆ ಮತ್ತು ಗವರ್ನರ ಜನರಲ್ಲನಿಗೆ ಹೀಗೆ ಹೇಳಲಿಕ್ಕೆ ತಿಳಿಸಿದನು. ೧೮೦೭ರ ಮೇ ತಿಂಗಳಲ್ಲಿ ಮಹಾದೇವಿ ರಾಣಿಯು ಮರಣ ಹೊಂದಿದಳು. ಅಂದಿನಿಂದ ವೀರರಾಜನ ದುಃಖವು ಪ್ರಾರಂಭವಾಯಿತು. "ನನ್ನ ಪತ್ನಿಗೆ ಯಾರೋ ಮಾಟ ಮಾಡಿ ಕೊಂದರು ಮತ್ತು ಅವರು ನನ್ನನ್ನು ಹೀಗೆ ಕೊಲ್ಲ ಬಹುದು." ಎಂದು ಅವನು ಚಿಂತಿಸುತ್ತಿದ್ದನು. ಆಗ ಕೊಡಗಿನಲ್ಲಿ ಒಂದು ರಾಜಕಾರಣವು ಘಟಿಸಿತು. ಮತ್ತು ಅದರಲ್ಲಿ ಅನೇಕ ಜನರು ಸಿಕ್ಕರು. ಅದು ರಾಜನಿಗೆ ತಿಳಿದ ಕೂಡಲೆ ಅವನು. ಒಂದೇ ಸವನೆ ರಕ್ತದ ಪ್ರವಾಹವನ್ನೇ ಹರಿಸಿ ಅವರೆಲ್ಲರನ್ನು ಮುರಿಬಡಿದನು. ರಾಜವಾಡೆಯಲ್ಲಿಯೇ ೩೦೦೦ ಕೊಡಗಿನ

ಜನರ ಕೊಲೆಯಾಯಿತು. ರಾಜನು ಸ್ವತಃ ೨೫ ಜನರನ್ನು ಕೊಂದು ಹಾಕಿದನು. ಈ ವೇಳೆಯಲ್ಲಿ ಅನೇಕ ಪ್ರಜೆಗಳ ನಾಶವಾಯಿತು. ನೋಡಿದಾಗೆಲ್ಲ ಅರಸನು ಬಹಳೇ ಚಿಂತಾಕ್ರಾಂತನಾಗಿದ್ದನು. ಮತ್ತು ನಡುನಡುವೆ ಆವೇಶದಲ್ಲಿ ಅತ್ಯಂತ ಕ್ರೂರ ಕೃತ್ಯಗಳನ್ನು ಮಾಡುತ್ತಿದ್ದನು ಅವನ ಮನಸ್ಸಿನಲ್ಲಿ ಒಂದೇ ಒಂದು ಉದ್ದೇಶವಿತ್ತು. "ಗವರ್ನರ ಜನರಲ್ಲರು ತನ್ನ ವಾರಸಾ ಪತ್ರಕ್ಕೆ ಒಪ್ಪಿಗೆ ಕೊಡಬೇಕು. ಅಂದರೆ ಮಕ್ಕಳ ವಿಷಯವಾಗಿ ನನ್ನ ಎಲ್ಲ ಚಿಂತೆಯು ಇಲ್ಲದಂತಾಗುವದು." ಎಂದು ಅವನು ವಿಚಾರ ಮಾಡುತ್ತಿದ್ದನು. ಅದನ್ನು ತಿಳಿದು ಅವನ ಮಾತಿಗೆ ಯಾರೂ ಲಕ್ಷ ಕೊಡುತ್ತಿದ್ದಿಲ್ಲ. ಆದರೆ ಮೈಸೂರಿನ ರೆಸಿಡೆಂಟನಾದ ಕ್ಲಾಜನು ಆತನ ನಾಲ್ವರು ರಾಜ ಪುತ್ರಿಯರ ರಕ್ಷಣೆಮಾಡುವದನ್ನು ಕೈಕೊಂಡಿದ್ದನು. ಮದ್ರಾಸ ಸರಕಾರದವರು ಆತನ ಮಗಳಾದ ದೇವಮ್ಮನ ಹೆಸರಿನಿಂದ ೧೮೭೦೦೦ ಪಾಗೋಟಾಗಳನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದರು. ಈಗ ವೀರರಾಜನಿಗೆ ಬಹುತರವಾಗಿ ಯಾವ ಚಿಂತೆಯೂ ಇದ್ದಿಲ್ಲ. ಆದರೂ ಆತನ ಮನಸ್ಸಿನ ಶಾಂತಿ ಸಮಾಧಾನಗಳು ಎಳ್ಳಷ್ಟೂ ಇದ್ದಿಲ್ಲ. ಆತನಿಗೆ ಅವನ ಬಂಧುಗಳಾದ ಅಪ್ಪಾರಾಜ ಮತ್ತು ಲಿಂಗರಾಜ ಇವರ ಭಯವು ಬಹಳವಿತ್ತು. ಒಂದು ದಿವಸ ಮುಂಜಾನೆ ಅವನು ಇಬ್ಬರು ಕೊಲೆಗಡಕರಿಗೆ ಅವರ ತಲೆಯನ್ನು ಕಡಿದುತರಬೇಕೆಂದು ಹೇಳಿದ್ದನು. ಮುಂದೆ ಕೆಲವು ಹೊತ್ತಿನ ಮೇಲೆ ಅವನಿಗೆ ಅಪ್ಪಾಜಿಯ ವಿಷಯವಾಗಿ ಕನಿಕರ ಹುಟ್ಟಿತು. ಲಿಂಗರಾಜನಂತೂ ಓಡಿಹೋದನು. ಹಾಗೆಯೇ ಒಂದು ದಿನ ಆವೇಶದಲ್ಲಿ ತನ್ನ ನಾಲ್ವರು ಮುಖ್ಯ ಕೆಲಸ ಮಾಡುವವರನ್ನು ತಲೆಹೊಡಿಸಿ ತರಬೇಕೆಂದು ಒಬ್ಬ ಸೇವಕನಿಗೆ ಅಜ್ಞೆಮಾಡಿದನು. ಮತ್ತು ಆ ಸೇವಕನು ಆ ಕೆಲಸವನ್ನು ಕೊನೆಗಾಣಿಸಿದನು. ಇತ್ತ ಮಹಾರಾಜನ ಸಿಟ್ಟು ಶಾಂತವಾದ ನಂತರ ತಾನು ಮಾಡಿದ ಅಜ್ಞೆಯ ಬಗ್ಗೆ ಅವನಿಗೆ ಬಹಳೇ ಕೆಡಕೆನಿಸಿತು. ಆದರೆ ಉಪಯೋಗವೇನು? ಯಾಕಂದರೆ ಆ ಕೆಲಸವೆಲ್ಲ ಪೂರ್ಣವಾಗಿತ್ತು.

ವೀರರಾಜೇಂದ್ರನಿಗೆ ತನ್ನ ಕೃತ್ಯವು ಬ್ರಿಟಿಶ್ ಸರಕಾರದವರಿಗೆ ತಿಳಿದಕೂಡಲೆ ತನಗೆ ಅಪಾರವಾದ ಹಾನಿಯು ತಟ್ಟುವದೆಂದು ಅವನಿಗೆ ಚನ್ನಾಗಿ ತಿಳಿದಿತ್ತು. ಆದುದರಿಂದ ಆತನು ತನ್ನ ಕೃತ್ಯದ ಬಗ್ಗೆ



ಪಶ್ಚಾತ್ತಾಪಪಟ್ಟು ಆತ್ಮಹತ್ಯವನ್ನು ಮಾಡಿಕೊಳ್ಳಲಿಕ್ಕೆ ಪ್ರಯತ್ನಪಟ್ಟನು. ಅದರಂತೆ ಅವನು ಒಂದುಸಾರೆ ವಿಷಪ್ರಾಶನ ಮಾಡಿದನು. ಈ ವೇಳೆಯಲ್ಲಿ ಡಾ. ಇಂಗಲ ಎಂಬವನು ನೆಟ್ಟಗೆ ಮಾಡಿದನು. ವೀರರಾಜನ ಕಡೆಯಿಂದ ಪ್ರತಿದಿವಸ ವರದಿಗಳು ಹೋಗುತ್ತಿದ್ದವು. ಕಂಪನಿಯುವರು ರಾಜನಿಗೆ ಆಶ್ವಾಸನ ಕೊಟ್ಟು "ನಿಮ್ಮ ಅಪರಾಧವನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳುತ್ತೇವೆ" ಎಂದು ಉತ್ತರ ಕಳಿಸುತ್ತಿದ್ದರು.

ವೀರರಾಜನಿಗೆ ಈ ಸ್ಥಿತಿಯುಂಟಾಗಲು ಜೀವನವು ಕ್ಷಣಿಕವೆಂದು ಅವನಿಗೆ ಅನಿಸಿ ತನ್ನ ವಾರಸಪತ್ರವನ್ನು ಸಿದ್ಧಮಾಡಿಟ್ಟನು. ಅದರಲ್ಲಿ ಕೆಳಗೆ ಹೇಳಿದಂತೆ ವಿವರವಿತ್ತು.

"ಎರಡನೆಯ ವಿವಾಹ ಮಾಡಿಕೊಂಡ ದಿನವೇ ಆ ಹೆಂಡತಿಯ ಹೊಟ್ಟೆಯಲ್ಲಿ ಹುಟ್ಟಿದ ಮಗನು ನನ್ನ ತರುವಾಯ ಪಟ್ಟಕ್ಕೆ ಕೂಡ್ರಬೇಕೆಂದು ನಿಶ್ಚಯಿಸಿದ್ದೆನು. ಆದರೆ ಈ ಎರಡನೆಯ ಹೆಂಡತಿಯಿಂದ ಇಬ್ಬರು ಹೆಣ್ಣುಮಕ್ಕಳು ಮಾತ್ರ ಜನಿಸಿದರು. ಇನ್ನು ಮೇಲಾದರೂ ಒಬ್ಬ ಮಗನು ಆಕೆಗೆ ಆದರೆ ಅವನಿಗೆ ಪಟ್ಟವು ಸಿಗಲಿಕ್ಕೇಬೇಕು. ಆದರೆ ಒಂದು ವೇಳೆ ದುರ್ದೈವದಿಂದ ಪುತ್ರಸಂತಾನವು ಆಗದಿದ್ದರೆ ನನ್ನ ವೇಶ್ಯಾಪುತ್ರರ ಪೈಕಿ ರಾಜಶೇಖರ, ಶಿಶುಶೇಖರ ಮತ್ತು ಚಂದ್ರಶೇಖರ ಇವರು ಪಟ್ಟಕ್ಕೆ ಬರಬೇಕು............ಇತ್ಯಾದಿ "

ಇದನ್ನು ಬರೆದಿಟ್ಟಮೇಲೆ ರಾಣಿಗೆ ಪುನಃ ಇಬ್ಬರು ಹೆಣ್ಣುಮಕ್ಕಳು ಹುಟ್ಟಿದರು. ಮತ್ತು ಕಲಿಯುಗದ ೪೯೦೯ನೆಯ ವರ್ಷ ಪ್ರಭವ ಸಂವತ್ಸರ ಜ್ಯೇಷ್ಠ ಶುದ್ಧ ೭ಕ್ಕೆ ಅವಳು ಮರಣಹೊಂದಿದಳು. ರಾಣಿಯ ಮರಣದಿಂದ ರಾಜನು ಗಂಡುಮಕ್ಕಳ ವಿಷಯವಾಗಿ ಸಂಪೂರ್ಣ ನಿರಾಶೆಯುಳ್ಳವನಾದನು. ಮತ್ತು ಒಂದು ವೇಳೆ ತನ್ನ ವೇಶ್ಯಾಪುತ್ರರು ಪಟ್ಟಕ್ಕೆ ಬಂದಮೇಲೆ ತನ್ನ ಧರ್ಮಪತ್ನಿಯ ನಾಲ್ವರು ಹೆಣ್ಣುಮಕ್ಕಳನ್ನು ನೆಟ್ಟಗೆ ನೋಡದೆ ಬಹಳ ತೊಂದರೆ ಕೊಡಬಹುದೆಂದು ವಿಚಾರವೂ ಬಂದು ಹಗಲಿರಳು ಚಿಂತೆ ಮಾಡಹತ್ತಿದನು. ಕೊನೆಗೆ ಹೀಗೆ ನಿಶ್ಚಯ ಮಾಡಿದನು. "ದೇವಮ್ಮಾಜಿ, ಮದನ್ನಾಯಿ, ರಾಜಮ್ಮಾಜಿ, ಮಹಾದೇವಮ್ಮಾಜಿ ಈ ನಾಲ್ವರು ಹೆಣ್ಣುಮಕ್ಕಳಲ್ಲಿ ಹಿರಿಯವಳ ಲಗ್ನ ಮಾಡಬೇಕು. ಮತ್ತು ಆಕೆಯ ಹೊಟ್ಟೆಯಿಂದ ಹುಟ್ಟಿದ ಮಗನಿಗೆ

ವೀರರಾಜೇಂದ್ರನೆಂದು ಹೆಸರಿಟ್ಟ ಇವನಿಗೆ ರಾಜಮುದ್ರೆ ಮತ್ತು ಪೆಲ್ಲಿ
ಸ್ಲಿಯ ಖಡ್ಗವು ಸಿಗಬೇಕು. ಮತ್ತು ತನ್ನ ತರುವಾಯ ರಾಜ್ಯಕ್ಕೆ
ಇವನೇ ಒಡೆಯನಾಗಬೇಕು. ಒಂದು ವೇಳೆ ಹಿರಿಯವಳಿಗೆ ಗಂಡು
ಮಗನಾಗದಿದ್ದರೆ ಕ್ರಮವಾಗಿ ಉಳಿದ ಹೆಣ್ಣುಮಕ್ಕಳ ಗಂಡುಮಗನಿಗೆ
ರಾಜ್ಯಸಿಗಬೇಕು. ಮತ್ತು ತನ್ನ ಧರ್ಮಪತ್ನಿಯು ಹೊಟ್ಟೆಯ ಹೆಣ್ಣು
ಮಕ್ಕಳ ವಂಶವು ಇರುವ ವರೆಗೆ ತನ್ನ ವೇಶ್ಯಾಪುತ್ರರಿಗೆ ಏನೂ ಸಿಗ
ತಕ್ಕದ್ದಲ್ಲ. ಒಂದುವೇಳೆ ಎಲ್ಲ ಹೆಣ್ಣುಮಕ್ಕಳ ವಂಶವು ನಿರ್ಮೂಲವಾ
ದರೆ ಮಾತ್ರ ಆ ಮೂರು ಮಂದಿ ಗಂಡುಮಕ್ಕಳಲ್ಲಿ ಯೋಗ್ಯವಿದ್ದವರಿಗೆ
ಪಟ್ಟವು ಸಿಗಬೇಕು." ಈ ಪ್ರಕಾರ ವೀರರಾಜೇಂದ್ರನು ತನ್ನ ಮನೆ
ತನದ ವ್ಯವಸ್ಥೆಯನ್ನು ಮಾಡಿದನು. ಮತ್ತು ಆ ಮೃತ್ಯುಪತ್ರದ ಕೊನೆಗೆ
"ನನ್ನ ಮನೆತನದ ಸಂರಕ್ಷಕರು ಇಂಗ್ಲಿಷ ಸರಕಾರದವರು ಇರುತ್ತಾರೆ.
ಮತ್ತು ಅವರು ನನ್ನ ಈ ಉದ್ದೇಶವನ್ನು ಈ ಮೃತ್ಯುಪತ್ರದ ಪ್ರಕಾರ
ಅಮಲಿನಲ್ಲಿ ತರಬಹುದು" ಹೀಗೆ ಹೇಳಿದ್ದನು.

ತನ್ನ ಈ ವಾರಸ ಪತ್ರದ ಸಂಗತಿಯು ತನ್ನ ಮಕ್ಕಳಿಗೆ ಗೊತ್ತಿ
ರಬೇಕೆಂದು ಅದರದೊಂದು ಪ್ರತಿಯನ್ನು ಮಾಡಿ ಅದರ ಮೇಲೆ ತನ್ನ
ಸಹಿಯನ್ನು ಮಾಡಿ ರಾಜಮುದ್ರೆಯನ್ನು ಒತ್ತಿ ಜವಾದಾರ ಖಾನೆ
ಯಲ್ಲಿ ಇಟ್ಟನು.

ಮೇಲಿನ ಈ ವಾರಸಪತ್ರದಿಂದ ತನ್ನ ಧರ್ಮಪತ್ನಿಯ ಬಗ್ಗೆ ಮತ್ತು
ಆಕೆಯ ನಾಲ್ವರು ಹೆಣ್ಣುಮಕ್ಕಳ ಮೇಲಿನ ಪ್ರೇಮವೂ, ತನ್ನ ತರುವಾಯ
ಮೊಮ್ಮಕ್ಕಳು ಪಟ್ಟಕ್ಕೆ ಬರಬೇಕೆಂಬ ಉತ್ಕಟೇಚ್ಛೆಯೂ, ವೇಶ್ಯಾಪುತ್ರ
ರಲ್ಲಿ ಯಾರಾದರೂ ಒಬ್ಬರು ಪಟ್ಟಕ್ಕೆ ಬಂದರೆ ತನ್ನ ಹೆಣ್ಣುಮಕ್ಕಳು
ಹೇಗೆ ಸುರಕ್ಷಿತವಾಗಿ ಇದ್ದಾರು ಎಂಬ ಚಿಂತೆಯೂ ಮತ್ತು ಇಂಗ್ಲಿಷ
ಸರಕಾರದವರ ಮೇಲಿನ ಪೂರ್ಣ ನಂಬಿಗೆಯೂ ಅರಸನವು ಎಷ್ಟು
ಉತ್ಕಟವಿದ್ದವೆಂದು ಸ್ಪಷ್ಟವಾಗಿ ಕಂಡುಬರುತ್ತದೆ.

ಎಷ್ಟು ಉಪಚಾರ ಮಾಡಿದರೂ ಅರಸನ ಮನಸ್ಸಿಗೆ ಸ್ವಲ್ಪಾದರೂ
ಸಮಾಧಾನವಿದ್ದಿಲ್ಲ. ಆದರೆ ದಿನದಿನಕ್ಕೆ ಕ್ಷೀಣವಾಗುತ್ತ ಹೋಗಿ ೧೮೦೯
ರಲ್ಲಿ ಸ್ವರ್ಗಸ್ಥನಾದನು. ಆತನ ಅಳಿಯನಾದ ಸೋಡಿಯ ರಾಜನ ಮೇಲೆ
ಬಹಳ ಪ್ರೇಮವಿದ್ದುದರಿಂದ ದೇವಮ್ಮಾಜಿಯು ಚಿಕ್ಕವಳಿರುವಾಗಲೇ



ಅವನನ್ನು ದಿವಾಣನ ಕೆಲಸಕ್ಕೆ ನಿಯಮಿಸಿದ್ದನು. ಜೂನ ೯ಕ್ಕೆ ಆತನು
ತನ್ನ ಹೆಣ್ಣುಮಕ್ಕಳನ್ನು ಕರೆಸಿ ಅವರ ಕೈಯ್ಯಲ್ಲಿ ರಾಜ್ಯದ ಮೋಹರು
ಕೊಟ್ಟು ಪ್ರಾಣವನ್ನು ಬಿಟ್ಟನು.

ವೀರರಾಜನ ತಮ್ಮನಾದ ಲಿಂಗರಾಜನು ಬಹಳ ಧೂರ್ತನೂ
ಕಪಟಿಯೂ ಇದ್ದನು. ವೀರರಾಜನ ಮರಣದ ತರುವಾಯ ಅವನು
ಸಾವಕಾಶವಾಗಿ ರಾಜ್ಯಕಾರಭಾರವನ್ನು ತನ್ನ ಕೈಯಲ್ಲಿ ತಕ್ಕೊಂಡನು.
ಲಿಂಗರಾಜನ ಪ್ರಭಾವವು ಬೆಳೆಯುತ್ತ ನಡೆದಂತೆ ಸೋಡಿಯ ರಾಜನು
ಆತನಿಗೆ ಹೆದರಹತ್ತಿದನು. ಲಿಂಗರಾಜನು ಆತನಿಗೆ ೧ ಲಕ್ಷ ರೂಪಾಯಿ
ಗಳನ್ನು ಕೊಟ್ಟನು. ಮತ್ತು ಕಾರಸ್ಥಾನ ಮಾಡಿ ತನ್ನ ಸ್ವಾರ್ಥ ಸಾಧಿ
ಸುವದಕ್ಕಾಗಿ ಬ್ರಿಟಿಶ ಸರಕಾರದವರ ಅನುಮತಿಯನ್ನು ಪಡೆಯಲಿಚ್ಛಿ
ಸಿದನು. ಆದುದರಿಂದ ಅವನು ಬ್ರಿಟಿಶ ಸರಕಾರದವರ ಅನುಮತಿಯನ್ನು
ಪಡೆಯಲಿಕ್ಕೆ ಯುಕ್ತಿಗಳನ್ನು ಹಾಕಿ ಪ್ರಯತ್ನಪಟ್ಟನು. ಕೊಡಗು ಸಿಂಹಾ
ಸನದ ಮೇಲೆ ರಾಣೀ ದೇವಮ್ಮಾಜಿಯು ಕೂತಿದ್ದಳು. ಮತ್ತು ಇದು
ಬ್ರಿಟಿಶರಿಗೆ ಮಾನ್ಯವಿತ್ತು. ಈ ಸಂಗತಿಯು ೧೮೦೯ನೆಯ ಇಸವಿಯ
ಎಪ್ರಿಲ ತಿಂಗಳ ಎರಡನೆಯ ತಾರೀಖಿನ ದಿವಸ ಮಾರ್ಕ್ವಿಸ ಆಫ್
ಹೇಸ್ಟಿಂಗ್ಸನು ಬರೆದ ಪತ್ರದ ಮೇಲಿಂದ ಸಿದ್ಧವಾಗುತ್ತದೆ. ಆಗ ಲಿಂಗ
ರಾಜನು ೧೮೦ರ ಪೂರ್ವದಲ್ಲಿ ಅವನು ಕೊಡಗಿನ ಸಿಂಹಾಸನದ ರಾಣಿಯ
ಪ್ರತಿನಿಧಿಯ ಮತ್ತು ಸಂರಕ್ಷಣದ ಕಾರ್ಯವನ್ನು ಸ್ವೀಕರಿಸಿದನು. ೧೮೧೧
ರಲ್ಲಿ ಲಿಂಗರಾಜನು ಫೋರ್ಟ ಸೇಂಟ ಜಾರ್ಜದ ಸರಕಾರದವರಿಗೆ
ಕೊಡಗು ಸಂಸ್ಥಾನದ ಎಲ್ಲ ಕಾರಭಾರವನ್ನು ತನ್ನ ಹೆಸರಿನಿಂದಲೇ
ನಡಿಸುತ್ತಿರುವೆನೆಂದು ತಿಳಿಸಿದನು. ಕೊಡಗು ದೇಶದ ಧರ್ಮಶಾಸ್ತ್ರ
ಮತ್ತು ಶಿವಾಚಾರದ ಪ್ರಕಾರ ಸ್ತ್ರೀಯರಿಗೆ ವಾರಸದ ಯಾವ ಹಕ್ಕೂ
ಇಲ್ಲೆಂದು ರೆಸಿಡೆಂಟನ ಅಭಿಪ್ರಾಯವಿತ್ತು. (ಆದರೆ ನಿಜವಾಗಿ ಇಕ್ಕೇ
ರಿಯಲ್ಲಿ ಪೂರ್ವದಲ್ಲಿ ಅನೇಕ ರಾಣಿಯರು ಪಟ್ಟಕ್ಕೆ ಬಂದಿದ್ದರು. ಮತ್ತು
ಕೊಡಗು ಪ್ರಾಂತವು ಇಕ್ಕೇರಿಯ ಒಂದು ಭಾಗವಾಗಿತ್ತು.) ರಾಣಿಯು
ವಯಸ್ಸಿಗೆ ಬಂದಮೇಲೆ ಇದನ್ನು ವಿಚಾರ ಮಾಡೋಣ ಎಂದು ಮರಿಷ್ಕ
ಸರಕಾರದವರು ಮುಂದೆ ಹಾಕಹತ್ತಿದರು. ಈ ಸಮಯದಲ್ಲಿ ಲಿಂಗ
ರಾಜನ ಆಡಳಿತಕ್ಕೆ ಯಾರೂ ವಿರುದ್ಧವಾಗಲಿಲ್ಲ. ದೇವಮ್ಮಾಜಿಯ
ತಂದೆಯು ಆಕೆಯ ಹೆಸರಿನಿಂದ ಮುಂಬಯಿ ಸರಕಾರದವರ ಕಡೆಗೆ

ಇಟ್ಟ ೩ ಲಕ್ಷ ರೂಪಾಯಿಗಳನ್ನು ಲಿಂಗರಾಜನು ಬ್ರಿಟಿಶ ಸರಕಾರದವರ ಕಡೆಗೆ ಬೇಡಿದನು. ಆದರೆ ಲಿಂಗರಾಜನು ದಿವಾಣಿ ಕೋರ್ಟಿನಿಂದ ಹಣವು ತನ್ನದು ಎಂದು ಸಿದ್ಧಮಾಡಿಕೊಡದ ಹೊರತು ಅವನಿಗೆ ಅದು ಸಿಗುವದಿಲ್ಲೆಂದು ಬ್ರಿಟಿಶರು ಹೇಳಿದರು. ಹೀಗೆ ಉತ್ತರ ದೊರೆತ ಮೇಲೆ ಅದರ ಬಗ್ಗೆ ಅವನು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಆದರೆ ಕೆಲವು ದಿವಸಗಳ ತರುವಾಯ ಮುದ್ರಾಸ ಸರಕಾರದವರು ಆತನ ಬೇಡಿಕೆಗೆ ಒಪ್ಪಿಗೆ ಕೊಟ್ಟರು. ಅವರು ದೇವಮ್ಮಾಜಿಯು ಹೆಸರಿನ ೫॥ ಲಕ್ಷ ರೂಪಾಯಿಗಳನ್ನು ಮಿ. ಮಿನಿ. ಎಂಡ ಕೊ ಇದರ ಮುಖಾಂತರ ಕೊಡುವದಕ್ಕೆ ಒಪ್ಪಿಕೊಂಡು ೧೮೧೧ರಲ್ಲಿ ಲಿಂಗರಾಜನ ಕಾರ್ಯವು ಸಾಧ್ಯವಾಯಿತು. ಆದರೂ ಅವನಿಗೆ ಸಮಾಧಾನವಿದ್ದಿಲ್ಲ. ಬ್ರಿಟಿಶ ಸರಕಾರದವರು ಬಲಾಢ್ಯರಾಗಿರುವರೆಂದು ಅವನಿಗೆ ಅನಿಸಿತು. ಮರಿಷ್ಟ ಸರಕಾರದವರು ತಮ್ಮ ಠರಾವಿನಲ್ಲಿ ಬದಲು ಮಾಡಬಹುದೆಂದು ಅವನಿಗೆ ಸಂಶಯಬಂದಿತು. ಆದುದರಿಂದ ಅವನು ತನ್ನ ರಾಜ್ಯದೊಳಗಿನ ಮತ್ತು ಸಮೀಪದ ಕಂಪನಿಯ ರಾಜ್ಯದೊಳಗಿನ ಜನರ ಹೋಗಬರುವಿಕೆಯನ್ನು ಪೂರ್ಣ ಕಟ್ಟು ಮಾಡಿದನು.

ಅವನು ಸರಹದ್ದಿನ ರಕ್ಷಣೆಯನ್ನು ಉತ್ತಮರೀತಿಯಿಂದ ಇಟ್ಟಿದ್ದನು. ಮತ್ತು ರಾಜಾಜ್ಞೆಯಿಲ್ಲದೆ ರಾಜ್ಯದಲ್ಲಿ ಪ್ರವೇಶಮಾಡುವವರಿಗೆ ಪರವಾನಗಿಯಿದ್ದಿಲ್ಲ. ಯುರೋಪಿಯನ್ ಮೊದಲಾದ ಜನರ ಕೂಡ ಬಹಳ ಉದ್ಧಟತನದಿಂದ ವರ್ತಿಸಹತ್ತಿದನು. ಅವರ ಮತ್ತು ಕೊಡಗು ಜನರ ವ್ಯವಹಾರವನ್ನು ಬಂದುಮಾಡಿಬಿಟ್ಟನು.

ಮೊದಲು ಲಿಂಗರಾಜನ ಮೇಲೆ ದಿವಾಣ ಕುಶರಿ ಅಪ್ಪನ ದರ್ಪವು ಬಹಳವಿತ್ತು. ಈ ದಿವಾಣನ ಯುಕ್ತಿಗಳಿಂದಲೇ ಲಿಂಗರಾಜನ ದೊಡ್ಡ ದೊಡ್ಡ ಕಾರ್ಯಗಳು ಸಾಧಿಸಿದವು. ರಾಜನ ಬಲವು ಹೆಚ್ಚಿದ ಹಾಗೆ ಆತನ ಕೈಯಲ್ಲಿ ಅನಿಯಂತ್ರಿತ ಅಧಿಕಾರವು ಬಂದಿತು. ಆಗ ನಿಸ್ಪೃಹಿ ದಿವಾಣನಿಗೂ ಮತ್ತು ರಾಜನಿಗೂ ಹೇಗೆ ಕೂಡಿ ನಡೆಯಬೇಕು? ಒಂದು ದಿನ ಆ ದಿವಾಣನ ಮೇಲೆ ವಿಶ್ವಾಸಘಾತಕ ಕೃತಿಯ ಒಂದು ಆರೋಪವನ್ನು ಹೊರಿಸಿ ಅವನನ್ನು ಮತ್ತು ಅವನ ಮಿತ್ರ ಜನರನ್ನು ತೊಂದರೆ ಕೊಟ್ಟು ಕೊಂದುಹಾಕಿದನು. ಅವರಲ್ಲಿ ಕೆಲವರಿಗೆ ಮೆಕಾರ ಸಮೀಪದ ಅರಣ್ಯದಲ್ಲಿ ಅವರ ಎದೆಗೆ ಮೊಳೆಬಡೆದು ಗಿಡಗಳಿಗೆ ತೂಗಹಾಕಿದನು.



ಮತ್ತು ಅವರ ಆಪ್ತ ಇಷ್ಟರನ್ನೂ ದೊಡ್ಡ ಅಧಿಕಾರಸ್ಥರನ್ನೂ ನಾಶ ಮಾಡಿದನು.

೧೮೨೦ರಲ್ಲಿ ಲಿಂಗರಾಜನು ತೀರಿಕೊಂಡನು. ಆಗ ಅವನ ವಯಸ್ಸು ೪೫ ಇತ್ತು. ಮತ್ತು ಅವನು ೧೧ ವರ್ಷ ರಾಜ್ಯವಾಳಿದನು. ಆತನ ಹಿರೀ ಅಣ್ಣನೂ ಸಹ ೪೫ನೆಯ ವಯಸ್ಸಿನಲ್ಲಿಯೇ ತೀರಿಕೊಂಡಿದ್ದನು.

ವೀರರಾಜೇಂದ್ರನಂತೆ ಇವನಿಗೂ ಯಾರಾದರೂ ತನಗೆ ವಿಷ ಹಾಕಿ ಕೊಲ್ಲಬಹುದೆಂಬ ಸಂಶಯವು ಯಾವಾಗಲೂ ಇತ್ತು. ನಿಜವಾಗಿ ನೋಡಿದರೆ ಹೀಗೆ ಸಂಶಯ ಬರುವದು ಸ್ವಾಭಾವಿಕವಾಗಿತ್ತು. ಆದಕಾರಣ ಎಲ್ಲ ಜನರು ಒಳಗಿಂದೊಳಗೆ ಇವನನ್ನು ದ್ವೇಷಿಸುತ್ತಿದ್ದರು. ಮತ್ತು ಯಾರಾದರೂ ಅವನಿಗೆ ವಿಷ ಪ್ರಯೋಗವನ್ನು ಮಾಡಿದ್ದರೂ ಮಾಡಿರಬಹುದು. ಕೊಡಗಿನಲ್ಲಿ ವಿಷಪ್ರಯೋಗದ ಕಾರ್ಯಗಳು ಮೊದಲಿಂದ ಮೇಲೆ ಜರಗುತ್ತವೆ. ಮರಕಾರದ ಸಮೀಪ ಒಂದು ಕೆರೆ ಅದೆ. ಅಲ್ಲಿ ವೀರರಾಜನು ಇದ್ದ ಕಾಲಕ್ಕೆ ವಿಷವನ್ನು ಕೂಡಿಸಿದ್ದರು. ಲಿಂಗರಾಜನ ರಾಣಿಯು ತಾನು ಪಟ್ಟಕ್ಕೆ ಬರಲು ಜನರು ಹೀಯಾಳಿಸುವರು. ಆದುದರಿಂದ ಅದನ್ನು ತಾಳುವದಕ್ಕಿಂತ ಸಾಯುವದೇ ಲೇಸೆಂದು ಪಚ್ಚರತ್ನದ ಚೂರ್ಣವನ್ನು ತಕ್ಕೊಂಡು ಪ್ರಾಣತ್ಯಾಗ ಮಾಡಿದಳು. ಲಿಂಗರಾಜನ ತರುವಾಯ ಆತನ ಕಾಲಕೀರ್ದಿಯಲ್ಲಿ ಹೊರಗೆ ಹಾಕಲ್ಪಟ್ಟವನನ್ನು ಪಟ್ಟಕ್ಕೆ ಕೂಡ್ರಿಸಿದನು. ಅದಕ್ಕೆ ಬ್ರಿಟಿಶ ಸರಕಾರದವರು ಸುಮ್ಮನೆ ಒಪ್ಪಿಕೊಂಡರು. ನಿಜವಾಗಿ ನೋಡಿದರೆ ಗವ್ಹರ್ನರ ಜನರಲ್ಲನೂ ವೀರರಾಜೇಂದ್ರನೂ ಮಾಡಿದ ಕಾಗದ ಪತ್ರಗಳಿಂದ ದೇವಮ್ಮಾಜಿಯು ಪಟ್ಟಕ್ಕೆ ಕೂಡ್ರಬೇಕಾಗಿತ್ತು. ಆದರೆ ಇತ್ತಕಡೆಗೆ ಅವರು ಲಕ್ಷ ಕೊಡಲಿಲ್ಲ. ಈ ಮೊದಲು ಮಾರ್ಕ್ವಿಸ್ ಆಫ್ ಹೇಸ್ಟಿಂಗ್ಸನು ದೇವಮ್ಮಾಜಿಯು ವಯಸ್ಸಿಗೆ ಬಂದಮೇಲೆ ಆಕೆಯ ವಾರಸಾದ ಬಗ್ಗೆ ವಿಚಾರ ಮಾಡುವೆನೆಂದು ಠರಾವಮಾಡಿದ್ದನು. ಆದರೆ ಅದು ಕಾಗದದಲ್ಲಿಯೇ ಉಳಿಯಿತು. ಹೊಸ ಅರಸನು ಪಟ್ಟಕ್ಕೆ ಬಂದನು. ಆತನ ವಯಸ್ಸು ೨೦ ಇತ್ತು. ಯುರೋಪಿಯನ್ ವಿದ್ವಜ್ಜನರ ಮತದಂತೆ ಆತನಿಗೆ ಬಹಳ ಸ್ವಲ್ಪ ಶಿಕ್ಷಣವು ಸಿಕ್ಕಿತ್ತು. ಈತನು ಪಟ್ಟಕ್ಕೆ ಬಂದ ಕೂಡಲೆ ಅನಿಯಂತ್ರಿತ ರಾಜರ ನಿಯಮದ ಪ್ರಕಾರ ಮನಸ್ಸಿಗೆ ಬಂದಂತೆ ಕಾರಭಾರ ಮಾಡಿದನು. ಕೂಡಲೆ ಅನೇಕ ಜನರು ಆತನನ್ನು ಕೂಡಿದರು. ಲಿಂಗ

ರಾಜನಲ್ಲಿದ್ದ ಧೂರ್ತತನವು ಇವನಲ್ಲಿ ಎಳ್ಳಷ್ಟೂ ಇದ್ದಿಲ್ಲ. ಆತನ ಹೊಸ ಮಂಡಲದಲ್ಲಿ ದಿವಾಣನಾದ ಕುಂತಬಸವನು ಪ್ರಮುಖನಾಗಿದ್ದನು. ರಾಜನ ಪ್ರತಿಯೊಂದು ಮಾತಿನಲ್ಲಿ ಇವನು ಮುಖ್ಯ ಸಲ್ಲಾಗಾರನಾಗಿದ್ದನು. ಈತನ ಸಹಾಯದಿಂದ ರಾಜ್ಯಭಾರ ಮಾಡುತ್ತಿರಲು ಸ್ವಲ್ಪ ದಿನಗಳಲ್ಲಿಯೇ ಆತನ ಸರದಾರರು ಮೊದಲಾದವರೆಲ್ಲರೂ ಅವನನ್ನು ತಿರಸ್ಕರಿಸಹತ್ತಿದರು. ಮತ್ತು ಬ್ರಿಟಿಷರಿಗೆ ಅಸಂತೋಷವಾದ್ದರಿಂದ ಮೊದಲಿನ ಪ್ರೇಮಭಾವವು ಉಳಿಯಲಿಲ್ಲ. ಕೂಡಲೆ ಆತನ ಸ್ವಾತಂತ್ರ್ಯವು ಇಲ್ಲದಂತಾಯಿತು. ಈ ರಾಜನು ವಿಷಯ ಸುಖಕ್ಕೆ ಮೆಚ್ಚಿದವನೂ, ತಂದೆಗಿಂತ ಹೆಚ್ಚು ಕ್ರೂರನೂ ಆಗಿದ್ದನು. ಪಟ್ಟಕ್ಕೆ ಕೂತ ಕ್ಷಣದಲ್ಲಿಯೇ ತನ್ನ ತಂದೆಯು ಜೀವಂತನಿರುವಾಗಲೇ ತನಗೆ ಬೇಡಾದ ಜನರನ್ನು ಹಿಡಿದು ಅವರಿಗೆ ಶಿಕ್ಷೆಯನ್ನು ವಿಧಿಸಿದನು. ಮತ್ತು ತನಗೆ ಸಂಬಂಧಿಸಿದ ಅನೇಕ ಪುರುಷರ ವಧೆಯನ್ನು ಮಾಡಿಸಿದನು. ಹೀಗೆ ಮಾಡುವದರಿಂದ ತನ್ನ ರಾಜ್ಯದ ಒಡೆತನಕ್ಕೆ ಯಾರೂ ಅಡ್ಡಿಯಾಗುವದಿಲ್ಲೆಂದು ತಿಳಿದಿದ್ದನು. ಒಮ್ಮೆ ಆತನಿಗೆ ಮೈಸೂರಿನ ರೆಸಿಡೆಂಟರು "ನಿಮ್ಮ ಕುಟುಂಬದಲ್ಲಿ ಎಷ್ಟು ಜನರು ಇರುವರು." ಎಂದು ಪ್ರಶ್ನೆ ಕೇಳಲು ಆತನು ನನ್ನ ಹೊರತು ಯಾರೂ ಇಲ್ಲ" ಎಂದು ಉತ್ತರ ಕೊಟ್ಟನು. ಇದರ ಮೇಲಿಂದ ಆತನ ಉದ್ದೇಶವು ಸ್ಪಷ್ಟವಾಗಿ ಕಂಡು ಬರುತ್ತದೆ.

ಒಂದು ಸಾರೆ ಚೆನ್ನವೀರನೆಂಬ ಅರಸನ ಸಂಬಂಧಿಕನು ೧೩೮೪ರಲ್ಲಿ ತನ್ನ ಕುಟುಂಬ ಸಹಿತ ಮೈಸೂರ ಸಂಸ್ಥಾನಕ್ಕೆ ಓಡಿಹೋಗಿದ್ದನು. ಆಗ ಕೂಡಲೆ ವೀರರಾಜನು ರೆಸಿಡೆಂಟನಾದ ಕೋಲನಿಗೆ "ಆ ಮನುಷ್ಯನು ಕೊಡಗು ದೇಶದ ಒಕ್ಕಲಿಗನಿದ್ದು ಕೆಲವು ಕಾರಣಗಳ ಮೂಲಕ ಮೈಸೂರ ಪ್ರಾಂತಕ್ಕೆ ಓಡಿಹೋಗಿರುವನು. ಆದುದರಿಂದ ಅವನನ್ನು ಹಿಡಿದು ನಮ್ಮ ಸ್ವಾಧೀನ ಮಾಡತಕ್ಕದ್ದು. ಕೋಲನು ಆದಕ್ಕೆ ಒಪ್ಪಿಕೊಂಡು ಚೆನ್ನವೀರನನ್ನು ಪೆರಿಪಟ್ಟಣದಲ್ಲಿ ಹಿಡಿದು ಆತನನ್ನು ಕೊಡಗು ದೇಶದ ಪೋಲಿಸನ ಸ್ವಾಧೀನ ಮಾಡಿದನು. ರೆಸಿಡೆಂಟನು ರಾಜನಿಗೆ— "ಆ ಮನುಷ್ಯನ ಅಪರಾಧ ಮತ್ತು ಶಿಕ್ಷೆ ಇವುಗಳನ್ನು ಮೊದಲು ನಮಗೆ ತಿಳಿಸಿ ಆ ಮೇಲೆ ಅವನಿಗೆ ಶಿಕ್ಷೆಯನ್ನು ವಿಧಿಸಬೇಕು" ಎಂದು ತಿಳಿಸಿದನು. ಕಾಂತಾಮುರ್ಣಾಣುದಲ್ಲಿ ೧ ದಿವಸದಲ್ಲಿ ೨೨ ಕುಟುಂಬಗ



ಳೊಳಗಿನ ಪುರುಷರ ವಧೆಯಾಯಿತು. ೧೮೩೩ರಲ್ಲಿ ಕೋಲನಿಂದ ಬಂದ ಕಾಸಮೇಜರನು ಕ್ಯಾಪ್ಟನ್ ಮಂಕನ ಮುಂಖಾಂತರ ಚೆನ್ನವೀರನ ವೃತ್ತಾಂತವನ್ನು ರಾಜನಿಗೆ ಕೇಳಲು "ಚನ್ನವೀರನೂ ಆತನ ಹೆಂಡತಿಯೂ ಮಾರಿಕಾ ಬೇನೆಯಿಂದ ತೀರಿಕೊಂಡರು." ಎಂದು ರಾಜನು ಹೇಳಿದನು. ರಾಜನು ತನ್ನ ರಾಜ್ಯದೊಳಗಿನ ಸುದ್ದಿಯು ಸರಕಾರದವರಿಗೆ ತಿಳಿಯಬಾರದೆಂದು ಒಳ್ಳೇ ವ್ಯವಸ್ಥೆಯನ್ನು ಇಟ್ಟರೂ ಸಹ ಕೊಡಗು ದೇಶದ ಅರಸನ ಕ್ರೂರಕೃತ್ಯಗಳು ಪ್ರತಿದಿನ ಮೈಸೂರಿಗೆ ಮತ್ತು ಬ್ರಿಟಿಷ ಸರಕಾರಕಾರದವರಿಗೆ ತಿಳಿಯುತ್ತಿದ್ದವು. ಬ್ರಿಟಿಶ ವರಿಷ್ಠ ಸರಕಾರದವರು ರೆಸಿಡೆಂಟನಿಗೆ "ರಾಜನ ಕಡೆಯ ಗಲ್ಲಿಗೇರಿಸಲ್ಪಡುವ ಪ್ರತಿಯೊಬ್ಬ ಮನುಷ್ಯನ ಯೋಗ್ಯ ವಿಚಾರಣೆಯಾಗಬೇಕು" ಎಂದು ಆಜ್ಞೆಯನ್ನು ಕಳಿಸಿದರು.

೧೮೩೨ರಲ್ಲಿ ಕೊಡಗಿನ ರಾಜನು ಸ್ತ್ರೀಯರದೊಂದು ಕುದುರೆ ಸವಾರರ ಸೈನ್ಯವನ್ನು ಸಿದ್ಧ ಮಾಡಿರುವನೆಂದು ಕಾಸಮೇಜರನಿಗೆ ತಿಳಿಯಿತು. ಆಗ ರೆಸಿಡೆಂಟನು ರಾಜನಿಗೆ ಹುಚ್ಚು ಹಿಡಿದಿದೆಯೆಂದು ಸುದ್ದಿಯನ್ನು ಹುಟ್ಟಿಸಿದನು. ಅದೇ ವರ್ಷ ಸಪ್ಟಂಬರ ತಿಂಗಳಲ್ಲಿ ರಾಜನ ತಂಗಿಯಾದ ದೇವಮ್ಮಾಜಿಯು ಮತ್ತು ಆಕೆಯ ಗಂಡನಾದ ಚೆನ್ನಬಸವ ಇವರಿಬ್ಬರೂ ಕೊಡಗು ದೇಶದಿಂದ ಓಡಿ ಹೋಗಿ ಎಲವಲದಲ್ಲಿ ಬಂದು ಕಂಪನೀ ಸರಕಾರದ ಆಶ್ರಯವನ್ನು ಬೇಡಹತ್ತಿದರು. ಚನ್ನಬಸವನು ಕಾಸಮೇಜರನಿಗೆ ಹೀಗೆ ಹೇಳಿದನು. "ನಾವು ನಮ್ಮ ಜೀವ ಉಳಿಸಿಕೊಳ್ಳಲಿಕ್ಕೆ ನಿಮ್ಮ ಆಶ್ರಯಕ್ಕೆ ಬಂದಿದ್ದೇವೆ." ರೆಸಿಡೆಂಟನು ಇವರಿಬ್ಬರಿಗೂ ಆಶ್ರಯಕೊಟ್ಟನು. ಇದು ವೀರರಾಜೇಂದ್ರನಿಗೆ ತಿಳಿದ ನಂತರ ಅವನು "ನಮ್ಮ ರಾಜ್ಯದೊಳಗಿಂದ ಓಡಿ ಹೋದ ಜನರನ್ನು ನಮ್ಮ ಸ್ವಾಧೀನ ಮಾಡಬೇಕು" ಎಂದು ತಿಳಿಸಿದನು. ಈ ಪ್ರಕಾರ ರಾಜನ ಪತ್ರ ಬಂದಮೇಲೆ ಈ ವಿಷಯವಾಗಿ ಹೇಗೆ ನಡೆಯಬೇಕೆಂಬದನ್ನು ಕಾಸಮೇಜರನು ವರಿಷ್ಠ ಸರಕಾರದವರಿಗೆ ಬರೆದು ಕೇಳಿದನು. ಅವರು ಯಾವ ಅಡ್ಡಿಯೂ ಇಲ್ಲದೆ ಚೆನ್ನಬಸವನಿಗೂ ಆತನ ರಾಣಿಗೂ ಆಶ್ರಯಕೊಡಬೇಕೆಂದು ಬರೆದರು. ಕೊಡಗು ಸಂಸ್ಥಾನದಲ್ಲಿ ದಬ್ಬಾಳಿಕೆಯ ಬೊಬ್ಬಾಟವು ಬಹಳವಾಯಿತು. ಇದಲ್ಲದೆ ಆತನ ದುಷ್ಟ ಕೃತಿಗಳ ಬಗ್ಗೆ ಅವನನ್ನು ಜನರು ತಿರಸ್ಕರಿಸಹತ್ತಿದರು. ದೇವಮ್ಮಾಜಿ

ಮತ್ತು ಚಿನ್ನಬಸವನು ಇವರು ತಮ್ಮ ರಾಜ್ಯಬಿಟ್ಟು ಬ್ರಿಟಿಶರ ಆಶ್ರಯ ವನ್ನು ಪಡೆದದ್ದನ್ನು ನೋಡಿ ಅವನ ಮನಸ್ಸು ಬಹಳ ಖಿನ್ನವಾಯಿತು. ಮತ್ತು ತರತರದ ವಿಚಾರಗಳನ್ನು ಮನಸ್ಸಿನಲ್ಲಿ ತರಹತ್ತಿದನು. ಕಾಸ ಮೇಜರನು ಎಲವಾಲದಲ್ಲಿ ಇರುತ್ತಿದ್ದನು. ಅವನನ್ನು ಯಾವದೇ ತರದ ಯುಕ್ತಿಯಿಂದ ಮಧ್ಯರಾತ್ರಿಯಲ್ಲಿ ಹಿಡಿದು ಮರಕಾರಾ ದುರ್ಗದಲ್ಲಿ ತಂದಿಡಬೇಕೆಂದು ಅವನು ಯುಕ್ತಿಹಾಕಿದನು. ಅದರಂತೆ ಚಿನ್ನಬಸ ವನು ಮತ್ತು ದೇವಮ್ಮಾಜಿಯು ಬೆಂಗಳೂರಿನಲ್ಲಿ ಇರುತ್ತಿದ್ದರು. ಅಲ್ಲಿ ಕೊಲೆಗಡಕರನ್ನು ಕಳುಹಿ ಅವರಿಂದ ಅವರ ವಧೆಯನ್ನು ಮಾಡಿಸಲಿಕ್ಕೆ ಯೋಜನೆ ಮಾಡಿದ್ದನು. ನಗರದ ಪಾಳೇಗಾರನಾದ ಸೂರ್ಯಪ್ಪನೆಂಬ ಬಂಡುಗಾರನನ್ನು ತನ್ನಲ್ಲಿ ಕೆಲಸಕ್ಕೆ ಇಟ್ಟುಕೊಂಡಿದ್ದನು. ಹಾಗೆಯೇ ಮೈಸೂರು ಅರಸನಿಗೆ ಒಮ್ಮಿಂದೊಮ್ಮೆ ಬಂಡಾಯವೆಬ್ಬಿಸಲಿಕ್ಕೆ ಹೇಳಿ ಕಳಿಸಿ ರಣಜಿತಸಿಂಗನಿಗೂ ಕೂಡ ಒಬ್ಬ ಗುಪ್ತಚಾರನನ್ನು ಕಳಿಸಿ ದ್ದನು. ಇಷ್ಟು ಕೃತಿಗಳನ್ನು ಮಾಡಿದರೂ ಬ್ರಿಟಿಶ ಸರಕಾರದವರು ಇತ್ತಕಡೆ ಕಣ್ಣೆತ್ತಿ ಸಹ ನೋಡಲಿಲ್ಲ.

೧೮೩೩ ರಲ್ಲಿ ಮದ್ರಾಸದ ಗವರ್ನರನಾದ ಸರ ಫ್ರೆಡರಿಕ ಅಡಮ್ಯಾಮ ಇವನು ವೀರರಾಜನಿಗೆ ಒಂದು ಪತ್ರವನ್ನು ಬರೆದನು. ಅದರಲ್ಲಿ ಈ ಪ್ರಕಾರ ಬರೆದಿದ್ದನು. 'ತಾವು ರಾಜ್ಯಕಾರಭಾರವನ್ನು ಉತ್ತಮ ರೀತಿಯಿಂತೆ ಮಾಡಬೇಕು. ಮತ್ತು ಇನ್ನು ಮೇಲೆ ಕೊಡಗು ಪ್ರಾಂತದೊಳಗೆ ಇಲ್ಲಿಯ ವರೆಗೆ ಮರಣದಂಡನೆ ಹೊಂದಿದ ಗುನ್ಹೆಗಾರರ ಬಗ್ಗೆ ಯೋಗ್ಯರೀತಿ ಯಿಂದ ವರದಿಯನ್ನು ಬ್ರಿಟಿಶ ಸರಕಾರದವರಿಗೆ ಕಳಿಸಿಕೊಡತಕ್ಕದ್ದು. ಈ ಪತ್ರವನ್ನು ಮಿ. ಕಾಸಮೇಜರ ಇವನು ಮರಕರಾದಲ್ಲಿ ರಾಜನಿಗೆ ಸ್ವತಃ ಭೆಟ್ಟಿಯಾಗಿ ಕೊಟ್ಟನು. ಮತ್ತು ಈ ವಿಷಯದ ಬಗ್ಗೆ ಅನೇಕ ಮಾತುಕತೆಗಳಾದವು. ಅರಸನು 'ನಾನು ಸ್ವತಂತ್ರನಿದ್ದೇನೆ. ನನಗೆ ಏನೂ ಕೇಳಲಿಕ್ಕೆ ನಿಮಗೆ ಸ್ವಲ್ಪಾದರೂ ಅಧಿಕಾರವಿಲ್ಲ.' ಎಂದು ಹೇಳಿದನು. ಇದನ್ನು ಕೇಳಿ ರೆಸಿಡೆಂಟನು ರಾಜನಿಗೆ ಹೀಗೆ ಹೇಳಿದನು. "ನೀವು ಪೂರ್ವದಲ್ಲಿ ಮೈಸೂರ ರಾಜನಿಗೆ ಕಪ್ಪು ಕಾಣಿಕೆಯನ್ನು ಕೊಡುತ್ತಿದ್ದಿರಿ. ಮತ್ತು ಅದರ ಬಗ್ಗೆ ಈಗ್ಯೂ ಒಂದು ಆನೆಯನ್ನು ಕಾಣಿಕೆಯಾಗಿ ಕೊಡುತ್ತೀರಿ" ಇದರ ಮೇಲಿಂದ ನಿಮ್ಮ ಮಾಂಡಲಿಕತ್ವವು ಸಿದ್ಧವಾ ಗುತ್ತದೆ ಎಂದು ಪ್ರತ್ಯುತ್ತರ ಕೊಟ್ಟನು. ಈ ಪ್ರಕಾರ ಕಾಸಮೇಜ



ರನು ಮಹಾರಾಜನಿಗೆ ಉಪದೇಶಪರವಾದ ಮಾತುಗಳನ್ನು ಹೇಳಿ ಕೊನೆಗೆ ಹೀಗೆ ಅಂದನು. "ನಾನು ಹೇಳಿದ ಹಾಗೆ ನೀವು ಕೇಳದಿದ್ದರೆ ನಿಮ್ಮ ಪರಿಣಾಮವು ನೆಟ್ಟಗಾಗಲಾರದು." ಇದನ್ನು ಕೇಳಿ ಅರಸನು "ರೆಸಿಡೆಂಟನು ತನ್ನ ಆಶೆಯನ್ನು ಭಂಗ ಮಾಡಿದನು. ಮತ್ತು ತಾನು ಇಲ್ಲಿಯ ವರೆಗೆ ಬ್ರಿಟಿಶರಿಗೆ ಎಷ್ಟೋ ವಿಶ್ವಾಸದ ಕಾರ್ಯಗಳನ್ನು ಮಾಡಿ ಕೊಟ್ಟಿರುವೆನು" ಎಂದು ಹೇಳಹತ್ತಿದನು. ಮುಂದೆ ಕೆಲವು ದಿವಸ ಗಳ ತರುವಾಯ ರೆಸಿಡೆಂಟನು ತಿರುಗಿ ಬಂದನು. ಆದರೂ ಕೊಡಗಿನ ಅವ್ಯವಸ್ಥೆಯು ಹಾಗೇ ನಡೆದಿತ್ತು. ಮಿ. ಕಾಸ ಮೇಜರನು ಮರಕಾ ರದ ಸುತ್ತುಮುತ್ತಲು ದೇಶೀ ಜನರ ಒಂದು ದಂಡನ್ನು ಇಡಬೇಕೆಂದು ಬರೆದಿದ್ದನು. ಆದರೂ ಸಹ ಬ್ರಿಟಿಶರು ಇತ್ತ ಕಡೆಗೆ ಲಕ್ಷ್ಯ ಕೊಡದೆ ಅನೇಕ ದಿವಸಗಳ ವರೆಗೆ ಕಣ್ಣೆತ್ತಿ ನೋಡಲಿಲ್ಲ. ರಾಜನಿಗೆ ಇಷ್ಟು ಉಪದೇಶ ಮಾಡಿದರೂ ಸಹ ಅವನು ಕೇಳಲಿಲ್ಲ. ಆಮೇಲೆ ಮಿ. ಗ್ರೀಮ ಇವನಿಗೆ ಮದ್ರಾಸದಿಂದ ಕೊಡಗಿಗೆ ಹೋಗಿ ರಾಜನಿಗೆ ನಾಲ್ಕು ಮಾತುಗಳನ್ನು ಹೇಳಿ ಇನ್ನೂ ಸಹ ಅವನಿಗೆ ಯುಕ್ತಿಯಿಂದ ನಮ್ರ ನಾಗಿ ನಡೆಯಲಿಕ್ಕೆ ಹೇಳಿದನು. ರಾಜನು ಗ್ರೀಮಸಾಹೇಬನ ಒಬ್ಬ ದೇಶೀ ಮನುಷ್ಯನನ್ನು ಹಿಡಿದು ಕೈದು ಮಾಡಿ ಗ್ರೀಮಸಾಹೇಬನ ಭೆಟ್ಟಿ ಯನ್ನು ಸಹ ತಕ್ಕೊಳ್ಳುವದಿಲ್ಲೆಂದು ಹೇಳಿದನು ಬ್ರಿಟಿಶ ಸರಕಾರದ ವರು ತನ್ನ ಸಂಬಂಧಿಕರನ್ನು ಬಿಟ್ಟು ತನ್ನ ಸ್ವಾಧೀನ ಮಾಡುವ ವರೆಗೆ ನಾನು ಆತನನ್ನು ಬಿಡುವದಿಲ್ಲೆಂದು ಹೇಳಿದನು. ಇದಲ್ಲದೆ ಅವನು ಫ್ರೆಡರಿಕ ಅಡ್ಯಾಮ ಮತ್ತು ಲಾರ್ಡ ಬೆಂಟಿಂಕ ಇವರಿಗೆ ಅಪಮಾನ ಮಾಡುವ ಪತ್ರ ಬರೆದು ಕಂಪನಿಯ ಸರಕಾರದವರ ಕೂಡ ಯುದ್ಧ ಮಾಡಲಿಕ್ಕೆ ನಿಶ್ಚಯಿಸಿದನು.

(ಮುಂದೆ ಸಾಗುವದು.)

# ಶಿವಶರಣರ ಕಾಲ.

(ರಾ. ಸಾ. ಫ. ಗು. ಹಳಕಟ್ಟಿ-ಬಿ. ಎ. ಎಲ್. ಎಲ್. ಬಿ. ವಿಜಾಪುರ.)

ಕರ್ನಾಟಕದಲ್ಲಿ ೧೧ನೇ ಶತಮಾನದಿಂದ ೧೩ನೇ ಶತಮಾನದ ವರೆಗೂ ವೀರಶೈವ ಧರ್ಮಕ್ಕೋಸ್ಕರ ಕಾಲಕಾಲಕ್ಕೆ ಚಳವಳಿಗಳಿದ್ದದ್ದು ಕಂಡುಬರುತ್ತಿದೆ. ಇವರಿಂದ ಇಲ್ಲಿಯ ಜನಸಮುದಾಯದಲ್ಲಿ ಧರ್ಮ ಜಾಗ್ರತಿ ಯುಂಟಾಗಲು ಅನೇಕ ಕಡೆಗೆ ಅಸಂಖ್ಯ ಶಿವಶರಣರುದ್ಭವಿಸಿದರು. ಇವರು ಬಸವನ ಕಾಲದಲ್ಲಷ್ಟೇ ಅಲ್ಲ, ಅವನಕಿಂತಲೂ ಮೊದಲೂ ಅವನ ತರುವಾಯದಲ್ಲೂ ಸಹ ಎಲ್ಲ ಕಡೆಗೆ ಉತ್ಪನ್ನವಾದದ್ದು ಕಂಡುಬರುತ್ತಿವೆ ಇವರಲ್ಲಿ ಬಸವನಕಿಂತಲೂ ಪೂರ್ವಿಕರು ಯಾರು. ಹಿಂದಿನವರು ಯಾರು, ಎಂಬುದನು, ನಿರ್ಧರಿಸಿದಲ್ಲಿ ವೀರಶೈವ ಧರ್ಮೇತಿಹಾಸದ ಮೇಲೆ ಮಹತ್ವದ ಪ್ರಕಾಶವು ಬೀಳದೆ ಇರದು.

ಶಿವಾನುಭವ ಸಂಪುಟ ೩ ಸಂಚಿಕೆ ೧೨ ಇದರಲ್ಲಿ ನಾವು ಏಕಾಂತದ ರಾಮಯ್ಯನ ಅಬ್ಬಲೂರ ಶಿಲಾಶಾಸನವನ್ನು ಸಮಗ್ರವಾಗಿ ಪ್ರಕಟಿಸಿರುತ್ತೇವೆ. ಅದರ ಕಾಲವು ಸುಮಾರು ೧೨೦೦ ಇರುತ್ತದೆಂದು ಸಂಶೋಧಕರಿಂದ ಸಂಶೋಧಿಸಲ್ಪಟ್ಟಿರುತ್ತದೆ. ಅದರ ೭ನೇ ಓಳಿಯಲ್ಲಿ ಹೇಳಿರುವದೇನಂದರೆ— "ಸೆಲೆಯಾಹಳ್ಳಿಯ ಕೊಪ್ಪದೊಳು ಸುಖಸಂಕಥಾವಿನೋದದಿನಿರ್ದೊಂದು ದಿವಸಂ ಧರ್ಮಗೋಷ್ಠಿಯೊಳಿರ್ದು ಪುರಾತನ ನೂತನರಪ್ಪ ಶಿವಭಕ್ತರ ಗುಣಸ್ತವನಂ ಮಾಡುತ್ತಮಿರ್ದೇಕಾಂತ ರಾಮಯ್ಯಂಗಳ್" ಎಂದು ಅಲ್ಲಿ ಇದೆ. ಏಕಾಂತದ ರಾಮಯ್ಯನು ಬಸವನ ಸಮಕಾಲೀನನಾಗಿದ್ದರಿಂದ ಅವನ ಕಾಲದಲ್ಲೂ ಅವನಕಿಂತ ಹಿಂದಿನ ಕಾಲದಲ್ಲೂ ಶಿವಶರಣರು ಉದ್ಭವಿಸಿದ್ದರೆಂದು ಈ ಉಲ್ಲೇಖದಿಂದ ಸ್ಪಷ್ಟವಾಗುತ್ತಿದೆ.

ಶಿವಶರಣರಲ್ಲಿ ಯಾರು ಮೊದಲಿನವರು, ಯಾರು ಈಚಿನವರು ಎಂಬುದನ್ನು ನಿರ್ಧರಿಸಲಿಕ್ಕೆ ಅವರ ಚರಿತ್ರೆಗಳಲ್ಲಿ ಶಕೆಗಳು ಅಥವಾ ಮಿತಿಗಳು ಉಪಲಬ್ಧವಿರುವದಿಲ್ಲ. ಆದರಿಂದ ಅವರ ಕಾಲವನ್ನು ನಿಶ್ಚಿತ



ವಾಗಿ ನಿರ್ಧರಿಸುವದು ಬಹಳ ತೊಂದರೆಯ ಕಾರ್ಯವಾಗಿದೆ. ಆದರೆ ಅವರ ಚರಿತ್ರೆಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದಲ್ಲಿ ಅವರು ಯಾವ ರಾಜನ ಕಾಲದಲ್ಲಿ ಪ್ರಕಾಶಿಸಿದರು ಮತ್ತು ಯಾವ ಕಾಲಕ್ಕೆ ಎಂಬುದನ್ನು ತಿಳಿಯಬಹುದಾಗಿದೆ. ಈ ರಾಜರು ಯಾರು, ಅವರು ಯಾವ ವಂಶದವರು, ಮತ್ತು ಅವರ ಕಾಲ ಯಾವುದು, ಈ ವಿಷಯಗಳು ಕರ್ನಾಟಕೇತಿಹಾಸದಲ್ಲಿ ಉಪಲಬ್ಧವಿರುತ್ತವೆ. ಈ ಮೂಲಕ ಈ ಶಿವಶರಣರು ಜೀವಿಸಿದ ಕಾಲವನ್ನು ಕುರಿತು ಕೆಲವು ಅನುಮಾನಗಳನ್ನು ನಾವು ಮಾಡಬಹುದಾಗಿದೆ. ಈ ದೃಷ್ಟಿಯನ್ನಿಟ್ಟುಕೊಂಡು ನಾವು ಈ ಕೆಳಗಿನ ಲೇಖನನ್ನು ಬರೆದಿದ್ದೇವೆ.

ಕರ್ನಾಟಕದಲ್ಲಿ ಶೈವ, ವೀರಶೈವ ಮತಗಳು ಎಂದು ಪ್ರಾರಂಭವಾದವೆಂಬುದನ್ನು ನಿಶ್ಚಯಾತ್ಮಕವಾಗಿ ತಿಳಿಯಲು ಶಕ್ಯವಿರುವದಿಲ್ಲ ಆದರೂ ಇಲ್ಲಿ ಗೋಕರ್ಣ, ಹಂಪಿ, ಶ್ರೀಶೈಲ, ಮಹಾಕೂಟ ಈ ಮಹತ್ವದ ಕ್ಷೇತ್ರಗಳಲ್ಲಿ ಶಿವಲಿಂಗಗಳಿದ್ದು ಅವು ಪುರಾಣ ಕಾಲದಿಂದಲೂ ಬಹು ಪ್ರಸಿದ್ಧಿಗೆ ಬಂದಿರುತ್ತವೆ. ಅವು ಬಹುತರವಾಗಿ ಅಗಸ್ತ್ಯ ಮುನಿಯಿಂದ ನಿರ್ಮಿತವಾದವುಗಳೆಂಬ ಪ್ರತೀತಿ ಇದೆ. ಈ ವಿಷಯವನ್ನು ಬಿಟ್ಟರೂ ಐತಿಹಾಸಿಕ ಕಾಲದಲ್ಲಿ ಅಂದರೆ ಕದಂಬ, ರಾಷ್ಟ್ರಕೂಟ, ಚಾಲುಕ್ಯರು ಆಳಿದ ಕಾಲಗಳಲ್ಲಿ ಯಾವ ಯಾವ ರಾಜರು ಶೈವ ಅಥವಾ ವೀರಶೈವರಿದ್ದರು ಅವರು ಎಷ್ಟರಮಟ್ಟಿಗೆ ಶಿವಶರಣರುಗಳಿಗೆ ಸಂಬಂಧಪಡುತ್ತಾರೆಂಬುದನ್ನು ಸಹ ನಿಶ್ಚಿತವಾಗಿ ಹೇಳಲಿಕ್ಕೆ ನಮಗೆ ಸಾಕಷ್ಟು ಐತಿಹಾಸಿಕ ಸಾಮಗ್ರಿಗಳು ಇನ್ನೂ ದೊರೆತಿಲ್ಲ. ತಮಿಳು ದೇಶದಲ್ಲಿ ೯ರಿಂದ ೧೧ನೇ ಶತಮಾನದ ವರೆಗೂ ಅನೇಕ ಶೈವ ಗ್ರಂಥಕಾರರೂ ಶರಣರೂ ಕವಿಗಳೂ ಉದ್ಭವಿಸಿ ಬೇರೆ ಬೇರೆ ರಾಜರುಗಳ ಕಾಲದಲ್ಲಿ ಅನೇಕ ಉದ್ಗ್ರಂಥಗಳನ್ನು ಬರೆದು ಪ್ರಸಿದ್ಧಿಯನ್ನು ಪಡೆದಿದ್ದು ನಮಗೆ ತಿಳಿದು ಬರುತ್ತಿದೆ. ಆದರೆ ಕರ್ನಾಟಕದಲ್ಲಿ ೧೦೧೮ರಿಂದ ೧೦೪೦ರ ವರೆಗೆ ಕಲ್ಯಾಣ ಚಾಲುಕ್ಯ ವಂಶದವನಾದ ಜಯಸಿಂಹ ಜಗದೇಕಮಲ್ಲನು ಹೊಟ್ಟಲಕೆರೆಯಲ್ಲಿ ಆಳಿದ್ದು, ಇವನ ಕಾಲದಲ್ಲಿ ಮಾತ್ರ ಶಿವಮತವು ಪ್ರಜ್ವಲಿಸಿದ್ದು ವೀರಶೈವ ಶಿವಶರಣರುಗಳ ಚರಿತ್ರಗಳಿಂದ ತಿಳಿದು ಬರುತ್ತಿದೆ. ಆದ್ದರಿಂದ ಸದ್ಯದ ಐತಿಹಾಸಿಕ ಶೋಧನೆಯಲ್ಲಿ ವೀರಶೈವರ ಇತಿಹಾಸವನ್ನು ಜಯಸಿಂಹನ ಆಳಿಕೆಯಿಂದಲೇ ನಾವು ಪ್ರಾರಂಭಿಸಬೇಕಾಗುತ್ತದೆ.

## ಜಯಸಿಂಹರಾಯನ ಕಾಲ

( ಕ್ರಿ. ಶ. ೧೦೦೮ರಿಂದ ೧೦೪೦ )

ಚಾಲುಕ್ಯ ರಾಜನಾದ ಜಯಸಿಂಹನ ಕಾಲದಲ್ಲಿ ದೇವರದಾಸಿಮಯ್ಯ ಮತ್ತು ಶಂಕರದಾಸಿಮಯ್ಯ ಎಂಬ ಇಬ್ಬರು ಶಿವಶರಣರು ಪ್ರಖ್ಯಾತಿಗೆ ಬಂದದ್ದು ತಿಳಿದುಬರುತ್ತದೆ. ಇವರಲ್ಲಿ ದೇವರದಾಸಿಮಯ್ಯನ ಶಿಲಾ ಶಾಸನವು ಕಲಬುರ್ಗಿ ಜಿಲ್ಲೆ ಗೊಬ್ಬೂರಲ್ಲಿ ಒಂದು ದೊರೆತಿದ್ದು ಅದು ಕ್ರಿ. ಶ. ೧೧೪೮ನೇ ವರ್ಷದ್ದಿರುತ್ತದೆ. ಇದರ ಮೇಲಿಂದ ಬಸವೇಶ್ವರನು ಪ್ರಾಬಲ್ಯವನ್ನು ಹೊಂದುವ ಪೂರ್ವದಲ್ಲಿಯೇ ಈ ದೇವರದಾಸಿಮಯ್ಯನು ಪ್ರಸಿದ್ಧಿಗೆ ಬಂದಿದ್ದನೆಂಬುದು ನಿರ್ವಿವಾದನಾಗಿ ಸಿದ್ಧವಾಗುತ್ತದೆ. ಇದರಿಂದ ಇವನು ಕಾಲ್ಪನಿಕ ಪುರುಷನಾಗಿರದೆ ಐತಿಹಾಸಿಕ ಪುರುಷನಾಗಿದ್ದನೆಂದು ಕಂಡುಬರುತ್ತದೆ. ಇವನಿಗೆ ಸಮಕಾಲೀನನಾಗಿ ಶಂಕರದಾಸಿಮಯ್ಯನೆಂಬ ಶಿವಶರಣನು ಇದ್ದುದು ಹರಿಹರನ ರಗಳೆ ಮತ್ತು ಇತರ ಶಿವಶರಣರ ಚರಿತ್ರೆಗಳಿಂದ ತಿಳಿದು ಬರುತ್ತಿದೆ. ಇವರಲ್ಲಿ ದೇವರದಾಸಿಮಯ್ಯನು ವಚನಕಾರನಾಗಿದ್ದು ಅವನ ವಚನಗಳು ಪ್ರಸಿದ್ಧವಾಗಿರುತ್ತವೆ. ಈ ಉಭಯ ಶಿವಶರಣರ ಕಾಲದಿಂದಲೇ ವೀರಶೈವ ಧಾರ್ಮಿಕ ಚರಿತ್ರೆಯು ಪ್ರಾರಂಭವಾಗುತ್ತದೆ.

## ಚನ್ನಯ್ಯ

( ೧೦೬೪ರಿಂದ ೧೧೧೭ )

ದೇವರದಾಸಿಮಯ್ಯ ಮತ್ತು ಶಂಕರದಾಸಿಮಯ್ಯಗಳ ತರುವಾಯ ಚನ್ನಯ್ಯನು ಉದ್ಭವಿಸಿದ ಹಾಗೆ ತೋರಿಬರುತ್ತಿದೆ. ಇವನ ಹೆಸರಿನ ಕೆಲವು ವಚನಗಳು ಪ್ರಸಿದ್ಧವಾಗಿರುತ್ತವೆ. ಈತನು ಜಾತಿಯಿಂದ ಮಾದರನು. ಆದರೂ ಬಸವೇಶ್ವರನು ತನ್ನ ವಚನಗಳಲ್ಲಿ ಇವನನ್ನು ಕುರಿತು ಅತ್ಯಂತ ಆದರದಿಂದ ವಿವರಿಸುತ್ತಾನೆ. ಇವನ ಬಗ್ಗೆ ಇಪ್ಪತ್ತೇಳು ಸಲ ಅವನು ತನ್ನ ವಚನಗಳಲ್ಲಿ ಉಲ್ಲೇಖಿಸಿರುತ್ತಾನೆ. ಆ ಚನ್ನಯ್ಯನ ಹೆಸರನ್ನು ತೆಗೆದುಕೊಳ್ಳುವ ಕೆಲವು ಅಸ್ಪೃಶ್ಯ ಸಮಾಜಗಳೂ ಕರ್ನಾಟಕದಲ್ಲಿವೆ. ಮೇಲ್ಕಂಡ ಕಾರಣಗಳ ಮೂಲಕ ಇವನು ಕರ್ನಾಟಕಸ್ಥನೆಂದು ನಮಗೆ ತೋರುತ್ತದೆ. ಆದರೆ ಇವನು ಕೆಲವೊಂದು ಕಾರಣಕೋಸ್ಕರ ಕರ್ನಾಟಕ



ದೇಶವನ್ನು ಬಿಟ್ಟುಕೊಟ್ಟು, ಚೋಳರಾಜರ ರಾಜಧಾನಿಯಾದ ಕಾಂಚೀಪುರದಲ್ಲಿ ವಾಸಿಸುತ್ತಿದ್ದನು. ಇವನಿದ್ದ ಕಾಲದಲ್ಲಿ ಅಲ್ಲಿ ಕರಿಕಾಲ ಚೋಳನೆಂಬ ರಾಜನು ರಾಜ್ಯವಾಳುತ್ತಿದ್ದನೆಂದು ಹರಿಹರನ ರಗಳೆಯಿಂದಲೂ ಇನ್ನಿತರ ಅನೇಕ ಶಿವಶರಣರ ಚರಿತ್ರೆಗಳಿಂದಲೂ ತಿಳಿದುಬರುತ್ತಿದೆ. ಈ ಕರಿಕಾಲ ಚೋಳನಾರೆಂಬುದನ್ನು ನಾವು ಇಲ್ಲಿ ಕಂಡುಹಿಡಿಯುವದು ಬಹು ಅವಶ್ಯವಿದೆ. ಚೋಳರಾಜರ ವಂಶದಲ್ಲಿ ಇಬ್ಬರು ಕರಿಕಾಲ ಚೋಳರಿದ್ದಾರೆ. ಆ ಈರ್ವರೂ ಬಹು ಪ್ರಖ್ಯಾತ ರಾಜರು. ಅವರಲ್ಲಿ ಮೊದಲನೆಯ ಕರಿಕಾಲನು ಜಯಸಿಂಹರಾಯನಕಿಂತಲೂ ಬಹಳ ಮೊದಲು ಅಂದರೆ ೧೦೦, ೧೫೦ ವರ್ಷಗಳ ಹಿಂದೆ ರಾಜ್ಯವಾಳಿದ್ದರಿಂದ ಮತ್ತು ಈ ಕಾಲದಲ್ಲಿ ಶೈವವೀರಶೈವ ಧರ್ಮಗಳ ಪ್ರಭಾವವು ಕರ್ನಾಟಕದಲ್ಲಿ ಇದ್ದಿಲ್ಲಾದ್ದರಿಂದ ಚನ್ನಯ್ಯನು ಈ ಚಾಲುಕ್ಯ ಜಯಸಿಂಹನ ಮೊದಲು ಇರದೆ ಅವನ ತರುವಾಯ ಅಂದರೆ ೧೦೬೪ರಿಂದ ೧೧೧೭ರ ವರೆಗೆ ಆಳಿದ ೧ನೆಯ ಕುಲೋತ್ತುಂಗ ಚೋಳ ಅಥವಾ ರಾಜೇಂದ್ರ ಚೋಳ ಈತನ ರಾಜ್ಯದಲ್ಲಿ ಹೋಗಿ ವಾಸಿಸಿರಬಹುದು. ಈ ಚೋಳರಾಜನಿಗೆ ಕರಿಕಾಲ ಚೋಳನೆಂಬ ಹೆಸರೂ ಇತ್ತೆಂಬುದು ಇತಿಹಾಸದಿಂದ ಗೊತ್ತಾಗುತ್ತದೆ. ( ಮದ್ರಾಸ ವಿಶ್ವವಿದ್ಯಾಲಯದವರು ಪ್ರಕಟಿಸಿದ ಟಿ ಎ ಗೋಪೀನಾಥರಾವ್ ಇವರಿಂದ ರಚಿತವಾದ ಶ್ರೀ ವೈಷ್ಣವರ ಇತಿಹಾಸ ಪುಟ ೩೮-೩೯ ನೋಡಿರಿ ) ಈ ಚೋಳರಾಜನ ಕಾಲದಲ್ಲಿಯೇ ರಾಮಾನುಜನು ಕಾಂಚೀಪಟ್ಟಣವನ್ನು ತೊರೆದು ಹೊಯ್ಸಳ ಅರಸನ ಆಶ್ರಯಕ್ಕೋಸ್ಕರ ಅವನಲ್ಲಿಗೆ ಓಡಿಹೋದನು. ಈ ಚನ್ನಯ್ಯನು ವೀರಶೈವನೆಂಬುದಕ್ಕೆ ಹರಿಹರನ ರಗಳೆ ಮತ್ತು ಅವನ ವಚನಗಳು ಮುಖ್ಯ ಆಧಾರವಾಗಿವೆ ಅವನನ್ನು ಹರಿಹರ ಕವಿಯು ತನ್ನ ರಗಳೆಯಲ್ಲಿ "ಲಿಂಗಾಭಿಮಾನಿ ಲಿಂಗೈಕ್ಯ, ಜಂಗಮ ನಿಧಾನ" ಈ ಮೊದಲಾದ ಶಬ್ದಗಳಿಂದ ವರ್ಣಿಸಿದ್ದಾನೆ. ಮತ್ತು ಅವನು ಲಿಂಗಪೂಜೆ ಮಾಡುವಲ್ಲಿ "ಸೆಜ್ಜೆಯೊಳಗಿರ್ದ ಶಿವಲಿಂಗಮಂ ಪೊಂಗುಮಂ" ಎಂದು ಮೊದಲಾಗಿ ವೀರಶೈವರಿಗೆ ಸಲ್ಲತಕ್ಕ ಅಭಿಧಾನಗಳಿಂದ ವರ್ಣಿಸಿದ್ದಾನೆ.

ಈ ಪ್ರಕಾರ ಚನ್ನಯ್ಯನು ವೀರಶೈವ ಧರ್ಮಾವಲಂಬಿಯಾಗಿ ೧೦೬೪ರಿಂದ ೧೧೧೭ರ ವರೆಗೆ ಆಳಿದ ೧ನೇ ಕುಲೋತ್ತುಂಗ ಚೋಳರಾಜನ ರಾಜ್ಯದಲ್ಲಿ ಹೋಗಿ ವಾಸಿಸುತ್ತಿದ್ದನೆಂಬ ಅಭಿಪ್ರಾಯವು ಹೊರಪಡುತ್ತಿದೆ.

ಹರಿಹರನು ರೇವಣಸಿದ್ಧೇಶ್ವರನು ಶೈವನೆಂತಲೂ ಲಾಗುಳನೆಂತಲೂ ತನ್ನ ರಗಳೆಯಲ್ಲಿ ಕೆಲವೆಡೆ ವಿವರಿಸಿದ್ದು ಆ ರೀತಿಯಾಗಿ ಚನ್ನಯ್ಯನ ಬಗ್ಗೆ ಅವನು ವಿವರಿಸಿರುವದಿಲ್ಲ. ವೀರಶೈವರಿಗೆ ಸಲ್ಲತಕ್ಕ ರೀತಿಯಿಂದ ಅವನನ್ನು ಇಲ್ಲಿ ಬಣ್ಣಿಸಿರುವದರಿಂದ ಬಸವೇಶ್ವರ ಮತ್ತು ರೇವಣಸಿದ್ಧರ ಕಿಂತಲೂ ಪೂರ್ವದಲ್ಲಿ ವೀರಶೈವ ಧರ್ಮವಿದ್ದಿತೆಂದು, ಚನ್ನಯ್ಯನು ಆ ಕಾಲದಲ್ಲಿ ಇದ್ದನೆಂದು ನಾವು ನಿರ್ಧರಿಸಿದ್ದರ ಮೇಲಿಂದ ಸಿದ್ಧವಾಗುತ್ತದೆ. ಇದೊಂದುಬಹು ಮಹತ್ವದ ಅನುಮಾನವಾಗಿದೆ.

## ಜಯಸಿಂಹನ ತರುವಾಯದ ಕಾಲ.

ಜಯಸಿಂಹನ ಕಾಲದ ತರುವಾಯ ಕರ್ನಾಟಕದಲ್ಲಿ ೧ನೇ ಸೋಮೇಶ್ವರ, ೨ನೇ ಸೋಮೇಶ್ವರ ಮತ್ತು ವಿಕ್ರಮಾದಿತ್ಯ ಈ ಮೂವರು ರಾಜರು ೧೧೨೮ರ ವರೆಗೆ ರಾಜ್ಯವಾಳಿದರು. ಆದರೆ ಈ ಕಾಲದಲ್ಲಿ ಯಾವ ಅರಸರ ಹೆಸರುಗಳೊಡನೆ, ವೀರಶೈವ ಶಿವಶರಣರ ಹೆಸರುಗಳು ಸಂಬಂಧಪಡುವದಿಲ್ಲ. ಈ ಕಾಲದಲ್ಲಿ ಶಿವಶರಣರು ಉದ್ಭವಿಸಿದ್ದು ತೋರಿ ಬರುವದಿಲ್ಲ. ಆದರೆ ಈ ಕಾಲಕ್ಕೆ ಅನೇಕ ಕಾಳಾಮುಖ ಶಿಲಾಶಾಸನಗಳು ದೊರೆಯುತ್ತವೆ. ಆದ್ದರಿಂದ ಆವುದೋ ಒಂದು ಕಾರಣದಿಂದ ಈ ೫೦-೬೦ ವರ್ಷ ವೀರಶೈವ ಧರ್ಮಪ್ರಸಾರಕ್ಕೋಸ್ಕರ ಆವ ಬಗೆಯ ಉತ್ತೇಜನಗಳು ದೇಶದಲ್ಲಿ ದೊರೆತಂತೆ ಕಾಣುವದಿಲ್ಲ. ಆದರೆ ಈ ಕಾಲದ ತರುವಾಯ ಪೆರ್ಮಾಡಿ ಅಥವಾ ಪೆರ್ಮಡಿರಾಯ ಈತನ ಕಾಲದಲ್ಲಿ ಕರ್ನಾಟಕದಲ್ಲಿ ಶಿವಶರಣರು ಪುನಃ ಉದ್ಭವಿಸಿದ್ದು ಅವರ ಚರಿತ್ರಗಳಿಂದ ತಿಳಿದು ಬರುತ್ತಿದೆ.

## ಪೆರ್ಮಡಿರಾಯ.

(೧೧೨೮ರಿಂದ ೧೧೩೬)

ಈ ಪೆರ್ಮಡಿರಾಯನು ಆರೆಂಬುದನ್ನು ಕುರಿತು ನಾವು ಹೋದ ವರ್ಷ ಶಿವಾನುಭವದ ೧೩ನೇ ಸಂಪುಟ ೩ನೇ ಸಂಚಿಕೆ ೧೨೬ನೇ ಪುಟದಲ್ಲಿ ಸವಿಸ್ತಾರವಾಗಿ ನಿರೂಪಿಸಿದ್ದೇವೆ. ಈ ಪೆರ್ಮಡಿಯು ಬಿಜ್ಜಳನ ತಂದೆಯು, ಅವನು ಚಾಲುಕ್ಯ ರಾಜನಾದ ೩ನೇ ಸೋಮೇಶ್ವರನ ಕೈಕೆ



ತರ್ದೆವಾಡಿ ನಾಡಿನ (ವಿಜಾಪುರ ಜಿಲ್ಲೆಯ ಉತ್ತರಭಾಗ) ಮಹಾಮಂಡಲೇಶ್ವರನಾಗಿ ಮಂಗಳವಾಡದಲ್ಲಿ ರಾಜ್ಯವಾಳುತ್ತಿದ್ದನು ಇವನ ಕಾಲಕ್ಕೆ ಕೊಂಡುಗುಳಿಯ ಕೇಶಿರಾಜ ಮತ್ತು ತೆಲುಗು ಬೊಮ್ಮಯ್ಯ ಹೀಗೆ ಇಬ್ಬರು ಶಿವಶರಣರು ಮಂತ್ರಿಗಳಾಗಿ ಕೆಲವು ಕಾಲ ಅವನಲ್ಲಿ ಕೆಲಸ ಮಾಡಿದರು. ಇವರಲ್ಲಿ ಕೇಶಿರಾಜನು ಒಬ್ಬ ಮಹತ್ವದ ಕವಿಯೆಂದು ವೀರಶೈವರಲ್ಲಿ ಪ್ರತೀತಿ ಇದೆ. ಈ ಕಾಲಕ್ಕೆ ಈ ಇಬ್ಬರಲ್ಲದೆ ಇಳಿಹಾಳ ಬ್ರಹ್ಮಯ್ಯ ಮತ್ತು ಬಾಹೂರ ಬ್ರಹ್ಮಯ್ಯ ಎಂಬಿಬ್ಬರು ಶಿವಶರಣರು ಈತನ ರಾಜ್ಯದಲ್ಲಿಯೇ ಪ್ರಸಿದ್ಧಿಗೆ ಬಂದರು. ಇಳಿಹಾಳ ಇದು ಇಲ್ಯಾಳ ಎಂದು ಬಾಗಲಕೋಟೆ ತಾಲೂಕಿನಲ್ಲಿ ಮತ್ತು ಬಾಹೂರ ಇದು ಮುದ್ದೇಬಿಹಾಳ ತಾಲೂಕಿನಲ್ಲಿ, ಬಾವೂರ ಎಂದು ಪ್ರಸಿದ್ಧವಾಗಿವೆ. ಈ ನಾಲ್ವರೂ ಶಿವಶರಣರ ವಿಷಯವಾಗಿ ಹರಿಹರನು ಸುಂದರವಾದ ರಗಳೆಗಳನ್ನು ರಚಿಸಿದ್ದು ಅವುಗಳ ಮೇಲಿಂದ ಅವರು ಪೆರ್ಮಡಿರಾಯನಲ್ಲಿ ಪ್ರಸಿದ್ಧಿಗ ಬಂದರೆಂಬದು ತಿಳಿದುಬರುತ್ತದೆ. ಈ ನಾಲ್ವರಲ್ಲಿ ಬಾಹೂರ ಬ್ರಹ್ಮಯ್ಯ ಮತ್ತು ತೆಲುಗು ಜೊಮ್ಮಯ್ಯ ಇವರು ವಚನಕಾರರಾಗಿದ್ದಾರೆ. ಹೀಗೆ ಪೆರ್ಮಡಿರಾಯನ ಕಾಲದಲ್ಲಿ ದೇವರದಾಸಿಮಯ್ಯ ಮತ್ತು ಶಂಕರದಾಸಿಮಯ್ಯ ಇವರು ಮೊದಲು ಹೂಡಿದ ಧಾರ್ಮಿಕ ಚಳವಳಿಯು ಪುನಃ ಹೊರಹೊಮ್ಮಿತೆಂದು ಕಂಡುಬರುತ್ತಿದೆ.

## ಬರ್ಮದೇವನ ಕಾಲ.

ಪೆರ್ಮಡಿರಾಯನ ತರುವಾಯ ತರ್ದೆವಾಡಿ ನಾಡಿನಲ್ಲಿ ಬರ್ಮದೇವನು ಚಾಲುಕ್ಯರ ದಂಡನಾಯಕನಾಗಿ ರಾಜ್ಯವಾಳಹತ್ತಿದನು. ಬಿಜ್ಜಳನಂತೆಯೇ ಇವನೂ ಈ ಕಾಲದಲ್ಲಿ ಬಹು ಪ್ರಬಲನಾಗಿದ್ದನು. ಅವನು ಬೇರೆ ಬೇರೆ ಕಾಲಗಳಲ್ಲಿ ತರ್ದೆವಾಡಿ, ಬನವಸೆ, ತೊರಗಲ್ಲು ಈ ಪ್ರಾಂತ ಭಾಗಗಳಲ್ಲಿ ಮಹಾಮಂಡಳೇಶ್ವರನಾಗಿ ಆಳಿದ್ದು ಶಿಲಾಶಾಸನಗಳಿಂದ ತಿಳಿದುಬರುತ್ತಿದೆ. ಇವನು ಧರ್ಮದಲ್ಲಿ ಕಾಳಾಮುಖನಾಗಿದ್ದುದರಿಂದ ಈ ಮತದ ಜನರಿಗೆ ಅವನು ಬಹು ಸಹಾಯಕವಾಗಿ ವರ್ತಿಸಿದ್ದುದು ಕಂಡುಬರುತ್ತಿದೆ. ಆದರೆ ವೀರಶೈವರಲ್ಲಾರೂ ಈತನ ಹೆಸರನ್ನು ತೆಗೆದುಕೊಂಡಿಲ್ಲ. ಆವ ಶಿವಶರಣರ ಚರಿತ್ರೆಯೂ ಇವನಿಗೆ ಸಂಬಂಧಪಟ್ಟಿರುವುದಿಲ್ಲ. ಆದುದರಿಂದ ಇವನಿಂದ ವೀರಶೈವರಿಗೆ

ಪ್ರತ್ಯಕ್ಷ ಸಹಾಯ ದೊರಿತಿದೆಂದು ಹೇಳಲಿಕ್ಕಾಗುವದಿಲ್ಲ. ಇವನು ತರ್ದವಾಡಿ ನಾಡಿನಲ್ಲಿ ೧೧೩೬ರಿಂದ ೧೧೪೬ರ ವರೆಗೆ ರಾಜ್ಯವಾಳಿದನು.

## ಮಹಾಮಂಡಳೇಶ್ವರ ಬಿಜ್ಜಳನ ಕಾಲ.

ಬರ್ಮದೇವನ ತರುವಾಯ ಬಿಜ್ಜಳನು ತರ್ದವಾಡಿನಾಡಿನಲ್ಲಿ ಚಾಲುಕ್ಯರಿಗೆ ಅಂಕಿತನಾಗಿ ಮಂಗಳವಾಡವನ್ನು ತನ್ನ ರಾಜಧಾನಿಯನ್ನಾಗಿಟ್ಟುಕೊಂಡು ೧೧೪೬ರಿಂದ ರಾಜ್ಯವಾಳತೊಡಗಿದನು. ಅವನ ಆಳಿಕೆಯಲ್ಲಿ ಮೂರು ವಿಭಾಗಗಳನ್ನು ಮಾಡಬಹುದು. ಅವು ಯಾವವೆಂದರೆ– ೧೧೪೬ರಿಂದ ೧೧೫೬ರ ವರೆಗೆ ಅವನು ಚಾಲುಕ್ಯ ರಾಜನಿಗೆ ಕೇವಲ ಮಾಂಡಲಿಕನಾಗಿ ರಾಜ್ಯವಾಳಿದ್ದು, ಮುಂದೆ ೧೧೫೬ರಿಂದ ೧೧೬೨ ವರೆಗೆ ಚಾಲುಕ್ಯನನ್ನು ಹೆಸರಿಗೆ ಮಾತ್ರ ರಾಜನನ್ನಾಗಿಟ್ಟುಕೊಂಡು ತಾನೇ ಪೂರ್ಣ ಸತ್ತಾಧಾರಿಯಾಗಿ ರಾಜ್ಯವಾಳಿದ್ದು, ಇದರ ಮುಂದೆ ೧೧೬೨ರಿಂದ ೧೧೬೭ ವರೆಗೆ ರಾಜ್ಯಾಭಿಷಿಕ್ತನಾಗಿ ಸಾರ್ವಭೌಮನಂತೆ ಕಲ್ಯಾಣದಲ್ಲಿ ರಾಜ್ಯವಾಳಿದ್ದು. ಈ ಮೂರು ಅವಧಿಗಳಲ್ಲಿ ಮೊದಲನೆಯದರಲ್ಲಿ ರೇವಣಸಿದ್ಧೇಶ್ವರನು ಬಿಜ್ಜಳನ ರಾಜಧಾನಿಯಾದ ಮಂಗಳವಾಡದಲ್ಲಿ ಬಂದು ಅವನಲ್ಲಿ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡನು. ರೇವಣಸಿದ್ಧೇಶ್ವರನು ಈ ನಾಡಿನಲ್ಲಿ ಬಂದ ಬಳಿಕ ಮಾಡಿದ ಅನೇಕ ಮಹತ್ಕೃತ್ಯಗಳನ್ನು ಕುರಿತು ನಾವು ಹೋದ ವರ್ಷದ ಶಿವಾನುಭವ ಪತ್ರಿಕೆಯ ೧೯ನೇ ಸಂಪುಟದಲ್ಲಿ ಅನೇಕ ಲೇಖಗಳನ್ನು ಬರೆದಿದ್ದೇವೆ. ಅವುಗಳನ್ನು ನಾವು ಇಲ್ಲಿ ಪುನಃ ಉಲ್ಲೇಖಿಸುವದಿಲ್ಲ. ಆದರೆ ಆ ಲೇಖಗಳಲ್ಲಿ ಅವನು ಚೋಳಮಂಡಲದಲ್ಲಿ ಆವ ರಾಜರಲ್ಲಿ ಖ್ಯಾತಿಯನ್ನು ಹೊಂದಿದನೆಂಬುದನ್ನು ಕುರಿತು ನಾವು ಪ್ರಸ್ತಾಪಿಸಿರುವದಿಲ್ಲ. ಆದರೆ ಈ ಲೇಖದಲ್ಲಿ ಅವನು ಯಾವ ಚೋಳ ಅರಸನಲ್ಲಿದ್ದನು, ಮತ್ತು ಯಾವ ಚೋಳ ರಾಜನ ಕನ್ನಿಕೆಯನ್ನು ಲಗ್ನವಾದನು ಈ ವಿಷಯಗಳನ್ನು ಕುರಿತು ವಿವೇಚಿಸುತ್ತೇವೆ.

ಬಿಜ್ಜಳನಿಗೆ ಸಮಕಾಲೀನರಾಗಿ ಚೋಳ ಮಂಡಲದಲ್ಲಿ ರಾಜ್ಯವಾಳಿದವರು ೨ನೇ ಕುಲೋತ್ತುಂಗ ಚೋಳ (೧೧೩೮ರಿಂದ ೧೧೪೮) ಮತ್ತು ೨ನೇ ರಾಜರಾಜ ಚೋಳ (೧೧೪೮ರಿಂದ ಮುಂದೆ) ಇವರು ಇದ್ದಾರೆ. ರೇವಣಸಿದ್ಧೇಶ್ವರನ ವಿಷಯವನ್ನು ನಿರ್ಧರಿಸುವ ಪೂರ್ವದಲ್ಲಿ



ಹಿಂದಿನ ಚೋಳರಾಜರಲ್ಲಿ ವರ್ತಿಸಿದ ಕೆಲವು ಸಂಗತಿಗಳನ್ನು ನಾವು ಇಲ್ಲಿ ಲಕ್ಷಿಸಿದರೆ ಈ ವಿಷಯದ ಮೇಲೆ ಹೆಚ್ಚಿಗೆ ಪ್ರಕಾಶವು ಬೀಳುವದರಿಂದ ಅವುಗಳನ್ನು ನಾವು ಕೆಲಮಟ್ಟಿಗೆ ಇಲ್ಲಿ ವಿವರಿಸುತ್ತೇವೆ.

ಚನ್ನಯ್ಯನು ೧ನೇ ಕುಲೋತ್ತುಂಗ ಚೋಳ ಅಥವಾ ರಾಜೇಂದ್ರ ಚೋಳ ಅಥವಾ ಕರಿಕಾಲ ಚೋಳ (೧೦೭೦-೧೧೨೦) ಇವನಲ್ಲಿ ಪ್ರಸಿದ್ಧಿಗೆ ಬಂದನೆಂದು ನಾವು ಹಿಂದೆ ಹೇಳಿದೇವಷ್ಟೇ. ಈ ರಾಜನು ಕೇವಲ ಶಿವಭಕ್ತನಾಗಿ ವೈಷ್ಣವ ದೇವತೆಗಳನ್ನು ನಿರಾಕರಿಸಿ ರಾಮಾನುಜನು ತನ್ನ ರಾಜ್ಯವನ್ನು ಬಿಟ್ಟು ಹೋಗುವಂತೆ ಮಾಡಿದನು. ರಾಮಾನುಜನು ಅಲ್ಲಿಂದ ಹೊಯ್ಸಳ ರಾಜ್ಯದಲ್ಲಿ ಸೇರಿ ಅಲ್ಲಿ ಮುಂದೆ ಮೆಲುಕೋಟೆ ಎಂಬಲ್ಲಿ ನೆಲಸಿ, ಸುಮಾರು ೧೨ ವರ್ಷ ಕಾಲ ಕಳೆದನು. ಮುಂದೆ ಕುಲೋತ್ತುಂಗ ಚೋಳನು ೧೧೨೦ರ ವರೆಗೆ ರಾಜ್ಯವಾಳಿ, ಮರಣಹೊಂದಿದ ಬಳಿಕ, ವಿಕ್ರಮಚೋಳನು ಪಟ್ಟಕ್ಕೆ ಬಂದನು. ಈತನು ವಿಷ್ಣುಸಾಂಪ್ರದಾಯಕ್ಕೆ ಉತ್ತೇಜನಕೊಡುವವನಾದ್ದರಿಂದ ರಾಮಾನುಜನು ಅವನ ರಾಜ್ಯದಲ್ಲಿ ಮರಳಿ ಬಂದು ೧೧೨೫ರಲ್ಲಿ ತನ್ನ ಭಾಷ್ಯವನ್ನು ಪೂರ್ಣಮಾಡಿದನು. (ಟಿ ಎ. ಗೋಪೀನಾಥರಾವ ಇವರು ಬರೆದ ಶ್ರೀ ವೈಷ್ಣವ ಇತಿಹಾಸ–ಮದ್ರಾಸ ವಿಶ್ವವಿದ್ಯಾಲಯದ ಪ್ರಕಟನೆ) ಮತ್ತು ೧೧೩೮ರಲ್ಲಿ ವಿಕ್ರಮಚೋಳನು ಮರಣಹೊಂದಲಾಗಿ ಅವನ ಮಗ ೨ನೇ ಕುಲೋತ್ತುಂಗ ಚೋಳನು (೧೧೩೮ರಿಂದ ೧೧೪೮) ಸಿಂಹಾಸನಾರೂಢನಾದನು.

ಇನ್ನು ರೇವಣಸಿದ್ಧೇಶ್ವರನ ಚರಿತ್ರೆಯನ್ನು ನಾವು ತೆಗೆದುಕೊಂಡು ಚೋಳ ರಾಜರಲ್ಲೆಸಗಿದ ಅವನ ಕೃತಿಗಳು ಮೇಲ್ಕಂಡ ಸಂಗತಿಗಳಿಗೆ ಸಹ ಗೂಡುತ್ತವೋ ಹೇಗೆಂಬುದನ್ನು ಪರೀಕ್ಷಿಸುವಾ.

ರೇವಣಸಿದ್ಧನು ೧೧೪೬ರಲ್ಲಿ ರಾಜ್ಯವಾಳಹತ್ತಿದ ಬಿಜ್ಜಳನ ಸಮಕಾಲೀನನೆಂದು ನಾವು ಎಣಿಸಿರುವದರಿಂದ ಅದಕ್ಕೂ ೧೦೦ ವರ್ಷ ಪೂರ್ವದಲ್ಲಿ ಅವನು ಚೋಳ ರಾಜ್ಯದಲ್ಲಿ ರಾಜ್ಯವಾಳುತ್ತಿದ್ದ ೧ನೇ ಕುಲೋತ್ತುಂಗ ಚೋಳ ಅಥವಾ ಕರಿಕಾಲಚೋಳನಲ್ಲಿದ್ದದ್ದು ಸಂಭವವಾಗಿ ತೋರುವದಿಲ್ಲ.

ರೇವಣಸಿದ್ಧನು ಚೋಳ ರಾಜ್ಯದಲ್ಲಿ ಕೆಲವು ಕಾಲ ಪ್ರಚ್ಛನ್ನ ವೇಷದಿಂದಿದ್ದು ಅಲ್ಲಿಯ ಚೋಳನು ವೈಷ್ಣವನಾದ್ದರಿಂದ (ಪುಟ ೨೧ ಹರಿಹರನ

ರಗಳೆ ಭಾಗ ೨) ವಿಷ್ಣು ಪ್ರತಿಮೆಯನ್ನು ತಂದು ಪ್ರತಿಷ್ಠಾಪಿಸುವ ದರಲ್ಲಿದ್ದನು. ಆಗ ರೇವಣಸಿದ್ಧನು ತನ್ನ ವೀರ್ಯದಿಂದ ಅದನ್ನು ಸ್ಥಿರ ಗೊಳಿಸಿದನೆಂದು ಅದರಲ್ಲಿ ಹೇಳಿದೆ. ಮುಂದೆ ರೇವಣಸಿದ್ಧನು ಅಲ್ಲಿಂದ ಮಂಗಳವಾಡಕ್ಕೆ ಬಂದು ಅಲ್ಲಿ ಅನೇಕ ಮಹತ್ಕೃತ್ಯಗಳನ್ನು ಮಾಡಿ ದಕ್ಷಿಣ ದೇಶಕ್ಕೆ ಪುನಃ ಬಂದು ಅಲ್ಲಿ ಚೋಳರಾಜನ ಪುತ್ರಿಯನ್ನು ಲಗ್ನ ವಾದನೆಂದು ಅವನ ಚರಿತ್ರೆಯಿಂದ ತಿಳಿದುಬರುತ್ತಿದೆ

ಇಲ್ಲಿ ವಿಷ್ಣುಮೂರ್ತಿಯನ್ನು ಪ್ರತಿಷ್ಠಾಪಿಸಲೆಣಿಸಿದ. ಚೋಳರಾಜನ ಉಲ್ಲೇಖವಿರುವದರಿಂದ ಇದು ವಿಷ್ಣುವಿನ ಪಕ್ಷಪಾತಿಯಾಗಿ ರಾಮಾನು ಜನನ್ನು ತನ್ನಲ್ಲಿ ಪುನಃ ಬರಮಾಡಿಕೊಂಡ ವಿಕ್ರಮ ಚೋಳನಿಗಾ ಗಲಿ ಇಲ್ಲವೆ ಅವನ ಮಗ ಕುಲೋತ್ತುಂಗ ಚೋಳನಿಗಾಗಲಿ ಸಂಬಂಧ ಪಟ್ಟಿರಬೇಕು. ಇವರಲ್ಲಿ ವಿಕ್ರಮ ಚೋಳನು ರಾಮಾನುಜನನ್ನು ಅಂಗೀ ಕರಿಸಿ ಅವನಿಗೆ ಆಶ್ರಯಕೊಟ್ಟವನಾದ್ದರಿಂದ ಮತ್ತು ಅವನ ಕಾಲದಲ್ಲಿ ರಾಮಾನುಜನು ತನ್ನ ಭಾಷ್ಯವನ್ನು ಮುಗಿಸಿ (೧೧೨೮) ಬಹು ಪ್ರಬಲ ನಾದ್ದರಿಂದ ರೇವಣಸಿದ್ಧನು ಅವನ ರಾಜ್ಯದಲ್ಲಿ ಬಂದು ವಿಷ್ಣು ಪ್ರತಿ ಮೆಗೋಸ್ಕರ ಈ ರೀತಿ ವ್ಯವಹರಿಸುವದು ಸಂಭವನೀಯವಲ್ಲ.

ಆದರೆ ವಿಕ್ರಮ ಚೋಳನ ಮಗ ೨ನೇ ಕುಲೋತ್ತುಂಗ ಚೋಳನು ಸಂಪೂರ್ಣ ಶಿವಭಕ್ತನಾಗಿದ್ದನೆಂದು ಇತಿಹಾಸದಿಂದ ತಿಳಿಯುತ್ತಿದೆ. ಅವನು ರಾಜ್ಯಾಭಿಷಿಕ್ತನಾದಾಗ್ಗೆ ಒಂದು ವೇಳೆ ವಿಷ್ಣುಭಕ್ತನಿದ್ದರೂ ಇರಬಹುದು. ಆದರೆ ಮುಂದೆ ಆ ಮತವನ್ನು ಬಿಟ್ಟು ಪೂರ್ಣ ಶೈವ ನಾಗಿ ವರ್ತಿಸಿದನು. ಅವನ ಈ ಪರಿವರ್ತನೆಯು ಹರಿಹರ ಕವಿಯು ಹೇಳಿದ ಪ್ರಕಾರ ರೇವಣಸಿದ್ಧನಿಂದಾಗಿರಬಹುದು. ಮತ್ತು ಈ ಚೋಳನು ಅವನಿಗೋಸ್ಕರ ಭಕ್ತಿಯನ್ನು ಹೊಂದಿ ಅವನಿಗೆ ಆಶ್ರಯಕೊಟ್ಟಿರಬಹುದು.

ಮುಂದೆ ರೇವಣಸಿದ್ಧನು ಬಿಜ್ಜಳನಲ್ಲಿಗೆ ಬಂದು ಅಲ್ಲಿ ಬಹು ಪ್ರಖ್ಯಾ ತನಾದನು. ಆಮೇಲೆ ಅವನು ಈ ಕುಲೋತ್ತುಂಗ ಚೋಳನಲ್ಲಿಗೆ ಬರಲು ಚೋಳರಾಜನು ಅವನು ಮಾಡಿದ ಮಹತ್ಕೃತ್ಯಗಳಿಗೆ ಮೆಚ್ಚಿ, ತನ್ನ ಮಗಳನ್ನು ಅವನಿಗೆ ಲಗ್ನಮಾಡಿಕೊಟ್ಟಿರಬಹುದು. ಈಕೆಯ ಮಗನೇ ಮುಂದೆ ರುದ್ರಮುನಿ ಎಂದು ಪ್ರಸಿದ್ಧನಾದನು. ಇದು ಸಂಭ ವನೀಯವಿರುತ್ತಿದ.



೨ನೇ ಕುಲೋತ್ತುಂಗ ಚೋಳನು ೧ನೇ ಕುಲೋತ್ತುಂಗ ಚೋಳ ನಂತೆ ಬಹು ಪ್ರಬಲ ರಾಜನಾಗಿದ್ದನು. ಆದರೆ ಈತನನ್ನು ಹರಿಹರನು ತನ್ನ ರಗಳೆಯಲ್ಲಿ ರಾಜೇಂದ್ರಚೋಳನೆಂದು ಕರೆದಿದ್ದಾನೆ. (ಪುಟ ೩೬ ಹರಿಹರನ ರಗಳೆ ನೋಡಿರಿ.) ೧ನೇ ಕುಲೋತ್ತುಂಗನಿಗೆ ಈ ಹೆಸರ ಸಹ ಇದ್ದದರಿಂದ ಈ ೨ನೇ ಕುಲೋತ್ತುಂಗನಿಗೂ ಈ ಹೆಸರಿನಿಂದ ಹರಿ ಹರನು ತಪ್ಪಿ ಕರೆದಿರಬಹುದು.

ಈ ೨ನೇ ಕುಲೋತ್ತುಂಗ ಚೋಳನು ಪೆರ್ಮಾಡಿರಾಯ, ಬರ್ಮ ದೇವ ಮತ್ತು ಬಿಜ್ಜಳ ಇವರಿಗೆ ಸಮಕಾಲೀನನು. ಆದುದರಿಂದ ಇವನ ರಾಜ್ಯದಲ್ಲಿ ರೇವಣಸಿದ್ಧನು ಆಗಮಿಸಿ ತನ್ನ ಮಹತ್ವವನ್ನು ಬೀರಿರಬ ಹುದು. ಹಿಂದೆ ರಾಮಾನುಜನು ಹೇಗೆ ಮೇಲುಕೋಟೆಯಲ್ಲಿ ತನ್ನ ಸ್ಥಾನವನ್ನು ಸ್ಥಾಪಿಸಿಕೊಂಡಿದ್ದನೋ, ಹಾಗೆಯೇ ಚೋಳ ರಾಜ್ಯಕ್ಕೆ ಸಮೀಪವಾಗಿ ರೇವಣಸಿದ್ಧನೂ ಈಗಿನ ಕೋಲಸಪೇಟೆಯ ನೆರೆಯಲ್ಲಿ ತನ್ನ ಆವಾಸಸ್ಥಾನವನ್ನು ಕಲ್ಪಿಸಿಕೊಂಡಿರಬಹುದು. ಇಲ್ಲಿ ಅವನ ಹೆಸರಿನ ಪ್ರಸಿದ್ಧ ಕ್ಷೇತ್ರವದೆ.

ಹೀಗೆ ಉತ್ತರದಲ್ಲಿ ರೇವಣಸಿದ್ಧನು ಬಿಜ್ಜಳನಲ್ಲಿಯೂ, ದಕ್ಷಿಣದಲ್ಲಿ ೨ನೇ ಕುಲೋತ್ತುಂಗ ಚೋಳನಲ್ಲಿಯೂ ನಿಂತು ಅವರ ರಾಜ್ಯದಲ್ಲಿ ಧರ್ಮಕ್ರಾಂತಿಯನ್ನು ಮಾಡಿದ್ದು ಕಂಡುಬರುತ್ತಿದೆ.

ಈ ಮೇರೆಗೆ ಬಿಜ್ಜಳನು ಮಹಾಮಂಡಲೇಶ್ವರನಾಗಿದ್ದಾಗ, ರೇವ ಣಸಿದ್ಧ ಆಮೇಲೆ ಅವನ ಮಗ ರುದ್ರಮುನಿ ಇವರು ಪ್ರಖ್ಯಾತಿಗೆ ಬಂದರು. ಇವರಿಗೆ ಸಮಕಾಲೀನನಾದ ಗೋರಕ್ಷನು ಕೊಲ್ಲಾಪುರದಲ್ಲಿ ವಾಸಿಸುತ್ತಿದ್ದನು. ಇವನೂ ಒಬ್ಬ ವಚನಕಾರನು. ಇವನ ದೇವಾಲ ಯವು ಈಗಲೂ ಕೊಲ್ಲಾಪುರದಲ್ಲಿ ಇದೆ. (ಪ್ರೊ॥ ಕುಂದಣಗಾರ ಇವರು ಬರೆದ ಹರಿಹರದೇವ ಪುಟ ೪೬ ನೋಡಿರಿ) ಆದರೆ ಈ ಗೋರಕ್ಷನು ಉತ್ತರ ದೇಶದಲ್ಲಿ ಪ್ರಸಿದ್ಧಿಗೆ ಬಂದ ಗೋರಖನಾಥನಿಂದ ಭಿನ್ನನಿರಬಹುದೆಂದು ತೋರುತ್ತದೆ. ಈ ಶಿವಶರಣರಲ್ಲದೆ ರುದ್ರಮುನಿಯಿಂದ ದೀಕ್ಷೆಯನ್ನು ಪಡೆದ ಹಾವಿನಹಾಳ ಕಲ್ಲಯ್ಯನೂ ಈ ಕಾಲಕ್ಕೆ ಪ್ರಸಿದ್ಧಿಗೆ ಬಂದನು. ಈತನೂ ಒಬ್ಬ ವಚನಕಾರನಿದ್ದಾನೆ. (ಈತನ ವಚನವು ಅಚ್ಚಾಗಿದೆ.) ಈ ಪ್ರಕಾರ ಶಿವಶರಣರು ಬಿಜ್ಜಳನ ಆರಂಭ ಕಾಲದಲ್ಲಿ ಪ್ರಸಿದ್ಧಿಗೆ ಬಂದರು.

(ಮುಂದೆ ಸಾಗುವದು.)

---

# ಲಿಂಗಕ್ಕೆ ಶರಣೆನ್ನು ಮನವೆ.

ಲಿಂಗಕ್ಕೆ ಶರಣೆನ್ನು ಮನವೇ ।
ಮಹಾಲಿಂಗಕ್ಕೆ ಶರಣೆನ್ನು ಮನವೇ ॥ ಪ ॥

ಶಿವಭಕ್ತ ಸಂಗ ಸಂಗತಿಗಳ ಕರುಣಿಸಿ ।
ಶಿವಭಕ್ತ ದಾಸೋಹಿಯಾಗುವಂತನುಗ್ರೈದು ॥
ಭವ ವಿಕಾರವನೆಲ್ಲಲೊಲಿದು ಶಕ್ತಿಯನಿತ್ತು ।
ಭಾವ ಭಿನ್ನದ ಭ್ರಮೆಯ ಕಳೆದೋಡಿಸುವ ಮಹಾ ॥ ೧ ॥
ಲಿಂಗಕ್ಕೆ ಶರಣೆನ್ನು ಮನವೇ ॥

ಸ್ತುತಿ ನಿಂದೆಗಳ ಕೇಳಿ ಹಿಗ್ಗಿ ತಗ್ಗದ ತೆರ ।
ಧೃತಿಗೆಟ್ಟು ತಾಗು ನಿರೋಧಂಗಳಡರಲು ॥
ಮತಿಗೆಟ್ಟು ಕಳವಳಿಸಿ ಕಂಗೆಡದಿರುವಂತೆ ।
ಭಕ್ತಿ ಶಕ್ತಿಗಳಿಗೆ ಕರುಣಿಸಿ ಪೊರೆವಂಥಾ ॥ ೨ ॥
ಲಿಂಗಕ್ಕೆ ಶರಣೆನ್ನು ಮನವೇ ॥

ಹಿಸುಣತ್ವ ಹಿಂಗಿ ಮನ್ಮನದ ಮಸಕವನೆ ಮಾ- ।
ಣಿಸಿ ವಿಕಾರದ ವಿಷಯ ವಿಧಿಗಳ ತ್ಯಜಿಸಿ ॥
ಮುಸುರಿಕೊಂಡಿಹ ಸಟೆಯನೆ ಸಡಿಲಿಸಿ ಎನ್ನ ।
ಸಸಿನೆ ಸತ್ಯದ ಬಾಳ್ವೆಯನು ಅಳವಡಿಸುವ ॥ ೩ ॥
ಲಿಂಗಕ್ಕೆ ಶರಣೆನ್ನು ಮನವೇ ॥

ಸಮತೆ ಸೌಜನ್ಯ ಸೌಹಾರ್ದಂಗಳಿತ್ತೆನ್ನ ।
ತಮವ ಹರಿಸಿ ದಂಭ ದರ್ಪಗಳಡಗಿಸಿ ॥
ಶಮೆ ದಮೆ ಶಾಂತಿ ನಿರಹಂಕಾರಗಳನೀವ ।
ಭ್ರಮೆಯನಳಿದು ಶ್ರೀ ವೀರೇಶ್ವರ ಶರಣೆಂಬ ॥ ೪ ॥
ಲಿಂಗಕ್ಕೆ ಶರಣೆನ್ನು ಮನವೇ ॥

ಶ್ರೀ ವೀರೇಶ್ವರ ಬೆಂಗಳೂರುನಗರ

# ಶಿವಾನುಭವ.

ವರ್ಷ ೧೪]　　　　ಫೇಬ್ರುವರಿ ೧೯೪೦　　　　[ಸಂಚಿಕೆ ೫

## ಬಸವೇಶ್ವರನ ಕಾಲನಿರ್ಣಯ.

ಲೇಖಕರು:— ಶ್ರೀಮಾನ್ ಗೋವಿಂದ ಪೈ. ಮಂಜೇಶ್ವರ.

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು.)

ಇನ್ನು ಮಾತಾಮಹನೂ ದೌಹಿತ್ರನೂ ಆದ, ಈ ಕಳಚುರ್ಯ ಹಾಗೂ ಸಿಂದ ಬಿಜ್ಜಳರಿಬ್ಬರಲ್ಲಿ ಬಸವೇಶ್ವರನು ಓಲಗಿಸಿದ ಬಿಜ್ಜಳನು ಯಾವನೆಂದು ನೋಡೋಣ.

(೧) ಬಸವೇಶ್ವರನ ವಚನದಲ್ಲಿಯು ಭವಿಬಿಜ್ಜಳನು ವೀರಶೈವನಲ್ಲವೆಂದು ಖಂಡಿತವಿರುವುದರಿಂದಲೂ ಮೇಲೆ ಕಂಡಿರುವಂತೆ ಕ್ರಿ. ಶ. ೧೧೮೭ ರ ಬೆಣಚಮಟ್ಟಿಯ (ಬಿ) ಶಾಸನದಲ್ಲಿ ಸಿಂದ ಬಿಜ್ಜಳನನ್ನು ಪರಮಶೈವರಾದ ನಂಬಿ-ಓಹಿಲರೊಂದಿಗೆ ಹೋಲಿಸಿರುವುದರಿಂದ ಆತನು ಪ್ರಾಯಶಃ ವೀರಶೈವನೇ ಎನಿಸುವುದರಿಂದಲೂ ಸಿಂದಬಿಜ್ಜಳನು ಬಸವೇಶ್ವರನ ಬಿಜ್ಜಳನಾಗಿರಲಾರನು.

(೨) ಈ ಬೆಣಚಮಟ್ಟಿಯ (ಬಿ) ಶಾಸನದಲ್ಲಿ ಹೇಳಿರುವ ನಂಬಿ ಮತ್ತು ಓಹಿಲರ ಹೆಸರುಗಳು ಬಸವೇಶ್ವರನ ವಚನಗಳಲ್ಲಿ ದೊರೆವುದರಿಂದ, ಆ ಶಿವಭಕ್ತರನ್ನು ಬಸವೇಶ್ವರನು ಹೊಗಳಿದಂದಿನಿಂದ ತಾನೆ ಅವರು ಕರ್ಣಾಟಕದ ವೀರಶೈವರಲ್ಲಿ ಪ್ರಖ್ಯಾತರಾದರೆಂದಾದರೆ, ಬಸವೇಶ್ವರನ ವಚನಗಳು ಕ್ರಿ. ಶ. ೧೧೮೭ ನೆಯ ಈ ಶಾಸನಕ್ಕೆ ಸಾಕಷ್ಟು

ಹಿಂದೆಯೇ ರಚಿತವಾಗಿದ್ದು ಆಗ್ಗೆ ಲೋಕವಾಡಿಕೆಯಾಗಿರಬೇಕು ಎಂದಾಗುವುದರಿಂದ, ಮೇಲೆ ಕಂಡಿರುವಂತೆ ತನ್ನ ತಂಡೆಯಾದ II ಚಾವುಂಡನು ಕ್ರಿ. ಶ. ೧೧೭೦-೭೧ ರಲ್ಲಿ ಕಾಲವಾಗಿ ತಾನು ಪಟ್ಟಕ್ಕೆ ಬಂದರೂ ೧೧೮೦ ರಷ್ಟಕ್ಕೆ ರಾಜ್ಯಭಾರವನ್ನು ವಹಿಸಿಕೊಂಡ ಸಿಂದಬಿಜ್ಜಳನು ಬಸವೇಶ್ವರನ ಬಿಜ್ಜಳನಾಗಿರಲಾರನು.

(೩) ಸಿಂದ ಬಿಜ್ಜಳನು ಎಲ್ಲವೆಂಬಂತೆ ಶಾಸನಗಳಲ್ಲಿ ಅವನ ತಮ್ಮ ವಿಕ್ರಮಾದಿತ್ಯನ ಹೆಸರೂ ಇದ್ದು ಅವರು ಪ್ರಾಯಶಃ ಜತೆಯಾಗಿ ಆಳುತ್ತಿದ್ದರೆಂದೂ ಬೆಣಚಮಟ್ಟಿಯ (ಬಿ) ಶಾಸನದಲ್ಲಿ ವಿಕ್ರಮಾದಿತ್ಯನನ್ನು ಚಕ್ರವರ್ತಿ ಪದವಿಗೆ ಯೋಗ್ಯನಂದಿರುವುದರಿಂದ, ಬಿಜ್ಜಳನಿಗಿಂತ ಆತನು ಹೆಚ್ಚಿನ ಪ್ರತಾಪಿ ಎಂದೂ ತೋರುವುದರಿಂದ, ಸಿಂದ ಬಿಜ್ಜಳನೇ ಬಸವೇಶ್ವರ ಬಿಜ್ಜಳನಾಗಿದ್ದರೆ, ಬಸವೇಶ್ವರನ ವಚನಗಳಲ್ಲಿಯೂ ಅವರ ಸಮಕಾಲೀನನಾದ ಹರಿಹರನ (ಕ್ರಿ. ಶ. ಸು. ೧೧೪೫-೧೨೩೦) ಬಸವರಾಜದೇವರ ರಗಳೆಯಲ್ಲಿಯೂ ಇಬ್ಬರೂ ಸೋದರರ ಹೆಸರುಗಳ ಜತೆಯಲ್ಲಿ ಬಾರದಿರುತ್ತಿದ್ದಿಲ್ಲ. ಅಥವಾ ವಿಕ್ರಮಾದಿತ್ಯನ ಹೆಸರು ಒಮ್ಮೆಯಾದರೂ ಬಾರದಿರುತ್ತಿದ್ದಿಲ್ಲ. ಹಾಗಿಲ್ಲದ ಕಾರಣ ಬಸವೇಶ್ವರನ ಬಿಜ್ಜಳನು ಸಿಂದ ಬಿಜ್ಜಳನಲ್ಲ.

(೪) ಬಸವೇಶ್ವರನ ಮುಂಚೆ ಬಸವ ಎಂಬ ಅಂಕಿತನಾಮವು ವಾಡಿಕೆಯಾಗಿದ್ದಂತೆ ತಿಳಿಯುವುದಿಲ್ಲ, ಏವಂಚ ನಾನರಿಯೆ. ಅದಕಾರಣ ಚಾಳುಕ್ಯ IV ನೆಯ ಸೋಮೇಶ್ವರನ ಆಳಿಕೆಯ ಕ್ರೋಧಿ ಸಂ। ಪುಷ್ಯ ಶುದ್ಧ ೫ ಸೋಮವಾರ ಉತ್ತರಾಯಣ ಸಂಕ್ರಾಂತಿ = ಕ್ರಿ. ಶ. ೧೧೨೪ ದಿಸಂಬರ ೨೪ ಪುಷ್ಯ (ಶುದ್ಧವಲ್ಲ) ಬಹುಳ ೫ ಸೋಮವಾರ ಉತ್ತರಾಯಣ ಸಂಕ್ರಾಂತಿಯಂದಿನ ಲಕ್ಕುಂಡಿಯ ಶಾಸನದಲ್ಲಿ ೮೭ ಹೇಳಿರುವ ಬಸವರಸ ಸಿದ್ದಯ್ಯನೂ ಅದೇ ಅರಸನ ಶಾ. ಶ. ೧೧೦೮ ಪರಾಭವ ಸಂ। ಪುಷ್ಯ ಶುದ್ಧ ೧೩ ಗುರುವಾರ ಉತ್ತರಾಯಣ ಸಂಕ್ರಾಂತಿ = ಕ್ರಿ. ಶ. ೧೧೨೬ ದಿಸಂಬರ ೨೫ ಗುರುವಾರದ ಲಕ್ಕುಂಡಿಯ ಮತ್ತೊಂದು ಶಾಸನದಲ್ಲಿ ೮೮ ಹೇಳಿರುವ ಬಸವಿಸೆಟ್ಟಿಯೂ ಅದೇ ಅರಸನ ಪರಾ

೮೭. *SIE* ೧೯೨೭ (*SUPP*) ಪು. ೪, ನಂ. ೪೦, ೮೮. ಅದೇ. ಪು. ೪, ನಂ. ೪೮,



ಭವ-ಪ್ಲವಂಗ ಸಂ। ಗಳ ಅಂದರೆ ಕ್ರಿ. ಶ. ೧೧೮೬-೮೭ ರ ಅಣ್ಣಿಗೆರೆಯ ಶಾಸನದಲ್ಲಿ ೮೯ ಹೇಳಿರುವ ಹಡಪಳ ಬಸವಯ್ಯನೂ II ನೆಯ ವೀರ ಬಲ್ಲಾಳನ ಆಳಿಕೆಯ ೧೩ನೆಯ ವರ್ಷದಿ ದುಂದುಭಿ ಸಂ। ಜ್ಯೆಷ್ಠ ಶುದ್ಧ ೮ ಗುರುವಾರ = ಕ್ರಿ. ಶ. ೧೨೦೨ ಮೇ ೩೦ ರ ಅಣ್ಣಿಗೆರೆಯ ಮತ್ತೊಂದು ಶಾಸನದಲ್ಲಿ ೯೦ ಹೇಳಿರುವ ಬಸವಯ್ಯ ದಂಡನಾಯಕನೂ ತಂತಮ್ಮ ಆಯಾ ಹೆಸರುಗಳನ್ನು ಬಸವೇಶ್ವರನ ಬಸವರಸ, ಬಸವಿ (ದೇವ), ಬಸವಯ್ಯ ಎಂಬೀ ಹೆಸರುಗಳಿಂದ ೯೧ ತಾನೆ ಹೊಂದಿರಬೇಕೆಂದು ಸಾಕಷ್ಟು ಪ್ರತ್ಯಕ್ಷವಿರುವುದರಿಂದ, ಇವರಲ್ಲಿಯ ಕ್ರಿ. ಶ. ೧೧೨೪ ರ ಬಸವರಸ ಸಿದ್ಧಯ್ಯನಿಗೆ ಆಗ್ಗೆ ಸುಮಾರು ೩೦ ವರ್ಷವೆಂದರೂ ಬಸವೇಶ್ವರನ ಹೆಸರು ಕ್ರಿ. ಶ. ೧೧೫೪-೫೫ ರೊಳಗೆ ಉತ್ತರ ಕರ್ಣಾಟಕದಲ್ಲಿ ಪ್ರಖ್ಯಾತವಾಗಿರಬೇಕು. ಕ್ರಿ. ಶ. ೧೧೭೦-೭೧ ರಲ್ಲಿ II ನೆಯ ಚಾವುಂಡನು ಕಾಲವಾದ ಮೇಲೆ ೧೧೭೪ ರಲ್ಲಿ ಆತನ ಹೆಂಡತಿ ಸಿರಿಯಾದೇವಿ ರಾಜ್ಯಭಾರ ಮಾಡುತ್ತಿದ್ದಳೆಂದೂ ಅವರ ಮಗನಾದ ಸಿಂದ ಬಿಜ್ಜಳನು ಆಗ್ಗೆ ಇನ್ನೂ ಕುಮಾರನಾಗಿದ್ದನೆಂದೂ ಮೇಲೆ ಕಂಡಿರುವುದರಿಂದ ೧೧೫೪—೫೫ ಇನ್ನೂ ಹುಟ್ಟಿರಲಿಲ್ಲವೇನೋ.

(೫) ಶಿವಭಕ್ತನಾದ ಏಕಾಂತದ ರಾಮಯ್ಯನು ಅಬ್ಬಲೂರಿನ ಜೈನ ಬಸದಿಯಲ್ಲಿಯ ಜಿನಮೂರ್ತಿಯನ್ನು ಕೆಡವಿ ಅಲ್ಲಿ ವೀರಸೋಮನಾಥನ ಲಿಂಗವನ್ನು ಪ್ರತಿಷ್ಠಿಸಿರುವನೆಂದು ಜೈನರು ಮಹಾಮಂಡಲೇಶ್ವರನಾದ ಬಿಜ್ಜಳನಲ್ಲಿ ದೂರುಕೊಡುತ್ತಲೆ, ಆತನು ರಾಮಯ್ಯನನ್ನು ಕರತರಿಸಿ ತಕ್ಕ ವಿಚಾರ ನಡಿಸಿ ರಾಮಯ್ಯನಲ್ಲಿ ತಪ್ಪಿಲ್ಲವೆಂದು ಕಂಡು ಜೈನರಿಗೆ ಬುದ್ಧಿ ಹೇಳಿ ಅವರನ್ನು ಹಿಂದಟ್ಟಿ ಏಕಾಂತದ ರಾಮಯ್ಯನ ಕಾಲು ತೊಳೆದು ಅವನಿಗೆ ಜಯಪತ್ರವಿತ್ತು ಅವನ ಅದೇ ವೀರಸೋಮನಾಥ ದೇವಾಲಯಕ್ಕೆ ಬನವಾಸಿ ೧೨೦೦೦ದ ಸತ್ತಳಿಗೆ ೭೦ರಲ್ಲಿಯ ಗೋಗಾವೆ ಎಂಬ ಹಳ್ಳಿಯನ್ನು ದತ್ತಿಬಿಟ್ಟನೆಂದೂ ಆ ಮೇಲೆ ಚಾಳುಕ್ಯ IV ನೇ ಸೋಮೇಶ್ವರನೂ ಏಕಾಂತ ರಾಮಯ್ಯನನ್ನು ಕರೆತರಿಸಿ ಆ ದೇವಾಲ

೮೯. *SIE* ೧೯೨೯, *APP. E.* ಪು. ೫೩. ನಂ. ೧೯೬.

೯೦. ಅದೇ. ನಂ. ೧೯೩, ೯೧. ‘ಎಲೆ ಬಸವ, ಬಸವಣ್ಣ, ಬಸವಯ್ಯ, ಬಸವರಸ, ಬಸವರಾಜ, ಬಸವಿದೇವ ಕೇಳಯ್ಯಾ’ (ಬಸವರಾಜದೇವರ ರಗಳೆ, ಪು. ೫೦)

ಯಕ್ಕೆ ದತ್ತಿಬಿಟ್ಟನೆಂದೂ ಆ ಬಳಿಕ ಕಾದಂಬ ಮಹಾಮಂಡಳೇಶ್ವರ ಕಾಮ ದೇವನೂ ರಾಮಯ್ಯನನ್ನು ಬರಿಸಿಕೊಂಡು ಆ ದೇವಾಲಯಕ್ಕೆ ದತ್ತಿ ಬಿಟ್ಟನೆಂದೂ ತೇದಿಯಿಲ್ಲದ ಅಬ್ಬಲೂರಿನ ಶಾಸನದಲ್ಲಿ[೯೨] ಹೇಳಿದೆ. ಈ ಶಾಸನವ (ಇತರ ಶಾಸನಗಳಿಂದ ಕ್ರಿ. ಶ. ೧೧೮೧ ರಿಂದ ೧೨೦೩ರ ವರೆಗೆ ತೇದಿದೊರೆವ) ಕಾದಂಬ ಕಾಮದೇವನ ಆಳಿಕೆಯಲ್ಲಿ ಹುಟ್ಟಿದುದರಿಂದ ಇದರ ತೇದಿ ಸು. ೧೧೯೦ ಆಗಿರಬಹುದು. ಈ ಏಕಾಂತದ ರಾಮಯ್ಯನನ್ನು ಕುರಿತು

ಆ ಸಮಯವೊಂದೆಸೆಯೊಳಿರಲು
ಲ್ಲಾಸದಿಂ ಬಸವಂ ಸಹಿತ ಮಹಿ
ಮಾಸಮರ್ಥರು ಭಕ್ತರೋಲಗವಿತ್ತು ಕುಳ್ಳಿರಲು ॥೩೭॥
ಧಾರುಣೀಶನು ಬಿಜ್ಜಳನು ಪರಿ
ವಾರ ಸಹಿತಂ ಬಂದು ನೋಡಲು
ಪೌರಜನ ತಾವೆಲ್ಲರುಂ ನಡೆತಂದು ಹಿಂದಿರಲು ।
ವೀರಶೃಂಗಾರದೊಳಮರ್ದಿಭ
ವೈರಿಯಂತೇಕಾಂತ ರಾಮನು.........॥೩೮॥

ತನ್ನ ತಲೆಯನ್ನು ಕಡಿದುಕೊಂಡು ಏಳು ದಿನಗಳ ಬಳಿಕ ಅದನ್ನು ಮರಳಿ ಅಟ್ಟಿಗೆ ಸಂದಿಸಿದ ಪವಾಡವನ್ನು ಮೆರಸಿದನೆಂದು ಬಸವ ಪುರಾಣದಲ್ಲಿ (ಸಂ. ೫೨) ಹೇಳಿರುವುದರಿಂದ, ಏಕಾಂತದ ರಾಮಯ್ಯನ ಬಿಜ್ಜಳನೂ ಬಸವೇಶ್ವರನ ಬಿಜ್ಜಳನೂ ಒಬ್ಬನೇ ಎಂದಾಗುತ್ತದೆ. ಆ ಬಿಜ್ಜಳನು ರಾಮಯ್ಯನಿಗೆ ದತ್ತಿಬಿಟ್ಟ ಗೋಗಾವೆ ಇರುವ ಬನವಾಸಿ ೧೨೦೦೦ವಾದರೊ ಮೇಲೆ ಕಂಡಿರುವಂತೆ ಕಳಚೂರ್ಯ ಬಿಜ್ಜಳನ ರಾಜ್ಯದಲ್ಲಿ ತಾನೇ ಸೇರಿದ್ದಿತ್ತಲ್ಲದೆ ಸಿಂದ ಬಿಜ್ಜಳನ ಸಿಂದವಾಡಿಯ ರಾಜ್ಯದಲ್ಲಿ ಯಾವಂದೂ ಇದ್ದಿಲ್ಲದ್ದುದರಿಂದ, ಬಸವೇಶ್ವರ ಬಿಜ್ಜಳನು ಕಳಚೂರ್ಯ ಬಿಜ್ಜಳನಲ್ಲದೆ ಸಿಂದ ಬಿಜ್ಜಳನಲ್ಲ. ಏಕಾಂತದ ರಾಮಯ್ಯನಿಗೆ ಬಿಜ್ಜಳನು ದತ್ತಿಬಿಟ್ಟಂದು ಅತನು ಮಹಾಮಂಡಳೇಶ್ವರನಾಗಿದ್ದನೆಂದು ಅಬ್ಬಲೂರಿನ ಶಾಸನದಲ್ಲಿ ಸ್ಪಷ್ಟವಾಗಿ ಹೇಳಿರುವುದರಿಂದ, ಕಳಚೂರ್ಯ ಬಿಜ್ಜಳನು ಮಹಾಮಂಡಳೇಶ್ವರನಾಗಿದ್ದ ಕ್ರಿ. ಶ. ೧೧೪೦-೪೫ ರಿಂದ ೧೧೬೨ ರೊಳಗೆ ಏಕಾಂತದ ರಾಮಯ್ಯನು ಅವನ ಅಸ್ಥಾನಕ್ಕೆ ಹೋದಾಗ ಅಲ್ಲಿದ್ದನೆಂಬ

೯೨. *FKD* ಪು. ೪೨೨—೪೮೪; ಕವಿಚರಿತೆ ೧, ಪು. ೨೯೭-೨೯೮.



ಬಸವೇಶ್ವರನು ಆ ಮುಂಚಿನಿಂದಲೇ ಬಿಜ್ಜಳನನ್ನು ಓಲಗಿಸುತ್ತಿರಬೇಕು. ಅಂದರೆ ಬಿಜ್ಜಳನು ಮಹಾಮಂಡಳೇಶ್ವರನಾಗಿದ್ದನೆಂದು ತಾನೇ ಬಸವೇಶ್ವರನು ಆತನಲ್ಲಿಗೆ ಹೋಗಿರಬೇಕು.

(೬) ಹರಿಹರನ ರೇವಣ ಸಿದ್ದೇಶ್ವರನ ರಗಳೆಯಲ್ಲಿ

ಅಂತಿರ್ದು ಮತ್ತೆ ಮಂಗಳವಾಡದೊಳ್ಪೊಕ್ಕು
ಸಂತತಂ ಬಿಜ್ಜಳನ ಸಭೆಯೊಳ್ಮನಂ ಮಿಕ್ಕು (ಪು. ೨೯)
..................................
ಇರಲಿತ್ತಲತ್ತ ಮಂಗಳವಾಡದೊಳಗಿರ್ಪ
ನರಪ ಬಿಜ್ಜಳರಾಯ ನೋಲಗದೊಳೆಸೆದಿರ್ಪ
ಸಮಯದೊಳ್ ಮಾತಃಮಾತಿಂ ಮಾಸನೂರಲ್ಲಿ (ಪು. ೩೧)
... ........ ....................
ಮಂಗಳವಾಡದೊಳ್ ಗುಡಿಗಟ್ಟೆ ಸಕಲ ಪರಿಜನ ಸಹಿತಂ
ಬಿಜ್ಜಳರಾಯನಿದಿರ್ಗೊಂಡು ........(ಪು. ೩೭)

ಎಂದೂ ಬಸವರಾಜ ದೇವರ ರಗಳೆಯಲ್ಲಿ (ಪು. ೨೧) ಬಸವೇಶ್ವರನಿಗೆ ಸ್ವಪ್ನದಲ್ಲಿ ಸಾಕ್ಷಾತ್ಕರಿಸಿದ ಕೂಡಲ ಸಂಗಮೇಶ್ವರನು 'ಎಲೆ ಮಗನೆ ಬಸವ. ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು' ಎಂದೂ ಹೇಳಿರುವಲ್ಲಿ ಮಂಗಳವಾಡವು ಬಿಜ್ಜಳನ ರಾಜಧಾನಿಯಾಗಿದ್ದು ಬಸವೇಶ್ವರನು ಅವನ ಆಸ್ಥಾನವನ್ನು ಹೊಕ್ಕಂದು ಬಿಜ್ಜಳನು ಆ ರಾಜಧಾನಿಯಲ್ಲಿ ಇದ್ದನೆಂದೂ ಬಸವೇಶ್ವರನು ಬಿಜ್ಜಳನನ್ನು ಓಲಗಿಸುತ್ತಿದ್ದಾಗ ಅವನ ಆಸ್ಥಾನದಲ್ಲಿ ಮಂಡಳೇಶ್ವರರೂ ಮಹಾಸಾಮಂತರೂ ಇದ್ದರೆಂಬ ಬಸವರಾಜದೇವರ ರಗಳೆಯಲ್ಲಿ (ಪು. ೩೫) ಮಹಾಮಂಡಳೇಶ್ವರರನ್ನು ಹೇಳದಿರುವುದರಿಂದ, ಸ್ವಯಂ ಬಿಜ್ಜಳನೇ ಆಗ್ಗೆ ಮಹಾಮಂಡಳೇಶ್ವರನಾಗಿದ್ದನೆಂದೂ, ತಿಳಿಯುತ್ತದೆ, ಕ್ರಿ, ಶ, ೧೧೪೭ರ ಮಾಸವಾಡದ ಶಾಸನದಿಂದ[೯೩] ಕಳಚೂರ್ಯ ಬಿಜ್ಜಳನ ರಾಜಧಾನಿ ಆಗ್ಗೆ ಮಂಗಳವಾಡವೆಂದು ಕಂಡಿರುವೆವಲ್ಲದೆ, ಮೇಲೆ ಕಂಡಿರುವಂತೆ ಹೇಮಾದ್ರಿಯ ಮಂಗಲವೇಷ್ಟಕನಾದ ಬಿಲ್ಲಳನು ಸಿಂದ ಬಿಜ್ಜಳನೇ ಎಂದು ನಿಶ್ಚಯವೂ

೯೩. ಹರಿಹರದೇವ, ಪು. ೪೪.

ಇಲ್ಲ, ಮಂಗಲವೇಷ್ಟಕ ಎಂದು ಮಂಗಳವೇಡೆಯೂ ಹರಿಹರನ ರಗಳೆಗಳ ಮಂಗಳವಾಡ ( = ಮಂಗಲವಾಟಕ) ವೂ ಒಂದೇ ಊರೋ ಬೇರೆ ಬೇರೆಯೋ ಎಂದು ನಿಶ್ಚಯವೂ ಇಲ್ಲ. ಆತಏವ ಮಂಗಳವಾಡದ ಬಿಜ್ಜಳನು ಆಗ್ಗೆ ಮಹಾಮಂಡಳೇಶ್ವರನಾಗಿದ್ದ ಕಳಚೂರ್ಯ ಬಿಜ್ಜಳನೆಂದೇ ಸಿದ್ಧವಾಗುವುದರಿಂದ, ಬಸವೇಶ್ವರನ ಬಿಜ್ಜಳನು ಆತನೇ ವಿನಾ ಸಿಂದ ಬಿಜ್ಜಳನಲ್ಲ.

(೭) 'ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ. ಮಾನವ ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಯ್ಯ! ಒಬ್ಬ ಜಂಗಮದಭಿಮಾನದಿಂದ ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು, ಸಂದಿತ್ತು ಕೂಡಲ ಸಂಗಮದೇವ ನಿಮ್ಮ ಕವಳಿಕೆಗೆ' ಎಂಬೀ ವಚನದಲ್ಲಿ ೯೪ ಬಸವೇಶ್ವರನು ಕಲ್ಯಾಣಕ್ಕೂ ಚಾಳುಕ್ಯರಾಯನ ಆಳಿಕೆಯ ಮುಗಿತಾಯಕ್ಕೂ ಗಂಟಿಕ್ಕಿರುವುದರಿಂದ, ಆ ಕಲ್ಯಾಣವು ಕಲ್ಯಾಣದ ಚಾಳುಕ್ಯರೆಂಬ ಪಡುವಣ ಚಾಳುಕ್ಯರ ರಾಜಧಾನಿಯಾಗಿದ್ದ ಕಲ್ಯಾಣವೆಂದು ತಿಳಿವಂತೆಯೇ, ಐಶ್ವರ್ಯದ ನಶ್ವರತೆಯನ್ನೂ ಶೃಂಗಾರದ ಅಸ್ಥಿರತೆಯನ್ನೂ ನಿದರ್ಶಿಸಲಿಕ್ಕೆ ವಾತಾಪಿಯ ಚಾಲುಕ್ಯರ ರಾಜಧಾನಿಯಾಗಿದ್ದ ಬಾದಾಮಿಯನ್ನಾಗಲಿ, ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಾನ್ಯಖೇಟವನ್ನಾಗಲಿ ಕೇಳದೆ, ಕಲ್ಯಾಣವನ್ನು ತಾನೆ ಹೇಳಿರುವುದರಿಂದ, ಬಸವೇಶ್ವರನು ಕಲ್ಯಾಣದ ಆ ಚಾಳುಕ್ಯರಾಯನ ಆಳಿಕೆ ಕೊನೆಗಂಡುದನ್ನು ಸ್ವಯಂ ಕಂಡಿರಬೇಕು, ಆತನು ಕಂಡ ಕಲ್ಯಾಣವು ಐಶ್ವರ್ಯಸಂಪನ್ನವಾಗಿರಬೇಕು, ಶೃಂಗಾರಭರಿತವಾಗಿರಬೇಕು ಎಂದು ಮಾತ್ರವಲ್ಲ, ಆತನಿಗೆ ಆ ಕಲ್ಯಾಣದಲ್ಲಿ ತಕ್ಕಷ್ಟು ಆತ್ಮಸಂಯೋಗವೂ (*Personal Interest*), ಆತಏವ ಸಮೀಪತರವಾದ ಸಂಸರ್ಗವೂ, ಇದ್ದಿರಬೇಕು, ಅಂದರೆ ತನ್ನ ಜೀವಮಾನದ ಕೆಲವಾದರೂ ಸುಭಿಕ್ಷ ವರ್ಷಗಳನ್ನು ಆತನು ಅಲ್ಲಿ ಸಲ್ಲಿಸಿರಬೇಕು ಎಂದೂ ತಿಳಿಯುತ್ತದೆ. ಆ ಚಾಳುಕ್ಯರಾಯನ ಆಳಿಕೆ ( = ಆಳ್ತನ, ಅರಸುತನ, ಪ್ರಭುತ್ವ) ತೆಗೆಯಿತ್ತು ಅಂದರೆ ಅಪಹರಿಸಲ್ಪಟ್ಟಿತು. ೯೫ ಎಂಬುದರಿಂದ ಅವನ ರಾಜ್ಯಪದವನ್ನು ಪರಕೀಯನೊಬ್ಬನು ಸೆಳಕೊಂಡಿರಬೇಕೆಂದೂ ಅದು ಸಂದಿತ್ತು ಕೂಡಲ

೯೪. ಬಸವೇಶ್ವರನ ವಚನಗಳು, ಪು. ೯೧, ನಂ. ೯೦, ೯೫. ತೆಗವೆನೇ ಬುಧಗಿರಿಕ್ಷತ್ರ ವೃತ್ತಿಯನುಚಿತವಂ ಮರೆದು॥ (ಬಸವ ಪುರಾಣ, ೪೫. ೧೯)



ಸಂಗಮದೇವ ನಿಮ್ಮ ಕವಳಿಕೆಗೆ ಅಂದರೆ ಅದು ಶಿವನ ಕಪಾಲಿಕೆ ಎಂಬ ಭಿಕ್ಷಾ ಪಾತ್ರಕ್ಕೆ ೯೬ ಸಂದಿತು ಎಂಬುದರಿಂದ ಅದು ಮುಗಿಯಿತು, ನಾಮಶೇಷವಾಯಿತು ಎಂದೂ ಸ್ಪಷ್ಟವಿರುವುದರಿಂದ ಆ ಚಾಳುಕ್ಯ, ರಾಯನಾದರೊ ಕಳಚುರ್ಯ ಬಿಜ್ಜಳನು ತನ್ನ ರಾಜ್ಯಾಧಿಕಾರವನ್ನು ತೆಗೆವವರೆಗೆ, ತನ್ನ ಪ್ರಭುತ್ವವನ್ನು ಆತನು ಅಪಹರಿಸುವವರೆಗೆ, ಚಾಳುಕ್ಯ ಸಾಮ್ರಾಜ್ಯವನ್ನು ಸರ್ವ ಸಂಪನ್ನವಾದ ಕಲ್ಯಾಣದ ರಾಜಧಾನಿಯಿಂದ ಆಳಿದ ಪಡುವಣ ಚಾಳುಕ್ಯ III ತೈಲನೇ ವಿನಾ ಕಳಚುರ್ಯರ ಬಳಿಕ ಆ ಚಾಳುಕ್ಯರ ಪಟ್ಟದಲ್ಲಿ ಕುಳ್ಳಿರಿಸಲ್ಪಟ್ಟರೂ ಮೇಲೆ ಕಂಡಿರುವಂತೆ ಕಳಚುರ್ಯ ಬಿಜ್ಜಳನಿಂದ ಈಚೆಯ ಕಳಚುರ್ಯರ ಆಳಿಕೆಯಲ್ಲಿಯೋ ಅಲ್ಲವಾದರೆ ಅವರ ಪತನದೊಂದಿಗೆ ಕುಂದತೊಡಗಿದ ಕಲ್ಯಾಣದಲ್ಲಿ ೧-೨ ವರ್ಷವೇನೋ ತನ್ನ ರಾಜಧಾನಿ ಇದ್ದ ಚಾಳುಕ್ಯ IVನೇ ಸೋಮೇಶ್ವರನಲ್ಲ. ಹೀಗೆ ಬಸವೇಶ್ವರನ ಚಾಳುಕ್ಯರಾಯನು IIIತೈಲನೆಂದು ಖಂಡಿತವಾಗುವುದರಿಂದ ಅವನ ಬಿಜ್ಜಳನು ಆ IIIನೇತೈಲನಿಂದ ಕಲ್ಯಾಣದ ಸಿಂಹಾಸನವನ್ನು ಸೆಳಕೊಂಡ ಕಳಚುರ್ಯ ಬಿಜ್ಜಳನಲ್ಲದೆ ಬೇರೊಬ್ಬನಲ್ಲ. ಬಸವೇಶ್ವರನೊಮ್ಮೆ ಕಲ್ಯಾಣದಲ್ಲಿ ಬಿಜ್ಜಳನ ಆಸ್ಥಾನದಲ್ಲಿದ್ದಾಗ ಆಕಾಶದಿಂದ ಅಕಸ್ಮಿಕವಾಗಿ ಬಂದು ಅವರ ಸಮ್ಮುಖದಲ್ಲಿ ಬಿದ್ದ ಓಲೆಯನ್ನೋದಿ

ನನ್ನಿಯನೆ ಪೇಳುವೆನರಸ ಕೇಳ್ ।
ನಿನ್ನ ಚಾಳುಕ್ಯಾನ್ವಯದವರು ।
ಮುನ್ನ ನಿಕ್ಷೇಪಿಸಿದದೆಂಬತ್ತೆಂಟು ಕೋಟಿ ಧನ ।
ನಿನ್ನ ಸಿಂಹಾಸನದ ಕೆಳಗಿದೆ ॥

ಎಂದು ತೋರಿಸಿಕೊಟ್ಟನೆಂದು ಬಸವ ಪುರಾಣದಲ್ಲಿ (೫. ೫೭) ಹೇಳಿರುವಲ್ಲಿಯೂ ಬಿಜ್ಜಳನೆಂಬ ಹೆಸರು ಕಳಚುರ್ಯರಲ್ಲಿ ಮತ್ತು (ಬಡಗಡ) ಸಿಂದರಲ್ಲಿಯೇ ವಿನಾ ಚಾಳುಕ್ಯರಲ್ಲಿ ಇಲ್ಲದಿದ್ದರೂ ಬಸವೇಶ್ವರನ ಬಿಜ್ಜಳನನ್ನು ಚಾಳುಕ್ಯಾನ್ವಯದವನೆನ್ನಬೇಕಾದರೆ, ಸ್ವಯಂ ಚಾಳುಕ್ಯವಂಶೀಯನಲ್ಲದ ಆತನು ಚಾಳುಕ್ಯರ ಉತ್ತರಾಧಿ

೯೬. ಪ್ರಮಥ ರುದ್ರ ಪುರಾತನಗಣದೊ। ತ್ತಮರ ಕವಳಿಗೆಗಯ್ದಿ ಸಂದಿತ್ತು (ಬಸವ ಪುರಾಣ, ೪೬. ೬೨) ಬಿಜ್ಜಳನ ಸಾಮ್ರಾ। ಜ್ಯೋನ್ನತಿಯನೀಶನ ಕವಳಿಗೆಯೊಳಂತು ತೊಡಯಿಸುತ॥ (ಅದೇ ೬೧ ೬.)

ಕಾರಿಯಾದವರೂ ಆಗಿರಬೇಕು, ಅಂದರೆ ಚಾಳುಕ್ಯರಂತೆಯೇ ಅವನೂ ಕಲ್ಯಾಣದ ಒಡೆಯನಾಗಿ ಅವರ ರಾಜ್ಯವನ್ನು ಆಳಿರಬೇಕು ಎಂಬ ಕಾರಣದಿಂದ ತಾನೇ ಅವನನ್ನು ಹಾಗೆಂದಿರಬೇಕೆಂದು ಪ್ರತ್ಯಕ್ಷವಿರುವುದರಿಂದ, ಬಸವೇಶ್ವರನ ಬಿಜ್ಜಳನು ಚಾಳುಕ್ಯರ ಉತ್ತರಾಧಿಕಾರಿಯಾಗಿ ಕಲ್ಯಾಣದಲ್ಲಿ ಆಳಿದ ಬಿಜ್ಜಳನಾಗಿರಬೇಕು, ಅತಏವ ಕಳಚುರ್ಯ ಬಿಜ್ಜಳನಾಗಿರಬೇಕು ಎಂದು ಬೇಕಾದಷ್ಟು ಸ್ಪಷ್ಟವಾಗುತ್ತದೆ. ಹರಿಹರನ ಬಸವರಾಜದೇವರ ರಗಳೆಯಲ್ಲಿ ಬಿಜ್ಜಳನ ರಾಜಧಾನಿ ಮಂಗಳವಾಡ ಎಂದದೆಯಲ್ಲದೆ ಕಲ್ಯಾಣದ ಹೆಸರಿಲ್ಲವಾದರೆ, ಅಪೂರ್ಣವಾಗಿರುವ ಆ ಗ್ರಂಥದ ದೊರೆತಷ್ಟರ ಭಾಗದಲ್ಲಿ, ಬಿಜ್ಜಳನ ಆಸ್ಥಾನದಲ್ಲಿ ಮಹಾಮಂಡಳೇಶ್ವರರೂ ಇದ್ದರೆನ್ನದೆ ಮಂಡಳೇಶ್ವರರೂ ಮಹಾ ಸಾವಂತರೂ ಇದ್ದರೆಂದು (ಪು. ೩೫) ಮಾತ್ರ ಹೇಳಿರುವ ಕಾರಣದಿಂದ ಬಿಜ್ಜಳನು ಇನ್ನೂ ಮಹಾಮಂಡಳೇಶ್ವರನಾಗಿದ್ದಂದಿನ ಕಥೆಯೇ ಮುಗಿಯುವುದರಲ್ಲಿ, ಆ ಮೇಲಣ ಕಥಾಭಾಗವು ನಷ್ಟವಾದರೆ ಎಂದು ಪ್ರತ್ಯಕ್ಷವಿರುವುದರಿಂದ ಬಿಜ್ಜಳನು ಮಹಾಮಂಡಲೇಶ್ವರನಾಗಿದ್ದಾಗ ಅವನ ರಾಜಧಾನಿ ಮಂಗಳವಾಡವೆಂದು ಮಾತ್ರ ನಿಷ್ಪನ್ನವಾಗುತ್ತದಲ್ಲದೆ, ಆತನು ಚಕ್ರವರ್ತಿಯಾದ ಮೇಲೂ ಕಲ್ಯಾಣವು ಆತನ ರಾಜಧಾನಿಯಾಗಿದ್ದಿಲ್ಲ ಎಂದಲ್ಲ. ಅತಏವ ಬಸವೇಶ್ವರನ ಬಿಜ್ಜಳನು ಕಳಚುರ್ಯ ಬಿಜ್ಜಳನೇ ವಿನಾ ಚಾಳುಕ್ಯರ ಉತ್ತರಾಧಿಕಾರಿಯೂ ಅಲ್ಲದ, ಕಲ್ಯಾಣದಲ್ಲಿ ಎಂದೂ ನೆಲೆವೀಡು ಇದ್ದಿಲ್ಲದೆ ಸಿಂದ ಬಿಜ್ಜಳನೆಂದಿಗೂ ಅಲ್ಲ.

ಇವೆಲ್ಲ ಕಾರಣಗಳಿಂದ ಕಳಚುರ್ಯ ಬಿಜ್ಜಳನೇ ಬಸವೇಶ್ವರನ ಬಿಜ್ಜಳನೆಂದು ನಿಷ್ಕೃಷ್ಟವಾಗುವುದರಿಂದ, ಇನ್ನು ಬಸವೇಶ್ವರನ ಜೀವಮಾನದಲ್ಲಿಯ ವಿಶೇಷ ಘಟನೆಗಳನ್ನು ಹೀಗೆ ತೇದಿಸಬಹುದು.

ತನ್ನ ತಂದೆಯಾದ ಪೆರ್ಮಾಡಿಯ ಕಾಲಾನಂತರ ಕ್ರಿ. ಶ. ೧೧೪೦-೪೨ ರಲ್ಲಿ ಪಟ್ಟವೇರಿ ಮಹಾಮಂಡಳೇಶ್ವರನಾಗಿದ್ದು ಆ ಮೇಲೆ ೧೧೬೧-೬೨ ರಲ್ಲಿ ಕಲ್ಯಾಣದ ಚಕ್ರವರ್ತಿಯಾದ ಕಳಚುರ್ಯ ಬಿಜ್ಜಳನು ಇನ್ನೂ ಮಹಾಮಂಡಳೇಶ್ವರನಾಗಿದ್ದಾಗ ಕ್ರಿ. ಶ. ಸು. ೧೧೫೦ ರಲ್ಲಿ ಆತನ ಆಸ್ಥಾನದಲ್ಲಿ ಹೊಕ್ಕಿರಬಹುದಾದ ಬಸವೇಶ್ವರನ ವಯಸ್ಸು ಆಗ್ಗೆ ೨೦ರಿಂದ ೩೫ ರೊಳಗೆಂದರೆ ಈತನು ಕ್ರಿ. ಶ. ೧೧೧೫ ರಿಂದ ೧೧೩೦ ರೊಳಗೆ ಹುಟ್ಟಿರಬೇಕು. ಬಸವೇಶ್ವರನು ಭೂಮಿ ದೇವಾಗ್ರಣಿಯಾದ (ಬಸವಪುರಾಣ ೨. ೪೬) ಮಾದಿರಾಜನೆಂಬ ವಿಪ್ರನ (ಬಸವರಾಜದೇವರ ರಗಳೆ, ಪು. ೫) ಮಗನು. ಮೇಲೆ ಕಂಡಿರುವ ಅರ್ಜುನವಾಡದ ಶಾಸನದಿಂದ ಬಸವೇಶ್ವರನು ಮಾದಿರಾಜನ ಎರಡನೆಯ ಮಗನೆಂದು ತಿಳಿಯುತ್ತದೆ. ಬಸವೇಶ್ವರನ ಅಣ್ಣನಾದ ದೇವರಾಜನನ್ನು ದೇವರಾಜಮುನಿಯೆನೆಂದಿರುವುದರೊಂದಿಗೆ ಆತನ ಪುತ್ರ ಪೌತ್ರರನ್ನು ಆ ಶಾಸನದಲ್ಲಿ ಹೇಳಿರುವುದರಿಂದ ದೇವರಾಜನು ತನ್ನ ಅಪರ ವಯಸ್ಸಿನಲ್ಲಿ ಸನ್ಯಾಸವನ್ನು ಕೈಕೊಂಡನೆಂದು ತೋರುತ್ತದೆ. ಬಸವರಾಜದೇವರ ರಗಳೆಯಿಂದ (ಪು. ೫) ಬಾಗೇವಾಡಿಯ ಅಗ್ರೇಶ್ವರನೆಂದೂ ಬಸವ ಪುರಾಣದಿಂದ (೨. ೪೫-೪೬) ಬಾಗವಾಡಿಯ ಗ್ರಾಮಣೀಮಣಿ ಎಂದೂ ಅರ್ಜುನವಾಡದ ಶಾಸನದಿಂದ ಬಾಗವಾಡಿ ಪುರವರಾಧೀಶ್ವರನೆಂದೂ ತಿಳಿವ ಮಾದಿರಾಜನ ಬಾಗವಾಡಿಯಾದರೋ (ಬಡಗಣ) ಸಿಂದರ ಸಿಂದವಾಡಿಯ ರಾಜ್ಯದೊಂದು ವಿಭಾಗವೆಂದು ಮೇಲೆ ಕಂಡಿರುವ ಬಾಗಡಗೆ ಅಥವಾ ಬಾಗೆ (ನಾಡು) ೭೦ ರಲ್ಲಿ ಇದ್ದಿತೆಂದು ತಿಳಿಯುವುದರಿಂದ,[೯೭] ಮಾದಿರಾಜನು (ಬಡಗಣ) ಸಿಂದರ ಕೆಳಗೆ ಬಾಗವಾಡಿಯ ಊರೊಡೆಯನಾಗಿರಬೇಕು.[೯೮] ಹಾಗಾದರೆ ಬಸವೇಶ್ವರನು ಬಡಗಣ ಸಿಂದವಾಡಿಯಲ್ಲಿ ಜನ್ಮವೆತ್ತಿದನೆಂದು ನಿಷ್ಪನ್ನವಾಗುತ್ತದೆ.

ಮಾದಿರಾಜನು ಬಸವೇಶ್ವರನಿಗೆ ಗರ್ಭಾಷ್ಟಕದಲ್ಲಿ ಮುಂಜಿಗಟ್ಟಲೆಂದು ಶುಭಲಗ್ನಕ್ಕೆ ತೊಡಗುತ್ತಲೇ ಬಸವೇಶ್ವರನು 'ಪ್ರಕಟಿಸದಿರಾ ಮುಂಜಿಯೆಂಬುದನಕಟಪಾತಕವ, (ಬಸವ ಪುರಾಣ ೩. ೫೧) ಎಂದು ಅವನ್ನೊಲ್ಲದೆ ಬಾಗೆವಾಡಿಯನ್ನು ಬಿಟ್ಟು ಆ ಉಪನಯನಕ್ಕೆಂದು ಅಲ್ಲಿಗೆ ಬಂದಿದ್ದ ತನ್ನ ಸೋದರಮಾವನಾದ ಭಂಡಾರಿ ಬಲದೇವನ ಜತೆಯಲ್ಲಿ ಹೊರಟುಹೋದನೆಂದು ಬಸವ ಪುರಾಣದಲ್ಲಿ ಇದೆಯಾದರೂ ಅದಕ್ಕಿಂತ ಶಾನೆ ಹಿಂದಣ ಹಾಗೂ ಬಸವೇಶ್ವರನ ಸಮಕಾಲೀನನಾದ ಹರಿಹರನ ಬಸವರಾಜದೇವರ ರಗಳೆಯಲ್ಲಿ (ಪು. ೯-೧೧) ಷೋಡಶಪ್ರಾಯನಾದ ಬಸವೇಶ್ವರನು ಕರ್ಮಲತೆಯಂತಿದ್ದ ಜನಿವಾರವನ್ನು ಕಳೆದು ಬಿಸುಟೂ ಕೋತಿನ ಗಂಟಲನ್ನು ಬಿಗಿವಂತಿದ್ದ ಮೌಂಜಿಯನ್ನು ಹರಿದು ಬಿಸುಟೂ

---

೯೭. *E. I. XXI*, ಪು. ೧೧, ೯೮. ಅತಏವ ಜೈನ ಬಿಜ್ಜಳರಾಯ ಚರಿತೆಯಲ್ಲಿ (ಕ್ರಿ. ಶ. ೧೬೫೦) ಮಾದಿರಾಜನನ್ನು ಬಿಜ್ಜಳನ ಜೋಯಿಸನೆಂದಿರುವುದನ್ನು (ಕವಿಚರಿತೆ *II*, ಪು. ೪೨೮) ಒಪ್ಪಲಾಗುವುದಿಲ್ಲ.

ಬಾಗೆವಾಡಿಯಿಂದ ಹೊರಟು ಹೋದನೆಂದಿರುವುದರಿಂದ, ಆತನಿಗೆ ಗರ್ಭಾಷ್ಟಮದಲ್ಲಿ ಉಪನಯನವಾಗಿಯೇ ಆತನು ತನ್ನ ೧೬ನೆಯ ವಯಸ್ಸಿನಲ್ಲಿ ಬಾಗೇವಾಡಿಯನ್ನು ಬಿಟ್ಟಿರಬೇಕು. ಆ ಮೇಲೆ ಅವನು ತನ್ನ ಸೋದರ ಮಾವನಾದ ಆ ಬಲದೇವ ಮಂತ್ರಿಯ ಮಗಳನ್ನು ಮದುವೆಯಾದ ನೆಂಬಲ್ಲಿಯ (ಬಸವ ಪುರಾಣ, ಸಂ. ೪) ಬಲದೇವನು (ಬಡಗಣ) ಸಿಂದರಲ್ಲಿ II ಚಾವುಂಡನ ಕಾಲದಲ್ಲಿಯೂ ಅದಕ್ಕೆ ಹಿಂದೆಯೂ ಅಧಿಕಾರಿಯಾಗಿದ್ದನೆಂದು ಮೇಲೆ ಕಂಡಿರುವ ಬಲದೇವ ನಾಯಕನೆಂದು ತೋರುತ್ತದೆ ಮಾದಿರಾಜನ ಬಳಿಕ ಬಾಗೆವಾಡಿಯ ಪುರಾಧಿಪತ್ಯವು ಅವನ ಹಿರಿಯ ಮಗನಾದ ದೇವರಾಜನಿಗೆ ಸಲ್ಲಬೇಕಾದುದರಿಂದ, ಬಸವೇಶ್ವರನು ತನ್ನ ಮಾವನಾದ ಬಲದೇವನಲ್ಲಿದ್ದು ಅವನೊಂದಿಗೆ ಕೆಲ ಕಾಲ ಸಿಂದರಾಜನನ್ನು ಓಲಗಿಸುತ್ತಿದ್ದನೇನೋ, ಆ ಮೇಲೆ ಬಸವೇಶ್ವರನು ಅಲ್ಲಿಂದ ಹೊರಟು ಮಲಪ್ರಭಾ ಮತ್ತು ಕೃಷ್ಣಾನದಿಗಳು ಸಂಗಮಿಸುವಲ್ಲಿಯ ಕಪ್ಪಡಿಗೆ ಹೋಗಿ ಕೂಡಲ ಸಂಗಮೇಶ್ವರನ ಅರ್ಚನೆಯಲ್ಲಿ ನಿರತನಾಗಿರುವಲ್ಲಿ, ಒಂದಿರುಳು ಸಂಗಮೇಶ್ವರನು ಅವನ ಕನಸಿನಲ್ಲಿ ಅಪರೋಕ್ಷಿಸಿ 'ಎಲೆ ಮಗನೆ ಬಸವ ಬಸವಣ್ಣ ಬಸವಿದೇವ, ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು'(ಬಸವರಾಜದೇವರ ರಗಳೆ, ಪು. ೨೧) ಎಂದು ಎಚ್ಚರಿಸುತ್ತಲೆ, ಬಸವೇಶ್ವರನು ಅಲ್ಲಿಂದ ಹೊರಟು ಆಗ್ಗೆ ಕಳಚೂರ್ಯ ಬಿಜ್ಜಳನ ರಾಜಧಾನಿಯಾಗಿದ್ದ ಮಂಗಳವಾಡಕ್ಕೆ ಬಂದು ಅವನ ದಂಡನಾಯಕನೆಂದು ಮೇಲೆ ಕಂಡಿರುವ ಸಿದ್ಧಪಯ್ಯ ದಂಡನಾಯಕನ ಕೆಳಗೆ ಪ್ರಾಯಶಃ ಭಂಡಾರದ ಕಾಯಕದಲ್ಲಿ ನೇಮಿಸಲ್ಪಟ್ಟನು. ಹೀಗೆ ಅಲ್ಲಿ ನೇಮಿಸಲ್ಪಡುವಂದೇ ಬಸವೇಶ್ವರನು ಹೆಚ್ಚಿನ ಜೊಹೆಗಾರಿಕೆಯ ಉಚ್ಚಾಧಿಕಾರಕ್ಕೆ ಹಚ್ಚಲ್ಪಡದೆ ಪ್ರಾಯಶಃ ಕೆಲಸವನ್ನು ಕಲಿಯಲೆಂದೇ ಬೇರೊಬ್ಬನ ಕೈಕ್ಕೆಳಗೆ ಇರಿಸಲ್ಪಟ್ಟದರಿಂದ, ಆಗ್ಗೆ ಆತನಿಗೆ ೨೫ ರಷ್ಟಾದರೂ ವರ್ಷಗಳ ಪ್ರೌಢಿ ಇದೆಂದೂ ಆತನು ತನ್ನ ೧೬ನೆಯ ವರ್ಷದಲ್ಲಿ ಮನೆಬಿಟ್ಟಂದಿನಿಂದ ಮಂಗಳವಾಡದಲ್ಲಿ ನಿಯೋಗಿಸಲ್ಪಟ್ಟುದರ ನಡುವೆ ಹೆಚ್ಚಾದರೆ ೪-೫ ವರ್ಷಗಳೇನೋ ಸಂದಿರಬಹುದೆಂದೂ ತೋರುವುದರಿಂದ, ಬಿಜ್ಜಳನ ಆಸ್ಥಾನವನ್ನು ಹೊಕ್ಕಂದು ಹರೆಯಾದವನೂ (ಬಸವರಾಜದೇವರ ರಗಳೆ, ಪು. ೨೯) ಕುಮಾರನೂ (ಬಸವಪುರಾಣ, ೫. ೪೮) ಎಂದು ತಿಳಿವ ಬಸವೇಶ್ವರನು ಕ್ರಿ. ಶ.



೧೧೪೦ ರಲ್ಲಿ ಅಲ್ಲಿಗೆ ಹೋದನೆಂದರೆ ಆತನು ಕ್ರಿ ಶ. ೧೧೩೦ ರಲ್ಲೊ ಅದರ ೧-೨ ವರ್ಷಗಳ ಹಿಂದೊ ಹುಟ್ಟಿರಬೇಕು.

ಬಸವೇಶ್ವರನ ಮೊತ್ತಮೊದಲಣ ಮೇಲಧಿಕಾರಿಯಾಗಿದ್ದ ಸಿದ್ಧಪಯ್ಯ ದಂಡನಾಯಕನು ಬಿಜ್ಜಳನಲ್ಲಿ ಮಾತ್ರವಲ್ಲ, ಬಿಜ್ಜಳನ ಮಗನಾದ ಸೋವಿದೇವನಲ್ಲಿಯೂ ದಂಡನಾಯಕನಾಗಿದ್ದನೆಂದು ಶಾಸನಾಧಾರದಿಂದ ಮೇಲೆ ಕಂಡಿರುವುದರಿಂದ, ಹರಿಹರನೆಂದರುವಂತೆ (ಬಸವರಾಜದೇವರ ರಗಳೆ, ಪು ೩೧) ಆ ಸಿದ್ಧ ದಂಡಾಧಿಪನು ಅಪುತ್ರಿಕನಾಗಿ ಸತ್ತ ಮೇಲೆ ತಾನೆ ಬಸವೇಶ್ವರನು ಆತನ ಜಾಗದಲ್ಲಿ ಬಸವಣ್ಣ ದಂಡನಾಥನಾದುದಲ್ಲ, ಆತನು ಇದ್ದಿರುವಂದೇ ಮೇಲಕ್ಕೇರಿ ಆತನ ಓರಗೆಯ ಮತ್ತೊಬ್ಬ ದಂಡನಾಥನಾಗಿಯೂ ಅಥವಾ ಬಸವೇಶ್ವರನನ್ನು ಅಲ್ಲಿಯೇ ದಂಡನಾಥ ಚೂಡಾಮಣಿ (ಪು. ೫೩; ೪೪), ದಂಡನಾಥ ಪಂಚಾನನ (ಪು. ೪೪), ನಾಯಕರ ದೇವ (ಪು. ೬೯) ಎಂದಿರುವುದರಿಂದ ಆತನನ್ನು ಮುಕ್ಕಿ ಅಮಾತ್ಯನಾಗಿಯೊ (ಬಸವಪುರಾಣ, ೬೦. ೨) ನಿಯೋಗಿಸಲ್ಪಟ್ಟಿರಬೇಕು. ಈ ಘಟನೆಯನ್ನು ಕ್ರಿ. ಶ. ೧೧೫೫ರ ಆಚೀಚೆಗೆ ಹೊಂದಿಸಬಹುದು.

ಬಿಜ್ಜಳನು ಮಂಗಳವಾಡದಲ್ಲಿದ್ದಂದು, ಅಂದರೆ ಇನ್ನೂ ಮಹಾಮಂಡಳೇಶ್ವರನಾಗಿದ್ದಂದು, ಪರಸಮಯಿಗಳ ಚಾಡಿ ಕೇಳಿ ಬಸವೇಶ್ವರನೊಂದಿಗೆ ಲೆಕ್ಕ ವಿಚಾರಿಸಿ ಸೋತು ಹೋದನೆಂದು ಹರಿಹರನ ಬಸವರಾಜದೇವರ ರಗಳೆಯಲ್ಲಿ (ಪು. ೫೨-೫೫) ಹೇಳಿರುವಲ್ಲಿ, ಬಿಜ್ಜಳನು ಹಿತ್ತಾಳೆಯ ಕಿವಿಯವನೆಂದು ವ್ಯಕ್ತವಾಗುವುದರಿಂದ ಅಂದಲ್ಲವಾದರೆ ಮುಂದಾದರೂ ಅವರಲ್ಲಿ ಕ್ರಮೇಣ ಒಡಕು ಬಾರದಿರದೆಂದು ನಿಶ್ಚಯಿಸಬಹುದು. ಇದಕ್ಕೆ ಸರಿಯಾಗಿ 'ಬಿಜ್ಜಳನ ಭಂಡಾರ ಎನಗೇಕಯ್ಯ? ಎಂಬ ಬಸವೇಶ್ವರ ವಚನದಿಂದ ಬಸವೇಶ್ವರನು ಮಾಡಿದ ತನ್ನ ಭಂಡಾರದ ವಿನಿಯೋಗವನ್ನು ಬಿಜ್ಜಳನು ಒಪ್ಪಲಿಲ್ಲವೆಂದೂ ಅದರಲ್ಲಿ ಸ್ಪಷ್ಟವಿರುವ ಜುಗುಪ್ಸೆಯಿಂದ ಆ ಮುಂದೆ ಬಸವೇಶ್ವರನು ಆತನಲ್ಲಿ ಉಳಕೊಳ್ಳಲೊಲ್ಲನೆಂದೂ ವ್ಯಕ್ತವಾಗುವಂತೆಯೇ 'ಆನೀ ಬಿಜ್ಜಳಂಗಂಜುವೆನೆ?' ಎಂಬ ಮತ್ತೊಂದು ವಚನದಿಂದ ಬಸವೇಶ್ವರನು ಬಿಜ್ಜಳನಿಂದ ತೊಲಗಿರಬೇಕೆಂದೂ ವ್ಯಕ್ತವಾಗುತ್ತದೆ.

'ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಯ್ಯ' ಒಬ್ಬ ಜಂಗಮದಭಿಮಾನದಿಂದ ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು ಸಂದಿತ್ತು ಕೂಡಲ ಸಂಗಮದೇವ ನಿಮ್ಮ ಕವಳಿಕೆಗೆ' ಎಂಬ ಬಸವೇಶ್ವರನ ಇನ್ನೊಂದು ವಚನದಿಂದ ಆ ಚಾಳುಕ್ಯರಾಯನು ಒಬ್ಬ ಜಂಗಮನಿಗೆ ಅಥವಾ ಜಂಗಮಕ್ಕೆ ಮಾಡಿದ ಅಭಿಮಾನ [೯೯] ಅಂದರೆ ಹಿಂಸೆಯೂ ಕಾರಣದಿಂದ ಅವನ ಆಳಿಕೆ ತೆಗೆಯಿತ್ತು, ಅಂದರೆ ಪರಕೀಯ ಅರಸನೊಬ್ಬನು ಅವನ ಒಡೆತನವನ್ನು ಕಿತ್ತುಕೊಂಡನು, ಆ ಕಾರಣ ಅದು ಶಿವನ ಕವಳಿಕೆಗೆ ಸಂದಿತ್ತು, ಅಂದರೆ ನಾಶವಾಯಿತು ಎಂದು ತಿಳಿಯುವುದರಿಂದ, ಚಾಳುಕ್ಯ III ತೈಲನೆಂದು ಮೇಲೆ ಕಂಡಿರುವ ಈ ಚಾಳುಕ್ಯರಾಯನು ಆಳುತ್ತಿರುವಂದೇ, ಅಂದರೆ ಬಿಜ್ಜಳನು ಅವನಿಂದ ಕಲ್ಯಾಣವನ್ನು ಸೆಳೆಕೊಂಡ ಕ್ರಿ. ಶ. ೧೧೬೨ ರ ಮುಂಚೆಯೇ ವೀರಶೈವರು ಕಲ್ಯಾಣದಲ್ಲಿ ಹಿಂಸಿಸಲ್ಪಡುತ್ತಿರಬೇಕಾದರೆ, ಲೋಕದಲ್ಲಿ ಸಾರ್ವತ್ರಿಕವಾಗಿಯೂ ಸಾರ್ವಕಾಲಿಕವಾಗಿಯೂ ಎಂಬಂತೆ ಹೊಸತಾಗಿ ಸ್ಥಾಪಿತವಾದ ಧರ್ಮದವರನ್ನು ಇಲ್ಲವೆ ಸುಧಾರಕರನ್ನು ಆಯಾ ಪುರಾತನ ಧರ್ಮದವರ ಹಿಂಸಿಸುವುದು ಸಹಜವಾಗಿರುವುದರಿಂದ, ವೀರಶೈವವು ಆಗ್ಗೆ ನೂತನವಾಗಿರಬೇಕು ಮಾತ್ರವಲ್ಲ, ಅದು ಕ್ರಿ. ಶ. ೧೧೬೨ ಕ್ಕಿಂತ ಮುಂಚೆ ಬಿಜ್ಜಳನು ಮಹಾಮಂಡಳೇಶ್ವರನಾಗಿದ್ದಂದು ತಾನೇ ಸ್ಥಾಪಿತವಾಗಿ III ತೈಲನ ಆಳಿಕೆಯಲ್ಲಿ ಕಲ್ಯಾಣದಲ್ಲಿ ಪಸರಿಸುತ್ತಿರಬೇಕು. ಹಾಗೆಯೇ III ತೈಲನ ಆಳಿಕೆಯಲ್ಲಿ ವೀರಶೈವರಿಗೆ ಹಿಂಸೆಯಾದ ಕಾರಣ ಅವನ ರಾಜ್ಯವನ್ನು ಪರಕೀಯನು ಗೆದ್ದನೆಂದಿರಬೇಕಾದರೆ, ಮತ್ತೊಬ್ಬನಲ್ಲ ಪ್ರಾಯಶಃ ಬಸವೇಶ್ವರನೇ, ಅದೇ ವಚನದಲ್ಲಿ ವೀರಶೈವರಿಗೆ ಹಿಂಸೆಯಾದ ದೆಸೆಯಿಂದ ಕಲ್ಯಾಣವು ಕೆಟ್ಟಿತ್ತು ಹಾಳಾಯಿತ್ತು ಎಂದ ಬಸವೇಶ್ವರನೇ, ಆ ಪರಕೀಯನನ್ನು, ಅಂದರೆ ಮೇಲೆ ಕಂಡಿರುವಂತೆ III ತೈಲನ ಸರ್ವಾಧಿಕಾರಿಯಾಗಿದ್ದ ಕಳಚುರ್ಯ ಬಿಜ್ಜಳನನ್ನು, ಆ ಚಾಳುಕ್ಯರಾಜನ ರಾಜ್ಯವನ್ನು ಗೆದ್ದುಕೊಳ್ಳುವಂತೆ ಪ್ರೇರೇಪಿಸಿರಬೇಕು, ಹಾಗಾದರೆ ಕಲ್ಯಾಣದ ಸಿಂಹಾಸನವನ್ನು ಏರಿದಂದಿನಿಂದ

೯೯. ಅಭಿಮಾನಸ್ತ್ವಹಂಕೃತೌ, ಹಿಂಸಾಯಾಂ ಪ್ರಣಯೇ ಜ್ಞಾನೇ। (ಹೇಮಚಂದ್ರನ ಅನೇಕಾರ್ಥ ಸಂಗ್ರಹ, ಶ್ಲೋ. ೧೭೭೭-೨೮)



ಬಿಜ್ಜಳನು ಬಸವೇಶ್ವರನಿಗೆ ಸಾಹಜಿಕವಾಗಿ ಅತ್ಯಂತ ವಿಧೇಯನಾಗಿದ್ದು ಅವನಿಗೆ ತನ್ನ ರಾಜ್ಯದಲ್ಲಿ ಸರ್ವಾಧಿಕಾರವನ್ನು ಕೊಟ್ಟಿರಬೇಕೆಂದು ದೃಢವಾಗಿ ಊಹಿಸಬಹುದು. ಅಲ್ಲಿಂದ ಮುಂದೆ ವೀರಶೈವಧರ್ಮ ಪ್ರಚಾರಕ್ಕೆ ತೊಡಕಿಲ್ಲದೆ ಅದು ಕರ್ನಾಟಕದಲ್ಲಿ ಹಬ್ಬುತ್ತಿರಬೇಕಾದರೂ 'ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹೆನೆಂದು ನುಡಿವರಯ್ಯ!' ಎಂಬ ಬಸವೇಶ್ವರನ ವಚನದಲ್ಲಿ ಬಿಜ್ಜಳನನ್ನು ಭವಿ ಎಂದಿರುವುದರಿಂದ ಅವನು ವೀರಶೈವನಾಗಲಿಲ್ಲ

ಆ ಮೇಲಣ ಮಡಿವಾಳ ಮಾಚಯ್ಯನ ಇತ್ಯಾದಿ (ಬಸವ ಪುರಾಣ ಸಂ. ೨೧)ಕಥೆಯಿಂದ ಶಿವ ಮೇರೆಗೆ ವೀರಶೈವರಲ್ಲಿ ಕೆಲವರಾದರೂ ನವೀನಧರ್ಮದವರಿಗೆ ಸ್ವಾಭಾವಿಕವಾದ ಉತ್ಸಾಹಾತಿರೇಕ್ಯದಿಂದ ಉನ್ಮತ್ತರಾದ ಕಾರಣವೇನೋ ಪರವಾಗಡಿಗಳು ಅವರ ಮೇಲೆ ಬಿಜ್ಜಳನಲ್ಲಿ ಆಗಾಗ್ಗೆ ದೂರು ಕೊಡುತ್ತಲೂ ಚಾಡಿ ಹೇಳುತ್ತಲೂ ಇದ್ದುದರಿಂದ, ಬಸವೇಶ್ವರನ ದಿನೇ ದಿನೇ ಬೆಳೆದು ಬರುವ ಕೀರ್ತಿಯು ಹಾಗೂ ಪ್ರತಾಪದ ಮುಂದೆ ಆಗಲೇ ನೆರಳಪಾಲಾಗಿ ಇನ್ನು ಅವನ ವೀರಶೈವ ಧರ್ಮವನ್ನು ಕೈಕೊಂಡರೆ ಚಕ್ರವರ್ತಿಯಾದ ತಾನು ತನ್ನ ರಾಜ್ಯದಲ್ಲೇ ಆತನ ಮುಂದೆ ಏನೂ ಅಲ್ಲದವನಾದೇನೆಂಬ ಶಂಕೆಯಿಂದೇನೋ ಬಸವೇಶ್ವರನ ಧರ್ಮವನ್ನು ಸೇರದ ಬಿಜ್ಜಳನು, III ತೈಲನ ಸರ್ವಾಧಿಕಾರಿಯಾಗಿದ್ದ ತಾನು ಅವನ ರಾಜ್ಯವನ್ನು ಸುಲಭವಾಗಿ ಕಸಕೊಂಡಂತೆ ಬಸವೇಶ್ವರನೂ ತನ್ನ ಸಿಂಹಾಸನವನ್ನು ಕಿತ್ತುಕೊಂಡಾನೆಂಬ ಅಂಜಿಕೆಯಿಂದೇನೋ, ಅವನ ಸಾನಿಧ್ಯವನ್ನು ಇನ್ನು ಸೈರಿಸಲಾರದೆ ಆ ದೂರುಗಳನ್ನೂ ಚಾಡಿಗಳನ್ನೂ ಕಿವಿತುಂಬ ಕೇಳುತ್ತಿದ್ದು ಬಸವೇಶ್ವರನ ತ್ಯಾಗಾದಾರ್ಯಗಳಿಂದ ತನ್ನ ಭಂಡಾರಕ್ಕೆ ಆಗುತ್ತಿರುವ ನಷ್ಟವನ್ನೂ ಆತನ ಧರ್ಮಪ್ರಚಾರದಿಂದ ತನ್ನ ರಾಜ್ಯದಲ್ಲಿಯ ಅಧಿಕ ಸಂಖ್ಯಾಕರಾದ ಪುರಾತನ ಧರ್ಮೀಯರಿಗೆ ಆಗುತ್ತಿರುವ ಅಸಮಾಧಾನವನ್ನೂ ನೆವಮಾಡಿಕೊಂಡು ಆತನನ್ನು ದೂರಮಾಡಬೇಕೆಂದು ನಿಶ್ಚಯಿಸಿ, ಪದವಿಯ ಅತ್ಯುಚ್ಚತೆಯಿಂದಲೂ ನವೀನ ಧರ್ಮದ ಪ್ರವರ್ತಕತ್ವದಿಂದಲೂ ತನ್ನ ರಾಜ್ಯದಲ್ಲಿ ಮಹತ್ತಮನಾದ ಬಸವೇಶ್ವರನನ್ನು ತನ್ನಿಂದ ದೂರಮಾಡುವುದೆಂದರೆ ಕೊಲ್ಲಿಸಿಯೇ ವಿನಾ ಅನ್ಯಥಾ ಅಲ್ಲ ಎಂಬುದರಿಂದ, ಅವನನ್ನು ಕೊಲ್ಲಿಸುವ ಹಂಚಿಕೆಯನ್ನು ಯೋಚಿಸುತ್ತಿರಬೇಕು. ಅದನ್ನು

ಮುಂಗಂಡೆ ಏನೋ ಬಸವೇಶ್ವರನು 'ಇನ್ನು ಕೆಲಕೆಲದಿನಕತಿ ಶಿವ ದ್ರೋಹವು' ಉದಯಿಸಲಿಕ್ಕಿದೆ. (ಬಸವ ಪುರಾಣ, ೬೦ ೫೯) ಎಂದಿರಬೇಕು.

ಬಸವೇಶ್ವರನೂ ಬಿಜ್ಜಳನೂ ಹೇಗೆ ಕಾಲವಾದರೆಂಬುದನ್ನು ಕುರಿತು ಕನ್ನಡ ಸಾಹಿತ್ಯದಲ್ಲಿರುವ ಕಥನವು ಒಮ್ಮುಖವಾಗಿಲ್ಲ ನನಗಾದರೊ ಅವರ ಅವಸಾನವು ಹೀಗಾಯಿತೆಂದು ತೋರುತ್ತದೆ.

ಬಸವೇಶ್ವರನ ವಚನಗಳಲ್ಲಿ ಒಬ್ಬ ಜಂಗಮದಭಿಮಾನದಿಂದಲೂ ಚಾಳುಕ್ಯರಾಯನ ಆಳಿಕೆ ತೆಗೆದುದನ್ನು ಹೇಳಿರುವಂತೆ ತನ್ನಲ್ಲಿ ದ್ರೋಹವೆಣಿಸಿದ ಬಿಜ್ಜಳನ ಆಳಿಕೆ ಮುಗಿದುದನ್ನು ಹೇಳಿರುವುದರಿಂದ, ಬಿಜ್ಜಳನು ಸಾಯುವ ಮುಂಚೆ ಮಾತ್ರವಲ್ಲ ಅವನ ಆಳಿಕೆ ಮುಗಿವ ಮುಂಚೆಯೇ ಬಸವೇಶ್ವರನು ಕಾಲವಾಗಿರಬೇಕು; ಅಂದರೆ ಬಿಜ್ಜಳನು ಯಲಿಸಿರೂರಿನ ಶಾಸನದ ಕ್ರಿ. ಶ. ೧೧೬೭ ಸಪ್ತಂಬರ ೨೯ರ ಹಾಗೂ ಶಿಕಾರಿಪುರ ೯೩ನೆಯ ಶಾಸನದ ೧೧೬೮ ಮಾರ್ಚ ೨೪ರ ನಡುವೆ ಕ್ರಿ. ಶ. ೧೧೬೭ರಲ್ಲಿಯೆ ರಾಜ್ಯಭಾರವನ್ನು ತನ್ನ ಮಗನಾದ ಸೋವಿದೇವನಿಗೆ ಒಪ್ಪಿಸಿದನೆಂದು ಮೇಲೆ ಕಂಡಿರುವದರಿಂದ, ಬಸವೇಶ್ವರನು ಕ್ರಿ ಶ. ೧೧೬೭ರ ಪೂರ್ವಭಾಗದಲ್ಲಿ ಕಾಲವಾಗಿರಬೇಕು. ಆಗ್ಗೆ ಅವನ ವಯಸ್ಸು ೩೭-೩೮ರಷ್ಟಾಗುವುದರಿಂದ, ಆತನನ್ನು ೩೦ರಿಂದ ೪೦ರೊಳಗೆ ತಮ್ಮ ಅವತಾರವನ್ನು ಪೂರೈಸಿದ ಶಂಕರಾಚಾರ್ಯ, ಯೇಸುಕ್ರಿಸ್ತ ಮೊದಲಾದ ಅಲ್ಪಸಂಖ್ಯಾಕರಾದ ಮಹಾಪುರುಷರೊಂದಿಗೆ ಸೇರಿಸಬಹುದು.

ಸೋವಿದೇವನ ಆಳಿಕೆಯು ಕ್ರಿ. ಶ. ೧೧೬೮ ಮಾರ್ಚ ೨೪ರ ಚಂದ್ರಗ್ರಹಣದಂದೇ ಕಲ್ಯಾಣದಲ್ಲಿ ಬಿಜ್ಜಳನೂ ದತ್ತಿ ಬಿಟ್ಟನೆಂದು ಮೇಲೆ ಕಂಡಿರುವ ನದಿಹರಳಹಳ್ಳಿಯ ಶಾಸನಾಧಾರದಿಂದ ರಾಜ್ಯಭಾರದಿಂದ ನಿವೃತ್ತನಾದ ಬಿಜ್ಜಳನು ಕೂಡಲೆ ಅಥವಾ ಬೇಗನೆ ಸಾಯದೆ ಆ ಮೇಲೂ ತನ್ನ ಮಗನಾದ ಸೋವಿದೇವನ ಆಳಿಕೆಯಲ್ಲಿ ಬದುಕಿದ್ದನೆಂದು ತಿಳಿಯುತ್ತದೆ. ಅವನ ರಾಜ್ಯತ್ಯಾಗಕ್ಕೆ ಕಾರಣವೇನೆಂದ, ತಿಳಿಯುತ್ತದೊ ನೋಡೋಣ.

ಬಿಜ್ಜಳನು ಸಾಹಜಿಕವಾಗಿ ಕಾಲವಾದರೆ ಹೇಗೋ ಹಾಗೆಯೇ ಅವನು ಯಾವ ಕಾರಣದಿಂದ ರಾಜ್ಯಭಾರವನ್ನು ಬಿಟ್ಟರೂ ಸೋವಿ



ದೇವನು ಅವನ ಜ್ಯೇಷ್ಠ ಪುತ್ರನಾಗಿದ್ದ ಪಕ್ಷದಲ್ಲಿ ತನ್ನ ಯುವರಾಜನಾಗಿರಬೇಕಾದ ಆತನಿಗೆ ತಾನೆ ಯಥಾನ್ಯಾಯವಾಗಿ ಸಲ್ಲಬೇಕಾದ ತನ್ನ ಪಟ್ಟವನ್ನು ಸೋವಿದೇವನಿಗೆಂದು ಅವನು ಬೇರೆ ನಿರೂಪಿಸಲಿಕ್ಕೆ ಕಾರಣವಿಲ್ಲ. ಬಿಜ್ಜಳನು ಹಾಗೆ ನಿರೂಪಿಸಿದನೆಂಬುದರಿಂದಲೆ ಸೋವಿದೇವನು ಅವನ ಜ್ಯೇಷ್ಠಪುತ್ರನಲ್ಲವೆಂದೂ ಆತಏವ ಆಗ್ಗೆ ಬಿಜ್ಜಳನ ಪಟ್ಟಕ್ಕೆ ಸೋವಿದೇವನಿಗಿಂತ ಸಮೀಪತರದ ಬಾಧ್ಯತೆಯುಳ್ಳ ಬೇರೊಬ್ಬನಿದ್ದನೆಂದೂ ಆತನಿಗೆ ತನ್ನ ಪಟ್ಟವು ಹೋಗಬಾರದೆಂದೇ ಬಿಜ್ಜಳನು ಸೋವಿದೇವನನ್ನು ತನ್ನ ಉತ್ತರಾಧಿಕಾರಿಯಾಗಿ ನಿರೂಪಿಸಿರಬೇಕೆಂದೂ ತನ್ನಷ್ಟಕ್ಕೆ ವ್ಯಕ್ತವಾಗುತ್ತದೆ. ಶಾಸ್ತ್ರೋಕ್ತ ಆಚರಣೆಯ ಮೇರೆಗೆ ರಾಜಪಟ್ಟವು ತಂದೆಯ ಬಳಿಕ ಅವನ ಹಿರೇ ಮಗನಿಗೆ ಹೋಗಬೇಕು. ಆ ಹಿರೇಮಗನು ತನ್ನ ಮುಂದೆಯೇ ಕಾಲವಾಗಿದ್ದರೆ ಅದು ಜ್ಯೇಷ್ಠ್ಯಕ್ರಮದಿಂದ ಆ ಹಿರೇಮಗನ ಹಿರೇಮಗನಿಗೆ, ಅಂದರೆ ತನ್ನ ಮೊಮ್ಮಗನಿಗೆ ಸಲ್ಲಬೇಕಲ್ಲದೆ, ತನ್ನ ಇತರ ಮಗಂದಿರಿಗೆ ಹೋಗಬಾರದು ಎಂಬಂತೆಯೇ, ಅರಸರು ತಮ್ಮ ಹಿರೇ ಮಗಂದಿರು ತಮಗೆ ಮಾರ್ಮಲೆತರೆ ಇಲ್ಲವೆ ಇತರಥಾ ಪಟ್ಟಕ್ಕೆ ಅಯೋಗ್ಯರೆಂದು ತೋರಿದರೆ ಅಂಥವರಿಗೆ ತಮ್ಮ ಪಟ್ಟವನ್ನು ಹೋಗಲೀಯದೆ ತಮ್ಮ ಯೋಗ್ಯರಾದ ಬೇರೆ ಮಕ್ಕಳಿಗೆ ಕೊಟ್ಟಿರುವ ಉದಾಹರಣೆಗಳೂ ಶಾಸನಗಳಿಂದ ದೊರೆವುದರಿಂದ. ಬಿಜ್ಜಳನ ಹಿರೇ ಮಗನೊ ಅಥವಾ ಅವನು ಬಿಜ್ಜಳನ ಮುಂದೆಯೇ ಕಾಲವಾಗಿದ್ದರೆ ಅವನ ಮಗನೊ, ಅಂದರೆ ಬಿಜ್ಜಳನ ಮೊಮ್ಮಗನೊ, ಬಿಜ್ಜಳನಿಗೆ ಮಾರ್ಮಲೆತಿದ್ದು ಇಲ್ಲವೆ ಅನ್ಯಥಾ ಅಯೋಗ್ಯನಾಗಿದ್ದು, ಅಂಥವನು ತನ್ನ ಪಟ್ಟವನ್ನು ಏರಬಾರದೆಂದೇ ಬಿಜ್ಜಳನು ತನ್ನ ರಾಜ್ಯಾಧಿಕಾರಕ್ಕೆ ತನ್ನ ಇತರ ಮಕ್ಕಳಲ್ಲಿ ಹಿರಿಯನಾದ ಹಾಗೂ ತನಗೆ ತುಂಬ ವಿಧೇಯನಾದ ಸೋವಿದೇವನನ್ನು ನಿರೂಪಿಸಿರಬೇಕು. ಬಿಜ್ಜಳನ ಮಕ್ಕಳಲ್ಲಿ ಸೋವಿದೇವನಿಗಿಂತ ಹಿರಿಯವನ ಹೆಸರು ಶಾಸನಗಳಲ್ಲಿ ದೊರೆಯದುದರಿಂದ, ಅವನು ತನ್ನ ತಂದೆಯ ರಾಜ್ಯಾಧಿಕಾರದಲ್ಲಿ ಭಾಗಿಯಾಗತಕ್ಕ ಮುಂಚೆಯೇ ಕಾಲವಾಗಿರಬೇಕು. ಆಗ್ಗೆ ಅವನ ಮಗನು, ಅಂದರೆ ಬಿಜ್ಜಳನ ಮೊಮ್ಮಗನು, ತೀರ ಚಿಕ್ಕವನಾಗಿದ್ದು ಆತನು ಪ್ರಾಯಭರಿತನಾಗುವಷ್ಟರ ವರೆಗೆಂದು ಸೋವಿದೇವನಿಗೆ ಬಿಜ್ಜಳನು ತನ್ನ ಪಟ್ಟವನ್ನು ಬಿಟ್ಟುಕೊಟ್ಟಿದ್ದರೆ, ಆ ವಿಷಯವು ಕಳಚುರ್ಯ ಒಂದಲ್ಲ ಒಂದು ಶಾಸನದಿಂದ ತಿಳಿಯದೆ ಇರುತ್ತಿದ್ದಿಲ್ಲ.

ಹಾಗೇನೂ ಇಲ್ಲದುದರಿಂದ ಬಿಜ್ಜಳನ ಆಳಿಕೆಯ ಕೊನೆಗಾಲದಲ್ಲಿ ಪ್ರಾಯಶಃ ಅವನ ಮೊಮ್ಮಗನೇ ಅವನಿಗೆ ಮಾರ್ಗದರ್ಶಿಯಾಗಿರಬೇಕು, ಆ ಕಾರಣವೇ ಬಿಜ್ಜಳನು ತನ್ನ ರಾಜ್ಯಭಾರವನ್ನು ಸೋವಿದೇವನಿಗೆ ಒಪ್ಪಿಸಿ ತಾನು ನಿವೃತ್ತನಾಗಿರಬೇಕು. ಆದರೆ ಈ ಬಗ್ಗೆ ಶಾಸನಾಧಾರವಿದೆಯೋ? ಬಿಜ್ಜಳನಿಗೆ ಅಂತಹ ಮೊಮ್ಮಗನಿದ್ದನೇ?

ಬಿಜ್ಜಳನ ಮಗನಾದ ಆಹವಮಲ್ಲನ ಕಾಲದ (೧೧೮೦-೮೩) ತೇದಿಯಿಲ್ಲದ ಶಿಕಾರಿಪುರ ೧೯೭ನೆಯ ಶಾಸನದಲ್ಲಿ ೧೦೦ (ಬಂ. ೨೧-೨೨) ಬಿಜ್ಜಳನು ರಾಜ್ಯತ್ಯಾಗ ಮಾಡಿದನೆಂದಾಗಲಿ ಕಾಲವಾದನೆಂದಾಗಲಿ ಹೇಳದೆ ಆತನ ಪ್ರತಾಪವನ್ನು ವರ್ಣಿಸುತ್ತಿರುವ ಎಡೆಯಲ್ಲಿಯೇ ಒಮ್ಮಿಂದೊಮ್ಮೆ—

ಜಗಮಂ ಸಂಪ್ರೀತಿಯಿಂ ಬಿಜ್ಜಲ ನೃಪತಿಯ ತಮ್ಮಂ ಭುಜಾ
ಗರ್ವದಿಂ ವೈ
ಳುಗಿದೇವಂ ಪಾಲಿಸುತ್ತಂ ನೆರೆದ ಬಳಿಕಮಾ ಬಿಜ್ಜಲೋರ್ವೀಶ
ಪೌತ್ರಂ।
ತ್ರಿಗುಣೀಭೂತ ಪ್ರತಾಪಂ ತಳೆದನೆಳೆಯ (ನಾ) ಕನ್ನರಕ್ಷೋಣಿಪಂ ತ
ಜ್ಜಗತೀನಾಥಾನುತಾತಂ ಬಳಿಕಮವನಿಯಂ ತಾಳ್ದಿದಂ ಸೋಮಿ
ದೇವಂ॥

ಬಿಜ್ಜಳನ ತಮ್ಮನಾದ ವೈಳುಗಿಯೂ ಆ ಮೇಲೆ ಬಿಜ್ಜಳನ ಮೊಮ್ಮಗನಾದ ಕಂದರನೂ ಆಳಿದ ಮೇಲೆ ಕಂದರನ (ಅನುತಾತ=) ಚಿಕ್ಕಪ್ಪನಾದ ಸೋಯಿದೇವ, ಅಂದರೆ ಬಿಜ್ಜಳನ ಮಗನಾದ ಸೋವಿದೇವನು ಆಳಿದನೆಂಬಲ್ಲಿ, ಬಿಜ್ಜಳ ಮತ್ತು ಸೋವಿದೇವರ ನಡುವೆ ಮೂರನೆಯವನ ಆಳಿಕೆಗೆ (ಅದೆಷ್ಟು ಕಿರಿದಾದರೂ) ಎಡೆಯೂ ಇಲ್ಲ, ಆ ನಡುವೆ ಬೇರೆ ಯಾರೊಬ್ಬನಾದರೂ ಆಳಿದಂತೆಯೂ ಶಾಸನಗಳಲ್ಲಿಲ್ಲ ಎಂಬುದರಿಂದ, ಈ ಶಾಸನದಲ್ಲಿ ಬಿಜ್ಜಳನ ಉಪರಾಜರೆಂದಾಗಲಿ ಉತ್ತರಾಧಿಕಾರಿಗಳೆಂದಾಗಲಿ ಹೇಳದೆ ಸೋವಿದೇವನ ಮುಂಚೆ ಆಳಿದರೆಂದು ಹೇಳಿ

೧೦೦ E. C. VII. ಈ ಶಾಸನದ ರೋಮನ್ ಲಿಪಿಯ (*Roman Script*) ಪ್ರತಿಯಲ್ಲಿ ಈ ಮಹಾಸ್ರಗ್ಧರೆಯ ೩ನೆಯ ಚರಣದಲ್ಲಿಯ ಹೆಸರು ಸರಿಯಾಗಿ "ಕನ್ದರಂ" ಎಂದಿದೆ ಕನ್ನಡ ಲಿಪಿಯ ಪ್ರತಿಯಲ್ಲಾದರೂ "ಕನ್ನರಂ" ಎಂದು ತಪ್ಪಾಗಿ ಅಚ್ಚಾಗಿದೆ.



ರುವ ಮಾತ್ರವಲ್ಲ, ಬಿಜ್ಜಳನ ಆಳಿಕೆಯಲ್ಲಿ ತಾನೆ ಆಳಿರಬೇಕೆಂದು ಸ್ಪಷ್ಟವಾಗುವ, ವೈಳುಗಿಯೂ ಕಂದರನೂ ಬಿಜ್ಜಳನು ಆಳುತ್ತಿರುವಂದೇ ಆಳಿರಬೇಕಾದರೆ, ಪ್ರಾಯಶಃ ಅವನ ಪ್ರತಿರಾಜರಾಗಿ ತಾನೆ ಅವರು ಅನುಕ್ರಮವಾಗಿ ಆಳಿರಬೇಕು.

ಕಳಚುರ್ಯ ಸಂಕಮನ ಕಾಲದ (೧೧೭೭-೮೧) ತೇದಿಯಿಲ್ಲದ ದಾವಣಗೆರೆ ೪೪ ರಲ್ಲಿಯೂ ೧೦೧ ಬಿಜ್ಜಳನ ಪ್ರತಾಪವನ್ನು ವರ್ಣಿಸುತ್ತಿರುವ ಸಂದರ್ಭದಲ್ಲಿಯೇ ಆತನ ತಮ್ಮನಾದ ವೈಳುಗಿಯೂ ಆತನ ಮೊಮ್ಮಗನೂ ಆಳಿದರೆಂದು (ಬಂ ೧೩-೧೭) ಹೇಳಿರುವ ಅವೇ ಪದ್ಯಗಳು ಸಂಕಮನ ಆಳಿಕೆಯ ಶಾ. ಶ. ೧೧೦೨ ಶಾರ್ವರಿ ಸಂ॥ ವೈಶಾಖ ಶುದ್ಧ ೮ ಸೋಮವಾರ=ಕ್ರಿ. ಶ. ೧೧೮೦ ಏಪ್ರೀಲ್ ೧೬ ರ ಹೊನ್ನಾಳಿ ೫೨ನೆಯ ಶಾಸನದಲ್ಲಿಯೂ ೧೦೨ (ಬಂ. ೧೩-೧೬ ಇವೆ.) ಆದರೆ ಇದರಲ್ಲಿ ಬಿಜ್ಜಳನ ಮೊಮ್ಮಗನ ಹೆಸರು ಮಾತ್ರ ಸವೆದು ಹೋಗಿದೆ. ದಾವಣಗೆರೆ ೪೪ ರಲ್ಲಿಯ (ಬಂ. ೧೬-೧೭.)

ಕಂ॥ ಆತನ ಮುರ್ಮಂ ಭುವನ
ಖ್ಯಾತಯಶಂ ಕಲಿದೇವನರ್ಣವ ಮಹಿಮಂ।
ನೀತಿನಿಧಿಯೆನಿಸಿ ನೆಗಳ್ದಂ
ಭೂತಳದೊಳು ಸಾಹಸಾಂಕನಪಗತ ಶಂಕಂ॥

ಎಂಬೀ ಕಂದ ಪದ್ಯದಿಂದ ತೋರುವ ಮೇರೆಗೆ ಆತನ, ಅಂದರೆ ಬಿಜ್ಜಳನ, ಮುರ್ಮ್ಮ ಅಂದರೆ (=ಮುರ್ಮ್ಮ=ಮೊಮ್ಮ=) ಮೊಮ್ಮಗನ ಹೆಸರು ಕಲಿದೇವ ಎಂದಾದರೆ, ಇದರ ೨ನೆಯ ಚರಣದ ೩ನೆಯ ಗಣದಲ್ಲಿ ಛಂದಸ್ಸಿಗೆ ತೊಡಕಾಗುವುದರಿಂದ, ಕಲಿದೇವ ಎಂದಿರದೆ, ಅನ್ಯಥಾ ಇರಬೇಕಾದ ಅವನ ಹೆಸರನ್ನು ಅಲ್ಲಿ ಕಲಿದೇವ ಎಂದು ತಪ್ಪಾಗಿ ಕೊರೆದಿರಬೇಕು. ಅತಏವ ಅವನ ಸರಿಯಾದ ಹೆಸರು ಶಿಕಾರಿಪುರ ೧೯೭ರಲ್ಲಿಯ ಮಹಾ ಸ್ರಗ್ಧರೆಯಲ್ಲಿ ಛಂದಸ್ಸಿಗೆ ಒಪ್ಪಾಗಿ ಕೊಟ್ಟಿರುವಂತೆ ಕಂದರ ಎಂದು ಇರಬೇಕು. ಕಂದರ ಎಂಬ ಪದವನ್ನು ಈ ಕಂದ ಪದ್ಯದ ಕಲಿ ಅಥವಾ ಕಲಿದೇವ ಎಂಬುದರ ಎಡೆಯಲ್ಲಿ ಇರಿಸಿದರೆ ಛಂದಸ್ಸಿಗೆ ನೇರಾಗದೆಂಬುದು ಸರಿಯೇ. ಆದರೂ ಕಂದರ ಎಂಬುದೇ

*101. E. C. XI, 102. E. C. VII,*

ಕೃಷ್ಣ (=ಕನ್ನ.ಕನ್ನರ-ಕಂದರ) ಅಥವಾ ಕರ್ಣ (=ಕನ್ನ-ಕನ್ನರ-ಕಂದರ) ಎಂಬುದರ ಪ್ರಾಯಶಃ ಕನ್ನಡಿಸಿದ ರೂಪವಾಗಿರುವುದರಿಂದ, ಈ ಕಂದದ ೨ನೆಯ ಚರಣದಲ್ಲಿ ಕಲಿ ಎಂಬಲ್ಲಿ ಕೃಷ್ಣ ಅಥವಾ ಕರ್ಣ ಎಂದು ಓದುತ್ತಲೆ, ಅದು

ಖ್ಯಾತಯಶಂ ಕೃಷ್ಣ (ಕರ್ಣ) ದೇವನರ್ಣವ ಮಹಿಮಂ ।

ಎಂದು ಛಂದಸ್ಸಿಗೆ ನೇರಾಗುವ ಈ ಪದ್ಯದಲ್ಲಿ ಆತನನ್ನು ಕೃಷ್ಣದೇವನೆಂದೊ ಕರ್ಣ ದೇವನೆಂದೊ ಹೇಳಬೇಕೆಂದು ಸ್ಪಷ್ಟವಾಗುವುದರಿಂದ, ಅವನ ಹೆಸರು ಕೃಷ್ಣ (ದೇವ) ಅಥವಾ ಕರ್ಣದೇವ ಎಂದಿರಬೇಕು.

ರಾಘವಾಂಕನ ಸಿದ್ಧರಾಮೇಶ್ವರ ಪುರಾಣದಲ್ಲಿ (೯. ೨) 'ಬಿಜ್ಜಳನ ತಮ್ಮನು ಕರ್ಣದೇವ'ನೆಂಬವನು ತನಗೆ ಪಟ್ಟ ಕಟ್ಟಲೆಂದು ಸಿದ್ಧರಾಮನನ್ನು ಕರೆಯ ಕಳುಹಿಸಿದನೆಂಬಲ್ಲಿ, ಮೇಲಣ ಶಾಸನಾಧಾರದಿಂದ ಕರ್ಣದೇವನು ಬಿಜ್ಜಳನ ತಮ್ಮನಲ್ಲ ಮವ್ಮ (ಮೊಮ್ಮಗ)ನೆಂದು ತಿಳಿಯುವುದರಿಂದ, ಮವ್ಮ ಎಂಬುದರ ಬದಲಿಗೆ ಇಲ್ಲಿ ತಮ್ಮ ಎಂದು ತಪ್ಪಾಗಿರುವಂತೆ ಕರ್ಣದೇವ ಎಂಬುದೂ ಕೃಷ್ಣದೇವ ಎಂಬುದರ ಬದಲಿಗೆ ತಪ್ಪಾಗಿರದೆ ಒಪ್ಪಾಗಿದೆಯಾದರೆ; ಬಿಜ್ಜಳನ ಮೊಮ್ಮಗನ ಹೆಸರು ಕೃಷ್ಣದೇವನೆಂದಲ್ಲ ಕರ್ಣದೇವನೆಂದು ನಿಶ್ಚಯಿಸಬಹುದು. ಈ ಕರ್ಣ ದೇವನು ಬಿಜ್ಜಳನ ಹಿರೀ ಮಗನ ಮಗನೆಂದು ಮೇಲೆ ಕಂಡದೆ. ಇವನ ತಂದೆಯ ಹೆಸರು ಎಲ್ಲಿಯೂ ಕಾಣದುದರಿಂದ ಅವನು ಕರ್ಣದೇವನು ಹುಟ್ಟುತ್ತಲೆ ತನ್ನ ಎಳೆಯ ವಯಸ್ಸಿನಲ್ಲಿ ಬಿಜ್ಜಳನ ಜೀವಮಾನದಲ್ಲಿಯೇ ಕಾಲವಾಗಿರಬೇಕು.

ಕರ್ಣದೇವನು ಸಿದ್ಧರಾಮನಿಗೆ ಕರೆಕಳುಹಿಸಿದುದನ್ನು ರಾಘವಾಂಕನ ಕಾವ್ಯದಲ್ಲಿ (೮.೯೫)

ಭೂಪ ಬಿಜ್ಜಳನಳಿದ ವೀರ ಜಗದೇವನಿಂ ಸಿದ್ಧಸಂಖ್ಯಾತದಿಂದ।

ಅಂದರೆ ಬಿಜ್ಜಳನ ಮರಣಾನಂತರ ಹೇಳಿರುವುದರಿಂದ, ಅದು ಸರಿಯಾದರೆ, ಬಿಜ್ಜಳನು ಇದ್ದಂದೇ ಅವನ ವಿರೋಧಿಯಾಗಿದ್ದ ಕರ್ಣದೇವ (ಕಂದರ) ನು ಬಿಜ್ಜಳನು ಕಾಲವಾದ ಮೇಲೂ ಕಲ್ಯಾಣದ ಸಿಂಹಾಸನವನ್ನು ಸಾಧಿಸುತ್ತಿದ್ದನೆಂದು ತಿಳಿವಂತೆಯೇ, ಬಿಜ್ಜಳನ ರಾಜ್ಯತ್ಯಾಗಕ್ಕೆ ಮೊದಲೆ ಅವನಲ್ಲಿ ವಿಮನಸ್ಕನಾಗಿ ಅವನಿಂದ ತೊಲಗಿದ, ಅತಏವ ತನಗೆ ತನಗೆ ನಃಪೂರ್ವಕವಾಗಿ ನೆರವಾಗಲಾಪ ಬಸವೇಶ್ವರನನ್ನು



ಪಟ್ಟಕಟ್ಟುವ ಬಗ್ಗೆ ಕರ್ಣ ದೇವನು ಯಾಚಿಸದೆ ಸಿದ್ಧರಾಮನನ್ನು ಬಿನ್ನವಿಸಿದುದರಿಂದ, ಆ ಮುಂಚೆಯೇ ಬಸವೇಶ್ವರನು ಕಾಲವಾಗಿರಬೇಕೆಂದೂ ಸಿದ್ಧರಾಮನನ್ನು ಬಿನ್ನವಿಸಿದುದರಿಂದ ಆ ಮುಂಚೆಯೇ ಬಸವೇಶ್ವರನು ಕಾಲವಾಗಿರಬೇಕೆಂದೂ ಸಿದ್ಧರಾಮನಾದರೊ(೯.೨೦)ಕರ್ಣದೇವನಿಗೆ ರಾಜ್ಯ ದೊರಕದು, ಪಟ್ಟವಾಗದು ಎಂದು ಮುಂಗಂಡೇ ಏನೋ.

ಹರ ಮುನ್ನ ಹರಸಿ ಕಟ್ಟಿದ ಲಿಖಿತಪಟ್ಟಮಂ
ಪರಿಹರಿಸಿ ಮತ್ತೊಂದು ಮಾಡುವೀ ಸಾಮರ್ಥ್ಯ
ಹರಿಯಜರಿಗಾಗದೆನೆ ನರರಿಗಳವಲ್ಲಯ್ಯ ಮಲ್ಲಯನೇ ಬಲ್ಲ

ನೆಂದು ವ್ಯಂಗ್ಯವಾಗಿ ಸೂಚಿಸಿರಬೇಕೆಂದೂ ತೋರುವುದರಿಂದ ಅವನಿಗೆ ಕಲ್ಯಾಣದ ಪಟ್ಟವಾಗಲಿಲ್ಲವೆಂದೂ ತಿಳಿಯುತ್ತದೆ.

ಹೀಗೆ ಬಿಜ್ಜಳನು ಆಳುತ್ತಿರುವಂದೇ ಅವನ ಕುಟುಂಬದಲ್ಲಿಯೂ ರಾಜಧಾನಿಯಲ್ಲಿಯೂ ಕಲಹಗಳು ಉತ್ಪಾದಿಸಿ, ಒಂದುಕಡೆ ತನಗೆ ವಿರೋಧವಾಗಿ ಎದ್ದ ತನ್ನ ತಮ್ಮನು ಕಾಲವಾದ ಅಥವಾ ಅವನನ್ನು ತಾನು ನಿಗ್ರಹಿಸಿದ ಮೇಲೂ ತನಗೆ ವಿರೋಧಿಯಾಗಿ ಅಲ್ಲಲ್ಲಿ ಆಳುತ್ತಿರುವ ತನ್ನ ಮೊಮ್ಮಗನು ತಾನು ಚಾಳುಕ್ಯ III ತೈಲನಿಂದ ಸೆಳಕೊಂಡ ಸಿಂಹಾಸನವನ್ನು ತನ್ನಿಂದ ಸೆಳಕೊಂಡಾನೊ ಎಂದೂ ಮತ್ತೊಂದು ಕಡೆ ಬಸವೇಶ್ವರನಿಗೂ ತನಗೂ ಉಂಟಾದ ಮನಸ್ತಾಪದ ದೆಸೆಯಿಂದ ರಾಜಧಾನಿಯಲ್ಲಿಯೇ ಸಹಜವಾಗಿ ಬೇರೆಯೇ ಒಂದು ತಂಡವಾಗಿ ಬೆಳೆಯುತ್ತಿರುವ ಬಸವೇಶ್ವರನ ಪಕ್ಷದವರು ತನಗೆ ನೆರವಾದಾರೆಂಬ ಕೋರಿಕೆ ಹೇಗೂ ಇಲ್ಲವಷ್ಟೇ, ಅನ್ಯತ್ರ ಅವರು ತನ್ನ ಶತ್ರುಗಳೊಂದಿಗೆ ಕೂಡಿ ತನಗೆ ಮಾರ್ಮಲೆತಾರೊ ಎಂದೂ ತನ್ನ ಇಳಿಪ್ರಾಯದಲ್ಲಿ ಈ ರೀತಿಯ ಉಭಯ ಸಂಕಟದಲ್ಲಿ ಸಿಲುಕಿದ ಬಿಜ್ಜಳನು ಅವಲ್ಲಿ ತನಗೆ ಗುರುತರವೆಂದು ತೋರಿದ ಕಂಟಕವನ್ನು ನಿವಾರಿಸಲೆಂದು, ಹೆಚ್ಚುಕಡಿಮೆ ಅದೇ ಸಮಯಕ್ಕೆ ಸರಿಯಾಗಿ ಕ್ರಿ. ಶ. ೧೧೭೦ ರಲ್ಲಿ ಅಂಗ್ಲಾಳದ II ಹೆನ್ರಿ (*Henry* II) ಎಂಬ ಅರಸನು ತನ್ನ ಸಚಿವನಾದ ಟೊಮಸ್ ಎ ಬೆಕೆಟ್ (*Thomas a Beckel*) ಎಂಬವನನ್ನು ಕೊಲ್ಲಿಸಿದಂತೆ, ಬಸವೇಶ್ವರನನ್ನು ಕೊಲ್ಲ ಬಗೆದು ಆ ಬಗ್ಗೆ ಆಳುಗಳನ್ನು ಅವನಿದ್ದಲ್ಲಿಗೆ ಅಟ್ಟುತ್ತಲೇ, ಆಗ್ಗೆ ತನ್ನ ಅವತಾರವು ಸಮೀಪಿಸಿತೆಂದೂ ಬಿಜ್ಜಳನ ಆಳುಗಳು ತನ್ನ ಬೆನ್ನ ಹಿಂದೆ ಇರುವರೆಂದೂ ಪ್ರಾಯಶಃ

ಅರಿತೇ ತನ್ನ ಆರಾಧ್ಯದೇವನಾದ ಕೂಡಲ ಸಂಗಮೇಶ್ವರನಲ್ಲಿಗಯ್ದಿ ಆತನ ಸನ್ನಿಧಿಯಲ್ಲಿದ್ದ ಬಸವೇಶ್ವರನು ಅಲ್ಲಿ ಅವರ ಕತ್ತಿಯ ಧಾರೆಗೆ ಈಡಾಗಿಯೊ ಸಮಾಧಿಯ ದಾರಿಯಿಂದ ಪಾರಾಗಿಯೊ ತನ್ನ ಸಂಗಮೇಶ್ವರನಲ್ಲಿ ಐಕ್ಯವಾದನು.

ಹೀಗೆ ಬಸವೇಶ್ವರನನ್ನು ತನ್ನ ದಾರಿಯಿಂದ ತೆಗೆದ ಮೇಲಾದರೂ ತನ್ನ ರಾಜ್ಯದಲ್ಲಿ ಸಾಕಷ್ಟು ನೆಮ್ಮದಿಯಾದೀತೆಂದಿದ್ದ ಬಿಜ್ಜಳನು ತನ್ನ ಮೊಮ್ಮಗನಾದ ಕರ್ಣದೇವನು ಎಬ್ಬಿಸುತ್ತಿರುವ ಕ್ಷೋಭವನ್ನು ಇನ್ನೂ ಅಂಕೆಗೆ ತರಲಾರದೆ, ವಂಶದ ಮೇರೆಗೆ ತನ್ನ ಬಳಿಕ ತನ್ನ ಹಿರೀ ಮಗನ ಮಗನಾದ ಆ ಕರ್ಣದೇವನಿಗೆ ಸಲ್ಲತಕ್ಕ ತನ್ನ ಪಟ್ಟವು ದ್ರೋಹಿಯಾದ ಆತನಿಗೆ ಹೋಗಬಾರದೆಂದೊ ಮುದುಕನಾದ ತನ್ನಿಂದ ಹಿಮ್ಮೆಟ್ಟಿಸಲಾರದ ಆ ಕ್ಷೋಭವನ್ನು ತನ್ನ ಮಗನಾದ ಸೋವಿದೇವನು ಹೋಗಲಾಡಿಸುವನೆಂದೊ ಬಸವೇಶ್ವರನು ಲಿಂಗೈಕ್ಯವಾದ ಕೆಲವೇ ತಿಂಗಳೊಳಗೆ ಶಿಕಾರಿಪುರ ೯೨ ರಿಂದ ಮೇಲೆ ಕಂಡಿರುವ ಮೇರೆಗೆ ಸೋವಿದೇವನಿಗೆ 'ಆತ್ಮರಾಜ್ಯ ಭರ ನಿರೂಪಣಂ' ಮಾಡಿರಬೇಕು, ಅಂದರೆ ಇನ್ನು ಮುಂದೆ ತನ್ನ ರಾಜ್ಯಭಾರವು ಸೋವಿದೇವನಿಗೆಂದು ನಿರೂಪಿಸಿ ಆ ರಾಜ್ಯಾಧಿಕಾರವನ್ನು ಅವನಿಗೆ ಬಿಟ್ಟುಕೊಟ್ಟು ತಾನು ರಾಜ್ಯಭಾರದಿಂದ ನಿವೃತ್ತನಾಗಿರಬೇಕು. ಕ್ರಿ. ಶ. ೧೧೬೮ ರ ಮಾರ್ಚಿಯಲ್ಲಿ ಬಿಜ್ಜಳನು ದತ್ತಿಬಿಟ್ಟನೆಂದು ಮೇಲೆ ಕಂಡಿರುವುದರಿಂದ, ಬಸವೇಶ್ವರನು ಲಿಂಗೈಕ್ಯವಾದ ಮೇಲೆ ಹೆಚ್ಚು ಕಡಿಮೆ ಒಂದು ವರ್ಷವಾದರೂ ಬದುಕಿದ್ದನೆಂದು ತಿಳಿವ ಬಿಜ್ಜಳನ ಆ ಬಳಿಕ ಶಾಸನಗಳು ದೊರೆಯುದುದರಿಂದ ಅವನು ಆ ಮೇಲೆ ಹೆಚ್ಚು ಕಾಲ ಬದುಕಿರಲಾರನು. ಅವನ ಅವಸಾನವು ಹೇಗಾಯಿತೆಂದು ಅನ್ಯಥಾ ತಿಳಿಯದಾದರೂ ಆ ಕುರಿತು ಹೇಳಿರುವ ಕನ್ನಡ ಸಾಹಿತ್ಯದಲ್ಲಿ ಮಿಕ್ಕೆಲ್ಲವಕ್ಕಿಂತಲೂ ಹಿಂದಣ, ಹಾಗೂ ಅವನ ಕಾಲದಿಂದ ಹೆಚ್ಚಾಚದರೆ ೩೦-೪೦ ವರ್ಷಗಳೊಳಗಣ ರಾಘವಾಂಕ ಸಿದ್ಧರಾಮೇಶ್ವರ ಪುರಾಣದಲ್ಲಿ (೮-೯೫)—

ಭೂಪ ಬಿಜ್ಜಳನಳಿದ ವೀರಜಗದೇವನಿಂ ಸಿದ್ಧ ಸಂಖ್ಯಾತದಿಂದ॥

ಎಂದಿರುವಲ್ಲಿ ಬಿಜ್ಜಳನನ್ನು ಕೊಂದನೆಂಬ ಜಗದೇವನೂ ಬಸವ ಪುರಾಣದಲ್ಲಿಯೂ (ಸಂಧಿ ೬೧) ಚನ್ನಬಸವಪುರಾಣದಲ್ಲಿಯೂ (V ೯ ೨೨-೨೩) ಇರುಳಿ ನೋಲಗದಲ್ಲಿದ್ದ ಆತನನ್ನು ಮಡುಹಿದನೆಂದಿರುವ ಜಗದೇವನೂ



ಒಬ್ಬನೇ ಎಂದು ಪ್ರತ್ಯಕ್ಷವಿರುವುದರಿಂದ, ಬಸವೇಶ್ವರನ ಭಕ್ತನಾದ ಜಗದೇವನು ಹೊತ್ತು ಸಾಧಿಸಿ ತನ್ನ ಗುರುದ್ರೋಹಿಯಾದ ಬಿಜ್ಜಳನನ್ನು ಕೊಂದು ಗುರುಹತ್ಯದ ಸೇಡನ್ನು ತೀರಿಸಿರಬೇಕೆಂದೂ ಆ ಘಟನೆ ಕ್ರಿ. ಶ. ೧೧೭೦ರ ಪ್ರಾಯಶಃ ಉತ್ತರಾರ್ಧದಲ್ಲಿ ಸಂಭವಿಸಿರಬೇಕೆಂದೂ ನಿಶ್ಚಯಿಸಬಹುದು.

ಬಸವೇಶ್ವರನ ಹಿಂದೆ ಬಸವ ಎಂಬ ಹೆಸರು ರೂಢಿಯಲ್ಲಿ ಇದ್ದಂತೆ ಶಾಸನಗಳಿಂದಾಗಲಿ ಸಾಹಿತ್ಯದಿಂದಾಗಲಿ ತೋರದು. ಅವನ ತಂದೆಯ ಮಾದಿರಾಜ ಎಂಬ ಹೆಸರಿನಲ್ಲಿಯ ಮಾದಿ ಎಂಬುದು ಮಾಧವ ಎಂಬುದರ ರೂಪವೆಂದು ಪ್ರತ್ಯಕ್ಷವಿದೆ; ಕೆಳದಿಯ ಬಸಪ್ಪ ನಾಯಕನ ಶಿವತತ್ತ್ವರತ್ನಾಕರ ಎಂಬ ವೀರಶೈವ ಗ್ರಂಥದಲ್ಲಿ [೧೦೩] ಅವನನ್ನು ಮಾಧವಾಚಾರ್ಯನೆಂದಿದೆ. ಬಸವೇಶ್ವರನ ಸಮಸಾಮಯಿಕರಾದ ಸಿದ್ಧರಾಮ, ಏಕಾಂತದ ರಾಮಯ್ಯ [೧೦೪] ಎಂಬ ಶಿವಶರಣರ ಹೆಸರುಗಳಲ್ಲಿ ವೈಷ್ಣವ ರಾಮನಾಮವಿದೆ. ಅವನ ಮಾವನ ಹೆಸರಾದ ಬಲದೇವ ಎಂಬಲ್ಲಿಯೂ ಪ್ರಾಯಶಃ ಬಲರಾಮನ ಬಲದೇವ ಎಂಬ ಹೆಸರಿದೆ. ಹರಿಹರನ ಮತ್ತು ರಾಘವಾಂಕನ ಹೆಸರುಗಳಲ್ಲಿಯೂ ಹರಿ ಎಂದೂ ರಾಘವ ಎಂದೂ ವೈಷ್ಣವ ಸಂಜ್ಞೆಗಳಿವೆ. ಇದೆಲ್ಲವನ್ನು ಪರ್ಯಾಲೋಚಿಸುವಲ್ಲಿ ಬಸವೇಶ್ವರನ ಶೈಶವ ಕಾಲದಲ್ಲಿ, ಅತಏವ ಅದಕ್ಕೆ ಹಿಂದಿನಿಂದಲೂ ಶೈವರು ಶಿವನ ಹೆಸರುಗಳಂತೆಯೇ ವೈಷ್ಣವ ಹೆಸರುಗಳನ್ನೂ ಯಥೇಚ್ಛವಾಗಿ ಬಳಸುತ್ತಿದ್ದರೆಂದು ತಿಳಿಯುವುದರಿಂದ, ಆ ಬಳಿಕಣ ವೀರಶೈವರಂತೆ ಅವರ ಹಿಂದಣ ಶೈವರು ಪ್ರಮಥರ ಹೆಸರುಗಳನ್ನು ತಮ್ಮ ಅಂಕಿತ ನಾಮಗಳಾಗಿ ಬಳಸುತ್ತಿದ್ದಿಲ್ಲವೆಂದೂ ಅತಏವ ವೀರಶೈವ ಧರ್ಮವು ಸ್ಥಾಪಿಸಲ್ಪಟ್ಟ ಬಳಿಕ ತಾನೆ, ಹೇಗೂ ಈ ಮುಂದೆಯೇ ಕಾಣುವಂತೆ ಬಸವೇಶ್ವರನು ತನ್ನ ಭವಾಂತರಗಳಲ್ಲಿ ತಾನು ಆಯಾ ಗಣೇಶ್ವರನಾಗಿದ್ದನೆಂದ ಬಳಿಕ ತಾನೆ ವೀರಶೈವರಲ್ಲಿ ಪ್ರಮಥರ ಹೆಸರುಗಳನ್ನು ಇಕ್ಕುವ ಪದ್ಧತಿ ತೊಡಗಿರಬೇಕೆಂದೂ ತೋರುತ್ತದೆ. ಆದಕಾರಣ ಬಸವೇಶ್ವರನ ಬಸವ ಎಂಬ ಹೆಸರು ಆತನ ಆದ್ಯನಾಮವಾಗಿರದು, ಅಂದರೆ ಆತನಿಗೆ ತಂದೆತಾಯಿಯರು ಇಟ್ಟ ಹೆಸರಲ್ಲ. ಬಸವೇಶ್ವರನು

---

೧೦೩. ಕಲ್ಲೋಲ ೪ ತರಂಗ ೯, ಶ್ಲೋಕ ೬೯. ೧೦೪. ಬಸವ ಪುರಾಣ, ಸಂಧಿ ೧೦; ೫೨.

ಅರಿತೇ ತನ್ನ ಆರಾಧ್ಯದೇವನಾದ ಕೂಡಲ ಸಂಗಮೇಶ್ವರನಲ್ಲಿಗಯ್ದಿ ಆತನ ಸನ್ನಿಧಿಯಲ್ಲಿದ್ದ ಬಸವೇಶ್ವರನು ಅಲ್ಲಿ ಅವರ ಕತ್ತಿಯ ಧಾರೆಗೆ ಈಡಾಗಿಯೊ ಸಮಾಧಿಯ ದಾರಿಯಿಂದ ಪಾರಾಗಿಯೊ ತನ್ನ ಸಂಗಮೇಶ್ವರನಲ್ಲಿ ಐಕ್ಯವಾದನು.

ಹೀಗೆ ಬಸವೇಶ್ವರನನ್ನು ತನ್ನ ದಾರಿಯಿಂದ ತೆಗೆದ ಮೇಲಾದರೂ ತನ್ನ ರಾಜ್ಯದಲ್ಲಿ ಸಾಕಷ್ಟು ನೆಮ್ಮದಿಯಾದೀತೆಂದಿದ್ದ ಬಿಜ್ಜಳನು ತನ್ನ ಮೊಮ್ಮಗನಾದ ಕರ್ಣ ದೇವನು ಎಬ್ಬಿಸುತ್ತಿರುವ ಕ್ಷೋಭವನ್ನು ಇನ್ನೂ ಅಂಕೆಗೆ ತರಲಾರದೆ, ವರಿಸೆಯ ಮೇರೆಗೆ ತನ್ನ ಬಳಿಕ ತನ್ನ ಹಿರೀ ಮಗನ ಮಗನಾದ ಆ ಕರ್ಣದೇವನಿಗೆ ಸಲ್ಲತಕ್ಕ ತನ್ನ ಪಟ್ಟವು ದ್ರೋಹಿಯಾದ ಆತನಿಗೆ ಹೋಗಬಾರದೆಂದೊ ಮುದುಕನಾದ ತನ್ನಿಂದ ಹಿಮ್ಮೆಟ್ಟಿಸಲಾರದ ಆ ಕ್ಷೋಭವನ್ನು ತನ್ನ ಮಗನಾದ ಸೋವಿದೇವನು ಹೋಗಲಾಡಿಸುವನೆಂದೊ ಬಸವೇಶ್ವರನು ಲಿಂಗೈಕ್ಯವಾದ ಕೆಲವೇ ತಿಂಗಳೊಳಗೆ ಶಿಕಾರಿಪುರ ೯೨ ರಿಂದ ಮೇಲೆ ಕಂಡಿರುವ ಮೇರೆಗೆ ಸೋವಿದೇವನಿಗೆ 'ಆತ್ಮರಾಜ್ಯ ಭರ ನಿರೂಪಣಂ' ಮಾಡಿರಬೇಕು, ಅಂದರೆ ಇನ್ನು ಮುಂದೆ ತನ್ನ ರಾಜ್ಯಭಾರವು ಸೋವಿದೇವನಿಗೆಂದು ನಿರೂಪಿಸಿ ಆ ರಾಜ್ಯಾಧಿಕಾರವನ್ನು ಅವನಿಗೆ ಬಿಟ್ಟು ಕೊಟ್ಟು ತಾನು ರಾಜ್ಯಭಾರದಿಂದ ನಿವೃತ್ತನಾಗಿರಬೇಕು. ಕ್ರಿ. ಶ. ೧೧೬೮ ರ ಮಾರ್ಚಿಯಲ್ಲಿ ಬಿಜ್ಜಳನು ದತ್ತಿ ಬಿಟ್ಟನೆಂದು ಮೇಲೆ ಕಂಡಿರುವುದರಿಂದ, ಬಸವೇಶ್ವರನು ಲಿಂಗೈಕ್ಯವಾದ ಮೇಲೆ ಹೆಚ್ಚು ಕಡಿಮೆ ಒಂದು ವರ್ಷವಾದರೂ ಬದುಕಿದ್ದನೆಂದು ತಿಳಿವ ಬಿಜ್ಜಳನ ಆ ಬಳಿಕ ಶಾಸನಗಳು ದೊರೆಯದುದರಿಂದ ಅವನು ಆ ಮೇಲೆ ಹೆಚ್ಚು ಕಾಲ ಬದುಕಿರಲಾರನು. ಅವನ ಅವಸಾನವು ಹೇಗಾಯಿತೆಂದು ಅನ್ಯಥಾ ತಿಳಿಯದಾದರೂ ಆ ಕುರಿತು ಹೇಳಿರುವ ಕನ್ನಡ ಸಾಹಿತ್ಯದಲ್ಲಿ ಮಿಕ್ಕೆಲ್ಲವಕ್ಕಿಂತಲೂ ಹಿಂದಣ, ಹಾಗೂ ಅವನ ಕಾಲದಿಂದ ಹೆಚ್ಚಾದರೆ ೩೦-೪೦ ವರ್ಷಗಳೊಳಗಣ ರಾಘವಾಂಕ ಸಿದ್ಧರಾಮೇಶ್ವರ ಪುರಾಣದಲ್ಲಿ (೮-೯೫)—

ಭೂಪ ಬಿಜ್ಜಳನಳಿದ ವೀರಜಗದೇವನಿಂ ಸಿದ್ಧ ಸಂಖ್ಯಾತದಿಂದ॥

ಎಂದಿರುವಲ್ಲಿ ಬಿಜ್ಜಳನನ್ನು ಕೊಂದನೆಂಬ ಜಗದೇವನೂ ಬಸವ ಪುರಾಣದಲ್ಲಿಯೂ (ಸಂಧಿ ೬೧) ಚನ್ನಬಸವಪುರಾಣದಲ್ಲಿಯೂ (V ೯ ೨೨-೨೩) ಇರುಳಿ ನೋಲಗದಲ್ಲಿದ್ದ ಆತನನ್ನು ಮಡುಹಿದನೆಂದಿರುವ ಜಗದೇವನೂ ಒಬ್ಬನೇ ಎಂದು ಪ್ರತ್ಯಕ್ಷವಿರುವುದರಿಂದ, ಬಸವೇಶ್ವರನ ಭಕ್ತನಾದ ಜಗದೇವನು ಹೊತ್ತು ಸಾಧಿಸಿ ತನ್ನ ಗುರುದ್ರೋಹಿಯಾದ ಬಿಜ್ಜಳನನ್ನು ಕೊಂದು ಗುರುಹತ್ಯದ ಸೇಡನ್ನು ತೀರಿಸಿರಬೇಕೆಂದೂ ಆ ಘಟನೆ ಕ್ರಿ. ಶ. ೧೧೬೮ರ ಪ್ರಾಯಶಃ ಉತ್ತರಾರ್ಧದಲ್ಲಿ ಸಂಭವಿಸಿರಬೇಕೆಂದೂ ನಿಶ್ಚಯಿಸಬಹುದು.



ಬಸವೇಶ್ವರನ ಹಿಂದೆ ಬಸವ ಎಂಬ ಹೆಸರು ರೂಢಿಯಲ್ಲಿ ಇದ್ದಂತೆ ಶಾಸನಗಳಿಂದಾಗಲಿ ಸಾಹಿತ್ಯದಿಂದಾಗಲಿ ತೋರದು. ಅವನ ತಂದೆಯ ಮಾದಿರಾಜ ಎಂಬ ಹೆಸರಿನಲ್ಲಿಯ ಮಾದಿ ಎಂಬುದು ಮಾಧವ ಎಂಬುದರ ರೂಪವೆಂದು ಪ್ರತ್ಯಕ್ಷವಿದೆ; ಕೆಳದಿಯ ಬಸಪ್ಪ ನಾಯಕನ ಶಿವತತ್ತ್ವರತ್ನಾಕರ ಎಂಬ ವೀರಶೈವ ಗ್ರಂಥದಲ್ಲಿ ೧೦೩ ಅವನನ್ನು ಮಾಧವಾಚಾರ್ಯನೆಂದಿದೆ. ಬಸವೇಶ್ವರನ ಸಮಸಾಮಯಿಕರಾದ ಸಿದ್ಧರಾಮ, ಏಕಾಂತದ ರಾಮಯ್ಯ ೧೦೪ ಎಂಬ ಶಿವಶರಣರ ಹೆಸರುಗಳಲ್ಲಿ ವೈಷ್ಣವ ರಾಮನಾಮವಿದೆ. ಅವನ ಮಾವನ ಹೆಸರಾದ ಬಲದೇವ ಎಂಬಲ್ಲಿಯೂ ಪ್ರಾಯಶಃ ಬಲರಾಮನ ಬಲದೇವ ಎಂಬ ಹೆಸರಿದೆ. ಹರಿಹರನ ಮತ್ತು ರಾಘವಾಂಕನ ಹೆಸರುಗಳಲ್ಲಿಯೂ ಹರಿ ಎಂದೂ ರಾಘವ ಎಂದೂ ವೈಷ್ಣವ ಸಂಜ್ಞೆಗಳಿವೆ. ಇದೆಲ್ಲವನ್ನು ಪರ್ಯಾಲೋಚಿಸುವಲ್ಲಿ ಬಸವೇಶ್ವರನ ಶೈಶವ ಕಾಲದಲ್ಲಿ, ಅತಏವ ಅದಕ್ಕೆ ಹಿಂದಿನಿಂದಲೂ ಶೈವರು ಶಿವನ ಹೆಸರುಗಳಂತೆಯೇ ವೈಷ್ಣವ ಹೆಸರುಗಳನ್ನೂ ಯಥೇಚ್ಛವಾಗಿ ಬಳಸುತ್ತಿದ್ದರೆಂದು ತಿಳಿಯುವುದರಿಂದ, ಆ ಬಳಿಕಣ ವೀರಶೈವರಂತೆ ಅವರ ಹಿಂದಣ ಶೈವರು ಪ್ರಮಥರ ಹೆಸರುಗಳನ್ನು ತಮ್ಮ ಅಂಕಿತ ನಾಮಗಳಾಗಿ ಬಳಸುತ್ತಿದ್ದಿಲ್ಲವೆಂದೂ ಅತಏವ ವೀರಶೈವ ಧರ್ಮವು ಸ್ಥಾಪಿಸಲ್ಪಟ್ಟ ಬಳಿಕ ತಾನೆ, ಹೇಗೂ ಈ ಮುಂದೆಯೇ ಕಾಣುವಂತೆ ಬಸವೇಶ್ವರನು ತನ್ನ ಭವಾಂತರಗಳಲ್ಲಿ ತಾನು ಆಯಾ ಗಣೇಶ್ವರನಾಗಿದ್ದನೆಂದ ಬಳಿಕ ತಾನೆ ವೀರಶೈವರಲ್ಲಿ ಪ್ರಮಥರ ಹೆಸರುಗಳನ್ನು ಇಕ್ಕುವ ಪದ್ಧತಿ ತೊಡಗಿರಬೇಕೆಂದೂ ತೋರುತ್ತದೆ. ಆದಕಾರಣ ಬಸವೇಶ್ವರನ ಬಸವ ಎಂಬ ಹೆಸರು ಆತನ ಆದ್ಯನಾಮವಾಗಿರದು, ಅಂದರೆ ಆತನಿಗೆ ತಂದೆತಾಯಿಯರು ಇಟ್ಟ ಹೆಸರಲ್ಲ. ಬಸವೇಶ್ವರನು

---

೧೦೩. ಕಲ್ಲೋಲ ೪ ತರಂಗ ೯, ಶ್ಲೋಕ ೬೯. ೧೦೪. ಬಸವ ಪುರಾಣ, ಸಂಧಿ ೧೦; ೫೨.

ಅಂತೇ ತನ್ನ ಆರಾಧ್ಯದೇವನಾದ ಕೂಡಲ ಸಂಗಮೇಶ್ವರನಲ್ಲಿಗಯ್ದಿ ಆತನ ಸನ್ನಿಧಿಯಲ್ಲಿದ್ದ ಬಸವೇಶ್ವರನು ಅಲ್ಲಿ ಅವರ ಕತ್ತಿಯು ಧಾರೆಗೆ ಈಡಾಗಿಯೊ ಸಮಾಧಿಯ ದಾರಿಯಿಂದ ಪಾರಾಗಿಯೊ ತನ್ನ ಸಂಗಮೇಶ್ವರನಲ್ಲಿ ಐಕ್ಯವಾದನು.

ಹೀಗೆ ಬಸವೇಶ್ವರನನ್ನು ತನ್ನ ದಾರಿಯಿಂದ ತೆಗೆದ ಮೇಲಾದರೂ ತನ್ನ ರಾಜ್ಯದಲ್ಲಿ ಸಾಕಷ್ಟು ನೆಮ್ಮದಿಯಾದೀತೆಂದಿದ್ದ ಬಿಜ್ಜಳನು ತನ್ನ ಮೊಮ್ಮಗನಾದ ಕರ್ಣ ದೇವನು ಎಬ್ಬಿಸುತ್ತಿರುವ ಕ್ಷೋಭವನ್ನು ಇನ್ನೂ ಅಂಕೆಗೆ ತರಲಾರದೆ, ವರಿಸೆಯು ಮೇರೆಗೆ ತನ್ನ ಬಳಿಕ ತನ್ನ ಹಿರೀಮಗನ ಮಗನಾದ ಆ ಕರ್ಣದೇವನಿಗೆ ಸಲ್ಲತಕ್ಕ ತನ್ನ ಪಟ್ಟವು ದ್ರೋಹಿಯಾದ ಆತನಿಗೆ ಹೋಗಬಾರದೆಂದೊ ಮುದುಕನಾದ ತನ್ನಿಂದ ಹಿಮ್ಮೆಟ್ಟಿಸಲಾರದ ಆ ಕ್ಷೋಭವನ್ನು ತನ್ನ ಮಗನಾದ ಸೋವಿದೇವನು ಹೋಗಲಾಡಿಸುವನೆಂದೊ ಬಸವೇಶ್ವರನು ಲಿಂಗೈಕ್ಯವಾದ ಕೆಲವೇ ತಿಂಗಳೊಳಗೆ ಶಿಕಾರಿಪುರ ೯೨ ರಿಂದ ಮೇಲೆ ಕಂಡಿರುವ ಮೇರೆಗೆ ಸೋವಿದೇವನಿಗೆ 'ಆತ್ಮರಾಜ್ಯ ಭರ ನಿರೂಪಣಂ' ಮಾಡಿರಬೇಕು, ಅಂದರೆ ಇನ್ನು ಮುಂದೆ ತನ್ನ ರಾಜ್ಯಭಾರವು ಸೋವಿದೇವನಿಗೆಂದು ನಿರೂಪಿಸಿ ಆ ರಾಜ್ಯಾಧಿಕಾರವನ್ನು ಅವನಿಗೆ ಬಿಟ್ಟುಕೊಟ್ಟು ತಾನು ರಾಜ್ಯಭಾರದಿಂದ ನಿವೃತ್ತನಾಗಿರಬೇಕು. ಕ್ರಿ. ಶ. ೧೧೬೮ ರ ಮಾರ್ಚಿಯಲ್ಲಿ ಬಿಜ್ಜಳನು ದತ್ತಿಬಿಟ್ಟನೆಂದು ಮೇಲೆ ಕಂಡಿರುವುದರಿಂದ, ಬಸವೇಶ್ವರನು ಲಿಂಗೈಕ್ಯವಾದ ಮೇಲೆ ಹೆಚ್ಚು ಕಡಿಮೆ ಒಂದು ವರ್ಷವಾದರೂ ಬದುಕಿದ್ದನೆಂದು ತಿಳಿವ ಬಿಜ್ಜಳನ ಆ ಬಳಿಕ ಶಾಸನಗಳು ದೊರೆಯದುದರಿಂದ ಅವನು ಆ ಮೇಲೆ ಹೆಚ್ಚು ಕಾಲ ಬದುಕಿರಲಾರನು. ಅವನ ಅವಸಾನವು ಹೇಗಾಯಿತೆಂದು ಅನ್ಯಥಾ ತಿಳಿಯದಾದರೂ ಆ ಕುರಿತು ಹೇಳಿರುವ ಕನ್ನಡ ಸಾಹಿತ್ಯದಲ್ಲಿ ಮಿಕ್ಕೆಲ್ಲವಕ್ಕಿಂತಲೂ ಹಿಂದಣ, ಹಾಗೂ ಅವನ ಕಾಲದಿಂದ ಹೆಚ್ಚಾದರೆ ೩೦-೪೦ ವರ್ಷಗಳೊಳಗಣ ರಾಘವಾಂಕ ಸಿದ್ಧರಾಮೇಶ್ವರ ಪುರಾಣದಲ್ಲಿ (೮-೯೫)—

ಭೂಪ ಬಿಜ್ಜಳನಳಿದ ವೀರಜಗದೇವನಿಂ ಸಿದ್ಧ ಸಂಖ್ಯಾತದಿಂದ॥

ಎಂದಿರುವಲ್ಲಿ ಬಿಜ್ಜಳನನ್ನು ಕೊಂದನೆಂಬ ಜಗದೇವನೂ ಬಸವ ಪುರಾಣದಲ್ಲಿಯೂ (ಸಂಧಿ ೬೧) ಚನ್ನಬಸವಪುರಾಣದಲ್ಲಿಯೂ (V ೯ ೨೨-೨೩) ಇರುಳ ಓಲಗದಲ್ಲಿದ್ದ ಆತನನ್ನು ಮಡುಹಿದನೆಂದಿರುವ ಜಗದೇವನೂ



ಒಬ್ಬನೇ ಎಂದು ಪ್ರತ್ಯಕ್ಷವಿರುವುದರಿಂದ, ಬಸವೇಶ್ವರನ ಭಕ್ತನಾದ ಜಗದೇವನು ಹೊತ್ತು ಸಾಧಿಸಿ ತನ್ನ ಗುರುದ್ರೋಹಿಯಾದ ಬಿಜ್ಜಳನನ್ನು ಕೊಂದು ಗುರುಹತ್ಯದ ಸೇಡನ್ನು ತೀರಿಸಿರಬೇಕೆಂದೂ ಆ ಘಟನೆ ಕ್ರಿ. ಶ. ೧೧೬೮ರ ಪ್ರಾಯಶಃ ಉತ್ತರಾರ್ಧದಲ್ಲಿ ಸಂಭವಿಸಿರಬೇಕೆಂದೂ ನಿಶ್ಚಯಿಸಬಹುದು.

ಬಸವೇಶ್ವರನ ಹಿಂದೆ ಬಸವ ಎಂಬ ಹೆಸರು ರೂಢಿಯಲ್ಲಿ ಇದ್ದಂತೆ ಶಾಸನಗಳಿಂದಾಗಲಿ ಸಾಹಿತ್ಯದಿಂದಾಗಲಿ ತೋರದು. ಅವನ ತಂದೆಯ ಮಾದಿರಾಜ ಎಂಬ ಹೆಸರಿನಲ್ಲಿಯ ಮಾದಿ ಎಂಬುದು ಮಾಧವ ಎಂಬುದರ ರೂಪವೆಂದು ಪ್ರತ್ಯಕ್ಷವಿದೆ; ಕೆಳದಿಯ ಬಸಪ್ಪ ನಾಯಕನ ಶಿವತತ್ತ್ವರತ್ನಾಕರ ಎಂಬ ವೀರಶೈವ ಗ್ರಂಥದಲ್ಲಿ [೧೦೩] ಅವನನ್ನು ಮಾಧವಾಚಾರ್ಯನೆಂದದೆ. ಬಸವೇಶ್ವರನ ಸಮಸಾಮಯಿಕರಾದ ಸಿದ್ಧರಾಮ, ಏಕಾಂತದ ರಾಮಯ್ಯ [೧೦೪] ಎಂಬ ಶಿವಶರಣರ ಹೆಸರುಗಳಲ್ಲಿ ವೈಷ್ಣವ ರಾಮನಾಮವಿದೆ. ಅವನ ಮಾವನ ಹೆಸರಾದ ಬಲದೇವ ಎಂಬಲ್ಲಿಯೂ ಪ್ರಾಯಶಃ ಬಲರಾಮನ ಬಲದೇವ ಎಂಬ ಹೆಸರಿದೆ. ಹರಿಹರನ ಮತ್ತು ರಾಘವಾಂಕನ ಹೆಸರುಗಳಲ್ಲಿಯೂ ಹರಿ ಎಂದೂ ರಾಘವ ಎಂದೂ ವೈಷ್ಣವ ಸಂಜ್ಞೆಗಳಿವೆ. ಇದೆಲ್ಲವನ್ನು ಪರ್ಯಾಲೋಚಿಸುವಲ್ಲಿ ಬಸವೇಶ್ವರನ ಶೈಶವ ಕಾಲದಲ್ಲಿ, ಅತಏವ ಅದಕ್ಕೆ ಹಿಂದಿನಿಂದಲೂ ಶೈವರು ಶಿವನ ಹೆಸರುಗಳಂತೆಯೇ ವೈಷ್ಣವ ಹೆಸರುಗಳನ್ನೂ ಯಥೇಚ್ಛವಾಗಿ ಬಳಸುತ್ತಿದ್ದರೆಂದು ತಿಳಿಯುವುದರಿಂದ, ಆ ಬಳಿಕಣ ವೀರಶೈವರಂತೆ ಅವರ ಹಿಂದಣ ಶೈವರು ಪ್ರಮಥರ ಹೆಸರುಗಳನ್ನು ತಮ್ಮ ಅಂಕಿತ ನಾಮಗಳಾಗಿ ಬಳಸುತ್ತಿದ್ದಿಲ್ಲವೆಂದೂ ಅತಏವ ವೀರಶೈವ ಧರ್ಮವು ಸ್ಥಾಪಿಸಲ್ಪಟ್ಟ ಬಳಿಕ ತಾನೆ, ಹೇಗೂ ಈ ಮುಂದೆಯೇ ಕಾಣುವಂತೆ ಬಸವೇಶ್ವರನು ತನ್ನ ಭವಾಂತರಗಳಲ್ಲಿ ತಾನು ಆಯಾ ಗಣೇಶ್ವರನಾಗಿದ್ದನೆಂದ ಬಳಿಕ ತಾನೆ ವೀರಶೈವರಲ್ಲಿ ಪ್ರಮಥರ ಹೆಸರುಗಳನ್ನು ಇಕ್ಕುವ ಪದ್ಧತಿ ತೊಡಗಿರಬೇಕೆಂದೂ ತೋರುತ್ತದೆ. ಆದಕಾರಣ ಬಸವೇಶ್ವರನ ಬಸವ ಎಂಬ ಹೆಸರು ಆತನ ಆದ್ಯನಾಮವಾಗಿರದು, ಅಂದರೆ ಆತನಿಗೆ ತಂದೆತಾಯಿಯರು ಇಟ್ಟ ಹೆಸರಲ್ಲ. ಬಸವೇಶ್ವರನು

---

೧೦೩. ಕಲ್ಲೋಲ ೪ ತರಂಗ ೯, ಶ್ಲೋಕ ೬೯. ೧೦೪. ಬಸವ ಪುರಾಣ, ಸಂಧಿ ೧೦; ೫೨.

ಮೊದಲನೆಯದರಲ್ಲಿ ಶಿಲಾದ
ತನ್ನ ಭವಾಂತರಗಳನ್ನು ಕುರಿತು ತಾನು
ನೆಂಬ ಗಣೇಶ್ವರನಾಗಿದ್ದೆನೆಂದೂ ೨ನೆಯದರಲ್ಲಿ ಸ್ಕಂದನೆಂಬ ಗಣೇಶ್ವರ ನೆಂದೂ ೩ನೆಯದರಲ್ಲಿ ನೀಲಲೋಹಿತನೆಂಬವನೆಂದೂ ೪ನೆಯದರಲ್ಲಿ ಮನೋಹರನೆಂಬ ಗಣೇಶ್ವರನೆಂದೂ ೫ನೆಯದರಲ್ಲಿ ಕಾಲಲೋಚನನೆಂಬವನೆಂದೂ ೬ನೆಯದರಲ್ಲಿ ವೃಷಭನೆಂಬ ಗಣೇಶ್ವರನಾಗಿದ್ದೆನೆಂದೂ ಈ ಗಣ ೭ನೆಯದರಲ್ಲಿ ಬಸವನೆಂಬ ಗಣೇಶ್ವರನಾಗಿರುತ್ತೇನೆಂದೂ ಹೇಳಿರುವಲ್ಲಿ ೧೦೫ ಆತನು ತನ್ನ ಆಯಾ ಭವಾಂತರದಲ್ಲಿ ತಾನು ಆಯಾ ಗಣೇಶ್ವರನೆಂದೂ ಈಗಲೂ ತಾನು ಬಸವನೆಂಬ ಗಣೇಶ್ವರನೇ ವಿನಾ ಸಾಮಾನ್ಯ ವ್ಯಕ್ತಿಯಲ್ಲವೆಂದೂ ಭಾವಿಸಿದ್ದನೆಂದು ಸ್ಪಷ್ಟವಿದೆ. ಈ ಪ್ರತ್ಯಯವಾದರೊ ಆ ತಕ್ಕ ಪ್ರಾಯವಾದ ಮೇಲೆ ಆತನಿಗೆ ತಾನೆ ಮಾಡಿರಬೇಕಲ್ಲವೆ ಅವನ ತಾಯಿ ತಂದೆಯರಿಗೆ ಹೊಳೆದುದಲ್ಲ. ಆದಕಾರಣ ಮಾದಿರಾಜನು ಆತನಿಗೆ ಬಸವನೆಂದು ನಾಮಕರಣ ಮಾಡಿರಲಿಕ್ಕೆ ಕಾರಣವಿಲ್ಲ. ಈ ವಿಶ್ವಾಸವು ತನ್ನಲ್ಲಿ ದಿನೇ ದಿನೇ ಬೆಳೆದು ದೃಢಮೂಲವಾಗಿ ಬರುವಂತೆ ಆ ಶಿವಮರುಳನಿಂದ ಆ ವಿಖ್ಯಾತನಾದ ಬಸವೇಶ್ವರನು ಇನ್ನು ತಳುವದೆ ತನ್ನ ಬ್ರಾಹ್ಮಣಿಕೆಯನ್ನೂ ತನ್ನ ಮನೆಮಾರನ್ನು ತೊರೆದು ಕೂಡಲಸಂಗಮೇಶ್ವರನಲ್ಲಿಗೆ ಹೋಗಿ ಅವನ ಸನ್ನಿಧಿಯಲ್ಲಿ ಧ್ಯಾನತತ್ಪರನಾಗಿದ್ದು ಅವನನ್ನು ಪ್ರತ್ಯಕ್ಷೀಕರಿಸಿಕೊಂಡಂದಿನ ಪ್ರಾಯಶಃ ತನ್ನ ಸಮಾಧಿಯಲ್ಲಿ ಕೂಡಲಸಂಗಮೇಶ್ವರನು ತನಗೆ ನಂದೀಶ್ವರನಿಂದ ಕೊಡಿಸಿದ ದೀಕ್ಷೆಯನ್ನು ಕೈಕೊಂಡು (ಬಸವರಾಜರಗಳೆ, ಪು. ೨೩-೨೪), ಅಲ್ಲಿಂದ ಮುಂದೆ ತನ್ನ ಆ ದೀಕ್ಷಾಗುರುವಿನ ಬಸವ ಎಂಬ ನಾಮಧೇಯವನ್ನೇ ತನಗಿಟ್ಟುಕೊಂಡು ತನ್ನ ಹೆಸರೂ ಬಸವ ಎಂದಿರಬೇಕು. ಆದರೆ ಅವನ ಹುಟ್ಟು ಹೆಸರಾವುದೊ ತಿಳಿಯದು.

---

೧೦೫. ಬಸವೇಶ್ವರನ ವಚನಗಳು ಪು. ೧-೨

---

# ಕೊಡಗು ದೇಶದ ನಿಜವಾದ ಇತಿಹಾಸವು.

ಲೇಖಕರು:—ಶ್ರೀಯುತ ಸದಾಶಿವ ವೀರಭದ್ರಪ್ಪ ಹಂಜಿ, ಎಂ. ಎ.

(ಹಿಂದಿನ ಸಂಚಿಕೆಯಿಂದ ಮುಂದ ವರಿದದ್ದು)

ಆತನು ಮರಕರಾ ಕಿಲ್ಲೆಯ ಹತ್ತರ ಕುಂಟರು, ಊನರು, ಕುರುಡರು ಮೊದಲಾದ ಜನರನ್ನು ಕೂಡಿಸಿ ಕವಾಯಿತ ಕಲಿಸಲಿಕ್ಕೆ ಪ್ರಾರಂಭಮಾಡಿದನು. ಮತ್ತು ಕೊಡಗಿನ ಜನರಿಗೆ ಯುದ್ಧಕ್ಕೆ ಸಿದ್ಧರಾಗಬೇಕೆಂದು ಹೇಳಿದನು. ಮತ್ತು ತನ್ನ ರಾಜ್ಯದಲ್ಲಿಯೂ ಕಂಪನಿ ಸರಕಾರದ ರಾಜ್ಯದಲ್ಲಿಯೂ ಒಂದು ಜಾಹೀರನಾಮೆಯನ್ನು ಪ್ರಕಟಿಸಿದನು. ಅದು ಹೀಗೆ ಇತ್ತು. "ಇಂಗ್ಲಿಷ ಜನರು ಹಿಂದುಸ್ತಾನದೊಳಗೆ ಬಂದು ಹಿಂದೂ ಮತ್ತು ಮುಸಲ್ಮಾನ ಇವರಿಬ್ಬರ ಧರ್ಮವನ್ನು ಧ್ವಂಸಮಾಡಲಿಕ್ಕೆ ಹತ್ತಿದ್ದಾರೆ. ಆದುದರಿಂದ ಹಿಂದೂ ಮುಸಲ್ಮಾನರು ಎಲ್ಲರೂ ಒಕ್ಕಟ್ಟಾಗಿ ಹಾಲೇರಿ ವಂಶದ ಧ್ವಜದ ಅನುಕರಣಮಾಡಿ ಇಂಗ್ಲೀಷರ ಸಂಹಾರ ಮಾಡಲಿಕ್ಕೆ ಸಿದ್ಧರಾಗಬೇಕು." ರಾಜನು ತನ್ನನ್ನು ರಕ್ಷಣ ಮಾಡಿಕೊಳ್ಳಲಿಕ್ಕೆ ಕೊಡಗಿನಿಂದ ಹೊರಟು ಮರಕರಾದ ಸಮೀಪ ಪಶ್ಚಿಮ ದಂಡೆಗೆ ೨೦ ಮೈಲಿನ ಮೇಲೆ ನಲಕನಾಡು ಎಂಬ ಸ್ಥಾನವಿದ್ದು ಅಲ್ಲಿ ಇವನ ಚಿಕ್ಕಪ್ಪನು ಕಟ್ಟಿಸಿದ ವಾಡೆಯಲ್ಲಿ ಇರಹೋದನು. ಅದು ಒಳ್ಳೇ ಇಕ್ಕಟ್ಟಾದ ಸ್ಥಾನದಲ್ಲಿದ್ದು ಅಲ್ಲಿ ವೈರಿಗಳ ಪ್ರವೇಶವಾಗುವದು ಅತಿಶಯ ಕಷ್ಟಕರವಾದದ್ದು. ಅಲ್ಲಿಗೆ ಹೋಗುವಾಗ ಅರಸನು ತನ್ನ ಹೆಂಡರು ಮಕ್ಕಳು ಮತ್ತು ಎಲ್ಲ ಖಜಾನೆ, ವಾದ್ಯಗಳನ್ನು ಮತ್ತು ಕೊಡಗಿನ ರಾಜವಂಶಕ್ಕೆ ಸಂಬಂಧಿಸಿದ ಎಲ್ಲವುಗಳನ್ನು ತಕ್ಕೊಂಡನು. ಇತ್ತ ಕಂಪನಿ ಸರಕಾರದವರು ಕೊಡಗು ಪ್ರಾಂತದ ಮೇಲೆ ದಾಳೀ ಮಾಡಲಿಕ್ಕೆ ಪೂರ್ವ ಮತ್ತು ಪಶ್ಚಿಮ ದಂಡೆಯಿಂದ ಸೈನ್ಯವನ್ನು ಕಳಿಸಿದರು. ಕೊಡಗು ದೇಶದೊಳಗಿನ ಮುಖ್ಯ ಮುಖ್ಯ ದಂಡನಾಯಕರು ಇಂಗ್ಲಿಷರನ್ನು ಕಸಪದಾರ್ಥವೆಂದು ತಿಳಿದು ಕ್ಷಣದಲ್ಲಿ ಅವರ ಧೂಳಹಾರಿಸಿ ಬಿಡುವೆವೆಂದು ಅನ್ನುತ್ತಿದ್ದರು. ಅವರೆಲ್ಲರೂ ತಮ್ಮ ಆಲೋಚನೆಯಂತೆ, ಬೇರೆ ಬೇರೆ ದಾರಿಗಳ ಮೇಲೆ ಸಿದ್ಧರಾಗಿ ನಿಂತರು.

ಅವರು ಹಾಗೆಯೇ ನಿಂತಿದ್ದರೆ ಕಂಪನಿಯವರ ಸೈನ್ಯದ ಆಟವು ಸ್ವಲ್ಪಾದರೂ ನಡೆಯುತ್ತಿದ್ದಿಲ್ಲ. ನಿಜವಾಗಿ ಅವರು ಕಂಪನಿಯವರನ್ನು ಸಂಪೂರ್ಣವಾಗಿ ಸದೆಬಡೆದು ಬಿಡುತ್ತಿದ್ದರು. ಆದರೆ ರಾಜನಿಗೆ ಕಂಪನೀ ಸರಕಾರವು ತಮ್ಮ ಮಾತಿಗೆ ಒಪ್ಪಬಹುದು. ಮತ್ತು ತನಗೂ ಕಂಪನಿಯವರಿಗೂ ಗೆಳೆತನವು ಪುನಃ ಉಂಟಾಗಬಹುದೆಂಬ ಭ್ರಾಂತಿಯು ಆವರಿಸಿತು. ಆದುದರಿಂದ ಸದ್ಯಕ್ಕೆ ಯುದ್ಧದ, ಪ್ರಸಂಗವನ್ನು ತರಬಾರದೆಂಬ ವಿಚಾರವು ಆತನ ಮನಸ್ಸಿನಲ್ಲಿ ಬಂತು. ಹೀಗೆ ಅವನು ತನ್ನ ಮುಖ್ಯದಂಡನಾಯಕನಿಗೆ ಕಂಪನಿಯವರ ಸೈನ್ಯದಮೇಲೆ ಬೀಳಬಾರದೆಂದು ಆಜ್ಞೆಯನ್ನಿತ್ತನು. ಇದರಿಂದ ರಾಜನು ಸಂಪೂರ್ಣವಾಗಿ ಮೋಸಹೋದನು. ರಾಜನ ಈ ವೃತ್ತಿಯನ್ನು ನೋಡಿ ಬ್ರಿಟಿಶ ಸೈನ್ಯವು ಕೊಡಗು ದೇಶವನ್ನು ಒಳಸುಗ್ಗಿತು. ಮತ್ತು ಬಂದೂಕಿನ ಸ್ವಲ್ಪವೂ ಸಪ್ಪಳಮಾಡದೆ ತಮ್ಮ ಕಾರ್ಯವನ್ನು ಸಾಧಿಸಿತು. ಕರ್ನಲ ಲಿಂಡಸೆ ಇವನು ತೋಪುಗಳನ್ನು ತಕ್ಕೊಂಡು ಫ್ರೇಜರ ಪೇಟದಿಂದ ಮಾರಕರೆಯ ಕಡೆಗೆ ಹೋದನು. ವೀರ ರಾಜೇಂದ್ರನು ನಲಕನಾಡಿನ ಕಡೆಗೆ ಹೋದನು. ಅಲ್ಲಿ ದಿವಾಣ ಬಾಪುನೂ ಮತ್ತು ಪೊನ್ನಪ್ಪನು ಇದ್ದರು. ಅವರು ಈ ಪ್ರಸಂಗದಲ್ಲಿ ತಾನೂ ತಮ್ಮ ಮಿತ್ರರೂ ಒಟ್ಟುಗೂಡಿ ಈ ಅರಸನ ಅಧೀನದಲ್ಲಿರುವದಕ್ಕಿಂತ ಒಳ್ಳೇಯವರಾದ ಕಂಪನೀಯವರ ವಶಕ್ಕೆ ರಾಜ್ಯವನ್ನು ಕೊಟ್ಟು ಅವರಿಗೆ ನಮ್ರವಾಗಿ ಇರುವದು ಬಹಳ ಯೋಗ್ಯವೆಂದು ಮಾತಾಡಿಕೊಂಡರು. ಹೀಗೆ ವಿಚಾರಮಾಡಿ ದಿವಾಣ ಬಾಪೂನು ಸಂಗಡ ೪೦೦ ಕೊಡಗು ಸೈನಿಕರನ್ನು ತಕ್ಕೊಂಡು ಗವರ್ನರ ಜನರಲ್ಲನ ಎಜಂಟನಾದ ಫ್ರೇಜರನಿಗೆ ಶರಣು ಹೋದನು. ಮತ್ತು ರಾಜಧಾನಿಯ ವರೆಗೆ ಅವರ ಸೈನ್ಯವನ್ನು ಒಯ್ಯಲಿಕ್ಕೆ ಸಹಾಯ ಮಾಡುವೆನೆಂದು ಹೇಳಿದನು. ೧೮೩೪ ನೆಯ ಇಸವಿಯ ಎಪ್ರಿಲ ತಿಂಗಳ ೧೦ ನೆಯ ತಾರೀಖಿನ ದಿವಸ ಇಂಗ್ಲಿಷರ ಧ್ವಜವು ಮಾರಕಾರಾ ದುರ್ಗದಮೇಲೆ ಹಾರಾಡಹತ್ತಿತು. ಈ ಸಮಯದಲ್ಲಿ ವೀರರಾಜನು ನಲಕನಾಡಿನಲ್ಲಿದ್ದು ತನ್ನ ದ್ರವ್ಯವನ್ನೆಲ್ಲ ಹುಗಿದಿಟ್ಟನು. ಮತ್ತು ಕೆಲವು ಮುದಿಕೆಯರನ್ನು ಬಿಟ್ಟು ಎಲ್ಲ ಸಂಬಂಧಿಕರನ್ನು ಕೊಲ್ಲಿಸಿದನು. ರಾಜನು ತಾನಾಗಿ ಶರಣು ಬಂದರೆ ಅವನನ್ನು ನಾಶಮಾಡದೆ ಅವನಿಗೆ ಬಹುಮಾನ ಮಾಡುವೆನೆಂದು ಫ್ರೇಜರ ಸಾಹೇಬನು ಅವನಿಗೆ ಹೇಳಿಕಳಿಸಿದನು. ಆದರೆ ಅರಸನು ಇದಕ್ಕೆ ಲಕ್ಷ್ಯ ಕೊಡಲಿಲ್ಲ. ಅವನು ಎಪ್ರಿಲ ೧೨ ಕ್ಕೆ ಮಾರಕಾರಕ್ಕೆ ಹೋದನು. ಅಲ್ಲಿ



ಗವರ್ನರ ಜನರಲ್‌ನ ಎಜಂಟನ ಭೆಟ್ಟಿ ತಕ್ಕೊಂಡನು. ಆ ಭೆಟ್ಟಿಯ ಮಾತುಕಥೆಗಳಿಂದ ರಾಜನಿಗೆ ಯಾವ ಲಾಭವೂ ಆಗಲಿಲ್ಲ. ಅವನಿಗೆ ಕೊಡಗು ಪ್ರಾಂತದಲ್ಲಿ ಇರಲಿಕ್ಕೆ ಪರವಾನಿಗಿ ಸಿಕ್ಕಿದ್ದು ಒಂದು ದೊಡ್ಡ ಸೌಭಾಗ್ಯವೆಂದೇ ತಿಳಿಯಬೇಕು. ಅಲ್ಲಿಯೂ ಸಹ ಅವನ ಸುತ್ತಲೂ ಕಾವಲುಗಾರರು ಇರತಕ್ಕದ್ದೇ ಸರಿ. ಇದಲ್ಲದೆ ಅವನಿಗೆ ಇಂಗ್ಲಿಷರು ತನ್ನನ್ನು ಪದಚ್ಯುತನನ್ನಾಗಿ ಮಾಡುವದು ಸಂಪೂರ್ಣವಾಗಿ ಗೊತ್ತಿತ್ತು. ಮತ್ತು ತನ್ನ ಸ್ನೇಹಿತನಾದ ಕುಂಟ ಬಸವನು ಕರ್ನಲ ಫ್ರೇಜರನ ಸ್ವಾಧೀನವಾದುದನ್ನು ನೋಡಿ ಅವನಿಗೆ ಬಹಳ ಕೆಡಕೆನಿಸಿತು. ಸೊವಬರ್ಪೇಟ ಎಂಬಲ್ಲಿ ಘನಘೋರ ಸಂಗ್ರಾಮವೆಸಗಿತು. ಅಲ್ಲಿ ಬೆಪ್ಪಾಡಿನ ಸುಭೇದಾರನಾದ ಅಪ್ಪಾಚನ್ನನು ಬಹಳ ಶೂರತನದಿಂದ ಕಾದಿದನು. ಅವನು ಜಾತಿಯಿಂದ ಬೇಡನಾಗಿದ್ದು ಕರ್ನಲ ಮಿಲರನನ್ನು ಹೇಗಲದ ದಾರಿಯಲ್ಲಿ ಕುಳಿತಾಗ ಗುಂಡುಹಾಕಿ ಕೊಂದನು. ಇಷ್ಟಾದ ಹೊರ್ತಾಗಿ ಒಂದೂ ಬಂದೂಕಿನ ಸಪ್ಪಳವಿಲ್ಲದೆ ಇಡೀ ಕೊಡಗು ದೇಶವು ಇಂಗ್ಲಿಷರ ಸ್ವಾಧೀನವಾಯಿತು. ಈ ಪ್ರಕಾರ ಕೊಡಗು ದೇಶವು ಸ್ವಾಧೀನವಾದ ನಂತರ ಗವರ್ನರ ಜನರಲ್‌ನ ಕುಲಮುಕತಾರನು ರಾಜನ ದಿವಾಣನ ಕೂಡ ಠರಾವು ಮಾಡಿಕೊಂಡನು. ರಾಜನ ದಿವಾಣನಿಗೆ ಕೊಡಗು ದೇಶವೆಲ್ಲ ಖಾಲಸಾತ ಆಗಿ ತಾವು ಕಂಪನಿಯವರ ಅಧೀನರಾಗುವರೆಂದು ಅನಿಸಿತ್ತು. ಆದರೆ ಆ ರಾಜ್ಯದ ವ್ಯವಸ್ಥೆಯನ್ನು ಸ್ವತಂತ್ರರಾಜ್ಯದ ಹಾಗೆ ಇಟ್ಟಿದ್ದನ್ನು ನೋಡಿ ಅವನಿಗೆ ಬಹಳ ಆಶ್ಚರ್ಯವಾಯಿತು. ಅವನು ಕರ್ನಲ ಫ್ರೇಜರನಿಗೆ ಈ ಪ್ರಕಾರ ವಿನಂತಿ ಮಾಡಿಕೊಂಡನು, “ರಾಜನನ್ನು ಕೊಡಗಿನಲ್ಲಿಯೇ ಇಡಬೇಕು.” ಆದರೆ “ರಾಜನು ಸ್ವದೇಶವನ್ನು ಬಿಡಲೇಬೇಕು” ಎಂಬ ಸ್ಪಷ್ಟವಾದ ಉತ್ತರವು ಸಿಕ್ಕಿತು. ಆಗ ಅವರು ಸುಮ್ಮನೆ ಬ್ರಿಟಿಶ ಸರಕಾರದ ಆಜ್ಞೆಯನ್ನು ಮಾನ್ಯಮಾಡಿದರು. ಆ ಮೇಲೆ ಅಲ್ಲಿಯ ಜನರು ಫ್ರೇಜರ ಸಾಹೇಬರಿಗೆ “ನಿಮ್ಮ ಜನರು ಯುರೋಪಿಯನ್ ಸೈನಿಕರ ಸಲುವಾಗಿ ಗೋವಧೆಯನ್ನು ಮಾಡುತ್ತಾರೆ. ಇದು ನಮ್ಮ ಧರ್ಮಕ್ಕೆ ತೀರ ವಿರುದ್ಧವಾದುದು. ಅದನ್ನು ಬಂದು ಮಾಡಬೇಕು.” ಎಂದು ಅರ್ಜಿಯನ್ನು ಮಾಡಿಕೊಂಡರು. ಆ ಅರ್ಜಿಯ ವಿಚಾರಣೆಯಾಗಿ ಆಕಳ ವಧೆಯನ್ನು ಮಾಡುವವರು ಮಾರಕಾರಾದಿಂದ ೨೦ ಮೈಲು ದೂರ ಫ್ರೇಜರ ಪೇಟದಲ್ಲಿ ಇರಲಿಕ್ಕೆ ಹೇಳಿದನು. ಕೊಡಗು ದೇಶದಲ್ಲಿ ಇಂಗ್ಲಿಷರ ಅಧಿಕಾರವು ನೆಲೆಗೊಂಡ ಮೇಲೆ ಕೊಡಗಿನ ಜನ

ರಿಗೆ ಸ್ವಾತಂತ್ರ್ಯದ ಪೂರ್ಣ ಅನುಭವವನ್ನು ತಂದುಕೊಟ್ಟರು. ಕೊಡಗಿನ ಜನರಿಗೆ ಹೀಗೆ ರಾಜ್ಯಕ್ರಾಂತಿಯನ್ನು ನೋಡಿ ಬಹಳ ಸಂತೋಷವಾಯಿತು. (ಹೀಗೆ ಒಬ್ಬ ಇಂಗ್ಲಿಷ ಗ್ರಂಥಕಾರನು ಅನ್ನುತ್ತಾನೆ.) ಆದರೆ ಹೀಗೆ ಈ ಸ್ವರಾಜ್ಯ--ಸ್ವಾತಂತ್ರ್ಯ ಸುಖವನ್ನು ಅನುಭವಿಸುತ್ತಿರಲಾಗಿ ಅವರ ಮೇಲೆ ಒಮ್ಮಿಂದೊಮ್ಮೆ ವಜ್ರಾಘಾತವಾದಂತಾಯಿತು. ಅದು ಏನಂದರೆ "ಕೊಡಗಿನ ಜನರು ಬ್ರಿಟಿಶ ಸರಕಾರದ ರಾಜ್ಯದಲ್ಲಿ ಇರಲಿಕ್ಕೆ ಬಹಳ ಇಚ್ಛಿಸಿದ್ದಾರೆ. ಆದುದರಿಂದ ಕೊಡಗು ದೇಶವನ್ನು ಖಾಲಸಾತ ಮಾಡಿರುತ್ತದೆ" ಎಂದು ಕರ್ನಲ ಫ್ರೇಜರನು ಒಂದು ಜಾಹೀರನಾಮೆಯನ್ನು ಪ್ರಕಟಿಸಿದನು. ಅದರ ವಿವರವು ಈ ಪ್ರಕಾರ ಇದೆ.

"ಕೊಡಗು ದೇಶದ ಎಲ್ಲ ಜನರು ತಮಗೆ ಬ್ರಿಟಿಶ ಸರಕಾರದವರ ರಾಜ್ಯವಿರಬೇಕೆಂದು ಇಚ್ಛಿಸುತ್ತಾರೆ." ಆದುದರಿಂದ ಹಿಜ ಎಕ್ಸಲನ್ಸಿ ದಿ ರಾಯಿಟ ಆನರೇಬಲ ಈಸ್ಟ ಇಂಡಿಯಾ ಕಂಪನಿಯವರು ಹೀಗೆ ಠರಾವು ಮಾಡಿರುತ್ತಾರೆ, "ವೀರ ರಾಜೇಂದ್ರನು ಆಳುವಂಥ ರಾಜ್ಯವನ್ನು ಈ ಹೊತ್ತಿನಿಂದ ಆನರೇಬಲ ಕಂಪನಿ ಸರಕಾರವು ತನ್ನ ಅಧೀನದಲ್ಲಿ ತಕ್ಕೊಳ್ಳುವದು" ಮತ್ತು ಜಾಹೀರನಾಮೆಯ ಮುಖಾಂತರ ಕೊಡಗಿನ ಜನರಿಗೆ ಈ ಪ್ರಕಾರ ಅಭಿವಚನ ಕೊಡುತ್ತಾರೆ, ಅವರಿಗೆ ಪುನಃ ಎಂದೂ ದೇಶೀ ರಾಜ್ಯದ ಅಧೀನದಲ್ಲಿ ಹೋಗಗೊಡಲಿಕ್ಕಿಲ್ಲ. ಮತ್ತು ಅವರ ಧರ್ಮ ಸಂಬಂಧ ಎಲ್ಲ ಆಚಾರ ಪದ್ಧತಿಗಳನ್ನು ಯಥಾಪ್ರಕಾರ ಪರಿಪಾಲನ ಮಾಡುತ್ತೇವೆ. ಮತ್ತು ಸಾಧ್ಯವಿದ್ದಷ್ಟು ಮಟ್ಟಿಗೆ ಬ್ರಿಟಿಶ ಸರಕಾರದವರು ಪ್ರಜೆಗಳಿಗೆ ಸುಖವನ್ನುಂಟು ಮಾಡಲಿಕ್ಕೆ ಪ್ರಯತ್ನಿಸುವರು."

ಜೆ. ಎಸ್. ಫ್ರೇಜರ.
ಲೆಫ್ಟನಂಟ ಕರ್ನಲ, ಪೊಲಿಟಿಕಲ್ ಎಜಂಟ.
ಕ್ಯಾಂಪ ಮರಕಾರಾ ತಾರೀಖು ೭ನೆ ಮೇ. ೧೮೩೪.

---

# ವೀರಶೈವ ವಚನಕಾರರ ಕಾಲ.

(ಲೇಖಕ:— ರಾ। ಸಾ। ಫ. ಗು ಹಳಕಟ್ಟಿ ಬಿ.ಎ. ಎಲ್.ಎಲ್ ಬಿ.)

ನಾವು ಹೋದ ತಿಂಗಳಿನ ಶಿವಾನುಭವದ ಸಂಚಿಕೆಯಲ್ಲಿ ಬಿಜ್ಜಳನ ಕಾಲದಲ್ಲಿ ಆವಾವ ಶಿವಶರಣರುದ್ಭವಿಸಿದರೆಂಬುದನ್ನು ನಿರ್ದೇಶಿಸಿ ಈ ವಿಷಯದ ವಿವೇಚನೆಗೋಸ್ಕರ ಅವನ ಆಳಿಕೆಯಲ್ಲಿ ಮೂರು ವಿಭಾಗಗಳನ್ನು ಕಲ್ಪಿಸಿದೆವು. ಅವು ೧೧೪೮ ರಿಂದ ೧೧೫೬, ೧೧೫೬ರಿಂದ ೧೧೬೨, ಮತ್ತು ೧೧೬೨ರಿಂದ ೧೧೬೭, ಹೀಗೆ ಇದ್ದದ್ದು ವಾಚಕರ ಸ್ಮರಣೆಯಲ್ಲಿರಬಹುದು. ಇವುಗಳಲ್ಲಿ ಮೊದಲನೆಯ ಕಾಲದಲ್ಲಿ ರೇವಣಸಿದ್ಧನು ತರ್ದೇವಾಡಿ ನಾಡಿನಲ್ಲಿ ಅತ್ಯಂತ ಮಹತ್ತರವಾದ ಧಾರ್ಮಿಕ ಚಟುವಟಿಕೆಗಳನ್ನೆಬ್ಬಿಸಿದನೆಂತಲೂ ಅಲ್ಲಿಂದ ಚೋಳ ನಾಡಿಗೆ ಹೋಗಿ ಅಲ್ಲಿ ೨ನೆಯ ಕುಲೋತ್ತುಂಗ ಚೋಳನಲ್ಲಿ ನಿಂತುಕೊಂಡು ಅನೇಕ ಮಹತ್ಕೃತ್ಯಗಳನ್ನು ಮಾಡಿದನೆಂತಲೂ ವಿಶದ ಪಡಿಸಿದ್ದೇವೆ. ತರ್ದೆವಾಡಿನಾಡಿನಲ್ಲಿದ್ದಾಗ ಇವನ ಪ್ರಭಾವದಿಂದ ಕೊಲ್ಲಾಪುರದಲ್ಲಿ ಗೋರಕ್ಷನು, ಹಾವಿನಹಾಳ ಗ್ರಾಮದಲ್ಲಿ ಕಲ್ಲಯ್ಯನು, ಇವನ ಮಗನಾದ ರುದ್ರಮುನೀಶ್ವರನು, ಮುಂದೆ ಇವನ ಆಶೀರ್ವಾದ ಬಲದಿಂದ ಬಸವೇಶ್ವರನಲ್ಲಿ ಬಹು ಪ್ರಖ್ಯಾತಿಯನ್ನು ಹೊಂದಿನ ಸಿದ್ಧರಾಮೇಶ್ವರನು ಹೀಗೆ ಅನೇಕ ಶಿವಶರಣರು ಉದಯಿಸಿ ವೀರಶೈವ ಧರ್ಮ ಚಾರಿತ್ರ್ಯದಲ್ಲಿ ಬಹು ಪ್ರಖ್ಯಾತಿಯನ್ನು ಹೊಂದಿರುತ್ತಾರೆ. ಈ ಮಹಾಪುರುಷರು ಮಾಡಿದ ಕಾರ್ಯಗಳ ಬಗ್ಗೆ ಹೋದ ಸಂಪುಟದ ಕೆಲವು ಸಂಚಿಕೆಗಳಲ್ಲಿ ಅನೇಕ ಸಲ ವಿಸ್ತರಿಸಿದೇವೆ. ನಾವು ಹೋದ ಸಂಚಿಕೆಯಲ್ಲಿ ರೇವಣಸಿದ್ಧನು ಆವ ಚೋಳ ರಾಜರಲ್ಲಿ ಇರಬಹುದೆಂಬ ವಿಷಯವನ್ನು ಮುಖ್ಯವಾಗಿ ಪ್ರಸ್ತಾಪಿಸಿ ಅವನ ಬಗ್ಗೆ ಅಲ್ಲಿಯ ಕೆಲವು ಸಂದರ್ಭಗಳನ್ನು ವಿವೇಚಿಸಿದ್ದೇವೆ. ಈಗಿನ ನಮ್ಮ ಈ ಲೇಖದಲ್ಲಿ ಅವನ ಚರಿತ್ರೆಯಲ್ಲಿ ತೋರುವ ಬೇರೆ ಕೆಲವು ವಿಷಯಗಳನ್ನು ಕುರಿತು ಐತಿಹಾಸಿಕ ದೃಷ್ಟಿಯಿಂದ ವಿವೇಚಿಸಲೆಣಿಸಿದ್ದೇವೆ.

## ಕದಂಬರಾಜರಲ್ಲಿ ರೇವಣಸಿದ್ಧೇಶ್ವರನು.

ಹರಿಹರನು ತನ್ನ ರಗಳೆಯಲ್ಲಿ ಮಾಸನೂರಿನಿಂದ ಜಯಂತಿಪುರಕ್ಕೆ ಹೋಗಿ ಅಲ್ಲಿ ವಿಕ್ರಮಾದಿತ್ಯನ ಆಸ್ಥಾನದಲ್ಲಿ ಮನ್ನಣೆಯನ್ನು ಹೊಂದಿದನೆಂದು ವರ್ಣಿಸಿರುತ್ತಾನೆ. (ಹರಿಹರನ ರಗಳೆಗಳು ಭಾಗ ೨ ಪುಟ ೨೮ ನೋಡಿರಿ.) ಈ ಕಥಾನಕವು ರೇವಣಸಾಂಗತ್ಯ, ರೇವಣಸಿದ್ಧೇಶ್ವರ ಪುರಾಣ ಇವುಗಳಲ್ಲಿಯೂ ಅವನ ಬಗ್ಗೆ ಹೇಳಲ್ಪಟ್ಟಿದೆ. ಈಗ ಈ ರಾಜನಾರೆಂಬದನ್ನು ನಾವು ಕಂಡುಹಿಡಿಯುವುದು ಅವಶ್ಯವಿರುತ್ತದೆ.

ಜಯಂತಿಪುರವೆಂದರೆ ಈಗ ಶಿರ್ಶಿ ತಾಲೂಕಿನಲ್ಲಿರುವ ಬನವಾಶಿ ಎಂದು ಪ್ರಸಿದ್ಧವಿದೆ. ರೇವಣಸಿದ್ಧೇಶ್ವರನ ಕಾಲದಲ್ಲಿ ಇಲ್ಲಿ ಕದಂಬ ವಂಶದ ರಾಜರು ಆಳುತ್ತಿದ್ದರು. ಅದ್ದರಿಂದ ರೇವಣಸಿದ್ಧೇಶ್ವರನು ಈ ವಂಶದ ರಾಜನಲ್ಲಿಗೆ ಹೋಗಿ ಅವನಿಂದ ಮನ್ನಣೆಯನ್ನು ಹೊಂದಿರಬಹುದೆಂಬ ಅನುಮಾನವು ಉತ್ಪನ್ನವಾಗುತ್ತಿದೆ.

ಹರಿಹರನು ಈತನು ವಿಕ್ರಮಾರ್ಜುನನೆಂದು ತನ್ನ ರಗಳೆಯಲ್ಲಿ ಹೇಳುತ್ತಾನೆ. ಕದಂಬ ವಂಶದಲ್ಲಿ ವಿಕ್ರಮನೆಂಬುವನು ಜಯಸಿಂಹನೆಂಬ ರಾಜನ ಐದು ಜನ ಮಕ್ಕಳಲ್ಲಿ ಒಬ್ಬನಾಗಿದ್ದನೆಂದು ಶಿಲಾಶಾಸನಗಳಿಂದ ತಿಳಿಯುತ್ತಿದೆ. ಪ್ರೊ॥ ಕೇ. ಜಿ. ಕುಂದಣಗಾರ ಎಮ್. ಏ. ಕನ್ನಡ ಪ್ರೊಫೆಸರ ರಾಜಾರಾಮ ಕಾಲೇಜ ಕೊಲ್ಲಾಪುರ ಇವರು "ಹರಿಹರದೇವ" ಎಂಬ ತಮ್ಮ ಗ್ರಂಥದ ೪೫ನೆಯ ಪುಟದಲ್ಲಿ ಬನವಾಸಿಯ ಕದಂಬ ವಂಶದಲ್ಲಿದ್ದ ಜಯಸಿಂಹರಾಯನ ಮಗನು ಈತನಾಗಿರಬೇಕೆಂದು ನಾವು ತಿಳಿಯಬೇಕಾದರೆ, ಈತನು ಇಲ್ಲಿ ಪಟ್ಟವೇರಿದಂತೆ ಐತಿಹಾಸಿಕ ಆಧಾರಗಳು ದೊರೆಯುವದಿಲ್ಲಾದ್ದರಿಂದ ಚಾಳುಕ್ಯ ವಂಶದ ನೂರ್ಮಡಿ ತೈಲ ಅಥವಾ ಮೂರನೆಯ ತೈಲಪ ಇವನನ್ನೇ ಹರಿಹರನು ವಿಕ್ರಮನೆಂದು ಸಂಬೋಧಿಸಿರಬೇಕೆಂದು ಅವರು ಊಹಿಸಿದ್ದಾರೆ. ಅಂದರೆ ಯಾವ ಚಾಳುಕ್ಯ ರಾಜನ ಕೈಕೆಳಗೆ ಬಿಜ್ಜಳನು ಕೆಲವು ವರ್ಷ ಮಾಂಡಲಿಕನಾಗಿ ಆಳಿ ಮುಂದೆ ಅವನನ್ನು ಪದಚ್ಯುತ ಮಾಡಿದನೋ ಆತನ ರಾಜಧಾನಿಯಾದ ಕಲ್ಯಾಣ ನಗರಿಗೆ ರೇವಣಸಿದ್ಧನು ಹೋಗಿ ಈ ಚಾಳುಕ್ಯನಿಂದ ಮನ್ನಣೆ ಪಡೆದನೆಂದು ನಾವು ತಿಳಿಯಬೇಕಾಗುತ್ತದೆ. ಆದರೆ ರೇವಣಸಿದ್ಧೇಶ್ವರನ ಚರಿತ್ರೆಯನ್ನು ನಾವು ಹಿಂದೆ ವಿಮರ್ಶಿಸುವಲ್ಲಿ ಕಲ್ಯಾಣ ನಗರಿಗೆ ಆತನು ಹೋಗಿ ಹೀಗೆ



ಚಾಲುಕ್ಯನಲ್ಲಿ ಪ್ರಖ್ಯಾತಿಯನ್ನು ಪಡೆದಿದ್ದು ಸಂಭವನೀಯ ತೋರುವದಿಲ್ಲವೆಂದು ಬರೆದಿದ್ದೇವೆ. ಅವನು ಒಮ್ಮೆ ಮಾತ್ರ ಗುಪ್ತವೇಷದಿಂದ ಹೋಗಿ ಕೆಲವು ಕಾಲ ಅಲ್ಲಿ ಕಳೆದನೆಂದು ಅವನ ಚರಿತ್ರೆಗಳು ಹೇಳುತ್ತಿವೆ. ಅಲ್ಲದೆ ಅವನು ಜಯಂತಿಪುರ ಎಂದರೆ ಬನವಾಸಿಗೆ ಹೋಗಿ ರಾಜನಿಂದ ಮನ್ನಣೆ ಹೊಂದಿದನೆಂದು ಹರಿಹರನು ಸ್ಪಷ್ಟವಾಗಿ ಆ ಪಟ್ಟಣವನ್ನು ತನ್ನ ರಗಳೆಯಲ್ಲಿ ಹೇಳುತ್ತಾನೆ. ಅದರಂತೆಯೇ ಅವನ ಎಲ್ಲ ಪುರಾಣಗಳೂ ಹೇಳುತ್ತವೆ. ಅವು ಕಲ್ಯಾಣವೆಂದು ಹೇಳುವದಿಲ್ಲ. ಆದ್ದರಿಂದ ಹರಿಹರನು ಹೇಳುವ ವಿಕ್ರಮನು ಪ್ರೊ॥ ಕುಂದಣಗಾರ ಇವರು ಹೇಳುವಂತೆ ಪಟ್ಟವೇರಿದಂತೆ ಐತಿಹಾಸಿಕ ಆಧಾರಗಳು ಈ ವರೆಗೆ ದೊರೆಯುವದಿಲ್ಲೆಂದು ತಿಳಿದರೂ ಕೂಡ ನಿಶ್ಚಿತವಾಗಿ ಐತಿಹಾಸಿಕ ಸಂಶೋಧನಗಳಾಗುವ ವರೆಗೆ ರೇವಣಸಿದ್ಧನು ಕದಂಬ ರಾಜನಲ್ಲಿಗೆ ಹೋದನೆಂಬುದನ್ನು ಪೂರ್ಣವಾಗಿ ಅಲ್ಲಗಳೆಯಲು ಬರಲಾರದು. ಆದರೆ ಈ ಕಾಲದಲ್ಲಿ ಜಯಂತಿ ಪಟ್ಟಣದಲ್ಲಿ ಮಲ್ಲಿಕಾರ್ಜುನನೆಂಬವನು ಆಳುತ್ತಿದ್ದನೆಂದು ಶಿಲಾಶಾಸನಗಳಿಂದ ವಿಶ್ವಸನೀಯವಾಗಿ ತಿಳಿದುಬರುತ್ತಿದೆ. ಅವನ ಒಂದು ಶಿಲಾಶಾಸನವು ಅವನು ಆಳಿದ್ದು ೧೧೩೨ ಎಂತಲೂ ಮತ್ತೊಂದು ೧೧೪೫ ಎಂತಲೂ ಹೇಳುತ್ತಿವೆ. ಬಿಜ್ಜಳನು ಈ ಕಾಲದಲ್ಲಿ ಅಸ್ತಿತ್ವದಲ್ಲಿರುವದರಿಂದ ಈ ಮಲ್ಲಿಕಾರ್ಜುನನಲ್ಲಿಯೇ ರೇವಣಸಿದ್ಧೇಶ್ವರನು ಹೋಗಿರಬೇಕೆಂದು ನನಗೆ ತೋರುತ್ತಿದೆ. ವಿಕ್ರಮಾದಿತ್ಯನೆಂದು ಹರಿಹರನು ಬರೆದಿದ್ದು ತಪ್ಪಿರಬಹುದು.

ರೇವಣ ಸಿದ್ಧೇಶ್ವರನು ಈ ಪ್ರಕಾರ ಈ ಬನವಾಸೆ ನಾಡಿನಲ್ಲಿ ಹೋಗಿದ್ದನೋ ಹೇಗೆ ಎಂಬುದನ್ನು ನಿಶ್ಚಯಿಸಲು ಹರಿಹರನ ರಗಳೆಯ ಹೊರ್ತು ಬೇರೆ ಏನಾದರೂ ಪ್ರತ್ಯಂತರ ಆಧಾರವು ಇದೆಯೋ ಹೇಗೆ ಎಂಬುದನ್ನು ನಾವು ಪರೀಕ್ಷಿಸಿದಲ್ಲಿ ಆ ಬಗ್ಗೆ ಒಂದು ಮಹತ್ವದ ಪುರಾವೆಯು ನಮಗೆ ದೊರೆಯುತ್ತದೆ. ಅದಾವುದೆಂದರೆ ಈ ಪ್ರಾಂತದಲ್ಲಿ ರೇವಣ ಸಿದ್ಧೇಶ್ವರನ ಹೆಸರಿಗೆ ಸಂಬಂಧಿಸಿದ ಒಂದು ಪುಣ್ಯಕ್ಷೇತ್ರವು ಇದ್ದದ್ದೇ ಇದೆ. ಯಾವದಾದರೂ ಒಂದು ಸ್ಥಾನವು ಒಬ್ಬ ಮಹಾಪುರುಷನ ಹೆಸರಿಗೆ ಸಂಬಂಧಪಟ್ಟು ಜನರಲ್ಲಿ ಅದು ಪ್ರಸಿದ್ಧವಾಗಿದ್ದರೆ ಅದು ಅವನಿಗೆ ಸಂಬಂಧಿಸಿದ್ದೆಂದು ಊಹಿಸಲು ಅವ ಪ್ರತ್ಯವಾಯವೂ ಇರಲಾರದು. ರೇವಣ ಸಿದ್ಧೇಶ್ವರನ ಇಂಥ ಸ್ಥಾನವು ಹಾವೇರಿಯ ಹತ್ತರ ಕಬ್ಬೂರು

ಎಂಬ ಗ್ರಾಮದಲ್ಲಿ ಈಗಲೂ ಇದ್ದುದು ಕಂಡುಬರುತ್ತಿದೆ. ಈ ಕ್ಷೇತ್ರದ ಉಲ್ಲೇಖವು ಶಿವಾನುಭವ ಸಂಪುಟ ೧೩ ಸಂಚಿಕೆ ೧ ಪುಟ ೩೭ ಇದರಲ್ಲಿ ಬಂದಿದೆ. ಈ ಸಂಚಿಕೆಯಲ್ಲಿಯ ಲೇಖವನ್ನು ಶ್ರೀ. ಗುರುಪಾದಸ್ವಾಮಿಗಳು ಹಿರೇಮಠ ಶ್ರೀ. ಧರ್ಮಾಶ್ರಮ ಮು. ಮಲ್ಲೂರು ಇವರು ಬರೆದಿದ್ದು ಅದರಲ್ಲಿ ಅವರು ಹಾವೇರಿಯಿಂದ ಎಂಟು ಮೈಲಿನ ಮೇಲೆ ಕಬ್ಬೂರ ಎಂಬ ಗ್ರಾಮವಿದ್ದು ಇದಕ್ಕೆ ಸಮೀಪವಾಗಿ 'ರೇವಣಸಿದ್ಧಗಿರಿ' ಎಂಬ ಹೆಸರಿನ ಗಿರಿ ಇರುವದನ್ನು ಹೇಳಿದ್ದಾರೆ. ಇದಕ್ಕೆ 'ರೇವಣಸಿದ್ಧೇಶ್ವರನ ಗುಡ್ಡ' 'ಸಿದ್ಧೇಶ್ವರನ ಗುಡ್ಡ' 'ಸಿದ್ಧನ ಗುಡ್ಡ' ಎಂಬ ಹೆಸರುಗಳಿರುತ್ತವೆಂತಲೂ ಇಲ್ಲಿಗೆ ಬಸವೇಶ್ವರನ ಪುತ್ರನಾದ ಸಂಗಮನಾಥನು ಆಗಮಿಸಿ ವಾಸಮಾಡಿದನೆಂತಲೂ ಬಂಕಾಪೂರ ತಾಲೂಕು ಸಿಗ್ಗಲಿಯಲ್ಲಿ ದೊರೆತ ಒಂದು ಪುರಾಣದ ಆಧಾರದಿಂದ ಅವರು ಬರೆದಿದ್ದಾರೆ. ಪುರಾತನ ಕಾಲದಲ್ಲಿ ಪ್ರಸಿದ್ಧಿಗೆ ಬಂದ ಶಿವ ಶರಣರಿಗೆ ಸಂಬಂಧಪಟ್ಟ ಸ್ಥಾನಗಳೆಲ್ಲ ಪುನೀತವಾದವುಗಳೆಂದು ಜನರು ಭಾವಿಸಿ ಅವರ ಸ್ಮರಣಾರ್ಥವಾಗಿ ಹೀಗೆ ಗುಡಿಗಳನ್ನು ಅಲ್ಲಿ ಸ್ಥಾಪಿಸುವದುಂಟು. ಮತ್ತು ಭಾವಿಕ ಜನರು ಅಲ್ಲಿ ಜಾತ್ರೆಗಳನ್ನು ನೆರವೇರಿಸುತ್ತಿರುವದೂ ಉಂಟು. ಇದು ಬಹು ಕಾಲದಿಂದಲೂ ಹಿಂದುಸ್ತಾನದಲ್ಲೆಲ್ಲ ಪ್ರಚಲಿತವಿರುವ ಪದ್ಧತಿಯಾಗಿದೆ. ಸಾವಿರಾರು ವರ್ಷಗಳಾಗಿ ಹೋದರೂ ಅನೇಕ ರಾಜ್ಯಕ್ರಾಂತಿಗಳಾದರೂ ಪುಣ್ಯಪುರುಷರ ಸ್ಥಳಗಳ ಹೆಸರುಗಳು ಬದಲಾಗಿರುವದಿಲ್ಲ. ಕೃಷ್ಣ, ರಾಮ ಶಂಕರಾಚಾರ್ಯ, ಮಧ್ವಾಚಾರ್ಯ, ಬಸವ, ಸಿದ್ಧರಾಮ ಇವರ ಕ್ಷೇತ್ರಗಳು ಅವ್ಯಾಹತವಾಗಿ ಅವರ ಹೆಸರುಗಳಿಂದಲೇ ಇನ್ನೂ ನಡೆದುಬಂದಿವೆ ಆದ್ದರಿಂದ ಈ ಸ್ಥಲಗಳು ಆ ಮಹಾನುಭಾವರ ಐತಿಹಾಸಿಕ ಅಸ್ತಿತ್ವವನ್ನು ಸೂಚಿಸುತ್ತವೆ. ಮತ್ತು ಅವರು ಅಲ್ಲಿ ಇದ್ದರೆಂದು ತಿಳಿಯಲೂ ಸಾಧನೀಭೂತವಾಗಿದೆ. ಈ ಆಧಾರಗಳು ಸಂಪೂರ್ಣ ತ್ಯಾಜ್ಯವೆಂದು ಹೇಳಲು ಬರಲಾರದು. ಆದ್ದರಿಂದ ಪುಣ್ಯ ಕ್ಷೇತ್ರಗಳ ಹೆಸರುಗಳು ಯಾವ ಮಹಾತ್ಮರನ್ನು ನಿರ್ದೇಶಿಸುತ್ತವೆಯೋ ಅವರು ಅಲ್ಲಿ ಕೆಲಕಾಲವಾದರೂ ವಾಸಿಸಿರಬಹುದೆಂದು ನಾವು ಅನುಮಾನ ಮಾಡಬಹುದಾಗಿದೆ.

ಹಾವೇರಿ ಪಟ್ಟಣವಿದ್ದ ಪ್ರಾಂತಭಾಗವು ಮೊದಲಿನ ಕಾಲದಲ್ಲಿ ಬನವಾಸಿ ನಾಡಿನಲ್ಲಿ ಸೇರ್ಪಡೆಯಾಗಿತ್ತು. ಕಬ್ಬೂರು ಬನವಾಸಿಯಿಂದ



ಕೆಲವು ಮೈಲು ಮಾತ್ರ ದೂರವಿದ್ದು ರೇವಣಸಿದ್ಧೇಶ್ವರನ ಸ್ಥಾನವಿದ್ದದರಿಂದ ಅವನು ಹರಿಹರನು ಹೇಳುವಂತೆ ಬನವಾಸಿಯ ಪ್ರಾಂತಕ್ಕೆ ಬಂದಿದ್ದನೆಂತಲೂ ಆಗ ಆಳುತ್ತಿದ್ದ ಕಂದಂಬ ರಾಜನಲ್ಲಿ ತನ್ನ ಪ್ರಭಾವವನ್ನು ತೋರಿಸಿರಬಹುದೆಂತಲೂ ಅನುಮಾನವನ್ನು ಮಾಡಲಿಕ್ಕೆ ಅಡ್ಡಿ ತೋರುವದಿಲ್ಲ.

ಆದರೆ ಈ ರಾಜನ ಹೆಸರು ಮಾತ್ರ ಅವುದಿರಬಹುದೆಂಬುದರಲ್ಲಿ ಸಂದೇಹವು ಉತ್ಪನ್ನವಾಗುತ್ತದೆ. ಬಿಜ್ಜಳನಿಗೆ ಸಮಕಾಲಿಕನಾಗಿ ಇಲ್ಲಿ ರಾಜ್ಯವಾಳಿದವನಾದ ಮಲ್ಲಿಕಾರ್ಜುನನೇ ಇವನು ಇರಬೇಕೆಂದು ನಮಗೆ ತೋರುತ್ತದೆ. ಹರಿಹರನು ಇವನು ವಿಕ್ರಮನೆಂದು ತನ್ನ ರಗಳೆಯಲ್ಲಿ ನಿರ್ದೇಶಿಸುವಲ್ಲಿ ತಪ್ಪಾಗಿರಬಹುದು. ರೇವಣಸಿದ್ಧೇಶ್ವರ ಪುರಾಣದಲ್ಲಿ ಈ ವಿಕ್ರಮನು 'ಚಾಲುಕ್ಯ' ಎಂದು ಬರೆದಿದ್ದು ಇದೂ ತಪ್ಪು. ಯಾಕಂದರೆ ಚಾಲುಕ್ಯರು ಜಯಂತಿ ಪಟ್ಟಣದಲ್ಲಿ ರಾಜ್ಯಭಾರ ಮಾಡಿದ್ದು ಕಂಡುಬರುವದಿಲ್ಲ. ಈ ಪುರಾಣಗಳು ರೇವಣಸಿದ್ಧೇಶ್ವರನ ತರುವಾಯ ೧೫೦—೨೦೦ ವರ್ಷಗಳ ಮೇಲೆ ಆಗಿನ ಜನರ ಹೇಳಿಕೆಗಳ ಮೇಲಿಂದ ಬರೆಯಲ್ಪಟ್ಟಿರುವದರಿಂದ ಇಂಥ ತಪ್ಪುಗಳಾಗುವ ಸಂಭವವಿದೆ. ಇವುಗಳನ್ನು ನಮಗೆ ಈಗ ದೊರೆತ ನಿಶ್ಚಿತ ಐತಿಹಾಸಿಕ ಆಧಾರಗಳ ಮೇಲಿಂದ ಚರ್ಚಿಸಿ ಅವುಗಳಲ್ಲಿ ಅವಶ್ಯಕ ತಿದ್ದುಪಡಿಗಳನ್ನು ನಾವು ಮಾಡಬೇಕಾಗುತ್ತಿದೆ.

ರೇವಣಸಿದ್ಧೇಶ್ವರನ ಹೆಸರು ಬನವಾಸಿ ನಾಡಿನಲ್ಲಿ ಹೀಗೆ ನೆಲೆಗೊಳ್ಳಬೇಕಾದರೆ ಅವನು ಕೆಲವು ಕಾಲ ಅಲ್ಲಿ ವಾಸಿಸಿರಲಿಕ್ಕೆ ಬೇಕು. ಇಲ್ಲಿಯೂ ಅವನು ಧಮಜಾಗ್ರತಿಯನ್ನುಂಟುಮಾಡಿರಬೇಕು. ಈ ಪ್ರಕಾರ ರೇವಣಸಿದ್ಧೇಶ್ವರನು ಚೋಳಮಂಡಲದಲ್ಲಿ, ಆಮೇಲೆ ಉತ್ತರ ಕರ್ನಾಟಕವಾದ ತರ್ದೇವಾಡಿ ನಾಡಿನಲ್ಲಿ, ಆ ಮೇಲೆ ಮಧ್ಯ ಕರ್ನಾಟಕವಾದ ಬನವಾಸಿ ನಾಡಿನಲ್ಲಿ, ಧರ್ಮಜಾಗ್ರತಿಯ ಕಾರ್ಯಗಳನ್ನು ಮಾಡಿ ಮೈಸೂರ ಪ್ರಾಂತದಲ್ಲಿಯೂ ಕೂಡ ಅವುಗಳನ್ನು ಜರಗಿಸಿದಂತೆ ತೋರುತ್ತದೆ. ಅಲ್ಲಿ ಬೆಂಗಳೂರ ಜಿಲ್ಲಾ ಕ್ಲೋಸಪೇಟೆಯ ಸಮೀಪದಲ್ಲಿ ರೇವಣಸಿದ್ಧೇಶ್ವರನಿಗೆ ಸಂಬಂಧಿಸಿದ ಒಂದು ಸ್ಥಳವಿರುವದರಿಂದ ಈ ಊಹೆಯು ಸತ್ಯವೆಂಬ ತಿಳುವಳಿಕೆಯು ಉತ್ಪನ್ನವಾಗುತ್ತಿದೆ.

## ಕ್ಲೋಸಪೇಟೆಯಲ್ಲಿ ರೇವಣಸಿದ್ಧೇಶ್ವರನು.

ಕ್ಲೋಸಪೇಟೆಗೆ ಸಮೀಪವಾಗಿ ರೇಣುಕ ಕ್ಷೇತ್ರವಿದ್ದು ಇದರ ವಿವರಣೆಯನ್ನು ಶ್ರೀ. ಎಚ್. ಜಿ. ಸಿದ್ಧಲಿಂಗಯ್ಯ ಹಾರೋಹಳ್ಳಿ ಇವರು ಶಿವಾನುಭವ ಸಂಪುಟ ೪. ಸಂಚಿಕೆ ೭. ಪುಟ ೩೦೭. ಇದಲ್ಲಿಯೂ ವೇ. ಮೂ ಶಿವಮೂರ್ತಿ ಶಾಸ್ತ್ರಿಗಳು ಕೀರ್ತನ ಕೇಸರಿ ಇವರು ಸಂಪುಟ ೧೦. ಸಂಚಿಕೆ ೫ ಪುಟ. ೩೯೨. ಇದರಲ್ಲಿಯೂ ಮಾಡಿದ್ದಾರೆ. ಈ ಕ್ಷೇತ್ರವು ಒಂದು ರಮಣೀಯವಾದ ಬೆಟ್ಟದ ಮೇಲ್ಭಾಗದಲ್ಲಿದ್ದು ಅಲ್ಲಿ ರೇವಣ ಸಿದ್ಧೇಶ್ವರನ ಗವಿಯೊಂದಿರುತ್ತದೆ. ಈ ಭಾಗಕ್ಕೆ 'ರೇಣುಕ ಗಿರಿ' ಎಂಬ ಹೆಸರೂ ಇದೆ. ಇಲ್ಲಿ ರುದ್ರಮುನೀಶ್ವರ ಸ್ವಾಮಿಯ ಒಂದು ದೇವಸ್ಥಾನವೂ ಇದೆ. ಬೆಟ್ಟದ ಬುಡದಲ್ಲಿ ರೇವಾಂಬೆಯ ದೇವಸ್ಥಾನವೂ ಇದೆ. ಈ ರೇವಾಂಬೆಯು ಹರಿಹರನು ವಿವರಿಸಿದ ರೇವಣ ದೇವಿಯೇ ಇರುತ್ತಾಳೆ. ಈಕೆಯು ರೇವಣ ಸಿದ್ಧೇಶ್ವರನ ಮಗಳು ಮತ್ತು ರುದ್ರಮುನಿಯು ರೇವಣ ಸಿದ್ಧೇಶ್ವರನ ಮಗನು. ಈ ಉಭಯತರು ರೇವಣ ಸಿದ್ಧೇಶ್ವರನು ಮಂಗಳವಾಡದಲ್ಲಿದ್ದಾಗಲೇ ಹುಟ್ಟಿದರೆಂದು ಅವನ ಚರಿತ್ರೆಯಿಂದ ತಿಳಿದು ಬರುತ್ತಿದೆ. ಇದರಿಂದ ರೇವಣ ಸಿದ್ಧೇಶ್ವರನು ಚೋಳ ದೇಶದಿಂದ ತರ್ದೇವಾಡಿ ನಾಡಿಗೆ ಮೊದಲು ಆಗಮಿಸಿ ಅಲ್ಲಿ ಕೆಲವು ವರ್ಷಗಳಿದ್ದು ಅವನ ಈ ಮಕ್ಕಳು ದೊಡ್ಡವರಾದ ಬಳಿಕ ಕರ್ನಾಟಕದ ದಕ್ಷಿಣ ಭಾಗದಲ್ಲಿ ಬಂದಿದ್ದನೆಂದು ತೋರುತ್ತದೆ. ಅಲ್ಲಿ ಅವನು ಪ್ರಸಿದ್ಧಿಗೆ ಬಂದಿದ್ದರಿಂದಲೇ ಇದು ಕ್ಷೇತ್ರಸ್ಥಾನವಾಗಿದೆ. ಅವನ ಇಬ್ಬರು ಮಕ್ಕಳಿಗೋಸ್ಕರ ದೇವಾಲಯಗಳು ಇಲ್ಲಿ ಸ್ಥಾಪಿಸಲ್ಪಟ್ಟಿರುವದರಿಂದ ಇವರೂ ಇಷ್ಟರಲ್ಲಿಯೇ ಜನರಲ್ಲಿ ಪ್ರಸಿದ್ಧಿಗೆ ಬಂದಿರಬೇಕು.

## ರೇಣಾವಿಯಲ್ಲಿ ರೇವಣ ಸಿದ್ಧೇಶ್ವರನು.

ರೇವಣ ಸಿದ್ಧೇಶ್ವರನ ಇನ್ನೊಂದು ಮಹತ್ವದ ಸ್ಥಾನವು ಸಾತಾರಾ ಜಿಲ್ಹೆಯಲ್ಲಿ ರೇಣಾವಿ ಎಂಬ ಗ್ರಾಮದಲ್ಲಿದೆ. ಇದರ ಪೂರ್ಣ ವಿವರಣೆಯನ್ನು ಶ್ರೀ ವೀರಭದ್ರಪ್ಪ ಹಾಲಭಾವಿ, ರಿಟಾಯರ್ಡ ೧ನೇ ವರ್ಗ ಸಬ್ ಜಜ್ಜ ಧಾರವಾಡ ಇವರು ಶಿವಾನುಭವ ಸಂಪುಟ. ೪. ಸಂಚಿಕೆ ೪. ಪುಟ, ೧೪೯. ಇದರಲ್ಲಿ ಮಾಡಿದ್ದಾರೆ. ಈಗಲೂ ಈ ಸ್ಥಾನವು ಅತ್ಯಂತ ಪವಿತ್ರವಾದುದೆಂದು ಇದರ ನೆರೆ ಪ್ರಾಂತದವರು ತಿಳಿದು ಅಲ್ಲಿ ಯಾವ



ತರದ ಹಿಂಸಾ ಕರ್ಮಗಳನ್ನು ಆಚರಿಸಲು ಧೈರ್ಯ ಮಾಡುವುದಿಲ್ಲ. ಈ ದೇವಸ್ಥಾನವನ್ನು ಎಲ್ಲ ಜಾತಿಯ ಜನರು ಬಹು ಭಕ್ತಿಪೂರ್ವಕವಾಗಿ ಕಾಣುತ್ತಾರೆ. ಇಲ್ಲಿಯೂ ರೇವಣ ಸಿದ್ಧೇಶ್ವರನ ಒಂದು ಗುಹೆಯು ಇರುತ್ತದೆ. ಆದರೆ ಈ ಗುಡಿಯ ಹಿಂಭಾಗವು ಮುಚ್ಚಲ್ಪಟ್ಟಿದ್ದು ಅಲ್ಲಿ ಏನಿರುವದೆಂಬದನ್ನು ತಿಳಿಯಲು ಶಕ್ಯವಿರುವದಿಲ್ಲ. ಈ ಪ್ರಾಂತವನ್ನು ಈ ಕಾಲದಲ್ಲಿ ಶಿಲಾಹಾರ ರಾಜರು ಆಳುತ್ತಿದ್ದರು.

ನಾವು ಈ ಎಲ್ಲ ಸಂಗತಿಗಳನ್ನು ಇಲ್ಲಿ ವಿವರಿಸುವ ಉದ್ದೇಶವು ರೇವಣ ಸಿದ್ಧನು ಈ ಕಾಲದಲ್ಲಿ ಕರ್ನಾಟಕದಲ್ಲಿ ಆಗಿ ಹೋದ ರಾಜ್ಯಗಳಲ್ಲಿ ನಿಂತುಕೊಂಡು ವಿಶೇಷ ಮನ್ನಣೆಯನ್ನು ಜನರಿಂದ ಪಡೆದವನಾಗಿದ್ದನೆಂದು ತೋರಿಸುವದೇ ಇರುತ್ತದೆ. ಈ ಸ್ಥಿತಿಯುತ್ಪನ್ನವಾಗಲು ಅವನು ಅಲ್ಲಿ ಅನೇಕ ಧಾರ್ಮಿಕ ಜಾಗ್ರತಿಯ ಕಾರ್ಯಗಳನ್ನು ಮಾಡಿರಬೇಕು. ಇದರಿಂದ ಅವನಿದ್ದ ಸ್ಥಳಗಳಲ್ಲಿಯ ಜನರು ಭಕ್ತಿ ಭಾವವನ್ನು ತಾಳಿದವರಾಗಿ ದೇವಾಲಯಗಳನ್ನು ಸ್ಥಾಪಿಸಿದರು. ಮತ್ತು ಈಗಲೂ ಕೂಡ ಅವು ಪುಣ್ಯ ಕ್ಷೇತ್ರಗಳೆಂದು ಭಾವಿಸಲ್ಪಟ್ಟಿವೆ. ಕೆಲವೆಡೆಗಳಲ್ಲಿ ಅವನು ರಾಜರಿಂದಾದರೂ ಕೂಡ ಮನ್ನಣೆಯನ್ನು ಹೊಂದಿರುತ್ತಾನೆ. ಈ ಮೇರೆಗೆ ಬಿಜ್ಜಳನ ಆಳಿಕೆಯ ಪ್ರಥಮ ಭಾಗದಲ್ಲಿ ರೇವಣ ಸಿದ್ಧೇಶ್ವರನು ಮಹತ್ತರವಾದ ಧಾರ್ಮಿಕ ಕೃತ್ಯಗಳನ್ನು ಉತ್ತರಕ್ಕೆ ಸಾತಾರಾ ಜಿಲ್ಹೆಯಿಂದ ದಕ್ಷಿಣಕ್ಕೆ ಬೆಂಗಳೂರು ಜಿಲ್ಹೆಯ ವರೆಗೂ ಇಡೀ ಕರ್ನಾಟಕ ದೇಶದಲ್ಲಿ ಮಾಡಿದಹಾಗೆ ಕಂಡುಬರುತ್ತಿದೆ.

ಆದರೆ ಅವನು ತನ್ನ ಆಯುಷ್ಯದಲಿ ಆವ ಆವ ರಾಜರಲ್ಲಿ ಆವ ಆವ ನಿಶ್ಚಿತ ಕಾರ್ಯಗಳನ್ನು ಮಾಡಿದನೆಂಬುದನ್ನು ನಾವು ಇನ್ನೂ ನಿಶ್ಚಯಿಸತಕ್ಕ ಸಂಗತಿಯಾಗಿರುತ್ತದೆ. ಆಗಿನ ಕಾಲದಲ್ಲಿ ದಕ್ಷಿಣ ಹಿಂದುಸ್ತಾನದಲ್ಲಿ ಚಾಳುಕ್ಯ. ಹೊಯಿಸಳ, ಮತ್ತು ಚೋಳರಾಜರು ಅತ್ಯಂತ ಬಲಾಢ್ಯರಾಗಿ ಉನ್ನತಸ್ಥಾನವನ್ನು ಹೊಂದಿದವರಾಗಿದ್ದರು. ಇದರಲ್ಲಿ ಶೈವಮತಾವಲಂಬಿಗಳಾದ ಚೋಳರಾಜರು ಶಿವಭಕ್ತರಾದ ರೇವಣಸಿದ್ಧ ಮೊದಲಾದವರನ್ನು ಆದರಿಸುತ್ತಿರಬೇಕು. ಆದರೆ ಈ ಕಾಲದಲ್ಲಿ ಅಂದರೆ ೧೨ ನೇ ಶತಮಾನದ ಆದಿಭಾಗದಲ್ಲಿ ಹೊಯಿಸಳರು ಜೈನರಾಗಿ ಆ ಮೇಲೆ ರಾಮಾನುಜಪಂಥವನ್ನು ಅನುಸರಿಸುವವರಾದ್ದರಿಂದ ಅವರಿಂದ ವೀರಶೈವ ಮತಕ್ಕೆ ವಿಶೇಷ ಪ್ರೋತ್ಸಾಹವು ದೊರೆ

ಶಿರಲಿಕ್ಕಿಲ್ಲ. ಅದರಂತೆಯೇ ರೇವಣಸಿದ್ಧ ಮತ್ತು ಅವನ ಕಾಲಕ್ಕಿದ್ದ ಶಿವಶರಣರು ಕಲ್ಯಾಣಕ್ಕೆ ಹೋಗಿ ಚಾಳುಕ್ಯ ರಾಜರಲ್ಲಿ ಮನ್ನಣೆಹೊಂದಿದ್ದರ ಉಲ್ಲೇಖಗಳೂ ಇಲ್ಲ. ಆದ್ದರಿಂದ ಈ ರಾಜರೂ ರೇವಣಸಿದ್ಧೇಶ್ವರನನ್ನು ಮನ್ನಿಸಿರಲಿಕ್ಕಿಲ್ಲ. ಆದರೂ ಚಾಲುಕ್ಯ ರಾಜರ ಮಾಂಡಲಿಕನಾಗಿದ್ದ ಆಗಿನ ಕದಂಬ ರಾಜನು ಅವನನ್ನು ಆದರಿಸಿದ್ದಾನೆ. ಹಾಗೆಯೇ ಹೊಯಿಸಳರ ಕಾಲದಲ್ಲಿ ಕೊಪ್ಪಳಪೇಟೆಗೆ ಸಮೀಪವಾಗಿ ಚಾಮರಾಜೇಂದ್ರನೆಂಬ ಎಂಬ ಹೆಸರಿನ ಒಬ್ಬ ಮಾಂಡಲಿಕನು ಆಳುತ್ತಿದ್ದು ಅವನು ರೇವಣಸಿದ್ಧೇಶ್ವರನನ್ನು ಸ್ವಾಗತಿಸಿರಬೇಕೆಂದು ತೋರುತ್ತದೆ. ಯಾಕಂದರೆ ಇವನು ತೆಂಗಿನಕಲ್ ದೊರೆ ಎಂತಲೂ ಅವನ ವಿಗ್ರಹವು ಆ ಬೆಟ್ಟವನ್ನು ಹತ್ತುವ ಪ್ರಥಮದಲ್ಲಿಯೇ ಬಂಡೆಯಮೇಲೆ ಕೆತ್ತಿದೆ ಎಂತಲೂ ಶ್ರೀ ಎಚ್. ಜಿ. ಸಿದ್ಧಲಿಂಗಯ್ಯನವರು ತಮ್ಮ ಲೇಖದಲ್ಲಿ ವಿವರಿಸಿದ್ದಾರೆ. ಈ ಎಲ್ಲ ಸಂಗತಿಗಳಿಂದ ವೀರಶೈವ ಧರ್ಮವು ಈ ಕಾಲದಲ್ಲಿ ಸಾಮಾನ್ಯಜನಸಮುದಾಯದಲ್ಲಿ ಮತ್ತು ಬಿಜ್ಜಳ ರಾಜ, ಕದಂಬ ರಾಜ ಈ ಮೊದಲಾದ ಮಾಂಡಲಿಕ ರಾಜರಲ್ಲಿ ಮನ್ನಣೆಗೆ ಮೊದಲು ಪಾತ್ರವಾಯಿತೆಂಬ ಅನುಮಾನವನ್ನು ಮಾಡಬಹುದಾಗಿದೆ.

ನಿಜಾಮನ ರಾಜ್ಯದಲ್ಲಿ ರೇವಣಸಿದ್ದನ ಸ್ಥಾನಗಳು ಇವೆಯೋ ಹೇಗೆ, ಎಂಬುದು ನಮಗೆ ಇನ್ನೂ ತಿಳಿದು ಬಂದಿಲ್ಲ. ಆದ್ದರಿಂದ ಅವನ ಬಗ್ಗೆ ಅಲ್ಲಿ ನಡೆದ ಸಂಗತಿಗಳನ್ನು ಕುರಿತು ನಮಗೆ ಹೇಳಲು ಶಕ್ಯವಾಗುವದಿಲ್ಲ.

ರೇವಣಸಿದ್ಧೇಶ್ವರನು ಕೊಲ್ಲಿಪಾಕಿಯಲ್ಲಿ ಐಕ್ಯ ಹೊಂದಿದನೆಂದು ಪುರಾಣಗಳಲ್ಲಿ ಹೇಳಲ್ಪಡುತ್ತಿದೆ. ಆದರೆ ಅವನ ಸ್ಥಾನಗಳು ಯಾವಯಾವ ಕಡೆಯಲ್ಲಿರುತ್ತವೆಂಬದು ಇನ್ನೂ ಪೂರ್ಣವಾಗಿ ಸಂಶೋಧಿಸಲ್ಪಟ್ಟಿಲ್ಲ. ಅವು ಸಂಶೋಧಿತವಾಗುವ ವರೆಗೂ ಈ ವಿಷಯವಾಗಿ ಯಾವುದನ್ನೂ ನಿಶ್ಚಿತವಾಗಿ ಹೇಳಲಿಕ್ಕೆ ಬರುವದಿಲ್ಲ.

ರೇವಣಸಿದ್ಧೇಶ್ವರನ ವಿಷಯವಾಗಿ ಅನೇಕ ನೀತಿಗೆ ಬಾಹಿರವಾದ ಕಥೆಗಳಿರುತ್ತವೆ. ಅನೇಕ ಶಿವಶರಣರ ಚರಿತ್ರೆಗಳಲ್ಲಿ ಈ ತೆರದ ಕಥೆಗಳು ಹೇಳಲ್ಪಡುವದುಂಟು. ಬಸವೇಶ್ವರನೂ ಕೂಡ ಜಾರ ಚೋರರಿಗೆ ಲಿಂಗವಿದ್ದ ಮಾತ್ರದಿಂದ ಬೇಕಾದ ಹಾಗೆ ಅವರನ್ನು ಪ್ರೋತ್ಸಾಹಿಸುತ್ತಿದ್ದನೆಂದು ಅನೇಕ ಕಥೆಗಳು ಇವೆ. ಆದರೆ ಸುದೈವದಿಂದ ಈ ಶಿವಶರಣರಿಂದ ರಚಿತವಾದ ವಚನ ಗ್ರಂಥಗಳು ಈಗ ನಮಗೆ ಉಪಲಬ್ಧವಾಗಿವೆ. ಅವುಗಳಲ್ಲಿ ಅವರು ಒಬ್ಬನು ಲಿಂಗಧಾರಿಯಾದ ಬಳಿಕ ನೈತಿಕಾಚರಣೆಯುಳ್ಳವನಿರಬೇಕೆಂದು ಒತ್ತಿ ಹೇಳುವದು ಕಂಡುಬರುತ್ತಿದೆ. ಹೀಗೆ ಬೋಧಿಸುವವರು ಅನೀತಿಗೆ ಆಸ್ಪದಕೊಡುವದು ಶಕ್ಯವಿಲ್ಲ. ಬಸವೇಶ್ವರನ ತರುವಾಯ ೧೦೦–೧೫೦ ವರ್ಷಗಳ ಮೇಲೆ ಆಗಿನ ರಾಜಕೀಯ ಅನಾಯಕತನ ಮೂಲಕ ಸಮಾಜದಲ್ಲಿ ಮೌಢ್ಯಭಾವವೂ ಅವ್ಯವಸ್ಥೆಯೂ ಹೆಚ್ಚಿದ ಹಾಗೆ ಕಂಡುಬರುತ್ತಿದೆ. ಈ ಸ್ಥಿತಿಯಲ್ಲಿ ಜಂಗಮರು ತಮ್ಮ ಸ್ವೈರ ವರ್ತನೆಗಳನ್ನು ಸಮರ್ಥಿಸಿಕೊಳ್ಳಲು ಇಂಥ ಕಟ್ಟು ಕಥೆಗಳನ್ನು ರಚಿಸಿದ ಹಾಗೆ ತೋರುತ್ತದೆ. ಆಗ ಶಿವಶರಣರ ಚರಿತ್ರೆಗಳು ವಿಪರ್ಯಾಸ ಮಾಡಲ್ಪಟ್ಟವು. ಇಷ್ಟೇ ಅಲ್ಲ, ಅವರು ವಚನಕಾರರ ಶ್ರೇಷ್ಠವಾದ ಮತ್ತು ಉದಾರವಾದ ತತ್ವಗಳನ್ನು ಜನತೆಯಲ್ಲಿ ಪ್ರಸಾರಮಾಡುವ ಬದಲು ಕಟ್ಟು ಕಥೆಗಳುಳ್ಳ ಪುರಾಣಗಳನ್ನು ರಚಿಸಿ ಜನತೆಯಲ್ಲಿ ಧರ್ಮಮೂಢತನವನ್ನು ಹೆಚ್ಚಿಸಲಿಕ್ಕೆ ಪ್ರಯತ್ನಿಸಿದಂತೆ ಕಂಡುಬರುತ್ತದೆ. ವಚನಗಳಲ್ಲಿಯೂ ಕೂಡ ಸಲ್ಲದ ವಿಚಾರಗಳು ಅಲ್ಲಲ್ಲಿ ಇದ್ದು ಇವೂ ಸಹ ಹಿಂದಿನಿಂದ ಅವುಗಳಲ್ಲಿ ಸೇರ್ಪಡೆಮಾಡಲ್ಪಟ್ಟ ಹಾಗೆ ತೋರುತ್ತದೆ. ಇಂಥ ಭಾಗಗಳನ್ನು ಈಗಿನ ಕಾಲದಲ್ಲಿ ನಾವು ತೆಗೆದು ಹಾಕಿ ವೀರಶೈವ ಧರ್ಮದ ನಿಜವಾದ ಮತ್ತು ಶುದ್ಧವಾದ ಸಾಮಾಜಿಕ, ಧಾರ್ಮಿಕ ಇತಿಹಾಸವನ್ನು ಮತ್ತು ವಾಙ್ಮಯವನ್ನು ನಾವು ಪ್ರಚಾರಗೊಳಿಸಬೇಕಾಗಿದೆ.

ರೇವಣ ಸಿದ್ಧೇಶ್ವರ ಮೊದಲಾದ ಶಿವ ಶರಣರ ಮೂಲಕ ಹೇಗೆ ಬಿಜ್ಜಳನ ಆರಂಭದ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಒಂದು ಧಾರ್ಮಿಕ ಚಳವಳಿಯು ಉತ್ಪನ್ನವಾಯಿತೋ ಹಾಗೆಯೇ ಬನವಾಸಿ ನಾಡಿನಲ್ಲಿಯೂ ವೀರಶೈವ ಧರ್ಮದ ಬೇರೊಂದು ಚಳವಳಿಯು ಹೆಚ್ಚು ಕಡಿಮೆ ಇದೇ ಸಮಯದಲ್ಲಿ ಉದ್ಭವಿಸಿತೆಂದು ತೋರುತ್ತದೆ. ಈ ಕಾಲದಲ್ಲಿ ಇಲ್ಲಿ ಪ್ರಭುದೇವ, ಅನುಮಿಷ, ಮಹಾದೇವಿಯಕ್ಕ, ಮೊದಲಾದ ಶರಣ ಶರಣೆಯರು ಉಗಮಿಸಿದರು. ಹೀಗಾದುದು ಬಸವನ ಕಾಲಕ್ಕಿಂತ ಸ್ವಲ್ಪ ಮೊದಲು. ಈ ಚಳವಳಿಯು ಬಸವೇಶ್ವರನು ಪ್ರಧಾನಿ

ಪಟ್ಟವನ್ನು ಹೊಂದಿದ ಬಳಿಕ ಆದುದಲ್ಲ. ಇದು ರೇವಣ ಸಿದ್ಧೇಶ್ವರನ ಕಾಲಕ್ಕೆ ಸಮೀಪ ವರ್ತಿಯಾಗಿರುತ್ತದೆ. ಈ ಚಳವಳಿಯು ಆಗಿನ ಬನವಾಸಿ ೧೨ ಸಾವಿರ ನಾಡಿನಲ್ಲಿ ಅಂದರೆ ಈಗಿನ ಶಿವಮೊಗ್ಗಾ ಜಿಲ್ಲಾ, ಹಾನಗಲ್ಲು, ಶಿರ್ಸಿ, ರಾಣೆಬೆನ್ನೂರ, ಹಿರೇ ಕೇರೂರು, ಹಾವೇರಿ ತಾಲೂಕುಗಳನ್ನು ವ್ಯಾಪಿಸಿತು. ಈ ನಾಡಿನಲ್ಲಿ ಯಾವ ಯಾವ ವಚನ ಕಾರರು ಉದ್ಭವಿಸಿದರು ಮತ್ತು ಅವರು ಯಾವ ಯಾವ ಕಾರ್ಯಗಳನ್ನು ಮಾಡಿದರು ಎಂಬುದನ್ನು ನಾವು ಮುಂದೆ ವಿವರಿಸುವೆವು.

ವೀರಶೈವ ಸಾಮಾಜಿಕ ಇತಿಹಾಸದಲ್ಲಿ ಮೊಟ್ಟಮೊದಲು ದೇವರ ದಾಸಿಮಯ್ಯ ಶಂಕರ ದಾಸಿಮಯ್ಯನವರು, ಮುಂದೆ ರೇವಣಸಿದ್ಧನು, ಇವನ ತರುವಾಯ ಪ್ರಭುದೇವ ಅನುಮಿಷರು ಇವರ ತರುವಾಯ ಬಸವ, ಸಿದ್ಧರಾಮ, ಚನ್ನಬಸವಾದಿಗಳು, ಆ ಮೇಲೆ ರುದ್ರಮುನಿ ಮೊದಲ್ಗೊಂಡು ಅನೇಕ ಆಚಾರ್ಯರು ವೀರಶೈವ ಸಮಾಜದಲ್ಲಿ ಕಾಲ ಕಾಲಕ್ಕೆ ಉದ್ಭವಿಸಿ ೧೦೦, ೧೫೦ ವರ್ಷಗಳ ವರೆಗೆ ಕ್ರಾಂತಿಗಳನ್ನೆಸಗುತ್ತ ಬಂದಿರುತ್ತಾರೆ. ಇವರ ಚರಿತ್ರೆಗಳು ಘನತರವಾದವುಗಳು. ಇವುಗಳನ್ನು ಸಂಶೋಧಿಸಿ ಹಿಂದುಸ್ಥಾನದಲ್ಲೆಲ್ಲ ಪ್ರಚಾರ ಮಾಡುವದು ವೀರಶೈವರ ಆದ್ಯಕರ್ತವ್ಯವಾಗಿದೆ.

---

# ಸಂಗೀತದಲ್ಲಿ ಶಿವಶರಣರ ವಚನಗಳು.

ಲೇಖಕ:— ಶ್ರೀ ಪಿ. ವ್ಹಿ. ಪಾಟೀಲ ಸಂಗೀತ ಶಿಕ್ಷಕ
ಶ್ರೀ. ಸಿದ್ಧೇಶ್ವರ ಹೈಸ್ಕೂಲ ವಿಜಾಪೂರ.

ರಾಗ:— ಮಿಶ್ರ ಪಹಾಡಿ ತಾಲ:— ಕವಾಲಿ
(ಆದಿ ಬೀಜ ಏಕಲೆ...ಎಂಬಂತೆ)

ಆಡಿ ಕಾಲು ದಣಿಯುವು ॥
ನೋಡಿ ಕಣ್ಣು ದಣಿಯುವು, ಮಾಡಿ ಕೈ ದಣಿಯವು॥
ಹಾಡಿ ನಾಲಿಗೆ ದಣಿಯದು, ಇನ್ನೇವೆ॥ ಕಾಲು ದಣಿಯುವು॥
ನಾ, ನಿಮ್ಮ ಕೈಯಾರೆ ಪೂಜಿಸಿ।
ಮನ ದಣಿಯ ಲೊಲ್ಲದು, ಇನ್ನೇವೆ, ಇನ್ನೇವೆ॥ ಕಾಲುದಣಿಯುವು॥
ಕೂಡಲ ಸಂಗಮ ದೇವ ಕೇಳಯ್ಯ।
ನಿಮ್ಮುದರವ ಬಗೆದಾನು ಹೊಗುವ ಭರವೆನಗೆ ॥ ಕಾಲುದಣಿಯುವು॥

[ಬಸವಣ್ಣ]

(ರಾಗ:— ಮಿಶ್ರ ಪಹಾಡಿ ತಾಲ:— ಕವಾಲಿ)
(ಧೀರೆ ಗಾಡಿ ಹಾಕರೆ...ಎಂಬಂತೆ)

ತನ್ನ ತಾನರಿದೊಡೆ। ತಾನೇ ಚಿನ್ಮಯನಾದ। ಅಯ್ಯಾ॥
ಪರಬ್ರಹ್ಮ ನೋಡಾ। ತಾನೇ ಚಿನ್ನಾದ।
ಚಿದ್ಬಿಂದು ಚಿತ್ಕಳಾಮೂರ್ತಿ ನೋಡು।
ತಾನೇ ಸಕಲ। ಚೈತನ್ಯ। ಚಿತ್ಸೂತ್ರಧಾರೀ ; ಅಯ್ಯಾ ॥
ತನ್ನಿಂದಧಿಕ ಪರದೈವವಿಲ್ಲ, ನೋಡಾ. ತಾನೇ ಸಚ್ಚಿದಾನಂದ।
ಸ್ವರೂಪವಾದ ಚಿದ್ಘನಲಿಂಗ ನೋಡಾ।
ಅಪ್ರಮಾಣ ಕೂಡಲ ಸಂಗಮ ದೇವಾ ॥

[ ? ]

ರಾಗ:— ಮಿಶ್ರ ಪಹಾಡಿ ತಾಲ:— ಧುಮಾಳಿ
( ಜಮುನಾಮೆ ಕೈಸೆಜಾವು...ಎಂಬಂತೆ )

ಪರಾಶೆ ಎಂಬ ಜ್ವರವು ಹತ್ತಿ ॥
ನಾನು ಕಳವಳಿಸಿ ನುಡಿವೆನಯ್ಯಾ।
ಹೊನ್ನು ಹೆಣ್ಣು ಮಣ್ಣು ಬಯಸಿ ॥ ೧ ॥

ವಿಕಳತೆ ಗೊಂಡಂತೆ ಪ್ರಲಪಿಸುತ್ತ ।
ನುಡಿವೆನಯ್ಯ. ಈ ಕಳವಳವ ನಿಲಿಸಿ ॥ ೨ ॥
ಕರುಣಾಮೃತ ವೆಂಬ ಕಷಾಯವನೆರೆದು ॥
ಪರಾಶೆ ಯೆಂಬ ಜ್ವರವ ಮಾಣಿಸು ॥ ೩ ॥
ಬಸವ ಪ್ರಿಯ ಕೂಡಲ ।
ಚನ್ನ ಸಂಗಮ ದೇವಾ ದೇವಾ ॥ ೪ ॥

[ಹಡಪದ ಅಪ್ಪಣ್ಣ]

ರಾಗಃ— ಮಿಶ್ರ ಪಹಾಡಿ ತಾಲಃ— ಕವಾಲಿ

(ಮಜ ಫಿರ ಫಿರುನಿ...ಎಂಬಂತೆ)

ಸಂಸಾರವ ಬಿಟ್ಟುದೇ ।
ಆಚಾರವಯ್ಯಾ ಕಾಯದಿಚ್ಛೆಗೆ ॥
ಕಂಡವರಿಗೆ ಕಾರ್ಪಣ್ಯ ಬಡದಿಪ್ಪುದೇ ಶೀಲ ।
ಲಿಂಗಾಣತಿಯಿಂದ ಬಂದುದ ಕೈಕೊಂಬುದೇ ವ್ರತ ॥
ಮನ ಘನವನಗಲ ದಿಪ್ಪುದೇ ಭಕ್ತಿ. ಸಕಳೇಶ ದೇವಾ ನಿಮ್ಮ
ನರಿದವನೇ ಶರಣ ॥ ೧ ॥

[ಸಕಳೇಶ ಮಾದರಸ]

ರಾಗಃ— ಸುಸಾರಂಗ ತಾಲಃ— ತ್ರಿತಾಲ.

(ರೀತ ರಂಜ ಛಂಕೆ...ಎಂಬಂತೆ)

ಲಂಚ ವಂಚನೆಗೆ ಕೈಯಾನದ ಭಾಷೆ ।
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ ॥ ಪ ॥
ಕಯ್ಯು ಮುಟ್ಟಿ ಎತ್ತಿದೆನಾದೊಡೆ ।
ಅಯ್ಯಾ ನಿಮ್ಮಾಣೆ ನಿಮ್ಮ ಪ್ರಮಥರಾಣೆ ॥ ೧ ॥
ನೀನಿಕ್ಕಿದ ಭಿಕ್ಷೆ ಯೊಳಗಿಪ್ಪೆನಯ್ಯಾ ।
ಶಂಭು ಜಕ್ಕೇಶ್ವರ ದೇವಯ್ಯಾ ನಿಮ್ಮಾಣೆ ॥ ೨ ॥

[ಸತ್ಯಕ್ಕ]

---

# ಭವಿ ಭಕ್ತರು

(ಲೇಃ- ಬಸವಪ್ಪ ಚೆನ್ನಪ್ಪ ಪಟ್ಟೇದ ಮಂಟಮುರಿ)

## ಪ್ರವೃತ್ತಿ ನಿವೃತ್ತಿಗಳು

ಈ ಲೋಕದಲ್ಲಿ ಉದ್ಭವಿಸಿದ ಮನುಷ್ಯರೆಲ್ಲರೂ ಜನ್ಮತಃ ಭವಿಗಳೇ. ಭವಿ ಶಬ್ದವು ಭೂ (ಜನ್ಮತಾಳು ಹುಟ್ಟು). ಎಂಬ ಸಂಸ್ಕೃತ ಧಾತುವಿನಿಂದ ಉತ್ಪನ್ನವಾಗಿದೆ. ಇದರರ್ಥವು ಹುಟ್ಟುವ ಸ್ವಭಾವವುಳ್ಳವನು ಎಂದಾಗುತ್ತದೆ. ಹೀಗೆ ಹುಟ್ಟಿದವರೆಲ್ಲರೂ ಸೃಷ್ಟಿಯನ್ನೂ ಅದರೊಳಗಿರುವ ವಸ್ತುಗಳನ್ನೂ ಕಂಡು, ಅವುಗಳಲ್ಲಿರುವ ಗುಣಧರ್ಮಗಳನ್ನು ಮೋಹಿಸಿ ತಮ್ಮ ಸಂರಕ್ಷಣೆಗಾಗಿ ಅವನ್ನು ಉಪಯೋಗಿಸುವದೂ ಸಂಗ್ರಹಿಸಿ ಸುಖಪಡೆಯಬೇಕೆಂಬ ಕಾಂಕ್ಷೆ ಧರಿಸುವದೂ ಕ್ರಮಪ್ರಾಪ್ತವಾದ ಸಂಗತಿಯೇ ಸರಿ! ಈ ಸ್ವಭಾವಕ್ಕೆಯೇ ಪ್ರವೃತ್ತಿಯೆನ್ನುವರು. ಆದರೆ ಅನೇಕ ಕಾಲ ಹೀಗೆ ಆ ಪದಾರ್ಥ (ವಿಷಯ) ಗಳನ್ನು ಎಷ್ಟು ಉಪಭೋಗಿಸುತ್ತ ಬಂದರೂ ತಮಗೆ ಅವುಗಳಿಂದ ಸಂತೃಪ್ತಿಯಾಗದೆ, ಹೆಚ್ಚೆಚ್ಚು ತೃಷ್ಣೆಯೇ ಬೆಳೆಯುತ್ತಿರುವದೆಂಬುದು ಬರುಬರುತ್ತ ಕೆಲ ಬುದ್ಧಿಶಾಲಿಗಳಿಗೆ ಹೊಳೆಯದೆ ಇರಲಿಲ್ಲ. ಮೇಲಾಗಿ ಇವೆಲ್ಲ ವಿಷಯಗಳು ನಡುನಡುವೇ ಕೈಬಿಟ್ಟು ಹೋಗುವವೆಂಬದನ್ನೂ ಅವರು ಮನಗಂಡರು. ತಮ್ಮ ಜೀವನಕ್ಕೆ ಇವೆಲ್ಲ ಬೇಕಾಗಿದ್ದರೂ "ನಿಜವಾದ ಸುಖವು ಇವುಗಳಲ್ಲಿಲ್ಲ. ಇವುಗಳಿಂದ ಸುಖಕ್ಕಿಂತ ದುಃಖವೇ ಹೆಚ್ಚಾಗಿರುವದೆಂ"ಬದು ಪದೇ ಪದೇ ಅವರ ಅನುಭವಕ್ಕೆ ಬರಹತ್ತಿತು. ಇದಲ್ಲದೆ ತಮ್ಮದೆಂದು ಭಾವಿಸಿದ ದೇಹ ಸಂಬಂಧದ ವಿಧವಿಧದ ಕಷ್ಟಗಳನ್ನೂ ನೋಡಿ ಬೇಸತ್ತರು. ಆಗ ಅವರು ಈ ಜಗತ್ತಿನ ಬಗ್ಗೆ ಔದಾಸೀನ್ಯವನ್ನು ವಹಿಸಿ, ಇದರಾಚೆಗೆ ಇದರ ಮೂಲ ಕಾರಣವಾದ ಸತ್ಯಸುಖಮಯ ವಸ್ತುವೊಂದಿರಬಹುದೆಂದು ಊಹಿಸಿದರು. ಹಾಗು ಅದನ್ನೇ ದೇವರೆಂದೂ ಪರಮಾತ್ಮನೆಂದೂ ಕರೆದರು. ಇಂತಹ ದೇವರು ಎಲ್ಲಿರುವನು? ಅವನ ಸ್ವರೂಪವೇನು? ಅವನನ್ನು ಹೇಗೆ ಕಂಡು ಅವನ ಸಂಬಂಧದ ಉತ್ಕೃಷ್ಟ ಸುಖವನ್ನು ಹೊಂದಬೇಕು? ಇತ್ಯಾದಿ ಆಶೆಯನ್ನು

ಅವರು ತಳೆದರು. ಹೀಗೆ ಜಗತ್ತಿಗೆ ಬೇಸತ್ತು ದೇವರ ಕಡೆಗೆ ಹೊರಳುವ ಸ್ಥಿತಿಗೆ ನಿವೃತ್ತಿ ಎನ್ನುವರು. ಈ ಪ್ರಕಾರ ಮಾನವರಲ್ಲಿ ಜಗದತ್ತ ಮುಖವಾಗಿ ಸಾಗಿ ಅದರ ಸವಿಯುಣ್ಣುವ ಪ್ರವೃತ್ತಿಮಾರ್ಗದವರು, ಹಾಗು ಜಗಕ್ಕೆ ವಿಮುಖವಾಗಿ ಪರಮಾತ್ಮನತ್ತ ಮುಖದಿರುವಿ ಅವನನ್ನು ಕಂಡು ಆ ಅನುಪಮ ಸುಖಭೋಗಿಸಬೇಕೆಂಬ ನಿವೃತ್ತಿಮಾರ್ಗದವರು ಎಂಬೆರಡು ವರ್ಗಗಳಾದವು. ಈ ನಿವೃತ್ತಿಮಾರ್ಗದವರೇ ಭಕ್ತರು. ಈ 'ಭಕ್ತ" ಶಬ್ದವಾದರೂ ಭಜ್ (ಭಜಿಸು, ನೆನಿಸು) ಎಂಬ ಸಂಸ್ಕೃತ ಧಾತುವಿನಿಂದಲೇ ಹುಟ್ಟಿರುತ್ತದೆ.

## ಬ್ರಹ್ಮ ವಿಷ್ಣು ಶಿವ

ದೇವತ್ವದ ಕಲ್ಪನೆಯನ್ನು ಬಹುಶಃ ಎಲ್ಲರೂ ಒಡಂಬಟ್ಟರು. ದೇವರೇ ಜಗತ್ತನ್ನು ಹುಟ್ಟಿಸುವನೆಂದೂ ರಕ್ಷಿಸುವನೆಂದೂ ಕೊನೆಗೆ ಲಯಗೊಳಿಸುವನೆಂದೂ ಭಾವಿಸಿದರು. ಹುಟ್ಟಿಸುವ ಸಂಬಂಧದಿಂದ ಅವನಿಗೆ ಬ್ರಹ್ಮನೆಂತಲೂ ರಕ್ಷಿಸುವ ಕಾರಣದಿಂದ ವಿಷ್ಣುವೆಂತಲೂ ನಾಶಗೊಳಿಸುವ ಸಂಬಂಧದಿಂದ ರುದ್ರ(ಶಿವ)ನೆಂತಲೂ ಹೆಸರುಗಳು ರೂಢವಾದವು. ಜಗತ್ತಿನೊಳಗಿನ ವಿಷಯಗಳ ದ್ವಾರವಾಗಿಯೇ ತಮ್ಮ ಸಂರಕ್ಷಣೆಯಾಗುವದರಿಂದಲೂ ಸಂರಕ್ಷಣೆಯ ಮೂರ್ತಿಯು ವಿಷ್ಣುವಾದುದರಿಂದಲೂ, ಆ ವಿಷಯಗಳನ್ನು ಲಕ್ಷ್ಮಿಯೆಂದೂ ವಿಷ್ಣುವನ್ನು ಲಕ್ಷ್ಮೀಪತಿಯೆಂದೂ ಪ್ರವೃತ್ತಿಮಾರ್ಗದವರು ತಿಳಕೊಂಡರು. ಮತ್ತು ಪರಿಪರಿಯಿಂದ ವಿಷ್ಣುವನ್ನು ಐಹಿಕಸಾಧನೆಗಳಿಂದ ವೈಭವ ಶಾಲಿಯನ್ನಾಗಿ ಸಿಂಗರಿಸಿ ಅವನೇ ನಮ್ಮ ದೇವತೆಯೆಂದು ಹೇಳಿಕೊಳ್ಳಹತ್ತಿದರು. ಮತ್ತು ಅಹಂಕಾರ, ಮಮಕಾರ, ಆಶೆ, ಆಕಾಂಕ್ಷೆ ಮನೋವಿಕಾರಗಳಿಗೆ ಆಶ್ರಯಸ್ಥಾನವಾದರೂ ನಿವೃತ್ತಿ ಮಾರ್ಗದವರಾದರೋ ಜಗತ್ತಿನ ನೆಲೆಯನ್ನು ಆಳವಾಗಿ ವಿಚಾರಿಸಿ ನಿಜಸ್ಥಿತಿಯನ್ನು ಕಂಡುಕೊಂಡವರು. ಅದರಿಂದ ಅದನ್ನು ತಕ್ಕಮಟ್ಟಿಗೆ (ಜೀವನದ ಪೂರ್ತೆ) ಮಾತ್ರ ಅವಲಂಬಿಸಿ, ಹೆಚ್ಚಾದ ಅದರ ಹಂಬಲವನ್ನು ತ್ಯಜಿಸಿ ಬಿಟ್ಟರು. ಆದುದರಿಂದ ಇವರು ವಿಷಯಗಳಲ್ಲಿ ವೈರಾಗ್ಯವುಳ್ಳವರಾಗಿ, ಅವನ್ನೆಲ್ಲ ಲಯಗೊಳಿಸುವ ಮೂರ್ತಿಯಾದ ರುದ್ರ (ದುಃಖವನ್ನು ಕರಗಿಸಿ ಕಲ್ಯಾಣವನ್ನು ಮಾಡುವವ)ನನ್ನು ಪ್ರೀತಿಸಿ, ಅವನನ್ನು ಶಿವನೆಂದು ಪೂಜಿಸಹತ್ತಿದರು. ಹಾಗು ನಿರ್ವಿಷಯಸ್ಥಾನ (ಸ್ಮಶಾನ) ವಾಸಿಯನ್ನೂ ಗಿರೀಶ (ಗಿರಿ×ಈಶ=ಕಾಡೊಡೆಯ)



ನನ್ನೂ ಮಾಡಿದರು. ಗಿರಿಕನ್ಯೆಯೇ ಅವನ ಶಕ್ತಿಯಾದಳು. ಈ ವಿಧವಾಗಿ ಜಗತ್ತಿನ ಬಗ್ಗೆ ಅನಾಸಕ್ತನೂ ಕೇವಲ ಜ್ಞಾನಮೂರ್ತಿಯೂ ಆಗುವಂತೆ ತಮ್ಮ ದೇವನನ್ನು ಸಿದ್ಧಪಡಿಸಿಕೊಂಡು, ನಿವೃತ್ತಿ ಮಾರ್ಗದವರು ಶಿವನೇ ಸರ್ವೋತ್ತಮನೆಂದು ಪೂಜಿಸಹತ್ತಿದರು.

## ಪ್ರಾಕೃತರು ಅಪ್ರಾಕೃತರು.

ಜಗತ್ತಿನ ನಾನಾ ವಿಧವಾದ ವಿಷಯಗಳನ್ನೇ ಅಂತಃಕರಣ ಪೂರ್ವಕವಾಗಿ ಇಚ್ಛಿಸಿ ಅವುಗಳಲ್ಲೇ ಕಣ್ಮನಗಳನ್ನು ಸರ್ವದಾ ಇರಿಸಿ ಮೋಹಿತರಾದವರು, ಅವುಗಳ ಉಪಭೋಗವೇ ಜನ್ಮದ ಇತಿಕರ್ತವ್ಯವೆಂದು ನಂಬುವದು ಸ್ವಾಭಾವಿಕವೇ ಸರಿ! ಇಂತಹರು ಅವನ್ನು ಎಷ್ಟು ಉಪಭೋಗಿಸಿದರೂ ಸಾಕೆನ್ನುವದಿಲ್ಲ. ಅಂತೇ ಅವರು "ಪುನರಪಿ ಜನನಂ ಪುನರಪಿ ಮರಣಂ ಪುನರಪಿ ಜನನೀ ಜಠರೇ ಶಯನಂ" ಎಂಬಂತೆ ತಿರುತಿರುಗಿ ಈ ಕರ್ಮ ಭೂಮಿಯಲ್ಲಿ ಕಾಲಿಡುವರು (ಅಂದರೆ ಸಂಸಾರಬದ್ಧಿತರು ಇಲ್ಲವೆ ಭವಿಗಳಾಗುವರು.) ಅವರಿಗೆ ಸಂಸಾರದುಃಖದ ಬಿಡುಗಡೆ ಎಂದೂ ಆಗಲಾರದು, ನಿತ್ಯ ನಿಜಸುಖವು ಲಭಿಸಲಾರದು, ಎಂದು ಮಹಾ ಮಹಾ ಜ್ಞಾನಿಗಳೂ ಋಷೀಶ್ವರರೂ ಸಿದ್ಧಾಂತಮಾಡಿ, ತಾವು ಶೈವರಾಗಿ ಶಿವಚಿಹ್ನವಾದ ಲಿಂಗವನ್ನು ಧರಿಸಿ ಪೂಜಿಸಿ ಕೃತಾರ್ಥರಾಗಿರುವರು. ಶಿವಪೂಜೆಯ ಹೊರತು ಜನ್ಮೋದ್ಧಾರಕ್ಕೆ ಅನ್ಯಸಾಧನವೇ ಇಲ್ಲೆಂದು ಅವರು ಖಂಡಿತವಾಗಿ ಸಾರಿರುವರು. ಶಿವೋಪಾಸನೆಯು ಇಂತಹ ಮಹತ್ವದ್ದಿರುವದರಿಂದ ಅದು ಯಾವಾಗಲೂ ಸ್ಮರಣದಲ್ಲಿ ಉಳಿಯಬೇಕು, ಅದನ್ನು ಪ್ರತಿಯೊಬ್ಬನು ತಪ್ಪದ ಅನುಸರಿಸಬೇಕು, ಎಂಬ ಸದುದ್ದೇಶದಿಂದಲೇ ಅನೇಕರು, ಶಿವಚಿಹ್ನವಾದ ಲಿಂಗವನ್ನು ಪ್ರತ್ಯಕ್ಷ ದೇಹದ ಮೇಲೆ ಧರಿಸಿ, ಅತ್ಯಂತ ಪ್ರೇಮಾದರ ವಿಶ್ವಾಸಗಳಿಂದ ಅದನ್ನು ಪೂಜಿಸಿ ತೊಡಗಿದರು. ಇಂತಹ ವೀರವ್ರತಿಗಳೇ ವೀರಶೈವರು ಅಥವಾ ಲಿಂಗಾಯತರು. ಇವರು ಪ್ರಾಕೃತರಲ್ಲ, ಅಪ್ರಾಕೃತರು. ಶರೀರ ರಕ್ಷಣೆಯನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡು ವಿಷಯಾನುಭೋಗಗಳನ್ನು ಯಥೇಚ್ಛವಾಗಿ ಮಾಡಬೇಕೆಂದು, ಪ್ರಪಂಚದಲ್ಲಿ ನಿಮಗ್ನರಾದ ಪ್ರವೃತ್ತಿಮೂರ್ತಿಗಳೇ ಪ್ರಾಕೃತರು (ಪ್ರಕೃತಿ+ಅ=ಪ್ರಕೃತಿ ಪೋಷಣೆಯೇ ಪ್ರಾಧಾನ್ಯವೆಂದು ನೆನೆಯುವರು.) ಅಮರವಾದ ನಿತ್ಯಾತ್ಮವೇ ತಾವೆಂದು ಅರಿತು ವಿಷಯಗಳ ಅತ್ಯಾಶೆ ಮಾಡದೆ ತೊರೆದು, ನಿಯಮಿತ ಶಿವಪ್ರಸಾದ

ಭೋಗಿಗಳಾಗಿ ಜ್ಞಾನವನ್ನೇ ಮುಂದಿಟ್ಟುಕೊಂಡು ವರ್ತಿಸುತ್ತ, ಯಾವಾಗಲೂ ಶಾಂತಿ ಸಮಾಧಾನಗಳೊಡನೆ ಆತ್ಮಸುಖಾನುಭವವನ್ನು ಹೊಂದುತ್ತಿರುವ ನಿವೃತ್ತಿಮಾರ್ಗಿಗಳೇ ಅಪ್ರಾಕೃತರು.

ಈ ಮೇರೆಗೆ ವೀರಶೈವರು ಜನತೆಯಲ್ಲಿ ಭವಿ (ಪ್ರಾಕೃತರು) ಭಕ್ತ (ಅಪ್ರಾಕೃತರು) ಎಂದು ಎರಡು ವರ್ಗಗಳನ್ನು ಎಣಿಸುತ್ತಾರೆ. ಭವಿಗಳಂತೂ ಹೇಳಿಕೇಳಿ ಪ್ರವೃತ್ತಿ ಮಾರ್ಗದವರು ಪ್ರಾಕೃತರು ಸಂಪೂರ್ಣ ವಿಷಯಾಶೆಯುಳ್ಳವರು. ಇವರು ಭವಭಾರಿಗಳಾಗಿಯೇ ಎಂಬತ್ತುನಾಲ್ಕು ಲಕ್ಷಯೋನಿ (ಜನ್ಮಕೋಟಿ) ಗಳಲ್ಲಿ ತಿರುಗುವವರು. ಲೌಕಿಕ ಸಂಪಾದನೆಯೇ ಅವರ ಪರಮ ಧ್ಯೇಯವು. ಸದಾಚಾರ ಪಾರಮಾರ್ಥಿಕಕ್ಕೆ ಅಷ್ಟೊಂದು ಗಮನಿಸುವವರಲ್ಲ. ಆದರೆ ಭಕ್ತರಾದ ವೀರಶೈವರು ತಾವು ನಿವೃತ್ತಿಪರರಾಗಿ ಅಪ್ರಾಕೃತರಾಗಿ, ತಾತ್ಪೂರ್ತಿಕವಾಗಿ ಮಿತಿಯಿಂದ ಮಾತ್ರ ವಿಷಯಗಳನ್ನು ಶಿವನೊಡನೆ ಅವನ ಪ್ರಸಾದವೆಂದು ಭೋಗಿಸಿ, ಆತ್ಯಂತಿಕ ಸುಖ (ಮೋಕ್ಷಾನಂದ)ವನ್ನು ಎದುರು ನೋಡುತ್ತ, ಸದಾಚಾರ ಸತ್‌ಕ್ರಿಯಾವಂತರೂ ಶಿವಜ್ಞಾನ ಸಂಪನ್ನರೂ ಆಗಿ, ಆ ಪ್ರಕಾರ ನುಡಿದು ಲಿಂಗೈಕ್ಯರಾಗತಕ್ಕವರೆಂಬುದನ್ನೇ ಮುಂದಿಟ್ಟು ಕೊಂಡವರು. ಇವರಲ್ಲಿ ಭಕ್ತಿ ಇಲ್ಲವೆ ಗುಣ ಕ್ರಿಯೆಗಳ ತಾರತಮ್ಯದಿಂದ ಆರು ಸ್ಥಾನಗಳುಂಟು. ಅವು:— (೧) ಶ್ರದ್ಧಾಭಕ್ತ (ಭಕ್ತ) (೨) ನಿಷ್ಠಾಭಕ್ತ (ಮಹೇಶ್ವರ) (೩) ಅವಧಾನ ಭಕ್ತ (ಪ್ರಸಾದಿ) (೪) ಅನುಭಾವ ಭಕ್ತ (ಪ್ರಾಣಲಿಂಗಿ) (೫) ಆನಂದ ಭಕ್ತ (ಶರಣ) (೬) ಸಮರಸ ಭಕ್ತ (ಐಕ್ಯ).

ಲಿಂಗಾಯತರಲ್ಲಿ ಜಾತಿ ಪಂಗಡಗಳ ಭೇದವಿಲ್ಲ. ಅನ್ನ ಕನ್ಯಾವ್ಯವಹಾರವನ್ನು ತಮ್ಮೊಳಗೆ ಅನಿರ್ಬಂಧವಾಗಿ ನಡಿಸಬೇಕೆಂದು ಶಾಸ್ತ್ರಾಜ್ಞೆ ಇರುವದು. ಪ್ರಪಂಚವನ್ನು ತ್ಯಜಿಸದೆ ಅವಶ್ಯ ಕರ್ತವ್ಯವೆಂದು ಅದನ್ನು ಧರಿಸಿ, ಅಲಿಪ್ತತೆಯಿಂದ ವ್ಯವಹರಿಸಲೇಬೇಕು. ಜ್ಞಾನ ಕ್ರಿಯೆಗಳೆರಡೂ ಬಿಟ್ಟುಬಿಡದೆ ಕೂಡಿಯೇ ಸರ್ವಕಾಲವೂ ನಡೆಯಬೇಕು. ನುಡಿಗಿಂತ ನಡವಳಿಕೆಗೆಯೇ ಹೆಚ್ಚು ಮಹತ್ವವಿರುವದು. ಇವರು ಅಷ್ಟಾವರಣಗಳನ್ನು ಧರಿಸಿ, ಪಂಚಾಚಾರಗಳಂತೆ ನಡೆದು, ಷಟ್‌ಸ್ಥಲ ಜ್ಞಾನವನ್ನು ಪಡೆದು, ತದನುಸಾರವಾಗಿ ವರ್ತಿಸುವ ಮಹಾವ್ರತವನ್ನು ಕೈಕೊಳ್ಳುವರು. ಇಲ್ಲಿ ಇವನ್ನು ಸಂಕ್ಷೇಪವಾಗಿ ವಿವರಿಸುವದು ಯೋಗ್ಯವು.

[ಮುಂದೆ ಸಾಗುವದು.

# ವೀರಶೈವರ ಪೂರ್ವದ ಹೆಸರು ಅವುದು?

## ( ಹರಿಹರನ ಬಸವರಾಜ ರಗಳೆ )

(ರಾ. ಸಾ. ಪ. ಜಿ. ಹಳಕಟ್ಟಿ, ಬಿ. ಏ. ಎಲ್. ಎಲ್. ಬಿ.)

ಮಹಾ ಕವಿಯಾದ ಹರಿಹರನು ತನ್ನ ಗ್ರಂಥಗಳಲ್ಲಿ ವೀರಶೈವ ಸಮಾಜವನ್ನು ಯಾವ ಹೆಸರಿನಿಂದ ಸಂಬೋಧಿಸಿರುವನೆಂಬದನ್ನು ಕುರಿತು ವಿಚಾರ ಮಾಡುವದೇ ಈ ನನ್ನ ಲೇಖದ ಮುಖ್ಯೋದ್ದೇಶವಾಗಿರುತ್ತದೆ.

ಈಚೆಗೆ ಕೆಲವು ಪಂಡಿತರು ವೀರಶೈವ ಶಬ್ದವು ಬಸವೇಶ್ವರನ ಕಾಲದಲ್ಲಿಯು ಮತ್ತು ಅವನ ಪೂರ್ವದಲ್ಲಿಯು ಶಿಲಾಶಾಸನಗಳಲ್ಲಿ ಮತ್ತು ಆ ಕಾಲದ ಗ್ರಂಥಗಳಲ್ಲಿ ಸಹ ಬರುವದಿಲ್ಲಾದ್ದರಿಂದ ವೀರಶೈವ ಧರ್ಮವು ಬಸವನ ಕಾಲಕ್ಕಿಂತ ಪೂರ್ವದಲ್ಲಿ ಇದ್ದಿಲ್ಲವೆಂತಲೂ ಬಸವೇಶ್ವರನ ತರುವಾಯದ ಶತಮಾನವಾದ ೧೩ನೆಯ ಶತಮಾನದಲ್ಲಿ ವೀರಶೈವ ಗ್ರಂಥಕಾರರಕಿಂತಲೂ ಜೈನ ಗ್ರಂಥಕಾರರೇ ಬಹು ಹೆಚ್ಚು ಸಂಖ್ಯೆಯಿಂದ ದೊರೆಯುವದರಿಂದ ವೀರಶೈವ ಗ್ರಂಥಗಳು ಇತ್ತೀಚೆಗೆ ಹುಟ್ಟಿದವೆಂತಲೂ, ಬಸವನ ಹೆಸರು ಶಿಲಾಲೇಖಗಳಲ್ಲಿ ಬರುವದಿಲ್ಲಾದ್ದರಿಂದ ಅವನು ಕಾಲ್ಪನಿಕ ಪುರುಷನೆಂತಲೂ ಸಹ ಅಭಿಪ್ರಾಯ ಪಡಹತ್ತಿದ್ದಾರೆ. ಈ ಅಭಿಪ್ರಾಯಗಳು ಕೆಲವು ವಿದ್ವಾಂಸರಲ್ಲಿ ರೂಢವಾಗಿರುವದರಿಂದ ಇವುಗಳನ್ನು ಐತಿಹಾಸಿಕ ದೃಷ್ಟಿಯಿಂದ ಸಂಶೋಧನೆ ಮಾಡಿ ನಿಜವಾದವುಗಳನ್ನು ನಾವು ಪ್ರಕಟಮಾಡದೆ ಹೋದಲ್ಲಿ ಹಿಂದಿನ ಕಾಲದಲ್ಲಿ ಅತ್ಯಂತ ಮಹತ್ತರವಾದ ಧಾರ್ಮಿಕ ಕಾರ್ಯಮಾಡಿ ಹೋದ ವೀರಶೈವ ಮಹಾನುಭಾವರ ಹೆಸರಿಗೆ ವ್ಯತ್ಯಯವು ಬಾರದೆ ಇರದು. ಆದರೆ ಐತಿಹಾಸಿಕ ರೀತಿಯ ಸಂಶೋಧನ ಮತ್ತು ವಿವೇಚನೆಯ ಪದ್ಧತಿಯನ್ನು ಬಿಟ್ಟುಕೊಟ್ಟು ಕೇವಲ ಪುರಾಣಗಳನ್ನು ನಂಬಿ ಅವುಗಳಲ್ಲಿ ವರ್ಣಿಸಲ್ಪಟ್ಟ ಅದ್ಭುತ ಕೃತ್ಯಗಳೇ ನಿಜವಾದ ಇತಿಹಾಸಗಳೆಂದು ಅಭಿಪ್ರಾಯಗಳನ್ನು ಸಮರ್ಥಿಸಹೋದರೆ ಅವುಗಳಿಗೆ ಈಗಿನ ಕಾಲದಲ್ಲಿ ಮಹತ್ವವು ಬರಲಾರದು.

ಉದಾಹರಣಾರ್ಥವಾಗಿ ಅನಂತಪುರದಲ್ಲಿಯ ಗವ್ಹರ್ನಮೆಂಟ ಕಾಲೇಜಿನ ಕರ್ನಾಟಕ ಸಂಘದ ಪ್ರಾರಂಭೋಪನ್ಯಾಸ ಸಮಯದಲ್ಲಿ ಡಾ. ಚಿಲುಕೂರು ನಾರಾಯಣರಾವ ಎಮ್. ಎ. ಪಿ. ಎಚ್. ಡಿ. ಇವರು ೧೫-೮-೧೯೩೯ನೇ ದಿವಸ ಅಲ್ಲಿ ವಿದ್ಯಾರ್ಥಿಗಳಿದುರಿಗೆ ಮಾಡಿದ ಭಾಷಣದಲ್ಲಿ, ಅನೇಕ ವಿಧಾನಗಳನ್ನು ಮಾಡಿದ್ದಾರೆ. ಅವರು, ಬಸವಣ್ಣನ ಕುರಿತು ಶಾಸನಗಳೆಲ್ಲ ಮೌನಮುದ್ರೆ ವಹಿಸಿರುವದರಿಂದ ಅವನು ಚಾರಿತ್ರಿಕ ಪುರುಷನೋ, ಅಲ್ಲವೋ! ಎಂದು ಸಂದೇಹವು ಉತ್ಪನ್ನವಾಗುವದೆಂತಲೂ (ಉಪನ್ಯಾಸದ ೭ನೇ ಪುಟ) ಬಸವನಕಿಂತಲೂ ಪೂರ್ವದಲ್ಲಿ ವೀರಶೈವವು ಇತ್ತೆಂಬುದಕ್ಕೆ ಯಾವ ಆಧಾರವು ಇಲ್ಲವೆಂತಲೂ ತಮ್ಮ ಅಭಿಪ್ರಾಯನ್ನು ತಮ್ಮ ಭಾಷಣದಲ್ಲಿ ಪ್ರಕಟಿಸಿದ್ದಾರೆ. ಇದರ ಮೇಲಿಂದ ಶಿಲಾಶಾಸನಗಳಲ್ಲಿ ಪುರಾತನ ಶಿವಶರಣರು ಉಲ್ಲೇಖಿಸಲ್ಪಟ್ಟಿರುವರೋ ಹೇಗೆಂಬುದನ್ನೂ ಅವುಗಳಲ್ಲಿ ವೀರಶೈವ ಸಮಾಜದ ಬಗ್ಗೆ ಉಲ್ಲೇಖಗಳು ಬಂದಿವೆಯೋ ಇಲ್ಲವೇ ಎಂಬುದನ್ನೂ ನಿರೀಕ್ಷಿಸುವದು ಎಷ್ಟು ಅವಶ್ಯವಾದುದೆಂಬದು ವಾಚಕರಿಗೆ ತಿಳಿಯದೆ ಇರದು. ನಾವು ಈ ವರೆಗೆ ಅನೇಕ ಶಿಲಾಶಾಸನಗಳಲ್ಲಿ ಅಂದರೆ ಅರ್ಜುನವಾಡ, ಚೌಡದಾನಪೂರ, ಪುಳುಜ, ಅಬ್ಬಲೂರ, ಸಂಗೂರ, ಗೊಬ್ಬೂರು ಈ ಗ್ರಾಮಗಳಲ್ಲಿರುವವುಗಳ ಮೇಲಿಂದ ಬಸವ, ಸಿದ್ಧರಾಮ, ದೇವರದಾಸಿಮಯ್ಯ, ಅಮುಗಿದೇವ ಮೊದಲಾದ ಶಿವಶರಣರು ಐತಿಹಾಸಿಕ ಪುರುಷರೆಂದು ಸಿದ್ಧಮಾಡಿರುವುದು ಶಿವಾನುಭವ ಪತ್ರಿಕೆಯ ವಾಚಕರ ಸ್ಮರಣೆಯಲ್ಲಿರಬಹುದು. ಆದರೆ ವೀರಶೈವ ಈ ಹೆಸರು ಮಾತ್ರ ಶಿಲಾಶಾಸನಗಳಲ್ಲಿ ನಮಗೆ ಈ ವರೆಗೂ ದೊರೆತಿಲ್ಲ. ಒಂದು ವೇಳೆ ಇಂಥವುಗಳು ಎಲ್ಲಾದರೂ ಇದ್ದರೂ ಇರಬಹುದು. ಆದರೆ ಅವು ಇನ್ನೂ ಶೋಧಿಸಲ್ಪಟ್ಟಿಲ್ಲ. ಆದರೆ ವೀರಶೈವಪರ ಶಿಲಾಶಾಸನಗಳಲ್ಲಿ ವೀರಶೈವ ಎಂಬ ಶಬ್ದದ ಬದಲು ಶಿವಭಕ್ತಿಯುಳ್ಳವರು ಎಂಬರ್ಥವುಳ್ಳ ಶಬ್ದಗಳು ಪದೇಪದೇ ಬರುವದರಿಂದ ವೀರಶೈವರು ಹಿಂದಿನ ಕಾಲದಲ್ಲಿ ಅದರಂತೆಯೇ ಜನಸಾಮಾನ್ಯರಲ್ಲಿ ಕರೆಯಲ್ಪಡುತ್ತಿರಬಹುದೆಂದು ನಾವು ಈ ವರೆಗೂ ಊಹಿಸುತ್ತ ಬಂದಿದ್ದೇವೆ. ಒಂದು ವೇಳೆ ವೀರಶೈವ ಶಬ್ದವು ಆಗ ಉಪಯೋಗಿಸಲ್ಪಡುತ್ತಿದ್ದರೂ ಅದು ರೂಢಿಯಲ್ಲಿ ಹೆಚ್ಚಾಗಿ ಇರಲಿಕ್ಕಿಲ್ಲ. ಒಂದು ವೇಳೆ ಈ ಕಾಲದಲ್ಲಿ ವೀರಶೈವರು ಶೈವರೆಂದು ಅಥವಾ ಶಿವಸಮಯದವರೆಂದು ಹೆಚ್ಚಾಗಿ ಜನರೂಢಿಯಲ್ಲಿ ಕರೆಯಲ್ಪಡುತ್ತಾ ಇದ್ದರೆ ಇದಕ್ಕನುಸರಿಸಿ ಆಗ ಉತ್ಪನ್ನವಾದ ಅನೇಕ ಶೈವ ಶಿಲಾಶಾಸನಗಳೂ ಶೈವ ರಾಜರೂ ವೀರಶೈವ ಸಮಾಜಕ್ಕೇನೇ ಸಂಬಂಧವುಳ್ಳವರಿರುತ್ತಾರೆಂದು ನಾವು ತಿಳಿಯಬೇಕಾಗುತ್ತದೆ. ೧೨ನೇ ೧೩ನೇ ಶತಮಾನಗಳಲ್ಲಿ ಗುತ್ತಲದ ಗುತ್ತರಸರು, ಹಾಗೆಯೇ ಶಿವಮೊಗ್ಗಾ ಮತ್ತು ಚಿತ್ರಕಲ್‌ದುರ್ಗ ಜಿಲ್ಲೆಗಳಲ್ಲಿ ಆಳುತ್ತಿದ್ದ ಸಾಂತರರು ಮತ್ತು ನೋಣಂಬ ಪಲ್ಲವರು ಅನೇಕ ಶೈವಶಾಸನಗಳನ್ನು ಮಾಡಿಸಿದ್ದು ಅವರೆಲ್ಲರೂ ಈ ಕಾಲಕ್ಕೆ ವೀರಶೈವ ಧರ್ಮಕ್ಕೆ ಹೊಂದಿದವರಾಗಿದ್ದರೆಂದು ಕಂಡುಬರುತ್ತದೆ. ಹೀಗೆ ತಿಳಿಯಲು ಸ್ವತಂತ್ರ ಆಧಾರಗಳೂ ಇವೆ. ಇವುಗಳನ್ನು ನಾವು ಕ್ರಮಶಃ ವಿವೇಚಿಸುವೆವು. ಆದ್ದರಿಂದ ವೀರಶೈವರು ಪೂರ್ವದಲ್ಲಿ ಆವ ಹೆಸರಿನಿಂದ ಕರೆಯಲ್ಪಡುತ್ತಿದ್ದರೆಂಬುದನ್ನು ದೃಢಪಡಿಸುವದು ವೀರಶೈವ ಇತಿಹಾಸವನ್ನು ಬರೆಯುವಲ್ಲಿ ಎಷ್ಟು ಅಗತ್ಯವಾದುದೆಂಬದು ವಾಚಕರ ನಿದರ್ಶನಕ್ಕೆ ಬಾರದೆ ಇರಲಾರದು.



ಹರಿಹರ ಕವಿಯು ವೀರಶೈವ ಗ್ರಂಥಕಾರರಲ್ಲಿ ಬಹಳ ಮೊದಲಿನವನು. ಆದ್ದರಿಂದ ಅವನು ತನ್ನ ಗ್ರಂಥಗಳಲ್ಲಿ ವೀರಶೈವರನ್ನು ಹೇಗೆ ಕರೆದಿರುವನೆಂಬದನ್ನು ಪರೀಕ್ಷಿಸುವದು ಬಹು ಮಹತ್ವದ್ದಾಗಿದೆ. ನಾವು ಈ ವರೆಗೆ ಅವನ ಅನೇಕ ರಗಳೆಗಳನ್ನು ಪ್ರಸಿದ್ಧಪಡಿಸಿದ್ದೇವೆ. ಅವುಗಳಲ್ಲಿ ಕೆಲವು ವೀರಶೈವರಲ್ಲದ ಪುರಾತನರಿಗೆ ಸಂಬಂಧಪಟ್ಟವಿವೆ. ಬೇರೆ ಕೆಲವುಗಳು ಪೂರ್ಣ ವೀರಶೈವರಾದ ಬಸವ, ಪ್ರಭುದೇವ, ಮಹಾದೇವಿಯಕ್ಕ, ಹಾವಿನಹಾಳ ಕಲ್ಲಿದೇವ, ಈ ಮೊದಲಾದವರವು ಇರುತ್ತವೆ. ಆದರೆ ಇವುಗಳಲ್ಲಿ ಯಾವ ರಗಳೆಯಲ್ಲಿಯೂ ಕೂಡ ಹರಿಹರನು 'ವೀರಶೈವ' ಎಂಬ ಶಬ್ದವನ್ನು ಉಪಯೋಗಿಸಿದ್ದು ಕಂಡುಬರುವದಿಲ್ಲ. ಆದರೆ ನಾವು ಇಷ್ಟಕ್ಕೆ ನಿಲ್ಲದೆ ಆ ಶಬ್ದದ ಬದಲು ಯಾವ ಶಬ್ದಗಳನ್ನು ಅವನು ತನ್ನ ಗ್ರಂಥಗಳಲ್ಲಿ ಉಪಯೋಗಿಸಿದ್ದಾನೆಂಬುದನ್ನು ಈ ಲೇಖದಲ್ಲಿ ವಿವೇಚಿಸಲು ಎಣಿಸಿದ್ದೇವೆ.

ಇದರಲ್ಲಿ ನಾವು ಮೊದಲು ಬಸವೇಶ್ವರನ ರಗಳೆಯನ್ನು ತೆಗೆದುಕೊಳ್ಳುವೆವು. ಈ ರಗಳೆಯನ್ನು ದಿವಂಗತರಾದ ಟಿ. ಎಸ್. ವೆಂಕಣ್ಣ

ಯ್ಯನವರು 'ಬಸವರಾಜದೇವರ ರಗಳೆ' ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ.

ಈ ವಿಷಯ ವಿವೇಚನೆಯ ಪೂರ್ವದಲ್ಲಿ ಹರಿಹರನು ಈ ರಗಳೆಯನ್ನು ರಚಿಸುವಲ್ಲಿ ಅವನು ಬಸವನು ಪೂರ್ಣ ವೀರಶೈವನೆಂದು ಭಾವಿಸಿ ಬರೆದಿರುವನೋ ಹೇಗೆಂಬುದನ್ನು ಮೊದಲು ದೃಢಪಡಿಸುವದು ಅವಶ್ಯವಾಗಿರುತ್ತದೆ. ಬಸವನ ಬಗ್ಗೆ ಅತ್ಯಂತ ಭಕ್ತಿಭಾವವನ್ನು ತಾಳಿ ಈ ಕವಿತೆಯನ್ನು ಅವನು ಬರೆದಿರುವನಾದ್ದರಿಂದ ಅವನಲ್ಲಿ ಈ ಬಗ್ಗೆ ಯಾವ ದುರುದ್ದೇಶವೂ ಇರಲು ಶಕ್ಯವಿಲ್ಲ.

ಬಸವನು ಲಿಂಗಧಾರಕನಾಗಿದ್ದನೆಂದು ಈ ರಗಳೆಯ ಅನೇಕ ಕಡೆಗಳಲ್ಲಿ ಉಲ್ಲೇಖಿಸಲ್ಪಟ್ಟಿರುತ್ತದೆ. ಅವುಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ಉದಹರಿಸುತ್ತೇವೆ. ಪುಟ ೩೭ರಲ್ಲಿರುವ ಗದ್ಯದಲ್ಲಿ ಹೇಳಿರುವದೇನಂದರೆ- "ಬೆಳೆದ ಸಣ್ಣ ಮಕ್ಕ ನುಣ್ಣೆಸಳನೊಂದಂ ತೆಗೆದು ಬಸವರಾಜನ ಕೈಯ್ಯೊಳು ಕುಡೆ ಲೇಸೆನುತ್ತೀಸಿಗೊಂಡು ತನ್ನ ಕಕ್ಷ ಪುಟದೊಳಗಣ ರನ್ನದ ಸಜ್ಜೆಯಂ ತೆಗೆದು ಒಳಗಣ ಸಂಗಮೇಶ್ವರ ಲಿಂಗಕ್ಕೆ ಕೊಟ್ಟು ಹಿಂಗದಿರ್ದಲ್ಲಿ" ಎಂದು ಇದೆ. ಮುಂದೆ ಅದೇ ಪುಟದಲ್ಲಿ- "ಕಲ ಬಲದ ಸಹಸ್ರ ಮಾಹೇಶ್ವರರ ಕಕ್ಷ ಪುಟದ ಸಜ್ಜೆಗಳನುಪ್ಪರಿಸೆ" ಎಂದು ಇರುತ್ತದೆ. ಮುಂದೆ ೫೮ ನೇ ಪುಟದಲ್ಲಿ

"ಬಸವಭಾವಂ ಬಲಿದು ಮುನ್ನವೇ ಸಜ್ಜೆಯೊಳು
ಎಸೆವ ಲಿಂಗಂಗಳಾಗುತ್ತಮಿರೆ ಸಜ್ಜೆಯೊಳು"

ಎಂದಿರುತ್ತದೆ. ಈ ತರದ ಇನ್ನೂ ಅನೇಕ ಉಕ್ತಿಗಳಿದ್ದು ಅವೆಲ್ಲವೂ ಲಿಂಗಧಾರಣ ಭಾವ ಬೋಧಕವಾಗಿರುತ್ತವೆ. ೫೯ ನೇ ಪುಟದಲ್ಲಿ ವೇಧಾ ದೀಕ್ಷೆಯ ಉಲ್ಲೇಖವು ಇರುತ್ತದೆ. ಈ ದೀಕ್ಷೆಯು ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಲಿಂಗಧಾರಣಕ್ಕೆ ಮೂಲವಾಗಿರುತ್ತದೆ. ಷಟ್‌ಸ್ಥಲ ಬೋಧಕವಾದ ಅನೇಕ ವಿಚಾರ ಸಂದರ್ಭಗಳು ಈ ರಗಳೆಯಲ್ಲಿ ಬಂದಿರುತ್ತವೆ. ೧೯ನೇ ಪುಟದಲ್ಲಿ ಹೇಳಿರುವದೇನಂದರೆ:-

"ಲಿಂಗ ಜಂಗಮವೊ ಮೇಣ್ ಜಂಗಮವೇ ಲಿಂಗವೋ
ಲಿಂಗ ಜಂಗಮವೆರಡು ಇಳೆಯೊಳು ವಿಭೇದವೋ



ಎಂಬಂತೆ ಸಾತ್ವಿಕ ಪ್ರಭು ಪೂಜಿಸುತ್ತಮಿರೆ"

ಎಂದು ಹೇಳಿದ್ದರಲ್ಲಿ ಗುರುಲಿಂಗ ಜಂಗಮಗಳಲ್ಲಿ ಭೇದ ರಾಹಿತ್ಯವು ಹೇಳಲ್ಪಟ್ಟಿದರ ಮೇಲಿಂದ ವೀರಶೈವ ಧರ್ಮದ ವೈಶಿಷ್ಟ್ಯವಾದ ಒಂದು ಬಗೆ ಪೂಜಾ ಪದ್ಧತಿಯು ಇಲ್ಲಿ ವಿವರಿಸಲ್ಪಟ್ಟಿದೆ. ವೀರಶೈವರ ಅಷ್ಟಾವರಣಗಳ ವಿಶಿಷ್ಟ ಆಚರಣೆಗಳಲ್ಲಿ ಪಾದೋದಕ ಪ್ರಸಾದಗಳ ಮಹತ್ವವು ಬಹಳವಿದೆ. ಇವುಗಳ ವಿವರಣೆಗಳು ಪುಟ ೧೮ ಮತ್ತು ೫೬ ಇವುಗಳಲ್ಲಿ ಬಂದಿವೆ.

ಹರಿಹರನು ತನ್ನ ರಗಳೆಯ ಕೆಲವು ಸ್ಥಳಗಳಲ್ಲಿ ಬಸವಣ್ಣನ ವಚನಗಳನ್ನು ಸಹ ಉದಹರಿಸಿದ್ದು ಬಹು ಮಹತ್ವವಾದದ್ದು. ಪುಟ ೮೩ರಲ್ಲಿ ಹೇಳಲ್ಪಟ್ಟಿರುವದೇನಂದರೆ "ಕಟ್ಟಿದೆ ನೊರೆಯ ಬಿಟ್ಟೆ ಚನ್ನಿಗೆಯಂ ಓಡದಿರೋಡದಿರು. ಶರಣರ ಮನೆಯ ಬಿರುದನಂಕಕ್ಕೆ ಹಿಮ್ಮೆಟ್ಟಿದಿರೆಲೆ ದೇವ, ಎಲೆ ತಂದೆ ಎಲೆಲೆ ಹಂದೆ ಕೂಡಲಸಂಗ, ಸ್ವಯವಾಗು ಸ್ವಯವಾಗು ಎಂಬ ಗೀತದ" ಎಂದಿದೆ.

೮೪ ನೇ ಪುಟದಲ್ಲಿ "ಎಲೆ ಬಸವ ಬೇಡಿದುದ ಶರಣಾರ್ಗಿಲ್ಲೆನ್ನದೀವೆನೆಂಬ ಗೀತದೊಳಗಣ ಬಿಂಕದ ಬಿರುದಂ ಕೇಳ್ದು" ಎಂದಿದೆ.

ಪುಟ ೮೮ರಲ್ಲಿ "ಎಲೆಲೆ ಕಾಡಿ ಕಾಡಲಮ್ಮದ ತಂದೆ, ನೀಂ ಕೇಳು. ಬೇಡಿ ಬೇಡಲಮ್ಮದ ಹಂದೆ, ನೀಂ ಕೇಳು. ಕೂಡಿ ಕೂಡಲಮ್ಮದ ಜಾತಿಯೆ ನೀಂ ಕೇಳು ಎಂದು ಗೀತಮಂ ಪಾಡಿ" ಎಂದಿರುತ್ತದೆ.

ಹರಿಹರನು ವಚನಗಳಿಗೆ ಗೀತವೆಂದು ಹೇಳಿ ಅವುಗಳಲ್ಲಿ ಕೆಲವನ್ನು ಇಲ್ಲಿ ಉದಹರಿಸಿದ್ದಾನೆ. ಇವೆಲ್ಲವೂ ಬಸವೇಶ್ವರನ ವಚನಗಳಿರುತ್ತವೆ. ಹರಿಹರನು ವಚನಗಳನ್ನು ಅತ್ಯಂತ ಆದರಿಸುತ್ತಿದ್ದನೆಂಬುದು ಪುಟ ೬೬ರಲ್ಲಿಯ ಕೆಳಗಿನ ಪದ್ಯಗಳಿಂದ ಬಹು ಚೆನ್ನಾಗಿ ತಿಳಿದು ಬರುತ್ತಿದೆ.

ಗೀತಂ ಸಂಗಸ್ತುತಿ ಸಂ
ಗೀತಂ ಗೀಶಂ ವಿಶಾಲ ವಸುಧಾಪೂತಂ ।
ಗೀತಂ ಶರಣರ ಗಣವಿ
ಖ್ಯಾತಂ ಸಂಪ್ರೀತಿಯಾದ ಗೀತಂ ನೂತಂ ॥

ಗೀತಂ ವೇದಾಂತಾರ್ಥ
ವ್ರಾತಂ ಗೀತಂ ಸಮಸ್ತ ಶಾಸ್ತ್ರೋಪೇತಂ।
ಗೀತಂ ಸಕಳಾಗಮಾಕುಳ
ಜಾತಂ ಗೀತಂ ಪರಾಪಸೈಕ ಸಮೇತಂ॥

ಎಂದು ವಚನಗಳ ಮಹತ್ವವನ್ನು ಹರಿಹರನು ಬಹಳ ಸುಂದರವಾದ ತೆರದಿಂದ ಇಲ್ಲಿ ಹೊಗಳಿದ್ದಾನೆ. ಇವುಗಳಲ್ಲಿ ಎರಡನೆಯ ಪದ್ಯದಲ್ಲಿ ವಚನಗಳು ವೇದಾಂತಾರ್ಥವನ್ನು ಹೇಳುವಂಥವೂ, ಶಾಸ್ತ್ರಾರ್ಥಗಳಿಂದ ತುಂಬಿದವುಗಳೂ ಸಕಲಾಗಮಗಳಿಂದ ಉದಯಿಸಿದವುಗಳೂ, ಪಾರಮಾರ್ಥವನ್ನು ಕೊಡುವಂಥವೂ ಎಂದು ಅವುಗಳನ್ನು ಬಣ್ಣಿಸಿದ್ದಾನೆ.

ಇದರಿಂದ ಹರಿಹರನ ಕಾಲದಲ್ಲಿ ವಚನ ಗ್ರಂಥಗಳು ಅಸ್ತಿತ್ವದಲ್ಲಿದ್ದವೆಂತಲೂ, ಅವುಗಳ ಮಹತ್ವವು ಜನರಲ್ಲಿ ವಿಶೇಷವಾಗಿದ್ದಿತೆಂತಲೂ ಕಂಡು ಬರುತ್ತದೆ.

ಮೇಲಿನ ಎಲ್ಲ ಸಂಗತಿಗಳನ್ನು ನಾವು ಅವಲೋಕಿಸಲಾಗಿ ಬಸವರಾಜ ದೇವರ ರಗಳೆಯು ಕೇವಲ ವೀರಶೈವ ಪರವಾಗಿದೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಇದರಲ್ಲಿ ವೀರಶೈವರು ಆವ ಹೆಸರಿನಿಂದ ಕರೆಯಲ್ಪಟ್ಟಿದ್ದಾರೆಂಬದನ್ನು ನೋಡುವದು ಬಹು ಮಹತ್ವದ್ದಿದೆ.

ಇದರಲ್ಲಿ ನಾವು ಲಕ್ಷಿಸತಕ್ಕ ಸಂಗತಿ ಏನಂದರೆ ಜಂಗಮ, ಶರಣ, ಶಿವಶರಣ, ಮಾಹೇಶ್ವರ, ಚರ, ಶಿವಯೋಗಿ, ಭಕ್ತ, ಶಿವಭಕ್ತ ಎಂಬ ಶಬ್ದಗಳು ಇಡೀ ಗ್ರಂಥದಲ್ಲಿ ಪದೇ ಪದೇ ಬರುತ್ತವೆ. ಈ ಶಬ್ದಗಳಿಲ್ಲದ ಪುಟಗಳ ಸಂಖ್ಯೆಯೇ ಅತ್ಯಲ್ಪವಾಗಿವೆಂದು ಹೇಳಿದಲ್ಲಿ ಅತ್ಯುಕ್ತಿಯಾಗಲಾರದು. ಆದ್ದರಿಂದ ಅವುಗಳುಳ್ಳ ವಾಕ್ಯಗಳನ್ನು ಇಲ್ಲಿ ಉದಹರಿಸಿ ವಾಚಕರನ್ನು ಬೇಸರಗೊಳಿಸುವದಿಲ್ಲ. ಅವಶ್ಯತೋರಿದರೆ, ಅವರು ಮೂಲ ಗ್ರಂಥವನ್ನೇ ನೋಡಬೇಕು. ಪುಟ ೬೪ ರಲ್ಲಿ 'ಒಡೆಯರು' ಎಂಬ ಶಬ್ದವು ಜಂಗಮರಿಗೋಸ್ಕರ ಉಪಯೋಗಿಸಲ್ಪಟ್ಟಿರುತ್ತದೆ.



ಪುಟ ೨೪ ರಲ್ಲಿ ಹೇಳಲ್ಪಟ್ಟಿರುವದೇನಂದರೆ " ಸಂಗನ ಬಸವಂ... ......ಶೈವ ಸಾಮ್ರಾಜ್ಯ ಪೂಜ್ಯನಾಗಿ" ಎಂದು ಬಸವನ ವರ್ಣನೆ ಇದೆ. ಇಲ್ಲಿ ಶೈವ ಸಾಮ್ರಾಜ್ಯದಿಂದ ಪೂಜಿಸಲ್ಪಟ್ಟವನೆಂದು ಅವನು ಹೇಳಲ್ಪಟ್ಟಿದ್ದಾನೆ. ವೀರಶೈವ ಶಬ್ದವಿಲ್ಲ.

ಅದೇ ಪುಟದಲ್ಲಿ " ಗುರುಲಿಂಗ ಶ್ರೀಚರಣ ನಖ ಮಯೂಖ ಚಂದ್ರಿಕಾ ಚಕೋರಾಯಮಾನಂ ಶೈವಾನುರಾಗ ಸಂಪತ್ಸುಖ ತರಂಗಿಣೀ ನಿಮಗ್ನ ಚಿತ್ತಂ" ಎಂದು ಬಸವೇಶ್ವರನು ವರ್ಣಿಸಲ್ಪಟ್ಟಿದ್ದಾನೆ. ಇಲ್ಲಿಯೂ ವೀರಶೈವದ ಬದಲು ಶೈವ ಶಬ್ದವು ಉಪಯೋಗಿಸಲ್ಪಟ್ಟಿದೆ.

೫೧ ನೇ ಪುಟದಲ್ಲಿ ಹರಿಹರನು ಬಸವನ ನಿಯಮಗಳನ್ನು ಹೇಳುವಲ್ಲಿ " ಶಿವಲಿಂಗಾರ್ಪಿತ ವಲ್ಲದುದನಾಘ್ರಾಣಿಸೆ, ನೋಡೆ, ನುಡಿಯೆ, ಮುಟ್ಟೆ, ಕೇಳೆ. ಶಿವ ಸಮಯವನುದ್ಧರಿಸುವೆ. ಪರಸಮಯವಂ ಸಂಹರಿಸುವೆ" ಎಂದಿದೆ. ಇಲ್ಲಿ ಶಿವ ಸಮಯವೆಂದು ಹೇಳಿದೆ.

ಪುಟ ೮೨ ರಲ್ಲಿ ಬಸವರಾಜನು ವರ್ಣಿಸಲ್ಪಟ್ಟಿರುವದೇನಂದರೆ " ಸಂಗಮೇಶ್ವರ ಶ್ರೀಪಾದ ಪಂಕಜ ನಿರಂತರ ಸೇವನಾ ಜನಿತ ಸುಖರಸ ಭರಿತ ಶುದ್ಧ ಶೈವ ಸರೋನಿಧಿ ತರಂಗ ಮಾಲಾ ನಿಮಗ್ನ ಚಿತ್ತನಾಗಿರ್ದಂ" ಎಂದು ಹೇಳಲ್ಪಟ್ಟಿದ್ದಾನೆ. ಇಲ್ಲಿಯೂ ಬಸವನು ಶುದ್ಧ ಶೈವ ಸರೋನಿಧಿಯೆಂದು ಕರೆಯಲ್ಪಟ್ಟಿದ್ದಾನೆ. ಶುದ್ಧ ಶೈವ ಈ ಶಬ್ದದ ಬದಲು ವೀರಶೈವ ಎಂಬ ಶಬ್ದವನ್ನು ಉಪಯೋಗ ಮಾಡಬಹುದಾಗಿತ್ತು. ಈ ಅವತರಣಿಕೆಗಳ ಮೇಲಿಂದ ಹರಿಹರನ ಕಾಲದಲ್ಲಿ ವೀರಶೈವರು ಶೈವರೆಂತಲೂ, ಶಿವ ಸಮಯದವರೆಂತಲೂ, ಶುದ್ಧ ಶೈವರೆಂತಲೂ ಹೇಳಲ್ಪಡುತ್ತಿದ್ದ ಹಾಗೆ ಕಂಡು ಬರುತ್ತಿದೆ. ಅದರಂತೆಯೇ ಅವರು ಭಕ್ತರು ಶಿವಭಕ್ತರು ಎಂತಲೂ ಕರೆಯಲ್ಪಡುತ್ತಿರಬೇಕು.

ಆದರೆ ಅವರಲ್ಲಿ ವಿಶೇಷ ಜ್ಞಾನವುಳ್ಳವರು, ಶರಣರು, ಮಹೇಶ್ವರರು, ಒಡೆಯರು, ಚರರು, ಜಂಗಮರು, ಶಿವಯೋಗಿಗಳು, ಎಂದು ಕರೆಯಲ್ಪಡುತ್ತಿರಬೇಕು. ಆದರೆ ವೀರಶೈವ ಎಂಬ ಶಬ್ದವನ್ನು ಈ ಸಂದರ್ಭಗಳಲ್ಲಿ ಉಪಯೋಗಿಸಲಿಕ್ಕೆ ಬರುವಂತಿದ್ದರೂ ಕೂಡ ಹರಿಹರನು ಅದನ್ನುಪಯೋಗಿಸಿಲ್ಲ.

ಹರಿಹರನು ತನ್ನ ರಗಳೆಯಲ್ಲಿ ಬಸವನನ್ನು ಹೇಗೆ ಶೈವನೆಂದು ಹೇಳಿರುವನೋ ಹಾಗೆಯೇ ಶಂಕರದಾಸಿಮಯ್ಯ, ದೇವರ ದಾಸಿಮಯ್ಯ, ರೇವಣ ಸಿದ್ಧ ಇವರೂ ಕೂಡ ಶೈವರೆಂದು ಕರೆದಿದ್ದಾನೆ. ಇಷ್ಟರಿಂದಲೇ ಇವರೆಲ್ಲರೂ ಹರಿಹರನ ದೃಷ್ಟಿಯಿಂದ ವೀರಶೈವರಿದ್ದಿಲ್ಲವೆಂದು ಹೇಳಲಿಕ್ಕೆ ಬರಲಾರದು.

---

## ಬೇಸಗೆ.

ಕಾಡುಗಲ್ಲು ಬೆಮರುವಂತೆ।
ನೋಡಲೆಲ್ಲ ಕರುಗುವಂತೆ।
ಆಡುತಿಹನು ರವಿಯು ಗಗನದಂಗಳದಲ್ಲಿಯೇ॥
ನಡೆಯುತಿಹನು ಹುಡುಗನಂತೆ ಬೈಲಿನಲ್ಲಿಯೇ ॥೧॥

ಏನುಹಗಲು? ಉಲಿವೆಇಲ್ಲ।
ಏನು ಇರುಳು? ಬೇಸರಿಲ್ಲ।
ಹೊತ್ತು ಮುಳುಗೆ, ಸತ್ತು ಸತ್ತು ಉಳಿದೆವೆಂಬರು॥
ಮುತ್ತಿನಂಥ ತಾರೆಗಳನು ನೋಡಿ ನಲಿವರು ॥೨॥

ಕುಸುರುಗೆತ್ತಿನಂಥ ಚಿಗುರು।
ಹಸುರು, ಹಚ್ಚದಂಥ ಮೊಗರು।
ನೊಸಲು ಬೆಮರ ಮುತ್ತಿನಿಂದ ಬೆರಗುಗೊಳಿಪುದು॥
ಬಿಸಿಲು ಬೆಳ್ಳಿವಾಸಿನಂತೆ ಮಿರುಗುತಿರ್ಪುದು ॥೩॥

ಅಡವಿಯೆಲ್ಲ ಕಾಳನಂತೆ।
ಗಿಡಗಳೆಲ್ಲ ದೈನ್ಯರಂತೆ।
ಬಿಸಿಲಿನಲ್ಲಿ ಬಿದ್ದು-ನಿಂತು ತಪಿಸುತಿರುವವು॥
ಮಿಸುಕಿ ಮಿಸುಕಿ ಶಾಂತಿಜಲಕೆ ಬಾಯ ಬಿಡುವವು ॥೪॥

—ಭರತ.

## ಒಂದು ಬಿನ್ನಹ.

ಶ್ರೀಮಾನ್ ಮಲ್ಲಿಕಾರ್ಜುನ ದೇಶಿಕರು ಮೈಲೇಶ್ವರ ಹುಬ್ಬಳ್ಳಿ ಇವರು ಶಿವಾನುಭವ ಸಂ ೧೪ ಸಂ. ೪ (ಜನವರಿ ೧೯೪೦) ರಲ್ಲಿ ವೀರಶೈವರ ಪೂರ್ವದ ಹೆಸರು ಯಾವುದು' ಎಂಬ ಲೇಖನವನ್ನು ಪ್ರಕಟಿಸಿರುವುದು ಸರಿಯಷ್ಟೆ! ಅವರು ತಮ್ಮ ಲೇಖದ ಕಡೆಯಲ್ಲಿ ಶ್ರೀ ಸಿದ್ಧಗಂಗಾ ಕ್ಷೇತ್ರದ ಇತಿಹಾಸದಲ್ಲಿನ ಒಂದು ದೋಷವನ್ನು ನಿರ್ದೇಶಿಸಿ ನಮಗೆ ತುಂಬಾ ಉಪಕಾರ ಮಾಡಿದ್ದಾರೆ. ಅದರಲ್ಲಿ 'ನಿರಂಜನವಂಶ ರತ್ನಾಕರ ಪುಟ ೨೬ರಲ್ಲಿ ಶ್ರೀ ಗೋಸಲ ಸಿದ್ಧೇಶ್ವರ ಸ್ವಾಮಿಗಳ ವಿಷಯವನ್ನು ಸಂಗ್ರಹಿಸಿ ಹೇಳುವಲ್ಲಿ 'ಅಯ್ಯಾವಳ್ಳಿ ಪುರಾಧೀಶ್ವರನಾದ ಪಂಚವಕ್ತ್ರಗಣೇಶ್ವರನಿಂದ ಲಿಂಗಧಾರಣೆ (ವೀರಶೈವ ದೀಕ್ಷೆ) ಯನ್ನು ಹೊಂದಿದ ಅವನ ವಂಶೀಯರು ಶ್ರೀಯುವರಿಗೆ' ಎಂಬುದಕ್ಕೆ ಬದಲಾಗಿ 'ಇವರು ಅಯ್ಯನಹಳ್ಳಿ ಪುರಾಧೀಶ್ವರನಾದ ಪಂಚವಕ್ತ್ರ ಗಣೇಶ್ವರನಿಗೆ ಲಿಂಗಧಾರಣೆಯನ್ನು ಮಾಡಿದ್ದರಿಂದ ಅವನ ವಂಶೀಯರು' ಎಂದು ಪ್ರಮಾದವಶಾತ್ ಅಭಿಪ್ರಾಯಭೇದವು ಬರುವಂತೆ ಪ್ರಕಟವಾಗಿರುವುದು ತುಂಬಾ ವಿಷಾದಕರವಾಗಿದೆ. ಪ್ರಿಯ ಮಿತ್ರರಾದ ಶ್ರೀಮಾನ್ ದೇಶಿಕರು ಅದನ್ನು ಸೂಚಿಸಿರುವುದಕ್ಕಾಗಿ ಕೃತಜ್ಞನಾಗಿರುತ್ತೇನೆ.

ಐತಿಹಾಸಿಕ ವಿಮರ್ಶೆಯಲ್ಲಿ ವಿವಾದಗಳಿರುವುದು ಅನಿವಾರ್ಯ. ಅವು ವೈಜ್ಞಾನಿಕ ಶೋಧಗಳಂತೆ ಮುಂದೆ ಆಗಲಿರುವ ಸಿದ್ಧಾಂತಗಳನ್ನು ಕುರಿತು ಇಂದಿನ ಸಿದ್ಧಾಂತಗಳು ವೈಕಲ್ಪಗಳೆಂಬುದನ್ನು ನಾವು ಮರೆಯಬಾರದು. ಆದುದರಿಂದ 'ಇದಮಿತ್ಥಂ' ಎಂದು ನಿರ್ಣಯಿಸುವುದು ಸಾಹಸದ ಕೆಲಸ. ಪ್ರಕೃತ ನನ್ನ ಲೇಖದಲ್ಲಿ ಅಂತಹ ಯಾವ ಸಿದ್ಧಾಂತವನ್ನೂ ಮಾಡಲುಜ್ಜುಗಿಸಿರುವುದಿಲ್ಲ. 'ಅಯ್ಯನಹಳ್ಳಿ ಅಥವಾ ಅಯ್ಯವಳ್ಳಿ, ಇಲ್ಲವೆ ಪಟ್ಟದಕಲ್ಲು ಅಯ್ಯವಳ್ಳಿ'ಯ ವಿಷಯದಲ್ಲಿ ಮೀಮಾಂಸೆಯನ್ನು ಮಾಡುವುದು ಸಿದ್ಧಗಂಗಾ ಕ್ಷೇತ್ರದ ಇತಿಹಾಸವನ್ನು ಬರೆಯುವ ನಮಗೆ ಪ್ರಕೃತವೆಂದಾಗಲೀ ಉಚಿತವೆಂದಾಗಲೀ ತೋರುವುದಿಲ್ಲ. ಅವರು 'ಅಯ್ಯವಳ್ಳಿಯ' ಮೀಮಾಂಸೆಯನ್ನು ಮಾಡುತ್ತಾ

'ಲೇಖಕರು ಅಯ್ಯನ ಹಳ್ಳಿ ಎಂದು ಬರೆದಿರುವರು. ನಿರಂಜನ ವಂಶಾ ವಳಿಯಲ್ಲಿ ಹೋಗಿದಿಯೇ? ಪಟ್ಟದಕಲ್ಲು ಅಯ್ಯಾವಳ್ಳಿ ಮತ್ತು ಅಯ್ಯನ ಹಳ್ಳಿ ಇವೆರಡು ಒಂದೇ ಗ್ರಾಮಗಳೆ? ಹೂವಿನಹಡಗಲಿ ತಾಲ್ಲೂಕ ಪೈಕಿ ಅಯ್ಯನಹಳ್ಳಿ, ಹಂಪನಹಳ್ಳಿ ತಾಲೂಕ ಪೈಕಿ ಅಯ್ಯನಹಳ್ಳಿ, ಚಿತ್ರದುರ್ಗ ಜಿಲ್ಲಾ ಪೈಕಿ ಅಯ್ಯನಹಳ್ಳಿ ಹೀಗೆ ಅಯ್ಯನಹಳ್ಳಿಗಳು ಹಲವಿದ್ದು ಮುಂದೆ ಇತಿಹಾಸದಲ್ಲಿ ಯಾವ ಗ್ರಾಮವೆಂದು ತಿಳಿಯ ಬೇಕು? ನಿಜವಿದ್ದ ಪಟ್ಟದಕಲ್ಲು ಐವಳ್ಳಿಯು ಹೋಗಿ ವಿವಾದ ಹುಟ್ಟ ಲಿಲ್ಲವೆ?' ಇತ್ಯಾದಿ ಪ್ರಶ್ನೆಗಳ ಮಳೆಯನ್ನೇ ಸುರಿಸಿ ತುಂಬಾ ಹಗರ ಣಕ್ಕೆ ಇಟ್ಟುಕೊಂಡಿದ್ದಾರೆ. ಇದರ ಔಚಿತ್ಯ .. (?) ವಾಚಕರೇ ಊಹಿಸಬೇಕು. ಮೂಲದಲ್ಲಿ 'ಅಯ್ಯಾವಳ್ಳಿಪುರಾಧೀಶ್ವರ ಪಂಚವಕ್ತ್ರ ಗಣೇಶ್ವರ" ಎಂದೇ ಇದೆ. ಲೇಖನವನ್ನು ಬರೆದವರ ಲೇಖವು ತಪ್ಪಿದೆ ಯೋ, ಒಪ್ಪಿದೆಯೋ ನೋಡಿ ಪ್ರಕಟಿಸಲಿ' ಎಂದು.........ಧ್ವನಿತವಾ ಗುವಂತೆ ಅವರ ಕಡೆಯ ವಾಕ್ಯದ ಧೋರಣೆಯಿಂದ ಅವರ ವಿಮರ್ಶ ನದ ಮನೋಧರ್ಮ... .. ಅರ್ಥವಾಗುವುದಿಲ್ಲ.

ಒಟ್ಟಿನಲ್ಲಿ ನಾವು ಅವರ ಲೇಖನದ ವಿಮರ್ಶೆಯನ್ನು ಮಾಡಲೂ ಬಯಸುವದಿಲ್ಲ. ಸೂಕ್ತವಾದ ಸಲಹೆಗಳಿಂದ ಕೂಡಿದ ವಿಮರ್ಶೆಯನ್ನು ಕಡೆಗಣಿಸುವ ಅಭಾಗಿಗಳು ಇರುವರೇ? ಲೇಖನದಲ್ಲಿನ ದೋಷಗಳನ್ನು ಸರಿಪಡಿಸಿ ಪ್ರತ್ಯೇಕವಾಗಿ ಪ್ರಕಟಮಾಡುವ ಯೋಜನೆಯಲ್ಲಿರುವ ನಮಗೆ ಮಾನ್ಯ ಮಿತ್ರರ ಸೂಚನೆಯು ನೆರವಾಗುವುದೆಂದು ಸಂತೋಷ ಪಡಬೇಕಾಗಿದೆ.

—ಎಂ. ಜಿ. ನಂಜುಂಡಾರಾಧ್ಯ.

# ಸತ್ಯಕ್ಕನ ವಚನಗಳು.

ವಚನಗಳು ೧

೧. ಆಗಿಯಲ್ಲಿ ದೇವಾ ನಿಮ್ಮನಾರುಬಲ್ಲರು? ವೇದಂಗಳು ಮುನ್ನತ್ತತ್ತಲರಿಯವು. ವೇದಿಗಳು ಪರಬ್ರಹ್ಮತೆಂದೆಂಬರು. ನಾದಬಿಂದು ಕಳಾತೀತನೆಂದೆಂಬರು. ಸಾಧುಸಜ್ಜನ ಭಕ್ತರಿಚ್ಚೆಗೆ ಬಂದೆಯಾಗಿ, ಈಗೀಗ ದೇವನಾದೆ ಶಂಭುಜಕ್ಕೇಶ್ವರಾ.

೨. ದೇವರದೇವ ನೀನೆಂದೆನಿಸಿಕೊಂಡೆ. ಬಾಣನಬಾಗಿಲ ಕಾಯ್ವ ರೇನಯ್ಯಾ? ನಿತ್ಯ ತೃಪ್ತ ನೀನೆಂದೆನಿಸಿಕೊಂಡೆ. ಚನ್ನಯ್ಯನ ಮನೆಯ ಉಂಬರೇನಯ್ಯಾ? ಕರುಣಾಕರ ನೀನೆನಿಸಿಕೊಂಡೆ. ಸಿರಿಯಾಳನ ಮಗನ ಬೇಡುವರೇನಯ್ಯಾ? ನಿಮ್ಮ ಮಹಿಮೆಯ ನೀವೇ ಬಲ್ಲಿರಿ ಎನ್ನ ನುದ್ಧರಿಸಯ್ಯ ಶಂಭುಜಕ್ಕೇಶ್ವರಾ.

೩. ಏಕೆನ್ನ ಬಾರದ ಭವಂಗಳಲ್ಲಿ ಬರಿಸಿದೆ? ಏಕೆನ್ನ ಘೋರ ಸಂಸಾರದಲ್ಲಿರಿಸಿದೆ? ಏಕೆನಗೆ ಕರುಣಿಸಲೊಲ್ಲದೆ ಕಾಡಿಹೆ ಹೇಳಾ? ಹೇಳಾ ಎನ್ನ ಲಿಂಗವೇ? ಆನು ಮಾಡಿದ ತಪ್ಪೇನು? ಸಾಕಲಾದುದೆಂದು ಒತ್ತಿ ನುಡಿದಡೆ, ಏಕೆ, ನಾ ನಿಮ್ಮ ಬಿಡುವೆ ಶಂಭುಜಕ್ಕೇಶ್ವರಾ?

೪ ಹಿರಿಯತನಕ್ಕೆ ಪಥವೇ ಬಾಣನ ಮನೆಯ ಬಾಗಿಲಕಾ ಯ್ವುದು? ಮಹಂತತನಕ್ಕೆ ಪಥವೇ ನಂಬಿಗೆ ಕುಂಟಣಿಯಾದುದು? ಕರುಣತನಕ್ಕೆ ಪಥವೇ ಸಿರಿಯಾಳನ ಮಗನ ಕೊಲ್ವುದು? ದಾನಿತನಕ್ಕೆ ಪಥವೇ ದಾಸನ ವಸ್ತ್ರವ ಸೀಳ್ವುದು? ನಿಮ್ಮ ಗುರುಪತನಕ್ಕಿದು ಪಥವೇ? ಶಿವಶಿವಾ ನಿಮ್ಮ ನಡೆವಲೆ. ಶಂಭುಜಕ್ಕೇಶ್ವರಾ ಅಲ್ಲಿದ್ದೋಡೇಕೆ ಶೃತಿಗಳ ಕೈಯಿಂದ ಅತ್ತತ್ತಲೆನಿಸಿಕೊಂಬೆ?

---

೧ ನಾವು ಹಿಂದೆ ಪ್ರಸ್ತಾವನೆಯಲ್ಲಿ ಸತ್ಯಕ್ಕನ ಗ್ರಾಮವಾದ ಜಂಬೂರು ಎಲ್ಲಿದೆಂಬದು ತಿಳಿದಿಲ್ಲೆಂದು ಉಲ್ಲೇಖಿಸಿದ್ದೇವೆ. ಆದರೆ ಈ ಜಂಬೂರು ಶಿವ ಮೊಗ್ಗೆ ಜಿಲ್ಲಾ ಶಿರಾಳಕೊಪ್ಪಕ್ಕೆ ಪೂರ್ವ ದಿಕ್ಕಿನಲ್ಲಿ ನಾಲ್ಕು ಮೈಲು ದೂರ ವಿರುವ ಹಿರೇ ಜಂಬೂರೇ ಇರುತ್ತದೆ. ಇಲ್ಲಿ ಅಕೆಯ ಗುಡಿಯೂ ಇದೆ.

೫. ನಡೆದವರುಂಟೇ ಕೈಲಾಸಕ್ಕೆ ದಾಳಿಯ? ನುಡಿದವರುಂಟೇ ಶಿವ ಲಾಂಛನಕ್ಕೆ ವೇಳೆಯ? ಕುಡಿದವರುಂಟೇ ಕಾಲಕೂಟ ವಿಷವನಮೃತವ ಮಾಡಿ? ಹಡೆದ ಮಕ್ಕಳ ಕೊಂದು ಜಂಗಮಕ್ಕೆ ಉಣಲಿಕ್ಕಿದವರುಂಟೆ? ನೀವು ಕೊಡುವುದು ಕೌತುಕವಲ್ಲ. ಶಂಭುಜಕ್ಕೇಶ್ವರಾ, ಎನ್ನೊಡೆಯ ಸಾತ್ವಿಕ ಸದ್ಭಕ್ತರ ಮಹಿಮೆಗೆ ನಾನು ನಮೋ ನಮೋ ಎಂಬೆ.

೬. ಕಾರಣದಿಂದ ಕಾಯುವ ಬಟ್ಟರೆ ಅಣಕವೇಕೆ? ಶಿವಭಕ್ತರು ಶಿವಾತ್ಮ ಸ್ವರೂಪರು ಎನ್ನವರು, ಅನ್ಯರೆಂದುಂಟೇ? ಇದು ಗನ್ನದ ಮಾತೆಂದೆ ಶಂಭುಜಕ್ಕೇಶ್ವರಾ.

ಅಣಕ = ಹಾಸ್ಯ, ಗನ್ನ = ಕಪಟ

೭. ಗಂಡ ಗಂಡರೆದೆಯ ಮೆಟ್ಟಿ ನಡೆದವರುಂಟೆ? ಗಂಡ ಗಂಡರ ಚೆಲ್ಲಣವ ಉಟ್ಟವರುಂಟೆ? ಗಂಡ ಗಂಡರ ಚರ್ಮವ ಹೊದ್ದಿದವರುಂಟೆ? ಗಂಡ ಗಂಡರ ತೊಟ್ಟವರುಂಟೆ? ಗಂಡ ಗಂಡರ ತರುಬಿದರುಂಟೇ? ಗಂಡ ಗಂಡರ ಭಸ್ಮವ ಪೂಸಿದವರುಂಟೆ? ಗಂಡರಿಗೆ ಗಂಡನ ಕಣ್ಣು ಕಾಲಿಲಿದೆ! ಗಂಡರಿಗೆ ಗಂಡನ ಶಿರ ಕಯ್ಯಲಿದೆ! ಗಂಡು ವೇಷವೆಂಬುವರೆಲ್ಲ ನಿಮ್ಮ ಶಕ್ತಿರೂಪು. ಗಂಡರಿಗೆ ಗಂಡ ನಡೆಯಿತ್ತೆ ಬಟ್ಟೆ ಎಂಬುದು ನಿಮಗೆ ಸಂದಿತ್ತು. ಶಂಭುಜಕ್ಕೇಶ್ವರಾ ಶರಣು. ಜಗಕ್ಕೆ ನೀನೊಬ್ಬನೇ ಗಂಡನು.

೮. ಮೆಚ್ಚಿ ಗ್ರಾಹಿಗೊಂಡೆನು ನಿಮಗಾನು ನಚ್ಚಿನೇ. ವಿಕಳಗೊಂಡೆನು ಶಿವ ಶಿವಾ. ಪ್ರಾಣಪದವಲ್ಲದೆ, ಮತ್ತೊಂದನರಿಯೆ. ಮನವಚನ ಕಾಯದಲ್ಲಿ ಉಚಿತವೇ ನಿಮಗೆ? ಪುರುಷಲಕ್ಷಣವೇ? ಅತಃಪರ ಗಂಡರ ನಾನು ಬಲ್ಲರೆ ಕರ್ತೃ ನಿಮ್ಮಾಣೆಯಯ್ಯ ಶಂಭುಜಕ್ಕೇಶ್ವರಾ.

೯. ದೇವನೊಲಿದನೆಂದು ಮುಯ್ಯೆನಲುಬೇಡ. ಕರಕಟೆ ಕಾಡುವನೊಲಿದನೇ? ಅಳಿಸುವ ನಗಿಸುವನೊಲ್ಲಿದನೇ? ಬೆದರದೆ ಬೆಚ್ಚದೆ ತೊತ್ತುತನವ ಮಾಡಲುತನ್ನನೀವ ಶಂಭುಜಕ್ಕೇಶ್ವರಾ.

೧೦. ಭಕ್ತರಿಗೆ ಅಕ್ಕೆ ಶೋಕ ದುಃಖ ಉಂಟೇ ಅಯ್ಯ? ಅತ್ತು ಕಳೆವ ನೋವ ಹಾಡಿ ಕಳೆಯುರೇಕಯ್ಯ? ಮುಕ್ತಾಯಕ್ಕಗಳ ಕಕ್ಕುಲಿತೆಯ ಶಂಭುಜಕ್ಕೇಶ್ವರನ ಶರಣರೊಪ್ಪರಯ್ಯ.

ಅಕ್ಕೆ = ರೋದನ; ಕಕ್ಕುಲಿತೆ = ಪ್ರೀತಿ, ಅಭಿಲಾಷೆ;



೧೧. ಮಂತ್ರ ಭಿನ್ನವಾಯಿತ್ತೆಂದು ಕಂಥೆಯ ಬಿಡುವರೇ ಅರಿವುಳ್ಳವರು? ಅದು ದ್ವೇಷವಲ್ಲದೆ ಅರಿವಿಂಗೆ ಸಂಬಂಧವಲ್ಲ. "ಮಂತ್ರಮಧ್ಯೆ ಭವೇಲ್ಲಿಂಗಂ ಲಿಂಗಮಧ್ಯೇ ಭವೇನ್ಮಂತ್ರಂ। ಮಂತ್ರಲಿಂಗದ್ವಯೋರೈಕ್ಯಂ। ಇಷ್ಟಲಿಂಗಂತುಶಾಂಕರೀ" ಎಂದುದಾಗಿ, ಆ ಮಂತ್ರ ಸರ್ವದಾಧಾರ. ಸರ್ವ ಆತ್ಮಬೀಜವೆಂದರಿಯದೆ, ಕೇಸರಿಯ ಕನಸ ಕಂಡ ವಾರಣದಂತೆ ಈ ಭಾಷೆ ಹೀನರಿಗೇಕೆ ಶಂಭುಜಕ್ಕೇಶ್ವರನು?

ಕೇಸರಿ = ಸಿಂಹ; ವಾರಣ = ಆನೆ.

೧೨. ಶಿವಶರಣೆಂದು ಪೂರ್ವಾರ್ಜಿತವನುಂಡರೆ ಭಂಗ. ಹರಶರಣೆಂದು ಭವಮಾಲೆಗೋಗಾದರೆ ಭಂಗ ಹರವಶನೆನಿಸಿ ವಿಧಿವಶವೆನಿಸಿದರೆ ಅದು ನಿಮ್ಮ ಭಂಗ ಕಾಣಾ ಶಂಭುಜಕ್ಕೇಶ್ವರದೇವ.

೧೩. ಮೊಲೆಮುಡಿ ಇದ್ದುದೇ ಹೆಣ್ಣೆಂದು ಪ್ರಮಾಣಿಸಲಿಲ್ಲ. ಕಾಸೆ ಮೀಸೆ ಕಠಾರಿ ಇದ್ದುದೇ ಗಂಡೆಂದು ಪ್ರಮಾಣಿಸಲಿಲ್ಲ. ಅದು ಜಗದ ಹೋಹು, ಬಲ್ಲವರ ನೀತಿಯಲ್ಲ. ಏತರ ಹಣ್ಣಾದಡೂ ಮಧುರವೇ ಕಾರಣ. ಚಂದವಿಲ್ಲದ ಕುಸುಮಕ್ಕೆಯೂ ವಾಸನೆಯೇ ಕಾರಣ. ಇದರಂದವ ನೀನೇ ಬಲ್ಲೆ ಶಂಭುಜಕ್ಕೇಶ್ವರಾ.

ಕಾಸೆ = ಉಡುವ ದೋತ್ರ; ಹೋಹು = ಗಮನ.

೧೪. ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ ನಾನು ಕೈಮುಟ್ಟಿ ಎತ್ತಿದೆನಾದರೆ, ನಿಮ್ಮಾಣೆ ನಿಮ್ಮ ಪ್ರಮಥರಾಣೆ. ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷೆಯಲ್ಲಿಪ್ಪೆನಾಗಿ. ಇಂತಲ್ಲದೆ ಆನು ಅಳಿಮನವ ಮಾಡಿ, ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ ನೀನಾಗಲೇ ಎನ್ನ ನರಕದಲ್ಲದ್ದಿ ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ.

ಅದ್ದು = ನಾಚಿಕೆಗೆಡು; ಅಳಿಮನ = ಕ್ಷುಲ್ಲಕ ಮನಸ್ಸು.

೧೫. ದೇವರೆಂದು ಅರ್ಚಿಸಿ, ಪೂಜಿಸಿ, ಭಾವಿಸಿ, ಮತ್ತೆ ತ್ರಿವಿಧವ ಮುಟ್ಟಿದರೆಂದು ಕಷ್ಟ ಗುಣವ ನುಡಿವ ಭಕ್ತಿಹೀನರ ಕಂಡಡೆ, ಅವರನೊಚ್ಚತ ತೊಲಗಬೇಕು ಶಂಭುಜಕ್ಕೇಶ್ವರಾ.

ಒಚ್ಚತ = ಸಂತೋಷದಿಂದ.

೧೬. ಜನನಮರಣಂಗಳಲ್ಲಿ ಬರಿಸಬಾರದ ಭಾಷೆ, ನಿತ್ಯನೀನೆಂದು ಮರೆವೊಕ್ಕ ಕಾರಣ. ಇಹಪರಗಳಲ್ಲಿ ಇರಿಸಬಾರದ ಭಾಷೆ, ನಿನ್ನಲ್ಲಿ

ಎನಗೆ ಅವಿರಳವಾದ ಕಾರಣ. ಪುಣ್ಯ ಪಾಪಂಗಳನರಿಸಬಾರದ ಭಾಷೆ, ನಿನ್ನ ಪಾದೋದಕ ಪ್ರಸಾದ ಜೀವಿಯಾಗಿ. ನೀಸಹಿತ ಅನಿಪ್ಪೆ, ನಾ ಸಹಿತ ನೀನಿಪ್ಪ ಕಾರಣ. ವಂಚನೆಬಾರದು ಎನಗೆ ನಿನಗೆ ಶಂಭುಜಕ್ಕೇಶ್ವರದೇವಾ ಸದ್ಗುರು ಅಪ್ಪಣೆಯಿಂದ ನೀನೊಲಿದು ಸಲಹೆನ್ನ ಪ್ರಾಣಲಿಂಗವಾಗಿ.

೧೭. ಇನಿಯನಂತೆ ತವಕವಿಲ್ಲ. ಎನಗೆ ಸೈರಣೆ ಇಲ್ಲ. ಮನದಿಚ್ಛೆಯ ನರಿವ ಸಖಿಯರಿಲ್ಲ. ಮನ್ಮಥವೈರಿಯನುಭಾವದಲ್ಲಿ ಮನ ಸಿಲುಕಿ ಬಿಡದು. ಇನ್ನೇವೆನಿನ್ನೇವೆ? ದಿನ ವ್ರಥಾ ಹೋಯಿತ್ತು. ಯೌವ್ವನ ಬೀಸರವೋಗದ ಮುನ್ನ ಪಿನಾಕಿಯ ತಂದು ನೆರಹವ್ವಾ ಶಂಭುಜಕ್ಕೇಶ್ವರನ.

ಇನಿಯ = ಪ್ರಿಯಕರ; ಬೀಸರವೋಗು = ನಾಶವಾಗು, ಗತಿಸು; ಪಿನಾಕಿ = ಈಶ್ವರ.

೧೮. ಭಾವನೇಕೆ ಬಾರನೆನ್ನ ಮನೆಗೆ? ಹರಿಯ ಮಗನನುರುಹಿದ ಗರ್ವದ ಭಾವನೇಕೆ ಬಾರನೆನ್ನ ಮನೆಗೆ? ಅಸುರರ ಪುರವ ಸುಟ್ಟ ವೀರ ಭಾವನೇಕೆ ಬಾರನೆನ್ನ ಮನೆಗೆ? ದಕ್ಷನ ಶಿರವನರಿದು ಯಾಗುವ ಕೆಡಿಸಿ ಕುರಿದಲೆಯ ಹತ್ತಿಸಿ ಬಿನ್ನಾಣದ ಬಲುಹ ಮೆರೆದ ಏಕೋಭಾವನೇಕೆಬಾರನೆನ್ನ ಮನೆಗೆ? ಹರಿಯ ನಯನದ ಪೂಜೆ ಚರಣದಲೊಪ್ಪಿತ್ತೆಂಬ ದುರುಳತನವು ತನಗೆ ಬೇಡವ್ವಾ! ಪರವಧುವಿಂಗಳುಪಿದ ವಿಗಡತನದ ದುರುಳತನ ಬೇಡವ್ವಾ ಆತನ ಕರೆದು ತಾರವ್ವಾ. ಶಂಭುಜಕ್ಕೇಶ್ವರನ ನೆರೆದು ನೋಡುವೆನು.

ಬಿನ್ನಾಣ = ವಿಜ್ಞಾನ, ಬಲುಹ = ಶಕ್ತಿ, ವಿಗಡತನ = ಕೆಡಕುತನ.

೧೯. ಹೊರಗಿರ್ದಿಹನೆಂದು ನಾನು ಮರೆದು ಮಾತನಾಡಿದೆ ಅರಿಯಲೀಯ್ಯದನ್ನಂತರಂಗದೊಳಿಪ್ಪ ತೆರಹಿಲ್ಲದಭವನು ನುಡಿಗಡೆಗುಡನು. ಆತನ ಬಯಲಿಂಗೆ ಬೇಟಗೊಂಡೆನವ್ವಾ! ಆನೇನ ಮಾಡುವೆ ನೆಲೆ ತಾಯೇ? ಮರೆದಡೆಚ್ಚರಿಸುವ ಕುರುಹಿಲ್ಲದ ಗಂಡನು. ತನ್ನನರಿದಡೊಳ್ಳಿದನವ್ವಾ ಶಂಭುಜಕ್ಕೇಶ್ವರನು.

೨೦. ಜಗಾನುಭಾವಿ ಎಂಬ ಪಿನಾಕಿಯ ಮಾತ ಕೇಳಿ ಬಂದೆ. ಹಿಂದು ಆರತದಿಂದ ಕಾಡೆಸುವನ್ನಕ್ಕರ ತವಕದ ಸುಡಗಡೆಗೊಡೆನೆಲೆಗೆ. ಪ್ರಾಣಕ್ಕಾಧಾರ ಶಿವಶಿವಾ ಎಂಬ ಶಬ್ದ. ಆತನ ಕಂಡಡೆ ಕಡೆಗೀಲು ಕಳೆದಂತೆ. ಶಂಭುಜಕ್ಕೇಶ್ವರನ ಬೆಂಸಲೊಡನೆ ಬೆರಗಾದೆನು.

ಆರತ = ಸಂತೋಷ, ಸಮಾಧಾನ

# ಸತ್ಯಕ್ಕನ ವಚನಗಳು.

## ವಚನಗಳು [೧]

೧. ಆದಿಯಲ್ಲಿ ದೇವಾ ನಿಮ್ಮನಾರುಬಲ್ಲರು? ವೇದಂಗಳು ಮುನ್ನತ್ತತ್ತಲರಿಯವು. ವೇದಿಗಳು ಪರಬ್ರಹ್ಮನೆಂದೆಂಬರು. ನಾದಬಿಂದು ಕಳಾತೀತನೆಂದೆಂಬರು. ಸಾಧುಸಜ್ಜನ ಭಕ್ತರಿಚ್ಚೆಗೆ ಬಂದೆಯಾಗಿ, ಈಗೀಗ ದೇವನಾದೆ ಶಂಭುಜಕ್ಕೇಶ್ವರಾ.

೨. ದೇವರದೇವ ನೀನೆಂದೆನಿಸಿಕೊಂಡೆ. ಬಾಣನಬಾಗಿಲ ಕಾಯ್ವರೇನಯ್ಯಾ? ನಿತ್ಯ ತೃಪ್ತ ನೀನೆಂದೆನಿಸಿಕೊಂಡೆ. ಚನ್ನಯ್ಯನ ಮನೆಯ ಲುಂಬರೇನಯ್ಯಾ? ಕರುಣಾಕರ ನೀನೆನಿಸಿಕೊಂಡೆ. ಸಿರಿಯಾಳನ ಮಗನ ಬೇಡುವರೇನಯ್ಯಾ? ನಿಮ್ಮ ಮಹಿಮೆಯ ನೀವೇ ಬಲ್ಲಿರಿ ಎನ್ನನುದ್ಧರಿಸಯ್ಯ ಶಂಭುಜಕ್ಕೇಶ್ವರಾ.

೩. ಏಕೆನ್ನ ಬಾರದ ಭವಂಗಳಲ್ಲಿ ಬರಿಸಿದೆ? ಏಕೆನ್ನ ಘೋರ ಸಂಸಾರದಲ್ಲಿರಿಸಿದೆ? ಏಕೆನಗೆ ಕರುಣಿಸಲೊಲ್ಲದೆ ಕಾಡಿಹೆ ಹೇಳಾ? ಹೇಳಾ ಎನ್ನ ಲಿಂಗವೇ? ಆನು ಮಾಡಿದ ತಪ್ಪೇನು? ಸಾಕಲಾದುದೆಂದು ಒತ್ತಿ ನುಡಿದಡೆ, ಏಕೆ, ನಾ ನಿಮ್ಮ ಬಿಡುವೆ ಶಂಭುಜಕ್ಕೇಶ್ವರಾ?

೪. ಹಿರಿಯತನಕ್ಕೆ ಪಥವೇ ಬಾಣನ ಮನೆಯ ಬಾಗಿಲಕಾಯ್ವುದು? ಮಹಂತತನಕ್ಕೆ ಪಥವೇ ನಂಬಿಗೆ ಸುಂಕಣಿಯಾದುದು? ಕರುಣತನಕ್ಕೆ ಪಥವೇ ಸಿರಿಯಾಳನ ಮಗನ ಕೊಲ್ವುದು? ದಾನತನಕ್ಕೆ ಪಥವೇ ದಾಸನ ವಸ್ತ್ರವ ಸೀಳ್ವುದು? ನಿಮ್ಮ ಗುರುಪತನಕ್ಕಿದು ಪಥವೇ? ಶಿವಶಿವಾ ನಿಮ್ಮ ನಡೆವಲ. ಶಂಭುಜಕ್ಕೇಶ್ವರಾ ಅಲ್ಲದೊಡೇಕೆ ಶೃತಿಗಳ ಕೈಯಿಂದ ಅತ್ತತ್ತಲೆನಿಸಿಕೊಂಬೆ?

---

[೧] ನಾವು ಹಿಂದೆ ಪ್ರಸ್ತಾವನೆಯಲ್ಲಿ ಸತ್ಯಕ್ಕನ ಗ್ರಾಮವಾದ ಜಂಬೂರು ಎಲ್ಲಿದೆಂಬದು ತಿಳಿದಿಲ್ಲೆಂದು ಉಲ್ಲೇಖಿಸಿದ್ದೇವೆ. ಆದರೆ ಈ ಜಂಬೂರು ಶಿವಮೊಗ್ಗ ಜಿಲ್ಲಾ ಶಿರಾಳಕೊಪ್ಪಕ್ಕೆ ಪೂರ್ವ ದಿಕ್ಕಿನಲ್ಲಿ ನಾಲ್ಕು ಮೈಲು ದೂರವಿರುವ ಹಿರೇ ಜಂಬೂರೇ ಇರುತ್ತದೆ. ಇಲ್ಲಿ ಆಕೆಯ ಗುಡಿಯೂ ಇದೆ.

೫. ನಡೆದವರುಂಟೇ ಕೈಲಾಸಕ್ಕೆ ದಾಳಿಯು? ನುಡಿದವರುಂಟೇ ಶಿವ ಲಾಂಛನಕ್ಕೆ ವೇಳೆಯು? ಕುಡಿದವರುಂಟೇ ಕಾಲಕೂಟ ವಿಷವನಮೃತವ ಮಾಡಿ? ಹಡೆದ ಮಕ್ಕಳ ಕೊಂದು ಜಂಗಮಕ್ಕೆ ಉಣಲಿಕ್ಕಿದವರುಂಟೆ? ನೀವು ಕೊಡುವುದು ಕೌತುಕವಲ್ಲ. ಶಂಭುಜಕ್ಕೇಶ್ವರಾ, ಎನ್ನೊಡೆಯ ಸಾತ್ವಿಕ ಸದ್ಭಕ್ತರ ಮಹಿಮೆಗೆ ನಾನು ನಮೋ ನಮೋ ಎಂಬೆ.

೬. ಕಾರಣದಿಂದ ಕಾಯುವ ಬಿಟ್ಟರೆ ಅಣಕವೇಕೆ? ಶಿವಭಕ್ತರು ಶಿವಾತ್ಮ ಸ್ವರೂಪರು ಎನ್ನವರು, ಅನ್ಯರೆಂದುಂಟೇ? ಇದು ಗನ್ನದ ಮಾತೆಂದೆ ಶಂಭುಜಕ್ಕೇಶ್ವರಾ.

ಅಣಕ = ಹಾಸ್ಯ, ಗನ್ನ = ಕಪಟ

೭. ಗಂಡ ಗಂಡರೆದೆಯ ಮೆಟ್ಟಿ ನಡೆದವರುಂಟೆ? ಗಂಡ ಗಂಡರ ಚೆಲ್ಲಣವ ಉಟ್ಟವರುಂಟೆ? ಗಂಡ ಗಂಡರ ಚರ್ಮವ ಹೊದ್ದಿದವರುಂಟೆ? ಗಂಡ ಗಂಡರ ತೊಟ್ಟವರುಂಟೆ? ಗಂಡ ಗಂಡರ ತರುಬಿದರುಂಟೇ? ಗಂಡ ಗಂಡರ ಭಸ್ಮವ ಪೂಸಿದವರುಂಟೆ? ಗಂಡರಿಗೆ ಗಂಡನ ಕಣ್ಣು ಕಾಲಿಲಿದೆ! ಗಂಡಂಗೆ ಗಂಡನ ಶಿರ ಕಯ್ಯಲಿದೆ! ಗಂಡು ವೇಷವೆಂಬುವರೆಲ್ಲ ನಿಮ್ಮ ಶಕ್ತಿರೂಪು. ಗಂಡರಿಗೆ ಗಂಡ ನಡೆಯಿತ್ತೆ ಬಟ್ಟೆ ಎಂಬುದು ನಿಮಗೆ ಸಂದಿತ್ತು. ಶಂಭುಜಕ್ಕೇಶ್ವರಾ ಶರಣು. ಜಗಕ್ಕೆ ನೀನೊಬ್ಬನೇ ಗಂಡನು.

೮. ಮೆಚ್ಚಿ ಗ್ರಾಹಿಗೊಂಡೆನು ನಿಮಗಾನು ನಲ್ಲನೇ. ವಿಕಳಗೊಂಡೆನು ಶಿವ ಶಿವಾ. ಪ್ರಾಣಪದವಲ್ಲದೆ, ಮತ್ತೊಂದನರಿಯೆ. ಮನವಚನ ಕಾಯದಲ್ಲಿ ಉಚಿತವೇ ನಿಮಗೆ? ಪುರುಷಲಕ್ಷಣವೇ? ಅತಃಪರ ಗಂಡರ ನಾನು ಬಲ್ಲರೆ ಕರ್ತು ನಿಮ್ಮಾಣೆಯಯ್ಯ ಶಂಭುಜಕ್ಕೇಶ್ವರಾ.

೯. ದೇವನೊಲ್ಲಿದನೆಂದು ಮುಯ್ಯೆನಲುಬೇಡ. ಕರಕಟೆ ಕಾಡುವನೊಲ್ಲಿದನೇ? ಅಳಿಸುವ ನಗಿಸುವನೊಲಿದನೇ? ಬೆದರದೆ ಬೆಚ್ಚದೆ ತೊತ್ತುತನವ ಮಾಡಲುತನ್ನನೀವ ಶಂಭುಜಕ್ಕೇಶ್ವರಾ.

೧೦. ಭಕ್ತರಿಗೆ ಅಕ್ಕೆ ಶೋಕ ದುಃಖ ಉಂಟೇ ಅಯ್ಯ? ಅತ್ತು ಕರೆವ ನೋವ ಹಾಡಿ ಕಳೆಯುರೇಕಯ್ಯ? ಮುಕ್ತಾಯಕ್ಕಗಳ ಕಕ್ಕುಲಿತೆಯ ಶಂಭುಜಕ್ಕೇಶ್ವರನ ಶರಣರೊಪ್ಪರಯ್ಯ.

ಅಕ್ಕೆ = ರೋದನೆ; ಕಕ್ಕುಲಿತೆ = ಪ್ರೀತಿ, ಅಭಿಲಾಷೆ;



೧೧. ಮಂತ್ರ ಭಿನ್ನವಾಯಿತ್ತೆಂದು ಕಂಥೆಯ ಬಿಡುವರೇ ಅರಿವುಳ್ಳವರು? ಅದು ದ್ವೇಷವಲ್ಲದೆ ಅರಿವಿಂಗೆ ಸಂಬಂಧವಲ್ಲ. "ಮಂತ್ರ ಮಧ್ಯೆ ಭವೇಲ್ಲಿಂಗಂ ಲಿಂಗಮಧ್ಯೇ ಭವೇನ್ಮಂತ್ರಂ। ಮಂತ್ರಲಿಂಗದ್ವಯೋರೈಕ್ಯಂ। ಇಷ್ಟಲಿಂಗಂತುಶಾಂಕರೀ" ಎಂದುದಾಗಿ, ಆ ಮಂತ್ರ ಸರ್ವದಾಧಾರ. ಸರ್ವ ಆತ್ಮಬೀಜವೆಂದರಿಯದೆ, ಕೇಸರಿಯ ಕನಸ ಕಂಡ ವಾರಣದಂತೆ ಈ ಭಾಷೆ ಹೀನರಿಗೇಕೆ ಶಂಭುಜಕ್ಕೇಶ್ವರನು?

ಕೇಸರಿ = ಸಿಂಹ; ವಾರಣ = ಆನೆ.

೧೨. ಶಿವಶರಣೆಂದು ಪೂರ್ವಾರ್ಜಿತವನುಂಡರೆ ಭಂಗ. ಹರಶರಣೆಂದು ಭವಮಾಲೆಗೊಳಗಾದರೆ ಭಂಗ ಹರವಶವೆನಿಸಿ ವಿಧಿವಶವೆನಿಸಿದರೆ ಅದು ನಿಮ್ಮ ಭಂಗ ಕಾಣಾ ಶಂಭುಜಕ್ಕೇಶ್ವರದೇವ.

೧೩. ಮೊಲೆಮುಡಿ ಇದ್ದುದೇ ಹೆಣ್ಣೆಂದು ಪ್ರಮಾಣಿಸಲಿಲ್ಲ. ಕಾಸೆ ಮೀಸೆ ಕಠಾರಿ ಇದ್ದುದೇ ಗಂಡೆಂದು ಪ್ರಮಾಣಿಸಲಿಲ್ಲ. ಅದು ಜಗದ ಹೋಹು, ಬಲ್ಲವರ ನೀತಿಯಲ್ಲ. ಏತರ ಹಣ್ಣಾದಡೂ ಮಧುರವೇ ಕಾರಣ. ಚಂದವಿಲ್ಲದ ಕುಸುಮಕ್ಕೆಯೂ ವಾಸನೆಯೇ ಕಾರಣ. ಇದರಂದವ ನೀನೇ ಬಲ್ಲೆ ಶಂಭುಜಕ್ಕೇಶ್ವರಾ.

ಕಾಸೆ = ಉಡುವ ದೋತ್ರ; ಹೋಹು = ಗಮನ.

೧೪. ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ ನಾನು ಕೈಮುಟ್ಟಿ ಎತ್ತಿದೆನಾದರೆ, ನಿಮ್ಮಾಣೆ ನಿಮ್ಮ ಪ್ರಮಥರಾಣೆ. ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷೆಯಲ್ಲಿಪ್ಪೆನಾಗಿ. ಇಂತಲ್ಲದೆ ಆನು ಅಳಿಮನವ ಮಾಡಿ, ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ ನೀನಾಗಲೇ ಎನ್ನ ನರಕದಲ್ಲದ್ದಿ ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ.

ಅದ್ದು = ಮುಳುಗಿಸು; ಅಳಿಮನ = ಕ್ಷುಲ್ಲಕ ಮನಸ್ಸು.

೧೫. ದೇವರೆಂದು ಅರ್ಚಿಸಿ, ಪೂಜಿಸಿ, ಭಾವಿಸಿ, ಮತ್ತೆ ತ್ರಿವಿಧವ ಮುಟ್ಟಿದರೆಂದು ಕಷ್ಟ ಗುಣವ ನುಡಿವ ಭಕ್ತಿಹೀನರ ಕಂಡಡೆ, ಅವರನೊಚ್ಚತ ತೊಲಗಬೇಕು ಶಂಭುಜಕ್ಕೇಶ್ವರಾ.

ಒಚ್ಚತ = ಸಂತೋಷದಿಂದ.

೧೬. ಜನನಮರಣಂಗಳಲ್ಲಿ ಬರಿಸಬಾರದ ಭಾಷೆ, ನಿತ್ಯನೀನೆಂದು ಮರೆವೊಕ್ಕ ಕಾರಣ. ಇಹಪರಗಳಲ್ಲಿ ಇರಿಸಬಾರದ ಭಾಷೆ, ನಿನ್ನಲ್ಲಿ

ಎನಗೆ ಅವಿರಳವಾದ ಕಾರಣ. ಪುಣ್ಯ ಪಾಪಂಗಳನೆಣಿಸಬಾರದ ಭಾಷೆ, ನಿನ್ನ ಪಾದೋದಕ ಪ್ರಸಾದ ಜೀವಿಯಾಗಿ. ನೀಸಹಿತ ಆನಿಪ್ಪೆ, ನಾ ಸಹಿತ ನೀನಿಪ್ಪ ಕಾರಣ. ವಂಚನೆಬಾರದು ಎನಗೆ ನಿನಗೆ ಶಂಭುಜಕ್ಕೇಶ್ವರದೇವಾ ಸದ್ಗುರು ಅಪ್ಪಣೆಯಿಂದ ನೀನೊಲಿದು ಸಲಹೆನ್ನ ಪ್ರಾಣಲಿಂಗವಾಗಿ.

೧೭. ಇನಿಯಂತೆ ತವಕವಿಲ್ಲ. ಎನಗೆ ಸೈರಣೆ ಇಲ್ಲ. ಮನದಿಚ್ಛೆಯ ನರಿವ ಸಖಿಯರಿಲ್ಲ. ಮನ್ಮಥವೈರಿಯನುಭಾವದಲ್ಲಿ ಮನ ಸಿಲುಕಿ ಬಿಡದು. ಇನ್ನೇವೆನಿನ್ನೇವೆ? ದಿನ ವ್ರಥಾ ಹೋಯಿತ್ತು. ಯೌವ್ವನ ಬೀಸರವೋಗದ ಮುನ್ನ ಪಿನಾಕಿಯ ತಂದು ನೆರಹವ್ವಾ ಶಂಭುಜಕ್ಕೇಶ್ವರನ.

ಇನಿಯ = ಪ್ರಿಯಕರ; ಬೀಸರವೋಗು = ನಾಶವಾಗು, ಗತಿಸು; ಪಿನಾಕಿ = ಈಶ್ವರ.

೧೮. ಭಾವನೇಕೆ ಬಾರನೆನ್ನ ಮನೆಗೆ? ಹರಿಯ ಮಗನನುರುಹಿದ ಗರ್ವದ ಭಾವನೇಕೆ ಬಾರನೆನ್ನ ಮನೆಗೆ? ಅಸುರರ ಪುರವ ಸುಟ್ಟ ವೀರ ಭಾವನೇಕೆ ಬಾರನೆನ್ನ ಮನೆಗೆ? ದಕ್ಷನ ಶಿರವನರಿದು ಯಾಗುವ ಕೆಡಿಸಿ ಕುರಿದಲೆಯ ಹತ್ತಿಸಿ ಬಿನ್ನಾಣದ ಬಲುಹ ಮೆರೆದ ಏಕೋಭಾವನೇಕೆಬಾರನೆನ್ನ ಮನೆಗೆ? ಹರಿಯ ನಯನದ ಪೂಜೆ ಚರಣದಲೊಪ್ಪಿತ್ತೆಂಬ ದುರುಳತನವು ತನಗೆ ಬೇಡವ್ವಾ! ಪರವಧುವಿಂಗಳುಪಿದ ವಿಗಡತನದ ದುರುಳತನ ಬೇಡವ್ವಾ ಆತನ ಕರೆದು ತಾರವ್ವಾ. ಶಂಭುಜಕ್ಕೇಶ್ವರನ ನೆರೆದು ನೋಡುವೆನು.

ಬಿನ್ನಾಣ = ವಿಜ್ಞಾನ, ಬಲುಹ = ಶಕ್ತಿ, ವಿಗಡತನ = ಕೆಡಕುತನ.

೧೯. ಹೊರಗಿರ್ದಿಹನೆಂದು ನಾನು ಮರೆದು ಮಾತನಾಡಿದೆ ಅರಿಯಲೀಯ್ಯದೆನ್ನಂತರಂಗದೊಳಿಪ್ಪ ತೆರಹಿಲ್ಲದಭವನು ನುಡಿಗಡೆ ಗೂಡನು. ಆತನ ಬಯಲಿಂಗೆ ಬೇಟಗೊಂಡೆನವ್ವಾ! ಆನೇನ ಮಾಡುವೆನೆಲೆ ತಾಯೇ? ಮರೆದಡೆಚ್ಚರಿಸುವ ಕುರುಹಿಲ್ಲದ ಗಂಡನು. ತನ್ನನರಿದಡೊಳ್ಳಿದನವ್ವಾ ಶಂಭುಜಕ್ಕೇಶ್ವರನು.

೨೦. ಜಗಾನುಭಾವಿ ಎಂಬ ಪಿನಾಕಿಯ ಮಾತ ಕೇಳಿ ಬಂದೆ. ಹಿರಿದು ಆರತದಿಂದ ಕಾಣಿಸುವನ್ನಕ್ಕರ ತವಕದ ನುಡಿಗಡೆಗೊಡೆನೆಲೆಗೆ. ಪ್ರಾಣಕ್ಕಾಧಾರ ಶಿವಶಿವಾ ಎಂಬ ಶಬ್ದ. ಆತನ ಕಂಡಡೆ ಕಡೆಗೀಲು ಕಳೆದಂತೆ. ಶಂಭುಜಕ್ಕೇಶ್ವರನ ಬೆಂಸಲೊಡನೆ ಬೆರಗಾಡೆನು.

ಆರತ = ಸಂತೋಷ, ಸಮಾಧಾನ



ಎಳಲ್ವಕಿವಿ ತೆರೆಪೊಗಂ ಜೊಲ್ವ ಪುರ್ವಿಂದೆಸೆಯೆ
ಸೆಳತ ಬೆನ್ ಲಾತಗೋಲ್ತುದಿಯ ಕೋವಣಪೆಸೆಯ
ನಡೆತಂದನಂದೊಲ್ದು ನೊಸಲಭಸಿತದಿನೊಪ್ಪೆ
ನಡೆತಂದನುರವಣಿಸಿ ಚೋಳದೇಶದೊಳೊಪ್ಪೆ

ಬಂದಮರನೀತಿಗಳ ಪುರವನೊಲವಿಂ ಪೊಕ್ಕು
ಸಂದ ಹೊಸವೀಥಿ ವೀಥಿಗಳೊಳ್ಮನಂ ಮಿಕ್ಕು
ಬರುತೆ ಮುಂದಣ ಶಿವಾಲಯದೊಳೆಸೆದಿರ್ದನಂ
ನೆರೆದ ಗಣತಿಂಥಿಣಿಯ ನಡುವೆ ಕುಳ್ಳಿರ್ದನಂ
ಬೆಳಪ ಚಂದ್ರಿಕೆಗಳೊಳಗಿರ್ಪ ಚಂದ್ರಮನಂತೆ
ತಳತಳಿಪ ದೀಪ್ತಿಗಳ ನಡುವಿರ್ಪ ರವಿಯಂತೆ
ಶಿವಭಕ್ತನಿವಹದೊಳಗಿರ್ಪಮರನೀತಿಯಂ
ಭವನ ಸದ್ಭಕ್ತಿವರ್ಧನಕರ ಖ್ಯಾತಿಯಂ
ಕಂಡು ಶಿವಭಕ್ತಸಂತತಿ ಇರಲ್ಕೈಗೆದು
ತಂಡತಂಡದ ಸಂತಸಂ ಮಿಗಲ್ಕಡೆತಂದು
ಮೆಲ್ಲಮೆಲ್ಲನೆ ಶಿವಾಲಯದೊಳಗಮೆಯ್ತಂದು
ಅಲ್ಲಿ ಸಂಭ್ರಮಿಪ ಶರಣರನೀಕ್ಷಿಸುತ್ತಂದು
ಗೋಂಟನೊಳ್ಕುಳ್ಳಿರ್ದು ನೋಡಿ ಮಿಗೆ ಮೆಚ್ಚುತುಂ
ನಾಂಟಿ ಶಿವಭಕ್ತಿ ಪಲ್ಲವಿಸಿ ಮೈವೆಚ್ಚುತುಂ

ಇರಲಮರನೀತಿ ಎಂದಿನ ಪರಿಯೊಳೀವುತುಂ
ಹರನ ಭಕ್ತರ್ಗೆ ಪಟ್ಟಾವಳಿಯನುಡಿಸುತುಂ
ಬೇಡಿದುದನಿತ್ತು ಸದ್ಭಕ್ತರಂ ತಣಿಸುತುಂ
ಕೂಡೆ ಗಣಸಂತತಿಗೆ ಇತ್ತಿತ್ತು ತಣಿಸುತುಂ
ಇಂತು ಮೂರುಂ ಜಾವ ಪರಿಯಂತ ಒಲಿದಿತ್ತು
ಸಂತತಂ ಶಿವನ ಭಕ್ತರ ಕರುಣಮಂ ಪೊತ್ತು
ಎಲ್ಲರಂ ತಣಿಸಿ ಕೆಲಬಲನುಮಂ ನೋಡುತುಂ
ಅಲ್ಲಿ ಗೊಂಟನೊಳಿರ್ದ ಭಕ್ತನಂ ಕಾಣುತುಂ
ಇತ್ತ ಬನ್ನಿರೆ ದೇವ ಎನುತೆ ಹತ್ತಿರೆ ಕರೆದು
ಹೊತ್ತು ಹೋದುದು ಸುಮ್ಮನೇಕಿರ್ದಪಿರಿ ಎಂದು

ಉಟ್ಟುದೊಂದರುವೆ ಪೊದ್ದುದೊಂದರುವೆ ನಿಮಗೆ
ಕಟ್ಟುವುದು ಕೋಲತುದಿಯೊಳ್ಕೋವಣಂ ನಿಮಗೆ
ಅಯ್ಯೋ ಇದೇಕೆ ಪೊದೆಯಿರಿ ಪಟ್ಟೆವಾಳಿಯಂ
ಮೆಯ್ಯಾರೆಯುಟ್ಟು ಪೊದೆಯಿರಿ ಸುಖದ ಕೇಳಿಯಂ
ಎಂದೊಂದು ಸಪುರ ಸಮಕಟ್ಟುಮಂ ಮುಂದಿರಿಸಿ
ನಿಂದವಂ ನೋಡಿ ಮನದೊಳ್ನಗುತ ಗಹಗಹಿಸಿ

ಎಯ್ದುವೇ ದೇವ ನಗಲೇಕೆ ಪಿರಿದೀವೆನೆನೆ
ಒಯ್ದು ನಿಮ್ಮರಸಿಯರ್ಗೀವುದಿದ ಕೊಳ್ಳಿ ಎನೆ
ತೆಗೆ ನಿನ್ನ ಸಂಪದವನೇಕೆ ತೋರುವೆ ಎಮಗೆ
ಮಗನೆ ಬಡವರ್ಗೆ ಉಡತಕ್ಕುವೇ ಪಿರಿದೆಮಗೆ
ಉಟ್ಟು ಬಲ್ಲವೆಯುಕ್ಕು ನಾವೇಕಿವೇಕಯ್ಯ
ಕೊಟ್ಟು ಬಲ್ಲೆವೆ ಶಿವನ ಭಕ್ತರ್ಗಿದೇಕಯ್ಯ
ಇರ್ದಿರ್ದು ಬಡವರಾದೆವು ಕೇಳಮರನೀತಿ
ಇರ್ದಿರ್ದು ವೃದ್ಧರಾದೆವು ಕೇಳಮರನೀತಿ
ಎಡೆಯಾಡಿಸುತ್ತೆ ಭಕ್ತರ್ಗೀವರಾವಲ್ಲ
ಮೃಡನ ಸದ್ಭಕ್ತರಂ ಬಳಲಿಸುವರಾವಲ್ಲ
ಇರ್ದೆಡೆಗೆ ದಿಂಡುಗಳನೊಯ್ದೀವರೆಮ್ಮವರ್
ಸಾರ್ದು ಶಿವಭಕ್ತರ್ಗೆ ಬೆಸಕೆಯ್ವರೆಮ್ಮವರ್
ಧನಧಾನ್ಯಮೆಂಬಿವಂ ಮನೆಗೀವರೆಮ್ಮವರ್
ವಿನುತ ರತ್ನಾವಳಿಗಳನೊಲಿದೀವರೆಮ್ಮವರ್
ಭಕ್ತರಂ ಬಿಡದರಿಸಿ ಕಾಯ್ದುಟ್ಟುದುವು ಪದಂ
ಭಕ್ತರ್ಗೆ ಇತ್ತಿತ್ತು ನಿಂದುದೆಮ್ಮಯ ಪದಂ
ನಿಲೆ ಬಳಿಕ್ಕಾರುಮಂ ಹಾರದೆಲ್ಲವನುಳಿದು
ಸಲೆ ಸಂಚಳಿಸುವಲ್ಪಸೌಖ್ಯಂಗಳಂ ಕಳಿದು
ಶಿವಭಕ್ತರಂ ನೋಡುತಿರ್ಪೆವಂತಲ್ಲಲ್ಲಿ
ಶಿವನ ದಿವ್ಯ ಕ್ಷೇತ್ರಮಂ ನೋಡುತಲ್ಲಲ್ಲಿ
ಬರುತೆ ನಿಮ್ಮೂರ್ಗೆ ಬಂದೆವು ಮಗನೆ ಇವು ಬೇಡ
ಹರನ ಭಕ್ತರೆ ಸಾಲ್ವರೆಮಗವರೊಡವೆ ಬೇಡ



ಎಂದು ಮನದೊಳ್ ಹರುಷಮಂ ಮುಖದ ಕಟಕೆಯಂ
ತಂದು ಕೊಂಡಾಡುತಿರ್ದಂ ಮಹಾ ಕಟಕಿಯಂ

ಇರಲಮರನೀತಿಗಳ್ಬಿನ್ನಪವೆಲೇ ದೇವ
ಹರನ ಭಕ್ತರ್ಪಿರಿದು ಕರುಣಿಸುವರೆಲೆ ದೇವ
ಅರಸುವಲ್ಲಿಂ ಮುನ್ನ ಬಂದಿರ್ಪರೆಲೆ ದೇವ
ಮರೆಯಲೀಯದೆ ಕರುಣದಿಂ ಬರ್ಪರೆಲೆ ದೇವ
ಆನನಿತರವನದಂತಿರ್ಕೆ ಇಂದೆಲೆ ದೇವ
ಏನರಿಕೆ ಯೆಂಬುದಂ ಬೆಸಸುವುದು ಎಲೆ ದೇವ

ಎನಲಾವಿದೇನುಮಂ ಬೇಡಿ ಬಂದವರಲ್ಲ
ಮನದೊಳ್ಮನುಷ್ಯರನಪೇಕ್ಷೆಗೆಯ್ವವರಲ್ಲ
ಶರಣರ್ಗೆ ನೀ ಮಾಳ್ಪುದಂ ನೋಡಲಕ್ಕರ್ತಿಯಿಂ
ನಿರುತದಿಂ ಕೇಳ್ದು ಬಂದೆವು ನಿನ್ನ ವಾರ್ತೆಯಂ
ಇಲ್ಲಿ ಎಮಗೋರ್ವ ಭಕ್ತರ ಮನೆಯಲೌತಣಂ
ಇಲ್ಲಿ ಇರಿಸುವೆನಿಂತು ತೊಡಕಾಯ್ತು ಕೋವಣಂ
ಈ ಕೌಪನಿಂದು ಬಯ್ತಿಟ್ಟು ಕೊಡು ನೀನೆಂದು
ಲೋಕೇಶ್ವರಂ ಕುಡಲ್ಕಮರನೀತಿಗಳಂದು
ಕೊಂಡದಂ ತಮ್ಮ ಮಾನಿಸನ ಕೆಯ್ಯೊಳ್ ಕೊಡಲ್

ಕಂಡು ಮತ್ತೊರ್ಬರಂ ನಂಬದೆ ನಿನಗೆ ಕೊಡಲ್
ಬೇರೆಯೊರ್ಬನ ಕೈಯ್ಯೊಳಿರಿಸುವುದೆ ಇದು ಕರಂ
ಮೂರುಂ ಜಗಕ್ಕೆಯ್ದೆ ತಾನೆಯುನ್ನತತರಂ
ಎಮ್ಮ ಭಕ್ತಮರ್ಗನ್ನಲಿತ್ತ ಭಕ್ತಿಯ ಕೌಪ
ಬೊಮ್ಮಾದಿಗಳ್ಬಯಸಿ ಹಡೆಯಲಾರದ ಕೌಪ
ಇದು ನೆನೆದುದಂ ಕುಡುವುದಿದು ಬಯಸಿತಂ ಕುಡುವು
ದಿದು ನುಡಿಯಿತಂ ಕೊಡುವುದಿದು ಬೇಡಿತಂ ಕೊಡುವು
ದಿದನಿನಿತು ಬೆಳ್ಪನಿತು ಹದುಳವೀಸುವುದೆಂದು
ಸದಮಳ ಶಿವಂ ಪೋದನಾನಂದದಿಂದಂದು

ಇತ್ತಲಾ ಕೋವಣವನೊಂದು ದಿಂಡಿನೋಳಿರಿಸಿ
ಚಿತ್ತವೊಳ್ಕೌತುಕಂಬಡುತುಂ ನಮಸ್ಕರಿಸಿ
ಯಮರನೀತಿಗಳಾಗಳರಮನೆಗೆ ನಡೆತಂದು
ನಮಗಿಂದು ಕಟಕಿಯಾಡಿಸಿದನೀಶ್ವರನೆಂದು
ಚಿತ್ತಕ್ಕೆ ಹೊಲೆಯುಲ್ಲದ್ಭುತವಿದೇನೆಂದು
ಚಿತ್ತದೊಳ್ ಬಂದ ಭಕ್ತನ ಭಾವವೇನೆಂದು
ಭಕ್ತನಾಡಿದ ಮಾತು ಮನದೊಳಗೆ ನಟ್ಟಿರಲ್
ಯುಕ್ತಿ ಕೊಪ್ಪದ ಭಕ್ತನಂದಿರುಪ್ಪಟ್ಟಿರಲ್

ಶಿವನುದಯಮುಂ ಸೂಚಿಸುವ ತೆರದೊಳಿಯ್ತಂದು
ರವಿಯುದಯವಾಗಲೆಳ್ದಮರನೀತಿಗಳಂದು
ದೇವಾಲಯಕ್ಕೆಂದಿನಂದದಿಂ ನಡೆತಂದು
ದೇವರ್ಗೆ ಸಕಲ ವಸ್ತ್ರವ ಪೂಜೆಗೈತಂದು
ಪೊಡೆವಟ್ಟು ರಂಗಮಂಟಪದೊಳಗೆ ಕುಳ್ಳಿರ್ದು
ಮೃಡನ ಶರಣರ್ನೆರೆದು ಸಂತಸಂಬಡುತಿರ್ದು
ನಾಲ್ಕೆರಡು ಸಾವಿರಂ ಮುಂಗುಡಿಯ ಬರಲಲ್ಲಿ
ನಾಲ್ಕು ಭುಜವಾಗುತ್ತಲಮರನೀತಿಗಳಲ್ಲಿ
ಘುಳುಘುಳಿಪ ಗಣಸಂಕುಳದ ನಡುವೆ ಕುಳ್ಳಿರಲ್
ಗಳಗಳನೆ ಕಚ್ಚುಟದ ಭಕ್ತನೈತರುತಿರಲ್
ಅನಿಮಿತ್ತವಮರನೀತಿಯ ಬಲದ ಕಣ್ಣೆತ್ತೆ
ತನು ಹರುಷವೇರಿ ಸಾಲ್ಗೊಂಡು ಪುಳುಕವನೆತ್ತೆ
ಕುಳ್ಳಿರ್ದ ಶಿವನ ಸದ್ಭಕ್ತರಂ ಮಾಂಟುತುಂ
ತಳ್ಳಂಕದಿಂದುರವಣಿಸಿ ಬಂದು ತೇಂಕುತುಂ

ಕೊಡು ಕೋವಣವನೆಮ್ಮ ನೆರವು ಪೋದಪುದತ್ತ
ತಡೆಯಬಾರದು ಎಮ್ಮ ಭಕ್ತರಿರ್ದಪರತ್ತ
ತಾ ತಾರೊ ಹೂಂ ತಾರೊ ತಡವೇಕಿದೇಕೆಂದೆನುತೆ
ಆತುರದ ಭಕ್ತನಂ ನೋಡಿ ಬೆರಗಾಗುತ್ತೆ
ಕಚ್ಚುಟದ ತಕ್ಕುದಲ್ಲೆಂ ಇನಿತು ಸಂಭ್ರಮಂ
ಒಚ್ಚೈಸೈರಿಸು ದೇವ ಕೊಡುವೆನಾ ಕೌಪಮಂ

# ವಚನಶಾಸ್ತ್ರಸಾರ ಗ್ರಂಥಗಳು.

( ರಾ| ಸಾ| ಫ. ಗು. ಹಳಕಟ್ಟಿ ಇವರಿಂದ ವಿರಚಿತವಾದವುಗಳು. )

(೧) ವಚನಶಾಸ್ತ್ರಸಾರ ಭಾಗ ೧ ಪೂರ್ವಾರ್ಧ — ೨-೮-೦

(೨) „ „ ಉತ್ತರಾರ್ಧ — ೧-೧೨-೦

ಈ ಎರಡು ಗ್ರಂಥಗಳ ಮೂಲಕ ವೀರಶೈವ ಧರ್ಮದ ಸಾಮಾನ್ಯ ತತ್ವಗಳನ್ನು ಅರಿಯಬಹುದು.

(೩) ವಚನಶಾಸ್ತ್ರಸಾರ ಭಾಗ ೨ — ೪-೮-೦

ಇದರಲ್ಲಿ ಷಟ್‌ಸ್ಥಲ ಸಿದ್ಧಾಂತದ ನಿರೂಪಣೆ ಇದೆ.

(೪) ವಚನಶಾಸ್ತ್ರಸಾರ ಭಾಗ ೩ ಪೂರ್ವಾರ್ಧ — ೨-೪-೦

ಇದರಲ್ಲಿ ವೀರಶೈವರ ಕ್ರಿಯೆಗಳ ಮತ್ತು ಅಷ್ಟಾವರಣಗಳ ಸಾಮಾನ್ಯ ನಿರೂಪಣೆ ಇರುವದಲ್ಲದೆ ಗುರು, ಲಿಂಗ, ಜಂಗಮ ಇವುಗಳ ಸವಿಸ್ತಾರವಾದ ವಿವರಣೆ ಇರುತ್ತದೆ.

ಈ ನಾಲ್ಕು ಗ್ರಂಥಗಳ ಒಟ್ಟು ಪುಟ ಸಂಖ್ಯೆ ೧೫೫೩ ಇದ್ದು ಇವುಗಳ ಬೆಲೆಯು ೧೧ ರೂಪಾಯಿ ಇರುತ್ತದೆ. ಆದರೆ ಈ ಗ್ರಂಥಗಳೆಲ್ಲವನ್ನೂ ಏಕಕಾಲಕ್ಕೆ ತೆಗೆದುಕೊಂಡಲ್ಲಿ ಅವುಗಳು ಮೂರುನಾಲ್ಕಾಂಶ ಬೆಲೆಗೆ ಅಂದರೆ ಒಟ್ಟು ೮-೪-೦ ರೂಪಾಯಿಗಳಿಗೆ ದೊರೆಯುವವು ಟಪಾಲಖರ್ಚು ಪ್ರತ್ಯೇಕ.

ದೊರೆಯುವ ಸ್ಥಳ—

**ಹಿತಚಿಂತಕ ಪ್ರಿಂಟಿಂಗ ಪ್ರೆಸ್ ವಿಜಾಪುರ.**

ಇದನ್ನು ವಿಜಾಪುರದಲ್ಲಿ ರಾ|| ಸಾ|| ಫ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ಉಪಲೀ ಬುರುಜ ಓಣಿಯಲ್ಲಿರುವ ತಮ್ಮ ೧೬೩೦ (ಅ) ಮನೆಯಲ್ಲಿ ಪ್ರಸಿದ್ಧಿಸಿದರು.

R. N. B. 2554

M.A. IBT.

ಶ್ರೀ

# ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩-೬-೦

ಸಂಪುಟ ೧೪ ] ಮಾರ್ಚ ೧೯೪೦ [ ಸಂಚಿಕೆ ೬

## ವಿಷಯಾನುಕ್ರಮಣಿಕೆ.


| ವಿಷಯಗಳು. | ಲೇಖಕರು. | ಪುಟ. |
|---|---|---|
| ೧ ವಚನವಾಙ್ಮಯ ... | ಡಾ. ಎಸ್. ಸಿ. ನಂದೀಮಠ | ೩೬೭ |
| ೨ ಸೃಷ್ಟಿಯ ಉತ್ಪತ್ತಿಯೂ ಶಿವಯೋಗದ ಮಹಿಮೆಯೂ | ಶ್ರೀ ರು. ಸಿ. ಕೊಟಗಿ, ಗಜೇಂದ್ರಗಡ | ೩೭೭ |
| ೩ ಬಸವೇಶ್ವರನು ಆವ ಬಿಜ್ಜಳನಲ್ಲಿ ಇದ್ದನು? .. | ರಾ. ಸಾ. ಫ. ಗು. ಹಳಕಟ್ಟಿ | ೩೮೫ |
| ೪ ಶ್ರೀಮನ್ನಿಜಗುಣಶಿವಯೋಗಿಗಳು ವೀರಶೈವರೇ ಹೇಗೆ? | ಶ್ರೀ ಬಸವದೇವರು ಶಿವಯೋಗಮಂದಿರ | ೩೮೮ |
| ೫ ವೀರಶೈವ ವಚನಕಾರರ ಕಾಲ | ರಾ. ಸಾ. ಫ. ಗು. ಹಳಕಟ್ಟಿ | ೩೯೧ |
| ೬ ಭವಿ ಭಕ್ತರು | ಶ್ರೀ. ಬ. ಚಿ. ಪಟ್ಟೇದ | ೩೯೬ |
| ೭ ಮರಳಿ ಉತ್ತರಿಸಿದುದು ... | ಶ್ರೀ ವೀರೇಶ್ವರ ಬೆಂಗಳೂರ | ೪೦೪ |
| ೮ ವೀರಶೈವರ ಪ್ರಾಚೀನ ಹೆಸರು ಆವುದು? | ಶ್ರೀ ಮಲ್ಲಿಕಾರ್ಜುನ ದೇಶಕರು. | ೪೦೯ |
| ೯ ಶಿವಶರಣರ ಸಂಕೀರ್ಣ ವಚನಗಳು ಭಾಗ ೨ | — | ೬೫ |

# ಶಿವಾನುಭವ.

ವರ್ಷ ೧೪]　　ಮಾರ್ಚ ೧೯೪೦　　[ಸಂಚಿಕೆ ೬

## ವಚನವಾಙ್ಮಯ.

ಡಾ. ಎಸ್. ಸಿ. ನಂದಿಮಠ, ಎಂ. ಎ. ಪಿಎಚ್. ಡಿ. (ಲಂಡನ್)

(ಇದು ಮಂಗಳವಾರ ತಾ. ೯-೧-೧೯೪೦ನೆಯ ದಿವಸ ಮುಂಬಯಿ ಆಕಾಶ ವಾಣಿಯ ದ್ವಾರಾ ಮಾಡಿದ ಭಾಷಣ. ಇದನ್ನು ಮುದ್ರಿಸಲು ಅನುಮತಿಯನ್ನು ಕೊಟ್ಟ ಆಕಾಶವಾಣಿಯ ಅಧಿಕಾರಿಗಳಿಗೆ ಋಣಿಯಾಗಿರುವೆನು.)

ತಮ್ಮೆಲ್ಲರಿಗೆ ವಚನವಾಙ್ಮಯದ ಪರಿಚಯವನ್ನು ಈ ಹೊತ್ತು ಮಾಡಿಕೊಡಬೇಕಾಗಿದೆ. ಕನ್ನಡ ಸಾಹಿತ್ಯದಲ್ಲಿ ವಚನವಾಙ್ಮಯದ ಸ್ಥಾನವು ಅತಿ ಮಹತ್ವವಾದುದು ಮತ್ತು ಗಹನವಾದುದು. ಕನ್ನಡಿಗರಲ್ಲನೇಕರಿಗೆ ವಚನವಾಙ್ಮಯದ ಮಹತ್ವವು ಇನ್ನೂ ಸಾಕಷ್ಟು ತಿಳಿದಿಲ್ಲ. ಅದರ ಕಾರಣವನ್ನು ಹುಡುಕಲು ದೂರ ಹೋಗುವುದವಶ್ಯವಿಲ್ಲ. ಕನ್ನಡ ಸಾಹಿತ್ಯದ ಅಭ್ಯಾಸವು ಇನ್ನೂ ಆಗತಕ್ಕಷ್ಟು ಆಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ವಿಷಯವು ಅತಿ ಗಹನವಾದುದಿದ್ದರೂ ಶಕ್ಯವಾದಷ್ಟು ಸುಲಭ ಮಾಡಿ ತಮ್ಮ ಮುಂದೆ ಇಡಲು ಯತ್ನಿಸುವೆನು.

ಹಿಂದುಸ್ಥಾನದೊಳಗೆ ಈಗ ಪ್ರಚಲಿತವಿರುವ ಭಾಷೆಗಳಲ್ಲಿ ಕನ್ನಡವು ಒಂದು ಅತಿ ಪ್ರಾಚೀನವಾದ ಭಾಷೆಯು. ಇದರಲ್ಲಿ ಅತಿ ವಿಪುಲವಾದ ಸಾಹಿತ್ಯವಿದೆ. ಪ್ರಾಚೀನತೆಯಲ್ಲಿಯೂ ವಿಪುಲತೆಯಲ್ಲಿಯೂ ಇದು ಸಂಸ್ಕೃತ ಸಾಹಿತ್ಯಕ್ಕೆ ಸರಿಸಮಾನವಾಗಿರುವುದೆಂದರೆ ಅತಿಶಯೋಕ್ತಿಯಾಗಲಾರದು. ಈಗ ಉಪಲಬ್ಧವಿರುವ ಕನ್ನಡ ಗ್ರಂಥಗಳಲ್ಲಿ ಕವಿರಾಜ

ಮಾರ್ಗವೆಂಬುದು ಮೊದಲನೆಯದು. ಇದನ್ನು ನೃಪತುಂಗನೆಂಬ ರಾಷ್ಟ್ರಕೂಟ ವಂಶದ ದೊರೆಯು ಒಂಬತ್ತನೆಯ ಶತಮಾನದಲ್ಲಿ ರಚಿಸಿದನು. ಅದಕ್ಕೂ ಮೊದಲು ಕನ್ನಡದಲ್ಲಿ ಗ್ರಂಥಗಳು ಹುಟ್ಟಿರಲೇಬೇಕು. ಕರ್ನಾಟಕದ ಪ್ರಸಿದ್ಧ ರಾಜವಂಶಗಳಾದ ಚಾಲುಕ್ಯ ಮತ್ತು ರಾಷ್ಟ್ರಕೂಟರ ಮಾತೃಭಾಷೆಯು ಕನ್ನಡವಿತ್ತು. ಕನ್ನಡ ಸಾಹಿತ್ಯಪ್ರವಾಹವು ಅವ್ಯಾಹತವಾಗಿ ಹರಿಯುತ್ತ ಮತ್ತು ಬೆಳೆಯುತ್ತ ಬಂದಿರುವದು. ಸುಮಾರು ಹನ್ನೆರಡನೆಯ ಶತಮಾನದಲ್ಲಿ ಈ ಸಾಹಿತ್ಯದ ಬೆಳವಣಿಗೆಗೆ ಮತ್ತಿಷ್ಟು ಕಳೆಯೇರಲು ವಚನವಾಙ್ಮಯವು ಕಾರಣವಾಯಿತು.

ಕರ್ನಾಟಕವು ಅನೇಕ ಧಾರ್ಮಿಕಪಂಥಗಳ ಆಗರವು. ಇಲ್ಲಿ ಅತಿ ಪ್ರಾಚೀನಕಾಲದಿಂದಲೂ ಶೈವಧರ್ಮವು ಮನೆಮಾಡಿಕೊಂಡಿದೆ. ಇದರೊಳಗಿನ ಒಂದು ಮಹತ್ವದ ಪಂಥವು 'ವೀರಶೈವ' ಅಥವಾ 'ಲಿಂಗಾಯತ' ಎಂಬುದು. ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿ ಬಸವಾದಿ ಪ್ರಮಥರು ಅವತರಿಸಿ ವೀರಶೈವಪಂಥದ ಪ್ರಸಾರಕಾರ್ಯವನ್ನು ಕೈಕೊಂಡರು. ಅವರು ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮೊದಲಾದವುಗಳನ್ನು ಸರಳ, ಮತ್ತು ಪಾಮರರಿಗೆ ಸಹ ತಿಳಿಯುವಂತಹ ಸುಲಭ ಶೈಲಿಯಲ್ಲಿ ಬೋಧಿಸಿದರು. ಅವರ ಧ್ಯೇಯವು ಆ ಕಾಲದಲ್ಲಿ ಜನರೊಳಗೆ ರೂಢವಾಗಿದ್ದ ಅನೇಕ ತಪ್ಪು ಕಲ್ಪನೆಗಳನ್ನು ದೂರಮಾಡಿ ನಿಜವಾದ ತತ್ವಗಳನ್ನು ತಿಳಿಸಿಕೊಡುವುದೇ ಆಗಿತ್ತು. ಅವರು ಯಜ್ಞ-ಯಾಗಾದಿ ಕರ್ಮಗಳನ್ನೂ ಮೂರ್ತಿಪೂಜೆಯನ್ನೂ ಸಮಾಜದಲ್ಲಿ ಪ್ರಚಲಿತವಾದ ಜಾತಿಯಿಂದ ಉಚ್ಚ--ನೀಚ ಎಂಬ ಭಾವನೆಯನ್ನೂ ಪುರುಷ--ಸ್ತ್ರೀ ಶ್ರೀಮಂತ ಬಡವ ಇತ್ಯಾದಿ ಭೇದಗಳನ್ನೂ ತೆಗೆದುಹಾಕಿ ದೇವರ ದೃಷ್ಟಿಯಲ್ಲಿ ಜೀವಿಗಳೆಲ್ಲರೂ ಒಂದೇ, ದೇವರು ಅಂತರಂಗಶುದ್ಧಿಯಿಂದ ಸಾಧ್ಯನು, ಇಹಪರ ಇವೆರಡೂ ಬೇರೆಯಿಲ್ಲ, ಇಹದಲ್ಲಿ ಶುದ್ಧಾಚರಣೆಯುಳ್ಳವನು ಪರಕ್ಕಾಗಿ ಹೆಣಗುವ ಕಾರಣವಿಲ್ಲ, ಇತ್ಯಾದಿ ತತ್ವಗಳನ್ನು ಜನರಲ್ಲಿ ಹರಡಿದರು. ಇವರ ಇಂತಹ ಉಪದೇಶಗಳಿಗೆ ವಚನಗಳೆನ್ನುವರು. ಇವುಗಳಿಗೆ ಗೀತೆಗಳೆನ್ನುವ ರೂಢಿ ಕೂಡಾ ಇದ್ದಂತೆ ತೋರುವುದು. ವೀರಶೈವ ಗ್ರಂಥಕಾರರಲ್ಲಿ ಕೆಲವರು ಇವುಗಳಿಗೆ ಹಾಡುಗಳು ಅಥವಾ ಗೀತೆಗಳು ಎಂದು ಅಂದಿರುವರು. ಆಧ್ಯಾತ್ಮಿಕ ವಿಷಯದಲ್ಲಿ ಭಗವದ್ಗೀತೆ ಮತ್ತು ಉಪನಿಷತ್ತುಗಳು ಹೇಗೆ ಪವಿತ್ರ ಮತ್ತು ಪ್ರಮಾಣಗ್ರಂಥ



ಗಳಾಗಿರುವುವೋ ಹಾಗೆಯೇ ಕನ್ನಡ ಸಾಹಿತ್ಯದಲ್ಲಿ ವೀರಶೈವರಿಗೆ ವಚನಗಳು ಪವಿತ್ರ ಮತ್ತು ಪ್ರಮಾಣಗ್ರಂಥಗಳಾಗಿರುವುವು. ಇವುಗಳ ಶೈಲಿಯು ಅತಿ ಸರಳ ಮತ್ತು ಸುಲಭ. ಗಹನವಾದ ವಿಷಯಗಳನ್ನು ಮನಸ್ಸಿಗೆ ನಾಟುವಂತೆ ಹೇಳುವ ಜಾಣ್ಮೆಯು ವಚನಶಾಸ್ತ್ರಕಾರರಿಗೆ ಸಾಧಿಸಿದೆ. ವಚನಗಳ ಸಂಖ್ಯೆಯು ಬಹಳವಾಗಿದೆ. ಎರಡೆಂಬತ್ತು ಕೋಟಿ ಎಂದರೆ ೧೬೦ ಕೋಟಿ ವಚನಗಳಿರುವುವೆಂದು ವೀರಶೈವರಲ್ಲಿ ಪರಂಪರ ಪ್ರತೀತಿಯಿದೆ. ಆದರೆ ಈಗ ಇವೆಲ್ಲ ಉಪಲಬ್ಧವಿಲ್ಲ. ಉಪಲಬ್ಧವಿದ್ದ ವಚನಗಳಲ್ಲಿ ಬಹುಭಾಗವು ಅಚ್ಚಿನ ಮನೆಯನ್ನು ಕಂಡಿಲ್ಲ. ವಚನಶಾಸ್ತ್ರ ಸಾಹಿತ್ಯವನ್ನು ಜನರ ದೃಷ್ಟಿಗೆ ಮೊದಲು ತಂದುಕೊಟ್ಟ ಶ್ರೇಯಸ್ಸು ರಾವಸಾಹೇಬ ಪಿ. ಜಿ. ಹಳಕಟ್ಟಿಯವರಿಗೆ ಸಲ್ಲುತ್ತದೆ.

ವಚನಶಾಸ್ತ್ರಕಾರರು ಅನೇಕರಿರುವರು. ಅವರ ಹೆಸರುಗಳನ್ನೆಲ್ಲ ಇಲ್ಲಿ ಹೇಳುವುದು ಸಾಧ್ಯವಿಲ್ಲ. ಸಾಮಾನ್ಯವಾಗಿ ೭೭೦ ಜನರಿರುವರೆಂದು ವೀರಶೈವರಲ್ಲಿ ನಂಬುಗೆಯಿದೆ. ಇವರಿಗೆ ಪ್ರಮಥರು ಅಥವಾ ಅಮರಗಣಂಗಳು ಅಥವಾ ಶಿವಶರಣರು ಅಥವಾ ನೂತನ ಪುರಾತನರು ಎನ್ನುವ ವಾಡಿಕೆಯಿದೆ. ತಮಿಳು ದೇಶದಲ್ಲಿ ಪ್ರಸಿದ್ಧಿಯನ್ನು ಹೊಂದಿದ ದ್ರಾವಿಡ ವೇದದ ಕರ್ತೃಗಳಾದ ಅಪ್ಪಾರ್ ಅಥವಾ ತಿರುನಾ ಉಕ್ಕರಸು, ತಿರುಜ್ಞಾನ ಸಂಬಂಧರ್ ಅಥವಾ ಪಿಳ್ಳೆ ನೈನಾರ್, ಸುಂದರನಂಬಿ ಮೊದಲಾದ ಅರವತ್ತುಮೂವರಿಗೆ ಪುರಾತನರೆನ್ನುವರು. ಅವರಿಂದ ಹಿಂಗಡಿಸಲೋಸುಗ ಬಸವಾದಿ ಪ್ರಮಥರಿಗೆ ನೂತನ ಪುರಾತನರೆನ್ನುವರು. ವಚನಶಾಸ್ತ್ರಗಳ ಮೇಲೆ ದ್ರಾವಿಡ ದೇಶದ ನೈನಾರರ ಪ್ರಭಾವವು ಬಹಳ ಬಿದ್ದಿದೆ. ವಚನಶಾಸ್ತ್ರಕಾರರು ನಾನಾಪ್ರಕಾರದ ಉದ್ಯೋಗಗಳನ್ನು ಮಾಡುತ್ತಿದ್ದರು. ಉದ್ಯೋಗಕ್ಕೆ ಕಾಯಕವೆನ್ನುವುದು. ಕಾಯಕವು ಎಂತಹದೇ ಇದ್ದರೂ ಪವಿತ್ರವಾದುದು. ಪ್ರತಿಯೊಬ್ಬನು ಶ್ರಮಜೀವಿಯಾಗಿರಲೇಬೇಕೆಂದೂ ಅದಕ್ಕಾಗಿ ಕಾಯಕವನ್ನು ಕೈಕೊಳ್ಳಲೇಬೇಕೆಂದೂ ಅವರ ಕಟ್ಟಳೆ. ಕಾಯಕದಿಂದಲೇ ಕೈಲಾಸವೆಂದೂ ಪದೇ ಪದೇ ಹೇಳಿದ್ದಾರೆ. ಕಾಯಕದಲ್ಲಿ ಉಚ್ಚ-ನೀಚ ಭಾವವಿಲ್ಲ. ಇದರಲ್ಲಿ ಕೆಲವರು ಸರಕಾರೀ ಅಧಿಕಾರಿಗಳಾಗಿದ್ದರೆ ಉಳಿದವರು ಉಪಜೀವನಕ್ಕೆ ಅಗತ್ಯವಾದ ಒಕ್ಕಲತನ, ವ್ಯಾಪಾರ, ನೇಕಾರಿಕೆ ಮೊದಲಾದ ಹೋರಿಗಳನ್ನು ಮಾಡುತ್ತಿದ್ದರು. ಹಲವರು ಚರ್ಮದ ಕೆಲಸವನ್ನು ಕೂಡಾ ಮಾಡುತ್ತಿದ್ದರು. ಬಸವಣ್ಣ

ನವರು ದೊಡ್ಡ ಅಧಿಕಾರಿಗಳಾಗಿದ್ದರು. ನುಲಿಯ ಚಂದಯ್ಯನವರು
ಹುಲ್ಲಿನ ಹಗ್ಗಗಳನ್ನು ಮಾಡಿ ಮಾರಿ ಜೀವಿಸುತ್ತಿದ್ದರು. ಮೋಳಿಗೆ
ಮಾರಯ್ಯನವರು ಕಟ್ಟಿಗೆ ಹೊರೆ ಮಾರುತ್ತಿದ್ದರು. ಮೇದಾರ ಕೇತ
ಯ್ಯನವರು ಬಿದಿರನ್ನು ಕೊಯ್ದು ತಂದು ಬುಟ್ಟಿ ತಟ್ಟಿ ಮೊದಲಾದವು
ಗಳನ್ನು ಮಾಡಿ ಮಾರುತ್ತಿದ್ದರು. ಮಡಿವಳ ಮಾಚಿದೇವಯ್ಯನವರು
ಅರಿವೆಗಳನ್ನು ಒಗೆಯುತ್ತಿದ್ದರು. ಮಾದರ ಚೆನ್ನಯ್ಯನವರು ಚರ್ಮದ
ಕೆಲಸ ಮಾಡುತ್ತಿದ್ದರು.

ವಚನಶಾಸ್ತ್ರಕಾರರಲ್ಲಿ ಅನೇಕರು ಹೆಂಗಸರಿರುವರು. ಅವರು
ಯೋಗ್ಯತೆಯಲ್ಲಿ ಗಂಡಸರಿಗೆ ಆವ ರೀತಿಯಲ್ಲಿಯೂ ಕಡಿಮೆಯವರಲ್ಲ.
ಅವರ ವಚನಗಳು ಉಚ್ಚಸ್ಥಾನವನ್ನು ಪಡೆಯಲರ್ಹವಾಗಿವೆ. ಗಂಗಾ
ದೇವಿ, ನೀಲಮ್ಮ, ಅಕ್ಕನಾಗಮ್ಮ, ಮಹಾದೇವಿ, ಕಾಳಮ್ಮ, ಗುಡ್ಡವ್ವೆ
ಮೊದಲಾದವರು ಶಿವಶರಣೆಯರಲ್ಲಿ ಮುಖ್ಯರು.

ವಚನಶಾಸ್ತ್ರದ ಕಾಲವನ್ನು ಹನ್ನೆರಡನೆಯ ಶತಮಾನಕ್ಕೆ ಒಯ್ಯ
ಬಹುದು. ಅದಕ್ಕೂ ಮೊದಲು ಇದ್ದ ವಚನಗಳು ಉಪಲಬ್ಧವಿಲ್ಲ. ಬಸ
ವಣ್ಣನವರಿಂದ ಅಖಂಡೇಶ್ವರನವರೆಗೆ ಅಂದರೆ ಹನ್ನೆರಡನೆಯ ಶತಮಾ
ನದಿಂದ ಹದಿನೆಂಟನೆಯ ಶತಮಾನದವರೆಗೆ ವಚನಶಾಸ್ತ್ರವು ಬೆಳೆಯುತ್ತ
ನಡೆಯಿತು. ಹದಿಮೂರು, ಹದಿನಾಲ್ಕು, ಹದಿನಾರು ಈ ಶತಮಾನಗ
ಳಲ್ಲಿ ವಚನಶಾಸ್ತ್ರವು ಆ ಕಾಲದ ರಾಜಕೀಯವಿಪ್ಲವಕ್ಕೋಸುಗ ಅಷ್ಟು
ಬೆಳೆಯಲಿಲ್ಲ. ಹದಿನೈದನೆಯ ಶತಮಾನದಲ್ಲಿ ಈ ಸಾಹಿತ್ಯಕ್ಕೆ ಪ್ರೋತ್ಸಾಹ
ದೊರೆತು ಬಹಳ ಬೆಳೆಯಿತು. ಈ ಸಾಹಿತ್ಯದ ಪ್ರಸಾರವನ್ನು ಬಹಳವಾಗಿ
ಮಾಡಿದವರು ನೂರಾ ಒಂದು ವಿರಕ್ತರು. ಇವರು ವಿಜಯನಗರದ
ಪ್ರೌಢದೇವರಾಯನ (೧೪೧೯ ರಿಂದ ೧೪೪೬) ಕಾಲದಲ್ಲಿ ದಂಡನಾಯಕ
ರಾಗಿದ್ದ ಜಕ್ಕಣ್ಣ ಮತ್ತು ಲಕ್ಕಣ್ಣ ಇವರ ಆಶ್ರಯದಲ್ಲಿದ್ದರು. ಇವರಲ್ಲಿ
ಮಹಲಿಂಗದೇವ, ಕಲ್ಲುಮಠದ ಪ್ರಭುದೇವ, ಗುಬ್ಬಿಯ ಮಲ್ಲಣಾರ್ಯ,
ತೋಂಟದ ಸಿದ್ಧೇಶ್ವರ ಮೊದಲಾದವರು ಮುಖ್ಯರು. ಉಳಿದ ಶತಮಾ
ನಗಳಲ್ಲಿ ಈ ಸಾಹಿತ್ಯದ ಬೆಳವಣಿಗೆಯು ಸಾಕಷ್ಟು ಆಗದೆ ಇದ್ದರೂ ಕೂಡ
ಆಗಾಗ್ಗೆ ಪ್ರಸಿದ್ಧ ವಚನಕಾರರು ತಲೆದೋರುತ್ತಿದ್ದರು.

ವಚನಶಾಸ್ತ್ರಕಾರರು ತಮ್ಮದೊಂದು ವಿಶಿಷ್ಟವಾದ ಮತವನ್ನು
ಪ್ರತಿಪಾದಿಸುವರು. ಹಿಂದೂ ಧರ್ಮದೊಳಗೆ ಅನೇಕ ಬಗೆಯ ತಾತ್ವಿಕ





ವಿಚಾರಗಳನ್ನು ಕಾಣಬಹುದು. ಹಿಂದೂ ಧರ್ಮದ ತತ್ವಜ್ಞಾನವನ್ನು
ಪ್ರಸ್ಥಾನತ್ರಯಿಗಳಿಂದ ಅಂದರೆ ಉಪನಿಷತ್ತುಗಳು, ವೇದಾಂತಸೂತ್ರ
ಗಳು, ಮತ್ತು ಭಗವದ್ಗೀತೆ ಇವುಗಳಿಂದ ತಿಳಿದುಕೊಳ್ಳಬಹುದೆಂದು ಅತಿ
ಪ್ರಾಚೀನ ಕಾಲದಿಂದ ಜನರಲ್ಲಿ ನಂಬುಗೆಯಿದೆ. ಭಿನ್ನಭಿನ್ನ ಮತಸ್ಥಾ
ಪಕರಾದ ಆಚಾರ್ಯರು ತಮ್ಮ ತತ್ವಗಳನ್ನು ಈ ಗ್ರಂಥಗಳಿಂದಲೇ
ಪುಷ್ಟೀಕರಿಸುವರು. ಶ್ರೀ. ಭಗವತ್ಪಾದ ಶಂಕರಾಚಾರ್ಯರು ತಮ್ಮ
ಅದ್ವೈತವೇ ತತ್ವಜ್ಞಾನದ ತಳಹದಿಯೆಂದೂ, ಶ್ರೀರಾಮಾನುಜಾಚಾ
ರ್ಯರು ವಿಶಿಷ್ಟಾದ್ವೈತವೇ ತತ್ವಜ್ಞಾನದ ಮೂಲವೆಂದೂ, ಇವರಿಬ್ಬರಿಗೂ
ಭಿನ್ನವಾಗಿ ಶ್ರೀಮಧ್ವಾಚಾರ್ಯರು ದ್ವೈತವೇ ನಿಜವಾದ ತತ್ವಜ್ಞಾನ
ವೆಂದೂ, ಅವೇ ಪ್ರಸ್ಥಾನತ್ರಯಿಗಳ ಆಧಾರದಿಂದ ಪ್ರತಿಪಾದಿಸುವರು.
ಪ್ರಸ್ಥಾನತ್ರಯಿಗಳಲ್ಲಿ ಅದ್ವೈತ--ವಿಶಿಷ್ಟಾದ್ವೈತ--ದ್ವೈತಸಂಪ್ರದಾಯಗಳ
ತತ್ವಗಳೆಲ್ಲವೂ ದೊರೆಯುವುದರಿಂದ ಈ ಗ್ರಂಥಗಳು ಖಂಡಿತವಾಗಿ ಒಂದೇ
ಮತವನ್ನು ಪ್ರತಿಪಾದಿಸುವುದಿಲ್ಲವೆಂದೂ ಋಷಿಗಳು ಸ್ವಯಂಸ್ಫೂರ್ತಿ
ಯಿಂದ ತಮಗೆ ಸರಿಕಂಡ ತತ್ವಗಳನ್ನು ಸಮಯಾನುಸರಿಸಿ ಒಡನುಡಿ
ದಿರುವರೆಂದೂ ಅನೇಕ ಋಷಿಗಳು ಆಡಿದ ಇಂತಹ ತತ್ವಗಳನ್ನು ಕ್ರೋಢೀ
ಕರಿಸಿ ತತ್ವಪ್ರತಿಪಾದಕ ಗ್ರಂಥಗಳಾದ ಉಪನಿಷತ್ತುಗಳು, ವೇದಾಂತ
(ಬ್ರಹ್ಮ) ಸೂತ್ರಗಳು, ಭಗವದ್ಗೀತೆ ಮೊದಲಾದವುಗಳು ರಚಿತವಾದು
ವೆಂದೂ ಈಗಿನ ಪಂಡಿತರು ಪ್ರತಿಪಾದಿಸುವರು. ವೀರಶೈವ ಮತದ
ತತ್ವಜ್ಞಾನವು ಅದ್ವೈತವಾಗಿರುವುದೆಂದು ಕೆಲವರೂ, ವಿಶಿಷ್ಟಾದ್ವೈತ ಪರ
ವಾಗಿದ್ದು ಇದಕ್ಕೆ ಶಕ್ತಿವಿಶಿಷ್ಟಾದ್ವೈತವೆಂದು ಕರೆಯುವರೆಂದು ಕೆಲವರೂ
ಪ್ರತಿಪಾದಿಸುವರು. ಆದರೆ ವೀರಶೈವರ ತತ್ವಜ್ಞಾನವನ್ನು ಕೂಲಂಕಷ
ವಾಗಿ ಅಭ್ಯಾಸ ಮಾಡಿದವರಿಗೆ ದ್ವೈತಪರವಾದ ಅನೇಕ ಆಧಾರಗಳೂ
ಇವುಗಳಲ್ಲಿ ದೊರೆಯುವವು ಆದುದರಿಂದ ವೀರಶೈವ ವಚನಶಾಸ್ತ್ರಗ
ಳಲ್ಲಿ ಅಲ್ಲಲ್ಲಿ ಅದ್ವೈತ-ವಿಶಿಷ್ಟಾದ್ವೈತ ಮತ್ತು ದ್ವೈತಪರವಾದ ಅನೇಕ
ವಚನಗಳು ದೃಷ್ಟಿಗೆ ಬೀಳುವವು. ಈ ವಿರೋಧವನ್ನು ಪರಿಹರಿಸಲು
ವೀರಶೈವರ ತತ್ವಜ್ಞಾನದಿಂದ ಸಾಧ್ಯವಿದೆ. ವೀರಶೈವರು ತಮ್ಮ ತತ್ವ
ಜ್ಞಾನಕ್ಕೆ ಷಟ್ಸ್ಥಲಸಿದ್ಧಾಂತವೆಂದು ಒಂದು ವಿಶಿಷ್ಟವಾದ ಹೆಸರನ್ನು
ಕೊಟ್ಟಿರುವರು. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು
ಐಕ್ಯವೆಂಬುವು- ಈ ಆರು ಸ್ಥಲಗಳು. ಈ ಆರು ಸ್ಥಲಗಳು ಪರಮಾತ್ಮ

ನನ್ನು ಮುಟ್ಟಲು ಅಗತ್ಯವಾದ ಆರು ಮೆಟ್ಟಿಲುಗಳೆಂದು ತಿಳಿಯತಕ್ಕದ್ದು. ಮೇಲಟ್ಟವನ್ನು ಹತ್ತಲು ನಿಚ್ಚಣಿಕೆ ಹೇಗೆ ಅಗತ್ಯವೋ ಹಾಗೆ ಪರಮಾತ್ಮನಲ್ಲಿ ಐಕ್ಯಹೊಂದಲು ಈ ಷಟ್ಸ್ಥಲಜ್ಞಾನವು ಅತ್ಯಗತ್ಯವಾದುದು. ನಾವು ಮಾನವೀ ಸ್ವಭಾವವನ್ನು ಸಂಪೂರ್ಣವಾಗಿ ತ್ಯಜಿಸಿ, ಪರಮಾತ್ಮನಲ್ಲಿ ಬೆರೆಯಬೇಕಾದರೆ ನಮ್ಮ ಅಂತರಾತ್ಮವು ಕ್ರಮೇಣ ಪರಿಶುದ್ಧವಾಗುತ್ತ ಹೋಗಬೇಕು. ಮೊದಲು ಅಂತರಾತ್ಮವು ದ್ವೈತಸ್ಥಿತಿಯಲ್ಲಿದ್ದು ಮುಂದೆ ವಿಶಿಷ್ಟಾದ್ವೈತ, ಕಡೆಗೆ ಅದ್ವೈತ ಸ್ಥಿತಿಗೆ ಮುಟ್ಟಬೇಕೆಂಬುದ್ದೇಶದಿಂದ ವೀರಶೈವರು ತಮ್ಮ ಷಟ್ಸ್ಥಲಸಿದ್ಧಾಂತದಲ್ಲಿ ದ್ವೈತವಿಶಿಷ್ಟಾದ್ವೈತಾದ್ವೈತಗಳನ್ನು ಅಡಗಿಸಿರುವರೆಂದು ತಿಳಿಯಬಹುದು. ಭಕ್ತ ಮತ್ತು ಮಹೇಶ ಸ್ಥಲಗಳು ದ್ವೈತಕ್ಕೂ ಪ್ರಸಾದಿ ಮತ್ತು ಪ್ರಾಣಲಿಂಗಿ ಸ್ಥಲಗಳು ವಿಶಿಷ್ಟಾದ್ವೈತಕ್ಕೂ ಶರಣ ಮತ್ತು ಐಕ್ಯಸ್ಥಲಗಳು ಅದ್ವೈತಕ್ಕೂ ಸರಿಹೋಲುವವು. ಹೀಗೆ ಅರ್ಥ ಮಾಡಿದರೆ ವಚನಗಳಲ್ಲಿ ಮತ್ತು ಸಿದ್ಧಾಂತ ಶಿಖಾಮಣಿ ಮೊದಲಾದ ಷಟ್ಸ್ಥಲಜ್ಞಾನಪ್ರತಿಪಾದಕ ಗ್ರಂಥಗಳಲ್ಲಿ ಕಂಡುಬರುವ ವಿರೋಧವನ್ನು ಪರಿಹರಿಸಲು ಸಾಧ್ಯವಿದೆ ವೀರಶೈವರ ತತ್ವಜ್ಞಾನದಲ್ಲಿ ಮತ್ತೊಂದು ವಿಶೇಷವೆಂದರೆ ಅವರು ಎರಡೇ ಪದಾರ್ಥಗಳನ್ನು (*Entities*) ಅಂಗೀಕರಿಸುವರು. ಒಂದು 'ಅಂಗ' ಇದು ಪಾಶ್ಚಾತ್ಯ ತತ್ವಜ್ಞಾನಿಗಳ (*Matter*) ಎಂಬುದಕ್ಕೆ ಸರಿಹೋಲುವುದು. ಶರೀರಾದಿ ನಾನಾ ಪ್ರಪಂಚಕ್ಕೆ ಯಾವುದು ಮೂಲ ಕಾರಣವೋ ಅದು; ಸಾಂಖ್ಯರ 'ಪ್ರಕೃತಿ'ಗೆ ಸರಿಹೋಲಬಹುದು. ಮತ್ತೊಂದು ಲಿಂಗ. ಇದು (*Soul*) ಎಂಬುದಕ್ಕೆ ಸರಿಹೋಲುವುದು. ಚೈತನ್ಯ ಅಥವಾ ಆತ್ಮನ್ ಅಥವಾ ಸಾಂಖ್ಯರ 'ಪುರುಷ'ವೆಂದರೂ ಆಗಬಹುದು. ಮೇಲೆ ಹೇಳಿದ ಆರುಸ್ಥಲಗಳು ಅಂಗ-ಲಿಂಗ ಪ್ರಭೇದದಿಂದ ಒಂದುನೂರಾ ಒಂದು ಸ್ಥಲಗಳಾಗಿರುವುವು ಇವೆಲ್ಲವುಗಳಿಗೆ ಏಕೋತ್ತರ ಶತಸ್ಥಲವೆಂದು ಹೆಸರು.

ಉದಾಹರಣೆಗಾಗಿ ಮತ್ತು ವಚನಗಳ ಶೈಲಿಯನ್ನು ತಮ್ಮೆಲ್ಲರ ಅವಗಾಹನೆಗೆ ತರುವುದಕ್ಕಾಗಿ ಹಲ ಕೆಲವು ವಚನಗಳನ್ನು ತಮ್ಮ ಮುಂದೆ ಇಡುವೆನು.

೧. ದೇವರ ಲೀಲೆಯು ಅಗಾಧವಾದುದು:

"ಶರಧಿಯ ಮೇಲೆ ಧರೆ ಕರಗದಂತಿರಿಸಿದೆ- ಅಂಬರಕ್ಕೆ ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ. ಎಲೆ ಮೃಡನೆ ನೀನಲ್ಲದೆ ಉಳಿದ ದೈವಂಗಳಿಗಹುದೇ ರಾಮನಾಥಾ"



ಈ ವಚನದಲ್ಲಿ ಎಂತಹ ಗೂಢವಾದ ಅರ್ಥವು ಅಡಕವಾಗಿದೆಯೆಂಬುದನ್ನು ಊಹಿಸಲು ನಿಮಗೆಲ್ಲರಿಗೆ ಶಕ್ಯವಿದೆ.

೨. ದೇವರು ಒಬ್ಬನೇ:

"ಕುಂಭ ಸಹಸ್ರ ಉದಕದೊಳಗೆ ಬಿಂಬಿಸಿ ತೋರುವ ಸೂರ್ಯನೊಬ್ಬನಲ್ಲದೆ ಮತ್ತೆ ಹಲಬರುಂಟೇನಯ್ಯ? ಸಕಲ ದೇಹದೊಳಗೆ ಭ್ರಮಿಸಿ ತುಂಬಿಪ್ಪ ಪರವಸ್ತು ನೀನೊಬ್ಬನಲ್ಲದೆ ಮತ್ತಾರನೂ ಕಾಣೆನಯ್ಯ ಅಖಂಡೇಶ್ವರಾ"

ಇದರಲ್ಲಿ ಪರಮಾತ್ಮನು ಎಲ್ಲ ಜೀವಿಗಳಲ್ಲಿ ಜೀವಾತ್ಮರೂಪದಿಂದ ತುಂಬಿಕೊಂಡಿರುವನೆಂಬ ತತ್ತ್ವವನ್ನು ಮತ್ತು ಆತನು ಸರ್ವಾಂತರ್ಯಾಮಿಯಾಗಿರುವನೆಂಬ ತತ್ತ್ವವನ್ನು ಅಜ್ಞರಿಗೆ ಕೂಡಾ ತಿಳಿಯುವಂತೆ ಹೇಳುತ್ತದೆ.

೩. ದೇವರ ಸ್ವರೂಪ:

"ತಾಯಿತಂದೆ ಇಲ್ಲದ ಕಂದಾ ನಿನಗೆ ನೀನೇ ಹುಟ್ಟಿ ಬಳೆದೆಯಲ್ಲಾ. ನಿನ್ನ ಪರಿಣಾಮವೇ ನಿನಗೆ ಪ್ರಾಣತೃಪ್ತಿಯಾಗಿ ಇದ್ದೆಯಲ್ಲಾ. ಭೇದಕರಿಗೆ ಅಭೇದ್ಯನಾಗಿ ನಿನ್ನ ನಿನೇ ಬೆಳಗುತಿರ್ದೆಯಲ್ಲಾ. ನಿನ್ನ ಚಾರಿತ್ರ ನಿನಗೆ ಸಹಜ ಗುಹೇಶ್ವರಾ"

"ಇಳೆ ನಿಮ್ಮ ದಾನ. ಬೆಳೆ ನಿಮ್ಮ ದಾನ. ಸುಳಿದು ಬೀಸುವ ವಾಯು ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥಾ"

ಈ ವಚನಗಳಲ್ಲಿ ದೇವರು ಸ್ವಯಂಭುವಾಗಿದ್ದು ಅತರ್ಕ್ಯನಾಗಿರುವನೆಂದೂ ಅವನೇ ಸರ್ವತ್ರ ವ್ಯಾಪಿಯೆಂದೂ ಸರ್ವಕರ್ತೃವೆಂದೂ ವಿಶದಪಡಿಸಿರುವರು.

೪. ಮೂರ್ತಿಗಳು ದೇವರಲ್ಲ:

"ಅರಗು ತಿಂದು ಕರಗುವ ದೈವ, ಉರಿಯ ಕಂಡರೆ ಮುರುಟುವ ದೈವ, ಎಂತು ಸರಿಯೆಂಬೆನಯ್ಯಾ. ಅವಸರ ಬಂದರೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ. ಅಂಜಿಕೆ ಬಂದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ. ಸಹಜಭಾವ ನಿಜೈಕ್ಯಸ್ಥಿರರೂಪ ನಿರ್ವಿಕಾರ ನಿರಂಜನ ಕೂಡಲಸಂಗಮದೇವನೊರ್ವನೇ ದೇವ ಕಾಣಿರೋ"

ಈ ವಚನದಲ್ಲಿ ವಚನ ಶಾಸ್ತ್ರಕಾರರು, ಸಾಮಾನ್ಯವಾಗಿ ಮನೆಗಳಲ್ಲಿ ಚಿನ್ನ--ಬೆಳ್ಳಿ ಮೊದಲಾದ ಧಾತುಗಳಿಂದ ಮಾಡಿದ ಮೂರ್ತಿಗಳು ದೇವರಲ್ಲ; ದೇವರು ಸಹಜಭಾವ, ನಿಜೈಕ್ಯಸ್ಥಿರರೂಪ ನಿರ್ವಿಕಾರ, ನಿರಂಜನ ಎಂದೂ ಹೇಳುವರು.

೫. ಮನೋನಿಗ್ರಹ ಮಾಡದೆ ಎಷ್ಟು ಓದಿದರೂ ವ್ಯರ್ಥ :

"ವೇದಶಾಸ್ತ್ರಾಗಮಗಳೆಂಬುವ ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಂಬೋ ಅವನು ಕುಟ್ಟಲೇಕೆ? ಅತ್ತಿತ್ತ ಹರಿವ ಮನದ ಶಿರವನರಿಯ ಬಲ್ಲಡೆ ಒಟ್ಟಬಯಲು ಚೆನ್ನಮಲ್ಲಿಕಾರ್ಜುನಾ"

ಈ ವಚನದಲ್ಲಿ ಮನೋನಿಗ್ರಹವಿಲ್ಲದೆ ಶಿವನು ಕಾಣನು. ವಿದ್ಯೆಯಿಂದ ದೇವರ ಸಾಕ್ಷಾತ್ಕಾರವಾಗುವುದಿಲ್ಲ. ದೇವರ ಸಾಕ್ಷಾತ್ಕಾರವಾಗಬೇಕಾದರೆ ಮನಸ್ಸು ಶುದ್ಧವಾಗಿರಬೇಕು.

೬. ಬಾಹ್ಯಾಡಂಬರವು ವ್ಯರ್ಥ :

"ಜಡೆಮುಡಿ ಬೋಳು ಹೇಗಿದ್ದರೇನೊ ನಡೆನುಡಿ ಸಿದ್ಧಾಂತವಾದರೆ ಸಾಕು. ಆತ್ಮ ಸ್ವಯಂಜ್ಯೋತಿ ಗುರುವಹ. ಈ ಇರವ ನೀನರಿ ಪಾಪಾರಣ್ಯದಹನಭೀಮೇಶ್ವರಲಿಂಗನಿರಂಗಸಂಗಾ"

ಈ ವಚನದಲ್ಲಿ ಬಾಹ್ಯಸ್ವರೂಪಕ್ಕೆ ಮಹತ್ತ್ವಕೊಡಬಾರದು. ನಡೆನುಡಿ ಶುದ್ಧವಾಗಿರಬೇಕು ಎಂಬುದನ್ನು ಹೇಳಿದೆ.

೭. ಕೃತಕವಾದ ಕುಲ--ಜಾತಿ ಮೊದಲಾದವುಗಳಿಗೆ ಮಹತ್ತ್ವ ಕೊಡಬಾರದು :

"ಪುಣ್ಯಪಾಪಂಗಳೆಂಬುವು ತಮ್ಮ ಇಷ್ಟವು ಕಂಡಿರಯ್ಯ. ಅಯ್ಯಾ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ. ದೇವಭಕ್ತ ಜಯ ಜಯ ಎಂಬ ನುಡಿಯೊಳಗೆ ಕೈಲಾಸವೈದುದು ಕೂಡಲಸಂಗಮದೇವಾ"

"ಕೊಲ್ಲುವವನೇ ಮಾದಿಗನು. ಹೊಲಸು ತಿಂಬವನೇ ಹೊಲೆಯ. ಕುಲವೇನೊ ಅವಂದಿರ ಕುಲವೇನೊ. ಸಕಲಜೀವಾತ್ಮರಿಗೆ ಲೇಸನೇ ಬಯಸುವರು ನಮ್ಮ ಕೂಡಲಸಂಗನ ಶರಣರೆಲ್ಲ ಕುಲಜರು."

ಇವು ಶ್ರೇಷ್ಠ - ಕನಿಷ್ಠ ಎಂಬುದನ್ನು ಕೃತಿಗಳಿಂದ ಮತ್ತು ಗುಣಗಳಿಂದ ಅರಿಯಬೇಕು. ಕುಲದಿಂದಲ್ಲ ಎಂಬ ಸಿದ್ಧಾಂತವನ್ನು ಪ್ರತಿಪಾದಿಸುವುವು



೮. ಶರಣನು ಲೋಕಾಪವಾದಕ್ಕೆ ಅಂಜದೆ ಆತ್ಮಸಾಕ್ಷಿಯಾಗಿ ನಡೆಯುವನು :

"ಸರ್ವಸಂಗ ಪರಿತ್ಯಾಗ ಮಾಡಿದ ಶಿವಶರಣನ ಲೋಕದ ಸಂಸಾರಿಗಳೆಂತು ಮೆಚ್ಚುವರಯ್ಯ. ಊರೊಳಗಿದ್ದರೆ ಉಪಾಧಿಕನೆಂಬರು. ಅಡವಿಯೊಳಗಿದ್ದರೆ ಮೃಗನೆಂಬರು. ಹೊನ್ನ ಬಿಟ್ಟರೆ ದರಿದ್ರನೆಂಬರು. ಹೆಣ್ಣ ಬಿಟ್ಟರೆ ನಪುಂಸಕನೆಂಬರು. ಪುಣ್ಯವ ಬಿಟ್ಟರೆ ಪೂರ್ವಕರ್ಮಿಯೆಂಬರು. ಮಾತಾಡದಿದ್ದರೆ ಮೂಗನೆಂಬರು. ಮಾತನಾಡಿದರೆ ಜ್ಞಾನಿಗೆ ಕಯ್ಯ ಮಾತೇಕೆಂಬರು. ನಿಜವನಾಡಿದರೆ ನಿಷ್ಠುರನೆಂಬರು. ಸಮತೆಯ ನುಡಿದರೆ ಅಂಜುವನೆಂಬರು. ಇದು ಕಾರಣ ಕೂಡಲಚೆನ್ನಸಂಗಯ್ಯ ನಿಮ್ಮ ಶರಣ ಲೋಕದಿಚ್ಛೆಯ ನಡೆಯ"

೯. ಜಾತಿಪದ್ಧತಿಯ ನಿರಾಕರಣ ಗುಣಕರ್ಮಗಳನ್ನನುಸರಿಸಿ ಜಾತಿಗಳಿರಬೇಕು: –

"ಉಂಬಲ್ಲಿ ಉಡುವಲ್ಲಿ ಕ್ರಿಯೆಯುಳಿಯಿತ್ತೆಂಬರು. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರಯ್ಯ. ಅವರು ಭಕ್ತರೆಂತೆಂಬೆನಯ್ಯ ಅವರು ಯುಕ್ತರೆಂತೆಂಬೆನಯ್ಯ? ಕೂಡಲಸಂಗಮದೇವ ಕೇಳಯ್ಯ ಹೊಲತಿ ಶುದ್ಧ ನೀರ ಮಿಂದಂತಾಯ್ತು"

"ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ, ದೂರ್ವಾಸ ಮುಚ್ಚಿಗ, ದಧೀಚಿ ಕೀಲಿಗ, ಕಶ್ಯಪ ಕಮ್ಮಾರ, ರೋಮಜ ಕಂಚುಗಾರ, ಕೌಂಡಿಲ್ಯ ನಾವಿಂದ, ಎಂದುದನರಿಯದೆ ಮತ್ತೆ ಕುಲವುಂಟೆಂದು ಛಲಕ್ಕೆ ಹೋರಲೇತಕ್ಕೆ? ಇಂತೀ ಸಪ್ತಋಷಿಗಳೆಲ್ಲರೂ ಸತ್ಯದಿಂದೆ ಮುಕ್ತರಾದುದನರಿಯದೆ ಅಸತ್ಯದಲ್ಲಿ ನಡೆದು ವಿಪ್ರರು ನಾವು ಘನವೆಂದು ಹೋರುವ ಹೊತ್ತುಹೋಕರ ಮಾತೇತಕ್ಕೆ? ಕಯ್ಯುಳಿಗತ್ತಿ ಅಡಿಗೂಂಟ ಕಡೆಯಾಗಬೇಡ ಅರಿ ನಿಜಾತ್ಮರಾಮರಾಮನಾ"

೧೦. ಬಾಹ್ಯಶುದ್ಧಿಗಿಂತ ಅಂತರಂಗಶುದ್ಧಿಯು ಅವಶ್ಯವಾಗಿದೆ:

"ಜನಮೆಚ್ಚು ಶುದ್ಧನಲ್ಲದೆ ಮನಮೆಚ್ಚು ಶುದ್ಧನಲ್ಲವಯ್ಯ. ನುಡಿಯಲ್ಲಿ ಜಾಣನಲ್ಲದೆ ನಡೆಯಲ್ಲಿ ಜಾಣನಲ್ಲವಯ್ಯ. ವೇಷದಲ್ಲಿ ಅಧಿಕನಲ್ಲದೆ ಭಾಷೆಯಲ್ಲಿ ಅಧಿಕನಲ್ಲವಯ್ಯ. ಧನದೊರಕದೆ ನಿಸ್ಪೃಹನಲ್ಲದೆ ಧನ

ದೊರಕಿ ನಿಸ್ಪೃಹಿಯಲ್ಲವಯ್ಯ. ಏಕಾಂತದ್ರೋಹಿ ಗುಪ್ತಪಾತಕಿ ಯುಕ್ತಿ ಶೂನ್ಯಂಗೆ ಸಕಳೇಶ್ವರದೇವರು ಒಲಿ ಒಲಿ ಎಂದರೆ ಎಂತೊಲಿವನಯ್ಯ"

ಶಮೆ, ದಮೆ, ವಿವೇಕ, ವೈರಾಗ್ಯ, ಪರಿಪೂರ್ಣಭಾವ ಶಾಂತಿ, ಕಾರುಣ್ಯ, ಶ್ರದ್ಧೆ, ಸತ್ಯ, ಸದ್ಭಕ್ತಿ, ಶಿವಜ್ಞಾನ, ಶಿವಾನಂದ, ಉದಯವಾದ ಮಹಾಭಕ್ತನ ಹೃದಯದಲ್ಲಿ ಶಿವನಿಪ್ಪ. ಆತನ ದರ್ಶನ, ಸ್ಪರ್ಶನ ಸಂಭಾಷಣೆಯಿಂದ ಕೇವಲ ಮುಕ್ತಿಯಪ್ಪುದು ತಪ್ಪದಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ"

"ಶಿವನೇ ದೈವ, ಕೊಲ್ಲದಿಪ್ಪುದೇ ಧರ್ಮ, ಅಧರ್ಮದಿಂದ ಬಂದುದನೊಲ್ಲದಿಪ್ಪುದೇ ನೇಮ, ಆಶೆಯಿಲ್ಲದಿಪ್ಪುದೇ ತಪ, ರೋಷವಿಲ್ಲದಿಪ್ಪುದೇ ಜಪ, ವಂಚನೆಯಿಲ್ಲದಿಪ್ಪುದೇ ಭಕ್ತಿ, ಹೆಚ್ಚುಕುಂದಿಲ್ಲದಿಪ್ಪುದೇ ಸಮಯಾಚಾರ. ಇದು ಸತ್ಯ. ಶಿವಬಲ್ಲ, ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ"

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯವ ನುಡಿಯಲು ಬೇಡ, ತನ್ನ ಬಣ್ಣಿಸಬೇಡ, ಇದಿರು ಹಳಿಯಲುಬೇಡ, ಇದೇ ಅಂತರಂಗದ ಶುದ್ಧಿ; ಇದೇ ಬಹಿರಂಗದ ಶುದ್ಧಿ; ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.

ಈ ಉದಾಹರಣೆಗಳಿಂದ ವಚನಶಾಸ್ತ್ರಕಾರರ ಸ್ವಭಾವವು ಸ್ಪಷ್ಟವಾಗುವುದು. ವಚನ ವಾಙ್ಮಯದ ಸ್ವಾರಸ್ಯವನ್ನು ಹೆಚ್ಚು ಹೆಚ್ಚು ಆಸ್ಥೆಯಿಂದ ಅಭ್ಯಾಸ ಮಾಡಿದವರಿಗೆ ಯೋಗ್ಯ ಪ್ರತಿಫಲವು ಸಿಗದೆ ಇರಲಾರದು. ಹಳಗನ್ನಡ ಗದ್ಯದ ಸೊಬಗನ್ನು ಆಧುನಿಕ ಗದ್ಯದಲ್ಲಿ ಒಡಮೂಡಿಸಿ ಅದನ್ನು ಸರ್ವಾಂಗಸುಂದರವಾಗಿ ಮಾಡಬೇಕೆಂಬ ಅಭಿಲಾಷೆಯುಳ್ಳವರು ವಚನ ವಾಙ್ಮಯವನ್ನು ಅಭ್ಯಾಸಮಾಡಬೇಕು.

# ಸೃಷ್ಟಿಯ ಉತ್ಪತ್ತಿಯೂ, ಶಿವಯೋಗದ ಮಹಿಮೆಯೂ.

(ಲೇಖಕ — ರುದ್ರಪ್ಪ ಸಿದ್ದಪ್ಪ ಕೊಟಗಿ ಶಾಲಾ ಮಾಸ್ತರ
ಗಜೇಂದ್ರಗಡ ಜಿ. ಧಾರವಾಡ.)

ನಭೋಮಂಡಲ (ಆಕಾಶ)ದಲ್ಲಿ ಅನೇಕ ಗ್ರಹ-ನಕ್ಷತ್ರಾದಿಗಳಿರುವಂತೆ ನಮ್ಮ ಪೃಥ್ವಿಯೊಂದೂ ಇರುವದು. ಈ ಪೃಥ್ವಿಯು ಸಕಲ ಮಾತುಗಳಿಂದಲೂ ನಮ್ಮನ್ನು ಒಳಕೊಂಡಿರುವದು. ಅಂತೇ ಇದಕ್ಕೂ ನಮಗೂ ಅತ್ಯಂತ ಪರಿಚಯವಾಗಿ ಬಿಟ್ಟಿದೆ. ಇದು ಆಕಾರದಲ್ಲಿ ನಮಗಿಂತ ಎಷ್ಟೋ ಪಾಲು ದೊಡ್ಡದಾಗಿರುವದರಿಂದಲೂ, ತರತರದ ಪ್ರಾಣಿ-ವೃಕ್ಷಾದಿಗಳಿಂದ ಪರಿಪೂರ್ಣ ತುಂಬಿ ಹೋಗಿರುವದರಿಂದಲೂ ಪ್ರತ್ಯಕ್ಷ ರೀತಿಯಿಂದ ಇದರ ಸಮಗ್ರಜ್ಞಾನವು ನಮಗಾಗುವದಸಂಭವವೇ ಸರಿ! ಪೃಥ್ವಿಯು ಹುಟ್ಟಿ ಎಷ್ಟೋ ಯುಗಗಳಾದ ಬಳಿಕ ನಮ್ಮೆಲ್ಲರ ಉತ್ಪತ್ತಿ ಆಗಿದೆ. ಆದ್ದರಿಂದ ಪೃಥ್ವಿಯ ಉತ್ಪತ್ತಿಯ ಬಗ್ಗೆ ಎಷ್ಟು ವಿಚಾರಿಸಿದರೂ ಬರೀ ತರ್ಕದಿಂದಲ್ಲದೆ, ಇನ್ನೊಂದರಿಂದ ತಿಳಿಯುವಂತೆಯೇ ಇಲ್ಲ. ಸೃಷ್ಟಿಯ ಉತ್ಪತ್ತಿಯ ಬಗ್ಗೆ ಅಧಿ ಭೌತಿಕ, ಅಧಿ ದೈವಿಕ, ಅಧ್ಯಾತ್ಮಿಕ ಶಾಸ್ತ್ರಕಾರರ ಮತಗಳು ಭಿನ್ನ ಭಿನ್ನವಾಗಿಯೇ ಇರುವವು.

(೧) ಎಲ್ಲಕ್ಕೂ ಮೊದಲು ವಿಶ್ವದ ತುಂಬ ಪಸರಿಸಿದ್ದ ಅತಿ ವಿರಲವಾದ ವಾಯುರೂಪ ದ್ರವ್ಯದಿಂದ ತೇಜೋ-ಮೇಘೋತ್ಪತ್ತಿಯಾಯಿತೆಂತಲೂ, ತೇಜೋಮೇಘದಿಂದ ಗ್ರಹ ನಕ್ಷತ್ರಾದಿಗಳ ಉತ್ಪತ್ತಿಯಾಗಿರುವದೆಂತಲೂ ಅಧಿಭೌತಿಕ ಶಾಸ್ತ್ರಕಾರರು ತರ್ಕಿಸುವರು.

(೨) ಪ್ರತಿಯೊಂದು ಗ್ರಹ-ನಕ್ಷತ್ರಾದಿಗಳಿಗೆ ಒಂದೊಂದು ಅಧಿದೈವಿಕ ಶಕ್ತಿಯು ಅಂತರ್ಗತ ರೀತಿಯಿಂದ ಆಧಾರವಾಗಿದ್ದು, ಅದರಿಂದಲೇ ಆಯಾಯ ಗ್ರಹ ನಕ್ಷತ್ರಾದಿಗಳ ಸ್ಥಿತಿ ಲಯಾದಿಗಳು ನಡಿಸಲ್ಪಡುವವೆಂದು, ಅಧಿ ದೈವಿಕರು ನಂಬುವರು.

(೩) ವಿಶ್ವಮಂಡಲವು ಅತಿ × ಸೂಕ್ಷ್ಮ ತತ್ವದಿಂದ ತುಂಬಿದ್ದು, ಅದರಿಂದಲೇ ಗ್ರಹ-ನಕ್ಷತ್ರಾದಿಗಳು ಉದಯಿಸಿರುತ್ತವೆಂದು, ಆಧ್ಯಾತ್ಮಿಕ ಶಾಸ್ತ್ರಕಾರರು ಜ್ಞಾನದಿಂದಲೂ, ತರ್ಕದಿಂದಲೂ ಸೂಕ್ಷ್ಮಾನುಭವದಿಂದಲೂ ಸಿದ್ಧಪಡಿಸಿರುವರು.

ಒಟ್ಟಿನ ಮೇಲೆ ಕ್ರಮವಾಗಿ ಸೂಕ್ಷ್ಮ, ಸೂಕ್ಷ್ಮತರ, ಅತಿಸೂಕ್ಷ್ಮವಾಗಿದ್ದ ಆಕಾಶದಲ್ಲಿಯ ಮೂಲ ತತ್ವದಿಂದಲೇ ಗ್ರಹ-ನಕ್ಷತ್ರಾದಿಗಳ ಉತ್ಪತ್ತಿಯಾಯಿತೆಂದು ಈ ಮೂವ್ವರೂ ಅಭಿಪ್ರಾಯ ಪಡುವರು. ಅಧಿದೈವಿಕರ ಎಷ್ಟೋ ಮತಗಳು ಅಧ್ಯಾತ್ಮಿಕ ಶಾಸ್ತ್ರಕಾರರ ಮತಗಳಲ್ಲಿ ಕೂಡಿ ಹೋಗುವವದರಿಂದ ಬಹುಶಃ ಅಧಿದೈವಿಕರು ಆಧ್ಯಾತ್ಮಿಕ ಶಾಸ್ತ್ರಕಾರರೊಳಗೇ ಮಿಲಿತರಾಗುವರು. ಆದರೆ ಆಧಿ ಭೌತಿಕ ಶಾಸ್ತ್ರಕಾರರಿಗೆ ಆಧ್ಯಾತ್ಮಿಕ ಶಾಸ್ತ್ರಕಾರರ ಎಷ್ಟೋ ಅಭಿಪ್ರಾಯಗಳು ತೀರ ಭಿನ್ನವಾಗಿ ತೋರುವದರಿಂದ ಇವರು ಮಾತ್ರ ಆಧ್ಯಾತ್ಮಿಕ ಶಾಸ್ತ್ರಕಾರರಲ್ಲಿ ಕೂಡುವದಿಲ್ಲ. ಇವರ ವಿಚಾರಗಳು ಇಂದ್ರಿಯ ಗ್ರಾಹ್ಯ ವಸ್ತುಗಳನ್ನು ಬಿಟ್ಟು ಇನ್ನೊಂದರ ಕಡೆಗೆ ಹೋಗುವದಿಲ್ಲ. "ಈ ಸೃಷ್ಟಿಯೂ ಇದರೊಳಗಿನ ಪದಾರ್ಥಗಳೂ ಒಂದಿಲ್ಲೊಂದು ಇಂದ್ರಿಯಕ್ಕೆ ಗೋಚರವಾಗಿಯೇ ತೀರುವವು. ಇದರ ಹೊರತು ಅವುಗಳ ಬುಡದಲ್ಲಿ ಮತ್ತೇನೂ ಇಲ್ಲ; ಪ್ರತಿಯೊಂದು ಇಂದ್ರಿಯಕ್ಕೆ ಆಗುವ ಜ್ಞಾನವೇ ಸತ್ಯ, ಉಳಿದದ್ದೆಲ್ಲ ಮಿಥ್ಯ" ಎಂಬುದೇ ಭೌತಿಕ ಶಾಸ್ತ್ರಕಾರರ ಮೂಲ ಮತವಾಗಿದೆ. ಆದರೆ ಆಧ್ಯಾತ್ಮಿಕ ಶಾಸ್ತ್ರಕಾರರ ವಿಚಾರವು ಇಷ್ಟಕ್ಕೇ ಮುಗಿದಿಲ್ಲ. ಅದು ಪಂಚೇಂದ್ರಿಯಗಳನ್ನು ಮಿಕ್ಕಿ ಮುಂದೆ ಹೋಗಿರುವದು. ಆದ್ದರಿಂದ ಆಧ್ಯಾತ್ಮಿಕ ಶಾಸ್ತ್ರಕಾರರ ಜ್ಞಾನವು ಬರೇ ಸೃಷ್ಟಿಯನ್ನಷ್ಟೇ ಯಾಕೆ ಇಡೀ ವಿಶ್ವವನ್ನೇ ವ್ಯಾಪಿಸಿರುವಷ್ಟು ವಿಸ್ತಾರವೂ ಅತಿ ಸೂಕ್ಷ್ಮವೂ ಆಗಿರುವದು. ಇವರ ಈ ಜ್ಞಾನ ಸಾಗರವು ಅನುಭವ ಜನ್ಯವಾದದ್ದೇ ಇರುವದರಿಂದ ಇದರ ಬಗ್ಗೆ ಇವರಿಗೆ ಯಾವ ಸಂಶಯವೂ ಇಲ್ಲದಾಗಿದೆ. ಭೌತಿಕ ಶಾಸ್ತ್ರಕಾರರು ತಲತಲಾಂತರಗಳಿಂದ ಚನ್ನಾಗಿಯೇ ವಿಚಾರಮಾಡಿ ನೋಡಿ ಕಡೆಗೆ ಆಧ್ಯಾತ್ಮಿಕ ಶಾಸ್ತ್ರಕಾರರ ಒಂದೊಂದೇ ತತ್ವಗಳಿಗೆ ತಲೆವಾಗಿ ನಮಿಸಹತ್ತಿರುವರು.

× ಇಲ್ಲಿ ಸೂಕ್ಷ್ಮವೆಂದರೆ ತೀರ ಸಣ್ಣದೆಂಬರ್ಥವಲ್ಲ; ಅತ್ಯಂತ ವಿಸ್ತಾರವಾಗಿ. ಹಬ್ಬಿದ ಅವಿರಲ ದ್ರವ



"ಪ್ರತಿಯೊಂದು ಜಡಪದಾರ್ಥವು ಹಲವು ಅಣುಗಳಿಂದಾಗಿದೆ., ಅಣುವು ಕೆಲವು ಪರಮಾಣುಗಳಿಂದ ಉದ್ಭವಿಸಿದೆ; ಪರಮಾಣುವಾದರೂ ಅತಿ ಸೂಕ್ಷ್ಮವೆನಿಸುವ ವಿದ್ಯುತ್ಕಣಗಳಿಂದಾಗಿದೆ;" ಎಂದು ಭೌತಿಕ ಶಾಸ್ತ್ರಕಾರರು ಹೇಳುವರು. ಇವರು ಇಷ್ಟು ಸೂಕ್ಷ್ಮ ಚೂರನ್ನು ಕಂಡುಹಿಡಿದಿದ್ದರೂ ಅವೆಲ್ಲ ಜಡವಾಗಿಯೇ ಇರುವವು; ಆದ್ದರಿಂದ ಅವು ಒಂದನ್ನೊಂದು ಕೂಡುವಾಗ ನಡುವೆ ಸಂದು ಉಳಿದೇ ಉಳಿಯುವದು. × ಈ ಸಂದಿನಲ್ಲಿ ಅಡಕವಾಗಿರುವ ತತ್ವವು ಈ ಭೌತಿಕ ಶಾಸ್ತ್ರಕಾರರಿಗೆ ಗೋಚರಿಸದೇ ಹೋಯಿತು. ವಿದ್ಯುತ್ಕಣಗಳು ಒಂದಕ್ಕೊಂದು ಕೂಡುವಾಗ ನಡುವೆ ಉಳಿಯುವ ಅವಕಾಶದಲ್ಲಿ ಏನಾದರೂ ದ್ರವ್ಯವು ತುಂಬಿರಬೇಕೆಂದು ಅತಿ ಸ್ಪಷ್ಟವು; ಯಾಕಂದರೆ ವಿಶ್ವದಲ್ಲಿ ಬರಿದಾದ ಸ್ಥಳವಾವುದೂ ಇಲ್ಲೆಂಬದು ಭೌತಿಕ ಶಾಸ್ತ್ರಕಾರರಿಗಾದರೂ ತಿಳಿದದ್ದೇ ಆಗಿದೆ. ಈ ವಿದ್ಯುತ್ಕಣಗಳ ನಡುವೆ ಇರುವ ಅತಿ ಸೂಕ್ಷ್ಮ ತತ್ವವು ಆಧ್ಯಾತ್ಮಿಕ ಶಾಸ್ತ್ರಕಾರರಿಗೆ ಎಂದೋ ಗೊತ್ತಾಗಿದೆ. ಈ ತತ್ವಕ್ಕೆ ಅವರು ಆಕಾಶ ತತ್ವವೆಂದು ಕರೆಯುವರು. ಭೌತಿಕ ಶಾಸ್ತ್ರಕಾರರು ಕಂಡು ಹಿಡಿದಿರುವ ವಿದ್ಯುತ್ಕಣವನ್ನು ಪೃಥಃಕರಿಸಿದರೆ ತೀರ ಸೂಕ್ಷ್ಮರಜಗಳು ಹೊರಬೀಳುವವು. ಈ ರಜಗಳನ್ನು ಸಹ ಪೃಥಃ ಕರಿಸಿದರೆ ಆಕಾಶ ತತ್ವವು ಬೈಲಿಗೆ ಬರುವದು. ಈ ಆಕಾಶ ತತ್ವವನ್ನು ಏಕಾಗಿ ರೂಪಿಸಿ ಜಡಪದಾರ್ಥವನ್ನಾಗ ಮಾಡುವ ಶಕ್ತಿ ವಿಶೇಷಕ್ಕೆ ಆಧ್ಯಾತ್ಮಿಕ ಶಾಸ್ತ್ರಕಾರರು ಪ್ರಾಣವೆಂದೆನ್ನುವರು. ಪ್ರಾಣ ಹಾಗು ಆಕಾಶ ತತ್ವಗಳೆರಡೂ ಪರಸ್ಪರ ಆಶ್ರಯ ಭೂತವಾಗಿ ಆಕಾಶದಲ್ಲಿ ತುಂಬಿರುವವು. ಅವು ಒಂದನ್ನೊಂದು ಬಿಟ್ಟೇ ಇರುವದಿಲ್ಲ. ಯಾಕಂದರೆ ಪ್ರಾಣವಿಲ್ಲದೆ ಆಕಾಶ ತತ್ವವು ನಿಲ್ಲಲಾರದು. ಹಾಗು ಆಕಾಶ ತತ್ವವಿಲ್ಲದೆ ಪ್ರಾಣವೂ ಪ್ರಕಟವಾಗಲಾರದು. ಇವು ವ್ಯಕ್ತ ಇಲ್ಲವೆ ಅವ್ಯಕ್ತ ಸ್ಥಿತಿಯಲ್ಲಿದ್ದರೂ ಒಂದನ್ನೊಂದು ಬಿಟ್ಟಿರುವದಿಲ್ಲ. ಅವು ಒಂದಕ್ಕೊಂದು ಆಧಾರವಾಗಿರುವದರಿಂದ ಯಾವ ಸ್ಥಿತಿಯಲ್ಲಿದ್ದರೂ ಒಂದರಲ್ಲೊಂದು ಇದ್ದೇ ಇರುವವು. ಪ್ರಾಣ ಹಾಗು ಆಕಾಶ ತತ್ವ ಇವೆರಡರ ಸಂಯುಕ್ತ ತತ್ವರಾಶಿಗೆ ವೇದಾಂತ ಶಾಸ್ತ್ರಕಾರರು "ಮಾಯಾ" ಎಂದು ಕರೆಯುವರು. ಇದಕ್ಕೆ ಸಾಂಖ್ಯರು ಪ್ರಕೃತಿ

× ಬಂಗಾರದ ಪೊಳ್ಳು ಗೋಲಿನಲ್ಲಿ ನೀರುಹಾಕಿ ಯಾಂತ್ರಿಕ ಶಕ್ತಿಯಿಂದ ಹಿಚುಕಿದರೆ ಅದರ ಸೂಕ್ಷ್ಮಸಂದಿನೊಳಗಿಂದ ನೀರು ಹೊರಬೀಳುವದ ಭೌತಿಕ ಶಾಸ್ತ್ರಕಾರರಿಗೆ ಗೊತ್ತು ಇರುವದು!

ಎಂದೆನ್ನುವರು. ಭೌತಿಕ ಶಾಸ್ತ್ರಕಾರರ ವಿದ್ಯುತ್ಕಣವು ಈ ಮಾಯೆಯ ಸ್ಥೂಲರೂಪವಾಗಿದೆ

ಆಧ್ಯಾತ್ಮಿಕ ಶಾಸ್ತ್ರಕಾರರು ಪ್ರಾಣವೆಂದು ಕರೆಯುವ ಶಕ್ತಿವಿಶೇಷವನ್ನೇ ಭೌತಿಕ ಶಾಸ್ತ್ರಕಾರರು (೧) ಗುರುತ್ವಾಕರ್ಷಣ ಶಕ್ತಿ (೨) ಸ್ನೇಹಾಕರ್ಷಣಶಕ್ತಿ ೩) ರಸಾಯನಾಕರ್ಷಣಶಕ್ತಿ ಎಂದು ಮೂರು ಭೇದವಾಗಿ ತಿಳಿಯುವರು. ಇರುವವೇನೋ ಶಕ್ತಿವಿಶೇಷವೆಲ್ಲ ಒಂದೇ. ಇದೇನೂ ಸುಳ್ಳಲ್ಲ. ಭೌತಿಕ ಶಾಸ್ತ್ರಕಾರರು ತಾವು ಕಲ್ಪಿಸಿಕೊಂಡಿರುವ ಎಪ್ಪತ್ತೈಯ್ದು ಮೂಲ ತತ್ವಗಳು ಒಂದೇ ಒಂದಾದ ಸೂಕ್ಷ್ಮ ತತ್ವದಿಂದಾಗಿರುವವೆಂದು ಈಗೀಗ ಕೆಲಕೆಲವರು ಆಧ್ಯಾತ್ಮಿಕ ಶಾಸ್ತ್ರಕಾರರ ಮತಕ್ಕೆ ಮನ್ನಿಸಹತ್ತಿರುವರು ಮೂಲ ಬಣ್ಣಗಳು (೧) ಕೆಂಪು (೨) ಹಳದಿ (೩) ನೀಲಿ ಹೀಗೆ ಮೂರೇ ಇರುವವು; ಆದರೂ, ಇವುಗಳ ಹೆಚ್ಚು ಕಡಿಮೆಯ ಮಿಶ್ರಣದಿಂದ ಹಸರು, ಕಿತ್ತಳೆ ಮೊದಲಾದ ಎಷ್ಟೋ ಪ್ರಕಾರದ ಮಿಶ್ರ ಬಣ್ಣಗಳಾಗಿರುವವು. ಇದರಂತೆಯೇ ಆಕಾಶ ತತ್ವ ಹಾಗು ಪ್ರಾಣ ಇವುಗಳ ಕೂಡುವಿಕೆಯ ಭಿನ್ನ ಭಿನ್ನ ತರಹದಿಂದ ಈಗಿನ ಭೌತಿಕ ಶಾಸ್ತ್ರಕಾರರು ಹುಡುಕಿ ತೆಗೆದಿರುವ ಎಪ್ಪತ್ತೈಯ್ದು ಮೂಲತತ್ವಗಳೂ ಆಗಿರುವವರಲ್ಲಿ ಆಶ್ಚರ್ಯವೇನದೆ?

ಮನುಷ್ಯ ಶರೀರವು ಈ ಸೃಷ್ಟಿಯಿಂದ ಭಿನ್ನವಾಗಿದ್ದರೂ ಸೃಷ್ಟಿಯ ಪುನರಾವರ್ತವೇ ಇದಾಗಿರುವದೆಂದು, ಆಧ್ಯಾತ್ಮಿಕ ಶಾಸ್ತ್ರಕಾರರು ಪ್ರತಿಪಾದಿಸುವರು. ನಮ್ಮ ಶರೀರವೆಂಬದು ಬೇರೆ ಕಡೆಯಿಂದ ಬಂದ ವಸ್ತುವೇನೂ ಅಲ್ಲ. ಇದು ಸೃಷ್ಟಿಯ ಮೂಲತತ್ವದಿಂದಲೇ ಹುಟ್ಟಿದ್ದು. ನಾವು ತಿನ್ನುವ ಆಹಾರದಿಂದಲೇ ನಮ್ಮ ಶರೀರವಾಗಿರುವದು. ಆಹಾರಕ್ಕೆ ಕಾರಣವಾಗಿರುವ ವನಸ್ಪತಿಗಳೆಲ್ಲ ಈ ಭೂಮಿಯ ಮಣ್ಣಿನಿಂದೇ ಬೆಳೆದಿರುವವು. ಆದ್ದರಿಂದ ಎಲ್ಲ ಪ್ರಾಣಿಗಳ ಶರೀರಗಳು ರೂಪಾಂತರವಾದ ಮಣ್ಣಿನ ಮುದ್ದೆಗಳೇ ಆಗಿರುವವೆಂಬ ಮಾತನ್ನು ಒಡೆದು ಹೇಳಲಿಕ್ಕೇ ಬೇಡ! ಈ ಮಣ್ಣಿನಿಂದಾದ ಪ್ರಾಣಿಗಳ ಶರೀರಗಳು ಕಡೆಗೆ ಈ ಮಣ್ಣಲ್ಲೇ ಮಾಯವಾಗುವವು. ಕೆಲವು ತತ್ವಗಳು ವಾಯುರೂಪದಲ್ಲಿ ಲೀನವಾಗುವವು ಇವೇನೋ ಸರ್ವರಿಗೂ ಗೊತ್ತಿದ್ದ ಮಾತೇಸರಿ. ಒಟ್ಟಿನ ಮೇಲೆ ಸಿದ್ಧವಾದ ಮಾತು ಇಷ್ಟೇ. ಹುಟ್ಟಿದವುಗಳೆಲ್ಲ ತಮ್ಮ ಮೂಲಸ್ಥಾನವನ್ನು ಕಡೆಗೆ ಸೇರೀತೀರುವವು. ಇದರಲ್ಲಿ ಯಾವ ಸಂಶಯವೂ ಇಲ್ಲ.



ಪ್ರಕೃತಿಯಿಂದ ಉದ್ಭವಿಸಿದ ಈ ಪೃಥ್ವಿಯಾದರೂ ಮಹಾಪ್ರಳಯದ ಕಾಲಕ್ಕೆ ಒಂದಿಲ್ಲೊಂದು ದಿನ ಪ್ರಕೃತಿಯಲ್ಲೇ ಲೀನವಾಗುವದು. ಉತ್ಕ್ರಾಂತಿ ತತ್ವದಂತೆ ಪ್ರಕೃತಿಯಿಂದ ಮೊದಲು ಸೃಷ್ಟಿಯು ಉದ್ಭವಿಸುವದು; ಇದು ಪ್ರಾಣಿಗಳ ವಸತಿ ಸ್ಥಾನಕ್ಕೆ ತಕ್ಕುದಾಗಲು ಇದರಲ್ಲಿ ಮೊದಲು ಪ್ರಾಣಿಗಳಿಗೆ ಆಹಾರವಾಗಿರುವ ವೃಕ್ಷಗಳು ಉದಯಿಸುವವು. ತಕ್ಕಷ್ಟು ಗಿಡಬಳ್ಳಿಗಳಿಂದ ಸೃಷ್ಟಿಯು ಪರಿಪೂರ್ಣವಾಗಲು ಮೊದಲು ಕೀಳುತರದ ಪ್ರಾಣಿ ಕೋಟಿಗಳ ಉದಯವಾಗುವದು. ಈ ಕೀಳು ಪ್ರಾಣಿಗಳೇ ಕ್ರಮೇಣ ಸುಧಾರಣೆ ಹೊಂದುತ್ತಹೋಗಿ, ಕಡೆಗೆ ಅತ್ಯುತ್ತಮ ಬುದ್ಧಿಶಾಲಿಯಾಗಿದ್ದ ಮನುಷ್ಯ ವರ್ಗವು ನಿರ್ಮಿತವಾಗುವದು. ಇದು ಉತ್ಕ್ರಾಂತಿ ತತ್ವದ ಮಾತಾಯಿತು. ಈ ಉತ್ಕ್ರಾಂತಿಯಾದರೂ ತನಗೆ ಶಕ್ತಿ ಇದ್ದಷ್ಟು ಕಾಲದ ವರೆಗೆ ಮಾತ್ರ ನಡೆಯುವದು ಯಾಕಂದರೆ ಸೃಷ್ಟಿಯಲ್ಲಿ ಯಾವದೂ ಕಾಲೂರಿ ನಿಂತಿಲ್ಲ. ಹಿಂದೆ ಇದ್ದದ್ದು ಈಗಿಲ್ಲ. ಅಂದಬಳಿಕ ಈಗಿದ್ದದ್ದು ಮುಂದೆಯೂ ಇರಲಾರದು. ಯಾವ ಆಟಕ್ಕಾದರೂ ಕಾಲಗಣನೆಯು ಹೊಂದಿಕೆಯಾಗಿ ಇದ್ದದ್ದೇ. ಆದ್ದರಿಂದ ಪ್ರತಿಯೊಂದು ಕೆಲವು ಕಾಲಾವಧಿ ವರೆಗೆ ಮಾತ್ರ ನಡೆದು ಅಲ್ಲಿಂದ ಮಾಯವಾಗುವದು ಇದರಂತೆ ಉತ್ಕ್ರಾಂತಿಯ ತತ್ವದಂತೆ ಆಗುತ್ತಾ ನಡೆದ ಸುಧಾರಣೆಯು ಯೌವ್ವನದ ಶಿಖರವನ್ನು ಮುಟ್ಟಿದ ಬಳಿಕ ಇಳಿತರದ ಕ್ರಮಕ್ಕೆ ಆರಂಭವಾಗುವದು. ಈ ಇಳಿತರದ ಕ್ರಮವೇ ಅಪಕ್ರಾಂತಿಯಾಗಿ ಪರಿಣಮಿಸುವದು. ಸೃಷ್ಟಿಯು ಅಪಕ್ರಾಂತಿಯ ಹಾದಿಯನ್ನು ಹಿಡಿದಾಗ ಕಡೆ ಕಡೆಗೆ ಇದು ಪ್ರಾಣಿಗಳ ವಸತಿಸ್ಥಾನಕ್ಕೆ ತೀರ ನಿರುಪಯೋಗಿಯಾಗಿ ಹೋಗುವದು. ನಮ್ಮ ಜೀವನ ವ್ಯಾಪಾರಕ್ಕೆ ಕಾರಣನಾಗಿದ್ದ ಸೂರ್ಯನು ಆರಿ ತಣ್ಣಗಾಗುವದರಿಂದ ಬೆಳಕೂ ಕಾವುಗಳೇ ನಮಗೆ ದೊರೆಯದಾಗುವವು. ಭಯಂಕರವಾದ ಕತ್ತಲೆಯೂ ಮಿತಿಮೀರಿದ ಚಳಿಯೂ ಇಡೀ ಸೂರ್ಯಮಾಲಿಕೆಯನ್ನೇ ವ್ಯಾಪಿಸಿ ಬಿಡುವವು. ನಭೋಮಂಡಲದಲ್ಲೆಲ್ಲ ಇದೇ ಹಾಡಾದ ಬಳಿಕ ಹಿಮದ ಬಲವಾದ ಬಿಗಿತದಿಂದ ಸರ್ವರೂ ಛಿನ್ನವಿಛಿನ್ನವಾಗಿ ಮೂಲ ಮಾತ್ರಸ್ಥಾನವಾದ ಆಕಾಶ ತತ್ವವನ್ನು ಹೊಂದುವವು. ಇದೇ ಅಪಕ್ರಾಂತಿಯ ತತ್ವದ ಕಡೆಯ ಮಾತಾಗಿದೆ. ಇದಕ್ಕೇನೇ ಮಹಾಪ್ರಳಯವೆಂದೆನ್ನುವರು.

ನಮ್ಮ ಶರೀರಗಳೆಲ್ಲ ಪಂಚತತ್ವಗಳಲ್ಲಿ ಮಾಯವಾಗುವವು. ಪೃಥ್ವಿಯು ಆಕಾಶತತ್ವದಲ್ಲಿ ಲಯವಾಗುವದು. ಆದರೂ ನಮ್ಮ ಶರೀ

ರಗಳ ಸ್ಥಿತ್ಯಂತರಕ್ಕೂ ಸೃಷ್ಟಿಯ ಲಯತ್ವಕ್ಕೂ ಮಹದಂತರವದೆ. ಸೃಷ್ಟಿಯು ಒಮ್ಮೆ ರೂಪುಗೊಂಡು ಲಯವಾಗುವಷ್ಟರಲ್ಲಿ ನಮ್ಮೆಲ್ಲರ ಆತ್ಮಗಳು ಅನೇಕ ದೇಹಗಳನ್ನು ಧರಿಸುತ್ತಲೂ ಬಿಡುತ್ತಲೂ ನಡೆಯುವವು. ಆತ್ಮವು ದೇಹ ಬಿಡುವಾಗೆಲ್ಲ ನಡೆಯುವ ವ್ಯಾಪಾರಕ್ಕೆ ನಾವು ಮಹಾ ದುಃಖಮಯವಾದ ಸಾವೆಂದೆನ್ನುವೆವು. ಎಲ್ಲ ಜೀವರಾಶಿಗಳ ಸಾವಿನ ಬಳಿಕ ಸೃಷ್ಟಿಯು ಲಯವ ಕಾಲಕ್ಕೆ ಆಗಿ ಮತ್ತೆ ಹೊಸ ಕ್ರಮವು ನಡೆಯುವದು. ಸಾವು ಎಂಬುದು ಈ ಜಡದೇಹದ ಹಾಗು ಆತ್ಮದ ಅಗಲುವಿಕೆಯೇ ಹೊರತು ಮತ್ತೊಂದಿಲ್ಲ. ಜಡದೇಹವು ಆತ್ಮದಿಂದ ಬಂದದ್ದು; ಆತ್ಮದ ಉಪಕಾರಾರ್ಥವಾಗಿಯೇ ಇರಬೇಕಾದದ್ದು; ಆದ್ದರಿಂದ ಈ ಜಡ ದೇಹಕ್ಕಿಂತ ಆತ್ಮನೇ ಬಹಳ ಮಹತ್ವದ್ದೆಂಬದು ಸಹಜವದೆ. ಕಲ್ಲು, ಕಬ್ಬಿಣ, ಭಂಗಾರ, ಬೆಳ್ಳಿ ಮೊದಲಾದ ಜಡ ಪದಾರ್ಥಗಳು ಉಂಟಾಗಲಿಕ್ಕೆ ಪ್ರಕೃತಿಯು ಅವಶ್ಯವಾಗಿರುವಂತೆ ಗಿಡಬಳ್ಳಿ, ಕ್ರಿಮಿ-ಕೀಟಕ, ಪಶು-ಪಕ್ಷಿ ಮೊದಲಾದ ಜೀವ ಕೋಟಿಯ ಉದಯಕ್ಕೆ ಆತ್ಮಗಳೇ ಕಾರಣವಾಗಿವೆ. ಜಡಪದಾರ್ಥಗಳೆಲ್ಲ ಪ್ರಕೃತಿಯಿಂದ ರೂಪಾಂತರವಾಗಿ ಹುಟ್ಟಿದ ಭಿನ್ನ ಭಿನ್ನ ಒಡವೆಗಳಾಗಿವೆ; ಬೇರೆ ಬೇರೆ ಆತ್ಮಗಳಾದರೂ ಒಂದೇ ಬಿಂದುವಾದ ಅಖಂಡ ಶಾಂತಮೂರ್ತಿ ಶಿವನ ಭಿನ್ನ ಭಿನ್ನ ರೂಪಗಳೇ ಆಗಿರುವವು. ಈ ಆತ್ಮಗಳು ಪ್ರಕೃತಿಯ ಸಳೆತದಿಂದ ಸಜೀವ ಕೋಟಿಯಲ್ಲಿ ತರತಗದ ವೇಷತಾಳಿ ಉದಯಿಸುವವು. ಪ್ರಕೃತಿ ಹಾಗು ಆತ್ಮಗಳ ಸಮ್ಮಿಶ್ರಣದಿಂದಾಗಿರುವ ಪ್ರಾಣಿ ವನಸ್ಪತಿಗಳ ಗುಣ-ಧರ್ಮಾದಿಗಳು ಭಿನ್ನ ಭಿನ್ನವಾಗಿರುವದು ಸಹಜವದೆ. ಯಾಕಂದರೆ ಯಾವದೊಂದು ಪದಾರ್ಥದ ಗುಣ-ಧರ್ಮಗಳು ಅದರ ಘಟಕಗಳ ಗುಣ ಧರ್ಮಗಳನ್ನೇ ಅನುಸರಿಸಿರುವದು ಅನುಭವ ಸಿದ್ಧವಾತಾಗಿದೆ. ಫೋನೋಗ್ರಾಫದಲ್ಲಿ ಕಟ್ಟಿಗೆ ಕಬ್ಬಿಣಾದಿಗಳು ಮಿಶ್ರವಾಗಿರುವದರಿಂದ ಅವುಗಳ ನಾದವು ಹಾಡಿದ ಮನುಷ್ಯನ ಧ್ವನಿಯಲ್ಲಿ ಬೆರೆತು ಮಿಶ್ರ ಸ್ವರ ಹೊರಡುತ್ತದೆ. ಪ್ರಾಣಿಗಳೂ ವನಸ್ಪತಿಗಳೂ ಪ್ರಕೃತಿಯ ಮತ್ತು ಜೀವರುಗಳ ಬೇರೆ ಬೇರೆ ಹೊಂದಿಕೆಯಾಗಿರುವದರಿಂದ ಅವುಗಳ ಗುಣ ಸ್ವಭಾವಾದಿಗಳಲ್ಲಿ ಭಿನ್ನಾವಸ್ಥೆಯು ಕಂಡುಬರುವದರಲ್ಲಿ ಆಶ್ಚರ್ಯವೇನದೆ? ಒಂದೇ ವರ್ಗಕ್ಕೆ ಸೇರಿದ ಮನುಷ್ಯ ವರ್ಗದಲ್ಲಿ ಸಹ ಪ್ರಕೃತಿ ಹಾಗು ಜೀವರುಗಳ ಹೊಂದಿಕೆಯ ಭಿನ್ನಾವಸ್ಥೆಯಿಂದ ಮೂರ್ತಿಗೊಂಡ ಪ್ರಕೃತಿಯೇ ಮಾರ್ಪಟ್ಟು ಹೋಗಿರುವದು. ಮನುಷ್ಯರ ಆತ್ಮಗಳು



ಶುದ್ಧಸ್ವರೂಪಿಗಳಾಗಿದ್ದರೂ ಜಡಪ್ರಕೃತಿಯು ಅವನ್ನು ಎಷ್ಟರ ಮಟ್ಟಿಗೆ ವಶದಲ್ಲಿಟ್ಟುಕೊಂಡಿರುವದೋ ಅಷ್ಟರ ಮಟ್ಟಿಗೆ ಅವು ತಮ್ಮ ಶುದ್ಧಸ್ವರೂಪವನ್ನು ಕಳೆದುಕೊಂಡೇ ಇರುವವು.

ಜೀವನಿಗೆ ಪುರುಷನೆಂದೂ, ಆತ್ಮನೆಂದೂ, ಪರ್ಯಾಯನಾಮಗಳಿರುವವು. ಜೀವನು ಶಿವನ ಅಂಶವವನೇ ಆಗಿರುವನೆಂದ ಬಳಿಕ ಅವನಂತೆ ಇವನೂ ನಿರ್ಲೇಪನೂ, ನಿರ್ಗುಣನೂ, ಸದಾನಂದನೂ, ಉದಾಸೀನನೂ, ಅತ್ಯಂತ ಸೂಕ್ಷ್ಮದರಲ್ಲಿ ಸೂಕ್ಷ್ಮನೂ ಆಗಿರುವದೇನೂ ಸಹಜವದೆ; ಆದರೂ ಜೀವನು ವಿಕಾರವಶನೂ ಶಿವನು ವಿಕಾರರಹಿತನೂ ಆಗಿರುವರು. ಶಿವನು ಪ್ರಕೃತಿಗಿಂತಲೂ ಅತ್ಯಂತ ಸೂಕ್ಷ್ಮನಾಗಿರುವದರಿಂದ ಇವನ ಕ್ಷೇತ್ರವೇ ಪ್ರಕೃತಿಗಿಂತ ಹೆಚ್ಚಾದದ್ದಾಗಿದೆ. ಇಷ್ಟೇ ಅಲ್ಲ; ಪ್ರಕೃತಿಯ ಒಳಗೂ ಹೊರಗೂ ಇವನೇ ವ್ಯಾಪಿಸಿರುವನು. ಶಿವಾಂಶಭೂತವಾಗಿರುವ ಜೀವರುಗಳೆಲ್ಲ ಉಪಾಧಿ ಭೇದದಿಂದ ಪ್ರಕೃತಿಯಲ್ಲಿ ಸಂಯೋಗ ಹೊಂದಿರುವವು. ಆದ್ದರಿಂದ ಪ್ರಕೃತಿಯು ತನ್ನ ಮಾಯಾಜಾಲವನ್ನು ಇಲ್ಲವೆ ಪಸಾರವನ್ನು ಇವುಗಳ ಮುಂದೆ ರೂಪಿಸಹತ್ತಿರುವದು. ಯಾವ ಯಾವ ಜೀವನು ಎಷ್ಟೆಷ್ಟರ ಮಟ್ಟಿಗೆ ಪ್ರಕೃತಿಯ ಪಸಾರದ ಉಪಭೋಗದಲ್ಲಿ ಮಗ್ನನಾಗಿರುವನೋ ಅಷ್ಟಷ್ಟರ ಮಟ್ಟಿಗೆ ತನ್ನ ನಿಜಸ್ಥಿತಿಯನ್ನು ಮರೆತು, ಪ್ರಕೃತಿಯ ಕುಣಿತಕ್ಕೆ ಮೋಹಿತನಾಗಿರಬೇಕಾಗುವದು. ಸತ್ವ, ರಜ, ತಮೋಗುಣಗಳು ಪ್ರಕೃತಿಗಿರುವದರಿಂದ ಇವುಗಳ ಗಿಲಾಯವು ಜೀವನಿಗೂ ಆಗುವದು. ಆದ್ದರಿಂದ ಜೀವನು ತಮೋಗುಣ ವಶನಾದಾಗ ಅಧೋಗತಿಯ ಹಾದಿಯನ್ನೇ ಹಿಡಿಯಬೇಕಾಗುವದು. ಆದರೆ ಸತ್ವಗುಣದ ಪ್ರಸನ್ನತೆಯನ್ನು ಪಡೆಯಲು ಶಿವೈಕ್ಯನೇ ಆಗಿಬಿಡುವನು. ಈ ಸರ್ವಶ್ರೇಷ್ಠವಾದ ಸತ್ವಗುಣದ ಪ್ರಸನ್ನತೆಯಾಗಲಿಕ್ಕೆ ಜೀವನಿಗೆ ಜ್ಞಾನವೈರಾಗ್ಯಗಳು ಅವಶ್ಯವಾಗಿ ಬೇಕಾಗುವವು. ಶಿವಯೋಗಾಭ್ಯಾಸದಿಂದ ಜ್ಞಾನ-ವೈರಾಗ್ಯಗಳೆರಡೂ ಕರತಲಾಮಲಕವಾಗಿ ಸಿಗುವವು. ಶಿವಯೋಗಾಭ್ಯಾಸಿಗಳು ಜ್ಞಾನ ವೈರಾಗ್ಯ ಸಂಪನ್ನರಾದರೂ ಎಷ್ಟುಮಾತ್ರಕ್ಕೂ ಪ್ರಪಂಚವನ್ನು ಬಿಡಬೇಕಾಗುವದಿಲ್ಲ. ಜೀವನು ಶಿವಯೋಗಾಭ್ಯಾಸದಿಂದ ತ್ರಿಗುಣಾತ್ಮಕವಾದ ಪ್ರಕೃತಿಯಿಂದ ಬೇರೆಯಾಗುವನು ಆಗ ಅವನಿಗೆ ತನ್ನ ಮೂಲ ಸ್ವರೂಪದ ಜ್ಞಾನವೆಲ್ಲ ಆಗಿ ಬಹಳ ಆನಂದವೆನಿಸಿಹೋಗುವದು. ಅಲ್ಲಿಂದ ಅವನು ಪ್ರಕೃ

೬

ತಿಯ ಪಸಾರವಾದ ಪ್ರಪಂಚಕ್ಕೆ ತುಸುವಾದರೂ ಮರುಳಾಗದೆ ಕೆಸರೊಳಗಿನ ಕಮಲದೋಪಾದಿಯಲ್ಲಿ ಇರುಹತ್ತುವನು. ಅಲ್ಲದೆ ಅವನು ಪ್ರಕೃತಿಯ ಯಾವ ಕುಣಿತಕ್ಕೂ ಮರುಳಾಗುವದಿಲ್ಲ ಆದ್ದರಿಂದ ಪ್ರಕೃತಿಯು ತನ್ನಷ್ಟಕ್ಕೆ ತಾನೇ ನಾಚಿ ಆ ಸ್ಥಿತಿಯನ್ನು ಹೊಂದಿದ ಜೀವಾತ್ಮನನ್ನು ಸಂಪೂರ್ಣ ಬಿಟ್ಟುಕೊಟ್ಟು ತನ್ನಷ್ಟಕ್ಕೆ ತಾನೇ ಇರಹತ್ತುವದು. ಅಂದಬಳಿಕ ಜೀವನಿಗೆ ತನ್ನ ಮೂಲ ಮಾತೃಸ್ಥಾನವಾದ ಶಿವನಲ್ಲಿ ಲೀನವಾಗಿಬಿಡಲಿಕ್ಕೆ ಇನ್ನಾವ ಆತಂಕ ಉಳಿಯಬೇಕು? ಶಿವನಲ್ಲಿ ಜೀವನು ಐಕ್ಯನಾಗಿ ಸದಾ ಆನಂದಮಯವಾದ ಮೇಲಾದ ಸುಖವನ್ನೇ ತತ್ಕ್ಷಣ ಹೊಂದುವನು.

ಶಿವಯೋಗದಲ್ಲಿ ಶಿವನಿಗೆ ಲಿಂಗ ಎಂದೂ ಜೀವನಿಗೆ ಅಂಗ ಎಂದೂ ಸಂಜ್ಞೆ ಇರುವದು. ಈ ಶಿವ-ಜೀವರ ಐಕ್ಯತೆಗೆ ಲಿಂಗಾಂಗಸಾಮರಸ್ಯವೆನ್ನುವರು. ಈ ಲಿಂಗಾಂಗ ಸಾಮರಸ್ಯವನ್ನು ಪಡೆಯುವ ಸುಲಭೋಪಾಯವನ್ನು ಹೇಳಿಕೊಡುವದೇ ಶಿವಯೋಗದ ಸದುದ್ದೇಶವಾಗಿದೆ. ಪ್ರಾಣಿಕೋಟಿಯಲ್ಲಿ ಗಿಡ-ಬಳ್ಳಿಗಳೂ, ಕ್ರಿಮಿ-ಕೀಟಕಗಳೂ, ಪಶು-ಪಕ್ಷಿಗಳೂ, ಮನುಷ್ಯರೂ ಬರುತ್ತಿದ್ದರೂ ಇವರಲ್ಲಿ ಉತ್ತರೋತ್ತರ ಮನುಷ್ಯನೇ ಎಲ್ಲ ಮಾತುಗಳಿಂದ ಶ್ರೇಷ್ಠನಾಗಿರುವನು. ಮನುಷ್ಯನು ಈಗ ತಾನಿರುವ ಮನುಷ್ಯಸ್ಥಿತಿಯಲ್ಲೇ ಇರುವದು ಮೇಲೋ. ಅಥವಾ ಲಿಂಗಾಂಗ ಸಾಮರಸ್ಯವುಳ್ಳವನಾಗಿ ಇರುವದು ಮೇಲೋ. ಎಂಬುದನ್ನಷ್ಟ ವಿಚಾರ ಮಾಡುವದು ಒಳ್ಳೆಯದು. ಹೀಗೆ ವಿಚಾರ ಮಾಡಿ ತನಗದು ಅವಶ್ಯವಾಗಿ ಒದಗಬೇಕೆಂದೆನಿಸಿದಮೇಲೆಯೇ ಮನುಷ್ಯನು ಅದರ ಬಗ್ಗೆ ಅವನಲ್ಲಿ ನಿಜವಾದ ಹಸಿವೆ ಹುಟ್ಟುವದಲ್ಲದೆ ಇಲ್ಲದಿದ್ದರೆ ಹೇಗೆ ಹುಟ್ಟೀತು?

ನಮ್ಮ ಆಯುಷ್ಯದ ಕೊಂಚಭಾಗವಾದ ದಿವಸದಲ್ಲಿ ನಮಗೊದಗುವ ಜಾಗ್ರತಿ, ಸ್ವಪ್ನ, ಸುಷುಪ್ತಾವಸ್ಥೆಗಳಲ್ಲಿ ಜಾಗ್ರತಾವಸ್ಥೆಯೇ ಮೇಲಾಗಿದೆ. ಸ್ವಪ್ನಾವಸ್ಥೆಯು ಇದಕ್ಕಿಂತ ಕೆಳಗಿನದಾಗಿರುವದು. ಯಾಕಂದರೆ ಸ್ವಪ್ನಾವಸ್ಥೆಯಲ್ಲಿ ನಡೆಯುವ ಸುಖ-ದುಃಖಗಳೂ ವ್ಯಾಪಾರಗಳೂ ಮನುಷ್ಯನ ಅನುಭವಕ್ಕೆ ಅಷ್ಟೊಂದು ಬರುತ್ತಿರುವದಿಲ್ಲ. ಸುಷುಪ್ತಾವಸ್ಥೆಯಂತೂ ಸ್ವಪ್ನಾವಸ್ಥೆಗಿಂತ ತೀರ ಕೆಳಗಿನದಾಗಿದೆ. ಯಾಕಂದರೆ ಗಾಢ ನಿದ್ರೆಯಲ್ಲಿ ಏನೊಂದೂ ತಿಳಿಯದೇ ಹೋಗುವದು ಆಗ ಮನುಷ್ಯನು ಎಲ್ಲ ಮಾತುಗಳಿಂದ ಜಿಷ್ಪಾಗಿ ಹೋಗಿರುತ್ತಾನೆ. ಒಟ್ಟಿನ



ಮೇಲೆ ಮನುಷ್ಯನಿಗೆ ದಿನದಲ್ಲೊದಗುವ ಸುಷುಪ್ತಾವಸ್ಥೆಗಿಂತ ಸ್ವಪ್ನಾವಸ್ಥೆಯೂ, ಸ್ವಪ್ನಾವಸ್ಥೆಗಿಂತ ಜಾಗ್ರತಾವಸ್ಥೆಯೂ ಮೇಲೆಂಬುದೇ ಹೆಚ್ಚು ಬಲಪಡುವದು. ಹೆಚ್ಚೆಚ್ಚು ಅರಿವು ಬರುವ ಸೂಕ್ಷ್ಮಸ್ಥಿತಿಯೇ ಮನುಷ್ಯನಿಗೆ ಬಹಳ ಮಾನ್ಯವೂ, ಅತ್ಯಂತ ಪ್ರಿಯವೂ ಆಗಿರುವದು.

(ಮುಂದೆ ಸಾಗುವದು.

---

## "ಬಸವೇಶ್ವರನು ಆವ ಬಿಜ್ಜಳನಲ್ಲಿದ್ದನು?"

(ಲೇಖಕ:— ರಾ॥ ಸಾ॥ ಫ. ಗು. ಹಳಕಟ್ಟಿ ವಿಜಾಪೂರ.)

ಶ್ರೀಯುತ ಶ್ರೀಕಂಠ ಶಾಸ್ತ್ರಿಗಳು ಎಮ್. ಎ. ಮೈಸೂರು ಇವರು ಸಾಹಿತ್ಯ ಪರಿಷತ್ ಪತ್ರಿಕೆಯ ೧೭ನೇ ಸಂಪುಟದ ೪ ನೆಯ ಸಂಚಿಕೆಯಲ್ಲಿ ಬಸವೇಶ್ವರನು ಕಲಚೂರ್ಯ ಬಿಜ್ಜಳನ ಆಸ್ಥಾನದಲ್ಲಿರದೆ ಎರೆಯಂಬರಗೆ ಅಂದರೆ; ಈಗ ರಾಯಚೂರ ಜಿಲ್ಲೆಯಲ್ಲಿರುವ ಎಲಬುರ್ಗೆಯಲ್ಲಿ ಆಳುತ್ತಿದ್ದ ಸಿಂದವಂಶದ ವೀರ ಬಿಜ್ಜಳನ ಆಸ್ಥಾನದಲ್ಲಿರಬೇಕೆಂದು ಒಂದು ಲೇಖವನ್ನು ಪ್ರಸಿದ್ಧ ಪಡಿಸಿದ್ದರು. ಆದಕ್ಕೆ ಉತ್ತರವಾಗಿ ನಾವು ಶಿವಾನುಭವ ಪತ್ರಿಕೆಯ ೧೩ನೆಯ ಸಂಪುಟದ ೧೧ ನೇ ಸಂಚಿಕೆಯಲ್ಲಿ ಬಸವೇಶ್ವರನು ಕಲಚೂರ್ಯ ಬಿಜ್ಜಳನಲ್ಲಿಯೇ ಇದ್ದನೆಂದು ಒಂದು ಲೇಖವನ್ನು ಬರೆದಿದ್ದೆವು. ಈ ನಮ್ಮ ಲೇಖಕ್ಕೆ ಶ್ರೀಕಂಠ ಶಾಸ್ತ್ರಿಗಳು ಪ್ರತ್ಯುತ್ತರವಾಗಿ 'ಬಿಜ್ಜಳ' ಎಂಬ ಶಿರೋಲೇಖದ ಕೆಳಗೆ ಶಿವಾನುಭವ ಸಂಪುಟ ೧೪ ನೆಯ ೧ ನೆಯ ಸಂಚಿಕೆಯಲ್ಲಿ ಮತ್ತೊಂದು ಲೇಖವನ್ನು ಬರೆದಿದ್ದರು. ಅದಕ್ಕೆ ನಾವು ಉತ್ತರಕೊಡುವಷ್ಟರಲ್ಲಿ ಶ್ರೀಯುತ ಗೋವಿಂದ ಪೈ ಮು॥ ಮಂಜೇಶ್ವರ ಜಿಲ್ಲಾ ಮಂಗಳೂರ ಇವರು 'ಶ್ರೀ. ಬಸವೇಶ್ವರನ ಕಾಲ ನಿರ್ಣಯ' ಎಂಬ ಶಿರೋಲೇಖದ

ಕೆಳಗೆ ಬಹು ವಿಸ್ತೃತವಾದ ರೀತಿಯಿಂದ ಬಸವೇಶ್ವರನಿಗೆ ಸಂಬಂಧಿಸಿದ
ಅನೇಕ ವಿಷಯಗಳನ್ನು ಕುರಿತು ಒಂದು ಲೇಖವನ್ನು ಬರೆದಿದ್ದಾರೆ. ಅವರು
ಈ ಲೇಖದಲ್ಲಿ ಕಲಚೂರ್ಯ ಮತ್ತು ಸಿಂದರಾಜರ ಅನೇಕ ಶಿಲಾ ಶಾಸನ
ಗಳನ್ನು ಪರಿಶೋಧಿಸಿ ಅನೇಕ ಮಹತ್ವದ ವಿಷಯಗಳನ್ನು ನಿರೂಪಿಸಿದ್ದು
ಅದರಲ್ಲಿ ಅವರು ಬಸವೇಶ್ವರನು ಸಿಂದವಂಶದ ಬಿಜ್ಜಳನಲ್ಲಿರದೆ ಕಲ
ಚೂರ್ಯ ಬಿಜ್ಜಳನಲ್ಲಿಯೇ ಓಲಗಿಸಿದನೆಂದು ಸಿದ್ಧಪಡಿಸಿವ್ದಾರೆ. ಅವರು
ತೋರಿಸಿದ ಕಾರಣಗಳು ಶಿವಾನುಭವ ಪತ್ರಿಕೆಯ ೧೪ ನೇ ಸಂಪುಟದ
೫ನೇ ಸಂಚಿಕೆಯಲ್ಲಿ ಬಂದಿರುತ್ತವೆ. ಆ ಲೇಖವನ್ನು ವಾಚಕರು ಅವ
ಶ್ಯವಾಗಿ ಓದಿ ನೋಡಬೇಕೆಂದು ನಾವು ಅವರಿಗೆ ಸೂಚಿಸುತ್ತೇವೆ. ಆದ್ದ
ರಿಂದ ಈ ವಿಷಯವನ್ನು ಕುರಿತು ನಾವು ಸದ್ಯಕ್ಕೆ ಹೆಚ್ಚಿಗೆ ಪ್ರಸ್ತಾಪಿಸಲಿ
ಚ್ಛಿಸುವದಿಲ್ಲ. ಆದರೆ ಸಿಂದ ವಂಶದ ಬಿಜ್ಜಳನ ಸಂಬಂಧವಾಗಿ ಕೆಳ
ಗಿನ ಸಂಗತಿಗಳನ್ನು ಮಾತ್ರ ವಾಚಕರೆದುರಿಗೆ ಇಡಲಪೇಕ್ಷಿಸುತ್ತೇವೆ.
ಇವುಗಳಿಂದ ಬಸವೇಶ್ವರನು ಕಲಚೂರ್ಯ ಬಿಜ್ಜಳನಲ್ಲಿದ್ದದ್ದು ಹೆಚ್ಚಿಗೆ
ಸಂಭವನೀಯವೆಂಬುದು ವಾಚಕರ ನಿದರ್ಶನಕ್ಕೆ ಬರಬಹುದಾಗಿದೆ.

ಸಿಂದ ವಂಶದ ವೀರ ಬಿಜ್ಜಳನು ಪಟ್ಟವೇರುವ ಕಾಲದಲ್ಲಿ ಅಲ್ಪ
ವಯಸ್ಕನಾಗಿದ್ದನೆಂತಲೂ ಅವನ ಸಲುವಾಗಿ ಅವನ ತಾಯಿಯಾದ
ಸಿರಿಯ ದೇವಿಯು ಬಹಳ ವರ್ಷಗಳ ವರೆಗೆ ರಾಜ್ಯವಾಳುತ್ತಿದ್ದಳೆಂ
ತಲೂ ಶಿಲಾಶಾಸನಗಳಿಂದ ತಿಳಿದು ಬರುತ್ತದೆ. ರೋಣ ತಾಲೂಕಿನ
ಲ್ಲಿರುವ ನಿಡುಗುಂದಿ ಗ್ರಾಮದಲ್ಲಿ ೧೧೭೩ ಮತ್ತು ೧೧೭೪ ಈ ವರ್ಷ
ಗಳ ಎರಡು ಶಿಲಾಶಾಸನಗಳಿದ್ದು ಇವುಗಳಲ್ಲಿ ಸಿರಿಯಾದೇವಿಯು 'ಪಟ್ಟ
ಮಹಾದೇವಿ' ಎಂದು ವರ್ಣಿಸಲ್ಪಟ್ಟಿದ್ದಾಳೆ. ಈಕೆಯು ಕಲಚೂರ್ಯ
ಬಿಜ್ಜಳನ ಮಗಳು. ಆದರೆ ಹುನಗುಂದ ತಾಲೂಕು ಸೂಳೀಭಾವಿಯ
ಲ್ಲಿರುವ ೧೧೮೪ನೇ ಇಸವಿಯ ಒಂದು ಶಿಲಾಶಾಸನದಲ್ಲಿ ಈ ಮೇರೆಗೆ
ಸಿರಿಯ ದೇವಿಯ ಉಲ್ಲೇಖವಿರದೆ, ಆಕೆಯ ಮಕ್ಕಳಾದ ಬಿಜ್ಜಳ ಮತ್ತು
ವಿಕ್ರಮ ಇವರಿಬ್ಬರ ಉಲ್ಲೇಖವು ಮಾತ್ರವಿದೆ. ಹಾಗೆಯೇ ೧೧೮೩ನೆಯ
ಇಸವಿಯ ಬೆಣಚಮಟ್ಟಿ ಗ್ರಾಮದ ಶಾಸನದಲ್ಲಿಯೂ ಹೀಗೆಯೇ
ಉಲ್ಲೇಖವಿದೆ. ಆದ್ದರಿಂದ ಈ ವರ್ಷಗಳ ಸಮೀಪದಲ್ಲಿ ಈ ಉಭಯ
ತರು ಪ್ರಾಪ್ತವಯಸ್ಕರಾಗಿ ರಾಜ್ಯವನ್ನು ಆಳುತ್ತಿರಬಹುದೆಂದು ತೋರು
ತ್ತದೆ. ಆದರೆ ಇವರ ತರುವಾಯ ಎರಡು ವರ್ಷಗಳಲ್ಲಿಯೇ ದೇವ



ಗಿರಿ ಯಾದವ ರಾಜನಾದ ಭಿಲ್ಲಮನು ಕೃಷ್ಣಾ ಮತ್ತು ಮಲಪ್ರಭಾ
ಈ ನದಿಗಳ ಮಧ್ಯ ಪ್ರದೇಶವನ್ನು ತೆಗೆದುಕೊಂಡು ಆಳುತ್ತಿದ್ದನೆಂದು
೧೧೮೯ ನೇ ಇಸವಿಯ ಅಣ್ಣಿಗೇರಿಯ ಶಾಸನದಿಂದ ಮತ್ತು ೧೧೯೧ರ
ಗದಗಿನ ಶಾಸನದಿಂದ ತಿಳಿದು ಬರುತ್ತಿದೆ. ಆದರೆ ೧೧೯೦ನೇ ಇಸವಿ
ಯಲ್ಲಿ ಹೊಯಸಾಳ ಬಲ್ಲಾಳನು ಎರೆಯಂಬರಗೆಯನ್ನು ಯಾದವ
ಬಿಲ್ಲಮನನ್ನು ಸೋಲಿಸಿ ಅದನ್ನು ತೆಗೆದುಕೊಂಡು ಅಲ್ಲಿ ಕೆಲವು ದಿವಸ
ಆಳುತ್ತಿದ್ದುದು ಅರಸಿಕೆರೆ ೧೦೪ ಇದರಿಂದ ಕಂಡು ಬರುತ್ತಿದೆ. ಈ
ಎಲ್ಲ ಸಂಗತಿಗಳನ್ನು ನಿರೀಕ್ಷಿಸಿದಲ್ಲಿ ಅಂದರೆ ಸಿಂದರಾಜನಾದ ಬಿಜ್ಜಳನ
ಚಿಕ್ಕವಯಸ್ಸು ಮತ್ತು ಅವನ ಕಾಲಕ್ಕೆ ಉಂಟಾದ ದೇವಗಿರಿ ಯಾದವರ
ಮತ್ತೂ ಹೊಯಸಾಳ ಬಲ್ಲಾಳರ ಆಡಳಿತೆಯ ಬದಲಾವಣೆಗಳು ಇವು
ಗಳನ್ನು ನೋಡಿದರೆ ಬಸವೇಶ್ವರನು ಇಂಥ ಪರಿಸ್ಥಿತಿಯಲ್ಲಿ ಸಿಂದರಾಜರ
ಆಸ್ಥಾನದಲ್ಲಿ ಇದ್ದುಕೊಂಡು ರಾಜ್ಯಭಾರಮಾಡಿ ವೀರಶೈವ ಧರ್ಮೋದ್ಧಾರ
ಕಾರ್ಯಗಳನ್ನು ಮಾಡಿದ್ದು ಸಂಭವನೀಯವಾಗಿ ತೋರುವದಿಲ್ಲ.

ಬಸವೇಶ್ವರನ ಚರಿತ್ರೆಯಲ್ಲಿ ಕಂಡು ಬರುವ ಯಾವ ಸಂಗತಿಯನ್ನು
ತೆಗೆದುಕೊಂಡರೂ ಸಿಂದ ವಂಶದ ರಾಜರಿಗೆ ಅದು ಸಂಬಂಧಪಡದೆ ಮಂಗ
ಳವಾಡ ಮತ್ತು ಕಲ್ಯಾಣದಲ್ಲಿ ಆಳಿದ ಕಲಚೂರ್ಯ ಬಿಜ್ಜಳನಿಗೆ
ಸಂಬಂಧ ಪಡುತ್ತದೆ.

ಶ್ರೀಯುತ ಶ್ರೀಕಂಠ ಶಾಸ್ತ್ರಿಗಳವರು ಮಾಡಿದ ಬೇರೆ ವಿಧಾನಗ
ಳನ್ನು ಕುರಿತು ಶ್ರೀಯುತ ಮಂಜೇಶ್ವರ ಪೈ ಇವರು ತಮ್ಮ ಲೇಖ
ದಲ್ಲಿ ಸವಿಸ್ತಾರವಾಗಿ ನಿರೂಪಿಸಿದ್ದು ಅವುಗಳನ್ನು ಇಲ್ಲಿ ಪುನಃ ವಿವರಿಸು
ವದು ಅನಾವಶ್ಯಕವಾಗಿದೆ. ಅವುಗಳನ್ನು ವಾಚಕರು ಶಿವಾನುಭವ
ಪತ್ರಿಯ ಜನೆವರಿ ಸಂಚಿಕೆಯಲ್ಲಿ ಅವಶ್ಯವಾಗಿ ನೋಡಬೇಕೆಂದು ನಮ್ಮ
ಸೂಚನೆ ಇದೆ.

# "ಶ್ರೀಮನ್ನಿಜಗುಣಶಿವಯೋಗಿಗಳು ವೀರಶೈವರೇ ಹೇಗೆ?"

(ಲೇಖಕರು:—ಬಸವದೇವರು ಶಿವಯೋಗಮಂದಿರ)

ಕನ್ನಡ ವಾಙ್ಮಯವನ್ನು ಮಮಕರಿಸಿದವರು ಬಹು ಜನರು ಇರುವರು. ಅವರಲ್ಲಿ ನಿಜಗುಣಶಿವಯೋಗಿಗಳೊಬ್ಬರು ಅಗ್ರಗಣಿಗಳು. ಷಡ್‌ಗ್ರಂಥಗಳನ್ನು ಬರೆದು ಅವರು ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ. ಇವರ ಭಾಷಾಸರಣಿಯು ಮೃದುಮಧುರವಿದ್ದು ಮನಮೋಹಕವಾಗಿದೆ. ಕೇವಲ ಶಬ್ದಾಡಂಬರವಿರದೆ ಅರ್ಥಗಾಂಭೀರ್ಯದಿಂದ ಅದು ತುಂಬಿ ತುಳುಕುತ್ತಿದೆ. ಪ್ರಾಸಾದಿಕ ವಾಕ್ಯಗಳು ಅಲ್ಲಲ್ಲಿ ಹೆಣೆಯಲ್ಪಟ್ಟಿವೆ. ಇವರ ವಿವೇಕಚಿಂತಾಮಣಿಯು ವೇದವೇದಾಂತ ತತ್ವಗಳಿಂದಲೂ ಆಗಮರಹಸ್ಯಗಳಿಂದಲೂ ಕೂಡಿಕೊಂಡು ಸರ್ವದರ್ಶನಶಾಸ್ತ್ರಗಳ ಗುಟ್ಟನ್ನು ಬೋಧಿಸುತ್ತದೆ. ಪರಮಾನುಭವ ಬೋಧೆಯಂತೂ ವೇದಾಂತಿಗಳ ಜೀವಾಳವೆನಿಸಿದೆ. ತತ್ವಪದಗಳಿಂದ ಕೂಡಿದ ಕೈವಲ್ಯ ಪದ್ಧತಿಯು ಮುಮುಕ್ಷು ಜನಗಳಿಗೆ ಕೈಪಿಡಿಯಾಗಿದೆ. ಸರ್ಪಭೂಷಣ ಶಿವಯೋಗಿಗಳೇ ಮೊದಲಾದ ಕೈವಲ್ಯಕಾರರೆಲ್ಲ ಇದರ ಅನುಕರಣ ಮಾಡಿದಂತೆ ಕಂಡುಬರುತ್ತದೆ. ಇತರ ಗ್ರಂಥಗಳು ಯೋಗಾದಿ ವಿಷಯಗಳ ಸಾರವನ್ನು ವಿವರಿಸುತ್ತವೆ. ಪ್ರಥಮತಃ ವೇದಾಂತ ವಿಷಯವನ್ನು ಕನ್ನಡಿಸಿದವರು ನಿಜಗುಣರೇ ಎಂದು ಹೇಳಬಹುದು.

ಈ ರೀತಿ ಕನ್ನಡಕ್ಕೆ ಕಳೆಯನ್ನು ಕೊಟ್ಟ ಈ ಮಹಾನುಭಾವರು ಯಾರು, ವೀರಶೈವರಿದ್ದರೇ ಅಥವಾ ಆರಾಧ್ಯಬ್ರಾಹ್ಮಣರಿದ್ದರೇ ಎಂಬುದನ್ನು ಸ್ವಲ್ಪ ವಿಮರ್ಶಿಸುವಾ. ಹಲಬರು ನಿಜಗುಣಾರಾಧ್ಯರೆಂಬ ನಾಮಾಂಕಿತದಿಂದ ಆರಾಧ್ಯಬ್ರಾಹ್ಮಣರೆಂದೂ ವೀರಶೈವ ಮತತತ್ವಗಳನ್ನು ಅವಲೋಕಿಸಿ ತಮ್ಮ ಗ್ರಂಥಗಳಲ್ಲಿ ಬರೆದಿರುವರೆಂದೂ ನುಡಿಯುವರು. ಇದು ನಿರಾಧಾರವಾದದ್ದೆಂದು ಅವರ ಗ್ರಂಥ ಪರಿಶೀಲನದಿಂದ ತಿಳಿಯುತ್ತದೆ. ಆರಾಧ್ಯ ಮತ್ತು ಆರ್ಯ ಪದಗಳು ಪೂಜ್ಯವಾಚಕಗಳಿದ್ದು



ಎಷ್ಟೋ ಮಂದಿ ಗಣಂಗಳೂ ಸಹ ತಮ್ಮ ಹೆಸರಿನ ಮುಂದೆ ಅಯ್ಯ ಎಂಬುದಕ್ಕೆ ಬದಲು ಆರಾಧ್ಯಪದವನ್ನು ಯೋಜಿಸುವ ಸಾಂಪ್ರದಾಯವು ಈಗಲೂ ಉಂಟು. ಆದ್ದರಿಂದ ಇಷ್ಟಕ್ಕೆ ಅವರು ಆರಾಧ್ಯಶೈವಬ್ರಾಹ್ಮಣರೆನ್ನಲಿಕ್ಕೆ ಬರುವದಿಲ್ಲ. ಹಾಗಾದರೆ ನಿಜಗುಣಾರ್ಯರ ಷಟ್‌ಶಾಸ್ತ್ರವೆಂಬ ವಾಡಿಕೆಯಿರುವದರಿಂದ ಆರ್ಯರಾಗಬೇಕಾದೀತು. ಇನ್ನು ಅನ್ಯ ಮತತತ್ವಗಳನ್ನು ನಿರೀಕ್ಷಿಸಿ ಬರೆದರೂ ಬರೆಯಬಹುದು. ಆದರೆ ಈ ಗ್ರಂಥಗಳ ಇಷ್ಟದೇವತಾ ಸ್ತುತಿ ನಮಸ್ಕಾರಾದಿಗಳಿಂದ ಯಾವ ಮತೀಯರೆಂಬುದನ್ನು ನಿರ್ಧರಿಸಬಹುದಲ್ಲವೆ?

ಇವರು ತಮ್ಮ ವಿವೇಕಚಿಂತಾಮಣಿಮಂಗಲದಲ್ಲಿ 'ಶ್ರೀಮದನೇಕಭುವನಭವನಾರಂಭ ಮೂಲಸ್ತಂಭರೂಪ ಶಂಭುಲಿಂಗವಾದಿಯಾಗಿ ನಿರಾಭಾರಿ ದೇಶಿಕೋತ್ತಮಪರ್ಯಂತ ಮಹಾಗುರು ಪರಂಪರೆಗೆ ಮನೋವಾಕ್ಕಾಯಗಳಿಂದಭಿವಂದಿಸಿ' ಎಂದು ಮಹಾಗುರುತ್ವಪೂರ್ವಕವಾಗಿ ನಿರಾಭಾರಿದೇಶಿಕೋತ್ತಮ ಅಂದರೆ ನಿರಾಭಾರಿಗಳಾದ ಜಂಗಮಮೂರ್ತಿಗಳನ್ನು ತ್ರಿಕರಣಪೂರ್ವಕ ನಮಸ್ಕರಿಸಿದ್ದಾರೆ. ಪರಮಾನುಭವ ಬೋಧೆಯಲ್ಲಿ 'ಕರುಣ ರಸದ ಕೋಡಿವರಿವ ಕಟಾಕ್ಷದ। ಪರತತ್ವಪರುಷವಾಲಾಪದ। ವರಪುಣ್ಯಮಯ ಶರೀರದ ನಿರಾಭಾರಿ ಸ। ದ್ಗುರುವಿರಲೆನ್ನ ಮಾನಸದಲ್ಲಿ' ಹೀಗೆ ನಿರಾಭಾರಿಗಳನ್ನು ಸದ್ಗುರುಗಳೆಂದು ವರಪುಣ್ಯಮಯ ಶರೀರದವರೆಂದು ಪರತತ್ವವನ್ನರುಹುವ ನುಡಿಗಳುಳ್ಳವರೆಂದು ಮೂರು ಮಹತ್ವಪೂರ್ಣ ವಿಶೇಷಣಗಳ ಪೂರ್ವಕ ಧ್ಯಾನಿಸಿದ್ದಾರೆ. ಅಲ್ಲದೆ ತ್ರಿಷಷ್ಟಿ ಪುರಾತನರ ಸ್ತೋತ್ರದಲ್ಲಿ 'ಅಣಿಯರದ ಭಕ್ತಿ ಧಾರುಣಿಗೆ ಪೊಸತಾಗಿ ಮ। ನ್ನಣೆಯೊಳೀಶಂಗೆ ಶಿವಲಿಂಗವಿತ್ತ ಕಲಿ। ಗಣನಾಥನೆನ್ನ ಕುಲಗುರುವು' ಎಂದು ಕಲಿಗಣನಾಥರನ್ನು ತಮ್ಮ ಕುಲಗುರುಗಳೆಂದು ಸ್ತುತಿಸಿರುವರು. ೬೩ ಮಂದಿ ಪುರಾತನರಲ್ಲಿ ಕಲಿಗಣನಾಥರು ವೀರಶೈವರೆಂದು ಚರಿತ್ರಾಂಶದಿಂದ ತಿಳಿದುಬರುತ್ತದೆ. ಉಳಿದ ಪುರಾತನರನ್ನು ಪರಿಪರಿಯಿಂದ ಹೊಗಳಿದರೂ ಈ ತರದ ವಿಶೇಷಣವನ್ನು ಯಾರಿಗೂ ಪ್ರಯೋಗಿಸಿಲ್ಲವಾದ್ದರಿಂದ ಇದು ಅವರ ಮತಾಭಿಮಾನ ದ್ಯೋತಕವಿದೆ. ಮತ್ತು 'ಇಂಗಡಲೊಳಗಿಂಪು ಬೆಳದಿಂಗಳೊಳು ತಂಪುಕುಸು। ಮಂಗಳೊಳು ಕಂಪುವೆರೆದಂತೆ ಪರಮನೊಳು। ಹಿಂಗದಪಸುತೆಗೆನತನಪ್ಪೆ॥' ಎಂಬ ವೀರಶೈವ ಶಿವಾದ್ವೈತಪರವಾದ ಶಕ್ತಿನಮಸ್ಕಾರವೂ 'ಶರಣರಂ

ಪಾರ್ವತೀಶ್ವರನಿಗಿಂತಧಿಕವೆಂ। ದೊರೆವಾಗಮವನು ತಿಳಿದು ನಾನಪರಪದ। ಸರಸಿಜಂಗಳನೆನುತಿಗ್ರೈವೆ॥, ಒಮ್ಮೆ ಗಣಪತಿಗೆ ಮತ್ತೊಮ್ಮೆ ಸೇನಾಧಿಪಂ। ಗೊಮ್ಮೆ ವೀರೇಶಂಗೊಮ್ಮೆ ನಂದೀಶ್ವರಂ। ಗೊಮ್ಮೆ ನಾನೊಲಿದುನತನಪ್ಪೆ॥ ಚಿನ್ನವಾಭರಣತೆಯಿನ್ನಾಮರೂಪಭೇ। ದಂ ನಿಜವೆನಿಸಿದಂತೀಶನ। ಭಿನ್ನಾಭಿಧಾನ ಮೂರ್ತಿಗಳೆನಲೆಸೆವ ಪಂ। ಪನ್ನಗಹಾರಿರಕ್ಷಿಪುವೆನ್ನ। ಈ ಶರಣಗಣವೃಂದದ ಸ್ತುತಿಗಳೂ ವೀರಶೈವರೆನ್ನುವದನ್ನು ಪ್ರಕಟಿಸುತ್ತವೆ. ಅನ್ಯಮತೀಯರಾಗಿದ್ದರೆ ಇವರಂತೆ ಅವರಲ್ಲಿ ಯಾರನ್ನಾದರೂ ಸ್ತುತಿಸಬೇಕಾಗಿತ್ತು ಅಥವಾ ನಾಮನಿರ್ದೇಶವನ್ನಾದರೂ ಮಾಡಬೇಕಾಗಿತ್ತು. ಹಾಗೆಲ್ಲಿಯೂ ಮಾಡಿಲ್ಲ. ವಿವೇಕಚಿಂತಾಮಣಿಯು ವೀರಶೈವಲಕ್ಷಣಾಂಕ್ಯದಲ್ಲಿ 'ಶಾಂಭವವಿದ್ಯೆಯಲ್ಲಿ ರಮಿಸುವ ಶೈವನಪ್ಪದರಿಂತತ್ಸಂಜ್ಞೆಯುಳ್ಳಾತನಾಗಿ ಜಗತ್ಪೂಜ್ಯನಪ್ಪಾತನೇ ವೀರಶೈವನಪ್ಪಂ' ಮುಂದೆ ಪ್ರಾಣಿಗಳ ತಾರತಮ್ಯದಲ್ಲಿ 'ಷಟ್‌ಸ್ಥಲಜ್ಞಾನಿಗಳಧಿಕರವರಿಗೆ ಮೂರು ಲೋಕದಲ್ಲಿಯೂ ಸಮಾನವಿಲ್ಲವಾಗಿ ಮುಮುಕ್ಷುಗಳಿಂದ ಷಟ್‌ಸ್ಥಲಜ್ಞಾನಿಗಳಾದ ವೀರಶೈವರೇ ವಂದಿಸಲು ಪೂಜಿಸಲು ಯೋಗ್ಯರಹುದು' ಈ ವಾಕ್ಯಗಳು ವೀರಶೈವರಿದ್ದಲ್ಲೇ ಹೀಗೆ ಹೊರಸೂಸಿರುವವೆಂದು ವ್ಯಕ್ತವಾಗುತ್ತದೆ. ತಾವೇ ಪಾರಮಾರ್ಥಪ್ರಕಾಶಿಕೆಯಲ್ಲಿ 'ಸಮ್ಯಜ್ಞಾನಸಂಪನ್ನನೆನಿಪ ನಿಜಗುಣಶಿವಯೋಗಿಯು ಅನಿಮಿತ್ತಬಂಧುತ್ವದಿಂ ನೆನೆದು ನೋಡಿ' ಎಂದು ಶಿವಯೋಗಿಪದವನ್ನು ಪ್ರಯೋಗಮಾಡಿಕೊಂಡಿರುವರು. ವೀರಶೈವೇತರರು ಯಾರೂ ಶಿವಯೋಗಿ ಶಬ್ದವನ್ನು ವ್ಯವಹರಿಸಿದಂತೆ ಕಾಣುವದಿಲ್ಲ. ಹಾಗೂ ನೂರೊಂದು ಸ್ಥಲ ಷಟ್‌ಸ್ಥಲ ವಿಷಯ ದೀಕ್ಷಾಕ್ರಮಾದಿಗಳನ್ನು ಮಾರ್ಮಿಕವಾಗಿ ಬರೆದಿರುವದರಿಂದ ವೀರಶೈವರೇ ಎಂದು ಸಿದ್ಧವಾಗುತ್ತದೆ. ಇನ್ನು ಯಾವ ಕಾಲದಲ್ಲಿದ್ದರೆಂಬುವದೊಂದು ಮಹತ್ವದ ಪ್ರಶ್ನೆ ಇದ್ದು ಅದು ಮುಂದೊಂದು ಲೇಖದಲ್ಲಿ ವಿವೇಚಿಸಲ್ಪಡುವದು.

---

# ವೀರಶೈವ ವಚನಕಾರರ ಕಾಲ.

(ಲೇಖಕ:— ರಾ. ಸಾ. ಫ. ಗು. ಹಳಕಟ್ಟಿ ವಿಜಾಪೂರ.)

## ಬನವಸೆನಾಡು.

ಶಿವಾನುಭವ ಪತ್ರಿಕೆಯ ಹಿಂದಿನ ಸಂಚಿಕೆಯಲ್ಲಿ ನಾವು ತರ್ದವಾಡಿ ನಾಡಿನಲ್ಲಿ ಅಂದರೆ ಈಗಿನ ವಿಜಾಪೂರ ಜಿಲ್ಲೆಯ ಉತ್ತರ ಭಾಗದಲ್ಲಿ ವೀರಶೈವ ಧರ್ಮದ ಪ್ರಸಾರವು ಬಿಜ್ಜಳನ ಕಾಲದಲ್ಲಿ ಹೇಗುಂಟಾಯಿತೆಂಬುದನ್ನು ಉಲ್ಲೇಖಿಸಿ ಅಲ್ಲಿ ಉತ್ಪನ್ನರಾದ ಶಿವಶರಣರುಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದೇವೆ. ಇವರಲ್ಲಿ ರೇವಣಸಿದ್ಧೇಶ್ವರನು ಈ ಕಾಲದಲ್ಲಿ ಇಲ್ಲಿ ಹೆಚ್ಚಿನದಾದ ಸ್ಥಾನವನ್ನು ಹೊಂದಿ ಕರ್ನಾಟಕ ದೇಶದ ಉತ್ತರ ಭಾಗದಲ್ಲಷ್ಟೇ ಅಲ್ಲ, ಅದರ ಮಧ್ಯ, ಮತ್ತು ದಕ್ಷಿಣ ಭಾಗಗಳಲ್ಲಿಯೂ ಕೂಡ ಮಹತ್ತರವಾದ ಧರ್ಮೋದ್ಧಾರ ಕಾರ್ಯಗಳನ್ನು ನಡೆಯಿಸಿದುದನ್ನೂ ಅವುಗಳಲ್ಲಿ ವಿವೇಚಿಸಿದ್ದೇವೆ. ಈ ಸಮಯದಲ್ಲಿ ತರ್ದವಾಡಿ ನಾಡಿನಂತೆಯೇ ಕರ್ನಾಟಕ ದೇಶದ ಬೇರೆ ಭಾಗಗಳಲ್ಲಿಯೂ ಕೂಡ ವೀರಶೈವ ಧರ್ಮದ ಬಗ್ಗೆ ಚಳವಳಿಗಳು ಉದ್ಭವಿಸಿದ್ದವೆಂದು ಕಂಡುಬರುತ್ತದೆ. ಇವುಗಳಲ್ಲಿ ಬಳ್ಳಿಗಾವಿ, ಬನವಸೆ, ಈ ಪಟ್ಟಣಗಳಿದ್ದ ಪ್ರದೇಶದಲ್ಲಿ ಈ ಕಾಲದಲ್ಲಿ ವೀರಶೈವ ಧರ್ಮದ ಬಗ್ಗೆ ವಿಶೇಷ ಪ್ರಯತ್ನಗಳು ಜರಗಿದ್ದರಿಂದ, ಹೇಗೆ ತರ್ದವಾಡಿ ೧೦೦೦ ನಾಡಿನಲ್ಲಿ ಅನೇಕ ಶಿವಶರಣರು ಉದ್ಭವಿಸಿದರೋ ಹಾಗೆಯೇ ಈ ಬನವಸೆ ನಾಡಿನಲ್ಲಿಯೂ ಅವರು ಉದ್ಭವಿಸಿದ್ದಾರೆ. ಅವರಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನುಹೊಂದಿದವರು ಅನುಮಿಷ, ಪ್ರಭುದೇವ, ಮುಕ್ತಾಯಕ್ಕ, ಅಜಗಣ್ಣ, ಸತ್ಯಕ್ಕ, ಮಹದೇವಿಯಕ್ಕ, ಏಕಾಂತದ ರಾಮಯ್ಯ, ಅಕ್ಕಮಹಾದೇವಿ, ಗೊಗ್ಗಯ್ಯ ಕಾಳಯ್ಯ, ಇವರೇ ಇದ್ದಾರೆ.

ಇವರಲ್ಲಿ ಕೆಲವರು ವಚನಕಾರರಾಗಿ ಧರ್ಮ ತತ್ವಗಳನ್ನು ಪ್ರಸಾರಪಡಿಸಿದರು. ಬೇರೆ ಕೆಲವರು ಶಿವಯೋಗಿಗಳಾಗಿ ಲಿಂಗಾಂಗ ಸಮರಸ್ಯ ಸ್ಥಿತಿಯನ್ನು ಸಾಧಿಸುವಲ್ಲಿ ತೊಡಗಿದರು. ಈ ಶಿವಶರಣರಲ್ಲಿ ಮಹ

ದೇವಿಯಕ್ಕ, ಮತ್ತು ಸತ್ಯಕ್ಕ ಇವರಿಬ್ಬರು ಸ್ತ್ರೀ ವಚನಕಾರರಾಗಿ ಪ್ರಸಿದ್ಧಿಯನ್ನು ಹೊಂದಿದಾರೆ. ಆದರೆ ಈ ಪ್ರಾಂತದಲ್ಲಿ ಉದ್ಭವಿಸಿದ ಈ ಶಿವಶರಣರುಗಳು ತರ್ದೇವಾಡಿ ನಾಡಿನಲ್ಲಿಯು ಶಿವಶರಣರಿಗೆ ಸಂಬಂಧಪಟ್ಟವರಾಗಿ ಪ್ರಸಿದ್ಧಿಯನ್ನು ಹೊಂದಿದು [illegible]ರುವದಿಲ್ಲ. ಯಾ[illegible]ರೆ ಅವರ ಚರಿತ್ರೆಗಳು ರೇವಣಸಿದ್ಧ, ಸಿದ್ಧರಾಮ, ಬಸವೇಶ್ವರರಿಗೆ ಸಂಬಂಧಪಡುವದಿಲ್ಲ. ಆದುದರಿಂದ ಈ ಬನವಸೆನಾಡಿನ ವೀರಶೈವ ಚಳವಳಿಯು ಇಲ್ಲಿಯೇ ಉದ್ಭವಿಸಿ ಪಸರಿಸಿರಬಹುದೆಂದು ತೋರುತ್ತದೆ. ಈ ಕಾ[illegible]ದಲ್ಲಿ ಶೈವ ಧರ್ಮದ ಚಳವಳಿಗಳು ಬರೇ ಕರ್ನಾಟಕದಲ್ಲಿಯಷ್ಟೇ ಅಲ್ಲ, ಇಡೀ ದಕ್ಷಿಣ ದೇಶದಲ್ಲಿ ಅನೇಕ ಭಾಗಗಳಲ್ಲಿ ವ್ಯಾಪಿಸಿದ್ದವು. ಅವುಗಳಲ್ಲಿ ಮುಖ್ಯವಾಗಿ ಆಂಧ್ರ ಮತ್ತು ಕರ್ನಾಟಕ ದೇಶಗಳಲ್ಲಿ ಅಲ್ಲಲ್ಲಿ ಶಿವಶರಣರುಗಳು ಉದ್ಭವಿಸಿ ಧರ್ಮ ಪ್ರಸಾರ ಕಾರ್ಯವನ್ನು ಸ್ವತಂತ್ರವಾಗಿ ಕೈಕೊಂಡು ನಡೆಸುತ್ತ ಇದ್ದು ಮುಂದೆ ಅವರು ಬಸವೇಶ್ವರನು ಕಲ್ಯಾಣ ಪಟ್ಟಣದಲ್ಲಿ ಮಂತ್ರಿ ಪದಾರೂಢನಾದ ಬಳಿಕ ಅವನ ಸನ್ನಿಧಿಯನ್ನು ಸಾರಿ, ಅವನಲ್ಲಿ ಸ್ಥಾಪಿಸಲ್ಪಟ್ಟ ಶಿವಾನುಭವ ಮಂಟಪದಲ್ಲಿ ಸೇರಿ, ಅಲ್ಲಿ ನಡೆದ ಧರ್ಮತತ್ವಗಳನ್ನು ವಚನ ವಾಙ್ಮಯದ ಮೂಲಕ ದೇಶದಲ್ಲೆಲ್ಲ ಅವರು ಪಸರಿಸಿದ ಹಾಗೆ ತೋರುತ್ತದೆ. ಬಸವೇಶ್ವರನ ಕಾಲದಲ್ಲಿ ಈ ಘನತರವಾದ ಕಾರ್ಯದಲ್ಲಿ ಮುಂದುವರಿದು ಹೆಚ್ಚಾಗಿ ಪ್ರಯತ್ನಿಸಿದವರಲ್ಲಿ ಅಲ್ಲಮ ಪ್ರಭುವೇ ಅಗ್ರೇಸರನಾಗಿದ್ದಾನೆ.

ಅಲ್ಲಮ ಪ್ರಭುವು ಬನವಸೆ ೧೨ ಸಾವಿರ ನಾಡಿನಲ್ಲಿ ಉದ್ಭವಿಸುವ ಪೂರ್ವದಲ್ಲಿಯೇ ರೇವಣಸಿದ್ಧನು ಈ ಭಾಗದಲ್ಲಿ ತಲೆದೋರಿ ಇಲ್ಲಿ ಆಳುತ್ತಿದ್ದ ಹಾನಗಲ್ಲ ಕದಂಬ ರಾಜನಲ್ಲಿ ಮನ್ನಣೆಹೊಂದಿದ್ದು ಅವನ ಚರಿತ್ರೆಯಿಂದ ತಿಳಿದುಬರುತ್ತಿದೆ. ಈ ರಾಜನು ೧೧೩೧ ಮತ್ತು ೧೧೪೫ ಈ ವರ್ಷಗಳಲ್ಲಿ ದೊರೆಯುವ ಶಿಲಾಲೇಖಗಳಿಂದ ಮಲ್ಲಿಕಾರ್ಜುನನೇ ಇರಬಹುದೆಂದು ನಾವು ಹಿಂದಿನ ಶಿವಾನುಭವ ಸಂಚಿಕೆಯಲ್ಲಿ ಊಹಿಸಿ ಲೇಖವನ್ನುಬರೆದುದು ವಾಚಕರ ಸ್ಮರಣೆಯಲ್ಲಿರಬಹುದು. ಆದರೂ ಕೂಡ ಅಲ್ಲಮ ಪ್ರಭುವು ರೇವಣಸಿದ್ಧನ ಮೂಲಕ ಪ್ರಸಿದ್ಧಿಗೆ ಬಂದನೆಂದು ಹೇಳಲು ಮಾತ್ರ ನಮಗೆ ಆಧಾರಗಳು ದೊರೆಯುವದಿಲ್ಲ. ಆದರೆ ಅವನು ಬಸವೇಶ್ವರನಕಿಂತಲೂ ವಯಸ್ಸಿನಲ್ಲಿ ಹಿರಿಯನು ಮತ್ತು ಅವನ ಸಮಕಾಲೀನನು ಎಂದು ತಿಳಿದುಬರುತ್ತದೆ. ಆದರೆ ಬಿಜ್ಜಳನು ಮಂಗ



ಳವಾಡದಲ್ಲಿ ಚಾಲುಕ್ಯರಾಜನ ಮಹಾ ಮಂಡಲೇಶ್ವರನಾಗಿ ಆಳುತ್ತಿದ್ದಾಗ ಬಸವೇಶ್ವರನಂತೆ ಅಲ್ಲಮನು ಆ ಸ್ಥಳಕ್ಕೆ ಹೋದದ್ದು ತಿಳಿದು ಬರುವದಿಲ್ಲ. ಮುಂದೆ ಬಸವೇಶ್ವರನು ಕಲ್ಯಾಣ ಪಟ್ಟಣದಲ್ಲಿ ಮಂತ್ರಿ ಪದಾರೂಢನಾದ ಬಳಿಕ ಅಲ್ಲಮ ಪ್ರಭುವು ಅಲ್ಲಿಗೆ ಹೋಗಿ ಪ್ರಸಿದ್ಧಿಗೆ ಬಂದನೆಂದು ಕಂಡುಬರುತ್ತದೆ. ಆದ್ದರಿಂದ ಅವನು ೧೧೬೦ರ ಸುಮಾರಕ್ಕೆ ಕಲ್ಯಾಣಕ್ಕೆ ಬಂದಿರಬೇಕು ಮತ್ತು ಅವನು ಶಿವಶರಣರು ಉಳವಿಗೆ ಹೋಗುವ ವರೆಗೂ ಅಂದರೆ ೧೧೬೮ರ ವರೆಗೂ ಅಲ್ಲಿಯೇ ಶಿವಾನುಭವ ಮಂಟಪದಲ್ಲಿದ್ದು ವೀರಶೈವ ಧರ್ಮಕ್ಕೆ ಉಚ್ಚಸ್ಥಾನವನ್ನು ತಂದುಕೊಟ್ಟಿರಬೇಕೆಂದು ಅವನ ಚರಿತ್ರೆಯಿಂದ ತಿಳಿದುಬರುತ್ತದೆ.

ಅನುಮಿಷಾರ್ಯನು ಅಲ್ಲಮ ಪ್ರಭುವಿನ ಗುರುವು. ಆದ್ದರಿಂದ ಅವನು ಬಸವೇಶ್ವರನಕಿಂತಲೂ ಮೊದಲಿಗನೆಂದು ಹೇಳಬಹುದಾಗಿದೆ. ಆದರೆ ಈ ಅನುಮಿಷನು ಬಸವೇಶ್ವರನಿಗೆ ಸಂಬಂಧ ಪಡುವದಿಲ್ಲಾದ್ದರಿಂದ, ಬಸವೇಶ್ವರನಕಿಂತಲೂ ಮೊದಲು ಈ ಭಾಗದಲ್ಲಿ ವೀರಶೈವ ಧರ್ಮವು ನೆಲಿಸಿತ್ತೆಂದು ಊಹಿಸಬಹುದಾಗಿದೆ. ಈ ಭಾಗದಲ್ಲಿ ಪ್ರಸಿದ್ಧಿಗೆ ಬಂದ ಮುಕ್ತಾಯಕ್ಕ, ಅಜಗಣ್ಣ ಇವರು ಅಲ್ಲಮ ಪ್ರಭುವಿನ ಸಮಕಾಲೀನರು. ಶಿವಶರಣೆ ಸತ್ಯಕ್ಕನಾದರೂ ಇದೇ ಕಾಲದಲ್ಲಿದ್ದು ಆಕೆಯ ವಚನಗಳನು ನಾವು ಹಿಂದಿನ ಸಂಚಿಕೆಯಲ್ಲಿ ಪ್ರಸಿದ್ಧಿಸಿದ್ದೇವೆ. ಆದರೆ ಈಕೆಯು ಮಹಾದೇವಿಯಕ್ಕನಂತೆ ಬಸವೇಶ್ವರನಲ್ಲಿಗೆ ಹೋಗಿ ಅವನ ಸನ್ನಿಧಿಯಲ್ಲಿ ಶಿವಾನುಭವದ ಸ್ವಾದವನ್ನು ಉಂಡಂತೆ ಕಂಡುಬರುವದಿಲ್ಲ. ಆದರೂ ಆಕೆಯ ವಚನಗಳನ್ನು ಮಹದೇವಿಯಕ್ಕನ ವಚನಗಳಿಗೆ ಹೋಲಿಸಿ ನೋಡಿದರೆ ಈ ಉಭಯತರ ವಚನಗಳಲ್ಲಿ ಸಾಮ್ಯತೆಯು ಬಹಳ ಇರುವದು ಕಂಡುಬರುತ್ತದೆ. ಆದ್ದರಿಂದ ಆ ಉಭಯತರು ಪರಸ್ಪರ ಪರಿಚಯಸ್ಥರಿರಬಹುದು. ಏಕಾಂತದ ರಾಮಯ್ಯನು ಇವರಿಗೆ ಸಮಕಾಲೀನನಾಗಿದ್ದನು. ಇವನೂ ಬನವಸೆನಾಡಿನಲ್ಲಿಯೇ ಪ್ರಸಿದ್ಧಿಗೆ ಬಂದುದು. ಆದರೆ ಇವರೆಲ್ಲರ ತರುವಾಯ ಈತನು ಬಹಳ ದಿವಸಗಳ ವರೆಗೆ ಜೀವಿಸಿರಬೇಕೆಂದು ಅಬ್ಬಲೂರು ಶಿಲಾಶಾಸನದಿಂದ ಕಂಡು ಬರುತ್ತದೆ. ಮಹಾದೇವಿಯಕ್ಕನ ಚರಿತ್ರೆಯಂತೂ ಈಗ ಎಲ್ಲರಿಗೂ ಚನ್ನಾಗಿ ಪರಿಚಯವಾಗಿದೆ. ಈ ಪ್ರಕಾರ ಬನವಸೆ ನಾಡಿನಲ್ಲಿ ವೀರಶೈವ ಧರ್ಮದ ಚಳವಳಿಯು ಈ ಕಾಲದಲ್ಲಿ ವಿಶೇಷವಾಗಿ ಉದ್ಭವಿಸಿತ್ತೆಂತಲೂ ಇಲ್ಲಿಂದ

ಅನೇಕ ಶಿವಶರಣರು ಕಲ್ಯಾಣದಲ್ಲಿ ಬಸವೇಶ್ವರನಿಗೆ ಪ್ರಧಾನಿ ಪಟ್ಟ ಉಂಟಾದ ಬಳಿಕ ಅವನಲ್ಲಿಗೆ ಹೋಗಿ ವೀರಶೈವ ಧರ್ಮವನ್ನು ಪ್ರಸಿದ್ಧಿಗೆ ತಂದರೆಂತಲೂ ನಾವು ಊಹಿಸಬಹುದಾಗಿದೆ. ಆದರೆ ಈ ಕಾಲದಲ್ಲಿ ಈ ಭಾಗದಲ್ಲಿ ರಾಜಕೀಯ ಪರಿಸ್ಥಿತಿಯು ಹೇಗಿತ್ತೆಂಬುದನ್ನು ಕುರಿತು ಇಲ್ಲಿ ಸ್ವಲ್ಪ ವಿವರಿಸುವದು ಅತ್ಯಾವಶ್ಯಕ ವಾಗಿರುತ್ತದೆ.

ರೇವಣ ಸಿದ್ಧನು ಹಾನಗಲ್ಲು ಕದಂಬವಂಶದ ಮಲ್ಲಿಕಾರ್ಜುನನಲ್ಲಿ ಪ್ರಸಿದ್ಧಿಗೆ ಬಂದಿರಬಹುದೆಂದು ನಾವು ಹಿಂದಿನ ಸಂಚಿಕೆಯಲ್ಲಿ ವಿವರಿಸಿರುವೆವಷ್ಟೇ? ಈ ರಾಜನ ತರುವಾಯು ಇವನ ತಮ್ಮನಾದ ತೈಲಮನು ಹಾನಗಲ್ಲಿನಲ್ಲಿ ಪಟ್ಟಾಧಿಕಾರಿಯಾಗಿ ಆಳಿದನು. ಆದರೆ ಅವನು ಬಹಳ ದಿವಸ ಆಳಿದಂತೆ ತೋರುವದಿಲ್ಲ. ಯಾಕಂದರೆ ಅವನ ತರುವಾಯು ಅವನ ಮಗನಾದ ಕೀರ್ತಿದೇವನೆಂಬವನ ಅನೇಕ ಶಿಲಾಶಾಸನಗಳು ೧೧೫೧ ರಿಂದ ೧೧೬೬ ರ ವರೆಗೂ ಉಪಲಬ್ಧವಿರುತ್ತವೆ. ಈ ಶಾಸನಗಳು ಶಿವಮೊಗ್ಗಾ ಜಿಲ್ಲಾ ಸೊರಬ ತಾಲೂಕಿನ ಮಂಗಳೂರು, ಹಿರೇ ಇಡಗೋಡು, ಬಹಿರೇಕೊಪ್ಪ, ಕೊರಕೋಡು, ಹಾಯು, ಎಂಬ ಗ್ರಾಮಗಳಲ್ಲಿ ಉಪಲಬ್ಧವಿರುತ್ತವೆ. ಈ ಶಿಲಾಶಾಸನಗಳ ಬಗ್ಗೆ 'ಕರ್ನಾಟಕಾ ಎಪಿಗ್ರಾಫಿಕಾ' ಶಿವಮೊಗ್ಗೆ ಜಿಲ್ಹೆಯ ೨ನೇ ವ್ಹಾಲ್ಯೂಮು ಸೊರಬ ತಾಲೂಕಿನ ಶಿಲಾಶಾಸನಗಳು ಅನುಕ್ರಮವಾಗಿ ನಂ. ೪೭೪, ೪೭೬, ೫೭೮, ೧೭೭, ೩೦೬ ಇದ್ದು ಇವುಗಳನ್ನು ವಾಚಕರು ನೋಡಬೇಕು. ಇನೆಲ್ಲವುಗಳಲ್ಲಿ ಕೀರ್ತಿದೇವನ ಉಲ್ಲೇಖವಿದ್ದು ಇವನ ಕಾಲದಲ್ಲಿಯಾಗಲಿ ಇಲ್ಲವೆ ಇವನ ತಂದೆಯಾದ ತೈಲಮನ ಕಾಲದಲ್ಲಿಯಾಗಲಿ ಅಲ್ಲಮ ಪ್ರಭುವು ಬನವಸೆಯಲ್ಲಿ ಪ್ರಸಿದ್ಧಿಗೆ ಬಂದಿರಬೇಕು. ಅವನಿಗೆ ಮುಗ್ಧಳಾಗಿದ್ದ ಕಾಮಲತೆಯು ಕೀರ್ತಿದೇವನ ಮಗಳಾಗಿರಬೇಕು. ಆದರೆ ಈ ಕೀರ್ತಿದೇವನು ಸ್ವತಂತ್ರ ರಾಜನಾಗಿರದೆ ಚಾಲುಕ್ಯ ನೂರ್ಮಡಿ ತೈಲಪನಿಗೆ ಮತ್ತು ಅವನ ತರುವಾಯು ಬಿಜ್ಜಳನಿಗೆ ಅಂಕಿತನಾಗಿ ರಾಜ್ಯವಾಳುತ್ತಿದ್ದನು. ಕದಂಬ ರಾಜರ ರಾಜಧಾನಿಯಾದ ಹಾನಗಲ್ಲು ಪಟ್ಟಣವು ಬನವಾಸೆ ೧೨ ಸಾವಿರ ನಾಡಿನಲ್ಲಿದ್ದು ಈ ನಾಡಿನ ವಿಸ್ತಾರವು ಉತ್ತರಕ್ಕೆ ಹಾನಗಲ್ಲ ತಾಲೂಕಿನಿಂದ ದಕ್ಷಿಣಕ್ಕೆ ಶಿವಮೊಗ್ಗೆ ಜಿಲ್ಹೆಯ ವರೆಗೆ ವ್ಯಾಪಿಸಿತ್ತು. ಚಾಲುಕ್ಯರಾಜರ ಪರವಾಗಿ ಈ ಮಾಂಡಲಿಕರನ್ನು ತಮ್ಮ



ಅಧೀನದಲ್ಲಿಟ್ಟುಕೊಂಡು ಬನವಸೆಯಲ್ಲಿ ಪ್ರತ್ಯಕ್ಷವಾಗಿ ರಾಜ್ಯಮಾಡುತ್ತಿದ್ದವರು ಈ ಕಾಲದಲ್ಲಿ ಬರ್ಮದೇವ, ಬಿಜ್ಜಳ, ಮತ್ತು ಕಾಮದೇವ ಎಂಬವರಿದ್ದಾರೆ. ಇವರೆಲ್ಲರೂ ಶೂರ ಸೇನಾಪತಿಗಳಾಗಿದ್ದು ದಕ್ಷಿಣಕ್ಕೆ ಆಳುತ್ತಿದ್ದ ಹೊಯಸಳರ ಆಕ್ರಮಣಗಳನ್ನು ಅವರು ತಡೆಯುವಷ್ಟು ಸಾಮರ್ಥ್ಯವುಳ್ಳವರಾಗಿದ್ದರು. ಇವರೆಲ್ಲರು ಶೈವ ಧರ್ಮದ ಪಕ್ಷಪಾತಿಗಳು. ಆದ್ದರಿಂದ ಶಿವ ಶರಣರ ಧಾರ್ಮಿಕ ಚಳವಳಿಗಳಿಗೆ ಇವರಿಂದ ಯಾವ ಆತಂಕಗಳೂ ಉಂಟಾದಂತೆ ಕಂಡು ಬರುವದಿಲ್ಲ.

ಬನವಸೆ ನಾಡಿನಲ್ಲಿ ಉತ್ಪನ್ನರಾದ ಈ ಎಲ್ಲ ಶಿವ ಶರಣರ ಸ್ಥಾನಗಳ ಸಂಪೂರ್ಣ ವಿವರಣೆಗಳು ಶಿವಾನುಭವ ಪತ್ರಿಕೆಯ ೧೧ನೇ ಸಂಪುಟ ಸಂಚಿಕೆ ೪. ಇದರಲ್ಲಿ ಸವಿಸ್ತಾರವಾಗಿ ಬಂದಿರುತ್ತವೆ. ಅವುಗಳನ್ನು ವಾಚಕರು ಅವಶ್ಯವಾಗಿ ನೋಡಬೇಕೆಂದು ನಮ್ಮ ಸೂಚನೆ ಇದೆ.

---

# ಭವಿ ಭಕ್ತರು

(ಲೇ:- ಬಸವಪ್ಪ ಚೆನ್ನಪ್ಪ ಪಟ್ಟೇದ ಮುಂಟವಾಂರಿ)

## ಅಷ್ಟಾವರಣಗಳು.

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು.)

ಗುರು:— ತನ್ನ ಸ್ವರೂಪವನ್ನು ಮರೆತು, ದೇಹವೇ ತಾನೆಂದು ಭ್ರಮಿಸಿ, ಪ್ರವೃತ್ತಿ ಮಾರ್ಗವಿಡಿದು ಚರಿಸುವದೇ ಮರವು. ಈ ಮರವು ಅಳಿದು ಬಹಿಃಪ್ರಪಂಚಕ್ಕೆ ವಿಮುಖನಾಗಿ ತನ್ನಲ್ಲಿಯೇ ಇರುವ ಆತ್ಮನನ್ನು (ದೇವರನ್ನು) ನೆನೆದು, ಅವನೇ ಪರಮಾತ್ಮನೆಂದು ಅತ್ತ ತಿರುಗುವದೇ ಅಂದರೆ ನಿವೃತ್ತಿಮಾರ್ಗವಿಡಿವುದೇ ಅರಿವು. ಜೀವನಿಗೆ ಅನುಭವದಿಂದ ಈ ಅರಿವು ಉಂಟಾಗುವದೇ ಅವನ ಉದ್ಧಾರದ ಸಂಬಂಧದಿಂದ ಬಹು ಮಹತ್ವದ ವಿಷಯವು. ಆ ಕಾರಣ ಈ ಅರುವಿಗೇ ಗುರುವೆಂದು ಹೇಳಿರುತ್ತಾರೆ. ನಿವೃತ್ತಿ ಮಾರ್ಗದಲ್ಲಿ ನಿಜವಾಗಿಯೇ ಮುಂದುವರಿದ ಸದಾಚಾರ ಸಂಪನ್ನ ಗೃಹಸ್ಥನನ್ನು ಆರಿಸಿ ಕಂಡುಹಿಡಿದು, ಅವನಿಗೆ ಗುರುವೆಂದು ಶರಣು ಹೋಗಿ, ಆ ಮಾರ್ಗದಲ್ಲಿ ತನ್ನನ್ನು ನಡಿಸಿಕೊಂಡು ಹೋಗುವಂತೆ ಬಿನ್ನಯಿಸಿಕೊಳ್ಳಬೇಕು. ಹಾಗೆ ಮಾಡುವಂತೆ ಆತನಲ್ಲಿ ಕರುಣೆ ಹುಟ್ಟುವದಕ್ಕೋಸುಗ ಆತನ ಸೇವಾ ಶುಶ್ರೂಷಾದಿಗಳನ್ನು ಮನಮುಟ್ಟಿಮಾಡಬೇಕು. ಇತ್ತ ತಾನೂ ನಿಜವಾದ ಅಧಿಕಾರಿ (ಪಾತ್ರತೆಯುಳ್ಳವ) ಆಗುವಂತೆ ದೃಢಮನಸ್ಕನಾಗಬೇಕು. ಇಂತಹ ತಕ್ಕ ಗುರುಶಿಷ್ಯರಾದರೆ ಮಾತ್ರ ಕಾರ್ಯವು ಸಫಲವಾಗುವದು.

ಲಿಂಗ:- ಇಂತಹ ನಿಜಗುರುವು ಶಿಷ್ಯನಿಗೆ ಲಿಂಗವನ್ನು (ಶಿವಜ್ಞಾನ-ಸತ್‌ಕ್ರಿಯೆಗಳ ಚಿಹ್ನವನ್ನು) ದಯಪಾಲಿಸಿ ಅದನ್ನು ಪೂಜಿಸ ಹೇಳುವನು. ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರೂ ದೇಹಗಳಲ್ಲಿ ಇಷ್ಟ, ಪ್ರಾಣ, ಭಾವಗಳೆಂಬ ಮೂರು ತೆರನಾಗಿ ಲಿಂಗವನ್ನು ಪ್ರತಿಷ್ಠಿಸುವನು. ಈ ಲಿಂಗತ್ರಯ ಪೂಜೆಯಿಂದಲೇ ತ್ರಿಮಲ (ಆಣವ, ಮಾಯಾ, ಕಾರ್ಮಿಕ) ಗಳು ನಾಶವಾಗಿ ಜೀವನು ಶುದ್ಧಾತ್ಮನಾಗಿ ತಾನೇ ಲಿಂಗವಾಗಿ ವಿರಾಜಿಸುವನು.



ಜಂಗಮ:—ಹೀಗೆ ತನುತ್ರಯ ಭೂಮಿಯಲ್ಲಿ ಲಿಂಗರೂಪ ಬೀಜವು ಗುರುವಿನಿಂದ (ಅರುವಿನಿಂದ) ಬಿತ್ತಲ್ಪಟ್ಟರೂ, ಅದನ್ನು ಸರಿಯಾಗಿ ಜೋಪಾಸನ ಮಾಡಿ ಬೆಳೆಸಿ ಸುಫಲಿತವಾಗುವಂತೆ ಮಾಡಲಿಕ್ಕೆ, ಮಹಾಜ್ಞಾನಿಯಾದ ಲಿಂಗನಿಷ್ಠನಿಗೆ (ಆಧ್ಯಾತ್ಮಿಕ ಸಮರಸಜ್ಞಾನಕ್ಕೆ) ಮೊರೆ ಇಡಲಿಕ್ಕೆಬೇಕು. ಆ ಜ್ಞಾನಿಯೇ (ಜ್ಞಾನವೇ) ಜಂಗಮ. ನರಜಂಗಮನು ತಾನು ಸ್ವತಃ ಸದಾಚಾರಿಯೂ ಸುಜ್ಞಾನ ಪುಂಜನೂ ಆಗಿ, ಲೋಕೋದ್ಧಾರಾರ್ಥವಾಗಿ ಸಂಚರಿಸುವದೇ ಅವನ ಕರ್ತವ್ಯವು.

ಪಾದೋದಕ:- ಇಂತಹ ಜಂಗಮ (ಸುಜ್ಞಾನ) ಪ್ರಾಪ್ತಿಗಾಗಿ ಬಲ್ಲವರ ಸದಾಚಾರ ಸಂಪನ್ನರ-ಸಹವಾಸದಲ್ಲಿದ್ದು "ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಿಂ ಕೇಳುತ, ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತ, ಕೆಲವಂ ಸಜ್ಜನ ಸಂಗದಿಂದಲರಿಯಲ್ ಸುಜ್ಞಾನಿಯಪ್ಪಂ ನರಂ..." ಎಂಬಂತೆ ವಿಧವಿಧದ ಪ್ರಯತ್ನಗಳನ್ನೆಲ್ಲ ಮಾಡಿ ಕೃತಾರ್ಥನಾಗಬೇಕಾಗುವದು. ಈ ರೀತಿ ಅವರ ಕಾರುಣ್ಯಜಲ (ಕರುಣಾಮೃತ) ಪ್ರಾಪ್ತಿಗೆ ಈಡಾಗುವಂತೆ ವರ್ತಿಸುವದೇ ನಿಜವಾದ ಪಾದೋದಕ ಸ್ವೀಕಾರವು

ಪ್ರಸಾದ:- ಗುರುಲಿಂಗ ಜಂಗಮದಿಂದ ಇಂತು ಪಾದೋದಕ ಪಡೆದವನು ಮುಂದೆ ಅವರಿಂದ ಕ್ರಮವಾಗಿ ಶುದ್ಧ ಪ್ರಸಾದವನ್ನೂ (ತನುವಿನಿಂದ ಯಾವ ಅನಾಚಾರವೂ ಆಗದೆ ಯಾವಾಗಲೂ ಸದಾಚಾರಗಳೇ ಘಟಿಸುವಂತೆ ವರ್ತಿಸುವದನ್ನೂ) ಸಿದ್ಧಪ್ರಸಾದವನ್ನೂ (ಮಾನವನ ಮನದಲ್ಲಿರುವ ಜೀವ ಗುಣಗಳೆಲ್ಲ ಅಂದರೆ ಅಹಂಕಾರ ಮಮಕಾರಕಾಮಾದಿ ವಿಕಾರಗಳೆಲ್ಲ ಲಯವಾಗಿ, ತಾನು ಶುದ್ಧ ಆತ್ಮನಿರುವೆನೆಂಬ ದೃಢಭಾವವನ್ನೂ, ಪ್ರಸಿದ್ಧ ಪ್ರಸಾದವನ್ನೂ (ತಾನಷ್ಟೇ ಅಲ್ಲ, ಇಡೀ ಚರಾಚರ ಜಗವೆಲ್ಲವೂ ಆತ್ಮಲಿಂಗರೂಪವೇ ಇರುವದೆಂಬ ಅನುಭಾವವನ್ನೂ) ಪಡೆದಾಗಲೇ ಮನುಷ್ಯನು ಉದ್ಧಾರಹೊಂದುವನು, ಲಿಂಗೈಕ್ಯನಾಗುವನು.

ವಿಭೂತಿ:—ಅಂತರಂಗದ ಜೀವರೂಪತನು ಶುದ್ಧಿವಡೆಯಬೇಕೆಂದು ಸೂಚಿಸುವ ಬಹಿರಂಗದ ಸ್ಥೂಲದೇಹಕ್ಕೆ ಅನಾಚಾರವಿರಹಿತವಾಗಿ ಸದಾಚಾರಯುಕ್ತನಾಗಿ ಇರಬೇಕೆಂದು ಸದಾಕಾಲ ಎಚ್ಚರಪಡಿಸುವ ಉದ್ದೇಶದಿಂದ ಧರಿಸುವ, ಅಗ್ನಿಯಲ್ಲಿ ಸುಟ್ಟ ಅತ್ಯಂತ ಶುದ್ಧವಾದ ವಸ್ತು

ವಿದು. ಪವಿತ್ರವೂ ನಿರ್ಮಲವೂ ಆದ ಗೋಮಯವನ್ನು ಒಣಗಿಸಿ ಒಳ್ಳೆತಾಗಿ ಸುಟ್ಟು, ಕಸರು ಕಲ್ಮಲಗಳನ್ನೆಲ್ಲ ಶೋಧಿಸಿ ತೆಗೆದು, ಉಳಿಯುವ ಬರೇ ಬಿಳುಪಾದ ಭಾಗವನ್ನೇ ಸಂಗ್ರಹಿಸಿ ದೃಢೀಕರಿಸಿದ್ದು. ಲೋಕದಲ್ಲಿ ಮಾನವನು ನಿಜವಾಗಿ ಮಹಾ ವಿಭೂತಿಪುರುಷನಾಗಬೇಕೆಂಬದನ್ನು ಎಚ್ಚರಿಸುತ್ತಿರುವ ಪವಿತ್ರವಸ್ತುವೇ ಇದಾಗಿರುವದು.

ರುದ್ರಾಕ್ಷಿ:— ಮನವು ತನ್ನ ಚಂಚಲ ಸ್ವಭಾವವನ್ನು ಬಿಟ್ಟು ಜ್ಞಾನಯುಕ್ತವಾಗಿ (ಲಿಂಗನಿರತವಾಗಿ) ನಿರಂತರವಿರಬೇಕೆಂದು ಸೂಚಿಸುವ ಬಾಹ್ಯ ಚಿಹ್ನವೇ ರುದ್ರಾಕ್ಷಿಯು. ಇದು ರುದ್ರಾಕ್ಷವೃಕ್ಷದ ಬೀಜವು. ರುದ್ರನ ಅಕ್ಷಿಯು (ತೃತೀಯ ಫಾಲನೇತ್ರವು) ಅಚ್ಚ ಜ್ಞಾನವೇ ವಿನಾ ಬೇರೊಂದಲ್ಲ. ತ್ರಿಪುರ (ದೇಹತ್ರಯ) ದಲ್ಲಿ ವಾಸಿಸುವ ರಾಕ್ಷಸತ್ರಯ (ಮಲತ್ರಯ) ವನ್ನು ನಾಶಗೊಳಿಸುವದಕ್ಕೆ ರೌದ್ರತೆಯನ್ನು ಧರಿಸಿದ ಶಿವನು ತೀಕ್ಷ್ಣ ದೃಷ್ಟಿಯಿಂದ ನಿಟ್ಟಿಸುವ ವೇಳೆಯಲ್ಲಿ ಆತನ ಕಣ್ಣಿನಿಂದ ಉದುರಿದ ಹನಿಗಳೇ ( ಪ್ರಕಟವಾದ ಪರಮ ಜ್ಞಾನರೂಪವೇ ) ಇವು. ಇವುಗಳನ್ನು ಮನಶ್ಶುದ್ಧಿಯ (ಮಲಶುದ್ಧಿ) ಯನ್ನು ಸೂಚಿಸುವ ಬಾಹ್ಯ ಕುರುಹೆಂದು ಲಿಂಗಾಯತರು ಸ್ಥೂಲ ತನುವಿನಲ್ಲಿ ಯಾವಾಗಲೂ ಧರಿಸಬೇಕು.

ಮಂತ್ರ:— ಇದು ಮನುಷ್ಯನಿಗೆ "ನೀನು ಶರೀರವಲ್ಲ. ಇಂದ್ರಿಯಗಳಲ್ಲ, ಮನವಲ್ಲ, ಪ್ರಾಣವಲ್ಲ, ಶುದ್ಧ ಪರಮಾತ್ಮನಲ್ಲದೆ ಬೇರಾವುದೂ ಅಲ್ಲ" ಎಂಬುದನ್ನು ಬೋಧಿಸುತ್ತದೆ. ಮನನ ಮಾತ್ರದಿಂದಲೇ ತಾರಿಸುವದರಿಂದ ಮಂತ್ರವೆನ್ನುವರು. ಅದನ್ನು ಸತತವಾಗಿ ಜಪಿಸಿ ಜೀವನು ತಾನು ಕೇವಲ ಪರಮಾತ್ಮ ಸ್ವರೂಪವನ್ನೇ ಹೊಂದುವನು. ಕೀಟಕವು ತನ್ನನ್ನು ತಂದಿಟ್ಟು ಸಲುಹುವ ಕುಂಬಾರಹುಳವನ್ನೇ ಯಾವಾಗಲೂ ನೆನೆನೆನೆದು ತದ್ರೂಪವೇ ಆಗುವದೆಂಬದು ಎಲ್ಲರ ಅನುಭವದ ಸಂಗತಿ.

## ಪಂಚಾಚಾರಗಳು.

ಆಚಾರವು ಧರ್ಮದೊಂದು ಮುಖ್ಯಾಂಗವಾಗಿದೆ, ತಳಹದಿಯಾಗಿದೆಯೆಂದರೂ ಅಡ್ಡಿಯಿಲ್ಲ. "ಆಚಾರಃ ಪ್ರಥಮೋ ಧರ್ಮಃ" ಎಂದು ಅದರ ಮಹತ್ವವನ್ನು ವರ್ಣಿಸಿದ್ದಾರೆ. ಆಚಾರವನ್ನು ಬಿಟ್ಟು ನೀತಿಯಿಲ್ಲ. ನೀತಿಯನ್ನು ಬಿಟ್ಟು ಆಚಾರವಿಲ್ಲ. ನೀತಿಧರ್ಮವು ಮಾನವ



ಸಮಾಜಸುಧಾರಣೆಗೆ ಅತ್ಯಂತ ಅವಶ್ಯವಾಗಿದೆ. ಸಮಾಜದಲ್ಲಿ ದುರ್ಬಲರೂ ಅಜ್ಞಾನರೂ ರೋಗಪೀಡಿತರೂ ಅಂಗಹೀನರೂ ಮೊದಲಾಗಿ ಸಕಲರೂ ಇರುವದುಂಟು. ಅವರೆಲ್ಲರ ಪೋಷಣೆಯೂ ರಕ್ಷಣೆಯೂ ಸರಿಯಾಗಿ ಒದಗಿ, ಈ ಭೂಲೋಕವು ಸಕಲರ ಸರಿಸಮಾನತೆಯ ಹಾಗು ಸೌಕರ್ಯದ ಸ್ಥಾನವಾಗಬೇಕು. ಇದಕ್ಕಾಗಿಯೇ ಧರ್ಮವೂ ತದಂಗಭೂತವಾದ ಸದಾಚರಣೆಯೂ ಅನಿವಾರ್ಯವಾಗಿ ಬೇಕೇ ಬೇಕು.

ಬಹಿರಂಗವಾಗಿ ತೋರ್ಪಡಿಸಲಾಗುವ ನಡವಳಿಕೆಯಲ್ಲಿ ವೀರಶೈವರು ಐದು ಭಾಗಗಳನ್ನು ಮಾಡಿದ್ದಾರೆ. ಅವನ್ನು ನನ್ನ ಸ್ವಂತ ಶಬ್ದಗಳಿಂದ ಹೇಳುವ ಬದಲು ನಮ್ಮೆಲ್ಲರಿಗೆ ವಂದ್ಯರಾದ ಶ್ರೀ ಚೆನ್ನಬಸವೇಶ್ವರರ ವಚನದಲ್ಲಿಯೇ ಮುಂದಿಡುವೆನು. " ಲಿಂಗವೇ ಪರವೆಂದರಿದು ಅನ್ಯದೇವರ ಭಜನೆಯಿಲ್ಲದಿರ್ಪುದೇ ಲಿಂಗಾಚಾರ, ಸತ್ ಕ್ರಿಯೆಯಿಂದ ಧನವ ಸಂಪಾದಿಸಿ, ಗುರು ಲಿಂಗ ಜಂಗಮದಾಸೋಹ ಪರೋಪಕಾರ ಮಾಡುವದೇ ಸದಾಚಾರ, ಅಂಗದ ಮೇಲೆ ಲಿಂಗವಿರ್ಪ ಶಿವಭಕ್ತನೇ ಶಿವರೂಪವೆಂದರಿದು ಆವರ ಮಂದಿರವ ಪೊಕ್ಕು ಮಿಕ್ಕಿದನುಂಬುದೇ ಶಿವಾಚಾರ, ಶಿವನಿಂದೆಯ ಕಿವಿಯಲ್ಲಿ ಕೇಳದಿಪ್ಪುದೇ ಗಣಾಚಾರ, ಶಿವಭಕ್ತರ ಶಿಶುವು ತೊಟ್ಟಿಲಲ್ಲಿರ್ಪುದ ಕಂಡು ಯಜಮಾನನೆಂದರಿದು ನಮ್ರಭಾವದಿಂದ ನಡೆದುಕೊಳ್ಳುವುದೇ ಭೃತ್ಯಾಚಾರ, ಇಂತೀ ಪಂಚಾಚಾರ ಸಂಯುಕ್ತನಾಗಿ ನಡೆಯುವ ಶಿವಭಕ್ತನೊಕ್ಕಿಮಿಕ್ಕಿದನಿಕ್ಕಿ ಸಲಹೋ ಕೂಡಲ ಚನ್ನಸಂಗಮದೇವ !

ಈಗ ನಾವು ಈ ಆಚಾರಗಳನ್ನೆಲ್ಲ ಸಂಪೂರ್ಣವಾಗಿ ಮರೆತು ಅವನ್ನು ಸಮಾಜದಿಂದ ತಳ್ಳಿಹಾಕಿದ್ದೇವೆಂದು ಬಹು ಕಷ್ಟದಿಂದ ಒಡಂಬಡಬೇಕಾಗಿದೆ. ನೀತಿ ಸದಾಚಾರಗಳೆಲ್ಲ ಹೇಳಹೆಸರಿಲ್ಲದೆ ಗುಳೇಕಟ್ಟಿಕೊಂಡು ಎತ್ತ್ಲೋಹೋಗಿ ಎಂದೋ ಮಾಯವಾಗಿ ಬಿಟ್ಟಿವೆ. ಅವುಗಳ ಸ್ಥಾನವನ್ನು ಸರಕಾರದ ಕಾನೂನುಗಳು ವ್ಯಾಪಿಸಿಬಿಟ್ಟಿವೆ. ಅಪರಾಧಗಳನ್ನು ಮಾಡಲಿಕ್ಕೆ ಈಗ ಯಾರೂ ಹೇಸುವದಿಲ್ಲ. ಹಿಂಜರಿಯುವದಿಲ್ಲ. ಆದರೆ ಅವು ಬೈಲಿಗೆ ಬರಬಾರದೆಂದೂ ಬಂದರೂ ಸರಕಾರದ ಕಾನೂನುಗಳ ಹಿಡಿತದಲ್ಲಿ ಸಿಗದೆ ತಾವು ಆದು ಹೇಗೆ ಉಳಿದುಕೊಳ್ಳಬೇಕೆಂದೂ, ಹಂಚಿಕೆ ಹಾಕುವದರಲ್ಲೇ ಜನರೆಲ್ಲ ನಿಮಗ್ನರಾಗಿ ಬಿಟ್ಟಿದ್ದಾರೆ. ತಮ್ಮ ಮಾತಿಗೆ

ಸರಕಾರದಲ್ಲಿ ಜಯಬಂದರೆ ಸಾಕು. ಆ ಬಗ್ಗೆ ಬೇಕಾದ ಸುಳ್ಳು, ಮೋಸಗಾರಿಕೆ, ದಂಭಾಚಾರಾದಿಗಳನ್ನು ಮನಬಂದಂತೆ ಅವಲಂಬಿಸಲಿಕ್ಕೆ ಏನೂ ಅಡ್ಡಿಯಿಲ್ಲೆಂಬುದು ಈಗ ಸರ್ವತ್ರ ಪ್ರಚಾರಗೊಂಡಿದೆ. ಆಕಾರದಲ್ಲಿ ಸೊಕ್ಕಿನೆಕ್ಕಲಾಗಿದ್ದರೂ ಪೈಗಳ್ಳತನದಿಂದ ಮುಂಗೈಗೆ ಜೋಳಿಗೆ ಏರಿಸಿಕೊಂಡು ಭಿಕ್ಷೆಬೇಡಿ ಬಾಳಲಿಕ್ಕೆ ಎಷ್ಟೆಷ್ಟೂ ನಾಚುವದಿಲ್ಲ. ಮೊದಲಿನ ಸತ್ಯ, ಪ್ರಾಮಾಣಿಕತನ, ದಯಾ, ನ್ಯಾಯ, ನೀತಿಗಳೆಲ್ಲ ಈಗ ಸಂಪೂರ್ಣ ಸತ್ತುಹೋಗಿವೆ. ಇವೆಲ್ಲ ಪ್ರತಿನಿತ್ಯದ ಎಲ್ಲರ ಅನುಭವದ ಮಾತಾಗಿದೆ. ಹೀಗೆ ಒಳಗೊಂದು ಹೊರಗೊಂದು ನಡಿಸುವ ಮಹಾರಾಯರನ್ನೇ ನಾವು ದೊಡ್ಡಮುತ್ಸದ್ದಿಗಳೆಂದೂ ಬಹು ಬುದ್ಧಿವಂತರೆಂದೂ ನಿರ್ಲಜ್ಜತನದಿಂದ ಹೊಗಳುತ್ತೇವೆ. ಇದರಿಂದ ಎಲ್ಲೆಲ್ಲಿಯೂ ಅನಾಚಾರದ ಸಾಮ್ರಾಜ್ಯವಾಳಹತ್ತಿ, ಭೂಲೋಕವು ಯಾತನಾಮಯ ಯಮಲೋಕವಾಗಿದೆ, ಎಂದು ನಿಃಸಂದೇಹವಾಗಿ ಹೇಳಬಹುದು! ಇದಾಯಿತು ನಮ್ಮ ಸದಾಚಾರದ ಗತಿ!!

ಇದೇ ಮೇರೆಗೆ ಲಿಂಗಾಚಾರದ ಸ್ಥಲವನ್ನು ಬಹು ದೇವತಾರಾಧನವು ಹಿಡುಕೊಂಡಿದೆ. ಶಿವಾಚಾರದ ಸ್ಥಾನವನ್ನು ಅನೇಕ ಪಂಗಡಗಳೂ ಜನ್ಮಸಿದ್ಧ ಮೇಲುಕೀಳುಗಳೂ ವ್ಯಾಪಿಸಿಕೊಂಡಿವೆ. ಗಣಾಚಾರದ ನೆನವೇ ಇಲ್ಲವಾಗಿರುವದರಿಂದ ಕೇವಲ ನಿರ್ಲಜ್ಜರೋ ನಪುಂಸಕರೋ ಎಂಬಂತೆ ಅದರ ಗೋಜಿಗೆ ಹೋಗುವದನ್ನೇ ಎಲ್ಲರೂ ಬಿಟ್ಟುಬಿಟ್ಟಿದ್ದಾರೆ. ಅವರೂ "ನಾನು ಗಣಾಚಾರಿ" ಎಂದು ಸಮಾಜದಲ್ಲಿ ಹಕ್ಕು ಎತ್ತುವವರು ಮಾತ್ರ ಉಳಿದಿದ್ದಾರೆ. ಭೃತ್ಯಾಚಾರವನ್ನು ದೂರ ಹೊರಗಟ್ಟಿ ಓಡಿಸಿ, ಅಹಂಕಾರ ಮದ ಮತ್ಸರಾದಿಗಳು ಎಲ್ಲೆಲ್ಲಿಯೂ ತಾಂಡವನೃತ್ಯಮಾಡಹತ್ತಿವೆ. ಇದು ನಮ್ಮ ಪಂಚಾಚಾರಗಳ ಸ್ಥಿತಿಯು. ಈ ಆಚಾರಗಳನ್ನು ನಾವು ತಿದ್ದಿಕೊಂಡು ಯೋಗ್ಯರೀತಿಯಿಂದ ಪಾಲಿಸಿ ನಡೆಯದಿದ್ದರೆ, ನಮಗೆ ಎಂದೆಂದೂ ಸುದಿನಗಳು ಬರಲಾರವೆಂಬದನ್ನು ವೀರಶೈವರು ತಮ್ಮ ಪದರಲ್ಲಿ ಗಂಟು ಹಾಕಿಟ್ಟುಕೊಳ್ಳಬೇಕು.

## —ಃಷಟ್‌ಸ್ಥಲಗಳುಃ—

ಇವು ಸಕ್ರಿಯ ಜ್ಞಾನ-ಮಾರ್ಗದಲ್ಲಿ ಕ್ರಮವಾಗಿ ಪ್ರಗತಿಯನ್ನು ಹೊಂದಿಸುತ್ತ ಅದರ ಶಿಖರಾಗ್ರಕ್ಕೆ ಏರಿಸುವ ಮೆಟ್ಟಲುಗಳಂತೆ ಅವೆ.



ವೀರಶೈವರು ಕರ್ಮ ಮಾರ್ಗಿಗಳಲ್ಲ, ಜ್ಞಾನಮಾರ್ಗಿಗಳು! ಕರ್ಮಕಾಂಡವನ್ನು ತಿರಸ್ಕರಿಸಿ, ಅವರು ಜ್ಞಾನಕಾಂಡವನ್ನು ಭಜಿಸಿದರು. ಅಂತೇ ಕರ್ಮವನ್ನು ಪ್ರತಿಪಾದಿಸುವ ವೇದಗಳ ಬಹು ಭಾಗವು ಅವರಿಗೆ ನಿಷೇಧವೆನಿಸಿತು. ಸ್ಮೃತ್ಯಾದಿಗಳು ಭೇದ ಭಾವನೆಯಿಂದ ತುಂಬಿದುದರಿಂದ ಅದನ್ನು ಕುಗ್ಗಿಸಿ ಜನತೆಯಲ್ಲಿ ಸಮತ್ವವನ್ನು ಹರಡಿದರು. ಸ್ತ್ರೀಪುರುಷರಲ್ಲಿ ಧಾರ್ಮಿಕ ಉನ್ನತಿಯನ್ನು ಕುಂಠಿತ ಮಾಡುತ್ತಿದ್ದ ವೈಷಮ್ಯ, ಸೂತಕ, ಸ್ಪೃಶ್ಯಾಸ್ಪೃಶ್ಯ ಮೊದಲಾದ ಮಡಿ ಮೈಲಿಗೆಯ ಸ್ತೋಮ, ಜನ್ಮತಃ ಹೇಳಿಕೊಳ್ಳುವ ಮೇಲುಕೀಳುಗಳ ಕಲ್ಪನೆ, ಇತ್ಯಾದಿಗಳನ್ನೆಲ್ಲ ಸಮೂಲ ಕಿತ್ತೊಗೆದರು. ಇವರಿಗೆ ಜ್ಞಾನವೂ ತದನುಸಾರ ಕ್ರಿಯೆಯೂ (ವರ್ತನವೂ) ಬಹು ಪ್ರಿಯವಾದವುಗಳು. ಕ್ರಿಯೆ ಇಲ್ಲದ ಜ್ಞಾನವೂ, ಜ್ಞಾನರಹಿತವಾದ ಕ್ರಿಯೆಯೂ ತ್ಯಾಜ್ಯವಾಗಿರುವವು. ಎರಡು ಪಕ್ಕಗಳಿಲ್ಲದೆ ಒಂದೇ ಪಕ್ಕದಿಂದ ಪಕ್ಷಿಯು ಅದು ಹೇಗೆ ಹಾರಲರಿಯದೋ ಅದರಂತೆ ಆತ್ಮೋದ್ಧಾರಕ್ಕೆ ಜ್ಞಾನ-ಕ್ರಿಯೆಗಳೆರಡೂ ಕೂಡಿಯೇ ಸಾಗಬೇಕೆಂದು ಅವರ ಮತವು. ಆದುದರಿಂದ ನುಡಿಯಂತೆ ನಡೆಯುವದೂ ನಡೆಯಂತೆಯೇ ನುಡಿಯುವದೂ ಇವರ ಜೀವನ ರಹಸ್ಯವಾಗಿದೆ. ಅಂಗದ ಮೇಲೆಯೂ ಒಳಗೂ ಲಿಂಗವನ್ನು ಧರಿಸಿ, ಸತತವಾಗಿ ಅದನ್ನು ಆರಾಧಿಸಿ, ತಾನು ಲಿಂಗರೂಪವಾಗಿ, ಸರ್ವತ್ರ ಲಿಂಗಭಾವನೆಯನ್ನು ಬಲಿಸಿ, ಅದರೊಳಗೆ ತಾನು, ತನ್ನೊಳಗೆ ಅದು ಬೆರೆದು, ಏಕವಾಗುವದೇ ಲಿಂಗವಂತನ ಅಂತಿಮ ಧ್ಯೇಯವಾಗಿದೆ. ಆದ ಕಾರಣ ಎಲ್ಲ ಕಡೆಗೂ ಸಮಭಾವನೆಯನ್ನು ತಾಳುವದೇ ಅವನ ಧೋರಣವಲ್ಲದೆ, "ತಾನು ಬೇರೆ ಇತರರು ಬೇರೆ ತನ್ನ ಹಾಗು ಅವರ ಹಿತಾಹಿತಗಳು ಭಿನ್ನ ಭಿನ್ನ" ಎಂದು ಬಲ್ಲ ವೀರಶೈವನು ತಿಳಿಯುವದೇ ಶಕ್ಯವಿಲ್ಲ. ಹೀಗಾದರೆ ಅವನೂ ಭವಿಯೇ ಹೊರತು ಭಕ್ತನೆಂದೂ ಆಗಲಾರನು.

ಷಟ್‌ಸ್ಥಲಗಳನ್ನು ಕುರಿತು ಶರಣರ ಮುಂದಿನ ವಚನವನ್ನು ಲಕ್ಷಿಸಬೇಕು. "ಭಕ್ತಂಗೆ ಕ್ರಿ, ಮಹೇಶ್ವರಂಗೆ ನಿಶ್ಚಯ, ಪ್ರಸಾದಿಗೆ ಅರ್ಪಣ, ಪ್ರಾಣಲಿಂಗಿಗೆ ಯೋಗ, ಶರಣಂಗೆ ನಿಬ್ಬೆರಗು, ಐಕ್ಯಂಗೆ ನಿರ್ಲೇಪ... ಮಾತುಳಂಗ ಮಧುಕೇಶ್ವರ" ಇದು ಬಹು ಸಂಕ್ಷೇಪವಾಗಿ ಸೂತ್ರರೂಪದಿಂದ ಹೇಳಿರುವದು. ಇದರ ವಿವರಣೆಯನ್ನು ತುಸು ಮಾಡುವದು ಅವಶ್ಯವದೆಃ—

೧ ಭಕ್ತಂಗೆ ಕ್ರಿಃ— ಇಲ್ಲಿ ಭಕ್ತನೆಂದರೆ ಶ್ರದ್ಧಾಪೂರ್ವಕವಾಗಿ ಸದಾಚಾರಣೆಯನ್ನು ಸಾಧಿಸಲಿಕ್ಕೆ ಅಣಿಯಾಗಿ ಹೆಣಗಾಡುತ್ತ ಮುಂದರಿಯುವ ಶ್ರದ್ಧಾಭಕ್ತನೆಂದೂ, ಕ್ರಿ, ಯೆಂದರೆ ಕ್ರಿಯೆ ಇಲ್ಲವೆ ಸದಾಚರಣೆ ಎಂದೂ ಅರಿಯಬೇಕು. ಆಚಾರ ಲಿಂಗವನ್ನು ಭಜಿಸುವದೇ ಈತನ ಕರ್ತವ್ಯ. ಈತನು ಶಿವಸ್ವರೂಪನು.

೨ ಮಹೇಶ್ವರಂಗೆ ನಿಶ್ಚಯಃ— ಈಶ್ವರನು (ಶ್ರದ್ಧಾಭಕ್ತನು) ಕೈಕೊಂಡ ಸದಾಚರಣ ಸಂಪಾದನೆಯಲ್ಲಿ ಪರಿಪೂರ್ಣ ಪ್ರಗತಿಹೊಂದಿ ನಿಶ್ಚಯ ಸ್ವರೂಪಕ್ಕೆ ಬಂದು ಜನರಲ್ಲಿ ಪ್ರತಿಷ್ಠಾವಂತನಾಗಿ, ಗೌರವವನ್ನು ಹೊಂದಿ ಪ್ರಥಮ ಸ್ಥಲದ ವರೆಗೆ ಅನುಕರಣೀಯನಾಗಿ ಶೋಭಿಸಬೇಕು. ಇವನು ನಿಷ್ಠಾಭಕ್ತನು. ಅಂತೇ ಸದಾಚಾರದಲ್ಲಿ ಅತ್ಯಂತ ಪೂರ್ಣತೆಯನ್ನು ಪಡೆಯಬೇಕಾಗುವದು. ಇಂತಹ ಆಚಾರೋತ್ಕೃಷ್ಟ (ಗುರು) ಲಿಂಗವನ್ನು ಭಜಿಸಿ ನಿರಂತರ ಅದರೊಳು ನಿರತನಾಗಿರುವದೇ ಈತನ ಕರ್ತವ್ಯ.

೩ ಪ್ರಸಾದಿಗೆ ಅರ್ಪಣಃ— ಈತನು ಅವಧಾನ (ಸಂಪೂರ್ಣ ಎಚ್ಚರವುಳ್ಳ) ಭಕ್ತನು. ಹಿಂದಿನವೆರಡು ಸ್ಥಲಗಳಲ್ಲಿ ಸಂಪಾದಿಸಿದ ಪ್ರಗತಿಯನ್ನು ಸ್ವಲ್ಪವೂ ಕೊಂಕಿಸದೆ, ಸರಿಯಾಗಿ ಆಚರಿಸುತ್ತ ಬಲು ಎಚ್ಚರುಳ್ಳವನಾಗಿ, ತನ್ನ ದೇಹ-ಕರಣೇಂದ್ರಿಯಗಳು ಪ್ರಾಣ-ಭಾವ, ಇವನ್ನೆಲ್ಲ ಪರಮಾತ್ಮನಿಗೆ ಅರ್ಪಿಸಿ ತನ್ನನ್ನು ಇಲ್ಲಮಾಡಿಕೊಂಡು (ಅಂದರೆ ಅಹಂಕಾರ-ಮಮಕಾರಗಳನ್ನು ದೂರೀ ಕರಿಸಿ ಕರ್ತವ್ಯ (ಕಾಯಕ) ತತ್ಪರನಾಗಿ ಶಿವೇಚ್ಛೆಯಿಂದ ಪ್ರಾಪ್ತವಾದುದನ್ನೇ ಶಿವಪ್ರಸಾದವೆಂದು ಸಂತೋಷದಿಂದ ಸ್ವೀಕರಿಸಿ, ಶಿವಾರ್ಪಿತ (ಲಿಂಗಾರ್ಪಿತ) ಮಾಡಿ ಲಿಂಗದೊಡನೆಯೇ ತಾನು ಅವನ್ನೆಲ್ಲ ಪ್ರಸಾದರೂಪವಾಗಿ ಭೋಗಿಸಬೇಕು. ಸರ್ವಾರ್ಪಣ ಮಾಡಿ ತಾನು ಶಿವನಾಗುವದೇ (ಶಿವಲಿಂಗವನ್ನು ಭಜಿಸುವದೇ) ಈತನ ಕರ್ತವ್ಯ.

೪ ಪ್ರಾಣಲಿಂಗಿಗೆ ಯೋಗಃ— ಇವನು ಅನುಭವ ಭಕ್ತನು. ಆತ್ಮಾನುಭವವನ್ನು ಒಳಿತಾಗಿ ಹೊಂದಿದವನು. ಯೋಗವೆಂದರೆ ಪರಮಾತ್ಮನಲ್ಲಿ ತಾನು ಬೆರೆದು ಬಿಡುವದು. "ಆತ್ಮವತ್ ಸರ್ವಭೂತಾನಿ" ಎಂಬ ತತ್ವಾನುಸಾರವಾಗಿ ತನ್ನಲ್ಲಿರುವ ಆತ್ಮವಸ್ತುವೇ ಸಕಲಪ್ರಾಣಿಮಾತ್ರರಲ್ಲಿಯೂ ಇರುವದರಿಂದ, ಅವೆಲ್ಲ ತನ್ನ ಸ್ವರೂಪವೇ ಅಥವಾ ಜಗದಾತ್ಮನೇ ತನ್ನ ಆತ್ಮವು, ಎಂದರಿತುಕೊಂಡು ಅವುಗಳೊಡನೆ ಏಕರೂಪವಾಗಬೇಕು. ಸಕಲ ಭೂತಹಿತನಾಗಬೇಕು. ಯಾವ ವೈಷಮ್ಯವನ್ನೀಯದೆ ತಾದಾತ್ಮ್ಯ ಹೊಂದಬೇಕು. ಚರಲಿಂಗವನ್ನು (ಚಲಿಸುವ ಪ್ರಾಣಿಗಳೆಲ್ಲ ಲಿಂಗರೂಪವೆಂಬದನ್ನು) ಭಜಿಸಿ ಬೆರೆಯುವದೇ ಇವನ ಕರ್ತವ್ಯ.



೫ ಶರಣಂಗೆ ನಿಬ್ಬೆರಗಃ— ಇವನು ಆನಂದ ಭಕ್ತನು. ತೋರುವ ಚರಾಚರ (ಚರ+ಅಚರ) ವೆಲ್ಲವೂ ಲಿಂಗರೂಪವೇ ಎಂದು ಮನಗಂಡು, ಕೇವಲ ಆದರಲ್ಲಿ ಕೂಡಿಬಿಡುವದೇ ನಿಬ್ಬೆರಗು ಈ ನೋರಿಗೆ ಸಕಲವೂ ಲಿಂಗರೂಪವೆಂಬ ಮಹಾಜ್ಞಾನ ಪ್ರಸಾದವನ್ನು ಪಡೆದು, ಆ ಪ್ರಸಾದ ಲಿಂಗವನ್ನೇ ಸದಾ ಭಜಿಸುತ್ತ ಇರುವದೇ ಈತನ ಕರ್ತವ್ಯ.

೬ ಐಕ್ಯಂಗೆ ನಿರ್ಲೇಪಃ— ಈತನು ಸಮರಸ ಭಕ್ತನು. ಜೀವನ್ಮುಕ್ತನು. ಕರ್ತವ್ಯವೆಂದು ಮಾತ್ರ ಲೋಕೋದ್ಧಾರಾರ್ಥವಾಗಿ ಸಕಲ ಕಾರ್ಯಗಳನ್ನು ನಿಷ್ಕಾಮನೆಯಿಂದ ಮಾಡುತ್ತಲೂ ಪ್ರಾಪ್ತಸರ್ವವಿಷಯಗಳನ್ನು ಅನಾಸಕ್ತಿಯಿಂದ ಭೋಗಿಸುತ್ತಲೂ ಪ್ರಪಂಚದಲ್ಲಿ ನಿರ್ಲೇಪದಿಂದ ವರ್ತಿಸುತ್ತ ಮಹಾಲಿಂಗರೂಪ ವ್ಯಾಪಕ ಭಾವನೆಯಿಂದ ಜೀವಿಸುವದೇ ಇವನ ಕರ್ತವ್ಯ.

ಇದು ಭಕ್ತತ್ವ (ವೀರಶೈವತ್ವ) ದ ಸಂಕ್ಷೇಪ ಸ್ವರೂಪದ ತೀರ ಸ್ಥೂಲಮಾನದ ವಿವರಣವಾಯಿತು. ಇಷ್ಟರಿಂದಾದರೂ ನಮ್ಮ ಅನೇಕ ಬಂಧುಗಳಿಗೆ ತಮ್ಮ ಹಾಗು ತಮ್ಮ ಮತದ ವಿಷಯವಾಗಿ ಒಂದು ಮಸಮಸಕಾದುದೇ ಆಗಲೊಲ್ಲದೇಕೆ - ಚಿತ್ರವು ಮನದಲ್ಲಿ ಮೂಡಬಹುದೆಂದು ನಂಬಿರುವೆನು.

# ಮರಳಿ ಉತ್ತರಿಸಿದುದು !

( ಶ್ರೀ. ವೀರೇಶ್ವರ, ಬೆಂಗಳೂರು ನಗರ. )

ವೈಲೇಶ್ವರದ ಶ್ರೀಮಲ್ಲಿಕಾರ್ಜುನ ದೇಶಿಕರೆಂಬುವವರು "ಶಿವಾನುಭವ"ದ ೧೪ನೆಯ ವರ್ಷದ ೪ನೆಯ ಸಂಚಿಕೆಯಲ್ಲಿ ಒಂದು ಲೇಖನವನ್ನು ಬರೆದು ಇದೇ ವರ್ಷದ ಒಂದನೆಯ ಸಂಚಿಕೆಯಲ್ಲಿ ನಾವು ಬರೆದಿದ್ದ ಲೇಖನವನ್ನು ಟೀಕಿಸಿ... ಕೊನೆಗೆ "ಇನ್ನಾದರೂ ಮರಳಿ ಉತ್ತರಿಸಲಿ!" ಎಂದು ಸವಾಲು ಹಾಕಿ ತಾವು ತಿಳಿದುಕೊಂಡಿದ್ದ ಕೆಲವು ವಿಷಯಗಳನ್ನು ಹೊರಗೆಡವಿದ್ದಾರೆ. ಆದುದರಿಂದಲೇ ಈಗ ಮರಳಿ ಉತ್ತರಿಸಬೇಕಾಯಿತು.

ಶ್ರೀಯುತರು ನಮ್ಮ ಲೇಖನವನ್ನು ಟೀಕಿಸುತ್ತಾ ಶ್ರೀ ಬಸವಾದಿಗಳ ಕಾಲದಲ್ಲಿ "ವೀರಶೈವ" ಎಂಬ ಶಬ್ದವಿದ್ದಿತೆಂದೂ ಆ ಶಬ್ದವನ್ನುಳ್ಳ ಆಗಮವಾಕ್ಯವನ್ನು ಅನೇಕ ಶರಣರು ತಮ್ಮ ವಚನಗಳಲ್ಲಿ ಉದಾಹರಿಸಿದ್ದಾರೆಂತಲೂ, ಬರೆದು ಷಟ್ಸ್ಥಲಸ್ಥಾಪನಾಚಾರ್ಯರಾದ ಶ್ರೀಚನ್ನಬಸವಣ್ಣನವರು, ಶ್ರೀ ಶಿದ್ಧರಾಮೇಶ್ವರರು, ಶ್ರೀ ಅಕ್ಕಮಹಾದೇವಿಯರು, ಶ್ರೀ ಮಾಚಿದೇವರು, ಅರಿವಿನ ಮಾರಿತಂದೆಗಳು ಮುಂತಾದ ಕೆಲ ಶರಣರ "ವೀರಶೈವ" ಎಂಬ ಶಬ್ದವನ್ನೊಳಗೊಂಡ ವಚನ ಭಾಗಗಳನ್ನುದಾಹರಿಸಿದ್ದಾರೆ ಯಲ್ಲದೆ ವೇದಾಗಮ ಪುರಾಣಾದಿಗಳಲ್ಲಿ ಸರ್ವರೂ ಅಚಲವಾದ ವಿಶ್ವಾಸವನ್ನಿಡಬೇಕೆಂದು ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ.

ಆದರೆ ಶ್ರೀ ದೇಶಿಕರು ನಮ್ಮ ಲೇಖನವನ್ನು ಟೀಕಿಸಲು ಹೊರಟು ದಾರಿತಪ್ಪಿದ್ದಾರೆ. ಹೇಗೆಂದರೆ ಅವರು ಟೀಕಿಸಲು ಹೊರಟಿರುವ ನಮ್ಮ ಲೇಖನದ ಮುಖ್ಯಾಂಶವು ಹೀಗಿದೆ:—

"ಶ್ರೀ ಬಸವಣ್ಣನವರಿಗಿಂತಲೂ ಮೊದಲು ಇದ್ದ ಶೈವಧರ್ಮ"ವನ್ನು "ವೀರಶೈವ"ವೆಂದು ವಾದಿಸುವ ಮಹಾಶಯರುಗಳು, "ವೀರಶೈವ" ಧರ್ಮ ತತ್ವದ ತಿರುಳೆನಿಸಿರುವ ಕರಣಹಸಿಗೆ, ಮಿಶ್ರಾರ್ಪಣ, ಮಿಶ್ರ ಷಟ್ಸ್ಥಲವಚನ, ಏಕಾದಶ ಪ್ರಸಾದ ವಿಚಾರವಾಕ್ಯ, ಮುಂತಾದ ಧರ್ಮ ಗ್ರಂಥಗಳಲ್ಲಿರುವುದಕ್ಕಿಂತ ಹೆಚ್ಚಾಗಿಯಾಗಲಿ ಅಥವ ಸ್ವಲ್ಪ ಹೆಚ್ಚು



ಕಡಿಮೆ ಅವುಗಳಲ್ಲಿರುವಷ್ಟೇ ಆಗಲಿ ವೀರಶೈವ-ಶಿವಾನುಭವ-ತತ್ವವನ್ನು ತಿಳಿಸುವ ಬೇರೆ ಹೆಸರಿನ ತಾತ್ವಿಕ ಗ್ರಂಥಗಳು ಶ್ರೀ ಬಸವಣ್ಣನವರ ಕಾಲಕ್ಕಿಂತ ಮೊದಲು ಯಾರಿಂದಲಾದರೋ ಬರೆಯಲ್ಪಟ್ಟಿವೆಯೆ? ಬರೆದಿದ್ದರೆ ಗ್ರಂಥದ ಹೆಸರೇನು? ಬರೆದವರ ಹೆಸರು ಕಾಲಗಳಾವುವು? ಕೊಲದೆ ಹೊಲಸು ತಿನ್ನದೆ ಸದಾಚಾರ ಸುವಿಚಾರಗಳಿಂದ ಕೂಡಿದ ಸರ್ವಕಾಯಕಗಳನ್ನಾಚರಿಸುವವರಲ್ಲಿಯೂ ಮೇಲು ಕೀಳುಗಳನ್ನೆಣಿಸದೆ, ಶಿವಸ್ವರೂಪಿಗಳಂತೆ ಕಂಡು, ಬ್ರಾಹ್ಮಣಾದಿ ಚಾತುರ್ವರ್ಣ್ಯವ್ಯವಸ್ಥೆಯನ್ನು ನಿರಾಕರಿಸಿ, ಯಜ್ಞಯಾಗಾದಿ ಕಾಮ್ಯಕರ್ಮಗಳನ್ನು ತ್ಯಜಿಸಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲಾಚರಣಾದಿ ಕ್ರಮಬದ್ಧವೂ, ಸುವ್ಯವಸ್ಥಿತವೂ, ಆದ ಧಾರ್ಮಿಕ ವಿಧಿನಿಯಮಗಳನ್ನೊಳಗೊಂಡ "ಸಕಲ ಜೀವಾತ್ಮರಿಗೆ ಲೇಸ ಬಯಸುವ" ವ್ಯವಸ್ಥಿತವಾದ "ವೀರಶೈವ ಅಥವಾ ಲಿಂಗವಂತ" ಧರ್ಮವಾಗಲಿ ಧರ್ಮತತ್ವವಾಗಲಿ ಅವುಗಳನ್ನು ಕ್ರಮಬದ್ಧವಾಗಿ ಆಚರಣೆಯಲ್ಲಿಟ್ಟುಕೊಂಡಿದ್ದ ಜನಾಂಗ-ಸಮಾಜ-ವಾಗಲಿ ಶ್ರೀ ಬಸವಣ್ಣನವರಿಗಿಂತ ಮೊದಲು ಅಸ್ತಿತ್ವದಲ್ಲಿ--ಆಚರಣೆಯಲ್ಲಿ--ದ್ದುವೆ? ಎಂಬೀ ಪ್ರಶ್ನೆಗಳಿಗೆ ವಿದ್ವಾಂಸರಾದಿಯಾಗಿ ಸರ್ವ ಜನರೊಪ್ಪುವಂತೆ ಸಮರ್ಪಕವಾದ ಉತ್ತರಗಳನ್ನು ಕೊಡಬೇಕು." ಎಂಬೀ ವಿಷಯವನ್ನು ಟೀಕಿಸಿ ಉತ್ತರಗಳನ್ನು ಕೊಡಲು ಹೊರಟ ಶ್ರೀ ದೇಶಿಕರು ದಾರಿತಪ್ಪಿ, ಶ್ರೀ. ಬಸವಣ್ಣನವರೂ ಅವರ ಸಹೋದ್ಯೋಗಿಗಳಾದ ಅನೇಕ ಶರಣರೂ "ವೀರಶೈವ" ಶಬ್ದವನ್ನುಪಯೋಗಿಸಿದ್ದಾರೆಂದು ತಿಳಿಸಿ–ಮರೆತೋ ಏನೋ-ನಮ್ಮ ಅಭಿಪ್ರಾಯವನ್ನೇ ಅವರೂ ಪುಷ್ಟೀಕರಿಸಿ ಬಿಟ್ಟಿದ್ದಾರೆ!

ಶ್ರೀ ಬಸವಣ್ಣನವರ ಮತ್ತು ಅವರಿಂದೀಚಿನ ಕಾಲದಲ್ಲಿಯೇ ವೀರಶೈವ ಅಥವಾ ಲಿಂಗವಂತ ಮತಧರ್ಮವೂ ಆ ಹೆಸರೂ ಒಂದು ವ್ಯವಸ್ಥಿತ ಸ್ವರೂಪಕ್ಕೆ ಬಂದು ಅಭಿವೃದ್ಧಿಗೊಂಡಿತೆಂಬ ಅನೇಕ ಇತಿಹಾಸ ಸಂಶೋಧಕರ ಮತ್ತು ನಮ್ಮ ಅಭಿಪ್ರಾಯವನ್ನು ಶ್ರೀ ದೇಶಿಕರು ಖಂಡಿಸಲು ಹೊರಟು, ಬಸವಣ್ಣನವರಿಗಿಂತ ಹಿಂದಿನ ಕಾಲದ ವೀರಶೈವ ಸ್ವತಂತ್ರ ಗ್ರಂಥವನ್ನಾಗಲೀ ಇನ್ನಿತರ ಆಧಾರವನ್ನಾಗಲೀ ತೋರಿಸಲು ಸಾಧ್ಯವಾಗದೆ ಬಸವಾದಿ ಶರಣರ ಹೆಸರುಗಳನ್ನೇ ಬರೆದು ಪರ್ಯಾಯವಾಗಿ ನಮ್ಮ ಅಭಿಪ್ರಾಯವನ್ನೇ ಪುಷ್ಟೀಕರಿಸಿರುವುದೇ ಸಾಕ್ಷಿಯಲ್ಲವೇ? ವೀರಶೈವವು ಬಸವಣ್ಣನವರ ಕಾಲದಲ್ಲಿಯೇ ಕ್ರಮಬದ್ಧವಾದ ವ್ಯವಸ್ಥಿತ ಸ್ವರೂಪವನ್ನು ಹೊಂದಿತೆಂಬುದಕ್ಕೆ?

ಇನ್ನು "ವೀರಶೈವ" ಎಂಬ ಶಬ್ದವನ್ನೊಳಗೊಂಡಿರುವ ಆಗಮ ವಾಕ್ಯಗಳ ವಿಚಾರ:— ಕರ್ನಾಟಕದಲ್ಲಿ ಪ್ರಚಲಿತವಿರುವ 'ಪಾರಮೇಶ್ವರಾಗಮ, ಸುಪ್ರಭೇದಾಗಮ, ಸೂಕ್ಷ್ಮಾಗಮ, ವಾತುಲಾಗಮ, ಸ್ವಯಂಭುವಾಗಮ, ಮೊದಲಾದವುಗಳಲ್ಲಿ "ವೀರಶೈವ" ವು ಪ್ರಸ್ತಾಪಿಸಲ್ಪಟ್ಟದ್ದರೂ ಇನ್ನಿತರ ಕಾಶ್ಮೀರವೇ ಮೊದಲಾದ ಕಡೆಗಳಲ್ಲಿ ಪ್ರಚಲಿತವಿರುವ ಪುರಾತನಾಗಮಗಳ ಶೈಲಿಗೂ ಈ "ವೀರಶೈವ"ವು ಪ್ರಸ್ತಾಪಿತವಾಗಿರುವ ಆಗಮ ಭಾಗಗಳ ಶೈಲಿಗೂ ಬೇಕಾದಷ್ಟು ವ್ಯತ್ಯಾಸವಿದೆ ಎಂಬುದನ್ನು ಪುರಾತನಾಗಮಗಳಿರುವ ತ್ರಿಪದಾರ್ಥ, ಚತುಷ್ಪಾದ ವರ್ಣನಗಳೆಂಬ ಲಕ್ಷಣಗಳು ಈ ಆಗಮಗಳಲ್ಲಿಲ್ಲವೆಂಬುದನ್ನೂ ಶ್ರೀ ಮೈಲೇಶ್ವರದ ದೇಶಿಕರು ಗಮನಿಸುವರೆಂದು ನಂಬುತ್ತೇನೆ.

ಅಲ್ಲದೆ ಈ "ವೀರಶೈವ"ವು ಪ್ರಸ್ತಾಪಿತವಾಗಿರುವ ಆಗಮ ಭಾಗಗಳ ಶೈಲಿ ಭಾಷಾವೈಖರಿ, ವಿಷಯ, ವ್ಯಕ್ತಿ ಮೊದಲಾದವುಗಳನ್ನು ಚೆನ್ನಾಗಿ ಪರಿಶೀಲಿಸಿದ ಅನೇಕ ವಿದ್ವಾಂಸರುಗಳು "ವೀರಶೈವವನ್ನು ಜಗದಾದಿಗೆ ಮುಟ್ಟಿಸುವುದಕ್ಕೋಸ್ಕರ ಹನ್ನೆರಡನೆಯ ಶತಮಾನದಿಂದೀಚಿನ ಕೆಲ ವಿದ್ವಾಂಸರುಗಳು ಆಗಮಗಳ ಜೊತೆಗೆ ಇದನ್ನೂ ಸೇರಿಸಿ ಬಿಟ್ಟಿದ್ದಾರೆ" ಎಂಬುದಾಗಿ ಅಭಿಪ್ರಾಯ ಪಟ್ಟಿರುವುದನ್ನೂ ಶ್ರೀ ದೇಶಿಕರು ಗಮನಿಸಬೇಕು.

ಅಲ್ಲದೆ ಮಾನ್ಯರಾದ ರಾವ್‌ಸಾಹೇಬ ಫ ಗು. ಹಳಕಟ್ಟಿಯವರೂ ಸಹ ಈ "ವೀರಶೈವ" ಶಬ್ದವನ್ನು ಕುರಿತು ಕಳೆದ ವರ್ಷದ ಶಿವಾನುಭವ ಸಂಪುಟದ ನಾಲ್ಕುನೂರ ಅರವತ್ತನೆಯ ಪುಟದಲ್ಲಿ "ವೀರಶೈವ" ಈ ಶಬ್ದವು ಹದಿನಾಲ್ಕನೇ ಶತಮಾನದ ತರುವಾಯ ರಚಿತವಾಗಿರುವ ಗ್ರಂಥಗಳಲ್ಲಿ ಹೇರಳವಾಗಿ ದೊರೆಯುತ್ತವೆಂತಲೂ, ಒಂದುವೇಳೆ ಆ ಗ್ರಂಥವು ಪುರಾತನ ಕಾಲದ್ದೇ ಎಂದು ಧೃಡಪಟ್ಟಲ್ಲಿ "ವೀರಶೈವ" ಈ ಶಬ್ದವಿದ್ದ ಶ್ಲೋಕವು ಅಥವಾ ಉಕ್ತಿಯು ಹಿಂದಿನಿಂದ ಆ ಗ್ರಂಥದಲ್ಲಿ ಸೇರಿಸಲ್ಪಟ್ಟದ್ದೆಂದು ತಿಳಿಯಬೇಕಾಗುತ್ತದೆ. ಉದಾಹರಣೆಗೆ ವೀರಶೈವ ಶಬ್ದವು ವೀರಶೈವ ಆಗಮಗಳೆಂದು ತಿಳಿಯಲ್ಪಡುವ ಕೆಲ ಗ್ರಂಥಗಳಲ್ಲಿ ಮೇಲಿಂದ ಮೇಲೆ ಬರುತ್ತದೆ. ಒಂದುವೇಳೆ ಅವು ಪುರಾತನ ಗ್ರಂಥಗಳಿದ್ದರೆ ಅವುಗಳಲ್ಲಿ ಈ ಶಬ್ದವು ಬರತಕ್ಕದ್ದಲ್ಲವಾದ್ದರಿಂದ ಅವು ಬಸವನ ಕಾಲದ ತರುವಾಯ ರಚಿಸಲ್ಪಟ್ಟವೆಂತಲೂ, ನಿಜವಾದ ಆಗಮಗಳು ಬೇರೆ ಇರುತ



ವೆಂತಲೂ ತಿಳಿಯಬೇಕಾಗುತ್ತದೆ." ಮುಂತಾಗಿ ಅಭಿಪ್ರಾಯ ಪಟ್ಟಿದ್ದಾರೆ. ಶ್ರೀ. ದೇಶಿಕರು ಇದನ್ನೂ ಗಮನಿಸಬೇಕು.

ಇನ್ನು ವೇದಾಗಮಗಳಲ್ಲಿ ವೀರಶೈವರು ಅಚಲವಾದ ವಿಶ್ವಾಸವನ್ನಿಡಬೇಕೆಂಬ ವಿಚಾರ:—

ನಮ್ಮ ಆದ್ಯರು ಸಮಾಜರಚನಾ ಕಾರ್ಯದಲ್ಲಿ ತಮ್ಮ ಸ್ವತಂತ್ರ ವಿಚಾರಗಳ ಜೊತೆಗೆ ಎಲ್ಲ ಧರ್ಮ-ಸಮಾಜ-ಗಳಲ್ಲಿಯ ಒಳ್ಳೆಯ ವಿಚಾರಗಳನ್ನೂ ಆರಿಸಿಕೊಂಡು ಪೋಣಿಸಿದ್ದಾರೆನ್ನಬಹುದು. ಅಥವಾ ನಮ್ಮ ಆದ್ಯರ ಸ್ವತಂತ್ರ ವಿಚಾರಗಳು ಎಲ್ಲ ಧರ್ಮಸಮಾಜಗಳಿಗೂ ಸಮನ್ವಯವಾಗುವವೆಂತಲೂ ಹೇಳಬಹುದು. ಈ ದೃಷ್ಟಿಯಿಂದ ಪರಿಶೀಲಿಸಿದರೆ ಕೇವಲ ವೇದಾಗಮಗಳಷ್ಟೇ ಅಲ್ಲ ಕ್ರೈಸ್ತರ ಬೈಬಲ್, ಮಹಮದೀಯರ ಖುರಾನ್, ಮುಂತಾದ ಎಲ್ಲ ಧರ್ಮಗ್ರಂಥಗಳ ಉತ್ತಮಾಂಶಗಳೂ ನಮ್ಮ ಮತಧರ್ಮ ಗ್ರಂಥಗಳಲ್ಲಿವೆ. ಆದರೆ? ಹಾಗೆ ಇದ್ದ ಮಾತ್ರಕ್ಕೆ ಅವೆಲ್ಲವೂ ನಮ್ಮ ಧರ್ಮಗ್ರಂಥಗಳಾಗುವವೇನು? ಆದರೂ ಅವುಗಳಲ್ಲಿರುವ ನಮ್ಮ ಧರ್ಮಾಧರ್ಮ ಗ್ರಂಥಗಳಿಗೆ ಸಮನ್ವಯವಾಗುವ ಉತ್ತಮಾಂಶಗಳಿಗಾಗಿ ಅವು ವೇದ, ಬೈಬಲ್, ಖುರಾನ್ ಮುಂತಾದ ಯಾವುವೇ ಆಗಿರಲಿ ಅವುಗಳಿಗೆ ನಮ್ಮ ಗೌರವ, ಪೂಜ್ಯತೆ, ಕೃತಜ್ಞತೆಗಳನ್ನು ಸಂತೋಷದಿಂದ ಸಲ್ಲಿಸೋಣ. ಹಾಗಲ್ಲದೆ ಅವೆಲ್ಲವೂ ನಮ್ಮ ಧರ್ಮಗ್ರಂಥಗಳೇ ಎಂದು ಹೇಳಿಕೊಂಡು ಅವೆಲ್ಲವುಗಳಲ್ಲಿಯೂ ನಾವು ಅಚಲವಾದ ವಿಶ್ವಾಸವನ್ನಿಡಬೇಕೆಂಬುದು ಮಾತ್ರ ಸ್ವಾಭಿಮಾನವುಳ್ಳ ಧರ್ಮನಿಷ್ಠೆಯುಳ್ಳ ಯಾವ ಜನಾಂಗಕ್ಕೂ ಶೋಭಿಸುವ ಮಾತಲ್ಲ. ಆದುದರಿಂದಲೇ ವೇದಾಗಮಾದಿಗಳಲ್ಲಿ ನಮ್ಮ ಮತತತ್ವಗಳಿಗೆ ಹೋಲುವ ಅನೇಕ ವಿಚಾರಗಳು ಉಕ್ತವಾಗಿದ್ದರೂ ಸಹ ಅವುಗಳು ವೀರಶೈವಮತ ಗ್ರಂಥಗಳಲ್ಲವೆಂತಲೂ "ವಚನಶಾಸ್ತ್ರ"ವೇ ವೀರಶೈವರಿಗೆ ಸ್ವತಂತ್ರ ಧರ್ಮಗ್ರಂಥವೆಂತಲೂ ನಮ್ಮ ಆದ್ಯರು ನಿರ್ಣಯಿಸಿರುವುದು.

ಮಾನ್ಯರಾದ ಶ್ರೀ. ರಾವ್‌ಸಾಹೇಬ್ ಹಳಕಟ್ಟಿಯವರೂ ತಾವು ಸಂಪಾದಿಸಿ ಪ್ರಕಟಿಸಿರುವ "ವಚನಶಾಸ್ತ್ರಸಾರ" ಗ್ರಂಥದ ಎರಡನೇ ಭಾಗದ ೫೭ ನೇ ಪುಟದಲ್ಲಿ ವೇದಾಗಮ ಪುರಾಣಾದಿಗಳನ್ನು ವಿಸ್ತಾರವಾಗಿ ಪ್ರಸ್ತಾಪಿಸಿ ವೀರಶೈವರಿಗೆ ವಚನಶಾಸ್ತ್ರವೇ ಸ್ವತಂತ್ರಧರ್ಮಗ್ರಂಥವೆಂಬ ಪರಂಪರಾಗತ ವಿಚಾರವನ್ನೇ ಸಮರ್ಥಿಸಿ ತಮ್ಮ ಅಮೌಲ್ಯವಾದ

ನಿರ್ಣಯವನ್ನು ಪ್ರಕಟಿಸಿದ್ದಾರೆ. ಶ್ರೀ. ಮೈಲೇಶ್ವದ ದೇಶಿಕರು ಇದನ್ನೂ ಗಮನಿಸಬೇಕು.

ಮುಖ್ಯವಾಗಿ ಸಹಸ್ರಸಹಸ್ರ ವರ್ಷಗಳ ಹಿಂದಿನ ಕಾಲದಲ್ಲಿ ಹುಟ್ಟಿದ ಮತವೆಂದು ಹೇಳಿಕೊಂಡರೆ ಹೆಚ್ಚು ಗೌರವವಾಗಲೀ ಶತಶತಮಾನಗಳ ಹಿಂದಿನ ಮತವೆಂದು ಹೇಳಿಕೊಂಡರೆ ಕಡಿಮೆ ಗೌರವವಾಗಲೀ ದೊರೆಯುತ್ತದೆಂದು ತಿಳಿಯುವ ಕಾಲವಿದಲ್ಲ

ಹಾಗೆ ತಿಳಿಯುವುದಾದರೆ ಮನುಷ್ಯ ಕುಲವು ಪ್ರಾಚೀನ ಕಾಲದಲ್ಲಿದ್ದ ಸ್ಥಿತಿ ಎಂದು ತಿಳಿಯಲ್ಪಟ್ಟಿರುವ ಅಜ್ಞಾನಯುಕ್ತವಾದ ಅನಾಗರಿಕತೆಯನ್ನೇ ಶ್ರೇಷ್ಠವೆಂದೂ ಚನ್ನಾಗಿ ಸುಧಾರಿಸಿಕೊಂಡಿರುವ ಈಗಿನ ಮನುಷ್ಯಕುಲದ "ನಾಗರಿಕ" ಸ್ಥಿತಿಯನ್ನು ಕನಿಷ್ಠವೆಂದೂ ತಿಳಿಯಬೇಕಾದೀತು.

ಆದುದರಿಂದ ಇತ್ತೀಚಿನ ಮತವೆಂದರೆ ಅಗೌರವವಾದೀತೆಂಬ ತಪ್ಪು ತಿಳಿವಳಿಕೆಯನ್ನು ತ್ಯಜಿಸಿ ನಿಜಸ್ಥಿತಿಯನ್ನು ಸರ್ವರೂ ಒಪ್ಪಿಕೊಳ್ಳಬೇಕಾಗಿದೆ. ವೃಥಾ ಇಲ್ಲದ ಊಹೆಗಳನ್ನೂ ಸಮಾಧಾನಗಳನ್ನೂ ಕಲ್ಪಿಸಿಕೊಂಡು ನಮ್ಮದು ಜಗದಾದಿಯ ಪ್ರಾಚೀನ ಮತವೆಂದು ಹೇಳಿಕೊಳ್ಳುವುದರಿಂದ ಯಾವ ಲಾಭವೂ ಬರುವುದಿಲ್ಲ. ಮತ್ತು ನಮ್ಮ ಆತ್ಮವನ್ನು ನಾವೇ ವಂಚಿಸಿಕೊಂಡಂತಾಗುತ್ತದೆಯಲ್ಲದೆ ಮುಂದಿನ ತಲೆಮಾರಿನವರಾದರೂ ನಿಜಸ್ಥಿತಿಯನ್ನರಿತು ಇಂದಿನವರ ಮೌಢ್ಯಕ್ಕಾಗಿ ಹೀಯಾಳಿಸದಿರರು.

ಆದುದರಿಂದ ಶ್ರೀ ದೇಶಿಕರು ಕೊಂಚ ತಿಳಿಮನಸ್ಸಿನಿಂದ ಪರ್ಯಾಲೋಚಿಸಿ ನಿಜಸ್ಥಿತಿಯನ್ನರಿತು ನಿರ್ಧರಿಸಿಕೊಳ್ಳಬೇಕು. ಮತ್ತು ಸಾಧ್ಯವಿದ್ದರೆ ಪಂಚಾಚಾರ, ಷಟ್ಸ್ಥಲ, ಅಷ್ಟಾವರಣ, ಏಕೋತ್ತರ ಶತಸ್ಥಲ ಮುಂತಾದ ವ್ಯವಸ್ಥಿತ ವೀರಶೈವಾಚರಣೆಗಳನ್ನು ಕುರಿತು ನಮ್ಮ ನಾಡಿನಲ್ಲಿ ಶ್ರೀಬಸವಣ್ಣನವರಿಗಿಂತ ಹಿಂದಿನ ಕಾಲದಲ್ಲಿ ಯಾರಾದರೂ ಸ್ವತಂತ್ರ ಗ್ರಂಥವನ್ನು ಬರೆದಿದ್ದರೆ ಆ ಗ್ರಂಥದ ಹೆಸರನ್ನೂ, ಗ್ರಂಥಕರ್ತರ ಹೆಸರು ಕಾಲದೇಶಗಳನ್ನೂ ದಯವಿಟ್ಟು ತಿಳಿಸುವವರಾಗಬೇಕು.

---

# ವೀರಶೈವರ ಪೂರ್ವದ ಹೆಸರಾವುದು?

(ಲೇಖಕರು — ಶ್ರೀ. ಮಲ್ಲಿಕಾರ್ಜುನ ದೇಶಿಕರು ಮೈಲೇಶ್ವರ ಮು. ಹುಬ್ಬಳ್ಳಿ.)

ರಾ। ಸಾ। ಹಳಕಟ್ಟಿಯವರು ಶಿವಾನುಭಾವದ ಸಂ. ೧೩, ಸಂ. ೭-೮-೯-೧೦ ಈ ಸಂಚಿಕೆಗಳಲ್ಲಿ ಮೇಲ್ಕಂಡ ವಿಷಯವನ್ನು ಕುರಿತು ಲೇಖಗಳನ್ನು ಬರೆದುದು ವಾಚಕರಿಗೆ ವೇದ್ಯವಿದೆ. ಶಾಸನಗಳಲ್ಲಿ ಮತ್ತು ಬಸವಣ್ಣನವರ ವಚನದಲ್ಲಿ ಶಿವಸಮಯ ಶಿವಾಚಾರ ಲಿಂಗವಂತ ಸಮಯಾಚಾರ ಈ ಸಾಮಾನ್ಯ ಶಬ್ದಗಳೇ ಬಂದಿದ್ದು ವೀರಶೈವ ಶಬ್ದವು ಬಾರದ್ದರಿಂದ ಶಾಸನಗಳ ಕಾಲದಲ್ಲಿ ಮತ್ತು ಬಸವಣ್ಣನವರ ಕಾಲದಲ್ಲಿ ಜನತೆಯ ರೂಢಿಯೊಳಗೆ ಆ ವೀರಶೈವ ಶಬ್ದವು ಇದ್ದಿಲ್ಲವೆಂದು ಭಾವಿಸಿ ಅದು ೧೪ ಶತಮಾನದಿಂದೀಚೆಗೆ ಹೆಚ್ಚಾಗಿ ಜನಬಳಕೆಯಲ್ಲಿ ಬಂದುದೆಂದು ಬರೆದಿದ್ದಾರೆ.

ಆದರೆ ನಾನು ಬಸವಣ್ಣನವರ ಒಂದು ವಚನದಿಂದಲೂ ಚೆನ್ನಬಸವಣ್ಣನವರ ೧೧ ವಚನಗಳಿಂದಲೂ ಸಿದ್ಧರಾಮದೇವರ ೬ ವಚನಗಳಿಂದಲೂ ಪ್ರಭುದೇವರ ೩ ವಚನಗಳಿಂದಲೂ ಮಡಿವಾಳ ಮಾಚಿದೇವರ ೩ ವಚನಗಳಿಂದಲೂ, ಪ್ರಸಾದಿ ಭೋಗಣ್ಣಗಳ ೩ ವಚನಗಳಿಂದಲೂ, ಅಕ್ಕಮಹಾದೇವಿಗಳ ೨ ವಚನಗಳಿಂದಲೂ ಅರವಿನಮಾರಿ ತಂದೆಗಳ ೨ ವಚನಗಳಿಂದಲೂ, ಘಟ್ಟಿವಾಳಯ್ಯನವರ ಆದಿ ಶೆಟ್ಟಿಗಳ ಬಾಲಸಂಗಯ್ಯಗಳ ಮೋಳಿಗೆಮಾರಯ್ಯಗಳ ಅಂಬಿಗರ ಚೌಡಯ್ಯಗಳ ಬಹುರೂಪಿ ಚೌಡಯ್ಯಗಳ ಇವರೆಲ್ಲರ ಒಂದೊಂದು ವಚನಗಳಿಂದಲೂ ಒಟ್ಟಿನ ಮೂವತ್ತೇಳು ವಚನಗಳಿಂದ ವೀರಶೈವ ಶಬ್ದವು ಈಗಿನಂತೆ ಬಸವೇಶ್ವರನ ಕಾಲದಲ್ಲಿ ಮತ್ತು ಅವನ ಹಿಂದೆಯು ಪ್ರಸಿದ್ಧವಾಗಿ ಜನ ಜನಿತ ಜನಬಳಕೆಯಲ್ಲಿ ಆಳವಾಗಿ ನೆಲಿಸುತ್ತೆಂಬುವದಕ್ಕೆ ಸಂ। ೧೪ ಸಂ। ೪ ಶಿವಾನುಭಾವದಲ್ಲಿ ಪ್ರಕಟಿಸಿದೆಯಷ್ಟೆ?

ನಾವು ಕಿ. ಶ. ೧೯೪೦ ರಿಂದ ಹಿಂದಕ್ಕೆ ಗಮನಿಸಿದರೆ ೮—೯ನೂರ ವರುಷದ ಬಸವೇಶ್ವರನ ಕಾಲದ ವರೆಗೂ ವೀರಶೈವ ಶಬ್ದವು ಅಚ್ಯುತ

ವಾಗಿದ್ದುದೆಂಬುವದಕ್ಕೆ ಬಸವೇಶ್ವರನ ಕಾಲದಿಂದೀಚೆಗೆ ಹುಟ್ಟಿದ ಶಿಂಗಿರಾಜ ಪುರಾಣ ಪಾಲ್ಕುರಿಕೆಯ ಸೋಮನಾರಾಧ್ಯರ ಬಸವ ಪುರಾಣಾದಿಗಳಲ್ಲಿ ಪದ್ಮರಾಜ ಪುರಾಣ ಸಿದ್ಧಾಂತ ಶಿಖಾಮಣಿ ಮುಂತಾದ ಅನೇಕ ಗ್ರಂಥಗಳಲ್ಲಿ ವೀರಶೈವ ಶಬ್ದವು ಪದೇಪದೇ ಬರುವುದೇ ನಿದರ್ಶನವು. ಇನ್ನು ಬಸವಾದಿ ಪ್ರಮಥರ ಹಿಂದೆ ಎಷ್ಟು ಕಾಲದ ವರೆಗೂ ವೀರಶೈವ ಶಬ್ದವು ಜೀವಿಸಿತ್ತೆಂಬುವದಕ್ಕೆ—

"ಯೋ ಹಸ್ತಪೀಠೇ ನಿಜಲಿಂಗಮಿಷ್ಟಂ ವಿನ್ಯಸ್ಯತಲ್ಲೀನ
ಮನಃ ಪ್ರಚಾರಃ
ಬಾಹ್ಯಕ್ರಿಯಾ ಸಂಕುಲ ನಿಸ್ಪೃಹಾತ್ಮಾ ಸಂಪೂಜಯತ್ಯಂಗ
ಸವೀರಶೈವಃ ॥"

ಎಂಬೀ ಪ್ರಮಾಣವನ್ನು ಚನ್ನಬಸವಣ್ಣನವರು ತಮ್ಮ ವಚನದಲ್ಲಿ

"ವೀರಾಣಾಂ ವೀರಶೈವಾನಾಂ ಭವತ್ತ್ಯೇವ ವರಾನನೆ
ಪಾದೋದಕಂ ವಿನಾ ಯಸ್ತು ಭುಂಕ್ತೆ ಸತತಂ ಮಾನವಾಃ ॥"

ಬಾಲಸಂಗಯ್ಯನು ತನ್ನ ವಚನದಲ್ಲಿ, ಇವರಂತೆ ಆದಿಶೆಟ್ಟಿಯು

"ಯೋ ಹಸ್ತಪೀಠೇ ನಿಜಲಿಂಗಮಿಷ್ಟಂ ವಿನ್ಯಸ್ಯ ತಲ್ಲೀನ ಮನಃ
ಪ್ರಚಾರಃ
ಬಾಹ್ಯಕ್ರಿಯಾ ಸಂಕುಲನಿಸ್ಪೃಹಾತ್ಮಾ ಸಂಪೂಜಯತ್ಯಂಗ
ಸ ವೀರಶೈವಃ ॥"

"ಆವನೋರ್ವನು ಕರಪೀಠದಲ್ಲಿ ತನ್ನ ಶ್ರೀಗುರು ಕೊಟ್ಟ ಪ್ರಾಣಲಿಂಗವನು ಇರಿಸಿ ಆ ಶಿವಲಿಂಗದಲ್ಲಿ ಮನವನೆಯ್ದಿದ ಮನಃಸಂಚಾರವುಳ್ಳಾತನಾಗಿ ಹೊರಗಣ ಕ್ರಿಯಾ ಸಮೂಹದಲ್ಲಿ ಬಯಕೆಯಳಿದ ಬುದ್ಧಿಯನುಳ್ಳಾತನಾಗಿ ತನ್ನ ಪ್ರಾಣಲಿಂಗವಂ ಪೂಜಿಸುತ್ತಿಹನು. ಆ ಪ್ರಾಣಲಿಂಗಾಚಾರನಾದ ಲಿಂಗಾಂಗ ಸಂಬಂಧಿಯೇ ವೀರಶೈವನೆಂದರಿವುದಿದೆಂತೆಂದಡೆ "ಕಂಡವರ ಕಂಡು ತೀರ್ಥದಲ್ಲಿ ಮಂಡೆಯ ಬೋಳಿಸಿಕೊಂಬ ಭಂಡರ ಮೆಚ್ಚುವರೇ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು." ತಾಡವಾಲೆ ವಚನ ಸಂಖ್ಯೆ ೨೯೫

ಇತ್ಯಾದಿ ವೀರಾಗಮಾದಿಗಳಲ್ಲಿಯೂ ಶಂಕರ ಸಂಹಿತಾದಿಗಳಲ್ಲಿಯೂ ಇದ್ದ ಪ್ರಮಾಣಗಳನ್ನು ಎತ್ತಿ ಹಾಡಿ ಮುದ್ರಿಸುವಲ್ಲಿ ಇದನ್ನು ಬಲ್ಲ ತಜ್ಞರು



ಲಕ್ಷಿಸಿದಲ್ಲಿ ವೀರಶೈವ ಶಬ್ದವು ಬಸವೇಶ್ವರನ ಕಾಲದಲ್ಲಿಯೇ ಜನಿಸಿತೆನ್ನುವದಕ್ಕೆ ಜಿಹ್ವಾಬಂಧನವಾಗುವದು. ಆದರೆ ಬಸವಾದಿ ಪ್ರಮಥರಿಗಿಂತಲೂ ಪೂರ್ವ ಎಷ್ಟು ಹಿಂದೆ ವೀರಶೈವ ಶಬ್ದವು ಆಯುಷ್ಯವುಳ್ಳದ್ದೆನ್ನುವಲ್ಲಿ ಸಮುದ್ರ ತಳಗಾಣಲು ಹವಣಿಸಿದಂತೆ ಸರಿ.

ಆದಿ ಶೆಟ್ಟಿಗಳು ತನ್ನ ವಚನದಲ್ಲಿ ವಿಸ್ತಾರವಾಗಿ ಶುದ್ಧಶೈವ ಮಿಶ್ರಶೈವ ಸಂಕೀರ್ಣಶೈವ ಪೂರ್ವಶೈವ ವೀರಶೈವ ಇವುಗಳ ವಿವರವನ್ನು ನಾಲ್ಕು ವಚನಗಳಿಂದ ಚನ್ನಾಗಿ ಬರಿಯುತ್ತಾರೆ. ಇದಕ್ಕಧಿಷ್ಠಾನವಾದ ಶಿವಾಗಮಗಳಲ್ಲಿ ಈ ಕ್ರಮವು ಬರುವುದು. ನಾನು ಮುಂದೆ ವೀರಶೈವ ಧರ್ಮವು ಪುರಾತನ ಕಾಲದಿಂದಲು ಪೃಥಕ್ ಪ್ರವಾಹದಿಂದ ಇಳಿದು ಬಂದಿದೆಯೋ, ಅನೇಕ ಧರ್ಮಗಳು ಅನೇಕ ಪಂಗಡಗಳು ಕೂಡಿ ಒಂದು ಧರ್ಮವಾಗಿದೆಯೋ, ಎಂಬುದನ್ನು ವಿವರಿಸುವಾಗ್ಗೆ ಆ ಆದಿಶೆಟ್ಟಿಯ ವಚನಗಳನ್ನು ಇವನಂತೆ ಇತರ ವಚನಕಾರರು ವಿವರಿಸುವದನ್ನು ಸಮಾಜದ ಮುಂದಿಡಲು ಹವಣಿಸುವೆನು.

ಹೇಗೆ ವಟವೃಕ್ಷವು (ಆಲದಮರವು) ಎಷ್ಟು ಪ್ರಮಾಣ ಭೂಮಿಯ ಮೇಲೆ ನಿಂತಿರುವದೋ ಅಷ್ಟೇ ಪ್ರಮಾಣವು ಭೂಮಿಯ ಒಳಗೆ ನಾಟಿರುವದು. ಅಂತೇ ಬಸವಾದಿ ಪ್ರಮಥರ ಕಾಲದ ವೀರಶೈವರ ಜನರೂಢಿಯಲ್ಲಿ ನೆಲೆಗೊಳ್ಳಬೇಕಾದರೆ ಹಿಂದೆ ಎಂಟುನೂರು ವರುಷ ಆಯುಷ್ಯವು ಬೇಕು. ಇಂದಿನಂತೆ ಹೇಗೆ ಬಸವಾದಿಗಳ ಕಾಲಕ್ಕೂ ನಮ್ಮಗಳ ಕಾಲಕ್ಕೂ ನಡುವೆ ೮೦೦ ನೂರು ವರುಷ ಅಂತರವಿದ್ದು ಯಾವರೀತಿ ಅಸ್ಮದಾದಿಗಳಲ್ಲಿ ಆಳವಾಗಿ ಜನ ಬಳಕೆಯಲ್ಲಿ ಸ್ಥಿರಗೊಂಡಿದೆಯೋ ಅಷ್ಟೇ ಕಾಲವು ಬಸವಾದಿಗಳ ಹಿಂದೆ ಜನಬಳಕೆಗೆ ಬೇಕು.

ಶ್ರೀಯುತ ಹಳಕಟ್ಟಿಯವರು ಬಸವಣ್ಣನವರ ವಚನದಲ್ಲಿ ಮತ್ತೆ ಆಗಿನ ಶಿಲಾಶಾಸನಗಳಲ್ಲಿ ಇಷ್ಟು ಜನಬಳಕೆಯಲ್ಲಿದ್ದ ವೀರಶೈವ ಶಬ್ದವು ಏಕೆ ಬರಲಿಲ್ಲವೆಂದು ಕೇಳುತ್ತಾರೆ. ಆದರೆ ಶಾಸನಗಳ ಕಾಲಿನಗಿಂತಲೂ ಹಿರಿದಾದ ಬಸವಾದಿ ಪ್ರಮಥರ ಕಾಲದಲ್ಲಿ ಜನಬಳಕೆಯ 'ಲಿಂಗವಂತ' ಶಬ್ದವು ಬಸವಣ್ಣನವರ ವಚನಗಳಲ್ಲಿ ನಾಲ್ಕೆಡೆಗೆ ಮಾತ್ರ ಬಂದಿದ್ದು ಶ್ರೀಯುತ ಹಳಕಟ್ಟಿಯವರು ಉದಾಹರಿಸಿದ ಶಾಸನಗಳ ಒಂದೆಡೆಯಲ್ಲಿ ಯಾದರೂ ಬರದೇ ಏಕೆ ಉಳಿಯಿತು? ಎಂಬುವದನ್ನು ಶ್ರೀಯುತ ಹಳ

ಕಟ್ಟಿಯವರು ಸ್ಪಷ್ಟಪ್ಪಿಗೊಳಲಿ ಎಂದು ನಾನು ಕೇಳಿರುವದನ್ನು ಹಿಂತೆ ದೂಡಿ ನನ್ನನ್ನು ಕೇಳಿದುದು ಇರಲಿ. ಶ್ರೀಯುತ ಹಳಕಟ್ಟಿಯವರು ತಮ್ಮ ವಿಮರ್ಶನದಲ್ಲಿ ಅದನ್ನು ಏಕೆ ಉತ್ತರಿಸಲಿಲ್ಲವು? ಆ ಉತ್ತರವು ಹೊರಗೆ ಬಾರದ ವಿನಹ ಅವರ ಪ್ರಶ್ನೆಗೆ ಎಡೆಯಿಲ್ಲವು. ಅದನ್ನು ಅವರು ಮುಂದೆ ತೋರಿಸಬೇಕಾಗಿ ನನ್ನ ನಮ್ರ ಸೂಚನೆ.

ಯಾವ ಬಸವಣ್ಣನವರ ವಚನದಲ್ಲಿ ವೀರಶೈವ ಶಬ್ದವು ಬಂದಿಲ್ಲವೆಂದು ಶ್ರೀ. ಹಳಕಟ್ಟಿಯವರು ಹಿಂದಿನ ತಮ್ಮ ಲೇಖಗಳಲ್ಲಿ ಉಲ್ಲೇಖಿಸಿದ್ದರೋ ಅದೇ ಬಸವಣ್ಣನವರ ವಚನದಲ್ಲಿಯೇ ವೀರಶೈವ ಶಬ್ದವನ್ನು ಕಾಣಬೇಕೆಂಬ ಪ್ರಶ್ನವು ಉದ್ಭವಿಸಿ ಅವರ ಅಧ್ಯಾಸನ ನಿವಾರಣೆಯ ದಶೆಯಿಂದ,

“ನಿರಾಭಾರಿ ವೀರಶೈವ ನಿರ್ವಾಣ ಸದ್ಭಕ್ತ ಜಂಗಮ
ಶರಣರು ಕೂಡಲಸಂಗಮದೇವಾ ”

ಎಂಬೀ ಬಸವಣ್ಣನವರ ವಚನವನ್ನೇ ನಿಜಾಚರಣೆಯಿಂದೆತ್ತಿ ಕೊಟ್ಟಿದೆ. ಇದನ್ನು ಶ್ರೀ ಹಳಕಟ್ಟಿಯವರು ನನ್ನ ಲೇಖನವನ್ನು ಸಂಪೂರ್ಣ ಓದಿ ತಮ್ಮ ವಿಮರ್ಶವನ್ನು ಬರೆದಂತೆ ಕಾಣುವದಿಲ್ಲವು. ಆದ್ದರಿಂದ ಬಸವಣ್ಣನವರ ವಚನದಲ್ಲಿ ವೀರಶೈವ ಶಬ್ದವು ಏಕೆ ಬಂದಿಲ್ಲವೆಂಬ ಪ್ರಶ್ನೆಯು ಪುನಃ ಉದ್ಭವವಾಗದೆ ಮೃತವಾಯಿತು. ಉತ್ತರಪಕ್ಷ, ಇಂದಿಗೆ ೯೦೦ ವರುಷದಹಿಂದೆ ವೀರಶೈವ ಶಬ್ದವು ಜನರೂಢಿಯಲ್ಲಿ ಇತ್ತೋ ಇದ್ದಿಲ್ಲವೋ ಎಂಬೀ ಅಧ್ಯಾಸದ ನಿವಾರಣೆಗೆ ಉಕ್ತ ಈ ಬಸವಣ್ಣನವರ ಒಂದೇ ಒಂದು ವಚನವು ಸಾಕು.

ಶಾಸನಗಳಲ್ಲಿ ಹೇಗೆ ವೀರಶೈವ ಶಬ್ದವು ಬಂದಿಲ್ಲವೋ ಹಾಗೆಯೇ ಹರಿಹರನ ರಗಳೆಯಲ್ಲಿಯೂ ಈ ಶಬ್ದವು ಬಂದಿಲ್ಲವೆಂದು ಶ್ರೀಯುತ ಹಳಕಟ್ಟಿಯವರು ತಮ್ಮ ವಿಮರ್ಶೆಯಲ್ಲಿ ಎತ್ತಿರುವರು. ಆದರೆ ಶಾಸನಗಳಂತೆ ಹರಿಹರನ ರಗಳೆಯಲ್ಲಿ ವೀರಶೈವ ಶಬ್ದವು ಬಾರದ ಮಾತ್ರದಿಂದ ಹರಿಹರನ ಕಾಲದಲ್ಲಿ ವೀರಶೈವ ಶಬ್ದವು ಇದ್ದಿಲ್ಲವೆಂದು ಸಿದ್ಧಿಸುವದಿಲ್ಲವು. ಹರಿಹರನ ರಗಳೆ ಏಕೆ? ವೀರಶೈವ ಶಬ್ದವು ಬಾರದ ವಚನಗಳ ಗ್ರಂಥಗಳು ಹಲವಿವೆ. ಹಿರಿಯರಾದ ಸಕಳೇಶ ಮಾದರಸ, ಹಡಪದಪ್ಪಣ್ಣ, ಗಣದಾಸಿ ವೀರಣ್ಣ, ಎಲೇಶ್ವರದ ಕೇತಯ್ಯ, ಢಕ್ಕೆಯ



ಮಾರಯ್ಯ ಇತ್ಯಾದಿಗಳವರ ವಚನಗಳಲ್ಲಿ ವೀರಶೈವ ಶಬ್ದವು ಬಂದಿಲ್ಲವೆಂದು ನನಗೂ ಕಂಡು ಬಂದಿವೆ. ಈ ವೀರಶೈವ ಶಬ್ದದ ಪ್ರತಿನಿಧಿ ಶಬ್ದಗಳು ಇವುಗಳಲ್ಲಿ ಉಗಮಗೊಂಡಿವೆ. ಅವುಗಳಲ್ಲಿ ವೀರಶೈವ ಶಬ್ದವು ಬಾರದ್ದರಿಂದ ಅಂದು ಅದು ಇದ್ದಿಲ್ಲವೆಂದಲ್ಲ. ಶರಣರ ವಚನಗಳು ಒಟ್ಟಿಗೆ ಶೇಖರವಿಲ್ಲವು. ಈಗ ದೊರೆತವುಗಳಷ್ಟೇ ವಚನಗಳೆಂದು ಗಣಿತವಿಲ್ಲವು. ಇದು ಶ್ರೀಯುತ ಹಳಕಟ್ಟಿಯವರಿಗೆ ಅರಿಯದ ಮಾತೇನಿಲ್ಲವು. ಶರಣರ ವಚನಗಳಲ್ಲಿ ಒಬ್ಬರು ಹೇಳಿದ್ದನ್ನು ಇನ್ನೊಬ್ಬರು ಹೇಳಬೇಕೆಂಬುದು ಹರಿಕೆಯ ಭಾರವಲ್ಲವು. ಅವು ಸೂತ್ರದ ಮಣಿಗುಣದಂತಿಹವು.

ಅಷ್ಟಾವರಣ ಷಟ್‌ಸ್ಥಳ ಪಂಚಾಚಾರ ಧರ್ಮವು ವೀರಶೈವ ಲಿಂಗವಂತ ಲಿಂಗಾಂಗಿ ಶಿವಸಮಯ ಎಂಬೀ ನಾಲ್ಕೆಸಳಿನ ಸಂಕೇತಗಳಿಂದ ಪಸರಿಸಿದುದು. ಉಕ್ತ ಈ ನಾಲ್ಕೆಸಳಿನಿಂದ ಜನರೂಢಿಯಲ್ಲಿ ಅದು ನೆಲಗೊಂಡಿದೆ ಅದು ಕೆಲವೆಡೆ ವೀರಶೈವ ಸಾಂಪ್ರದಾಯಕರಿಂದ ಶೈವ ಶಬ್ದದಿಂದಲೂ ಕರೆಯಿಸಿಕೊಂಡು ಅದೇ ಸಂಕೇತದಿಂದ ಗ್ರಂಥಗಳೂ ಸಹ ಹುಟ್ಟಿದ್ದು ಶಿವತತ್ವ ರತ್ನಾಕರ, ಶಿವತತ್ವ ಚಿಂತಾಮಣಿ, ಶೈವ ರತ್ನಾಕರ, ಶಿವಸುಧಾರ್ಣವ ಇತ್ಯಾದಿಗಳು ನಿದರ್ಶನವಿವೆ. ಶಾಸನಗಳಲ್ಲಿಯೂ ಹರಿಹರನ ಗ್ರಂಥಗಳಲ್ಲಿಯೂ ವೀರಶೈವ ಶಬ್ದವು ಬಾರದ ಮಾತ್ರದಿಂದ, ಅವು ವೀರಶೈವ ಮತಬೋಧಕಗಳಲ್ಲವೆಂದೂ ಆ ವೀರಶೈವ ಶಬ್ದವು ಅಲ್ಲಿ ಇಲ್ಲೆಂದು ಮಾತ್ರದಿಂದ ಆಗಿನ ಕಾಲದಲ್ಲಿ ವೀರಶೈವ ಶಬ್ದವು ಇದ್ದಿಲ್ಲವೆಂದೂ ಸಿದ್ಧಿಸುವದಿಲ್ಲವು.

ನಾನು ಶಾಸನಗಳ ಕಾಲದಲ್ಲಿಯೂ, ಹರಿಹರನ ಕಾಲದಲ್ಲಿಯೂ ವೀರಶೈವ ಶಬ್ದವು ನಷ್ಟವಾಗಿ ಪುನಃ ೧೪ನೇ ಶತಮಾನದಲ್ಲಿ ಹುಟ್ಟಿತೆನ್ನಲು ಬರುವಂತಿದೆಯಲ್ಲವೆ? ಅದು ಕೂಡದು. ಶಾಸನಗಳ ಕಾಲದಲ್ಲಿಯೂ ಹರಿಹರನ ಕಾಲದಲ್ಲಿಯೂ ವೀರಶೈವ ಶಬ್ದವು ಜೀವಿಸಿತ್ತೆಂದು ಅರ್ಥಾಪತ್ತಿ ಪ್ರಮಾಣದ ಶ್ರುತಾರ್ಥಾಪತ್ತಿಯಿಂದ ಸಿದ್ಧಿಸುತ್ತಿದೆ. ಬಸವಣ್ಣ ಸಮಕಾಲೀನನಾದ ಶಿಂಗಿರಾಜನು ಹರಿಹರನ ಕಾಲೀನನಾದ ಪಾಲ್ಕುರಿಕೆಯ ಸೋಮನಾರಾಧ್ಯರು ಸದರಿಯವರ ಕಾಲದವನಾದ ಸಿದ್ಧಾಂತ ಶಿಖಾಮಣಿಕರ್ತೃವು ಶಿವಯೋಗಿ ಶಿವಾಚಾರ್ಯರು ತಮ್ಮ ಗ್ರಂಥಗಳಲ್ಲಿ ವೀರಶೈವ ಶಬ್ದಕ್ಕೆ ಸಂಜೀವನವನ್ನು ಕೊಟ್ಟಿದ್ದಾರೆ. ಹರಿಹರನ ರಗಳೆಯಲ್ಲಿಯಾಗಲಿ ಆಗಿನ ಕಾಲದ ಶಾಸನಗಳಲ್ಲಿಯಾಗಲಿ ವೀರಶೈವ ಶಬ್ದವು

ಬಾರದ ಮಾತ್ರದಿಂದ ಇಲ್ಲವೆನ್ನಲುಬಾರದು. "ಗೃಹೇ ಸದ್ದೇವದತ್ತೋ ಜೀವತಿ" ದೇವದತ್ತನು ಜೀವಿಸುತ್ತಾನೆ. "ಬದುಕಿರ್ದ ದೇವದತ್ತನಂ ಗೃಹದಲ್ಲಿಲ್ಲವೆಂದಡೆ ಸ್ಥಾನಾಂತರದಲ್ಲಿರ್ಪನೆಂದು ಕಲ್ಪಿಸುವಂತೆ" ಜೀವಂತನಿದ್ದ ದೇವದತ್ತನು ಮನೆಯಲ್ಲಿಲ್ಲವೆಂದಡೆ ಆ ಮನೆಯನ್ನು ಬಿಟ್ಟು ಬಾಹ್ಯದೇಶಾಂತರದಲ್ಲಿರುವನೆಂದು ಸಿದ್ಧಿಸುವಂತೆಯೂ, ಘಟವು ಮಾನಸದಲ್ಲಿ (ಅಡಿಗೆಯಮನೆಯಲ್ಲಿ) ಇಲ್ಲವೆಂಬ ಬೋಧಿತದಲ್ಲಿ ಕೂಪನದಿ ತೀರಾದಿಗಳ ಸ್ಥಾನಾಂತರವನ್ನು ತೋರಿಸುವೀ ಸಾಮಾನ್ಯಕಥಾವದಂತೆಯೂ, ಶಾಸನಗಳಲ್ಲಿಯೇ ಆಗಲಿ ಹರಿಹರನ ರಗಳೆಯಲ್ಲಾಗಲಿ ಇನ್ನಾವ ಗ್ರಂಥಗಳಲ್ಲಿಯಾಗಲಿ ವೀರಶೈವ ಶಬ್ದವು ಬಾರದ ಮಾತ್ರದಿಂದ ಅದು ಆಗ ಇದ್ದಿಲ್ಲವೆಂದು ಎಂದೂ ಸಿದ್ಧಿಸದು. ಆಗಿನ ಕಾಲದ ಇತರ ಗ್ರಂಥಗಳಲ್ಲಿ ಪ್ರಸಿದ್ಧ ರೀತಿಯಿಂದ ವೀರಶೈವ ಶಬ್ದವು ಜೀವಿಸಿದ್ದೇ ನಿದರ್ಶನವು

ನಾನು ವೀರಶೈವ ಮತವು ಅನಾದಿ ಎಂದು ಸಿದ್ಧಮಾಡಲು ಹೊರಟಿರುವದೇನೋ ನಿಜವು. ಪರಂತು ಈಗಿನ ಮನ್ವಂತರದಲ್ಲಿ ಈ ರೀತಿ ಹೇಳುವವರಿಗೆ ಸನಾತನಿಗಳೆಂದೂ ಜಾತಿವಾದಿಗಳೆಂದೂ, ವರ್ಣವಾದಿಗಳೆಂದೂ ಕಲ್ಪನೆಯ ದೋಷವನ್ನು ಹೆಗಲೇರಿಸುವರು. ನನ್ನ ಹೃದಯವು ಅಂತು ಅಲ್ಲವು. ನಾನು ಜನಜೀವನವನ್ನು ನುಂಗುವ ಮತವು ಪ್ರಾಚೀನವೆಂದಲ್ಲಿ ಬಹು ಗೌರವವುಳ್ಳದ್ದೂ ಬಹು ದೊಡ್ಡದೂ ಎಂಬ ಕಲ್ಪನೆಯುವನೇನಲ್ಲವು; ಜನ ಜೀವನವನ್ನು ಎತ್ತಿಹಿಡಿಯುವ ಮತವು ಇಂದಿನದಾದಡೂ ಮೋಹಕವು. ವರ್ಣಾಶ್ರಮಗಳನ್ನು ಜೋಡಿಸಿ ಮಾನವ ಜನಾಂಗದಲ್ಲಿ ಅನೈಕ್ಯತೆ ಹುಟ್ಟಿಸುವ ಧರ್ಮವು ಇಂದು ಹುಟ್ಟಿದಡೂ ಅದು ತಿರಸ್ಕೃತವು. ಆದರೆ ವೀರಶೈವ ಧರ್ಮವು ಅನಾದಿಯಿಂದಲೂ ನಡೆದುಬಂದುದೆಂತಲೂ ವರ್ಣಾಶ್ರಮಗಳ ಕಲ್ಪನೆಗೆ ಒಳಗಾಗದೆಂತಲೂ ನನ್ನ ಅನುಭವಕ್ಕೆ ಶಾಸ್ತ್ರದಿಂದಲೂ ವೃದ್ಧಾಚಾರದಿಂದಲೂ ಸಮಾಜ ಸಂಸ್ಕೃತಿಯಿಂದಲೂ ಮನದಟ್ಟಾದ ಕಾರಣದಿಂದ ನಾನು ವೀರಶೈವ ಧರ್ಮವು ಅನಾದಿ ಎಂದು ಹೇಳುವೆನಲ್ಲದೆ ಬೇರೆ ಭಾವನೆ ಇಲ್ಲವು.

ನನ್ನ ಮತದಂತೆ ವೀರಶೈವ ಸಮಾಜದಲ್ಲಿ ಬಸವಾದಿ ಪ್ರಮಥರೂ ರೇವಣಸಿದ್ಧಾದಿ ಆಚಾರ್ಯರುಗಳೂ ಒಂದೇ ಧರ್ಮವನ್ನು ಬೋಧಿಸಿದವರು ಮತ್ತು ಒಂದೇ ಮತಪ್ರವರ್ತಕರು ಎಂಬ ನಿರ್ಣಯದಲ್ಲಿ ಭಾಗಿಗಳಾಗಬೇಕೆಂದು ನನ್ನ ಸವಿನಯ ಸೂಚನೆ.



ಆದರೆ ಇನ್ನೊಂದು ಪಕ್ಷಕ್ಕೆ ಅಂದರೆ ಬಸವೇಶ್ವರ ನಿಂದಾಗಲಿ ಬಸವಾದಿ ಪ್ರಮಥರಿಂದಾಗಲಿ ವೀರಶೈವ ಧರ್ಮವು ಹುಟ್ಟಿತು, ಅವರ ಹಿಂದೆ ಧರ್ಮವು ಇದ್ದಿಲ್ಲವೆನ್ನುವಲ್ಲಿ ಪಕ್ಷಗಾರರಾರೆಂಬುದನ್ನು ಶ್ರೀಯುತ ಹಳಕಟ್ಟಿಯವರು ತಮ್ಮ ವಿಮರ್ಶೆಯಲ್ಲಿ ಧ್ವನಿಗೈದಿದ್ದಾರೆ. ಆದರೆ ಈ ವಿಷಯ ನಿರ್ಧಾರದಲ್ಲಿ ವೀರಶೈವ ಧರ್ಮದ ಜೀವನಕ್ಕೆ ಉಪಜೀವಿಕ ಗ್ರಂಥಗಳಾವವು ಎಂಬುದನ್ನು ನಿರ್ಧರಿಸುವದು ಅವಶ್ಯ ವಿರುವದರಿಂದ ಮುಂದಿನ ಒಂದೆರಡು ಪ್ರಶ್ನೆಗಳನ್ನು ಎಲ್ಲರ ಮುಂದೆ ಇಡಬೇಕಾಗಿದೆ.

(೧) ವೀರಶೈವ ಧರ್ಮದ ಮುಖ್ಯ ಉಪಜೀವಿಕ ಆಧಾರ ಗ್ರಂಥಗಳು ವೇದಾಗಮಾದಿ ಪುರಾಣಾದಿಗಳೆನ್ನುವಿರೋ ಇಲ್ಲವೇ ವೀರಶೈವ ಸಾಂಪ್ರದಾಯಕರು ಬರೆದ ಸಂಸ್ಕೃತ ಗ್ರಂಥಗಳೆನ್ನುವಿರೋ? ಅಥವಾ ಬಸವಾದಿ ಪ್ರಮಥರ ವಚನಶಾಸ್ತ್ರಗಳೆನ್ನುವಿರೋ? ಅವುಗಳಲ್ಲಿ ಪ್ರಮಾಣಗಳಾವವು? ಎಂಬುವದನ್ನು ವಿವರಿಸಿ ಸ್ಪಷ್ಟೀಕರಿಸಬೇಕು.

(೨) ಕರ್ನಾಟಕದಲ್ಲಿ ದೊರೆಯುವ ಶಿವಸಾಂಪ್ರದಾಯಕ ಶಿಲಾಶಾಸನಗಳೂ ವೀರಶೈವ ಧರ್ಮ ಬೋಧಕಗಳೋ ಅಥವಾ ವೀರಶೈವ ಮತಾಂತರ್ಗತ ವಿಭೂತಿಗಳ ಜೀವನೇತಿಹಾಸ ಬೋಧಕಗಳೋ? ಅಲ್ಲವೇ ಮತ್ತಾವುದು? ಸ್ಪಷ್ಟೀಕರಿಸಬೇಕು.

(೩) ಅನೇಕ ಶಿವಸಾಂಪ್ರದಾಯಕರ ಶಿಲಾಶಾಸನಗಳು ಇವೆ ಎಂದು ರಾ। ಸಾ। ಹಳಕಟ್ಟಿಯವರು ತಮ್ಮ ವಿಮರ್ಶನೆಯಲ್ಲಿ ಹೇಳರುವರಷ್ಟೇ. ಅವರು ತಮ್ಮ ಶಿವಾಭವದಲ್ಲಿ ಏಕಾಂತ ರಾಮಯ್ಯ, ಅಮುಗಿದೇವ, ಚೌಡದಾನಪುರದ ಶಿವದೇವ, ಅರ್ಜುನವಾಡದ ಬಸವಣ್ಣನ, ವಂಶಜರು, ಇವರ ಶಾಸನಗಳಲ್ಲಿ ಉಕ್ತವಾದ ಶಬ್ದಗಳನ್ನು ಪ್ರಕಟಿಸಿದಂತೆ ಇನ್ನುಳಿದ ಶಾಸನಗಳಲ್ಲಿ ಬಂದಿರುವ ಶಬ್ದಗಳನ್ನು ಅವರು ತಮ್ಮ ಶಿವಾನುಭವದಲ್ಲಿ ಪ್ರಕಟಿಸಬೇಕಾಗಿ ಸೂಚನೆ.

(೪) ಅವರು ತಮ್ಮ ಹಿಂದಿನ ಲೇಖದಲ್ಲಿ ಮತ್ತು ನನ್ನ ಲೇಖದ ವಿಮರ್ಶೆಯಲ್ಲಿ ನಿಜವಾದ ವೀರಶೈವ ಆಗಮಗಳು ಬೇರೆ ಇವೆ ಎಂದೂ ಈಗಿದ್ದ ಕರ್ನಾಟಕದೊಳಗಿನ ಜಗದ್ಗುರು ಮೂರುಸಾವಿರ ಮಠದ ಲಿಂಗೈಕ್ಯರಾದ ಗಂಗಾಧರ ಮಹಾಸ್ವಾಮಿಗಳವರಿಂದ ಪ್ರಕಟವಾದ ವಾತುಲ

ಬಾರದ ಮಾತ್ರದಿಂದ ಇಲ್ಲವೆನ್ನಲುಬಾರದು. " ಗೃಹೇ ಸದ್ದೇವದತ್ತೋ ಜೀವತಿ " ದೇವದತ್ತನು ಜೀವಿಸುತ್ತಾನೆ. "ಬದುಕಿರ್ದ ದೇವದತ್ತನಂ ಗೃಹದಲ್ಲಿಲ್ಲವೆಂದಡೆ ಸ್ಥಾನಾಂತರದಲ್ಲಿರ್ಪನೆಂದು ಕಲ್ಪಿಸುವಂತೆ" ಜೀವಂತನಿದ್ದ ದೇವದತ್ತನು ಮನೆಯಲ್ಲಿಲ್ಲವೆಂದಡೆ ಆ ಮನೆಯನ್ನು ಬಿಟ್ಟು ಬಾಹ್ಯದೇಶಾಂತರದಲ್ಲಿರುವನೆಂದು ಸಿದ್ಧಿಸುವಂತೆಯೂ, ಘಟವು ಮಾನಸದಲ್ಲಿ (ಅಡಿಗೆಯಮನೆಯಲ್ಲಿ) ಇಲ್ಲವೆಂಬ ಬೋಧಿತವಲ್ಲಿ ಕೂಪನದಿ ತೀರಾದಿಗಳ ಸ್ಥಾನಾಂತರವನ್ನು ತೋರಿಸುವೀ ಸಾಮಾನ್ಯಾಯಿಕಭಾವದಂತೆಯೂ, ಶಾಸನಗಳಲ್ಲಿಯೇ ಆಗಲಿ ಹರಿಹರನ ರಗಳೆಯಲ್ಲಾಗಲಿ ಇನ್ನಾವ ಗ್ರಂಥಗಳಲ್ಲಿಯಾಗಲಿ ವೀರಶೈವ ಶಬ್ದವು ಬಾರದ ಮಾತ್ರದಿಂದ ಅದು ಆಗ ಇದ್ದಿಲ್ಲವೆಂದು ಎಂದೂ ಸಿದ್ಧಿಸದು. ಆಗಿನ ಕಾಲದ ಇತರ ಗ್ರಂಥಗಳಲ್ಲಿ ಪ್ರಸಿದ್ಧ ರೀತಿಯಿಂದ ವೀರಶೈವ ಶಬ್ದವು ಜೀವಿಸಿದ್ದೇ ನಿದರ್ಶನವು

ನಾನು ವೀರಶೈವ ಮತವು ಅನಾದಿ ಎಂದು ಸಿದ್ಧಮಾಡಲು ಹೊರಟಿರುವದೇನೋ ನಿಜವು. ಪರಂತು ಈಗಿನ ಮನ್ವಂತರದಲ್ಲಿ ಈ ರೀತಿ ಹೇಳುವವರಿಗೆ ಸನಾತನಿಗಳೆಂದೂ ಜಾತಿವಾದಿಗಳೆಂದೂ, ವರ್ಣವಾದಿಗಳೆಂದೂ ಕಲ್ಪನೆಯ ದೋಷವನ್ನು ಹೆಗಲೇರಿಸುವರು. ನನ್ನ ಹೃದಯವು ಅಂತು ಅಲ್ಲವು. ನಾನು ಜನಜೀವನವನ್ನು ನುಂಗುವ ಮತವು ಪ್ರಾಚೀನವೆಂದಲ್ಲಿ ಬಹು ಗೌರವವುಳ್ಳದ್ದೂ ಬಹು ದೊಡ್ಡದೂ ಎಂಬ ಕಲ್ಪನೆಯುವನೇನಲ್ಲವು; ಜನ ಜೀವನವನ್ನು ಎತ್ತಿಹಿಡಿಯುವ ಮತವು ಇಂದಿನದಾದಡೂ ಮೋಹಕವು. ವರ್ಣಾಶ್ರಮಗಳನ್ನು ಜೋಡಿಸಿ ಮಾನವ ಜನಾಂಗದಲ್ಲಿ ಅನೈಕ್ಯತೆ ಹುಟ್ಟಿಸುವ ಧರ್ಮವು ಇಂದು ಹುಟ್ಟಿದಡೂ ಅದು ತಿರಸ್ಕೃತವು. ಆದರೆ ವೀರಶೈವ ಧರ್ಮವು ಅನಾದಿಯಿಂದಲೂ ನಡೆದುಬಂದುದೆಂತಲೂ ವರ್ಣಾಶ್ರಮಗಳ ಕಲ್ಪನೆಗೆ ಒಳಗಾಗದೆಂತಲೂ ನನ್ನ ಅನುಭವಕ್ಕೆ ಶಾಸ್ತ್ರದಿಂದಲೂ ವೃದ್ಧಾಚಾರದಿಂದಲೂ ಸಮಾಜ ಸಂಸ್ಕೃತಿಯಿಂದಲೂ ಮನದಟ್ಟಾದ ಕಾರಣದಿಂದ ನಾನು ವೀರಶೈವ ಧರ್ಮವು ಅನಾದಿ ಎಂದು ಹೇಳುವೆನಲ್ಲದೆ ಬೇರೆ ಭಾವನೆ ಇಲ್ಲವು.

ನನ್ನ ಮತದಂತೆ ವೀರಶೈವ ಸಮಾಜದಲ್ಲಿ ಬಸವಾದಿ ಪ್ರಮಥರೂ ರೇವಣಸಿದ್ಧಾದಿ ಆಚಾರ್ಯರುಗಳೂ ಒಂದೇ ಧರ್ಮವನ್ನು ಬೋಧಿಸಿದವರು ಮತ್ತು ಒಂದೇ ಮತಪ್ರವರ್ತಕರು ಎಂಬ ನಿರ್ಣಯದಲ್ಲಿ ಭಾಗಿಗಳಾಗಬೇಕೆಂದು ನನ್ನ ಸವಿನಯ ಸೂಚನೆ.



ಆದರೆ ಇನ್ನೊಂದು ಪಕ್ಷಕ್ಕೆ ಅಂದರೆ ಬಸವೇಶ್ವರನಿಂದಾಗಲಿ ಬಸವಾದಿ ಪ್ರಮಥರಿಂದಾಗಲಿ ವೀರಶೈವ ಧರ್ಮವು ಹುಟ್ಟಿತು, ಅವರ ಹಿಂದೆ ಧರ್ಮವು ಇದ್ದಿಲ್ಲವೆನ್ನುವಲ್ಲಿ ಪಕ್ಷಗಾರರಾರೆಂಬುದನ್ನು ಶ್ರೀಯುತ ಹಳಕಟ್ಟಿಯವರು ತಮ್ಮ ವಿಮರ್ಶೆಯಲ್ಲಿ ಧ್ವನಿಗೈದಿದ್ದಾರೆ. ಆದರೆ ಈ ವಿಷಯ ನಿರ್ಧಾರದಲ್ಲಿ ವೀರಶೈವ ಧರ್ಮದ ಜೀವನಕ್ಕೆ ಉಪಜೀವಿಕ ಗ್ರಂಥಗಳಾವವು ಎಂಬುದನ್ನು ನಿರ್ಧರಿಸುವದು ಅವಶ್ಯವಿರುವದರಿಂದ ಮುಂದಿನ ಒಂದೆರಡು ಪ್ರಶ್ನೆಗಳನ್ನು ಎಲ್ಲರ ಮುಂದೆ ಇಡಬೇಕಾಗಿದೆ.

(೧) ವೀರಶೈವ ಧರ್ಮದ ಮುಖ್ಯ ಉಪಜೀವಿಕ ಆಧಾರ ಗ್ರಂಥಗಳು ವೇದಾಗಮಾದಿ ಪುರಾಣಾದಿಗಳೆನ್ನುವಿರೋ ಇಲ್ಲವೇ ವೀರಶೈವ ಸಾಂಪ್ರದಾಯಕರು ಬರೆದ ಸಂಸ್ಕೃತ ಗ್ರಂಥಗಳೆನ್ನುವಿರೋ? ಅಥವಾ ಬಸವಾದಿ ಪ್ರಮಥರ ವಚನಶಾಸ್ತ್ರಗಳೆನ್ನುವಿರೋ? ಅವುಗಳಲ್ಲಿ ಪ್ರಮಾಣಗಳಾವವು? ಎಂಬುವದನ್ನು ವಿವರಿಸಿ ಸ್ಪಷ್ಟೀಕರಿಸಬೇಕು.

(೨) ಕರ್ನಾಟಕದಲ್ಲಿ ದೊರೆಯುವ ಶಿವಸಾಂಪ್ರದಾಯಕ ಶಿಲಾಶಾಸನಗಳೂ ವೀರಶೈವ ಧರ್ಮ ಬೋಧಕಗಳೋ ಅಥವಾ ವೀರಶೈವ ಮತಾಂತರ್ಗತ ವಿಭೂತಿಗಳ ಜೀವನೇತಿಹಾಸ ಬೋಧಕಗಳೋ? ಅಲ್ಲವೇ ಮತ್ತಾವುದು? ಸ್ಪಷ್ಟೀಕರಿಸಬೇಕು.

(೩) ಅನೇಕ ಶಿವಸಾಂಪ್ರದಾಯಕರ ಶಿಲಾಶಾಸನಗಳು ಇವೆ ಎಂದು ರಾ। ಸಾ। ಹಳಕಟ್ಟಿಯವರು ತಮ್ಮ ವಿಮರ್ಶನೆಯಲ್ಲಿ ಹೇಳಿರುವರಷ್ಟೇ. ಅವರು ತಮ್ಮ ಶಿವಾನುಭವದಲ್ಲಿ ಏಕಾಂತ ರಾಮಯ್ಯ, ಆದಯ್ಯ, ಗಿದೇವ, ಚೌಡದಾನಪುರದ ಶಿವದೇವ, ಅರ್ಜುನವಾಡದ ಬಸವಣ್ಣನ, ವಂಶಜರು, ಇವರ ಶಾಸನಗಳಲ್ಲಿ ಉಕ್ತವಾದ ಶಬ್ದಗಳನ್ನು ಪ್ರಕಟಿಸಿದಂತೆ ಇನ್ನುಳಿದ ಶಾಸನಗಳಲ್ಲಿ ಬಂದಿರುವ ಶಬ್ದಗಳನ್ನು ಅವರು ತಮ್ಮ ಶಿವಾನುಭವದಲ್ಲಿ ಪ್ರಕಟಿಸಬೇಕಾಗಿ ಸೂಚನೆ.

(೪) ಅವರು ತಮ್ಮ ಹಿಂದಿನ ಲೇಖದಲ್ಲಿ ಮತ್ತು ನನ್ನ ಲೇಖದ ವಿಮರ್ಶೆಯಲ್ಲಿ ನಿಜವಾದ ವೀರಶೈವ ಆಗಮಗಳು ಬೇರೆ ಇವೆ ಎಂದೂ ಈಗಿದ್ದ ಕರ್ನಾಟಕದೊಳಗಿನ ಜಗದ್ಗುರು ಮೂರುಸಾವಿರ ಮಠದ ಲಿಂಗೈಕ್ಯರಾದ ಗಂಗಾಧರ ಮಹಾಸ್ವಾಮಿಗಳವರಿಂದ ಪ್ರಕಟವಾದ ವಾತುಲ

ತಂತ್ರ ೧೦ ಪಟಲು ಸೂಕ್ಷ್ಮತಂತ್ರ ೧೦ ಪಟಲ, ಪಾರಮೇಶ್ವರ ತಂತ್ರ ೩೩ ಪಟಲು ಒಟ್ಟು ೫೩ ಪಟಲಗಳಿಂದ ಹೊರತಾಗಿ ಬೇರೆ ಕಡೆಗೆ ಈ ಆಗಮಗಳು ದೊರೆಯುತ್ತವೆಂತಲೂ ಸೂಚಿಸಿರುವರಷ್ಟೇ? ಅವುಗಳಾವು? ಅವುಗಳೆಲ್ಲಿಹವು?

(೫) ನಿಜಗುಣ ಶಿವಯೋಗಿಯ ರೇವಣಸಿದ್ಧರ, ಏಕೋರಾಮಾರಾಧ್ಯರ, ಮರುಳಸಿದ್ಧರ, ಪಂಡಿತಾರಾಧ್ಯರ, ಶ್ರೀಪತಿ ಪಂಡಿತರ, ಮಂಚಣ್ಣ ಪಂಡಿತರ, ಈ ಸಪ್ತ ವಿಭೂತಿಗಳ ಹೆಸರನ್ನು ಮತ್ತು ನಂದಿ ಭೃಂಗಾದಿ ಪ್ರಮಥರುಗಳ ಹೆಸರುಗಳನ್ನು ವಚನಕಾರರು ತಮ್ಮ ವಚನಗಳಲ್ಲಿ ಎತ್ತಿರುವರೋ? ಎತ್ತಿದ್ದರೆ ಆ ವಚನಗಳನ್ನು ಉದಾಹರಿಸಬೇಕಾಗಿ ನನ್ನ ನಮ್ರ ವಿನಂತಿ.

---

# ಶಿವಲೆಂಕ ಮಂಚಣ್ಣಗಳ ವಚನಗಳು.

# ಶಿವಲೆಂಕ ಮಂಚಣ್ಣಗಳ ವಚನಗಳು.

## ಪರಮಾತ್ಮನ ಸ್ವರೂಪು.

೧. ಆದಿವಸ್ತು ಅನಾದಿವಸ್ತು ಎಂದೆರಡು ಭೇದವ ಮಾಡಿದಲ್ಲಿ ತನ್ನಿರವಿನ ಭೇದವೋ ವಸ್ತುವಿನ ಸ್ವರೂಪದಂಗವೋ? ಇಕ್ಷುದಂಡಕ್ಕೆ ಕಡೆ ನಡು ಮೊದಲಲ್ಲದೆ ಸಕ್ಕರೆಗುಂಟೇ? ಆದಿಯನಾದಿ ವಸ್ತುವೆಂಬುದು ತನ್ನಯ ಚಿತ್ತದ ಗೊತ್ತಲ್ಲದೆ, ಅದು ನಿಶ್ಚಯವಲ್ಲ. ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ ಏಕಮೂರ್ತಿ ಸ್ವಯಂಭು.

---

## ಷಟ್‌ಸ್ಥಲಗಳ ಸ್ವರೂಪು.

೨. ಆರು ಸ್ಥಲ ಬಿಟ್ಟು ಬೇರೆ ಭಾವವಾವುದಯ್ಯಾ? ಸಕಲ ಗುಣಂಗ ಳನರಿತು ಸರ್ವ ಜೀವಕ್ಕೆ ದಯಾಪರನಾಗಿಪ್ಪುದು ಭಕ್ತಸ್ಥಲ. ಸಕಲ ದೇಹ ಭಾವಂಗಳಲ್ಲಿ ತಲೆದೋರದಿಪ್ಪುದು ಗುರುಸ್ಥಲ. ಉತ್ಪತ್ತಿ ಸ್ಥಿತಿ ಲಯಕ್ಕೆ ಹೊರಗಾದುದು ಲಿಂಗಸ್ಥಲ. ಆ ಮೂರು ಹರಿಹಿಂಗಿ ನಿಂದುದು ಜಂಗಮಸ್ಥಲ. ಈ ಚತುರ್ವಿಧವನೊಳಕೊಂಡುದು ಶರಣಸ್ಥಲ. ಈ ಐದನವಗ್ರಹಿಸಿ ನಿಂದುದು ಐಕ್ಯಸ್ಥಲ. ಇಂತೀ ಷಟ್‌ಸ್ಥಲವು ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂದು ನಿಂದುದು ಒಂದೇ ಸ್ಥಲ. ಮರೆದು ಅರಿತಲ್ಲಾಯಿತ್ತು. ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವು ಷಡಂಗಲೇಪವಾಗಿ ಸ್ವಯಂಭುವಾಯಿತ್ತು.

---

## ಭಕ್ತಸ್ಥಲ.

೩. ಅಂಗವನರಿವನ್ನಕ್ಕ ಶಿವಲಿಂಗಪೂಜೆಯ ಮಾಡಲೇಬೇಕು. ಆತ್ಮನ ಕ್ಷುಧೆಯುಳ್ಳನ್ನಕ್ಕ ಬಂದ ಪದಾರ್ಥವ ಲಿಂಗಾರ್ಪಿತ ಮಾಡಲೇಬೇಕು. ಇದು ಅರುವಿನ ಬಿತ್ತು, ಜ್ಞಾನದ ಗೊತ್ತು, ಸರ್ವಮಯದ ಯುಕ್ತಿ, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವ ಶಕ್ತಿ.

೪. ಅರ್ಚನೆ ಪೂಜೆಯ ಕುರಿತು ಮಾಡಿದಲ್ಲಿ ಚತುರ್ವಿಧ ಫಲ ಪದಂಗಳೆಂಬುವು ತನ್ನ ಹಿತ್ತಿಲ ಬೆಳೆ. ಇಷ್ಟಾರ್ಥ, ಮೋಕ್ಷಾರ್ಥ, ಕಾಮ್ಯಾರ್ಥವೆಂಬವು ತನ್ನ ಬಾಗಿಲ ನೆಟ್ಟ ಸ್ಥಾಣು. ಇವು ಹೊರಗಾಗಿ ನೀರ ಕಂಡ ತೆರ ಉರಿ ಕೊಂಡ ಕರ್ಪುರದಂತೆ. ಇಂತೀ ಉಭಯದ ನಿಶ್ಚಯಪೂಜೆ, ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ಎರವಿಲ್ಲದ ಭಾವ.

೫. ಗಂಗೆವಾಳುಕ ರುದ್ರರೆಲ್ಲರು ಅಂಗವರಿತು. ಲಿಂಗವನರಿತರಲ್ಲದೆ, ಅಂಗಗುಣವನರಿಯದೆ ಲಿಂಗತ್ರಯವೆಂಬುದ ಸಂಘಟಿಸಲರಿಯದೆ ನಿಂದು ಕಾಂಬ ನೆಲೆ ಇನ್ನೆಂತು? ಮಾತ ಕಂಡಾಡಿದಡೆ ವಾಗದ್ವೈತ. ಒಳಗನರಿದು ಪೂಜಿಸುವಲ್ಲಿ ಡಂಭಕ. ದಾರಿಯನೆ ಮುಟ್ಟದಲ್ಲಿ ಕೇಡಿಲ್ಲವೆಂದು ಮನಬ್ರಹ್ಮವನಾಡಿ ತಾ ಮನುಜರಂತೆ ಹರಿದಾಡುತ್ತ ಶಂಕೆ ಇಲ್ಲವೆಂದು ನಿಶ್ಶಂಕೆಯ ನುಡಿಯಬಹುದೇ ಅಯ್ಯಾ? ನಡೆನುಡಿ ಸಿದ್ಧಾಂತವಾದಲ್ಲಿ ಈಶಾನ್ಯಮೂರ್ತಿಮಲ್ಲಿಕಾರ್ಜುನ ಲಿಂಗವು ಅವರಲ್ಲಿ ಪ್ರಸಿದ್ಧವಾಗಿಪ್ಪುದು.

೬. ಭವಿಸಂಗ ಭವಿ ನಿರೀಕ್ಷಣೆ ಲೌಕಿಕವ ಬಿಟ್ಟು ಮನಭಾವದಲ್ಲಿ ಚಿತ್ತಶುದ್ಧನಾಗಿ ಪೂಜಿಸುವ. ಲಿಂಗದಲ್ಲಿ ಪ್ರಮಾಣಿಸುವ ಜಗದಲ್ಲಿ ಆರಾಧಿಸುವ. ಗುರುವಿನಲ್ಲಿ ಪಂಚಾಚಾರ ಶುದ್ಧವಾಗಿ ಮನ ವಚನ ಕಾಯ ತ್ರಿಕರಣ ಶುದ್ಧಾತ್ಮನಾಗಿಪ್ಪುದೇ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ಸರ್ವವ್ರತ ಸಂದಿತ್ತು.

೭. ಹೊರಗೆ ಚಿಲುಮೆ, ಒಳಗೆ ಮೂತ್ರದ ಕುಳಿ, ಹೊರಗೆ ಸ್ವಯಂಪಾಕ, ಒಳಗೆ ಅಧರಪಾನ, ಹೊರಗೆ ಭವಿನಿರಸನ, ಒಳಗೆ ಭವಿಸಂಗಕೂಟ, ಇಂತೀ ಗುಣವನೊಪ್ಪ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವು.



೮. ಅಪ್ಪು ಲವಣವೆಲ್ಲವೂ ಸರಿ. ಪರಪಾಕವೆಲ್ಲವೂ ಸರಿ. ಇವನೊಲ್ಲೆನೆಂದು ಬಿಟ್ಟ ಮೇಲೆ. ಲೌಕಿಕಕ್ಕೆ ದೂರಸ್ಥನಾಗಿ ಪರಮಾರ್ಥಕ್ಕೆ ಸಂಪದನಾಗಿ ತನಗೆ ಕರ್ತುವಾದ ಗುರು ಚರದಲ್ಲಿ ಭೃತ್ಯನಾಗಿರಬೇಕು. ಶರಣರ ಸಮೂಹದಲ್ಲಿ ಅಲ್ಲ ಅಹುದೆನ್ನದಿಪ್ಪುದೇ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ನೇಮ ಸಂದಿತ್ತು.

---

## ಮಾಹೇಶ್ವರ ಸ್ಥಲ

೯. ಪರಧನವನೊಲ್ಲದಿಪ್ಪುದೇ ವ್ರತ, ಪರಸ್ತ್ರೀಯರ ಮುಟ್ಟದಿಪ್ಪುದೇ ಶೀಲ, ಸರ್ವ ಜೀವನ ಕೊಲ್ಲದಿಪ್ಪುದೇ ನೇಮ, ತಥ್ಯ ಮಿಥ್ಯವನರಿದಿಪ್ಪುದೇ ಸತ್ಯನೇಮ. ಇಂತಿದು ಸಂದೇಹವಿಲ್ಲದ ವ್ರತ, ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವನರಿವುದಕ್ಕೆ.

೧೦. ಮನವರೋಚಕವಾದಲ್ಲಿ ಲವಣವಾದಿಯಾಗಿ ಪರಪಾಕ ಮುಂತಾದ ರಸದ್ರವ್ಯವನೊಲ್ಲದಿಪ್ಪುದು ವ್ರತವೇ? ಅಲ್ಲ, ಅದು ಸೌಕರ್ಯವಲ್ಲದೆ. ಅದೆಂತೆಂದಡೆ, ಪರದ್ರವ್ಯ, ಪರಸತಿ, ಹುಸಿ, ಕೊಲೆ, ಕಳವು, ಅತಿಕಾಂಕ್ಷೆಯಂ ಬಿಟ್ಟು, ಬಂದುದನಿದ್ದಂತೆ ಕೊಂಡು, ಬಾರದುದಕ್ಕೆ ಕಾಂಕ್ಷೆಯ ಮಾಡದಿಪ್ಪುದೇ ಅರುವತ್ತುನಾಲ್ಕು ಶೀಲ, ಐವತ್ತಾರು ವ್ರತ, ಮೂವತ್ತೆರಡು ನೇಮ ಸಂದಿತ್ತು. ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗದಲ್ಲಿ ಸರ್ವನೇಮ ಸ್ವಯಂಭುವಾಯಿತ್ತು.

೧೧. ಮಡಕೆಗೆ ಮುಸುಕು, ತಮ್ಮ ಗುಹ್ಯಕ್ಕೆ ದಶಾವಸ್ಥೆ, ಬಾಹ್ಯದಲ್ಲಿ ಶೀಲ, ಅಂತರ್ಯಾಮಿಯಲ್ಲಿ ದುಶ್ಶೀಲ, ಹೊರಗೆ ವ್ರತ, ಒಳಗೆ ಗತಕ ಇನ್ನಾರಿಗೆ ಹೇಳುವೆ? ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವೇ ನೀವೇ ಬಲ್ಲಿರಿ.

೧೨. ಪಾತಕ ಹೊಲೆ ಎಂದರಿದು ಬಿಟ್ಟಲ್ಲಿ, ಮತ್ತಾ ಗುಣವ ಸ್ವೀಕರಿಸಬಹುದೇ? ಇವನೊಲ್ಲೆನೆಂದು ಬಲ್ಲತನವ ತಾನರಿದು ಮತ್ತಲ್ಲಿ ರಲ್ಲಿ ಬೆರಸಬಹುದೇ? ಒಡೆದ ಹಂಚಿಂಗೆ ಹಿಡಿದು ಬಿಟ್ಟ ವ್ರತಕ್ಕೆ

ಮುತ್ತಿವನೊಡಗೂಡಬಹುದೇ? ಇಂತೀ ಬಿಡುಗಡೆಯನರಿದಲ್ಲಿ ಅನು ಸರಣೆಯ ಮಾಡಿದಡೆ ಎನ್ನೊಡೆಯ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವಾದಡೂ ಹರಶರಣಂಗೆ ದೂರ.

೧೩. ನಿತ್ಯಚಿಲುಮೆಯ ತೋರುವಾತಂಗೆ ಉಚ್ಚಿಯ ಬಚ್ಚಲ ತೋರಲಾಗದು. ಭಕ್ತರನಲ್ಲದೆ ಭವಿಯ ಬೇಡೆನೆಂಬಾತಂಗೆ ಆಚ್ಛೊ ತೋರಲಾಗದು. ಕೊಂಡ ವ್ರತಕ್ಕೆ ತ್ರಿದ ಲಕ್ಷ್ಮಿಯ ಮುದ್ರೆಯ ಹಿಡಿಯಲಾಗದು. ಇಂತಿವನರಿಯದೆ ನಾ ವ್ರತ ಸಂದೇಹವುಳ್ಳರೆ ಲಿಂಗವ ಹೊರಲಾಗದು. ಇಂತಿವನರಿಯದೆ ನಾ ವ್ರತ ಸ್ಥನೆಂದು ಕೊಂಡಾಡುತಿರ್ಪ ಭಂಡರನೊಪ್ಪ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವು

೧೪. ಬಾಹ್ಯವ್ರತ, ಭ್ರಮೆ, ಅಹುದಲ್ಲವೆಂಬ ಸಂದೇಹ, ಸಂಕಲ್ಪ, ಇಂತೀ ಸೀಮೆಯೊಳಗಾದವ ಅರುವತ್ತನಾಲ್ಕು ಶೀಲವನರಿದಡೇನು? ಪರ ವಧುವಿಂಗೆ ಪಲ್ಲಟಿಸದೆ ಪರಧನಕ್ಕೆ ಕೈದುಡುಕದೆ ಅನರ್ಪಿತಕ್ಕೆ ಮನ ಮುಟ್ಟದೆ ತಾ ಕೊಂಡ ಸೀಮೆಯಲ್ಲಿ ಭಾವ ಭ್ರಮೆ ಇಲ್ಲದೆ ಮನ ವಚನ ಕಾಯದಲ್ಲಿ ಕೊಂಡ ವ್ರತಕ್ಕೆ ಉಭಯದೋರದೆ ನಿಂದುದು ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ಸಂದುದು.

೧೫. ವ್ರತಾಚಾರವ ಹಿಡಿದು ಬಿಟ್ಟಲ್ಲಿ ಗುರುವಾದಡೂ ಪರಿಹರಿಸ ಬಾರದು. ಲಿಂಗವಾದಡೂ ಪರಿಹರಿಸಬಾರದು. ಜಂಗಮವಾದಡೂ ಪರಿ ಹರಿಸಬಾರದು. ರತ್ನದ ಗುಂಡೆಂದಡೆ ಸಿಲೆಯ ಮೇಲೆ ಹಾಕಿದಡೆ ಒಡೆ ಯದೇ? ನೀನೊಡೆಯನಾದಡೂ ನಾ ಲೆಂಕನಾದಡೂ ಈ ಗುಣವ ಬಿಗಿಯಲ್ಲದೆ ಮೃಡ ಶರಣರ ಸಂಗಕ್ಕೊಳಗಲ್ಲ. ಅಂಗದ ಮಲಿನವ ಕೈಯಿಂದ ಒರಸಿದಡೆ ಭಂಗ ಉಂಟೇ? ಈಶಾನ್ಯಮೂರ್ತಿ ಮಲ್ಲಿಕಾ ರ್ಜುನ ಲಿಂಗವಾದಡೂ ಆಗಲಿ, ಲೆಂಕನ ಭಿನ್ನಕ್ಕೆ ಸಂಕಲ್ಪವಿಲ್ಲ.

---



## ಪ್ರಸಾದಿಸ್ಥಲ.

೧೬. ರಸವನರಿವುದಕ್ಕೆ ಜಿಹ್ವೆಯಾಗಿ ಬಂದು, ಗಂಧವನರಿವುದಕ್ಕೆ ನಾಸಿಕವಾಗಿ ಬಂದು, ರೂಪನರಿವುದಕ್ಕೆ ನೇತ್ರವಾಗಿ ಬಂದು, ಶಬ್ದವ ನರಿವುದಕ್ಕೆ ಶ್ರೋತ್ರವಾಗಿ ಬಂದು, ಸ್ಪರ್ಶವ ನರಿವುದಕ್ಕೆ ತ್ವಕ್ಕಾಗಿ ಬಂದು, ಇಂತೆನ್ನ ಘಟದ ಮಧ್ಯದಲ್ಲಿ ನಿಂದು ಪಂಚವಕ್ತ್ರನಾದೆಯಲ್ಲಾ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವೇ.

೧೭. ಅಂಗದೇಹಿ ಲಿಂಗೋದಕವ ಕೊಳಲಾಗದು. ಪ್ರಕೃತಿಜೀವಿ ಪಾದೋದಕವ ಕೊಳಲಾಗದು. ಭವಜೀವಿ ಪ್ರಸಾದೋದಕವ ಕೊಳ ಲಾಗದು. ಇಂತೀ ತ್ರಿವಿಧಭೇದಂಗಳಲ್ಲಿ ತ್ರಿವಿಧ ಶುದ್ಧನಾಗಿ ಕೊಳ ಬಲ್ಲಡೆ ತ್ರಿವಿಧಕ್ಕೆ ಸಮರ್ಪಣ, ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗಾ ರ್ಪಿತ.

೧೮. ತುಪ್ಪವಿದ್ದಲ್ಲಿ ಬತ್ತವಾಯಿತ್ತು. ತುಷ ಹೆರೆ ಹಿಂಗೆ ತಂಡುಲ ವಾಯಿತ್ತು. ತಂಡುಲ ದಗ್ಧವಾದಲ್ಲಿ ಬ್ರಹ್ಮವಾಯಿತ್ತು. ಆ ಗುಣ ಒಂದ ನೊಂದು ಬಿಟ್ಟು ನಿಂದುದನಂತಲ್ಲಿ ಜಂಗಮಪ್ರಸಾದ, ಲಿಂಗಕ್ಕರ್ಪಿತ. ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಅಂತಲ್ಲಿಯೇ ಅರ್ಪಿತ.

೧೯. ಕಂಗಳ ಮುಂದೆ ಕಂಡುದೆಲ್ಲವು ಲಿಂಗಾರ್ಪಿತವೇ? ಫಲಾದಿ ಗಳಲ್ಲಿ ಪಾಕವಾದ ಕಡ್ಡಿ ತೊಟ್ಟು ಬಿತ್ತು ತುಷಾ ಪಾಷಾಣ ಬೋನ ದೊಳಗಾದ ಸಮೂಹವೆಲ್ಲವೂ ಲಿಂಗನೈವೇದ್ಯಸಮರ್ಪಣವೇ? ಸಾರೋ ಪದ್ರವ್ಯಂಗಳಲ್ಲಿ ಅರೋಚಕವ ಕಳೆದು ಮನದಲ್ಲಿ ನೇಮಿಸಿ ಇಟ್ಟ ಲಿಂಗ ದಿಷ್ಟ ಪದಾರ್ಥವ ಕೊಡುವಲ್ಲಿ ಪ್ರಾಣಲಿಂಗಕ್ಕೆ ನಾನಾ ರಸಂಗಳ ಸಾಗಿಸು ವಲ್ಲಿ ಅರ್ಪಿತ ಅನರ್ಪಿತವೆಂಬುಭಯದ ಗೊತ್ತು ಮುಟ್ಟಿ ಅರ್ಪಿಸಬಲ್ಲಡೆ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕರ್ಪಿತವಾಯಿತ್ತು.

## ಪ್ರಾಣಲಿಂಗಿ ಸ್ಥಲ.

೨೦. ಆದಿಶಕ್ತಿ ರೂಪಾಗಿ, ಅನಾದಿಶಕ್ತಿ ಪ್ರಾಣವಾಗಿ, ಚಿದಾದಿತ್ಯನ ಬೆಳಗು ಅರಿವಾಗಿ ಎನ್ನ ಹೃತ್ಕಮಲಮಧ್ಯದಲ್ಲಿ ತೋಳಗಿ ಬೆಳಗಿದಿರಯ್ಯಾ, ಈಶಾನ್ಯಮೂರ್ತಿಮಲ್ಲಿಕಾರ್ಜುನಲಿಂಗವೇ

೨೧. ಎನ್ನ ಕಾಯವೇ ದೇಗುಲವಾಗಿ, ಕುರುಹಿಟ್ಟುಕೊಟ್ಟ ಕುರುಹೇ ಪ್ರಾಣಲಿಂಗವಾಗಿ, ನೋಡುವ ಕಣ್ಣೇ ಪೂಜಿಸುವ ಪುಷ್ಪವಾಗಿ, ಆನಂದಾಶ್ರುಗಳೇ ಸಕಲಭೋಗವಾಗಿ, ಅಷ್ಟವಿಧಾರ್ಚನೆ ಷೋಡಶೋಪಚಾರವರಡುದೇ ಅಡ್ಡವಣಿಗೆ ಪರಿಯಾಣವಾಗಿ ಪರಿಣಾಮವೇ ನೈವೇದ್ಯವಾಗಿ ಅಖಂಡ ಭಕ್ತಿರತಿಯೇ ತಾಂಬೂಲವಾಗಿ, ಪೂಜಿಸುತ್ತಿರ್ದೆನಯ್ಯ. ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ ಎನ್ನ ಪ್ರಾಣಪೂಜೆ ನಿಮಗೆ.

೨೨. ಧರೆಯ ಕೃಷಿ ಶುದ್ಧವಾಗಿಯಲ್ಲದೆ ಸಸಿ ಶುದ್ಧವಲ್ಲ. ಅರ್ಚನೆ ಅರ್ಪಿತ ಮೂರ್ತಿಧ್ಯಾನದಿಂದಲ್ಲದೆ ಶುದ್ಧವಿಲ್ಲ. ಇದು ಸಶ್ಚಯ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ.

೨೩. ಕಂಡುದು ಸಂಗದಿಂದಲಳಿವಂತೆ. ನಿನ್ನ ನೋಡುವ ನೋಟ ಎನ್ನಯ ಮನದ ಕೂಟದಿಂದಳಿಯಿತ್ತು. ಮತ್ತೆ ನಿಮ್ಮಾಸೆ ಮುಟ್ಟುವ ಭೇದ ಬಿಡದು. ನೀ ರೂಪಾಗಿ ನಾ ಸಾಕಾರವಾಗಿ ಉಭಯವುಳ್ಳನ್ನಕ್ಕ ಈಶಾನ್ಯಮೂರ್ತಿಮಲ್ಲಿಕಾರ್ಜುನ ಲಿಂಗವೇ ನೀ ರೂಪಾದೆ.

೨೪. ವಟವೃಕ್ಷದ ಘಟದ ಮಧ್ಯದಲ್ಲಿ ಒಂದು ಮಠ ಒಪ್ಪುವುದು. ಆ ಮಠಕ್ಕೆ ಹಿಂದೆಸೆಯಿಂದ ಬಂದು ಮುಂದಣ ಬಾಗಿಲ ತೆರೆದು ಒಳಗಿನ ಕೋಣೆಯ ಕಂಡು ಕಿಡಿನಂದದ ದೀಪವ ಕೊಂಡು ಹೊಕ್ಕು ನಿಜದಂಗದ ಓಗರದ ಕುಂಭವ ಕಂಡು ಸಂಬಂಧವಿಲ್ಲದ ಓಗರವನುಂಡು ಸದಮಲ ಲಿಂಗವೇ ತಾನಾದ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವಾದ.

ಟೀಕು:– ಅನಂತಕೋಟಿ ಬ್ರಹ್ಮಾಂಡಂಗಳನೊಳಕೊಂಡಿರ್ಪ ಪರಬ್ರಹ್ಮವೆಂಬುದೀಗ ವಟವೃಕ್ಷವೆಂಬ ಶಬ್ದಕ್ಕರ್ಥ. ಅಂತಪ್ಪ ಪರಬ್ರಹ್ಮವೃಕ್ಷದ ಮಧ್ಯದಲ್ಲಿ ಚಿದ್ಬ್ರಹ್ಮಾಂಡ ಒಪ್ಪುತ್ತಿಹುದೆಂಬುದೀಗ ಘಟದ ಎಂಬ ಶಬ್ದಕ್ಕರ್ಥ. ಅಂತಪ್ಪ ಚಿದ್ಬ್ರಹ್ಮಾಂಡದ ಮಧ್ಯದಲ್ಲಿ ಶರಣನ ಜ್ಞಾನಕಾಯ



ಸಂಬಂಧವಾಗಿಹುದೆಂಬುದೀಗ ಮಧ್ಯದಲ್ಲಿ ಒಂದು ಮಠ ಒಪ್ಪುವುದು ಎಂಬ ಶಬ್ದಕ್ಕರ್ಥ. ಆ ಜ್ಞಾನಕಾಯವೆಂಬ ಗೃಹಕ್ಕೆ ಶರಣ ತನ್ನಮೂಲಜ್ಞಾನ ವಿಡಿದೆಯ್ದುತ್ತಿರ್ದನೆಂಬುದೀಗ ಆ ಮಠಕ್ಕೆ ಹಿಂದೆಸೆಯಿಂದ ಬಂದು ಎಂಬ ಶಬ್ದಕ್ಕರ್ಥ. ಆ ಮೂಲಜ್ಞಾನ ಪಿಡಿದೆಯ್ದುತ್ತಿರ್ದ ಶರಣನು ಪಶ್ಚಿಮದ್ವಾರವೆನಿಸುವ ಸುಷುಮ್ನನಾಳ ಸುಜ್ಞಾನಪ್ರಕಾಶದಿಂ ನಿವಾತವ ಮಾಡಿದನೆಂಬುದೀಗ ಮುಂದಣ ಬಾಗಿಲ ತೆರೆದು ಎಂಬ ಶಬ್ದಕ್ಕರ್ಥ. ಆ ಸುಷುಮ್ನನಾಳದಲ್ಲಿ ಸುಜ್ಞಾನಮಾರ್ಗವಿಡಿದೆಯ್ದುತ್ತಿರ್ದ ಶರಣನು ಆತ್ಮತ್ರಯಂಗಳೆಂಬ ಗರ್ಭಗೃಹಂಗಳಲ್ಲಿ ಸಚ್ಚಿದಾನಂದ ಸ್ವರೂಪವಾದ ತ್ರಿವಿಧ ಲಿಂಗಂಗಳು ಅಡಗಿರ್ಪ ಭೇದವ ಚಿದ್ದೃಕ್ಕಿನಿಂದೆ ಕಂಡನೆಂಬುದೀಗ ಒಳಗಿನ ಕೋಣೆಯ ಕಂಡು ಎಂಬ ಶಬ್ದಕ್ಕರ್ಥ. ಆ ಚಿದ್ದೃಕ್ಕಿನಿಂದೆ ಕಂಡ ಶರಣನು ಸಂಕಲ್ಪ ವಿಕಲ್ಪಂಗಳಿಂ ಕೆಡದ ಇರ್ದ ಸ್ವಯಂಜ್ಯೋತಿ ಪ್ರಕಾಶವ ಸದ್ಭಾವ ಹಸ್ತದಲ್ಲಿ ದೃಢವಿಡಿದನೆಂಬುದೀಗ ಕಿಡಿ ನಂದದ ದೀಪವ ಕೊಂಡು ಎಂಬ ಶಬ್ದಕ್ಕರ್ಥ. ಆ ಸ್ವಯಂಜ್ಯೋತಿ ಪ್ರಕಾಶವಿಡಿದೆಯ್ದಿದ ಶರಣನು ನಿತ್ಯಸ್ವರೂಪವಾದ ಆತ್ಮಂಗಳಲ್ಲಿ ಚೈತನ್ಯವಾಗಿರ್ದ ಉಳುಮೆಯ ಸ್ವರೂಪವಾದ ಪರಬ್ರಹ್ಮಕ್ಕೆ ಅಂಗವಾದ ಚಿದ್ಬ್ರಹ್ಮಾಂಡ ಸುಜ್ಞಾನ ದೃಷ್ಟಿಯಿಂ ಕಂಡೆನೆಂಬುದೀಗ ಹೊಕ್ಕು ನಿಜದಂಗದ ಓಗರದ ಕುಂಭವ ಕಂಡು ಎಂಬ ಶಬ್ದಕ್ಕರ್ಥ. ಆ ಚಿದ್ಬ್ರಹ್ಮಾಂಡದಲ್ಲಿ ಸಂಬಂಧವಾಗಿರ್ಪ ಪರಬ್ರಹ್ಮವು ದ್ವೈತಕ್ರಿಯೆ ಹೊದ್ದದೆಂಬುದೀಗ ಸಂಬಂಧವಿಲ್ಲದೋಗರವೆಂಬ ಶಬ್ದಕ್ಕರ್ಥ. ಅಂತಪ್ಪ ಪರಬ್ರಹ್ಮವನು ಶ್ರೀಗುರುಕಾರುಣ್ಯದಿಂ ಪ್ರತ್ಯಕ್ಷವ ಮಾಡಿಕೊಂಡು ಅಭಿನ್ನಜ್ಞಾನಕ್ರಿಯೆಯಿಂ ಸ್ವೀಕರಿಸಿ ಮಲತ್ರಯ ರಹಿತವಾದ ಪರಬ್ರಹ್ಮದಲ್ಲಿ ಸಮರಸೈಕ್ಯವಾದನೆಂಬುದೀಗ ಉಂಡು ಸದಮಲ ಲಿಂಗವೇ ತಾನಾದ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವಾದನೆಂಬ ಶಬ್ದಕ್ಕರ್ಥ.

## ಶರಣಸ್ಥಲ.

೨೫. ಜ್ಞಾನವುಳ್ಳನಕ ಅರಿವು ಅರಿವುಳ್ಳನಕ ಆತ್ಮ. ಆತ್ಮ ಉಳ್ಳನಕ ಜೀವ. ಜೀವವುಳ್ಳನ್ನಕ ಕಾಯ. ಕಾಯ ಉಳ್ಳನ್ನಕ ಸಕಲ ಸುಖಭೋಗಂಗಳು. ಅದೆಂತೆಂದಡೆ ಬೀಜವಳಿದು ಬೆಳೆದು ಪುನರಪಿ ಬೀಜವಾದಂತೆ ಆದರಾಗು ಜಾಗೆಯಸರಿದಲ್ಲಿ ಇಷ್ಟ ಪ್ರಾಣ ಯೋಗ ಕ್ರಿಯಾದ್ವೈತ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗವನರಿದುದು.

೨೬. ಕಾರಕನ ಕೈ ಮುಟ್ಟುವುನಕ್ಕೆ ಮುನ್ನವೇ, ಗುರುವಿನ ಕೈ ಮುಟ್ಟಿದ ಮುನ್ನವೇ, ಮನಸಿಜನ ಮುಟ್ಟುವದಕ್ಕೆ ಮುನ್ನವೇ, ನಾಮ ರೂಪು ಬಹುದಕ್ಕೆ ಮುನ್ನವೇ, ಅದಾವ ರೂಪೆಂದರಿದಡೆ ಆವಸ್ತು ಪ್ರಾಣಕ್ಕೆ ರೂಪವಹ ಪರಿ ಇನ್ನೆಂತುಟು? ಅದು ಭಾವಕ್ಕಗೋಚರ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗವು.

೨೭. ಸಕಲ ಬಹುಕೃತವೆಂಬ ಗಹನದಲ್ಲಿ ಜೀವನೆಂಬ ದಂತಿ ತಿರುಗಾಡುತ್ತಿರಲಾಗಿ ಅರಿವೆಂಬ ಕೇಸರಿ ಆದ ಕಂಡೊದಗಿಯೆಯ್ದಿ ಮಸ್ತಕದ ಕುಂಭಸ್ಥಳವನೊಡೆದು ಸೇವಿಸುತ್ತಿರಲಾಗಿ ಶಾರ್ದೂಲ ಹೋಯಿತ್ತು. ಕೇಸರಿ ಬಿಟ್ಟಿತ್ತು. ಗಜ ಬದುಕಿತ್ತು. ಶಾರ್ದೂಲ ಶಂಕೆ ಹರಿಯಿತ್ತು. ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಲೀಲೆಗೆ ಹೊರಗಾಗಿ ಸ್ವಯಂಭುವಾಯಿತ್ತು.

ಟೀಕು:— ಸಕಲ ತತ್ವಂಗಳೊಡಗೂಡಿದ ಪುಣ್ಯಪಾಪಯುಕ್ತವಾದ ದೇಹಾರಣ್ಯದಲ್ಲಿ ಎಂಬುದೀಗ ಸಕಲ ಬಹುಕೃತವೆಂಬ ಗಹನದಲ್ಲಿ ಎಂಬ ಶಬ್ದಕ್ಕರ್ಥ. ಆ ದೇಹಾರಣ್ಯದ ಮಧ್ಯದಲ್ಲಿ ಅಹಂಕಾರಯುಕ್ತವಾದ ಜೀವನು ನಾನಾ ಪ್ರವರ್ತನೆಯಲ್ಲಿ ಕೂಡಿ ಚರಿಸುತ್ತಿಹನೆಂಬುದೀಗ ಜೀವನೆಂಬ ದಂತಿ ತಿರುಗಾಡುತ್ತಿರಲಾಗಿ ಎಂಬ ಶಬ್ದಕ್ಕರ್ಥ. ಅಂತು ದೇಹವಿಕಾರದಲ್ಲಿ ಕೂಡಿ ಚರಿಸುತ್ತಿರ್ದ ಅಹಂಕಾರಯುಕ್ತವಾದ ಜೀವಂಗೆ ಶಿವಕೃಪೆಯಿಂ ಸುಜ್ಞಾನೋದಯವಾಗಲು ಆ ಸುಜ್ಞಾನ ಪ್ರಕಾಶವು ಆ ಅಹಂಕಾರಯುಕ್ತವಾದ ಜೀವನ ಜೀವಭಾವವ ಸಂಹರಿಸಬೇಕೆಂದು ಅತ್ಯಂತ ತೀವ್ರದಿಂದೆಯ್ದಿ ಅವಗ್ರಹಿಸಿ ಆ ಜೀವನ ವೃತ್ತಿಜ್ಞಾನವೆಂಬ ಶಿರಸ್ಸನ್ನು ಅಹಂಕಾರ ಮಮಕಾರಂಗಳೆಂಬ ಕುಂಭಸ್ಥಳವನ್ನು ಭಗ್ನವ ಮಾಡಿತ್ತೆಂಬುದೀಗ ಅರಿವೆಂಬ ಕೇಸರಿ ಆದ ಕಂಡೊದಗಿಯೆಯ್ದಿ ಮಸ್ತಕ



ಕುಂಭಸ್ಥಳವನೊಡೆದು ಎಂಬ ಶಬ್ದಕ್ಕರ್ಥ. ಅಂತು ವೃತ್ತಿಜ್ಞಾನ ಮೊದಲಾದ ಅಹಂಕಾರ ಮಮಕಾರಗಳು ನಿವೃತ್ತಿಯಾಗಲು ಅಷ್ಟಮದಯುಕ್ತವಾದ ಸಂಸಾರ ವಿಷಯ ರಸವನವಗ್ರಹಿಸಿ ನಷ್ಟವ ಮಾಡಿತ್ತೆಂಬುದೀಗ ಸೇವಿಸುತ್ತಿರಲಾಗಿ ಎಂಬ ಶಬ್ದಕ್ಕರ್ಥ. ಅಂತು ಸುಜ್ಞಾನ ಪ್ರಕಾಶದಿಂ ಜೀವನ ಸಕಲ ಪ್ರಪಂಚು ನಿವೃತ್ತಿಯಾಗಲು ಪಿಂಡಬ್ರಹ್ಮಾಂಡಂಗಳ ನವಗ್ರಹಿಸಿ ಚೈತನ್ಯ ಸ್ವರೂಪವಾಗಿರ್ಪ ಮಹಾಘನಲಿಂಗವು ಗುರುಮುಖದಿಂ ಪ್ರತ್ಯಕ್ಷವಾಗಿ ಕರಸ್ಥಲಕ್ಕೆ ಬಂದು ಆ ಸಜ್ಜೀವನ ಸರ್ವಾಂಗವನವಗ್ರಹಿಸಿತ್ತೆಂಬುದೀಗ ಶಾರ್ದೂಲ ಹೋಯಿತ್ತೆಂಬ ಶಬ್ದಕ್ಕರ್ಥ. ಇಂತು ಸರ್ವಾಂಗಲಿಂಗ ಸಂಬಂಧವಾಗಲು ಆ ಸುಜ್ಞಾನ ಪ್ರಕಾಶವೆಂಬ ಕೇಸರಿ ಆ ಜೀವನ ಸಂಹರಿಸಬೇಕೆಂಬ ವೈರವಿಲ್ಲದೆ ಮಹಾಘನಲಿಂಗದಲ್ಲಿ ಲೀಯವಾಯಿತ್ತೆಂಬುದೀಗ ಕೇಸರಿ ಬಿಟ್ಟಿತ್ತೆಂಬ ಶಬ್ದಕ್ಕರ್ಥ. ಅಂತು ಜೀವನ ಅನಿತ್ಯಭಾವವಳಿದು ನಿತ್ಯವಾದ ಶಿವಪದವನೆಯ್ದಿದನೆಂಬುದೀಗ ಗಜ ಬದುಕಿತ್ತೆಂಬ ಶಬ್ದಕ್ಕರ್ಥ. ಅಂತು ಮಹಾಘನಲಿಂಗದಲ್ಲಿ ಅವಿರಳ ಸಂಬಂಧಿಯಾದ ಶರಣಂಗೆ ಆ ಪರಬ್ರಹ್ಮವ ಕಂಡು ಕೂಡಿಹೆನೆಂಬ ಸಂಕಲ್ಪ ನಿವೃತ್ತಿಯಾಗಲು ಶರಣಲಿಂಗವೆಂಬುಭಯವಳಿದು ನಿರಾಕಾರ ಬ್ರಹ್ಮವೇಯಾದನೆಂಬುದೀಗ ಶಾರ್ದೂಲ ಶಂಕೆ ಹರಿಯಿತ್ತು ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವು ಲೀಲೆಗೆ ಹೊರಗಾಗಿ ಸ್ವಯಂಭುವಾಯಿತ್ತೆಂಬ ಶಬ್ದಕ್ಕರ್ಥ.

೨೮. ನಡೆದು ನಡೆಯದವನ ಕಂಡು, ನುಡಿದು ನುಡಿಯದವನ ಕಂಡು, ಅರಿದು ಅರಿಯದವನ ಕಂಡು, ತ್ರಿವಿಧ ಭೇದಂಗಳಲ್ಲಿ ಭೇದಿಸಿ ಭೇದಿಸಿ ನಿಂದುದು ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವು ನಿಂದ ನಿವಾಸ.

ಟೀಕು:-ಶಿವಜ್ಞಾನೋದಯವಾಗಿ ಶ್ರೀಗುರುಕಾರುಣ್ಯದಿಂ ಸರ್ವಾಂಗಲಿಂಗಸಂಬಂಧವಾದ ಶರಣನು ಅಭಿನ್ನ ಕ್ರಿಯಾಚಾರವಿಡಿದು ಆಚರಿಸುತ್ತಿಹನಲ್ಲದೆ ಭಿನ್ನ ಕ್ರಿಯಾಚಾರ ವಿಡಿದು ಆಚರಿಸನೆಂಬುದೀಗ ನಡೆದು ನಡೆಯದವನ ಕಂಡು ಎಂಬ ಶಬ್ದಕ್ಕರ್ಥ. ಅಂತು ಸುಜ್ಞಾನದಲ್ಲಿ ನಿರ್ಭರವಾದ ಶರಣನು ಶಿವೋಹಂ ಶಿವೋಹಂ ಎನ್ನುತ್ತಿಹನಲ್ಲದೆ ಅಹಂ ಬ್ರಹ್ಮವೆಂದು ವಾಗದ್ವೈತವ ನುಡಿಯನೆಂಬುದೀಗ ನುಡಿದು ನುಡಿಯದವನ ಎಂಬ ಶಬ್ದಕ್ಕರ್ಥ. ಆ ಶಿವೋಹಂಭಾವದಲ್ಲಿರ್ದ ಶರಣ

ತನ್ನ ನಿಜಸ್ವರೂಪವಾದ ಪರಬ್ರಹ್ಮವನು ಅಭಿನ್ನಜ್ಞಾನದಿಂದರಿವುತ್ತಿಹ ನಲ್ಲವೆ ಭಿನ್ನಜ್ಞಾನದಿಂದರಿಯನೆಂಬುದೀಗ ಅರಿವು ಅರಿಯದವನ ಕಂಡು ಎಂಬ ಶಬ್ದಕ್ಕರ್ಥ. ಅಂತ ಸುಜ್ಞಾನ ದೃಷ್ಟಿಯಿಂ ನೋಡುತ್ತಿರ್ದ ಶರಣ ತನ್ನಂಗತ್ರಯಂಗಳಲ್ಲಿ ಸಂಬಂಧವಾದ ತ್ರಿವಿಧ ಲಿಂಗಂಗಳು ತ್ರಿವಿಧ ಭಕ್ತಿ ಗಳಿಂದವಗ್ರಹಿಸಿ ತ್ರಿವಿಧ ಭಕ್ತಿಯನು ತ್ರಿವಿಧ ಲಿಂಗಾಂಗಗಳಲ್ಲಿ ಏಕಾರ್ಥವ ಮಾಡಿ ಸಮರಸೈಕ್ಯವಾದನೆಂಬುದೀಗ ತ್ರಿವಿಧ ಭೇದಂಗಳಲ್ಲಿ ಭೇದಿಸಿ ವೇಧಿಸಿ ನಿಂದುದು ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ನಿಂದ ನಿವಾಸ ಎಂಬ ಶಬ್ದಕ್ಕರ್ಥ.

೨೯. ಕಿರಾತಂಗೆ ಪಿತಿತದ ಅರೋಚಿಕೆಯುಂಟೇ? ಪುಳಿಂದಂಗೆ ಶಿಶು ಬಲು ಜೀವನೆಂದು ಒಲವರವುಂಟೇ? ಹೊಟ್ಟೆಯ ಹೊರುವಾತಂಗೆ ಭಕ್ತವಿರಕ್ತರಾಗು ಜಾಗೆಯುಂಟಲ್ಲನೇ? ಇಂತೀ ಕಷ್ಟದ ದುಷ್ಟರನೊಲ್ಲ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು.

೩೦. ಕಾಯ ಜೀವವನರಿದಲ್ಲಿ ಇಷ್ಟಪೂಜೆಯ ಮರೆದಿರಬೇಕು. ದಿವದಲ್ಲಿ ನಡೆಯದೆ, ರಾತ್ರಿಯಲ್ಲೊರಗದೆ ಅರ್ಪಿತವಿಲ್ಲದಿರಬೇಕು. ಸ್ತುತಿ ನಿಂದೆಗೆ ಹೊರಗಾದಲ್ಲಿ ಋತುಕಾಲವ ಮರೆದಿರಬೇಕು. ಮಾತಿನಲ್ಲಿ ಶೂನ್ಯ, ಆತ್ಮನಲ್ಲಾಶೆಯ ಪಾಶ, ಇಂತೀ ವೇಷದ ಚೋರರನೊಪ್ಪ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವು.

೩೧. ಕಾಯಕವೆಂದು ಕಾಯವ ಬಳಲಿಸದೆ ತನು ಕರಗನೆ ಮನ ನೋಯದೆ ಬೇಡಿ ಕಾಡಿ ಮಾಡುವುದು ದಾಸೋಹವೇ? ಆವ ಕಾಯಕವಾದಡೂ ಪ್ರಾಣವೇ ಕಡೆಯಾಗಿ ದ್ರವ್ಯಕಡೆಯಾಗಿ ಚಿತ್ತ ಶುದ್ಧ ದಲ್ಲಿ ಬಂದುದಕ್ಕೆ ಸರಿಗಂಡು ದೇಹಿಗಳಿಗೆ ಒಂದೇ ಪ್ರಮಾಣದಲ್ಲಿ ಸರಿಗಂಡುದು ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ತೃಪ್ತಿ.

೩೨. ಈಶ್ವರರೂಪವ ತಾಳಿ ಜಗಜ್ಜೀವ ಜಾಲರುಗಳ ಬಾಗಿಲಲ್ಲಿ ನಿಲ್ಲುವನ್ನಬರ ಹೋಯಿತ್ತು ವೇಷ. ಈ ಆಶೆಯ ಬಿಟ್ಟು ಈಶನ ರೂಪ ತಾಳಿದಾತ ವಸ್ತು. ಆತ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ತಾನೆ.

೩೩. ಅಂದಣ ಸತ್ತಿಗೆ ಕರಿ ತುರಂಗಗಳಿಂದೆ ಮನಗುಂದದೆ, ಗುರು ಚರ ಪರವೆಂದು ಪ್ರಮಾಣಿಸಿ, ಪರಿಯನರಿದೆನೆಂದು ಓಸರಿಸಿದಲ್ಲಿಯೇ ಸರಿಯಿತ್ತು. ಮತ್ತೇನ ಮಾಡಿದಡೆಯೂ ಪರಿಹರಿಸುವುದಿಲ್ಲ. ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವು ಆವರಿಗೊಲವರವಿಲ್ಲ.

# ವಚನಶಾಸ್ತ್ರಸಾರ ಗ್ರಂಥಗಳು.

( ರಾ। ಸಾ। ಪಿ. ಜಿ. ಹಳಕಟ್ಟಿ ಇವರಿಂದ ವಿರಚಿತವಾದವುಗಳು. )

| | |
|---|---|
| (೧) ವಚನಶಾಸ್ತ್ರಸಾರ ಭಾಗ ೧ ಪೂರ್ವಾರ್ಧ | ೨-೮-೦ |
| (೨) ,, ,, ಉತ್ತರಾರ್ಧ | ೧-೧೨-೦ |

ಈ ಎರಡು ಗ್ರಂಥಗಳ ಮೂಲಕ ವೀರಶೈವ ಧರ್ಮದ ಸಾಮಾನ್ಯ ತತ್ವಗಳನ್ನು ಅರಿಯಬಹುದು.

| | |
|---|---|
| (೩) ವಚನಶಾಸ್ತ್ರಸಾರ ಭಾಗ ೨ | ೪-೮-೦ |

ಇದರಲ್ಲಿ ಷಟ್‌ಸ್ಥಲ ಸಿದ್ಧಾಂತದ ನಿರೂಪಣೆ ಇದೆ.

| | |
|---|---|
| (೪) ವಚನಶಾಸ್ತ್ರಸಾರ ಭಾಗ ೩ ಪೂರ್ವಾರ್ಧ | ೨-೪-೦ |

ಇದರಲ್ಲಿ ವೀರಶೈವರ ಕ್ರಿಯೆಗಳ ಮತ್ತು ಅಷ್ಟಾವರಣಗಳ ಸಾಮಾನ್ಯ ನಿರೂಪಣೆ ಇರುವದಲ್ಲದೆ ಗುರು, ಲಿಂಗ, ಜಂಗಮ ಇವುಗಳ ಸವಿಸ್ತಾರವಾದ ವಿವರಣೆ ಇರುತ್ತದೆ.

ಈ ನಾಲ್ಕು ಗ್ರಂಥಗಳ ಒಟ್ಟು ಪುಟ ಸಂಖ್ಯೆ ೧೫೮೩ ಇದ್ದು ಇವುಗಳ ಬೆಲೆಯು ೧೧ ರೂಪಾಯಿ ಇರುತ್ತದೆ. ಆದರೆ ಈ ಗ್ರಂಥಗಳೆಲ್ಲವನ್ನೂ ಏಕಕಾಲಕ್ಕೆ ತೆಗೆದುಕೊಂಡಲ್ಲಿ ಅವುಗಳು ಮೂರುನಾಲ್ಕಾಂಶ ಬೆಲೆಗೆ ಅಂದರೆ ಒಟ್ಟು ೮-೪-೦ ರೂಪಾಯಿಗಳಿಗೆ ದೊರೆಯುವವು. ಟಪಾಲಖರ್ಚು ಪ್ರತ್ಯೇಕ.

ದೊರೆಯುವ ಸ್ಥಳ—

**ಹಿತಚಿಂತಕ ಪ್ರಿಂಟಿಂಗ ಪ್ರೆಸ್**

ಇದನ್ನು ವಿಜಾಪುರದಲ್ಲಿ ರಾ। ಸಾ। ಫ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ಉಪಲೀ ಬುರುಜ ಓಣಿಯಲ್ಲಿರುವ ತಮ್ಮ ೧೩೦ (ಅ) ಮನೆಯಲ್ಲಿ ಪ್ರಸಿದ್ಧಿಸಿದರು.

B.S. Gavachari
M.A. B.T.

R. N. B. 2554

B.S. Gavachari
B.A. (Hons) M.A. ...
B.T.

ಶ್ರೀ

# ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩-೬-೦

ಸಂಪುಟ ೧೪ ] ಏಪ್ರೀಲ-ಮೇ ೧೯೪೦. [ ಸಂಚಿಕೆ ೭-೮

## ವಿಷಯಾನುಕ್ರಮಣಿಕೆ.

| ವಿಷಯಗಳು. | ಲೇಖಕರು. | ಪುಟ. |
|---|---|---|
| ೧ ವೀರಶೈವ ಮಾನಸ ಶಾಸ್ತ್ರ | ಶ್ರೀ: ವೀರಪ್ಪ ಯಂಗಟಿ ವಕೀಲ ಹಾವೇರಿ | ೩೧೭ |
| ೨ ಕನ್ನಡ ಸಾಹಿತ್ಯ ಸಿಂಹಾವಲೋಕನ | ಶ್ರೀ. ಶಿವಮೂರ್ತಿ. | ೩೨೭ |
| ೩ ಸೃಷ್ಟಿಯ ಉತ್ಪತ್ತಿಯೂ ಶಿವಯೋಗದ ಮಹಿಮೆಯೂ | ಶ್ರೀ ರು. ಶಿ. ಕೊಟಗಿ, ಗಜೇಂದ್ರಗಡ | ೩೪೪ |
| ೪ ಹರಿಶ್ಚಂದ್ರ ಚಾರಿತ್ರ್ಯದಲ್ಲಿಯ ರಸವಿಚಾರ. | ಶ್ರೀ ರಾಘವೇಂದ್ರ ಕುಲಕರ್ಣಿ | ೩೫೨ |
| ೫ ವೀರಶೈವ ವಾಙ್ಮಯಾವತಾರ | ರಾ. ಸಾ. ಫ. ಗು. ಹಳಕಟ್ಟಿ. | ೩೬೦ |
| ೬ ವಚನಗಳು | — | ೭೭ |
| ೭ ಪಂಚಾಸನ ರಗಳೆಗಳು ಭಾಗ ೭ | — | ೬೩ |

B S Ganachari, M.A., B.T.

B

# ಶಿವಾನುಭವ.


| | | |
|---|---|---|
| ವರ್ಷ ೧೪ | ಎಪ್ರೇಲ-ಮೇ. ೧೯೪೦ | ಸಂಚಿಕೆ ೭-೮ |


## ವೀರಶೈವರ ಮಾನಸ ಶಾಸ್ತ್ರ.


(ಲೇಖಕ:— ವೀರಪ್ಪ ಯಂಗಟಿ ಬಿ. ಎ. ಎಲ್. ಎಲ್. ಬಿ.
ವಕೀಲ ಹಾವೇರಿ.)


ವೀರಶೈವ ಧರ್ಮವು ಮಾನಸಶಾಸ್ತ್ರದ ತಳಹದಿಯ ಮೇಲೆ ರಚಿಸಲ್ಪಟ್ಟಿರುವದು. ಮನುಷ್ಯನು ತನ್ನ ಲೌಕಿಕ ಆಚರಣೆಯಲ್ಲಿಯೂ ಪ್ರತಿಯೊಂದು ವಿಚಾರ, ನುಡಿ, ನಡೆಗಳಲ್ಲಿಯೂ ಶುದ್ಧವಾಗಿದ್ದು ಪಾರಮಾರ್ಥಿಕ ದೃಷ್ಟಿಯಿಂದ ವರ್ತಿಸಿ ದೈವೀ ಸ್ವರೂಪ ಹೊಂದುವದೇ ಅವನ ಧೇಯವು. ಇದಕ್ಕೆ ಧರ್ಮವೆಂದು ಹೇಳುವರು. ಧರ್ಮವು ಮೂಢನಂಬಿಕೆಯ ಆಧಾರದ ಮೇಲೆ ರಚಿಸಲ್ಪಟ್ಟಿದ್ದರೆ ಅದು ಸರ್ವ ಸಮ್ಮತವಾಗಲಾರದು. ಧರ್ಮವು ವಿಜ್ಞಾನಶಾಸ್ತ್ರಕ್ಕೆ ಸಮ್ಮತವಾಗಿದ್ದು ಕೊನೆಯಲ್ಲಿ ವಿಜ್ಞಾನದ ಮೇರೆಯನ್ನು ಮೀರಿ ಹೋಗಬಲ್ಲುದಾಗಿದೆ ದೇವರಿದ್ದಾನೆಂಬ ಮೇರೆಯ ವರೆಗೆ ವಿಜ್ಞಾನ ಮತ್ತು ಧರ್ಮಗಳು ಕೂಡಿಯೇ ಹೋಗುವವು. ಆದರೆ ದೇವರ ಸಾಕ್ಷಾತ್ಕಾರದ ವಿಷಯವು ಬಂದಾಗ ವಿಜ್ಞಾನದ ಹೆಜ್ಜೆಯು ನಿಲ್ಲುವದು. ಧರ್ಮವೊಂದೇ ಅದನ್ನು ಸಾಧಿಸುವದು. ವಿಜ್ಞಾನವು ಬಾಹ್ಯಸಾಧನಗಳಿಂದ ಅಂತರಂಗವನ್ನು ಶೋಧಿಸಲು ಹೊರಟಿದೆ. ಆದರೆ ಧರ್ಮವು ಅಂತರಂಗದಿಂದ ಅಂತರಂಗವನ್ನೇ ಶೋಧಿಸುವದು ( *introspection* ). ಅಂತರಂಗದಲ್ಲಿರುವ ಆತ್ಮನೇ ಪರಮಾತ್ಮನೆಂದು ಗೊತ್ತುಹಚ್ಚುವದು ಹೇಗೆ ಸಾಧ್ಯವಿದೆಯೋ ಹಾಗೆ ವಿಜ್ಞಾನಕ್ಕೆ

ಸಾಧ್ಯವಿಲ್ಲ. ವೀರಶೈವ ಧರ್ಮವು ಪರಮಾತ್ಮನ ಸಾಕ್ಷಾತ್ಕಾರದಲ್ಲಿ ಯಾವ ಮಾನಸಶಾಸ್ತ್ರದ ಸಾಮಾನ್ಯಸ್ವರೂಪವನ್ನು ಸಂಕ್ಷಿಪ್ತವಾಗಿ ವಿವರಿಸುವದು ವಿಹಿತವಾಗಿದೆ.

ಆಧುನಿಕ ಮಾನಸಶಾಸ್ತ್ರದ ಪ್ರಕಾರ ಪ್ರತಿಯೊಂದು ಶರೀರವು ಅನೇಕ ಅಣುಕೋಶಗಳಿಂದ ( ಜೀವಕೋಶ-*cell* ) ರಚಿತವಾಗಿದೆ. ಪ್ರತಿಯೊಂದು ಅಣುಕೋಶವು ಪ್ರತ್ಯೇಕವಾಗಿ ಜೀವಿಸಿರಬಲ್ಲುದು. ಅದು ರಕ್ತದಲ್ಲಿ ವಾಸವಾಗಿದ್ದು ರಕ್ತದಿಂದ ಪೋಷಣೆಯಾಗುತ್ತಿರುವದು. ಇಂತಹ ಅನೇಕ ಅಣುಕೋಶಗಳ ಕೂಡುವಿಕೆಯಿಂದ ದೇಹದಲ್ಲಿ ನರಗಳುಂಟಾಗಿವೆ. ನರಗಳಿಂದ ದೇಹದ ವಿವಿಧಭಾಗಗಳಿಗೆ ರಕ್ತಸಂಚಾರವೂ, ಸುಖದುಃಖಗಳ ಸುದ್ದಿಯೂ, ಪ್ರೇರಣೆ, ಆಜ್ಞೆಗಳೂ ಕಳಿಸಲ್ಪಡುವವು. ನರಗಳ ಸಮೂಹವು ಎರಡು ವಿಧವಾಗಿದೆ. (೧) ಮಧ್ಯಭಾಗ ಮತ್ತು (೨) ಅಂಚಿನ ಭಾಗ. ಮಧ್ಯಭಾಗದಲ್ಲಿ ಮಿದುಳು ಮತ್ತು ಬೆನ್ನುಹುರಿಗಳಿವೆ. ಬೆನ್ನುಹುರಿಯು ( *spinal cord* ) ಬೆನ್ನೆಲುಬಿನಲ್ಲಿ ಹಾಯ್ದು ತಲೆಯಲ್ಲಿ ಒಂದು ಕೂಡಿರುವದು. ತಲೆಬುರುಡಿಯಲ್ಲಿಯ ಮಿದುಳು ಮೂರು ಭಾಗವಾಗಿದೆ. (೧) ಹಿಂದಿನ ಮಿದುಳು ( *cerebellum* ). ಇದು ದೇಹವನ್ನು ಸಮತೋಲವಾಗಿಡಬಲ್ಲುದು. (೨) ಮಧ್ಯಮಿದುಳು ಮತ್ತು (೩) ಮುಂಭಾಗದ ಮಿದುಳು (*cerebrum* ). ನರಗಳ ಅಂಚಿನ ಭಾಗವು ಮಧ್ಯಭಾಗವನ್ನು ಇಂದ್ರಿಗಳೊಡನೆ ಮಾಂಸ ಗ್ರಂಥಿಗಳೊಡನೆ, ಸ್ನಾಯುಗಳೊಡನೆ ಬಂಧಿಸಿರುವದು. ಯಾವತ್ತು ಮಿದುಳು ಸಹ ನರಸಮೂಹವಿದ್ದು ಅದು ಮುಖ್ಯ ತಂತಿಯ ಕಚೇರಿಯಂತಿದ್ದು ದೇಹದಲ್ಲಿಯ ಉಳಿದ ಯಾವತ್ತು ಇಂದ್ರಿಯಗಳ ಕ್ರಿಯೆಗಳನ್ನು ನಿಯಂತ್ರಣಮಾಡುವದು ಮತ್ತು ಅವುಗಳಮೇಲೆ ಅಧಿಕಾರ ನಡಿಸುವದು. ಮುಂಭಾಗದ ಮಿದುಳು ದೇಹದ ಚಲನವಲನಗಳನ್ನು ತಡೆಯಬಲ್ಲುದು ಅಥವಾ ಚಲನೆಯನ್ನುಂಟು ಮಾಡಬಲ್ಲದು. ಮಿದುಳಿನಿಂದ ಪ್ರತಿಯೊಂದು ಇಂದ್ರಿಯಕ್ಕೆ ನರಗಳ ಮೂಲಕ ಸಂಬಂಧವುಂಟು. ಕಣ್ಣಿನಲ್ಲಿ ಹುಳ ಮುಂತಾದ್ದು ಬಿದ್ದರೆ ಅಂತರವಾಹಕ ನರಗಳು (*afferent nerves* ) ಮಿದುಳಿಗೆ ಸುದ್ದಿಯನ್ನು ತಿಳಿಸುವವು. ಮಿದುಳು ಕೂಡಲೇ ಬಹಿರ್ವಾಹಕ ನರಗಳ ಮೂಲಕ (*efferent nerves*) ರೆಪ್ಪೆಗಳಿಗೆ ಆಜ್ಞೆ ಮಾಡುವದು. ಆಗ ರೆಪ್ಪೆಗಳು ಅಲ್ಲಾಡುವದರ ಮೂಲಕ ಹುಳವು ಕಣ್ಣಿನಿಂದ ಹೊರಬೀಳುವದು. ಹೀಗೆ ಪ್ರತಿಯೊಂದು ಇಂದ್ರಿಯದ ಕಾರ್ಯವು



ಮಿದುಳಿನ ಸಹಾಯದಿಂದಲೇ ನಡೆಯುವದು. ಮಿದುಳಿನಲ್ಲಿ ಕಣ್ಣಿಗೆ ಸಂಬಂಧಿಸಿದ ನರದ ಕೇಂದ್ರವು ನಷ್ಟವಾದರೆ ಕಣ್ಣು ಕಾಣದಹಾಗೆ ಆಗುವದು. ಕಿವಿಗೆ ಸಂಬಂಧಿಸಿದ ನರದ ಕೇಂದ್ರವು ನಷ್ಟವಾದರೆ ಕಿವಿಯು ಕೇಳದಂತಾಗುವದು. ಮನಸ್ಸು, ಬುದ್ಧಿಗಳು ಮಿದುಳಿನಲ್ಲಿದ್ದು ಮಿದುಳಿನಿಂದಲೇ ಉತ್ಪನ್ನವಾಗಿವೆ. ಈ ಪ್ರಕಾರ ದೇಹದಲ್ಲಿ ಮಿದುಳಿನ ಮಹತ್ವವನ್ನು ಆಧುನಿಕ ಮಾನಸಶಾಸ್ತ್ರವು ವಿವರಿಸುತ್ತದೆ. ಇನ್ನು ವೀರಶೈವ ಮಾನಸಶಾಸ್ತ್ರವೇನಿದೆಯೆಂಬದನ್ನು ನೋಡುವ.

ಆಧುನಿಕ ಮಾನಸಶಾಸ್ತ್ರವು ತಲೆಯಲ್ಲಿಯ ಮಿದುಳನ್ನು ಮೂರು ಭಾಗವಾಗಿರುವದೆಂದು ತಿಳಿದಿರುವಂತೆಯೇ ವೀರಶೈವ ಮಾನಸಶಾಸ್ತ್ರವಾದರೂ ಹಾಗೆಯೇ ತಿಳಿದಿರುವದು ವಿಶೇಷ ಸಂಗತಿಯಾಗಿದೆ. ಮುಂಭಾಗದ ಮಿದುಳನ್ನು ವೀರಶೈವವು ಬ್ರಹ್ಮರಂಧ್ರವೆಂದು ಕರೆದಿರುವದು. ಇದು ಸಾವಿರದಳ ಅಥವಾ ಸಾವಿರ ನರಸಮೂಹವುಳ್ಳದ್ದು. ಇದರಲ್ಲಿ ಚಿತ್ಕಳೆಯು ಜೀವ ರೂಪದಿಂದಿರುವದು. ಈ ಬ್ರಹ್ಮರಂಧ್ರದಲ್ಲಿರುವ ಜೀವಾತ್ಮವು ತೇಜೋರೂಪವಾದ ನಿಷ್ಕಲ ಲಿಂಗವೆಂದು ಕರೆಯಲ್ಪಟ್ಟಿದೆ. ಮಧ್ಯದ ಮಿದುಳಿಗೆ ಶಿಖಾಚಕ್ರವೆಂದು ವೀರಶೈವವು ಹೆಸರಿಟ್ಟಿದೆ. ಇದು ಮೂರು ದಳವುಳ್ಳದ್ದು ಅಥವಾ ಮೂರು ನರಸಮೂಹವುಳ್ಳದ್ದು. ಇದರಲ್ಲಿ ಪ್ರಾಣವು ಮಹಾಜ್ಯೋತಿ ರೂಪವಾದ ಶೂನ್ಯಲಿಂಗವೆಂದು ಕರೆಯಲ್ಪಟ್ಟಿದೆ. ಹಿಂಭಾಗದ ಮಿದುಳು ಪಶ್ಚಿಮಚಕ್ರವೆಂದು ಕರೆಯಲ್ಪಟ್ಟಿದೆ. ಇದು ಏಕ ದಳವುಳ್ಳದ್ದು ಅಥವಾ ಒಂದೇ ನರದಿಂದ ಕೂಡಿದ್ದು ಇರುವದು. ಇದರಲ್ಲಿ ಪರಂಜ್ಯೋತಿ ರೂಪವಾದ ಆತ್ಮವು ನಿರಂಜನ ಲಿಂಗವೆಂದು ಕರೆಯಲ್ಪಟ್ಟಿದೆ. ಈ ಮಿದುಳಿನ ಕೆಳಭಾಗದಲ್ಲಿಯೇ ಬೆನ್ನುಹುರಿಯು ಬಂದು ಕೂಡುವದು ಈ ಪ್ರಕಾರ ವೀರಶೈವದ ವಿವರಣೆಯು ಆಧುನಿಕ ಮಾನಸಶಾಸ್ತ್ರದ ವಿವರಣೆಗೆ ಸಾಮ್ಯವಾಗಿದೆ. ಆದರೆ ವೀರಶೈವವು ಇಷ್ಟು ವಿವರಣೆಯಿಂದ ತೃಪ್ತವಾಗಿ ನಿಂತಿಲ್ಲ. ಆಧುನಿಕ ಮಾನಶಾಸ್ತ್ರವು ಪ್ರಾಣ ಒಂದಕ್ಕೆಯೇ ಮನಸು (*mind*) ಜೀವ (*self*) ಆತ್ಮ (*soul*) ಎಂಬ ಬೇರೆ ಬೇರೆ ಹೆಸರಿಟ್ಟಿದೆ. ಆದರೆ ವೀರಶೈವವು ಮನಸು, ಬುದ್ಧಿಗಳು ಮಿದುಳಿನಿಂದ ಉತ್ಪನ್ನವಾದ ಅಂಗಗಳಿದ್ದು ಭೌತಿಕ ಘಟನೆಯುಳ್ಳ ಸ್ಥೂಲ ವಸ್ತುಗಳೆಂದೂ ಅವುಗಳು ಜೀವದ ಪ್ರೇರಣೆಯಿಂದ ಕೆಲಸ ಮಾಡುವವೆಂದೂ ಹೇಳುವದು. ಪ್ರಾಣವು ಸಹ ಭೌತಿಕ ವಸ್ತುವು. ಪ್ರಾಣವು

ಸಾಧ್ಯವಿಲ್ಲ. ವೀರಶೈವ ಧರ್ಮವು ಪರಮಾತ್ಮನ ಸಾಕ್ಷಾತ್ಕಾರದಲ್ಲಿ ಯಾವ ಮಾನಸಶಾಸ್ತ್ರದ ಸಾಮಾನ್ಯಸ್ವರೂಪವನ್ನು ಸಂಕ್ಷಿಪ್ತವಾಗಿ ವಿವರಿಸುವದು ವಿಹಿತವಾಗಿದೆ.

ಆಧುನಿಕ ಮಾನಸಶಾಸ್ತ್ರದ ಪ್ರಕಾರ ಪ್ರತಿಯೊಂದು ಶರೀರವು ಅನೇಕ ಅಣುಕೋಶಗಳಿಂದ ( ಜೀವಕೋಶ-*cell* ) ರಚಿತವಾಗಿದೆ. ಪ್ರತಿಯೊಂದು ಅಣುಕೋಶವು ಪ್ರತ್ಯೇಕವಾಗಿ ಜೀವಿಸಿರಬಲ್ಲುದು. ಅದು ರಕ್ತದಲ್ಲಿ ವಾಸವಾಗಿದ್ದು ರಕ್ತದಿಂದ ಪೋಷಣೆಯಾಗುತ್ತಿರುವದು. ಇಂತಹ ಅನೇಕ ಅಣುಕೋಶಗಳ ಕೂಡುವಿಕೆಯಿಂದ ದೇಹದಲ್ಲಿ ನರಗಳುಂಟಾಗಿವೆ. ನರಗಳಿಂದ ದೇಹದ ವಿವಿಧಭಾಗಗಳಿಗೆ ರಕ್ತಸಂಚಾರವೂ, ಸುಖದುಃಖಗಳ ಸುದ್ದಿಯೂ, ಪ್ರೇರಣೆ, ಆಜ್ಞೆಗಳೂ ತಿಳಿಸಲ್ಪಡುವವು. ನರಗಳ ಸಮೂಹವು ಎರಡು ವಿಧವಾಗಿದೆ. (೧) ಮಧ್ಯಭಾಗ ಮತ್ತು (೨) ಅಂಚಿನ ಭಾಗ. ಮಧ್ಯಭಾಗದಲ್ಲಿ ಮಿದುಳು ಮತ್ತು ಬೆನ್ನುಹುರಿಗಳಿವೆ. ಬೆನ್ನುಹುರಿಯು ( *spinal cord* ) ಬೆನ್ನೆಲುಬಿನಲ್ಲಿ ಹಾಯ್ದು ತಲೆಯಲ್ಲಿ ಬಂದು ಕೂಡಿರುವದು. ತಲೆಬುರುಡಿಯಲ್ಲಿಯ ಮಿದುಳು ಮೂರು ಭಾಗವಾಗಿದೆ. (೧) ಹಿಂದಿನ ಮಿದುಳು ( *cerebellum* ). ಇದು ದೇಹವನ್ನು ಸಮತೋಲಾಗಿಡಬಲ್ಲುದು. (೨) ಮಧ್ಯಮಿದುಳು ಮತ್ತು (೩) ಮುಂಭಾಗದ ಮಿದುಳು (*cerebrum* ). ನರಗಳ ಅಂಚಿನ ಭಾಗವು ಮಧ್ಯಭಾಗವನ್ನು ಇಂದ್ರಿಗಳೊಡನೆ ಮಾಂಸ ಗ್ರಂಥಿಗಳೊಡನೆ, ಸ್ನಾಯುಗಳೊಡನೆ ಬಂಧಿಸಿರುವದು. ಯಾವತ್ತು ಮಿದುಳು ಸಹ ನರಸಮೂಹವಿದ್ದು ಅದು ಮುಖ್ಯ ತಂತಿಯ ಕಚೇರಿಯಂತಿದ್ದು ದೇಹದಲ್ಲಿಯ ಉಳಿದ ಯಾವತ್ತು ಇಂದ್ರಿಯಗಳ ಕ್ರಿಯೆಗಳನ್ನು ನಿಯಂತ್ರಣಮಾಡುವದು ಮತ್ತು ಅವುಗಳಮೇಲೆ ಅಧಿಕಾರ ನಡಿಸುವದು. ಮುಂಭಾಗದ ಮಿದುಳು ದೇಹದ ಚಲನವಲನಗಳನ್ನು ತಡೆಯಬಲ್ಲುದು ಅಥವಾ ಚಲನೆಯನ್ನುಂಟು ಮಾಡಬಲ್ಲದು. ಮಿದುಳಿನಿಂದ ಪ್ರತಿಯೊಂದು ಇಂದ್ರಿಯಕ್ಕೆ ನರಗಳ ಮೂಲಕ ಸಂಬಂಧವುಂಟು. ಕಣ್ಣಿನಲ್ಲಿ ಹುಳ ಮುಂತಾದ್ದು ಬಿದ್ದರೆ ಅಂತರವಾಹಕ ನರಗಳು (*afferent nerves* ) ಮಿದುಳಿಗೆ ಸುದ್ದಿಯನ್ನು ತಿಳಿಸುವವು. ಮಿದುಳು ಕೂಡಲೇ ಬಹಿರ್ವಾಹಕ ನರಗಳ ಮೂಲಕ (*efferent nerves*) ರೆಪ್ಪೆಗಳಿಗೆ ಆಜ್ಞೆ ಮಾಡುವದು. ಆಗ ರೆಪ್ಪೆಗಳು ಅಲ್ಲಾಡುವದರ ಮೂಲಕ ಹುಳವು ಕಣ್ಣಿನಿಂದ ಹೊರಬೀಳುವದು. ಹೀಗೆ ಪ್ರತಿಯೊಂದು ಇಂದ್ರಿಯದ ಕಾರ್ಯವು



ಮಿದುಳಿನ ಸಹಾಯದಿಂದಲೇ ನಡೆಯುವದು. ಮಿದುಳಿನಲ್ಲಿ ಕಣ್ಣಿಗೆ ಸಂಬಂಧಿಸಿದ ನರದ ಕೇಂದ್ರವು ನಷ್ಟವಾದರೆ ಕಣ್ಣು ಕಾಣದಹಾಗೆ ಆಗುವದು. ಕಿವಿಗೆ ಸಂಬಂಧಿಸಿದ ನರದ ಕೇಂದ್ರವು ನಷ್ಟವಾದರೆ ಕಿವಿಯು ಕೇಳದಂತಾಗುವದು. ಮನಸ್ಸು, ಬುದ್ಧಿಗಳು ಮಿದುಳಿನಲ್ಲಿದ್ದು ಮಿದುಳಿನಿಂದಲೇ ಉತ್ಪನ್ನವಾಗಿವೆ. ಈ ಪ್ರಕಾರ ದೇಹದಲ್ಲಿ ಮಿದುಳಿನ ಮಹತ್ವವನ್ನು ಆಧುನಿಕ ಮಾನಸಶಾಸ್ತ್ರವು ವಿವರಿಸುತ್ತದೆ. ಇನ್ನು ವೀರಶೈವ ಮಾನಸಶಾಸ್ತ್ರವೇನಿದೆಯಂಬದನ್ನು ನೋಡುವ.

ಆಧುನಿಕ ಮಾನಸಶಾಸ್ತ್ರವು ತಲೆಯಲ್ಲಿಯ ಮಿದುಳನ್ನು ಮೂರು ಭಾಗವಾಗಿರುವದೆಂದು ತಿಳಿದಿರುವಂತೆಯೇ ವೀರಶೈವ ಮಾನಸಶಾಸ್ತ್ರವಾದರೂ ಹಾಗೆಯೇ ತಿಳಿದಿರುವದು ವಿಶೇಷ ಸಂಗತಿಯಾಗಿದೆ. ಮುಂಭಾಗದ ಮಿದುಳನ್ನು ವೀರಶೈವವು ಬ್ರಹ್ಮರಂಧ್ರವೆಂದು ಕರೆದಿರುವದು. ಇದು ಸಾವಿರದಳ ಅಥವಾ ಸಾವಿರ ನರಸಮೂಹವುಳ್ಳದ್ದು. ಇದರಲ್ಲಿ ಚಿತ್ಕಳೆಯು ಜೀವ ರೂಪದಿಂದಿರುವದು. ಈ ಬ್ರಹ್ಮರಂಧ್ರದಲ್ಲಿರುವ ಜೀವಾತ್ಮವು ತೇಜೋರೂಪವಾದ ನಿಷ್ಕಲ ಲಿಂಗವೆಂದು ಕರೆಯಲ್ಪಟ್ಟಿದೆ. ಮಧ್ಯದ ಮಿದುಳಿಗೆ ಶಿಖಾಚಕ್ರವೆಂದು ವೀರಶೈವವು ಹೆಸರಿಟ್ಟಿದೆ. ಇದು ಮೂರು ದಳವುಳ್ಳದ್ದು ಅಥವಾ ಮೂರು ನರಸಮೂಹವುಳ್ಳದ್ದು. ಇದರಲ್ಲಿ ಪ್ರಾಣವು ಮಹಾಜ್ಯೋತಿ ರೂಪವಾದ ಶೂನ್ಯಲಿಂಗವೆಂದು ಕರೆಯಲ್ಪಟ್ಟಿದೆ. ಹಿಂಭಾಗದ ಮಿದುಳು ಪಶ್ಚಿಮಚಕ್ರವೆಂದು ಕರೆಯಲ್ಪಟ್ಟಿದೆ. ಇದು ಏಕ ದಳವುಳ್ಳದ್ದು ಅಥವಾ ಒಂದೇ ನರದಿಂದ ಕೂಡಿದ್ದು ಇರುವದು. ಇದರಲ್ಲಿ ಪರಂಜ್ಯೋತಿ ರೂಪವಾದ ಆತ್ಮವು ನಿರಂಜನ ಲಿಂಗವೆಂದು ಕರೆಯಲ್ಪಟ್ಟಿದೆ. ಈ ಮಿದುಳಿನ ಕೆಳಭಾಗದಲ್ಲಿಯೇ ಬೆನ್ನುಹುರಿಯು ಬಂದು ಕೂಡುವದು ಈ ಪ್ರಕಾರ ವೀರಶೈವದ ವಿವರಣೆಯು ಆಧುನಿಕ ಮಾನಸಶಾಸ್ತ್ರದ ವಿವರಣೆಗೆ ಸಾಮ್ಯವಾಗಿದೆ. ಆದರೆ ವೀರಶೈವವು ಇಷ್ಟು ವಿವರಣೆಯಿಂದ ತೃಪ್ತವಾಗಿ ನಿಂತಿಲ್ಲ. ಆಧುನಿಕ ಮಾನಶಾಸ್ತ್ರವು ಪ್ರಾಣ ಒಂದಕ್ಕೆಯೇ ಮನಸು (*mind*) ಜೀವ (*self* ) ಆತ್ಮ (*soul*) ಎಂಬ ಬೇರೆ ಬೇರೆ ಹೆಸರಿಟ್ಟಿದೆ. ಆದರೆ ವೀರಶೈವವು ಮನಸ್ಸು, ಬುದ್ಧಿಗಳು ಮಿದುಳಿನಿಂದ ಉತ್ಪನ್ನವಾದ ಅಂಗಗಳಿದ್ದು ಭೌತಿಕ ಘಟನೆಯುಳ್ಳ ಸ್ಥೂಲ ವಸ್ತುಗಳೆಂದೂ ಅವುಗಳು ಜೀವದ ಪ್ರೇರಣೆಯಿಂದ ಕೆಲಸ ಮಾಡುವವೆಂದೂ ಹೇಳುವದು. ಪ್ರಾಣವು ಸಹ ಭೌತಿಕ ವಸ್ತುವು. ಪ್ರಾಣವು

ವಾಯುವಿನಿಂದಾಗಿದೆ.
( *life breath* ) ಪಂಚಭೂತಗಳಲ್ಲೊಂದಾದ ವಾಯುವಿನಿಂದಾಗಿದೆ.
ಇದು ಜೀವದ ಚೈತನ್ಯದಿಂದ ದೇಹದಲ್ಲಿ ಕ್ರಿಯೆ ಮಾಡುವದು. ಜೀವವು
ದೇಹವನ್ನು ತೊರೆದಾಗ ಪ್ರಾಣವು ಕ್ರಿಯಾ ರಹಿತವಾಗುವದು. ಜೀವವು
ಭೌತಿಕ ವಸ್ತುವಾಗಿರದೆ ಅಧ್ಯಾತ್ಮಿಕ ಅಥವಾ ಸೂಕ್ಷ್ಮ ವಸ್ತುವಾಗಿದೆ
ಯೆಂದೂ ಪರಮಾತ್ಮನ ಅಂಶವೆಂದೂ ಪೂರ್ವಜನ್ಮದ ಕರ್ಮವಾಸನೆ
ಯಿಂದ ದೇಹದಲ್ಲಿ ಸಿಲುಕಿ ಸುಖ ದುಃಖಗಳನ್ನು ಅನುಭವಿಸುವದೆಂದೂ
ಆತ್ಮ ಸಾಕ್ಷಾತ್ಕಾರ ಮಾಡಿಕೊಂಡಾಗ ಅದಕ್ಕೆ ಬಿಡುಗಡೆಯಾಗುವ
ದೆಂದೂ ವೀರಶೈವವು ಹೇಳುತ್ತದೆ. ಆಧುನಿಕ ಮಾನಶಾಸ್ತ್ರವು ಮನಸು
ಅಥವಾ ಜೀವ ( *self or soul* ) ವು ಸ್ಥೂಲ ವಸ್ತುವಲ್ಲವೆಂತಲೂ
ಭೌತಿಕ ಜಗತ್ತಿನಲ್ಲಿ ಅದನ್ನು ಹೋಲುವ ವಸ್ತುವು ಮತ್ತೊಂದಿಲ್ಲವೆಂ
ತಲೂ ಒಪ್ಪಿದಾಗ್ಯು ಮನಸು, ಪ್ರಾಣ, ಜೀವ, ಆತ್ಮ ಎಂಬವುಗಳ
ಭೇದವನ್ನು ಮಾಡದೆ ಅವೆಲ್ಲವನ್ನು ಒಂದೇ ವಸ್ತುವನ್ನಾಗಿ ( *subject* )
ತಿಳಿದದ್ದರಿಂದ ಪ್ರಮಾದಕ್ಕೆ ಆಸ್ಪದವನ್ನು ಕಲ್ಪಿಸಿದೆ. ವೀರಶೈವದಲ್ಲಿ
ಮನಸು, ಬುದ್ಧಿ, ಪ್ರಾಣ, ಜೀವಗಳ ಪೃಥಕ್ಕರಣವು ಮಾಡಲ್ಪಟ್ಟಿರುವಂ
ತೆಯೇ ಪಶ್ಚಿಮ ಚಕ್ರದಲ್ಲಿ ಆತ್ಮವಿದೆಯೆಂದು ಹೇಳಲ್ಪಟ್ಟಿದೆ. ಇದೇ
ಪರಮಾತ್ಮವು. ಇದು ದೇಹದಲ್ಲಿ ಯಾವ ಕ್ರಿಯೆಯನ್ನು ಮಾಡದೆ
ಕೇವಲ ಸಾಕ್ಷೀ ಭೂತವಾಗಿದೆ. ಜೀವವು ಸಂಸಾರದಿಂದ ನಿರ್ಲಿಪ್ತವಾಗಿ
ಈ ಆತ್ಮವೇ ತಾನೆಂದು ತಿಳಿದಾಗ ಜೀವಕ್ಕೆ ಮೋಕ್ಷವುಂಟಾಗುವದು.
ಇದೇ ಐಕ್ಯನ ಸ್ಥಿತಿಯು. ದ್ವೈತ ಸಿದ್ಧಾಂತದಲ್ಲಿ ಜೀವನು ಪರಮಾತ್ಮ
ನಲ್ಲಿ ಮತ್ತು ಪರಮಾತ್ಮನಾಗಲೂ ಶಕ್ಯವಿಲ್ಲವೆಂದು ಪ್ರತಿಪಾದಿಸಲ್ಪಟ್ಟಿದೆ.
ಅದ್ವೈತ ಸಿದ್ಧಾಂತವು ಜೀವವು ಬ್ರಹ್ಮವಿದೆಯೆಂದು ಹೇಳಿದಾಗ್ಯೂ
ಜಗತ್ತು ಮಿಥ್ಯವಾದದ್ದೆಂದು ಅದು ಹೇಳುವದರಿಂದ ಮಿಥ್ಯವಾದ ಶರೀ
ರದಲ್ಲಿ ಜೀವವು ವಾಸವಾಗಿರುವದು ಅವರ ಹೇಳಿಕೆಗೆ ವಿರೋಧವನ್ನುಂಟು
ಮಾಡುತ್ತದೆ. ವೀರಶೈವವು ದೇಹಧಾರಿಗಳನ್ನೊಳಕೊಂಡ ಜಗತ್ತು ಸತ್ಯ
ವಾದದ್ದೆಂದು ಹೇಳುವದರಿಂದ ಇದರಲ್ಲಿ ವಿರೋಧಾಭ್ಯಾಸಕ್ಕೆ ಆಸ್ಪದವಿಲ್ಲ
"ಬ್ರಹ್ಮಸತ್ಯಂ ಜಗನ್ಮಿಥ್ಯಾ। ಜೀವೋಬ್ರಹ್ಮೈವನಾಪರಃ॥" ಎಂಬ ಅದ್ವೈತ
ತತ್ವವು ಯಥಾರ್ಥವಾಗಬೇಕಾದರೆ ಜಗತ್ತು ಸತ್ಯವಾದದ್ದೆಂದು ಗ್ರಹಿಸ
ಬೇಕಾಗುವದು. ವೀರಶೈವ ಅಥವಾ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವು
ಈ ದೋಷದಿಂದ ಮುಕ್ತವಾಗಿದೆ. ಜೀವಾತ್ಮವು ಜನ್ಮಮರಣ ರಹಿತ



ವಾದದ್ದು ಅಥವಾ ಅಮರವಾದದ್ದು. ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ
ಜೀವವು ಪರಮಾತ್ಮಸದೃಶವಾದ ಗುಣಹೊಂದಿದರೂ ಅದಕ್ಕೆ ಪರಮಾ
ತ್ಮನಲ್ಲಿ ಐಕ್ಯವು ಲಭಿಸುವದಿಲ್ಲ.

ವೀರಶೈವವು ಕೇವಲ ಮಿದುಳಿನ ಪೃಥಕ್ಕರಣದಿಂದ ತೃಪ್ತಿಯಾಗದೆ
ಉಳಿದ ದೇಹವನ್ನು ಆರುವಿಧವಾಗಿ ಪೃಥಕ್ಕರಣಮಾಡಿದೆ. ಹೇಗೆಂದರೆ
[೧] ಆಧಾರ (ಗುದ) [೨] ಲಿಂಗ (ಗುಹ್ಯ) [೩] ನಾಭಿ (ಹೊಕ್ಕಳ)
[೪] ಹೃದಯ [೫] ತಾಲು (ಕಂಠ) [೬] ಭ್ರೂಮಧ್ಯ ಹುಬ್ಬುಗಳ
ಮಧ್ಯಭಾಗ. ಈ ಆರುಸ್ಥಲಗಳು ನರಸಮೂಹಗಳ ಕೊನೆಯು ಭಾಗಗ
ಳಿದ್ದು ಶರೀರ ಪೋಷಣೆಯ ಮುಖ್ಯ ಕಾರ್ಯಗಳನ್ನು ಮಾಡುತ್ತವೆ.
ಗುದದಲ್ಲಿರುವ ನರಸಮೂಹಕ್ಕೆ ವೀರಶೈವವು ಆಧಾರಚಕ್ರವೆಂದು ಹೆಸ
ರಿಟ್ಟಿದೆ. ಇಲ್ಲಿ ಮಲವಿಸರ್ಜನೆಯ ಕೆಲಸವು ಜರುಗುತ್ತದೆ. ಇದರಲ್ಲಿ
ಪೃಥ್ವಿ ತತ್ವವಿದೆ. ಗುಹ್ಯಸ್ಥಾನದಲ್ಲಿ ಸ್ವಾಧಿಷ್ಠಾನಚಕ್ರ ಅಥವಾ ನರ
ಸಮೂಹವಿದೆ. ಇದರಿಂದ ಮೂತ್ರ ಬಿಂದುಗಳ ವಿಸರ್ಜನೆಯ ಕಾರ್ಯ
ವಾಗುತ್ತದೆ. ಇದರಲ್ಲಿ ಜಲತತ್ವವಿದೆ ನಾಭಿಯಲ್ಲಿ ಮಣಿಪೂರಕಚಕ್ರ
ವಿದೆ. ಇಲ್ಲಿ ಅಗ್ನಿತತ್ವವಿದೆ. ಅಗ್ನಿಯ ಸಹಾಯದಿಂದ ಇಲ್ಲಿ ಅನ್ನನಾಳ
ಗಳು ಒಮ್ಮೆ ಸಂಕುಚಿತವಾಗಿಯೂ ಮತ್ತೊಮ್ಮೆ ವಿಸ್ತೃತವಾಗಿಯೂ
ಆಗುವದರಿಂದ ಜೀರ್ಣಕ್ರಿಯೆಯು ಸಾಗುವದು. ಹೃದಯದಲ್ಲಿ ಅನಾ
ಹತಚಕ್ರವಿದೆ. ಇಲ್ಲಿ ವಾಯುತತ್ವವಿದೆ. ವಾಯುವಿನ ಸಹಾಯದಿಂದ
ಇಲ್ಲಿ ದೇಹದ ನಾನಾಭಾಗದ ರಕ್ತವು ಪ್ರವಾಹವಾಗಿ ಬಂದು ಶುದ್ಧಿಯನ್ನು
ಹೊಂದುವದು. ಮತ್ತು ಅನೇಕ ದೇಹಭಾಗಗಳಿಗೆ ರಕ್ತವು ಕಳಿಸಲ್ಪ
ಡುವದು. ಕಂಠದಲ್ಲಿ ವಿಶುದ್ಧಿ ಚಕ್ರವಿದೆ. ಇಲ್ಲಿ ಆಕಾಶತತ್ವವಿದೆ. ಇಲ್ಲಿಯ
ಅನ್ನನಾಳವು ( *desophagus* ) ಊಟಮಾಡಿದ ಅನ್ನವನ್ನು ಒಳಗೆ ಕಳಿ
ಸುವಂತೆ ಮಾಡುವದು. ಶಬ್ದನಾಳದಲ್ಲಿ ( *larynx* ) ಸ್ವರವು ಹುಟ್ಟು
ವದು. ಈ ನಾಳದ ಕೆಳಭಾಗವೇ ಶ್ವಾಸಕೋಶವಾಗಿದೆ ( *trachea* ).
ಭ್ರೂಮಧ್ಯದಲ್ಲಿ ಆಜ್ಞಾಚಕ್ರವಿದೆ. ಮಿದುಳು ಇದರ ಸಹಾಯದಿಂದ
ಜ್ಞಾನತಂತುಗಳ ಕ್ರಿಯೆಯನ್ನು ನಡೆಯಿಸುವದು. ಹೃದಯ, ಶ್ವಾಸ
ಕೋಶ ಇಲ್ಲವೆ ಮಿದುಳು ಅಪಾಯಹೊಂದಿದರೆ ಮರಣವುಂಟಾಗು
ವದು. ಈ ಆರು ಚಕ್ರಗಳಲ್ಲಿಯೂ ವೀರಶೈವವು ಲಿಂಗಗಳನ್ನು ಸ್ಥಾಪಿ
ಸಿರುವದು.

ಶರೀರದಲ್ಲಿ ಐದು ಜ್ಞಾನೇಂದ್ರಿಯುಗಳಿವೆ. (೧) ಕಣ್ಣು (ದೃಕ್)
(೨) ಮೂಗು (ನಾಸಿಕ) (೩) ನಾಲಿಗೆ (ಜಿಹ್ವಾ) (೪) ಕಿವಿ (ಶ್ರೋತ್ರ)
(೫) ಚರ್ಮ (ತ್ವಕ್). ಈ ಪ್ರತಿಯೊಂದು ಇಂದ್ರಿಯವೂ ಒಂದೊಂದು
ಮುಖ್ಯ ಕಾರ್ಯವನ್ನು ಮಾಡುತ್ತದೆ. ಕಣ್ಣು ಒಳಿತು, ಕೆಡಕು ಎರ
ಡನ್ನು ನೋಡಬಲ್ಲದು. ಪರಮಾತ್ಮನನ್ನು ಹೊಂದಬೇಕೆಂಬ ಧ್ಯೇಯ
ವುಳ್ಳ ಭಕ್ತನು ಕೆಡಕನ್ನು ಅಥವಾ ಅಹಿತವಾದದ್ದನ್ನು ನಿವಾರಿಸಲಿಚ್ಛಿಸು
ವನು. ಪ್ರತಿಯೊಂದು ಇಂದ್ರಿಯದಲ್ಲಿ ಲಿಂಗವಿದೆಯೆಂದು ಜ್ಞಾನೇಂದ್ರಿ
ಯದಲ್ಲಿ ದುರ್ಭಾವನೆಯುಂಟಾಗದಂತೆ ಅಲ್ಲಿ ಒಂದೊಂದು ಲಿಂಗವನ್ನು
ವೀರಶೈವವು ಸ್ಥಾಪಿಸಿದೆ. ಈ ಭಾವನೆಯಿಂದ ಭಕ್ತನು ಕಣ್ಣಿನಿಂದ
ನೋಡುವಾಗ ತಾನು ಶಿವನಾಗಿಯೇ ನೋಡಿ ಶಿವನಾಗಿಯೇ ಭೋಗಿ
ಸುತ್ತಾನೆ. ಅವನಲ್ಲಿ ಕೇವಲ ನಿಷ್ಕಾಮ ಬುದ್ಧಿಯು ಹುಟ್ಟುವದು. ಜಗ
ತ್ತಿನಲ್ಲಿರುವದೆಲ್ಲವೂ ಶಿವನ ಹೊರ್ತು ಮತ್ತೊಂದಿಲ್ಲವೆಂಬುದು ಅವನ
ಭಾವನೆ. "ಈಶಾವಾಸ್ಯಮಿದಂ ಸರ್ವಂ ಯತ್ಕಿಂಚಜಗತ್ಯಾಂ ಜಗತ್ ।
ತೇನತ್ಯಕ್ತೇನ ಭುಂಜೀಥಾಮಾಗೃಧಃ ಕಸ್ಯಸ್ವಿದ್ಧನಂ॥" ಜಗತ್ತು ಶಿವ
ನಿಂದ ಆವರಿಸಲ್ಪಟ್ಟಿದ್ದು ಅವನು ಸ್ವೀಕರಿಸಿ ಮಿಕ್ಕದ್ದನ್ನೇ ಪ್ರಸಾದವೆಂದು
ಭಾವಿಸಿ ಭುಂಜಿಸಬೇಕು. ಇತರರ ಧನಕ್ಕೆ ಆಶೆಮಾಡಬಾರದೆಂಬ ಈ
ಶೋಪನಿಷತ್ತಿನ ವಾಕ್ಯವೇ ವೀರಶೈವರ ಮುಖ್ಯ ತತ್ವವು. ಈ ನಿಷ್ಕಾಮ
ಬುದ್ಧಿಯಿಂದಲೇ ವೀರಶೈವವು ಪ್ರತಿ ಇಂದ್ರಿಯದಲ್ಲಿ ಲಿಂಗವನ್ನು ಸ್ಥಾಪಿ
ಸಿದೆ. (*Veerashaivism sublimates every sense organ by
investing it with Linga.*) ಹೀಗೆ ಕಣ್ಣಿನಲ್ಲಿ ಶಿವಲಿಂಗ, ನಾಸಿ
ಕದಲ್ಲಿ ಆಚಾರಲಿಂಗ, ನಾಲಿಗೆಯಲ್ಲಿ ಗುರುಲಿಂಗ, ಕಿವಿಯಲ್ಲಿ ಪ್ರಸಾದ
ಲಿಂಗ, ಚರ್ಮದಲ್ಲಿ ಚರಲಿಂಗಗಳಿರುವವೆಂದು ವೀರಶೈವವು ಗ್ರಹಿಸಿದೆ.
ಹೀಗೆ ಸರ್ವ ದೇಹವನ್ನು ಲಿಂಗಸಾಹಿತ್ಯವಾಗಿ ಮಾಡಿ ದೇಹದಿಂದ
ದುಷ್ಟ ಪ್ರವೃತ್ತಿಯಾಗದಂತೆ ವೀರಶೈವವು ಧರ್ಮದ ತಳಹದಿಯನ್ನು
ಹಾಕಿಕೊಂಡಿದೆ. ಶಿವನೊಬ್ಬನೆ ಷಡ್ವಿಧಲಿಂಗವಾಗಿ ದೇಹದಲ್ಲಿ ವ್ಯಾಪಿ
ಸಿದ್ದಾನೆ. ಸರ್ವೇಂದ್ರಿಯ ಪದಾರ್ಥಗಳಾದ ರೂಪ, ಗಂಧ, ರಸ, ಶಬ್ದ,
ಸ್ಪರ್ಶಗಳನ್ನು ಆಯಾಯ ಲಿಂಗಗಳಿಗೆ ಅರ್ಪಿಸಿದ ನಂತರ ಅವನ್ನು
ಭಕ್ತನು ಪ್ರಸಾದವಾಗಿ ಸೇವಿಸುವನು. ಹೀಗೆ ಪಾರಮಾರ್ಥಿಕ ಭಾವನೆ
ಯುಳ್ಳ ಭಕ್ತನಿಂದ ದುರಾಚಾರವು ಘಟಿಸುವದಿಲ್ಲ. ವೀರಶೈವವು ಶುದ್ಧ



ಮನಸ್ಸಿಗೆ ಮಹತ್ವಕೊಟ್ಟಿರುವದು. ಧರ್ಮದಲ್ಲಿ ಇದೇ ಪ್ರಾಧಾನ್ಯವಲ್ಲದೆ ಬಾಹ್ಯಕ್ರಿಯೆಗಳಲ್ಲ. ವೀರಶೈವರಲ್ಲಿ ಮಾನಸಶಾಸ್ತ್ರದ ಹಾಸುಹೊಕ್ಕುಗಳು ಪ್ರತಿಯೊಂದು ತತ್ವದಲ್ಲಿ ಸೂಕ್ಷ್ಮವಾಗಿ ಹೆಣೆಯಲ್ಪಟ್ಟಿವೆ. ಈ ವಿಷಯದಲ್ಲಿ ಚನ್ನಬಸವಣ್ಣನವರು ಹೇಳಿರುವ ಒಂದು ವಚನದಿಂದ ಇದರ ಸತ್ಯವನ್ನು ಮನಗಾಣಬಹುದು. "ಅಂಗದಿಂದ ಲಿಂಗ ಹಿಂಗಬಾರದೆಂಬರು ಅಂಗಲಿಂಗ ಸಂಬಂಧವಾದಲ್ಲಿ ಫಲವೇನು? ಮನ ಲಿಂಗ ಸಂಬಂಧವಾಗದನ್ನಕ್ಕರ?" ದೇಹದಿಂದ ಲಿಂಗ ಅಗಲಿರಬಾರದೆಂಬ ಧರ್ಮ ತತ್ವವುಂಟು. ಆದರೆ ಮನವು ಲಿಂಗದಲ್ಲಿ ಲೀನವಾಗದಿದ್ದರೆ ದೇಹದ ಮೇಲೆ ಯಾವಾಗಲೂ ಲಿಂಗ ಕಟ್ಟಿಕೊಂಡರೆ ಫಲವಿಲ್ಲವೆಂಬದು ಅವರ ವಚನದ ರಹಸ್ಯವು.

ದೇಹಕ್ಕೂ ಮನಸ್ಸಿಗೂ ನಿಕಟಸಂಬಂಧವುಂಟೆಂತಲೂ ಒಂದು ಮತ್ತೊಂದರ ಮೇಲೆ ಪರಿಣಾಮ ಮಾಡಬಲ್ಲದೆಂತಲೂ ಪರಸ್ಪರ ಪರಿಣಾಮವಾದವನ್ನು (*interactionism*) ವೀರಶೈವವು ಪ್ರತಿಪಾದಿಸುತ್ತದೆ. ನಾನು ದೀಪವನ್ನು ಹಚ್ಚಬೇಕೆಂದಾಗ ನನ್ನ ಬೆರಳಿನಿಂದ ಕಡ್ಡಿಯನ್ನು ಕೆರೆಯುತ್ತೇನೆ. ಈ ಕ್ರಿಯೆಯು ಮಿದುಳಿನ ನರಗಳ ಚಲನೆಯಿಂದ ಮಾತ್ರವಾಗದೆ ದೀಪ ಹಚ್ಚಬೇಕೆಂಬ ನನ್ನ ಇಚ್ಛೆಯಿಂದ ಪ್ರಾಮುಖ್ಯವಾಗಿ ಜರಗುವದು. ಇಚ್ಛೆಯ ಪ್ರೇರಣೆಯಿಂದ ಮಿದುಳಿನ ನರಗಳು ಚಲಿಸುವವು ಅದರಿಂದ ಕೈಬೆರಳುಗಳು ಮುದುಡುವವು. ಬೆರಳುಗಳು ಕಡ್ಡಿಯನ್ನು ಗಂಧಕದ ಪಟ್ಟಿಗೆಯ ಮೇಲೆ ತಿಕ್ಕುವವು. ಇದೇ ರೀತಿಯಲ್ಲಿ ದೇಹದಿಂದ ಏನಾದರೂ ಅಹಿತಕಾರ್ಯವು ಇಚ್ಛೆಯ ಪ್ರೇರಣೆಯಿಲ್ಲದೆ ಪ್ರಮಾದದಿಂದ ಘಟಿಸಿದಾಗ ಮನಸ್ಸಿಗೆ ಪಶ್ಚಾತ್ತಾಪವೂ, ದುಃಖವೂ ಆಗುವದು. ಮನುಷ್ಯನು ಸುರಾಪಾನದಿಂದ ಉನ್ಮತ್ತನಾದಾಗ ಒಬ್ಬನನ್ನು ಕೊಲೆಮಾಡುವನು. ಮದವಳಿದು ಎಚ್ಚರಿಕೆಯುಂಟಾದಾಗ ತನ್ನ ಅತ್ಯಾಚಾರಕ್ಕೆ ಪಶ್ಚಾತ್ತಾಪ ಪಡುವನು. ದೇಹವು ರೋಗ ಪೀಡಿತವಾದರೆ ಮನಸ್ಸು ಕುಗ್ಗುವದು. ಹೀಗೆ ಮನಸುಗಳು ಒಂದರಮೇಲೊಂದು ಪರಿಣಾಮವನ್ನುಂಟು ಮಾಡಬಲ್ಲವು. ಇದಕ್ಕಾಗಿ ವೀರಶೈವವು ದೇಹವಿರುವ ವರೆಗೆ ಅನಾಚಾರ ಅತ್ಯಾಚಾರಗಳನ್ನು ಮಾಡದೆ, ಮನ, ವಚನ, ಕ್ರಿಯೆಗಳಲ್ಲಿ ಸಮ್ಮೇಳವನ್ನಿಟ್ಟುಕೊಂಡಿರಬೇಕೆಂದು ಬಂಧುರವಾದ ನಿಯಮವನ್ನು ಹಾಕಿರುವದು. "ಪರಧನವನೊಲ್ಲದಿಪ್ಪುದೇ ವ್ರತ

ಪರಸ್ತ್ರೀಯರ ಮುಟ್ಟದಿಪ್ಪುದೇ ಶೀಲ, ಸರ್ವ ಜೀವ ಕೊಲ್ಲದಿಪ್ಪುದೇ ನೇಮ, ತಥ್ಯಮಿಥ್ಯವನಳಿದಿಪ್ಪುದೇ ನಿತ್ಯನೇಮ, ಲಿಂಗವನರಿವುವಕ್ಕೆ " ಎಂಬ ಶಿವಲೆಂಕಮಂಚಣ್ಣನವರ ವಚನವು ಅಸತ್ಯ, ಹಿಂಸೆ, ಕಳವು, ಪರಧನ, ಪರಸ್ತ್ರೀ ಸಂಗವನ್ನು ಬಿಟ್ಟಿರಬೇಕೆಂದು ಹೇಳುತ್ತದೆ. ಕೈವಲ್ಯವನ್ನುಹೊಂದಲು ಸಾಧನಗಳಾದ ಆರು ಸೋಪಾನಗಳಂತಿರುವ ಷಟ್‌ಸ್ಥಲಗಳಾದರೂ ಮಾನಸಶಾಸ್ತ್ರದ ಆಧಾರದ ಮೇಲೆಯೇ ರಚಿಸಲ್ಪಟ್ಟಿವೆ. (೧) ಭಕ್ತಸ್ಥಲದಲ್ಲಿ ಭಕ್ತನು ಕಾಯಕದಿಂದ ಅಥವಾ ಸ್ವಂತ ದುಡಿತದಿಂದ ಸಂಪಾದಿಸಿದ ಧನದಿಂದ ಜೀವಿಸಬೇಕು. ಗುರು, ಲಿಂಗ, ಜಂಗಮರಿಗೆ ತನು, ಮನ, ಧನ ಅರ್ಪಿಸಬೇಕು. ಇಲ್ಲಿ ಶುದ್ಧಮನಸು ಭಕ್ತಿಯ ರೂಪದಿಂದ ಪ್ರಕಟವಾಗುವದು. (೨) ಮಹೇಶ್ವರ ಸ್ಥಲದಲ್ಲಿ ಭಕ್ತಿಯು ದೃಢವಾಗಿ ನಿಷ್ಕಾಮ ಕರ್ಮವುಂಟಾಗಿ ಸರ್ವಜೀವಿಗಳನ್ನು ತನ್ನಂತೆಯೇ ತಿಳಿಯುವ ಸ್ಥಿತಿಯುಂಟಾಗುವದು. (೩) ಪ್ರಸಾದಿಸ್ಥಲದಲ್ಲಿ ತಾನು ಭೋಗಿಸುವ ವಸ್ತುಗಳೆಲ್ಲವನ್ನೂ ಮೊದಲು ಶಿವನಿಗೆ ಅರ್ಪಿಸಿ, ಅನಂತರ ಅದನ್ನು ಪ್ರಸಾದರೂಪದಿಂದ ಸ್ವೀಕರಿಸಬೇಕೆಂಬ ಭಾವನೆಯುಂಟಾಗುವದು. ತಾನು ಮಾಡುವದೆಲ್ಲವೂ ಭೋಗಿಸುವದೆಲ್ಲವೂ ಶಿವನ ಕಾರ್ಯವೆಂದೇ ತಿಳಿಯುವನು. (೪) ಪ್ರಾಣಲಿಂಗಿಸ್ಥಲದಲ್ಲಿ ಶಿವನ ಶಕ್ತಿಯು ಪ್ರಾಣರೂಪವಾಗಿದ್ದು ಅಂತಹ ಪ್ರಾಣಲಿಂಗದಲ್ಲಿ ಮನಸನ್ನು ಒಂದು ಮಾಡುವದೇ ಧ್ಯೇಯವಾಗಿದೆ ಇದು ಶಿವಯೋಗಸ್ಥಿತಿಪ್ರಾಪ್ತಿಯು. (೫) ಶರಣಸ್ಥಲದಲ್ಲಿ ಶರಣನು ತಾನು ಸತಿಯೆಂದೂ ಲಿಂಗವು ಪತಿಯೆಂದೂ ಭಾವಿಸಿ ಲಿಂಗದಲ್ಲಿಯೇ ಸದಾ ಬೆರೆತ ಆನಂದದಲ್ಲಿರುವನು. ಇವನು ಲಿಂಗದ ನುಡಿಯಂತೆ ನುಡಿವನಲ್ಲದೆ ಲೋಕದ ನುಡಿಯಂತೆ ನುಡಿವನಲ್ಲ. ಇವನು ನಿಸ್ಸಂಗಿಯೂ, ನಿರ್ದೇಹಿಯೂ, ನಿರಾಧಾರಿಯೂ ಇರುವನು. " ನಿಸ್ಸಂಗ, ನಿರಾಭಾರಂ, ನಿಸ್ಸೀಮಂ, ನಿರುಪಾಧಿಕಂ। ನಿರ್ದೇಹಂ, ನಿರ್ಮಳಂ, ನಿತ್ಯಂ, ತಸ್ಯ ಜಂಗಮ ಲಕ್ಷಣಂ। " (೬) ಐಕ್ಯಸ್ಥಲದಲ್ಲಿ ಐಕ್ಯನು ತಾನು ಶಿವನಲ್ಲಿ ಕೂಡಿರುವನೆಂಬ ಭಾವವಿಲ್ಲದಿರುವನು. ಅಂದರೆ ಅವನು ಕೇವಲ ಶಿವನೇ ಆಗಿರುವನು. ಇಲ್ಲಿ ತಾನು ಮತ್ತು ಶಿವಯೆಂಬ ಭೇದಭಾವವುಳಿಯದೆ ಕರ್ಪೂರ ಅಗ್ನಿಯಲ್ಲಿ ಸಂಯೋಗವಾಗಿ ಅಗ್ನಿಯಾದಂತೆ ಲಿಂಗವ ನೆನೆದು ಲಿಂಗವೇ ತಾನಾಗಿಪ್ಪನು. ಹೀಗೆ ಭಕ್ತಸ್ಥಲದಿಂದ ಐಕ್ಯಸ್ಥಲದ ವರೆಗೆ ಭಕ್ತನ ಮಾನಸಿಕ ಸ್ಥಿತಿಯು ಕ್ರಮವಾಗಿ ಪ್ರಗತಿಯನ್ನು ಹೊಂದುತ್ತಾ



ಹೋದದ್ದು ಕಂಡುಬರುವದು. ವೀರಶೈವನು ಜೀವದಿಂದಿರುವಾಗಲೇ ಮುಕ್ತಿಯನ್ನು ಹೊಂದಬಲ್ಲನಾದ್ದರಿಂದ ವೀರಶೈವವು ಇದೇಕಾರಣದಿಂದ ಪುನರ್ಜನ್ಮವಿಲ್ಲವೆಂದು ಹೇಳುತ್ತದೆ. ಸರ್ವಾಂಗಲಿಂಗಿಯಾದ ವೀರಶೈವನಿಂದ ಪಾಪಕೃತಿಯು ಘಟಿಸಲಾರದೆಂಬುದೇ ಇದಕ್ಕೆ ಆಧಾರವು. ಪಾಪಿಗಳಿಗೆ ಪುನರ್ಜನ್ಮವುಂಟೆಂಬ ಅಪವಾದವನ್ನು ವೀರಶೈವವು ಒಪ್ಪುವದು.

ಮನೋಶುದ್ಧಿಗೆ ಕ್ರಿಯಾಶುದ್ಧಿಯು ಅವಶ್ಯವಾದುದು. " ಕ್ರಿಯಾ ಶುದ್ಧವಾದವಂಗೆ ಭಾವಶುದ್ಧ, ಭಾವಶುದ್ಧವಾದವಂಗೆ ಆತ್ಮಶುದ್ಧ, ಆತ್ಮ ಶುದ್ಧವಾದವಂಗೆ ಅರಿವು ಕರಿಗೊಂಡು ನಿಂದ ನಿಜವೇ ಪ್ರಾಣಲಿಂಗ " ಎಂದು ಮೋಳಿಗೆಯ ಮಾರಯ್ಯನವರು ಹೇಳಿದ್ದಾರೆ. " ಅಂಗದಮೇಲಣ ಲಿಂಗ ಪ್ರಾಣದ ಮೇಲೆ ಬಂದು ನಿಲ್ಲುವನ್ನಕ್ಕ ಪೂಜಿಸಬೇಕು " ಎಂದು ಶಿವಲೆಂಕ ಮಂಚಣ್ಣನವರ ವಚನವಿದೆ. ಕೇವಲ ಬಾಹ್ಯಪೂಜೆಗೆ ನಿಲ್ಲದೆ ಅಂತರಂಗದಲ್ಲಿ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬದು ಇದರ ರಹಸ್ಯವು. ಇದೇ ರೀತಿಯಲ್ಲಿ ವೀರಶೈವವು ಯಮ, ನಿಯಮ, ಆಸನ, ಪ್ರಾಣಾಯಾಮ ಮುಂತಾದ ಅಷ್ಟಾಂಗಯೋಗದ ಬಾಹ್ಯ ಸಾಧನಗಳಿಗೆ ಮಹತ್ವ ಕೊಟ್ಟಿರುವದಿಲ್ಲ. ಅಂತಃಕರಣಗಳನ್ನು ವಶಪಡಿಸಿಕೊಳ್ಳುವ ರೀತಿಯಲ್ಲಿ ಈ ಅಷ್ಟಾಂಗಯೋಗದ ಅರ್ಥವನ್ನು ಮಾಡಿದೆ. ಅನೃತ, ಹಿಂಸೆ, ಪರಧನ, ಪರಸ್ತ್ರೀ, ಪರನಿಂದೆ ಬಿಟ್ಟು ಲಿಂಗಪೂಜೆ ಮಾಡುವದೇ ಯಮಯೋಗ. ಬ್ರಹ್ಮಚಾರಿಯಾಗಿ ಪಂಚಾಕ್ಷರಿ ಮಂತ್ರ ಜಪಿಸಿ ಲಿಂಗಾರ್ಚನೆ ಮಾಡುವದು ನಿಯಮಯೋಗ. ಸಿದ್ಧಾಸನ, ಪದ್ಮಾಸನ ಮುಂತಾದ ಆಸನಗಳಲ್ಲಿ ಸ್ಥಿರಚಿತ್ತದಿಂದ ಲಿಂಗಾರ್ಚನೆ ಮಾಡುವದು ಆಸನಯೋಗ. ಒಂದೇ ವಾಯು ಸರ್ವಾಂಗದಲ್ಲಿ ಪ್ರಾಣ, ಅಪಾನ, ಉದಾನ, ಸಮಾನ, ನಾಗ, ಕೂರ್ಮ, ಪ್ರಕರ, ದೇವದತ್ತ, ಧನಂಜಯ ಎಂಬ ಹೆಸರಿನಿಂದ ಸುಳಿದು ಬೇರೆಬೇರೆ ದೇಹಪೋಷಣೆಯ ಕ್ರಿಯೆ ಮಾಡುವದು. ಪ್ರಾಣವಾಯು ಹೃದಯದಲ್ಲಿದ್ದು ಉಶ್ವಾಸ ನಿಶ್ವಾಸಗೈದು ಅನ್ನಜೀರ್ಣಕ್ಕೆ ಸಹಾಯವಾಗುವದು. ಮನ, ಪ್ರಾಣ, ವಾಯುಗಳ ಮೇಲೆ ಲಿಂಗ ಸಂಬಂಧಿಸಿ ಲಿಂಗಸ್ವರೂಪಮಾಡಿ ಹೃದಯ ಮಧ್ಯದಲ್ಲಿ ಶಿವಧ್ಯಾನನಿರತನಾಗುವದು ಪ್ರಾಣಾಯಾಮ. ಆಹಾರದಿಂದ ನಿದ್ರೆ, ನಿದ್ರೆಯಿಂದ ಇಂದ್ರಿಯಗಳು, ಇಂದ್ರಿಯಗಳಿಂದ ವಿಷಯಗಳು ಘನವಾಗುತ್ತಿರುವವು. ವಿಷಯದಿಂದ ದುಷ್ಕರ್ಮಗಳು ಹೆಚ್ಚಾಗಿ ಜೀವನಿಗೆ ಭವಬಂಧವುಂಟಾಗುವದು. ಸರ್ವೇಂದ್ರಿಯಗಳನ್ನು ಲಿಂಗ ಮುಖದಿಂದ ಸಾವಧಾನ ಮಾಡಿಕೊಳ್ಳುವದು ಪ್ರತ್ಯಾಹಾರ ಯೋಗ. ಅಂತ

ರಂಗದ ಪರಮಾತ್ಮನನ್ನೇ ಇಷ್ಟಲಿಂಗ ಮಾಡಿ ಗುರು ಕೊಟ್ಟಿರುವದಾಗಿ ಅದನ್ನು ಆರು ಚಕ್ರಗಳಲ್ಲಿ ಧ್ಯಾನಿಸುವದು ಧ್ಯಾನಯೋಗ. ಆ ಲಿಂಗ ವನ್ನು ಭಾವ, ಕರಣ, ಮನ ಮುಖ್ಯವಾದ ಸರ್ವಾಂಗದಲ್ಲಿ ಧರಿಸು ವದು ಧಾರಣಯೋಗ. ಇಷ್ಟ, ಪ್ರಾಣ, ಭಾವವೆಂಬ ಲಿಂಗತ್ರಯವನ್ನು ಏಕಾಕಾರ ಮಾಡಿ ಮಹಾಲಿಂಗದಲ್ಲಿ ಸಂಯೋಗವಾಗಿ ಭಿನ್ನವಿಲ್ಲದಂತಿ ರುವದು ಸಮಾಧಿಯೋಗ. ಹೀಗೆ ಅಷ್ಟಾಂಗಯೋಗಗಳಿಗೆ ತನ್ನದೊಂದು ವಿಶಿಷ್ಟವಾದ ಅರ್ಥವನ್ನು ಕೊಟ್ಟು ಪತಂಜಲಯೋಗದಿಂದ ಭಿನ್ನ ವಾಗಿದೆ. ಪತಂಜಲಯೋಗವು 'ಓಂ' ಎಂಬ ಬಿಂದುವನ್ನು ದಿವ್ಯ ಪ್ರಕಾಶ ವೆಂದು ಲಕ್ಷಿಸುವದು. ಇದರಲ್ಲಿ ಲಿಂಗಸಾಹಿತ್ಯವಿಲ್ಲ. ಬ್ರಹ್ಮರಂಧ್ರದ ಲ್ಲಿರುವ ಚಿತ್ಕಲೆಯೇ ಭಕ್ತನ ಕರಸ್ಥಲಕ್ಕೆ ಪೂಜಾ ಸಾಧನೆಗಾಗಿ ಇಷ್ಟ ಲಿಂಗ ರೂಪದಿಂದ ಬಂದಿದೆ. ಇಂತಹ ಸಾಧನವು ಅಷ್ಟಾಂಗಯೋಗ ದಲ್ಲಿಲ್ಲ. ಸಾಧನವಿಲ್ಲದೆ ಧ್ಯೇಯ ವಸ್ತುವು ಸಾಧಿಸದು. ಒಂದೇ ವಸ್ತು ವನ್ನು ಇಷ್ಟಲಿಂಗವನ್ನಾಗಿ ದೃಷ್ಟಿಯಿಂದ ಗ್ರಹಿಸಿ, ಪ್ರಾಣಲಿಂಗವನ್ನಾಗಿ ಮನಸ್ಸಿನಿಂದ ಗ್ರಹಿಸಿ ಆತ್ಮಲಿಂಗವನ್ನಾಗಿ ಭಾವದಿಂದ ಗ್ರಹಿಸಿ ಲಿಂಗ ದೊಡನೆ ಕೂಡಿ ಲಿಂಗವೇ ತಾನಾಗುವದು ಶಿವಯೋಗವು.

ಪರಮಾತ್ಮನು ವಿಶ್ವವ್ಯಾಪಿಯೆಂಬದು ವೀರಶೈವದ ಮತವು. ಆದ್ದರಿಂದ ಜಗತ್ತು ನಿಜವಾದದ್ದು. ದೇವರನ್ನು ಬಿಟ್ಟು ಜಗತ್ತಿಲ್ಲ. ಜಗತ್ತನ್ನು ಬಿಟ್ಟು ದೇವರಿಲ್ಲ. ಪರಮಾತ್ಮನು ಜೀವರೂಪದಿಂದ ಕಲ್ಲು ಮುಂತಾದ ಜಡ ವಸ್ತುಗಳಲ್ಲಿ ಸಹ ವ್ಯಾಪಿಸಿರುವನು. ಜೀವವಿರುವ ದರಿಂದಲೇ ಕಲ್ಲಿಗೆ ಸಹ ಬೆಳವಣಿಗೆಯುಂಟು. ವೀರಶೈವದಲ್ಲಿ ಆತ್ಮಕ್ಕೆ ಅಂಗವೆಂತಲೂ, ಪರಮಾತ್ಮನಿಗೆ ಲಿಂಗವೆಂತಲೂ ಪಾರಿಭಾಷಿಕ ಶಬ್ದ ಗಳು ಉಪಯೋಗಿಸಲ್ಪಟ್ಟಿವೆ. ಪ್ರಕೃತಿಯು ( *matter* ) ವೀರಶೈವದ ೩೬ ತತ್ವಗಳಲ್ಲಿ ಒಂದು ಪ್ರತ್ಯೇಕ ತತ್ವವಾಗಿದೆ. ಪ್ರಕೃತಿಗೆ ಆತ್ಮವು ಮೂಲ ವಸ್ತುವು. ಪ್ರಕೃತಿಯು ಆತ್ಮದಿಂದ (ಅಂಗದಿಂದ) ಭಿನ್ನವಾ ಗಿದೆ. ಪರಮಾತ್ಮನು ಸರ್ವವ್ಯಾಪಿಯೆಂಬ ತತ್ವದ ಮೂಲಕ ವೀರಶೈ ವವು ಸರ್ವ ದೇಹದಲ್ಲಿ ಲಿಂಗಭಾವನೆಯನ್ನು ಕಲ್ಪಿಸಿ ಪ್ರತಿಯೊಂದು ಇಂದ್ರಿಯವನ್ನೂ ಅಂತಃಕರಣವನ್ನೂ ಪರಮಾತ್ಮಭಾವನೆಯಿಂದ ತುಂಬಿ ಸದ್ವಿಚಾರಗಳು ಒಡಮೂಡುವಂತೆ ಮಾಡಿ ಭಕ್ತನು ಪರಮಾತ್ಮ ಧ್ಯಾನ ನಿರತನಾಗಿ ಅದನ್ನು ಹೊಂದುವಂತೆ ಮಾಡಿದೆ. ಇದೇ ವೀರಶೈವ ಮಾನಸ ಶಾಸ್ತ್ರದ ವೈಶಿಷ್ಟ್ಯವು.

---



# ಕನ್ನಡ ಸಾಹಿತ್ಯದ ಸಿಂಹಾವಲೋಕನ.

( ಲೇಖಕ:— ಶಿವಮೂರ್ತಿ )

ಕನ್ನಡ ಸಾಹಿತ್ಯವು ಸುಮಾರು ೬ನೆಯ ಶತಮಾನದಿಂದ ಬೆಳೆದು ಬಂದಿರುತ್ತದೆ. ಆದರೆ ಆ ಕಾಲದ ಸಾಹಿತ್ಯ ಗ್ರಂಥಗಳು ನಮಗೆ ದೊರಕಿರು ವದಿಲ್ಲ. ೯ನೆಯ ಶತಮಾನದ ಕೊನೆಯಲ್ಲಿ ಆಳಿದ ರಾಷ್ಟ್ರಕೂಟ ರಾಜನಾದ ನೃಪತುಂಗನು ಬರೆದ "ಕವಿರಾಜಮಾರ್ಗ" ವೆಂಬ ಅಲಂಕಾರ ಗ್ರಂಥವು ಮಾತ್ರ ಉಪಲಬ್ದವಾಗಿದೆ. ಅವನ ಕಾಲದಲ್ಲಿ ಎಳೆ ಮಕ್ಕಳು, ಮಾಮೂ ಗರು ಸಹ ಕಾವ್ಯ ಪರಿಣತಮತಿಗಳಾಗಿದ್ದರೆಂದು ಅವನ ಗ್ರಂಥದಿಂದ ತಿಳಿಯುತ್ತದೆ. ಇದಲ್ಲದೆ ಅವನು ಆ ಗ್ರಂಥದಲ್ಲಿ ೬ನೆಯ ಶತಮಾನದ ಕೆಲವು ಗದ್ಯ ಪದ್ಯ ಗ್ರಂಥ ಕರ್ತರ ಹೆಸರುಗಳನ್ನು ನಿರ್ದೇಶಮಾಡಿರು ವದರಿಂದ ಕನ್ನಡ ಸಾಹಿತ್ಯವು ೬ನೆಯ ಶತಮಾನದಿಂದ ಪ್ರಾರಂಭವಾಗಿ ರುವದೆಂದು ಹೇಳಬಹುದು. ೬ನೆಯ ಶತಮಾನಕ್ಕಿಂತ ಪೂರ್ವದಲ್ಲಿ ಕನ್ನಡ ಸಾಹಿತ್ಯವು ಇದ್ದಿತೋ ಇಲ್ಲವೋ ಎಂಬದು ಸಂಶೋಧನೆಯ ವಿಷಯವಾಗಿದೆ.

ನಮ್ಮ ನಾಡಿನಲ್ಲಿ ಸುಮಾರು ೧೫೦೦ ಕನ್ನಡ ಕವಿಗಳಾಗಿ ಹೋದ ರೆಂದು ಆರ್. ನರಸಿಂಹಾಚಾರ್ಯರು ತಮ್ಮ ಕರ್ನಾಟಕ ಕವಿ ಚರಿತ್ರೆ ಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಆಂದಬಳಿಕ ನಮ್ಮ ಸಾಹಿತ್ಯವು ಜಗತ್ತಿನ ಯಾವ ಸಾಹಿತ್ಯಕ್ಕೂ ಹಿಂದು ಬೀಳಲಾರದು. ಕ್ರಿ. ಶ. ೯ರಿಂದ ೧೨ನೆಯ ಶತಮಾನದವರೆಗೆ ಕನ್ನಡದಲ್ಲಿ ವಿಶೇಷವಾಗಿ ಜೈನ ಕವಿಗಳಾಗಿ ಹೋದರು. ಆದ್ದರಿಂದ ಆ ಕಾಲಕ್ಕೆ ಕೆಲವರು ಜೈನಯುಗವೆಂದು ಕರೆದಿದ್ದಾರೆ. ಆದರೂ ಈ ಕಾಲದಲ್ಲಿ ಪಂಚತಂತ್ರವನ್ನು ಬರೆದ ದುರ್ಗಸಿಂಹ, ಕಾದಂಬರಿ ಯನ್ನು ಬರೆದ ೨ನೇ ನಾಗವರ್ಮ, ಚಂದ್ರಚೂಡಾಮಣಿ ಶತಕವನ್ನು ಬರೆದ ನಾಗವರ್ಮಾಚಾರ್ಯ ಎಂಬವರು ಬ್ರಾಹ್ಮಣರಾಗಿದ್ದರು. ಜೈನ ಕವಿಗಳಲ್ಲಿ ಪಂಪ, ಪೊನ್ನ, ರನ್ನರು, ರತ್ನತ್ರಯಗಳೆಂದು ಕರೆಯಲ್ಪಟ್ಟಿ ದ್ದಾರೆ. ಅವರು ಒಂದೊಂದು ಲೌಕಿಕ ಕಾವ್ಯವನ್ನೂ ಒಂದೊಂದು ಧಾರ್ಮಿಕ ಕಾವ್ಯವನ್ನೂ ಬರೆದಿದ್ದಾರೆ. ಪಂಪನ ಭಾರತ, ರನ್ನನ ಗದಾ ಯುದ್ಧ, ಪೊನ್ನನ ರಾಮಕಥೆ, ಇವು ಲೌಕಿಕ ಕಾವ್ಯಗಳು. ಪಂಪನ

ಆದಿಪುರಾಣ, ಪೊನ್ನನ ಶಾಂತಿಪುರಾಣ, ರನ್ನನ ಅಜಿತಪುರಾಣ ಇವು ಧಾರ್ಮಿಕ ಕಾವ್ಯಗಳು. ಲೌಕಿಕ ಕಾವ್ಯಗಳಲ್ಲಿ ವೀರರಸಪ್ರಧಾನ್ಯವಾಗಿರುವದರಿಂದಲೂ ಆಯಾಯ ಕವಿಗಳು ದಂಡನಾಯಕರಾದುದರಿಂದಲೂ ಆ ಕಾಲಕ್ಕೆ ಕೆಲವರು ಕ್ಷಾತ್ರಯುಗವೆಂದು ಕರೆದಿರುವರು. ಆದರೆ ಅವರು ಬರೆದ ಧಾರ್ಮಿಕ ಕಾವ್ಯಗಳಲ್ಲೆಲ್ಲ ತ್ಯಾಗ, ವೈರಾಗ್ಯ, ತಪಸ್ಚರ್ಯಾದಿ ಗುಣಗಳು ಶಾಂತಿ ರಸವನ್ನು ಸೂಚಿಸುವದರಿಂದ ಅದು ಕ್ಷಾತ್ರಯುಗವೆನ್ನುವದೂ ಕಷ್ಟವೇ. ಈ ಕಾಲದ ಕವಿಗಳು ಬಹುಶಃ ಚಂಪೂ ಗ್ರಂಥಗಳನ್ನೇ ಬರೆದರು. ಚಂಪುಗಳೆಂದರೆ ಗದ್ಯ ಪದ್ಯಾತ್ಮಕ ಗ್ರಂಥಗಳು. ಆದುದರಿಂದ ಕೆಲವರು ಈ ಅವಧಿಗೆ ಚಂಪೂ ಯುಗವೆಂದು ಹೇಳುವದುಂಟು. ಆದಾಗ್ಯೂ ಚಾವುಂಡರಾಯಪುರಾಣ, ದುರ್ಗಸಿಂಹನ ಪಂಚತಂತ್ರ ಇವು ಆ ಕಾಲದ ಗದ್ಯ ಗ್ರಂಥಗಳಾಗಿವೆ. ಈ ಕಾಲಕ್ಕೆ ಮಹಾ ಪ್ರತಿಭಾಶಾಲಿಯಾದ ಪಂಪನು ಆದಿಕವಿಯಾಗಿರುವದರಿಂದ ಅದಕ್ಕೆ ಕೆಲವರು "ಪಂಪಯುಗ" ವೆಂತಲೂ ಹೇಳುತ್ತಿದ್ದಾರೆ. ಆದರೆ ರನ್ನನು ಕೆಲವು ಕಾವ್ಯಗುಣಗಳಲ್ಲಿ ಪಂಪನಿಗಿಂತಲೂ ಎಷ್ಟೋ ಪಟ್ಟು ಮಿಗಿಲಾಗಿದ್ದಾನೆ. ಅಂದಬಳಿಕ ಅದಕ್ಕೆ " ರನ್ನಯುಗ " ವೆಂದೇಕೆ ಕರೆಯಬಾರದೆಂದು ಕೆಲವರು ವಾದಿಸಬಹುದು.

ಸಾಹಿತ್ಯ ವಿಭಾಗದ ದೃಷ್ಟಿಯು ಹೇಗೇ ಇರಲಿ; ಆದರ ಸ್ವರೂಪವು ಮಾತ್ರ ಒಂದೇ ಇದ್ದಿತು. ಎಲ್ಲ ಕವಿಗಳು ಸಂಸ್ಕೃತ ಮಹಾ ಕಾವ್ಯಗಳ ಅನುಕರುಣಮಾಡಿ ಪರಂಪರಾಪ್ರಿಯರಾಗಿದ್ದರು. ೧೮ ತರಹದ ವರ್ಣನೆಗಳನ್ನು ಅವರು ಬಿಟ್ಟಿರಲಿಲ್ಲ. ಕವಿಸಮಯದ ರಹಸ್ಯವನ್ನು ಮೀರಲಿಲ್ಲ. ವ್ಯಾಕರಣದ ಕಟ್ಟುಪಾಡುಗಳಿಂದ ದೂರವಾಗಿರಲಿಲ್ಲ. ಅವರ ಕಾವ್ಯಗಳಲ್ಲಿ ಸಂಸ್ಕೃತ ಶಬ್ದಗಳು ೧೦೦ಕ್ಕೆ ೯೦ರಂತೆ ಕಂಡುಬರುತ್ತವೆ. ಪಂಡಿತರಿಗಷ್ಟೇ ಆ ಕಾವ್ಯಗಳು ಗಮ್ಯವಾದವುಗಳು. ಆದರೆ ಪಾಮರರಿಗೆ ಅವುಗಳ ಗಂಧವು ಕೂಡ ಹತ್ತುತ್ತಿದ್ದಿಲ್ಲ. ಲಕ್ಷಣಬದ್ಧವಾಗಿಯೂ, ವ್ಯಾಕರಣ ಶುದ್ಧವಾಗಿಯೂ ಬರೆದುದೇ ಕಾವ್ಯ. ಅಂಥ ಕಾವ್ಯ ಬರೆದವನೇ ಸತ್ಕವಿ. ಹಾಗೆ ಬರೆಯದವನು ದುಷ್ಕವಿ ಇತ್ಯಾದಿ ವಿಚಾರಗಳು ಆ ಕಾಲದಲ್ಲಿ ಪ್ರಾಮುಖ್ಯವಾಗಿದ್ದವು. ಆದಾಗ್ಯೂ ಸಂಸ್ಕೃತ ಕನ್ನಡ ಮಿಶ್ರಣದಿಂದ ಕಾವ್ಯ ಬರೆಯುವವರ ವಿರುದ್ಧ ಗದೆಯೆತ್ತಿದ ಮೊದಲನೆಯ ಜೈನಕವಿಯೆಂದರೆ ನಯಸೇನನು (೧೧೧೨). ಬಳಿಕ ಅಂಡಯ್ಯ (೧೨೩೫) ಈತನನ್ನು ಹಿಂಬಾಲಿಸಿದನು. ಇರಲಿ.



ಮುಂದೆ ೧೨ನೆಯ ಶತಮಾನದಿಂದ ೧೬ನೆಯ ಶತಮಾನದವರೆಗೆ ಕನ್ನಡ ಸಾಹಿತ್ಯದಲ್ಲಿ ದೊಡ್ಡ ಕ್ರಾಂತಿಯಾಯಿತು. ಚಂಪೂ ಕಾವ್ಯಗಳು ತೀರ ಕಡಿಮೆಯಾಗಿ ಅವುಗಳ ಸ್ಥಳವಲ್ಲಿ ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ, ರಾಗ ಮುಂತಾದ ಛಂದಸ್ಸಿನಲ್ಲಿ ಸಾಹಿತ್ಯ ಝರಿಯು ಹರಿಯಲಾರಂಭಿಸಿತು. ವಚನಗಳ ಕ್ರಾಂತಿಯೆನ್ನೆಬ್ಬಿಸಿದವರು ಬಸವಾದಿ ಶಿವಶರಣರು. ಈ ವಚನಕಾರರ ಮುಖ್ಯ ಉದ್ದೇಶವು ಸಾಹಿತ್ಯದ ಕಡೆಗೆ ಅಷ್ಟು ಇದ್ದಿಲ್ಲ. ವ್ಯಾಕರಣ ಛಂದಸ್ಸು, ಅಲಂಕಾರ, ಶೈಲಿ ಮುಂತಾದವುಗಳನ್ನು ಅವರು ಅಷ್ಟು ಗಮನಿಸಲಿಲ್ಲ. ಆದರೆ ಅವರು ಗೌತಮಬುದ್ಧನಂತೆ ಸಾಮಾಜಿಕ ಧಾರ್ಮಿಕ ಕ್ರಾಂತಿಯನ್ನೇ ಮುಖ್ಯವಾಗಿ ಮಾಡಿದರು. ಆದ್ದರಿಂದ ನಾವು ಇದಕ್ಕೆ ಕ್ರಾಂತಿಯುಗವೆಂದೆನ್ನಬಹುದು. ಆದರೆ ಸಾಮಾಜಿಕ ಧಾರ್ಮಿಕ ಕ್ರಾಂತಿಯ ಜೊತೆಗೆ ಪರ್ಯಾಯದಿಂದ ಸಾಹಿತ್ಯ ಕ್ರಾಂತಿಯೂ ಆಯಿತು. ಆದರೆ ವಚನಕಾರರಿಗೆ ಸಾಹಿತ್ಯಕ್ರಾಂತಿಯು ಗೌಣವಾದುದು. ಇವರ ಕ್ರಾಂತಿಯು ಪಂಡಿತರನ್ನುದ್ದೇಶಿಸಿರಲಿಲ್ಲ. ಇವರು ಸಂಸ್ಕೃತಕ್ಕೆ ಪ್ರಾಶಸ್ತ್ಯಯನ್ನೀಯಲಿಲ್ಲ. ವ್ಯಾಕರಣಾದಿಗಳ ಕಟ್ಟು ಪಾಡುಗಳನ್ನು ಕಿತ್ತೊಗೆದರು. ಸಮಾಜದಲ್ಲಿ ನೆಲೆಗೊಂಡಿರುವ ಸ್ವಾರ್ಥ ದುರಾಚಾರಗಳನ್ನು ಪ್ರತಿಭಟಸಲಿಕ್ಕೆ ಅವರ ಅಂತರಾಳದಿಂದ ತಿಳಿಗನ್ನಡದ ನೈತಿಕ ವಚನಗಳು ಹೊರಹೊಮ್ಮಿದವು. ಡಂಭಾಚಾರ ಭಕ್ತಿಯನ್ನು ಖಂಡಿಸಿ ಸಹಜವಾದ ಭಕ್ತಿಯನ್ನು ಜನತೆಯಲ್ಲಿ ಪ್ರೇರೇಪಿಸಲು ನಿಜವಾದ ಭಕ್ತಿಯ ತಿರುಳ್ಗನ್ನಡದ ವಚನಗಳು ಅವರ ಹೃದಯದಿಂದ ಸ್ಫುರಣಗೊಂಡವು. ಗೊಳ್ಳು ವೇದಾಂತ ಮತ್ತು ಮಳ್ಳು ಸಿದ್ಧಾಂತದ ಕುಡಿಗಳನ್ನು ಕತ್ತರಿಸಿ ದ್ವೈತಾದ್ವೈತಗಳನ್ನು ಸಮನ್ವಯಗೊಳಿಸುವ ಸರಳ್ಗನ್ನಡದ ಷಟ್‌ಸ್ಥಲ ಸಿದ್ಧಾಂತವು ಶಿವಾನುಭವ ಮಂಟಪದಲ್ಲಿ ಶರಣರಿಂದ ಪ್ರಾದುರ್ಭವಿಸಿತು.

ಜನಸಾಮಾನ್ಯರಿಗೆ ಈ ತತ್ವಗಳು ಬಹುಮಾನ್ಯವಾಗಿ ತೋರಿದ್ದರಿಂದ ಆ ಕಾಲಕ್ಕೆ ಕುಲಕೋಟ್ಯರು ಶಿವಶರಣರಾಗಿ ಹೋದರು. ಎಷ್ಟೋ ಕೀಳುಕುಲದಲ್ಲಿ ಹುಟ್ಟಿದ ಶರಣರು ಮೇಲ್ತರದ ವಚನಕಾರರೂ ಆಗಿದ್ದಾರೆ. ವೀರಶೈವ ಮತಪ್ರಸಾರವು ವಚನಗಳ ಮೂಲಕ ಒತ್ತರದಿಂದ ಸಾಗಿತು. ಕನ್ನಡ ವಚನಗಳ ಬೆಲೆಯು ಸಂಸ್ಕೃತ ಉಪನಿಷತ್ತುಗಳಿಗಿಂತ ಎಷ್ಟುಮಾತ್ರವೂ ಕಡಿಮೆಯಾಗಿರಲಿಲ್ಲ. ಅಂತೆಯೇ ಅವು ಕನ್ನಡ ಉಪನಿಷತ್ತುಗ

ಳೆಂದು ಹೆಸರಾಗಿವೆ. ವಚನಗಳು ೩ ಎಂಭತ್ತು ಕೋಟಿಯಿದ್ದುವೆಂದೂ
ಸುಮಾರು ೭೭೦ ವಚನಕಾರರು ಅವುಗಳನ್ನು ಬರವರೆಂದೂ ಪ್ರತೀತಿ
ಯುಂಟು. ಅವೆಲ್ಲ ವಚನಗಳೂ ಆ ಶರಣರ ಚರಿತ್ರೆಗಳೂ ಈಗ ಉಪ
ಲಬ್ಧವಿದ್ದಿದ್ದರೆ ವೀರಶೈವರ ಕೈಹಿಡಿಯುವವರಾರು! ಆದರೆ ಈ ವರೆಗೆ
ನಮಗೆ ದೊರೆತ ವಚನಗಳು ೧ ಲಕ್ಷ ಸಹ ಆಗುವವೋ ಇಲ್ಲವೋ ಸಂ
ಶಯ. ಈಗ ಸುಮಾರು ೩೩೦ ಶಿವಶರಣರ ಹೆಸರುಗಳು ಮಾತ್ರ ತಿಳಿದು
ಬರುತ್ತವೆ. ಆದರೆ ಅವರು ಬರೆದ ಎಲ್ಲ ವಚನಗಳೂ ಉಪಲಬ್ಧವಿಲ್ಲ.
ಇನ್ನುಳಿದ ವಚನಕಾರರ ಸುಳಿವಂತೂ ಇಲ್ಲವೇ ಇಲ್ಲ. ಎಷ್ಟು ಮನೆ ಮಠ
ಗಳಲ್ಲಿ ಅವು ಹುಳ ಹತ್ತಿ ಕೆಟ್ಟು ಹೋದವೋ! ಎಷ್ಟು ವಿರೋಧಿಗಳು
ಅವುಗಳನ್ನು ಸುಟ್ಟುಬಿಟ್ಟರೋ! ಎಷ್ಟು ಸ್ಥಳಗಳಲ್ಲಿ ಅವು ಇನ್ನೂ ಮೂ
ಲೆಗುಂಪಾಗಿ ಹಾಗೇ ಬಿದ್ದಿರುವವೋ! ನಾವರಿಯೆವು. ಇನ್ನೂ ವಚನ
ಗಳ ಸಂಶೋಧವು ನಿರರ್ಗಳವಾಗಿ ಹಾಗೆಯೇ ನಡೆದಿದೆ. ಜಗತ್ತಿನಲ್ಲಿ
ವಚನವಾಙ್ಮಯದಷ್ಟು ಅಮೌಲ್ಯವಾದ ಮತ್ತು ವಿಶಾಲವಾದ ಸಾಹಿತ್ಯವು
ಬೇರೊಂದಿರಲಿಕ್ಕೆ ಯಾವ ಕಾಲದಲ್ಲಿಯೂ ಶಕ್ಯವಿಲ್ಲ!

ವಚನಗಳು ಪದ್ಯಕಾವ್ಯಗಳಲ್ಲಿ ಕಂಡುಬರುವಂಥ ಗದ್ಯಗಳೇನೂ
ಅಲ್ಲ. ಅಥವಾ ಅವು ಗದ್ಯರೂಪದ ಗ್ರಂಥಗಳೂ ಅಲ್ಲ. ಅವುಗಳ ಸ್ವರೂ
ಪವು ಬಾಯಿಬಲ್, ಕುರಾನ, ಧಮ್ಮಪದ, ಉಪನಿಷತ್ತುಗಳ ವಾಕ್ಯಗ
ಳಂತೆ ಒಂದು ವಿಶಿಷ್ಟತರದ ರೂಪವನ್ನು ಹೊಂದಿರುತ್ತವೆ. ಸ್ವರೂಪ
ದಲ್ಲಿ ಗದ್ಯಗಳಾಗಿದ್ದರೂ ಪದಗಳಂತೆ ಅವುಗಳನ್ನು ಹಾಡಲೂಬಹುದು.
ಹಿಂದಿನ ಹಿರಿಯರು ವಚನಗಳನ್ನು ಅನ್ನಬೇಕಾದರೆ ಒಂದು ರೀತಿ
ಯಿಂದ ಹಾಡಿದಂತೆ ಮಾಡುತ್ತಾರೆ. ಇತ್ತೀಚಿಗೆ ಶಾಸ್ತ್ರೋಕ್ತ ಸಂಗೀ
ತಕ್ಕೆ ಹೊಂದಿಸಿ ವಚನಗಳನ್ನು ಹಾಡುವ ಪದ್ಧತಿಯು ಪ್ರಾರಂಭವಾ
ಗಿದೆ. ಕಾವ್ಯದಲ್ಲಿರುವ ರಸ, ಧ್ವನಿ ಮೊದಲಾದ ಮುಖ್ಯ ಗುಣಗಳು
ವಚನಗಳಲ್ಲಿ ಹೆಜ್ಜೆಜ್ಜೆಗೆ ಕಂಡುಬರುತ್ತವೆ. ವಚನಗಳಲ್ಲಿ ಉಪಮಾ,
ರೂಪಕ, ಉತ್ಪ್ರೇಕ್ಷಾದಿ ಅಲಂಕಾರಗಳಂತು ಬಹು ಸುಂದರವಾಗಿವೆ.
ವಚನಗಳು ತತ್ವಗಳಾಗಿದ್ದರೂ ಕಾವ್ಯಗಳು ಅಹುದು. ಇವುಗಳಿಗೆ ತತ್ವ
ಮಯ ಕಾವ್ಯಗಳೆಂದೂ ನಾವು ಕರೆಯಬಹುದು. ಕಾವ್ಯದಂತೆ ಎದೆ
ಯನ್ನರಳಿಸುವದಲ್ಲದೆ ತತ್ವಜ್ಞಾನದಂತೆ ವಚನಗಳು ತಲೆಯಲ್ಲಿ ವಿಚಾ
ರಗಳನ್ನು ಪರಿಪಕ್ವಗೊಳಿಸಬಲ್ಲವು.



ವಚನಗಳು ಮುಂದೆ ಉಗಮವಾದ ಸಾಹಿತ್ಯದ ಮೇಲೆ ಒಳ್ಳೇ
ಬಲವಾದ ಪರಿಣಾಮವನ್ನುಂಟು ಮಾಡಿದವು. ವೀರಶೈವ ಆದಿಕವಿಯೆ
ನಿಸಿದ ಹರಿಹರನು ಶಿವಶರಣರ ವಚನ ರಸದ ಮಾಧುರ್ಯವನ್ನುಂಡ
ಭ್ರಮರವು. ಆ ವಚನಗಳ ಸಾರವನ್ನೇ ಆ ಭ್ರಮರವು ಕಥಾರೂಪದ
ಭಿನ್ನ ಭಿನ್ನ ರಗಳೆಗಳಲ್ಲಿ ಝೇಂಕರಿಸಿದೆ. ಎಷ್ಟೋ ಶಿವಶರಣರು ಹರಿ
ಹರನಿಗೆ ಕಥಾನಾಯಕರಾದರು. ಆತನ ಭಕ್ತಿಯ ಕಣಿಗಳಾದರು.
ಆತನ ಪ್ರತಿಯೊಂದು ರಗಳೆಯಲ್ಲಿಯೂ ಶರಣರ ವಚನಗಳು ಪ್ರತಿಬಿಂಬಿತ
ವಾಗಿವೆ. ಹರಿಹರನು ಉಭಯ ಭಾಷಾವಿಶಾರದನು. ಕಠಿಣ ಶೈಲಿಯ
ಚಂಪೂ ಕಾವ್ಯಗಳನ್ನು ಬರೆಯುವ ಬಲವಿಲ್ಲದೆ ಸರಳವಾದ ರಗಳೆಗ
ಳನ್ನು ಬರೆದನೆಂದು ಆರೋಪ ಮಾಡುವಂತೆಯೂ ಇಲ್ಲ. ಆತನು ಅಪ್ರ
ತಿಮವಾದ 'ಗಿರಿಜಾಕಲ್ಯಾಣ' ವೆಂಬ ಚಂಪೂ ಗ್ರಂಥವನ್ನೂ ಬರೆದಿ
ದ್ದಾನೆ. ಆದರೆ ಈ ಮೊದಲು ರಗಳೆಗಳ ಪ್ರಚಾರವು ಅತಿವಿರಳ. ಹರಿ
ಹರನು ರಗಳೆಗಳಲ್ಲಿ ಸಾಂಪ್ರದಾಯಿಕವಾದ ೧೮ ತರಹದ ವರ್ಣನೆಗಳನ್ನೂ
ರಳಕುಳಕ್ಕಳಗಳನ್ನೂ ಕಿತ್ತೊಗೆದನು. ಒಟ್ಟಿನ ಮೇಲೆ ಶರಣರ ವಚನ
ಸುಧೆಯನ್ನು ತನ್ನ ರಗಳೆಯಲ್ಲಿ ಹರಿಸಿದನು. ವಚನಗಳ ತರುವಾಯ
ಅಮೋಘವಾದ ಕನ್ನಡ ಸಾಹಿತ್ಯವೆಂದರೆ ನಿಜವಾಗಿಯು ರಗಳೆಯೆಂದು
ಹೇಳಬಹುದು.

ಹರಿಹರನ ತರುವಾಯ ಆತನ ಸೋದರಳಿಯನಾದ ರಾಘವಾಂಕ
ನಾದರೂ ಉಭಯ ಭಾಷಾಪಂಡಿತನು. ಆತನು ಸಂಸ್ಕೃತಮಯವಾದ
ಚಂಪೂ ಶೈಲಿಯನ್ನು ಬಿಟ್ಟು ವಚನಗಳಂತೆ ಸರಳಗನ್ನಡ ಶೈಲಿಯಲ್ಲಿ
ಮೊಟ್ಟಮೊದಲು ಷಟ್ಪದಿಕಾವ್ಯಗಳನ್ನು ಹೆಚ್ಚಾಗಿ ಬಳಕೆಯಲ್ಲಿ ತಂದು
ಷಟ್ಪದಿಸ್ಥಾಪನಾಚಾರ್ಯನೆಂದೆನಿಸಿಕೊಂಡನು. ಅವನ ಕಾವ್ಯಸರಳತೆಗೂ
ವಚನಕಾರರ ವಚನಗಳೇ ಬಹುಮಟ್ಟಿಗೆ ಕಾರಣವೆಂದು ಹೇಳಬಹುದು.
ವಚನಗಳು ಪ್ರಸಾರವಾಗದಿದ್ದರೆ ಹರಿಹರನೂ ರಾಘವಾಂಕನೂ ಜೈನ
ರಂತೆ ಚಂಪೂಕಾವ್ಯಗಳನ್ನೇ ರಚಿಸಿಬಿಡುತ್ತಿದ್ದರು. ಈ ರಾಘವಾಂಕ
ನನ್ನನುಸರಿಸಿ ಮುಂದೆ ಬಸವ ಪುರಾಣ, ಕುಮಾರವ್ಯಾಸಭಾರತ, ಚೆನ್ನ
ಬಸವಪುರಾಣ, ಜೈಮಿನಿಭಾರತ, ಪ್ರಭುಲಿಂಗಲೀಲೆ, ಮೊದಲಾದ ಷಟ್ಪದಿ
ಕಾವ್ಯಗಳು ಹುಟ್ಟಿ ಬೆಳಕಿಗೆ ಬರಲು ಅನುವಾಯಿತು. ರಗಳೆಗಳ ತರು
ವಾಯ ಬೆಳಕಿಗೆ ಬಂದ ಪ್ರಾಮುಖ್ಯವಾದ ಸಾಹಿತ್ಯವೆಂದರೆ ಷಟ್ಪದಿ
ಸಾಹಿತ್ಯವು.

ಮುಂದೆ ೧೫ನೆಯ ಶತಮಾನದಲ್ಲಿ ೨ನೆಯ ದೇವರಾಯನ ಆಳಿಕೆಯಲ್ಲಿ ಶಿವಶರಣರ ವಚನಗಳ ಆಧಾರದಿಂದ ಎಷ್ಟೋ ಶಾಸ್ತ್ರೀಯ ಗ್ರಂಥಗಳೂ ಕಾವ್ಯಗಳೂ ಶತಕಗಳೂ ಹುಟ್ಟಿ ಬೆಳಕಿಗೆ ಬಂದವು. ನೂರೊಂದು ಜನ ವಿರಕ್ತರು ಒಳ್ಳೆ ಸಾಹಿತಿಗಳಾಗಿ ಕನ್ನಡಮಾತೆಯ ಸೇವೆಯನ್ನು ಮಾಡಿದರು. ಲಕ್ಕಣ್ಣ ದಂಡೇಶ, ಜಕ್ಕಣಾರ್ಯ, ಮಹಲಿಂಗದೇವ, ಚಾಮರಸ, ಮೊಗ್ಗೆಯ ಮಾಯಿದೇವ, ಕಲ್ಲುಮಠದ ಪ್ರಭುದೇವ, ಕರಸ್ಥಲದನಾಗಿದೇವ, ಗುರುಬಸವ, ತೋಂಟದ ಸಿದ್ಧಲಿಂಗ, ಗುಬ್ಬಿಯ ಮಲ್ಲಣ್ಣ ಮೊದಲಾದವರ ಹೆಸರುಗಳು ವೀರಶೈವ ಸಾಹಿತ್ಯದಲ್ಲಿ ಚಿರಸ್ಮರಣೀಯವಾಗಿವೆ. ಇವೆಲ್ಲ ಕವಿಗಳು ವಚನಗಳ ಮಾಲಿಂಡು ಬೆಳೆದ ಶಿಶುಗಳು.

೧೨೩೨ ರಲ್ಲಿ ಜೈನ ಕವಿಯಾದ ಶಿಶುಮಾಯಣನು ತ್ರಿಪುರದಹನ, ಅಂಜನಾ ಚರಿತ್ರೆಗಳನ್ನು ಸಾಂಗತ್ಯದಲ್ಲಿ ಮೊಟ್ಟಮೊದಲು ರಚಿಸಿದನು. ಷಟ್ಪದಿಯ ತರುವಾಯ ಬೆಳಕಿಗೆ ಬಂದ ಸಾಹಿತ್ಯವೆಂದರೆ ಸಾಂಗತ್ಯವು. ಸಾಂಗತ್ಯವು ಹೆಣ್ಣುಮಕ್ಕಳು ಸರವಾಗಿಯೂ ಸರಳವಾಗಿಯೂ ಹಾಡಿ ಆನಂದಬಡುವ ಛಂದವು. ಶಿಶುಮಾಯಣನು ಸಾಂಗತ್ಯದ ಕ್ರಾಂತಿಕಾರನು. ಇವನ ತರುವಾಯ ಭರತೇಶವೈಭವ, ರೇವಣಸಾಂಗತ್ಯ, ಅಕ್ಕಗಳ ಸಾಂಗತ್ಯ, ಹದಿಬದೆಯಧರ್ಮ, ಶರಣರಸಾಂಗತ್ಯ ಇತ್ಯಾದಿ ಗ್ರಂಥಗಳ ರಚನೆಗೆ ಅನುವಾಯಿತು. ೧೨೭೫ ರಲ್ಲಿ ಕುಮುದೇಂದು ಎಂಬ ಜೈನಕವಿಯು ಬೇರೆ ಬೇರೆ ಷಟ್ಪದಿಗಳಲ್ಲಿ ಕುಮುದೇಂದುರಾಮಾಯಣವನ್ನು ರಚಿಸಿದನು. ಮುಂದೆ ಅದು ಮಂಗರಸನ 'ಜಯನೃಪಕಾವ್ಯಾದಿಗಳಿಗೆ ಬಹುಮಟ್ಟಿಗೆ ಸಹಾಯ ಮಾಡಿತು.

ಸು. ೧೫೦೦ರಲ್ಲಿ ೬೩ ಪುರಾತನರ ತ್ರಿಪದಿಯನ್ನು ನಿಜಗುಣಶಿವಯೋಗಿಯು ಬರೆದಬಳಿಕ ಸರ್ವಜ್ಞನ ಅಮೌಲ್ಯವಾದ ತ್ರಿಪದಿ ಗ್ರಂಥವು ಬೈಲಿಗೆ ಬಿದ್ದಿತು. ಅದೇ ನಿಜಗುಣಶಿವಯೋಗಿಯು ತನ್ನ ಕೈವಲ್ಯಪದ್ಧತಿಯಲ್ಲಿ ತೋಡಿ, ಶಂಕರಾಭರಣ, ಕಲ್ಯಾಣಿ, ಧನ್ಯಾಸಿ, ರೇಗುಪ್ತಿ ಮೊದಲಾದ ರಾಗಗಳ ಭಕ್ತಿ-ಜ್ಞಾನ-ವೈರಾಗ್ಯದ ಪದಗಳನ್ನು ರಚಿಸಿದ ತರುವಾಯ ಮುಂದೆ ಪುರಂದರದಾಸ, ಕನಕದಾಸ ಮೊದಲಾದ ದಾಸಕೂಟದವರೂ, ಸರ್ಪಭೂಷಣ, ಮುಪ್ಪಿನ ಷಡಕ್ಷರಿ, ಬಾಲಲೀಲಾ ಮಹಾಂತಸ್ವಾಮಿ, ಘನಮಠಾರ್ಯ ಮೊದಲಾದ ಕೈವಲ್ಯಕಾರರೂ ಈ ಮಾರ್ಗವನ್ನೇ ಅನುಸರಿಸಿದರು.



ಈ ಮೇರೆಗೆ ಕನ್ನಡ ಸಾಹಿತ್ಯ ಪ್ರವಾಹವು ಚಂಪೂ, ಷಟ್ಪದಿ, ವಚನ, ರಗಳೆ, ತ್ರಿಪದಿ, ಸಾಂಗತ್ಯ, ರಾಗ ಮೊದಲಾದ ರೂಪಗಳಿಂದ ಮಂಜುಳವಾಗಿ ನಿನಾದ ಮಾಡುತ್ತ ೧೮ನೆಯ ಶತಮಾನವನ್ನು ದಾಟಿ ೨೦ನೆಯ ಶತಮಾನದ ವರೆಗೆ ಸಾಗಿತು.

೧೯ನೆಯ ಶತಮಾನದ ಕೊನೆಯ ಭಾಗದಿಂದ ಕನ್ನಡ ಸಾಹಿತ್ಯದ ಸ್ವರೂಪವು ನೆರೆಹೊರೆಯ ಭಾಷೆಗಳ ಸಾಹಿತ್ಯದ ಹಾಗೂ ಪಾಶ್ಚಾತ್ಯ ಸಾಹಿತ್ಯದ ಸ್ವರೂಪದ ಅನುಕರಣ ಮಾಡಹತ್ತಿತು. ಆದ್ದರಿಂದ ಈಗಿನ ಕಾಲಕ್ಕೆ ನಾವು "ಅನುಕರಣಯುಗ"ವೆಂದು ಕರೆಯಬಹುದು. ಗಳಗನಾಥರು ಮರಾಠಿ ಪದ್ಧತಿಯ ಮೇರೆಗೆ ಕಾದಂಬರಿಗಳನ್ನು ರಚಿಸಿದರು. ಬಿ ವೆಂಕಟಾಚಾರ್ಯರು ಬಂಗಾಳಿ ಪದ್ಧತಿಯಿಂದ ಕಾದಂಬರಿಗಳನ್ನು ಬರೆದರು. ವಾಸುದೇವಾಚಾರ್ಯ ಕೆರೂರ, ಮತ್ತು ಶ್ರೀನಿವಾಸ ಇವರು ಪಾಶ್ಚಾತ್ಯ ಪದ್ಧತಿಯ ಸಣ್ಣ ಸಣ್ಣ ಕಥೆಗಳನ್ನು ಪ್ರಚಾರದಲ್ಲಿ ತಂದರು. ಎಷ್ಟೋ ಪಾಶ್ಚಾತ್ಯ ಪದ್ಧತಿಯ ವಿಮರ್ಶ ಗ್ರಂಥಗಳೂ ಹುಟ್ಟಿವೆ. ಸು. ೧೯೨೦ ರಲ್ಲಿ ಧಾರವಾಡದ ಗೆಳೆಯರ ಗುಂಪಿನವರು ಪ್ರಾಸವಿಲ್ಲದ ಸರಳ ವೃತ್ತಗಳನ್ನು ಕಲ್ಪಿಸಿ ಸಣ್ಣಪುಟ್ಟ ವಿಷಯಗಳ ಮೇಲೆ "ಭಾವಗೀತೆ" ಗಳನ್ನು ರಚಿಸಲಾರಂಭಿಸಿದರು. ಮುಂದೆ ಶ್ರೀಮಾನ್ ಶ್ರೀಕಂಠಯ್ಯನವರ ಇಂಗ್ಲಿಷ್ ಗೀತೆಗಳೂ ಪ್ರಚಾರವಾದವು. ಎಲ್ಲರಲ್ಲಿ ನವೀನ ಮಾದರಿಯ ಕವಿಗಳಾಗಬೇಕೆಂಬ ಹಂಬಲವು ಹೆಚ್ಚಿ ಅಸಂಖ್ಯ ಸಣ್ಣಪುಟ್ಟ ಕವಿಗಳ ಹೆಸರುಗಳು ಮೂಲೆ ಮೂಲೆಗಳಲ್ಲಿಯೂ ಕೇಳಬರುತ್ತವೆ. ಆ ಕಾವ್ಯಗಳನ್ನೆಲ್ಲ ವಿಮರ್ಶ ಮಾಡುತ್ತ ಹೋದರೆ ಒಂದು ರಾಮಾಯಣವೇ ಆದೀತು. ಇದು ಕನ್ನಡನಾಡಿನ ಸುದೈವವೆಂದು ಕೆಲವರು ಭಾವಿಸಿದ್ದರೆ ಕೆಲವರು ದುರ್ದೈವವೆಂದು ತಿಳಿದಿದ್ದಾರೆ. ಅದು ಏನೇ ಇರಲಿ. ಅನುಕರಣವು ಇನ್ನೂ ಪ್ರಯೋಗಾವಸ್ಥೆಯಲ್ಲಿದೆ. ನಾನಾ ಮುಖಗಳಿಂದ ಸಾಹಿತ್ಯವು ಬೆಳೆಯಬೇಕೆಂಬುದೇನೋ ಸಹೃದಯತೆಯ ಮಾತು. ಆದರೆ ಆ ಸಾಹಿತ್ಯವು ಅಸಡ್ಡಾಳವಾಗಿ ಬೆಳೆದು ನಿರರ್ಥಕವಾಗಬಾರದೆಂಬದೂ ವಿಹಿತವಾದ ಮಾತೇ. ಈಗಿನ ಕಾವ್ಯಗಳೆಲ್ಲವೂ ಕೆಡಕೆಂದು ಯಾರೂ ಸರ್ವಥಾ ತಿಳಿಯಬಾರದು. ಅವುಗಳಲ್ಲಿ ರಸವುಂಟು, ಪ್ರತಿಭೆಯುಂಟು, ಸೌಂದರ್ಯವುಂಟು. ಆದರೆ ಉತ್ತಮ ಪೈರುಗಳ ಜೊತೆಗೆ ಕಸಗಳನ್ನೂ ಬೆಳೆಯಗೊಡಬಾರದಷ್ಟೇ! ಬರೆದದ್ದೆ

ಲ್ಲವೂ ಸಾಹಿತ್ಯವಾದರೆ ಕನ್ನಡ ಮಾತೆಯ ಭಾಗ್ಯಕ್ಕೆಣೆಯೇ! ಅದು ದರಿಂದ ಉತ್ತಮೋತ್ತಮ ಸಾಹಿತ್ಯಗ್ರಂಥಗಳಿಗೆ ಪ್ರೋತ್ಸಾಹ ಕೊಡು ವದು ಕನ್ನಡಿಗರ ಆದ್ಯಕರ್ತವ್ಯವಾಗಿದೆ.

---

# ಸೃಷ್ಟಿಯ ಉತ್ಪತ್ತಿಯೂ ಶಿವಯೋಗದ ಮಹಿಮೆಯೂ.

(ಲೇಖಕ:— ರುದ್ರಪ್ಪ ಸಿದ್ದಪ್ಪ ಕೊಟಗಿ ಶಾಲಾಮಾಸ್ತರ ಗಜೇಂದ್ರಗಡ.)

---

(ಮುಂದುವರಿದದ್ದು.)

ಲಿಂಗಾಂಗ ಸಾಮರಸ್ಯದಿಂದ ಆತ್ಮನಲ್ಲಿ ಗುಪ್ತವಾಗಿದ್ದ ಸಕಲ ಜ್ಞಾನಭಾಂಡಾರವೇ ಸ್ಫೋಟವಾಗಿ ಹೋಗುವದರಿಂದ ಮನುಷ್ಯನು ಸಕಲಜ್ಞಾನಿಯೂ ಅತ್ಯಂತ ಸೂಕ್ಷ್ಮ ವಿಚಾರಿಯೂ ಆಗುವನು. ಸರ್ವವೂ ಬೈಲಿಗೆ ಬಿಚ್ಚಿಟ್ಟಂತಾಗುವದರಿಂದ ಗೂಢವೆಂಬದೇ ಅವನ ಪಾಲಿಗೆ ಇಲ್ಲ ದಾಗುವದು. ಲಿಂಗಾಂಗ ಸಾಮರಸ್ಯಕ್ಕೆ ಈ ಅಲ್ಪದೇಹದ ಅವಶ್ಯವೇ ಉಳಿಯದಂತಾಗುವದು. ಇಂದ್ರಿಯಗಳ ಅವಶ್ಯವಂತೂ ಆಗವನಿಗೆ ಉಳಿ ಯದೇ ಹೋಗುವದು. ಸರ್ವಸುಖಗಳ ಅನುಭವವು ಬರೇ ಅಪೇಕ್ಷೆ ಮಾತ್ರದಿಂದ ತನ್ನಷ್ಟಕ್ಕೆ ತಾನೇ ಆಗಹತ್ತುವದು. ಆಗ ಆಯಾ ಇಂದ್ರಿ ಯಗಳೂ ಅವುಗಳ ಉಪಭೋಗಾರ್ಹವಾದ ಒಡವೆಗಳೂ ಬೇಕಿಲ್ಲ ದಾಗುವವು. ಅಂದಬಳಿಕ ಈ ಸ್ಥಿತಿಯು ಮನುಷ್ಯರ ಪರಮಾದರಕ್ಕೂ, ಪೂಜ್ಯತ್ವಕ್ಕೂ ಕಾರಣವಾಗದೇನು ಮಾಡೀತು? ಇಂದಿನ ವರೆಗೆ ಆಗಿ ಹೋದ ಪರಮಶಿವಯೋಗಿಗಳು ಈ ಲಿಂಗಾಂಗ ಸಾಮರಸ್ಯದ ಫಲ ವನ್ನು ಪ್ರತ್ಯಕ್ಷ ಅನುಭವಿಸಿ ಅವರು ಅದರ ಬಗ್ಗೆ ಬಹಳ ಕೊಂಡಾಡಿ ರುವರು. ಈ ಲಿಂಗಾಂಗ ಸಾಮರಸ್ಯಕ್ಕೆ ಯಾವ ಅವಸ್ಥೆಯೂ ಸರಿ ಯಾಗಲಾರದು. ಜಾಗ್ರತಾವಸ್ಥೆಯು ಎಲ್ಲ ಅವಸ್ಥೆಗಳಿಗಿಂತ ಮೇಲಾಗಿ ದ್ದರೂ ಇದರ ಕೋಟ್ಯಾನುಕೋಟಿ ಪಟ್ಟು ಮೇಲಾದದ್ದಾಗಿದೆ. ಮನು ಷ್ಯನು ಜಾಗ್ರತಾವಸ್ಥೆಯಲ್ಲಿರುವಾಗಾದರೂ ಸುಖ-ದುಃಖಗಳ ಅನುಭ



ವಕ್ಕೆ ವಸ್ತುಗಳೇ ಬೇಕಾಗುವವು. ಆದರೆ ಲಿಂಗಾಂಗ ಸಾಮರಸ್ಯದಲ್ಲಿ ಯಾವ ವಸ್ತುವಿನ ಸಂಪರ್ಕವೂ ಇಲ್ಲದಲೇ ದಿವ್ಯ ಸುಖಾನುಭವವು ಆಗುತ್ತಿರುತ್ತದೆ. ಆತ್ಮನಲ್ಲಿ ಅಡಕನಾಗಿರುವ ಮೂಲ ಸುಖವೆಂಬದರ ರೂಪವೆಲ್ಲಾ ಒಂದೇ! ಬೇರೆ ಬೇರೆ ಇಂದ್ರಿಯಗಳಲ್ಲಿ ಪ್ರಕಟವಾಗುವ ಸುಖವು ಕೇವಲ ಅದರ ರೂಪಾಂತರವೇ ಎಂದು ಶಿವಯೋಗಿಯು ತನ್ನ ಅನುಭವದಿಂದ ಕಂಡುಕೊಂಡಿರುವನು. ಲಿಂಗಾಂಗ ಸಾಮರಸ್ಯದ ಸುಖವು ಈ ಪಂಚೇಂದ್ರಿಯಗಳಂತೆ ಕೆಲವು ಸೇಕಂದುಗಳ ಮಟ್ಟಿಗಷ್ಟೇ ದೊರೆತು ತದನಂತರ ಮಾಯವಾಗುವಂಥದಲ್ಲ. ಅದು ಸದಾನಂದ ಸ್ಥಿತಿಯೇ ಆಗಿರುವದು. ವೇಳೆಯ ಪರಿಮಿತಿಯ ಮಾನವೆಂಬುದೇ ಅದ ಕ್ಕಿಲ್ಲ. ಹಿಂದುಗಳು ಹಬ್ಬದ ಊಟದಲ್ಲಿ ಪಕ್ವಾನ್ನವೇ ಮೇಲಾದ ಸುಖ ದಾಯಕ ಊಟವೆಂದು ತಿಳಿಯುವರು. ಹಾಗು ಈ ಊಟದ ಸುಖ ಕ್ಕಾಗಿ ಅವರು ಎಂಟಾನು ಎಂಟು ದಿವಸ ಬಹಳ ಪರಿಶ್ರಮಪಟ್ಟು ಕಡೆಗೆ ಎಡೆಯಲ್ಲಿ ಕೆಡವಿಕೊಳ್ಳುವರು. ಆದರೂ ಇದರ ಸುಖವು ಬಾಯೊಳಗಿನ ತುತ್ತಿನೊಂದಿಗೆ ಬಹಳವಾದರೆ ೪-೫ ಮಿನುಟ್ಟುಗಳ ವರೆಗೆ ನಡೆಯಬೇಕಾದರೆ ಸಾಕುಸಾಕಾಗುವದು. ಬಾಯೊಳಗಿನ ತುತ್ತು ಹೊಟ್ಟೇ ಹೊಕ್ಕರೆ ಮತ್ತೂ ಬರೀಬಾಯಿ ಬಂಟರೇ ಸರಿ! ಬಹುದಿವಸ ನಿರೀ ಕ್ಷಣೆ ಮಾಡಿ ಬರಮಾಡಿಕೊಂಡ ದಾಂಪತ್ಯ ಸುಖವಾದರೂ ಅರೆವಾ ಸಿಯೇ ಆಗಿರುವದೆಂಬ ಮಾತನ್ನು ಬಿಚ್ಚಿ ಹೇಳಲಿಕ್ಕೇ ಬೇಡ! ಆದರೆ ಲಿಂಗಾಂಗ ಸಾಮರಸ್ಯದ ಸುಖವು ಇಂಥದಲ್ಲ! ಅದು ಪರಿಪೂರ್ಣ ವಾದದ್ದೂ, ಶಾಶ್ವತವಾದದ್ದೂ ಇರುವದೆಂದು ಶಿವಯೋಗಿಯು ಸ್ವಾನು ಭವದಿಂದ ಹೇಳುವನು. ಲಿಂಗಾಂಗ ಸಾಮರಸ್ಯದ ಸುಖವು ಅರೆವಾ ಸಿಯಲ್ಲ! ಅದರ ಸುಖಾನುಭವಕ್ಕೆ ಏನೇನೂ ಬೇಕಿಲ್ಲ! ಬರೇ ಅಪೇಕ್ಷೆ ಮಾತ್ರದಿಂದಲೇ ಆ ದಿವ್ಯ ಸುಖದ ರಾಶಿಗೆ ರಾಶಿಯನ್ನು ಎಷ್ಟು ತಿಂದರೂ ಸವಿಯದಷ್ಟು ಅದು ಸಿಗುವದು. ಅದಕ್ಕೆ ಕಡಿಮೆ ಬೀಳುವದೇಗೊತ್ತಿಲ್ಲ. ಒಟ್ಟಿನ ಮೇಲೆ ಹೇಳಬೇಕಾದದ್ದಿಷ್ಟೇ! ಲಿಂಗಾಂಗ ಸಾಮರಸ್ಯದ ಸುಖವು ಪ್ರಾಪಂಚಿಕ ಸುಖಗಳಿಗಿಂತ ಕೋಟ್ಯಾನುಕೋಟಿ ಪಾಲು ಮಿಗಿಲಾಗಿರು ವದಲ್ಲದೆ ಚಿರಕಾಲ ತಡೆಯುವಂಥಾದ್ದೂ, ಅತ್ಯಂತ ಸ್ಪಷ್ಟವಾಗಿರುವಂ ಥಾದ್ದೂ ಆಗಿರುವದರಿಂದ ಅದಕ್ಕೆ ಸರಿಯಾದ ಸುಖವೇ ಬೇರೊಂದಿಲ್ಲ.

ಲಿಂಗಾಂಗ ಸಾಮ್ರಾಜ್ಯ ವೈಭವಕ್ಕೆ ಜ್ಞಾನೈಶ್ವರ್ಯಗಳಾದರೂ ಜೋಡಾಗಲಾರವು. ಜಾಗ್ರತಾವಸ್ಥೆಯಲ್ಲೇ ಆಗಲಿ, ಇನ್ನಾವ ಅವ

ಸ್ಥೆಯಲ್ಲೇ ಆಗಲಿ, ಮನುಷ್ಯರಿಗಾಗುತ್ತಿರುವ ಜ್ಞಾನಕ್ಕೆ ಕೆಲವೊಂದು ಪರಿಮಿತಿಯೇ ಉಂಟು. ಅದನ್ನು ಮಿಕ್ಕಿ ಮನುಷ್ಯರ ವಿಚಾರವೇ ಮುಂದೆ ಸಾಗುವದಿಲ್ಲ. ಅಷ್ಟಿಗೆ ಹೋದಕೂಡಲೇ ಅವರ ಜ್ಞಾನಕ್ಕೆ ಒಡ್ಡೇ ಬಿದ್ದು ಬಿಡುವದು. ಆದ್ದರಿಂದ ಮುಂದೆ ವಿಚಾರವೇ ನೀಗದಂತಾಗಿ ಕೈ ಕಟ್ಟೀ ಹೋಗುವದು. ಇಂದಿನ ವರೆಗೆ ಘನವಿದ್ವಾಂಸರೆಂಬವರು ತಮ್ಮ ಆಯುಷ್ಯದ ಬಹು ದೊಡ್ಡ ಭಾಗವನ್ನು ವೆಚ್ಚಮಾಡಿ ಎಷ್ಟೋ ಹೊಸ ಹುಲುಬುಳ್ಳ ಗ್ರಂಥಗಳನ್ನು ಬರೆದಿರುವರು. ಅವುಗಳಲ್ಲಿ ಇದ್ದಷ್ಟು ವಿಷಯವನ್ನೇ ಪಾರುಗಲಿಯಬೇಕೆಂದರೂ ಈ ಮನುಷ್ಯ ಶರೀರಗಳು ಲಕ್ಷೋಪಲಕ್ಷ ಸಿಕ್ಕರೂ ಸಾಲದೇ ಹೋಗುವವು. ಅಂದಬಳಿಕ ನೂರಾರು ವರ್ಷಗಳಲ್ಲಿ ಬಿದ್ದುಹೋಗುವ ಇದೊಂದೇ ಜನ್ಮದ ಪಾಡೇನು? ಈಗ ಬೈಲಿಗೆ ಬಂದಿರುವ ಭೌತಿಕ ಶಾಸ್ತ್ರಗಳೂ ಇನ್ನೂ ಪೂರಾ ಮುಗಿದಿಲ್ಲ. ಅವುಗಳ ಬಗ್ಗೆ ಹೊಸ ಶೋಧಗಳು ಪ್ರತಿನಿತ್ಯ ಆಗುತ್ತಲೇ ಇರುವವು. ಆದ್ದರಿಂದ ಇವೆಲ್ಲ ಇನ್ನೂ ಅರಕಳಿಯಾಗಿಯೇ ಇರುವವು. ಇಂಥ ಅಪೂರ್ಣ ಶಾಸ್ತ್ರಗಳನ್ನು ಒಂದು ವೇಳೆ ತೀರಗಲಿತರೂ ವಿಶ್ವವ್ಯಾಪಿಯಾದ ಮಹಾಜ್ಞಾನವು ಮುಗಿದು ಜ್ಞಾನಪರಿಪೂರ್ಣತೆಯಾದರೂ ಒದಗಲಾರದೆಂಬದು ಸಹಜವಿದೆ. ಮನಸ್ಸೆಂಬದೇ ಮೊದಲು ಜಡಪದಾರ್ಥವು. ಇಂದ್ರಿಯಗಳಂತೂ ಕಣ್ಣಾಗಂಡು ಸ್ಥೂಲರೂಪವಾದವುಗಳಾಗಿವೆ. ಆದ್ದರಿಂದ ಮನುಷ್ಯನಿಗೆ ಈ ಮನುಷ್ಯ ಸ್ಥಿತಿಯಲ್ಲಾಗುವ ಜ್ಞಾನವು ಹೇಗಿದ್ದರೂ ಎಷ್ಟೋ ಸೂಕ್ಷ್ಮವೆಂದರೂ ಅದು ಮಬ್ಬಾದ ಬೆಳಕಿನಂತಿರುವ ಮಸುಮಸುಕಾದ ಜ್ಞಾನಕ್ಕಿಂತ ಮುಂದಿಲ್ಲ. ಆದರೆ ಲಿಂಗಾಂಗ ಸಾಮರಸ್ಯದಿಂದ ಮನುಷ್ಯರ ಆತ್ಮಗಳು ಪ್ರಕೃತಿಯಿಂದ ಸಂಪೂರ್ಣ ಬಿಡುಗಡೆಹೊಂದಿ ಸ್ವತಂತ್ರವಾಗಿಯೇ ಹೋಗುವದರಿಂದ ಅವುಗಳ ಸ್ವಭಾವಸಿದ್ಧವಾದ ಸೂಕ್ಷ್ಮತ್ವವು ಅವಕ್ಕೆ ದೊರತೇಹೋಗುವದು. ಆದ್ದರಿಂದ ಆ ಸೂಕ್ಷ್ಮಸ್ಥಿತಿಯ ಮೂಲಕ ಗೂಢವೆಂಬದರ ಗುಟ್ಟು ಎಂಥ ಗಹನವಾದದ್ದಿದ್ದರೂ ತಿಳಿದೇ ಬಿಡುವದು. ಬಹಳ ಹೇಳುವದೇನು? ವಿಶ್ವವ್ಯಾಪಿಯಾಗಿರುವ ಆಕಾಶ ತತ್ವದ ಕಣಗಳನ್ನು ಸಹ ಎಣಿಸಲಿಕ್ಕೂ ಶಕ್ತಿಯ ಪ್ರಭಾವವನ್ನು ತಿಳಿಯಲಿಕ್ಕೂ ಲಿಂಗಾಂಗ ಸಾಮರಸ್ಯವುಳ್ಳ ಶಿವಯೋಗಿಯು ತಕ್ಕವನಾಗುವನು. ಬರೇ ಅಪೂರ್ಣ ಜ್ಞಾನದ ಶಾಸ್ತ್ರಗಳನ್ನೋದಿದರೆ ಮನುಷ್ಯನು ಎಷ್ಟರಮಟ್ಟಿಗೆ ಜ್ಞಾನಪರಿಪೂರ್ಣನಾದಾನು? ಅಖಂಡ ಜ್ಞಾನ ಭಾಂಡಾರವೇ ಶಿವಯೋಗಿಗೆ ಸಹಜದೊರೆಯುತ್ತಿರಲಿಕ್ಕೆ ಆ ಸ್ಥಿತಿಯನ್ನು ಪಡೆಯದೆ ಒಂದೊಂದೇ



ಶಾಸ್ತ್ರದ ಕೊಂಚ ಕೊಂಚ ಭಾಗಕ್ಕಾಗಿ ಮನುಷ್ಯನು ತನ್ನ ಇಡೀ ಆಯುಷ್ಯವನ್ನೇ ನೀಗಿ ಬಿಡುವದು ವ್ಯರ್ಥವಾದ ಮಾತಲ್ಲವೇ? ಇದರಿಂದ ಜ್ಞಾನಗಳಿಸುವ ಮನುಷ್ಯನ ಹಸಿವೆಯು ಎಂದೂ ತೃಪ್ತವಾಗುವದಿಲ್ಲ. ಆದ್ದರಿಂದಲೇ ಇಹಲೋಕದ ಯಾತ್ರೆಯನ್ನು ಮುಗಿಸುವದೆಂದರೆ ದೊಡ್ಡ ದೊಡ್ಡ ಪಂಡಿತರಿಗಾದರೂ ಅತ್ಯಂತ ದುಃಖವಾಗಿಯೇ ಪರಿಣಮಿಸುವದು. ಇಹಲೋಕದಲ್ಲಿ ಮನುಷ್ಯತ್ವದಿಂದಲೇ ಇದ್ದು ಸುಖೋಪಭೋಗಗಳನ್ನು ಅನುಭವಿಸುವದೂ, ಜ್ಞಾನಗಳಿಸುವದೂ ಮುಗಿಯದ ಮಾತುಗಳೇ ಆಗಿರುವವು. ಇಹಲೋಕದಲ್ಲಿ ಸುಖ-ಜ್ಞಾನಗಳು ಮುಂದೆ ಮುಂದೆ ದೊರಕಿದಂತೆ ಕಂಡರೂ ಹಿಂದೆಹಿಂದೆಯೇ ಒರಿಸಿಹೋಗಿ ನೀರ ಮೇಲಿನ ಲಿಪಿಯಂತೆ ಎಲ್ಲಾ ಮಾಯವಾಗೇ ಹೋಗುವವು. ಆದ್ದರಿಂದ ಮಾಡಿದ್ದನ್ನೇ ಎಷ್ಟೋ ಸರತಿ ಮಾಡುವ ಪ್ರಸಂಗ ಬರುವದು ಅಂದಬಳಿಕ ಮನುಷ್ಯರ ಅಜ್ಞಾನವು ಹೇಗೆ ದೂರಾಗಬೇಕು? ಆದರೂ ಎಡವುತ್ತ ಮುಗ್ಗುತ್ತ ಎಷ್ಟೋ ಜನರು ಮರವೆಯ ಜೋಲೀಹಿಡಿದು, ಕೆಲಕೆಲವು ಶಾಸ್ತ್ರಗಳಲ್ಲಿ ಪಾರಂಗತರಾಗಿರುವೆವೆಂದು ತಮ್ಮ ಬೆನ್ನು ತಾವೇ ಚಪ್ಪರಿಸಿಕೊಂಡು ಅಹಂಕಾರ ತಾಳುವರು. ಒಟ್ಟಿನ ಮೇಲೆ ಈ ಮನುಷ್ಯ ಸ್ಥಿತಿಯಲ್ಲಿದ್ದುಕೊಂಡೇ ಸಂಪೂರ್ಣ ಜ್ಞಾನಪಡೆಯುವದು ಎಂದೂ ಆಗದ ಮಾತಾಗಿದೆ.

ಮನುಷ್ಯನು ಸರ್ವಜ್ಞನಾಗಬೇಕಾದರೆ ಶಿವಯೋಗಿಯೇ (ಲಿಂಗಾಂಗ ಸಾಮರಸ್ಯವುಳ್ಳವನೇ) ಆಗಲಿಕ್ಕೆ ಬೇಕು! ಇಂದಿನವರೆಗೆ ಮಹಾ ಮಹಾ ಜ್ಞಾನಿಗಳು ಈ ಪರಮ ಯೋಗಿಗಳೇ ಆಗಿರುವರಲ್ಲದೆ ಮತ್ತಾರೂ ಇಲ್ಲ. ನೀತಿ ಶಾಸ್ತ್ರಗಳು ಉದಯಿಸಲಿಕ್ಕೂ ಸಮಾಜ ಶಾಸ್ತ್ರವು ಏರ್ಪಡಲಿಕ್ಕೂ ಇಂದಿನವರೆಗೆ ಆಗಿ ಹೋದ ಬೇರೆ ಬೇರೆ ಯೋಗಿಗಳೇ ಕಾರಣರಾಗಿರುವರು. ಮನುಷ್ಯನು ಯೋಗ ಪ್ರಸನ್ನತೆಯನ್ನು ಹೆಚ್ಚೆಚ್ಚು ಪಡೆದಂತೆ ಅವನಿಂದ ಅಷ್ಟಷ್ಟು ಮಹತ್ಕಾರ್ಯಗಳೇ ಆಗುವವು. ಅವನಿಗೆ ಅಷ್ಟೊಂದು ಜ್ಞಾನೋದಯವೂ ಆಗೇ ತೀರುವದು. ಶಿವಯೋಗದ ಪ್ರಸನ್ನತೆಯನ್ನು ಪಡೆದ ಮಹಾತ್ಮನಿಗೆ ಸಕಲ ಶಾಸ್ತ್ರಗಳೇ ಹೃದಯದಲ್ಲಿ ತೆರೆದಿಟ್ಟಂತಾಗಿ ಬಿಡುವವು. ಇದರಿಂದ ಯಾವ ಶಾಸ್ತ್ರವನ್ನು ಜ್ಞಾನಕ್ಕಾಗಿ ಓದುವ ಅವಶ್ಯವೇ ಯೋಗಿಗೆ ಉಳಿಯುವದಿಲ್ಲ. ಕಲಿಕೆಯ ಮಾತು ಎಷ್ಟಿದ್ದರೂ ಕೆಳಗಿನ ಮೆಟ್ಟಿನದೇ. ಅದಕ್ಕೊಂದು ಮರ್ಯಾದೆಯು ಇರುವದು. ಕಲಿ

ತವನ ಜ್ಞಾನವು ಎಷ್ಟಾದರೂ ಅಪೂರ್ಣಾವಸ್ಥೆಯಲ್ಲೇ ಇರುವದು. ಕಲಿತ ಜೋಯಿಸನು ಎಂಥ ಪ್ರವೀಣನೆಂದರೂ ಅವನ ಬುದ್ಧಿಯೂ, ವಿಚಾರವೂ, ಅವನಿಗಿರುವ ಮೇರೆಯನ್ನು ಬಿಟ್ಟು, ಮುಂದೆ ಎಂದೂ ಹರಿಯುವದಿಲ್ಲ. ಅದ್ದರಿಂದ ಇವನಿಂದ ಎಷ್ಟೋ ತಪ್ಪುಗಳು ಆಗುವವು. ಇನ್ನುಳಿದ ಪದಾರ್ಥವಿಜ್ಞಾನ ಮೊದಲಾದ ಶಾಸ್ತ್ರಕಾರರಾದರೂ ಎಷ್ಟೋ ಮಾತುಗಳಲ್ಲಿ ತಪ್ಪುವರು. ಆದರೆ ಯೋಗವರ್ಯರು ಮಹಾ ಜ್ಞಾನ ಭಾಂಡಾರವನ್ನೇ ಹಸ್ತಗತ ಮಾಡಿಕೊಂಡಿರುವದರಿಂದ ತ್ರಿಕಾಲ ಜ್ಞಾನವೇ ಅವರಿಗಿರುತ್ತದೆ. ಮನುಷ್ಯರಿಗೆ ಆಶೆಯೆಂಬ ಪಿಶಾಚಿಯು ಗಟ್ಟಿಮುಟ್ಟಾಗಿ ಬಡಕೊಂಡಿರಲಿಕ್ಕೆ, ಪ್ರತಿಯೊಂದು ಮಾತಿನಲ್ಲಿ ಅಂಜಿ ಸಾಯುವಂಥ ಪರಿಸ್ಥಿತಿಗಳು ಒದಗುತ್ತಿರಲಿಕ್ಕೆ, ಜ್ಞಾನದ ಅಭಾವವೇ ಕಾರಣವಾಗಿದೆ. ಎಲ್ಲವನ್ನೂ ತಿಳಿದೇ ಬಿಟ್ಟರೆ ಯಾವದರ ಹಂಬಲವಾದೀತು? ಯಾವ ಅಂಜಿಕೆಯು ಬಾಧಿಸೀತು? ಅಂತೇ ಸಕಲ ಜ್ಞಾನಾದಿಗಳಿಂದ ಪರಿಪೂರ್ಣರಾದ ಶಿವಯೋಗಿಗಳು ಇಹಲೋಕದ ಯಾತ್ರೆಯನ್ನು ಮುಗಿಸುವಲ್ಲಿ ಸಹ ಆನಂದ ಪರಿಸ್ಥಿತಿಯವರೇ ಆಗಿರುವರು. ತಮಗೆ ಮರಣವೇ ಇಲ್ಲೆಂಬವನ್ನಾದರೂ ಅವರು ಸ್ವಾನುಭವದಿಂದಲೇ ಪೂರಾ ಅರಿತವರಾಗಿರುತ್ತಾರೆ.

ಮನುಷ್ಯರು ಉತ್ತಮೋತ್ತಮ ಪಕ್ವಾನ್ನಗಳಿಂದ ಸಂತುಷ್ಟರಾಗಲು ಹೆಣಗುವರು. ದೇಹ ಪುಷ್ಟಿ ಬೆಳೆಯಿಸಲಿಕ್ಕೆ ಯತ್ನಿಸುವರು. ಸಕಲೈಶ್ವರ್ಯದ ಉಪಭೋಗಕ್ಕಂತೂ ಎಲ್ಲರೂ ಹಾತೊರೆಯುವರು. ಶರೀರವೇ ಮೊದಲು ನಶ್ವರವಾಗಿರಲು ಅದರ ಸಾಮರ್ಥ್ಯವಾದರೂ ಎಷ್ಟು ದಿವಸ ತಡೆದೀತು? ಒಳ್ಳೇ ಭ್ರಾಂತಿಯ ಹಳವಂಡಿನಿಂದ ಒಡಬಡಿಸುವ ವಿಚಾರಗಳೂ, ಆಶೆಗಳೂ, ಎಲ್ಲ ನಿರರ್ಥಕವಾಗಿವೆ. ಇಹಲೋಕದ ಭೋಗಭಾಗ್ಯಗಳೆಲ್ಲ ಅಸ್ಥಿರವಾದವುಗಳೂ ಕ್ಷಣಭಂಗುರವೂ ಆಗಿರುವದರಿಂದ ಅವು ಕುರುಡ ಹೊತ್ತ ಕ್ಷೀರಕುಂಭದಂತೆಯೇ ಸರಿ? ಕೇವಲ ಪ್ರಕೃತಿಯ ಮುಸುಕಿನಲ್ಲಿ ಸಿಕ್ಕಿಕೊಂಡು ಸುಖಗಳನ್ನು ಅನುಭವಿಸುವದಕ್ಕೂ ಇದರಿಂದ ಮುಕ್ತನಾಗಿ ಪರಮಾನಂದವನ್ನನುಭವಿಸುವದಕ್ಕೂ ಮಹದಂತರವದೆ. ಶಿವಯೋಗಿಯು ಪ್ರಕೃತಿಯ ಹಂಗನ್ನೇರಿಕೊಂಡವನಾದ್ದರಿಂದ ಅವನ ಸುಖ ಸಾಮ್ರಾಜ್ಯದ ಮಹತ್ವವನ್ನು ಎಷ್ಟು ವರ್ಣಿಸಿದರೂ ತೀರದು! ಶಿವಯೋಗ ಸಾಮ್ರಾಜ್ಯದ ಅಮೋಘ ಐಶ್ವರ್ಯಕ್ಕೆ



ಹೋಲಿಸಿ ಹೇಳುವೆನೆಂದರೆ ಭೂಲೋಕದಲ್ಲಿ ಯೋಗಿಗಳಿಗೆ ಉದಾಹರಣೆಗಳೇ ಸಿಕ್ಕಿಲ್ಲ. ನಾವು ಯಾವ ರೀತಿಯಿಂದಲೇ ವಿಚಾರಿಸಿದರೂ ಲಿಂಗಾಂಗ ಸಾಮರ್ಥ್ಯವೇ ಎಲ್ಲಕ್ಕೂ ಮಹತ್ವದ್ದೆಂಬದು ಸಹಜ ಸಿದ್ಧವಾಗಿಯೇ ತೀರುವದು. ಈ ಲಿಂಗಾಂಗಿಗಳಾಗುವ ಮಾರ್ಗವು ಮುಮುಕ್ಷುಗಳ ಹಿತಾರ್ಥವಾಗಿ ಶಾಸ್ತ್ರೀಯ ರೀತಿಯಿಂದಲೇ ಚನ್ನಾಗಿ ವಿವರಿಸಲ್ಪಟ್ಟದೆ. ಇದರ ಕ್ರಮ ಕಟ್ಟುಗಳೆಲ್ಲ ಚನ್ನಾಗಿಯೂ ಸೋಪಪತ್ತಿಕವಾಗಿಯೂ ಹೇಳಲ್ಪಟ್ಟವೆ. ಮೂಢಭಾವದಿಂದ ನಡೆಯಬೇಕೆಂಬದು ಇದರಲ್ಲಿಲ್ಲೇ ಇಲ್ಲ. ಮೂಕಭಾವದ ಹವಾಲಿಯು ಇದರಲ್ಲಿ ಯಾವದಕ್ಕೂ ಹೇಳಲ್ಪಟ್ಟಿಲ್ಲ. ಶೋಧಿಸಿ ತಿಳಿಯಬೇಕೆನ್ನುವವರು ಎಲ್ಲವನ್ನೂ ಅರಿಯುವರು. ಆರಂಭಕ್ಕೆ ಹೆಚ್ಚು ಶೋಧಿಸಿ ತಿಳಿಯುವ ಸಾಹಸ ಮಾಡದೆ ಕೇವಲ ನೇಮ ನಿರ್ಬಂಧಗಳನ್ನಷ್ಟೇ ಮನಮುಟ್ಟಿ ಪಾಲಿಸುತ್ತಿದ್ದರೂ ಸಹ ಸಕಾಲದಲ್ಲೇ ಅದರ ಕಾರ್ಯಕಾರಣ ಭಾವವು ತಿಳಿದು ಫಲಪ್ರಾಪ್ತಿಯೂ ಆಗುವದು.

ಇದೊಂದು ಅನುಭವಸಿದ್ಧ ಶಾಸ್ತ್ರವೇ ಆಗಿರುವದರಿಂದ ಯಾರು ಪ್ರಯತ್ನಿಸಿದರೂ ತಕ್ಕಫಲವು ಸಿಕ್ಕೇ ತೀರುವದು. ಆದರೆ ಫಲದೊರಕಿಸಬೇಕೆಂಬುವವರೆಲ್ಲ ಮನುಷ್ಯ ವರ್ಗದವರೇ ಆಗಿರಲಿಕ್ಕೆ ಬೇಕು. ಪಶುಗಳ ಸ್ಥಿತಿಯವರೂ, ರಾಕ್ಷಸವೃತ್ತಿಯವರೂ, ಮಾತ್ರ ಎಷ್ಟು ಮಾತ್ರಕ್ಕೂ ಆಗಿರಬಾರದು. ಅವರಿದಕ್ಕೆ ತಕ್ಕವರಾಗುವದೇ ಇಲ್ಲ. ಬರೇ ಶರೀರ ರಚನಾದಿಗಳಿಂದಲೂ ವೈಕಟ್ಟು ನಿಲುವಿಕೆ ಮೊದಲಾದವುಗಳಿಂದಲೂ ಮಾತ್ರ ಮನುಷ್ಯರಾಗಿದ್ದರೆ ತೀರಲಿಲ್ಲ. ಶಿವಯೋಗಕ್ಕೆ ತಕ್ಕ ಅಧಿಕಾರಿಗಳೇ ಅವರಾಗಿರಬೇಕು. ಯಾವದರಲ್ಲೇ ಆಗಲಿ, ಮನಸ್ಸಿದ್ದವರಿಗೇನೇ ಮಾರ್ಗ ದೊರೆಯುವದು ಸಹಜವಲ್ಲವೇ? ಪ್ರಯತ್ನ ಪಟ್ಟಾದರೂ ಶಿವಯೋಗಕ್ಕೆ ತಕ್ಕ ಗುಣಗಳನ್ನು ಸಂಪಾದಿಸಲೇ ಬೇಕು. ಇಲ್ಲವಾದರೆ ಯಾವ ಪುರುಷಾರ್ಥವೂ ಇಲ್ಲ. ಪ್ರಾಣಿಕೋಟಿಯಲ್ಲಿ ಮನುಷ್ಯ ಜನ್ಮವೇ ಮೇಲು. ನಮಗೆ ಇದು ದೊರೆತದ್ದೇ ದೊಡ್ಡ ಭಾಗ್ಯ. ನಾವು ಅವಯವ ಪೂರ್ಣರಾಗಿರುವದರಿಂದ ಯೋಗದೊಳಗಿನ ಎಂಥ ಚಮತ್ಕಾರವಾದ ಸಾಧನವಾದರೂ ಸಾಧಿಸುವದು. ಅನುಷ್ಠಾನವು ಎಂಥ ಬಿಕ್ಕಟ್ಟಿನದಿದ್ದರೂ ತೀರ ಸೂಕ್ಷ್ಮವಾಗಿದ್ದರೂ ಅದು ಕೈಗೂಡುವದು. ಮನುಷ್ಯರ ನಿಲುವಿಕೆಯಾದರೂ ಹಾಳತವಾಗಿಯೇ ಇದೆ. ಅದರಿಂದ ಪರಿಪೂರ್ಣವಾದ ಅವಯವಗಳಿಗೆ ಬಹಳ ಸಹಾಯವಾಗಿದೆ. ಹಾಗು ಮನುಷ್ಯತ್ವಕ್ಕೂ ಒಳ್ಳೇ ಗೌರ

ನಾಸ್ಪದವಾಗಿದೆ. ಆನೆಯಂಥ ದೊಡ್ಡ ಶರೀರವು ನಮಗಿದ್ದರೆ ಬಹಳ ತೊಂದರೆಯಾಗುತ್ತಿತ್ತು. ಮೊದಲು ಆಹಾರವೇ ಇಷ್ಟೊಂದು ಜನರಿಗೆ ಸಾಲದಂತಾಗಿ ಪರಸ್ಪರರಲ್ಲಿ ಬಡಿದಾಟವೆದ್ದು ಈಗಿನಷ್ಟು ಜನಸಂಖ್ಯೆಯೇ ಬೆಳೆಯುದಂತಾಗುತ್ತಿತ್ತು. ಇರಲಿಕ್ಕೆ ಈಗಿನಂತೆ ಸೊಬಗಿನ ಮನೆಗಳನ್ನು ಕಟ್ಟಿಕೊಳ್ಳುವದು ಸಹ ಅಸಾಧ್ಯವಾಗುತ್ತಿತ್ತು. ಅರಿವೆ ಅಂಚಡಿಗಳನ್ನು ಧರಿಸಲಿಕ್ಕಂತೂ ಎಷ್ಟೆಷ್ಟು ಸಾಗಸಾಗುತ್ತಿದ್ದಿಲ್ಲ. "ಅಜ್ಜಿ ನೂತದ್ದು ಅಜ್ಜನ ಉಡುದಾರಕ್ಕೆ" ಎಂಬಂತೆ ಈಗ ಸಿದ್ಧವಾಗುವ ಅರಿವೆಗಳು ಸಾಲದೇ ಹೋಗುತ್ತಿದ್ದವು. ಒಂದು ವೇಳೆ ಮನುಷ್ಯರ ಶರೀರಗಳು ಕೇವಲ ಬಿಂದುವಿನೋಪಾದಿಯಲ್ಲಿದ್ದರೂ ಬಹಳ ಕಷ್ಟನೇ ಇತ್ತು. ಒಟ್ಟಿನ ಮೇಲೆ ಮನುಷ್ಯ ಶರೀರದ ನಿಲುವಿಕೆಯೂ, ವೈಕಟ್ಟು, ಅವಯವ ಪೂರ್ಣತೆಯೂ ಶಿವಯೋಗಾನುಷ್ಠಾನಕ್ಕೆ ಒಳಿತಾಗಿ ಅನುಕೂಲವಾಗಿದೆ. ಅವರೂ ಮನುಷ್ಯರಲ್ಲಿ ಸಹ ತೀರ ಮಡ್ಡ ಬುದ್ಧಿಯವರೂ, ಅತ್ಯಂತ ಕ್ರೂರ ಸ್ವಭಾವವವರೂ ಆದವರು ಶಿವಯೋಗಕ್ಕೆ ಎರವಾಗುವರು. ಹಾಗು ತೀರ ಕೀಳು ತರದ ಕೆಲಸದಲ್ಲಿ ಆಳುಗಳಾಗಿ ತೆರಪಿಲ್ಲದೆ ದುಡಿಯುವವರೂ, ಬಹಳ ಗೌರವದ ಕೆಲಸದಲ್ಲಿ ಮನವುಟ್ಟಿ ದುಡಿಯಲು ಪ್ರವರ್ತಿಸಿದವರೂ, ಶಿವಯೋಗಾಭ್ಯಾಸಕ್ಕೆ ತಕ್ಕವರಾಗುವದಿಲ್ಲ. ಹೊಟ್ಟೆಗೇನೂ ಇಲ್ಲದೆ ಹಗಲೆಲ್ಲ ಬಳಲುವಂಥ ಹರಕು ವೃತ್ತಿಯ ತೀರ ಬಡತನವಿದ್ದರೂ ಇಲ್ಲವೆ ಅತ್ಯಂತ ಶ್ರೀಮಂತಿಕೆ ಇದ್ದರೂ ಶಿವಯೋಗಾನುಭವ ಪಡೆಯಲು ವಿಘ್ನವೇ ಒದಗುವದು. ಯಾಕಂದರೆ ವಿಶೇಷ ಶ್ರೀಮಂತಿಕೆಯಿಂದ ಬಹಳ ಆಡ್ಡೆಯು ವೈಯ್ಯಾರದಿಂದು ಮನುಷ್ಯನು ಆಲಸಿಯೂ, ತಾಮಸಿಯೂ, ಆಗುವನು. ಬಹಳ ಬಡತನದಿಂದ ಕೇವಲ ಹೊಟ್ಟೆ ಬಟ್ಟೆಗಳ ಸಲುವಾಗಿಯೇ ಆಯುಷ್ಯವನ್ನೆಲ್ಲ ಇಲ್ಲವೆ ಮಹತ್ವದ ಅದರ ಕೆಲವು ಭಾಗವನ್ನಾದರೂ ಕಳೆಯುವ ಪ್ರಸಂಗ ಬರುವದು. ಆದ್ದರಿಂದ ಮನುಷ್ಯರಲ್ಲಾದರೂ ಯಾವ ಏರು ಪೇರುಗಳಿಲ್ಲದ ಕೇವಲ ಮಧ್ಯವರ್ತಿಗಳೂ, ನಡುತರದ ಸ್ಥಿತಿಯವರೂ, ಶಿವಯೋಗಕ್ಕೆ ಅರ್ಹರಾಗುವರು. ಪ್ರತಿಯೊಬ್ಬನು ತನ್ನ ಸ್ಥಿತಿಯನ್ನು ಶಿವಯೋಗಕ್ಕೆ ಸರಿಬೀಳುವಂತಿಟ್ಟುಕೊಳ್ಳಲಿಕ್ಕೆ ಮೊದಲು ಕಲಿಯಬೇಕು. ತನ್ನಲ್ಲಿದ್ದ ಅತಿ ಶ್ರೀಮಂತಗಿರಿಯ ಆಡಂಬರವನ್ನು ಔಕಿಹಿಡಿದಿಡಲಿಕ್ಕೆ ಸದಾ ಪ್ರಯತ್ನಿಸಬೇಕು. ಬಹಳ ಬಡತನವಿದ್ದರೆ ತಕ್ಕಷ್ಟು ಚಟುವಟಿಕೆಯನ್ನು ತಂದುಕೊಂಡು ತನಗೆ ತಕ್ಕ ಉದ್ಯೋಗ ದೊರಕುವಲ್ಲಿಗಾದರೂ ಹೋಗಿ ನೇವ ಂ



ದಿಂದ ಲಕ್ಷಣ ಸಂಪನ್ನನಾಗಿ ದುಡಿಯಬೇಕು. ಉಳಿದ ಮನಸ್ಸಿನ ಹೆಚ್ಚು ಕಡಿಮೆಗಳನ್ನು ತನ್ನ ಇಚ್ಛೆಗೆ ಅನುರೂಪವಾದ ಗುಣಗಳ ಸಹವಾಸದಿಂದ ಸರಿಪಡಿಸಿಕೊಂಡರಾಯಿತು. ಒಂದು ಸಾಧಿಸಿದರೆ ಅದರೊಂದಿಗೆ ಉಳಿದವೂ ಸೇರುವವು. ಎಲ್ಲಾದರಿಂದಲೂ ಹುಟ್ಟು ಮಧ್ಯಮ ವರ್ತಿಗಳಾದವರೇ ಶಿವಯೋಗಕ್ಕೆ ಸಂಪೂರ್ಣ ಅಧಿಕಾರಿಗಳಾಗಿರುವರು. ಆದ್ದರಿಂದ ಇಂಥ ಮಧ್ಯಮ ವರ್ತಿಯ ಮಹತ್ವವು ಬಹಳವದೆ.

ಮನುಷ್ಯರಿಗಿಂತ ಪ್ರಬಲಶಾಲಿಗಳಾದ ದೇವತೆಗಳು ಸಹ ಶಿವಯೋಗಿಗಳಾಗಲು ಮಧ್ಯಮ ತರಗತಿಯ ಜನರಲ್ಲೇ ಹುಟ್ಟಿಬರಬೇಕಾಗುವದು. ದೇವತೆಗಳಿಗೆ ಸ್ಥೂಲ ಶರೀರಗಳಿರದಿದ್ದರೂ ಸೂಕ್ಷ್ಮ ಶರೀರಗಳಿದ್ದೇ ಇರುವವು. ಆ ಶರೀರಗಳ ಮೂಲಕ ಅವರೂ ಪ್ರಕೃತಿ(ಮಾಯೆ)ಯ ಆಧೀನರೇ ಆಗಿರುವರು. ಮನುಷ್ಯರಲ್ಲಿರುವಂತೆ ಅವರಲ್ಲಿಯೂ ಎಷ್ಟೋ ಹೆಚ್ಚು ಕಡಿಮೆಯ ತರಗತಿಗಳೂ ಇರುವವು. ನಮ್ಮಂತೆ ಅವರಾದರೂ ಕಾಲಾಧೀನರೇ ಆಗಿರುವದರಿಂದ ಅವರಿಗೆ ದೊರೆತ ಸ್ವರ್ಗ ಸುಖಗಳಾದರೂ ಸ್ಥಿರವಿಲ್ಲವು. ಸೃಷ್ಟಿಯು ಒಮ್ಮೆಂದೊಮ್ಮೆ ಲಯವಾಗಲು ಮನುಷ್ಯಾದಿ ಸಕಲಪ್ರಾಣಿಗಳೂ ದೇವತಾದಿಗಳೂ ತಮ್ಮ ತಮ್ಮ ಆಶಾತಂತುಗಳಲ್ಲಿ ಅಖಂಡ ಚಿಂತಾಸಾಗರದಲ್ಲಿ ಮುಳುಗಿ ಮಾಯೆಯಲ್ಲಿ ಹುದುಗಿಕೂಡ್ರಬೇಕಾಗುವದು. ಮಾಯೆಯ ಆಧೀನತೆಯ ಮೂಲಕ ಯಾರಿಗೂ ಸ್ವಾತಂತ್ರತೆಯು ಉಳಿದಿಲ್ಲ. ಮನುಷ್ಯಾದಿ ಪ್ರಾಣಿಗಳೂ ದೇವತೆಗಳೂ ತಮ್ಮ ಮೂಲ ಸ್ಥಿತಿಯನ್ನು ಪಡೆಯದ, ಅಂದರೆ ಶಿವಯೋಗವನ್ನು ಹೊಂದದೆ ನಡುವಿನ ಸ್ಥಿತಿಯಲ್ಲಿಯೇ ಒದ್ದಾಡುವದನ್ನು ನೋಡಲಾರದೆ, ಆ ದಯಾನಿಧಿಯಾದ ಪರಮೇಶ್ವರನು ಪುನಃ ತ್ರಿಮೂರ್ತಿಗಳನ್ನು ಎತ್ತಿ ಹಿಡಿದು ಅವರನ್ನು ಬೈಲಿಗೆಳೆಯುವನು. ಹಾಗೂ ಅವರಿಗೆ ಎಂದಿನಂತೆ ಸೃಷ್ಟಿ-ಸ್ಥಿತಿ ಲಯಾದಿಗಳನ್ನು ನಡೆಯಿಸುವ ತ್ರಾಣ ತಂದುಕೊಟ್ಟು, ಆಯಾ ಕೆಲಸಗಳಲ್ಲಿ ಅವರನ್ನು ತೊಡಗಿಸುವನು. ಅಲ್ಲಿಂದ ಮತ್ತೆ ಉತ್ಕ್ರಾಂತಿ ತತ್ವದಂತೆ ಭಿನ್ನ ಭಿನ್ನ ಪರಿಸ್ಥಿತಿಯ ಮೂಲಕ ಮಾಯೆಯಿಂದ ನಮ್ಮ ಪೃಥ್ವಿಯಂಥ ಎಷ್ಟೋ ಗೋಲಗಳು ನಭೋಮಂಡಲದಲ್ಲಿ ಉದಯಿಸುವವು. ಆಯಾ ಗೋಲಗಳಲ್ಲಿ ಪ್ರಾಣಿಗಳ ಜೀವನ ವ್ಯಾಪಾರಕ್ಕೆ ತಕ್ಕ ಹವಾಮಾನವು ನಿರ್ಮಿತವಾಗಲು ಹವಾಮಾನಕ್ಕನುಗುಣವಾಗಿ ಬೇರೆ ಬೇರೆ ಜೀವರಾಶಿಗಳು ಉದಯಿಸುವವು. ಬರಬ

ರುತ್ತ ಉತ್ಕ್ರಾಂತಿ ತತ್ವದ ಸುಧಾರಣೆಯ ಮೂಲಕ ಬಹಳ ಬುದ್ಧಿ
ಶಾಲಿಯಾದ ಮನುಷ್ಯರೂ, ಸೂಕ್ಷ್ಮಸ್ವೃತ್ತಿಯವರಾದ ದೇವತೆಗಳೂ,
ಪ್ರಕಟವಾಗುವರು. ಈ ಕ್ರಮವು ಹಿಂದೆ ಎಷ್ಟೋ ಸಾರೆ ನಡೆದಿರುವ
ದೆಂತಲೂ, ಮುಂದಾದರೂ ನಡೆಯುವದೆಂತಲೂ ಹೇಳಬಹುದು.
ಮಾಯೆಗೆ ವಶವಾಗಿರುವ ದೇವತೆಗಳ ಹಾಗು ಮನುಷ್ಯ ಮೊದಲಾದ
ಪ್ರಾಣಿಗಳ ಉದ್ಧಾರಕ್ಕಾಗಿಯೇ ಈ ಕ್ರಮವು ನಡೆಯುವದಾಗಿದೆ.

ನಮ್ಮೀ ಪೃಥ್ವಿಯ ಮೊದಲನೆಯ ಯುಗದಲ್ಲಿ ಬ್ರಹ್ಮನು ಆ ಪರ
ಶಿವನಿಂದ ಜೇತರಿಸಲ್ಪಟ್ಟವನಾಗಿ ಸಕಲ ವೇದ ಸಂಪನ್ನನಾದನು ಬ್ರಹ್ಮನು
ಆ ಪರಶಿವನಿಗೆ "ಮಾದರಿಗಾಗಿ ಮನುಷ್ಯೋತ್ಪತ್ತಿಯನ್ನು ನೀನೇ ಮೊದಲು
ಉಂಟು ಮಾಡಿ ತೋರಿಸು" ಎಂದು ಬಿನ್ನಯಿಸಿದನು. ಆದ್ದರಿಂದ ಆ ಪರ
ಶಿವನು ತನ್ನಲ್ಲಿ ಐಕ್ಯವಾಗಿದ್ದ ಪ್ರಮಥರನ್ನೇ ಜಗದುದ್ಧಾರಾರ್ಥವಾಗಿ ಶಿವ
ಯೋಗವನ್ನು ಪ್ರಸಾರಗೊಳಿಸಲು ನಿರ್ಮಿಸಿದನು. ಬ್ರಹ್ಮನು ಎಷ್ಟೇ ಆಗಲಿ,
ಮಾಯೆಯ ಕಸರಿನಲ್ಲಿ ಸಿಕ್ಕವನು. ಅಂದ ಬಳಿಕ ಅವನಿಗೂ ಈ ಜ್ಞಾನ
ಪ್ರಾಣಿಗಳಾದ ಮನುಷ್ಯರನ್ನು ನಿರ್ಮಿಸಲಿಕ್ಕೆ ತಿಳಿಯದೇ ಹೋದ್ದರಲ್ಲಿ
ಆಶ್ಚರ್ಯವೇನು? ಸರಿಯಾದದ್ದನ್ನು ತಿಳಿಯದಂತೆಯೂ ತಕ್ಕದ್ದನ್ನು ಮಾಡ
ಗೊಡದಂತೆಯೂ ಯುಕ್ತಿಸುವದು ಪ್ರಕೃತಿಯ ಧರ್ಮವಾಗಿದೆ. ಸೃಷ್ಟಿಯ
ಆರಂಭದಲ್ಲಿ ಪ್ರಾಣಿಗಳನ್ನು ನಿರ್ಮಿಸಲಿಕ್ಕೂ ಅವುಗಳಲ್ಲಿ ತಕ್ಕಷ್ಟು ಸುಧಾ
ರಣೆಯನ್ನು ಏರ್ಪಡಿಸಲಿಕ್ಕೂ ಒಂದು ನೂತನ ಶಕ್ತಿಯು ಅತ್ಯವಶ್ಯ
ವಾಗಿ ಬೇಕಾಗುವದೆಂಬ ಮಾತಿಗೆ ಸರ್ವಧರ್ಮದವರೂ ಒಪ್ಪಿರುವರು.
ಹಾಗು ಆಯಾ ಧರ್ಮದವರು ಮೂರ್ತಿಮಂತಾಗಿ ಬಂದ ಆ ನೂತನ
ಶಕ್ತಿಗೆ ಬೇರೆ ಬೇರೆ ಹೆಸರಿಟ್ಟು, ಅದರ ವಿಷಯಕ್ಕೆ ತರತರದ ಪೂಜ್ಯ
ಭಾವದ ಪುಣ್ಯ ಚರಿತ್ರಗಳನ್ನು ಕಲ್ಪಿಸಿರುವರು ದೇವರ ವಿಷಯದಲ್ಲಿ
ಕ್ರಿಸ್ತೀ ಧರ್ಮದ ಬಾಯಿಬಲ್ಲು ಒಂದು ತರಹ ಹೇಳುತ್ತಿದ್ದರೆ ಮಹ
ಮ್ಮದೀ ಧರ್ಮದ ಕುರಾನವು ಇನ್ನೊಂದು ತರಹದಿಂದ ಹೇಳುವದು.
ಇದರಂತೆ ಹಿಂದೂ ಧರ್ಮದ ಬೇರೆ ಬೇರೆ ಮತಾನುಯಾಯಿಗಳು
ಒಂದೊಂದು ಬಗೆಯಾಗಿಯೇ ಹೇಳುವರು. ನಮ್ಮೀ ಶಿವಮತದವರು
ಅತ್ಯಂತ ಶ್ರೇಷ್ಠವಾದ ಅಪಾರಶಕ್ತಿಯನ್ನು ಹೊಂದಿರುವ ಸರ್ವತಂತ್ರ
ಗಳನ್ನು ತನ್ನಾಧೀನದಲ್ಲಿಟ್ಟುಕೊಂಡಿರುವ ನೂತನ ಶಕ್ತಿಗೆ ಪರಶಿವನೆಂ
ತಲೂ ಲಿಂಗವೆಂತಲೂ ಕರೆಯುವರು. ಪ್ರಮಥರೂ ಸಕಲವೂ ಈ



ಮಹಾಶಕ್ತಿಯಿಂದಲೇ ಉದಯಿಸಿ ತಕ್ಕ ವ್ಯವಸ್ಥೆಗೊಳ್ಳುವವು. ಮೊದ
ಲಿನ ಪ್ರಮಥರು ಮನುಷ್ಯ ಕುಲಕ್ಕೆ ಮೂಲ ಪುರುಷರಾಗಿರುವರೆಂಬದೇ
ನಮ್ಮವರ ಗ್ರಹಿಕೆಯದೆ. ಸರ್ವಶಕ್ತಿಸಂಪನ್ನರಾದವರಿಗೆ ಮಕ್ಕಳನ್ನು
ಪಡೆಯಲಿಕ್ಕೆ ಪ್ರಪಂಚಕರಿಗೆ ಅವಶ್ಯವಾದ ಪರಿಸ್ಥಿತಿಗಳೆಲ್ಲ ಬೇಕೆನ್ನುವ
ದಿಲ್ಲೇ ಇಲ್ಲ. ಇಡೀ ಬ್ರಹ್ಮಾಂಡದಲ್ಲಿ ಅಡಗಿರುವ ಮಾಯೆಯು ಅವ
ರಿಗೆ ಸೇವಕಳೇ ಆಗಿರುವದರಿಂದ ಅವರ ಆಜ್ಞೆಯಂತೆ ನಡೆಯಲು ಸಿದ್ಧಳೇ
ಇರುವಳು. ಸರ್ವ ಶಕ್ತಿತ್ವ ಉಳ್ಳವರಿಗೆ ಈ ಮಾತೇ ಅರಿದಲ್ಲ. ಆದ್ದ
ರಿಂದ ಈ ಮಾತಿನಲ್ಲಿ ಸಂಶಯವೆಂಬುವದೇ ಕೇವಲ ಭ್ರಾಂತಿಗೇಡಿತ
ನದ ಮಾತಾಗಿರುವದರಿಂದ ಅದನ್ನು ಬಿಡುವದೇ ಲೇಸು. ಲೌಕಿಕದಲ್ಲಿ
ತಾಯಿ-ತಂದೆಗಳು ತಮ್ಮ ಮಕ್ಕಳಿಗೆ ಬರೇ ತಮ್ಮ ದೇಹದಂಥ ಹೊಳ
ವನ್ನು ಸಿದ್ಧಮಾಡಿಕೊಂಡು ಜನನವಾಗಲಿಕ್ಕೆ ಮಕ್ಕಳ ಆತ್ಮಕ್ಕೆ ಕೇವಲ
ಆಧಾರಭೂತವಾಗಿ ಇದ್ದು ಅನುಕೂಲಪರಿಸ್ಥಿತಿಯನ್ನಷ್ಟೇ ಒದಗಿಸಿಕೊ
ಡುವರಲ್ಲದೆ ಉಳಿದದ್ದನ್ನೇನೂ ಮಾಡುವದಿಲ್ಲ. ತಾಯಿಯ ಗರ್ಭವನ್ನು
ಪ್ರವೇಶಿಸಿದ ಜೀವನ ಶಕ್ತಿಯು ತನ್ನ ಪಿಂಡದ ಸಿದ್ಧತೆಯನ್ನು ತಾನೇ
ಮಾಡಿಕೊಳ್ಳುವದು. ಇದು ಜೀವದ ನೈಸರ್ಗಿಕ ಗುಣವೇ ಆಗಿದೆ.
ತಾಯಿಯ ಗರ್ಭದಿಂದ ಹೊರಬಿದ್ದ ಬಳಿಕಂತೂ ತನ್ನ ದೇಹದ ಪರಾ
ಮರಿಕೆಯನ್ನು ತಾನೇ ಮಾಡಿಕೊಂಡು ದಿನದಿನಕ್ಕೆ ಊರ್ಜಿತಾವಸ್ಥೆ
ಹೊಂದುವದೆಂಬುದು ಸಕಲರ ಅನುಭವಕ್ಕೆ ಬಂದ ಮಾತೇ ಆಗಿರುವದು.
ನಾವು ಶಿಸುವಾಗಿದ್ದಾಗಿನ ರಕ್ತ-ಮಾಂಸಾದಿಗಳು ಸಹ ಈಗ ನಮ್ಮ
ದೇಹದಲ್ಲಿ ಉಳಿದಿಲ್ಲ. ಅವು ಎಂದೋ ಸವಿದು ಹೋಗಿರುವವು. ನಾವು
ದಿನಾಲು ತಿನ್ನುವ ಹೊಸ ಹೊಸ ಆಹಾರವನ್ನೇ ನಮ್ಮ ಆತ್ಮವು ತನ್ನ
ನೂತನ ಶಕ್ತಿಯಿಂದ ಜೀರ್ಣಗೊಳಿಸಿಕೊಂಡು ದೇಹದ ಪೋಷಣ
ಮಾಡಿಕೊಳ್ಳುವದು. ತಿಂದ ಅನ್ನವು ಜೀರ್ಣವಾಗುವದೂ ಅದರಿಂದ
ರಕ್ತಮಾಂಸಾದಿಗಳು ವೃದ್ಧಿಂಗತವಾಗುವದೂ ನಮ್ಮ ಅನುಭವಕ್ಕೇನೂ
ಸರಿಯಾಗಿ ಗೋಚರಿಸದಿದ್ದರೂ ಇವೆಲ್ಲ ಕೆಲಸಗಳು ನಮ್ಮಿಂದಲೇ ನಡೆ
ಯುತ್ತಿರುವವೆಂಬದು ಕಡುಖಂಡಿತ! ಶರೀರದಲ್ಲಿ ನಡೆಯುವ ಈ ಬೇರೆ
ಬೇರೆ ಕೆಲಸಗಳನ್ನು ಮಾಡಲಿಕ್ಕೆ ಈ ಸಣ್ಣ ದೇಹದಲ್ಲೇನೂ ಸಾವಿರಾರು
ಜನರಿಲ್ಲ. ಇದರಲ್ಲಾಗುವದೆಲ್ಲ ನಮ್ಮ ಆತ್ಮದ ಶಕ್ತಿಯ ಪ್ರಭಾವದಿಂದಲೇ
ಅಲ್ಲದೆ ಮತ್ತೇನೂ ಇಲ್ಲ. ಮಾಯೆಯು ಹಾಕಿದ ಮುತ್ತಿಗೆಯಿಂದ

ಆತ್ಮದ ಅಪಾರ ಶಕ್ತಿಗಳು ಅವಕ್ಕೆ ತಿಳಿಯದಂತೆ ಮುಸಣಿಸಿ ಹೋಗಿವೆ. ಮಾಯೆಯ ಈ ಮಂಕು ಬೂದಿಯಲ್ಲಿ ಹುಗಿದುಹೋಗಿದ್ದ ಆತ್ಮಕ್ಕೆ ಚಾಲನೆಯನ್ನು ಕೊಟ್ಟು ಶರೀರಧಾರಣ ಮಾಡುವ ತ್ರಾಣ ತಂದುಕೊಡಲಿಕ್ಕೆ ಆ ಶಕ್ತಿಸಮೇತನಾದ ಪರಮೇಶ್ವರನ ಅನುಗ್ರಹವು ಅತ್ಯವಶ್ಯವಾಗಬೇಕು.

ಈ ಬ್ರಹ್ಮಾಂಡದಲ್ಲಿ ಸರ್ವಸ್ವಾತಂತ್ರ್ಯತೆ ಎಂಬದು ಯಾರಕಡೆಗುಂಟೋ ಆ ಮಹನಿಯನಿಂದಲೇ ಸಕಲವೂ ನಡೆಯುವವಲ್ಲವೆ ಉಳಿದವರಿಂದಲ್ಲ! ಯಾವದೂ ತನ್ನಷ್ಟಕ್ಕೆ ತಾನೇ ನಿರ್ಮಿತವಾಗಲರಿಯದೆಂಬದು ಸಕಲರಿಗೂ ಗೊತ್ತುಂಟು. ಕವಡಿಯ ಕಿಮ್ಮತ್ತಿನ ಒಡವೆಯು ಹುಟ್ಟಲಿಕ್ಕಾದರೂ ಕರ್ತರು ಬೇಕೇಬೇಕು. ಅಂದಬಳಿಕ ಅಪೂರ್ವವಾದ ಸೃಷ್ಟಿಯ ಉತ್ಪತ್ತಿಗೂ ಪ್ರಾಣಿಗಳ ಉದ್ಭವಕ್ಕೂ ಕರ್ತರೇ ಇಲ್ಲದಿದ್ದರೆ ಹ್ಯಾಗ ನಡೆದೀತು? ಸರ್ವಶಕ್ತಿಪರಿಪೂರ್ಣನಾದ ಸೃಷ್ಟಿಕರ್ತನಾದ ಆದಿಪುರುಷನಿಗೆ ಶಿವಯೋಗಿಗಳು ಶಿವನೆಂದೂ ತಿಳಿದರೂ, ಬೇರೆ ಬೇರೆ ಹೆಸರುಗಳಿಂದಲೂ ಕರೆಯುವರು. ಆ ಮೂಲ ಪುರುಷನಿಗೆ ಯಾವ ಹೆಸರಿನಿಂದ ಕರೆದರೂ ಕಡಮೆಯೇ. ಕೇವಲ ಹೆಸರಿನ ಭೇದದಿಂದಲೇ ಆತನ ಶಕ್ತಿ ಪವಿತ್ರಾದಿಗಳೇನೂ ಹೆಚ್ಚುಕಡಿಮೆಯಾಗುವದಿಲ್ಲ. ಕನ್ನಡಿಗರು ಹಾಲೆಂದು ಕರೆಯುವ ಪದಾರ್ಥಕ್ಕೇನೇ ಮರಾಠಿಯ ಮಾತಾಡುವವರು 'ದೂದು' ಎನ್ನುವರು, ಇಂಗ್ಲೀಷ ಭಾಷೆಯವರು 'ಮಿಲ್ಕ' ಎನ್ನುವರು. ಆದರೂ ಅದರ ಗುಣಧರ್ಮಗಳು ಇದ್ದಕ್ಕಿದ್ದಂತೆಯೇ ಇರುವವು. ಆದ ಭೇದವೆಲ್ಲ ಬರೇ ಶಬ್ದದಲ್ಲೇ. ಸೃಷ್ಟಿಕರ್ತನೇನೂ ಇರುವವನು ಒಬ್ಬನೇ ಹೌದು. ಆತನ ನಾಮರೂಪಗಳ ಕಲ್ಪನೆಗಳು ಮಾತ್ರ ಬೇರೆ ಬೇರೆ ಧರ್ಮಗಳಲ್ಲಿ ಭಿನ್ನವಾಗಿರುವವು. ಆತನ ಶಕ್ತಿಪ್ರಭಾವಾದಿಗಳಲ್ಲಿ ಎಲ್ಲರ ವಿಚಾರಗಳೂ ಏಕಾಗಿಯೇ ಇರುವವು. ಹೀಗಿದ್ದರೂ ಅರೆವಾಸಿ ಧಾರ್ಮಿಕರು ಒಬ್ಬರಿಗೊಬ್ಬರು ಬಡಿದಾಡುತ್ತಿರುವದನ್ನು ನೋಡಿದರೆ ನಿಜವಾದ ಧಾರ್ಮಿಕರಿಗೂ ದೇಶಭಕ್ತರಿಗೂ ಬಹಳ ವ್ಯಸನವಾಗದೇನುಮಾಡೀತು? ಈ ಅರೆವಾಸಿ ಧರ್ಮದವರು ಎಷ್ಟು ಬಡಿದಾಡಿದರೂ ಆ ಮೂಲಕರ್ತನ ಸಾನ್ನಿಧ್ಯಪಡೆದು ಕಡೆಗೆ ಆತನಲ್ಲೇ ಲೀನವಾಗುವದೇ ಪ್ರತಿಯೊಂದು ಧರ್ಮದ ಮೂಲ ಉದ್ದೇಶವಾಗಿದೆ. ಆಯಾ ಧರ್ಮದ ನಾಮಗಳೂ ರೂಪಗಳೂ ನೇಮನಿರ್ಬಂಧಗಳೂ ಈ ಮೂಲ ಉದ್ದೇಶವು. ಇಡೇರು



ವದಕ್ಕಾಗಿಯೇ ನಿರ್ಮಿತವಾಗಿವೆ. ಶ್ರೀಶಿವಯೋಗಧರ್ಮವು ಎಲ್ಲ ಧರ್ಮಗಳ ಸಾರಭೂತವಾದದ್ದಾಗಿದೆ. ಇದು ಯಾವ ಧರ್ಮಕ್ಕೂ ಹೊರತಿಲ್ಲ. ಪ್ರತಿಯೊಂದು ಧರ್ಮದಲ್ಲಿ ಮೂಲ ಗುಟ್ಟೆಂದು ಹೇಳುವ ತತ್ವಗಳಿಗೆ ತನ್ನ ಸಂಬಂಧವನ್ನಿಟ್ಟೇ ಇರುವದರಿಂದ ಈ ಧರ್ಮವು ಸರ್ವರಿಗೂ ಸ್ವಾಗತ ಮಾಡಲಿಕ್ಕೆ ತಕ್ಕದ್ದಾಗಿದೆ. ಯಾವ ಧರ್ಮದವರೇ ಆಗಲಿ ದ್ವೇಷಿಸಬೇಕೆಂಬ ಮಾತು ಇದರಲ್ಲಿ ಇಲ್ಲವಾದ್ದರಿಂದ ಇದರ ಬಗ್ಗೆ ಯಾರೂ ಅಪೂಜ್ಯ ಬುದ್ಧಿಯನ್ನೇ ತಾಳುವಂತಿಲ್ಲ. ಇದರ ತತ್ವಾನುಸಂಧಾನವಾದರೂ ಬಹಳ ಸರಳವಾದದ್ದಾಗಿರುವದರಿಂದ ಸಕಲ ಜನಪ್ರಿಯವಾಗಿದೆ. ಆದರೂ ನಾಮ-ರೂಪಗಳ ಭ್ರಮೆಯಲ್ಲಿಯೇ ಹಗಲೆಲ್ಲ ಬಡಿದಾಡುತ್ತಿರುವಂಥ ಸ್ವಧರ್ಮ ಮೋಹದಿಂದ ಅಂಧರಾಗಿ ಪರಧರ್ಮ ನಿಂದಿಸುವ ಚಟವುಳ್ಳಂಥ ಜನರಿಗೆ ಈ ಧರ್ಮವು ಸೇರದೆ ಹೋಗಿ ಏನಾದರೂ ಹೆಸರಿಟ್ಟರೆ ಆ ಮತ್ಸರ ಮೂರ್ತಿಗಳಿಗೆ ಯಾರು ಮಾಡುವದೇನದೆ?

ಶಿವಧರ್ಮೋದ್ಧಾರಕ್ಕೆಂದು ಆ ಪರಶಿವನಿಂದ ಉದಯವಾಗುತ್ತಿರುವ ಪ್ರಮಥರೇನೂ ಸಾಮಾನ್ಯರಲ್ಲ. ಇವರು ಕೇವಲ ಆ ಪರಶಿವನ ಸ್ವರೂಪಿಗಳೇ ಆಗಿರುವರು ಮೂಲ ವಸ್ತುವಿನ ಗುಣಧರ್ಮಗಳು ಅದರ ತುಂಡುಗಳಲ್ಲಿಯೂ ಪ್ರಕಟವಾಗಿರುವಂತೆ ಇವರಲ್ಲಿ ಆ ಪರಶಿವನ ಮಹಿಮಾದಿಗಳೆಲ್ಲಾ ಇದ್ದೇ ಇರುವವು. ಆ ಶಿವಸ್ವರೂಪಿಗಳಾದ ಪ್ರಮಥರು ಜಗದಾದಿಗೊಮ್ಮೆ ಆಯಾ ಮನ್ವಂತರಕ್ಕೆ ತಕ್ಕ ಬೇರೆ ಹೆಸರುಗಳಿಂದ ಉದಯರಾಗಿ ಶಿವಧರ್ಮವನ್ನು ಬೋಧಿಸುತ್ತಲೇ ಬಂದಿರುವದರಿಂದ ಈ ಧರ್ಮವು ಎಂದಿಗಾದರೂ ಜೀವಂತವಾಗಿ ಇದ್ದೇ ಇರುವದು. ಕಲಿಯುಗದಲ್ಲಿ ಪ್ರಮಥರು ಏಕೋರಾಮಾದಿ ಹೆಸರುಗಳಿಂದ ಅವತರಿಸಿದ್ದು ಸರ್ವ ಶ್ರುತವದೆ. ಶಿವನ ಪ್ರತ್ಯಕ್ಷಸ್ವರೂಪವಾಗಿರುವ ಈ ಮಹಾಮಹಿಮರು ಉದಯಿಸಿದ ಏಶಿಯಾ ಖಂಡವೇ ಧನ್ಯವು. ಅದರಲ್ಲಿ ಈ ಮಹಾಮಹಿಮರ ಪೀಠಗಳಿಂದ ಸದಾ ಒಪ್ಪುವ ಹಿಂದುಸ್ಥಾನದ ಭಾಗ್ಯಕ್ಕಂತೂ ಎಣೆಯಿಲ್ಲದಾಗಿದೆ. ಈ ಮಹಾಮಹಿಮರು ಪ್ರಚಾರಗೊಳಿಸಿದ ಶಿವಧರ್ಮವು ಇಂದಿಗೆ ವೀರಶೈವರಲ್ಲಿ ಮಾತ್ರ ನಿಚ್ಚಳವಾಗಿದೆ. ಅದರ ಶುದ್ಧ ಸ್ವರೂಪವು ಇನ್ನೂ ಅವರಲ್ಲ ಚನ್ನಾಗಿ ಉಳಿದದೆ. ಹಿಂದೂಧರ್ಮವೆಂಬ ಮಹಾವೃಕ್ಷಕ್ಕೆ ಶೈವಮತವೇ ಬೊಡ್ಡಿಯಾಗಿರುವದು. ವೀರಶೈವ ಮತವು

ಶೈವಮತವೆಂಬ ಬೊಡ್ಡಿಗೆ ಪ್ರತ್ಯಕ್ಷ ತಾಯಿಬೇರೇ ಆಗಿರುವದು. ಹಿಂದುಸ್ಥಾನದಲ್ಲಿ ಇತ್ತೀಚೆಗೆ ವೈಧಿಕ ಧರ್ಮದಲ್ಲಾದ ಚಾತುರ್ವರ್ಣಗಳ ಕಚ್ಚಾಟವು ವೀರಶೈವ ಧರ್ಮಕ್ಕೆ ಸಂಬಂಧಪಟ್ಟಿಲ್ಲ. ಯಾಕಂದರೆ ಶಿವಯೋಗಧರ್ಮವು ಉದಯವಾದ ಎಷ್ಟೋ ವರುಷಗಳ ಮೇಲೆ ವೈದಿಕ ಧರ್ಮದಲ್ಲಿ ಚಾತುರ್ವರ್ಣಗಳ ಸುಳಿಗಾಳಿಯು ಅಲ್ಲಲ್ಲಿ ಸುಳಿದಾಡಹತ್ತಿತು. ಈ ಚಾತುರ್ವರ್ಣಗಳು ಸ್ಥಾಪಿತವಾಗುವ ಪೂರ್ವದಲ್ಲಿ ಋಷಿವರ್ಯರು ಪ್ರಮಥರಿಂದ ಈ ಶಿವಧರ್ಮದ ದೀಕ್ಷೆಯನ್ನು ಹೊಂದುತ್ತಲೇ ಇದ್ದರು. ಆಗದರ ಶುದ್ಧ ಸ್ವರೂಪದ ಸಾಮ್ರಾಜ್ಯವೇ ಎಲ್ಲ ಕಡೆಗೂ ನಡೆದಿತ್ತೆಂಬದಕ್ಕೆ ಎಷ್ಟೋ ಆಧಾರಗಳುಂಟು. ಅವುಗಳನ್ನೆಲ್ಲ ಗ್ರಂಥ ವಿಸ್ತಾರದ ಭಯದಿಂದ ಇಲ್ಲಿ ಹೇಳದಿರಬೇಕಾಗಿದೆ

ವಿಶ್ವಪತಿಯಾದ ಶಿವನೊಬ್ಬನೇ ಇದ್ದು ಅವನು ಅಖಂಡನೂ, ನಿರ್ವಿಕಾರನೂ, ಸರ್ವಶಕ್ತಿಯುಕ್ತನೂ, ಅಮೋಘ ಆನಂದ ಪರಿಪೂರ್ಣನೂ, ಸರ್ವಜ್ಞನೂ, ಶಾಶ್ವತನೂ, ಆಗಿರುವನೆಂಬ ಉದ್ಗಾರಗಳನ್ನು ಸಕಲ ಧರ್ಮದವರೆಲ್ಲರೂ ಹೊರಗೆಡವಿರುವರು. ಆಯಾ ಧರ್ಮದವರು ಈ ವಿಶ್ವಪತಿಯ ನಾಮ-ರೂಪಗಳನ್ನು ಭಿನ್ನ ಭಿನ್ನವಾಗಿ ಗ್ರಹಿಸುವರು. ಶಿವಧರ್ಮದಲ್ಲಿ ಈ ಮೂರ್ತಿಯು ಲಿಂಗಾಕಾರವಾಗಿ ಪರಿಗ್ರಹಿಸಲ್ಪಟ್ಟಿರುವದು. ಹಾಗು ಇದಕ್ಕೆ ಶಿವನೆಂಬ ಕಲ್ಯಾಣಕರವಾದ ಅನ್ವರ್ಥಕ ನಾಮವೇ ಶಿವಧರ್ಮದಲ್ಲಿ ಕೊಡಲ್ಪಟ್ಟಿದೆ. ಈ ಮತದ ಮುಖ್ಯ ಆರಾಧ್ಯ ದೇವರು ಈ ಶಿವನೇ. ಇವನೇ ಆದಿ ಜಂಗಮನೂ ಮೂಲಗುರುವೂ ಆಗಿರುವನು. ಈ ಮತದಲ್ಲಿ ಇಂದಿನವರೆಗೆ ಉದಯಿಸಿರುವ ಇನ್ನೂ ಉದಯಿಸುತ್ತಿರುವ ಲಕ್ಷಣ ಸಂಪನ್ನ ನಿಜವಾದ ಜಂಗಮರೂ ಗುರುವರ್ಯರೂ ಈ ಪರಶಿವನ ಅವತಾರ ಪುರುಷರೇ ಆಗಿರುವರು. ಈ ಅಖಂಡ ಶಾಂತಿಮಯವಾದ ಪುಣ್ಯಕರ ಮೂರ್ತಿಯಲ್ಲಿ ಐಕ್ಯತೆಯನ್ನು ಹೊಂದುವ ಸುಲಭೋಪಾಯವು ಶಿವಧರ್ಮದಲ್ಲಿ ಒಳ್ಳೇ ಸರಸಾಗಿ ಹೇಳಲ್ಪಟ್ಟಿದೆ. ಅಖಂಡ ಶಾಂತಿಮಯನಾದ ಈ ಪರಶಿವನಲ್ಲಿ ಐಕ್ಯತೆಯನ್ನು ಹೊಂದಿ ಈತನಲ್ಲಿ ಬೆರೆದು ಅಖಂಡ ಶಾಂತಿಯನ್ನು ಸದಾ ಅನುಭವಿಸುವಂತೆ ಮಾಡಿಕೊಳ್ಳಬೇಕೆಂಬದೇ ಪ್ರತಿಯೊಂದು ತಾತ್ವಿಕ ಧರ್ಮದವರ ಪರಮೋದ್ದೇಶವಾಗಿದೆ. ವೇದಕಾಲದಲ್ಲೇ ತಾತ್ವಿಕ ಧರ್ಮದವರಿಗೆ ಆರ್ಯರೆಂತಲೂ, ಮೂಢ ಧರ್ಮದವರಿಗೆ ಅನಾರ್ಯರೆಂತಲೂ



ಕರೆಯುತ್ತಿದ್ದರು. ಮೊದ ಮೊದಲು ಹಿಂದುಸ್ತಾನದ ಉತ್ತರ ಭಾಗದಲ್ಲೇ ಆರ್ಯರು ವಿಶೇಷವಾಗಿದ್ದರೂ ಬರಬರುತ್ತ ಅವರು ಹಿಂದುಸ್ತಾನದಲ್ಲೆಲ್ಲ ಹರಿಬಿದ್ದರೆಂಬದು ಇತಿಹಾಸ ಪ್ರಸಿದ್ಧ ಮಾತಾಗಿದೆ. ಈ ಆರ್ಯರು ಹೋಗಿನಿಂತ ಆಯಾ ಭಾಗದಲ್ಲಾದರೂ ತಮ್ಮ ಮೂಲ ಧರ್ಮದಂತೆಯೇ ನಡಕೊಳ್ಳುತ್ತಿದ್ದರು. ಆರ್ಯರೆಲ್ಲ ಆಗ ಶೈವರೂ, ವೀರಶೈವರೂ ಆಗಿದ್ದರು. ಮುಂದೆ ಕೆಲವು ಶತಮಾನಗಳನಂತರ ಹಲಕೆಲವು ತಂಡಗಳಲ್ಲಿ ಚಾತುರ್ವರ್ಣಗಳು ತಲೆಯೆತ್ತಿ ಶೈವಧರ್ಮದಲ್ಲಿ ವ್ಯತ್ಯಾಸವಾಗಹತ್ತಿತು. ಈ ವ್ಯತ್ಯಾಸವು ಕೆಲಕೆಲವು ಭಾಗಗಳಲ್ಲಿ ವಾಸಿಸುವ ಆರ್ಯರ ತಂಡುಗಳಲ್ಲಷ್ಟೇ ಮಾತ್ರ ನಡೆಯಿತು. ಇನ್ನುಳಿದ ಭಾಗಗಳಲ್ಲಿದ್ದ ಆರ್ಯ ತಂಡಿನವರು ಚಾತುರ್ವರ್ಣದ ಸುದ್ದಿಯನ್ನು ಸಹ ಅರಿಯದೆ ತಾವೆಂದಿನಂತೆ ಶಿವಧರ್ಮಾವಲಂಬಿಗಳಾಗಿಯೇ ಇದ್ದರು. ಒಂದು ತಂಡಿನಲ್ಲಿ ಆದ ವ್ಯತ್ಯಾಸವು ಇನ್ನುಳಿದ ತಂಡಗಳಲ್ಲಿಯೂ ಆಗುವದಸಂಭವವೇ ಸರಿ! ಆದ್ದರಿಂದ ಎಷ್ಟೋ ಆರ್ಯರ ತಂಡಗಳು ತಮ್ಮ ಮೂಲ ಮತಾಚಾರಗಳಿಂದ ತುಸುವಾದರೂ ಭಿನ್ನಾವಸ್ಥೆಯನ್ನು ಹೊಂದದೆ ಹಾಗೇ ಇದ್ದದ್ದು ಅರಿದಲ್ಲ. ಸದ್ಯಕ್ಕೆ ಇಡೀ ಹಿಂದುಸ್ಥಾನದಲ್ಲಿ ಎಲ್ಲ ಕಡೆಗೂ ಹೊಗೆಬಂಡಿಗಳು ಓಡಾಡುವವು. ತಾರಾಯಂತ್ರಗಳೂ ಪಸರಿಸಿರುವವು. ಅಂಚೇಕಟ್ಟೆಗಳೂ ಎಲ್ಲ ಕಡೆಗಿರುವವು. ಆದರೂ ಒಂದು ಕಡೆಯಲ್ಲಾದ ನಾಗರಿಕರೊಳಗಿನ ಸುಧಾರಣೆಯು ಸಹ ಎಲ್ಲ ಕಡೆಗೆ ಎಲ್ಲಿ ಹರಿಬೀಳುವದು? ಹೊಂಟ ಸುಧಾರಣೆಯು ಅತ್ಯಂತ ಮಹತ್ವದ್ದೂ ಎಲ್ಲರೂ ಅಂಗೀಕರಿಸಲೇಬೇಕಾದಂಥಾದ್ದೂ ಆಗಿದ್ದರೂ ಹಲವು ಕಾರಣಗಳ ಮೂಲಕ ಈಗಾದರೂ ಎಷ್ಟೋ ಜನರು ಅದನ್ನು ನಿರಾಕರಿಸುವರು. ಈ ಸಾಂಪ್ರದಾಯವು ಎಂದಿಗಾದರೂ ಇದ್ದದ್ದೇ! ಸ್ವಚ್ಛಂದ ವೃತ್ತಿಯು ಬೇಕಾದಷ್ಟು ಬೆಳೆದಿದ್ದ ಈಗಿನ ಕಾಲದ ಮಾತೇ ಹೀಗಿದ್ದ ಬಳಿಕ ಮೊದಲಿನ ಏಕನಿಷ್ಠ ಆರ್ಯರ ವಿಷಯಕ್ಕೆ ಹೇಳುವದೇನದೆ? ಅದರಲ್ಲಿ ಶಿವಧರ್ಮವು ಎಲ್ಲ ಮಾತುಗಳಿಂದ ಪರಿಪೂರ್ಣವಾದದ್ದು; ತಾತ್ವಿಕದೃಷ್ಟಿಯಿಂದ ಬಹಳ ಮಹತ್ವದ್ದು; ಪವಿತ್ರತೆಯಲ್ಲಿ ಮಿಗಿಲಾದದ್ದು; ಇದರ ಅನುಯಾಯಿಗಳು ಪುರಾತನ ಮತದಂತೆ ನಡೆಯುವ ಹಟವಾದಿಗಳಾದ ಆರ್ಯರು. ಅಂದಬಳಿಕ ಯಾವದೋ ಒಂದು ತಂಡಿನವರಲ್ಲಿ ಉದ್ಭವಿಸಿದ ಚಾತುರ್ವರ್ಣಗಳ ವ್ಯವಸ್ಥೆಯು ಹಿಂದುಸ್ತಾನದಲ್ಲೆಲ್ಲ ವಾಸಿಸುವ ಆರ್ಯತಂಡಗಳಲ್ಲೆಲ್ಲ ಹ್ಯಾಗೆ ಹಬ್ಬಬೇಕು? ಆದರ

ಗದ್ದಲವೇಳಲಿಕ್ಕಿದ್ದರೂ ಈಗಿನಂತೆ ಬಗ್ಗೆ ಬರೀ ಚರ್ಚಾಚರ್ಚೆಗಳ ಚಾತುರ್ವರ್ಣ್ಯಗಳ ಅರಿದಾಟವು ಆಗೆಲ್ಲಿ ಅಸ್ಪವಿತ್ತು? ಒಂದು ವೇಳೆ ಚಾತುರ್ವರ್ಣ್ಯಗಳ ಅರಿದಾಟವು ಎಲ್ಲ ತಂಡಗಳಲ್ಲಿ ನಡೆದರೂ ಅವನ್ನು ಎಲ್ಲರೂ ಅಂಗೀಕರಿಸುವರೆಂಬ ಮಾತು ಹೇಳಲಿಕ್ಕೆ ಬರವಂತಿಲ್ಲ. ಒಟ್ಟಿನ ಮೇಲೆ ಆಗಿನ ಎಷ್ಟೋ ಆರ್ಯರ ತಂಡಗಳು ಚಾತುರ್ವರ್ಣ್ಯಗಳ ಲೇಪವಿಲ್ಲದೆ ಇದ್ದಕ್ಕಿದ್ದಂತೆ ತಮ್ಮ ಮೂಲ ಶೈವ ಇಲ್ಲವೆ ವೀರಶೈವ ಮತದಂತೆ ತಾವಿರಲೇಬೇಕೆಂದು ಹೇಳ ಲಿಕ್ಕೆ ಏನೂ ಆತಂಕವಿಲ್ಲ. ಹಾಗೆ ಮೂಲ ಶಿವಧರ್ಮದಂತೆ ಅಂಟಿ ಕೊಂಡು ಬಿಡದಲೇ ಅದನ್ನೇ ಅನುಸರಿಸುತ್ತ ಬಂದವರಲ್ಲಿ ವೀರಶೈವ (ಲಿಂಗವಂತ)ರೇ ಮುಖ್ಯರು. ಇವರು ತಮ್ಮ ಮೂಲಧರ್ಮದಂತೆಯೇ ಎಂದೆಂದಿಗಾದರೂ ನಡೆಯುತ್ತ ಬಂದಿರುವರೆಂಬದಕ್ಕೆ ಎಷ್ಟೋ ಪ್ರಮಾಣ ಗಳುಂಟು. ಇಂದಿನವರೆಗೂ ವೀರಶೈವರಲ್ಲಿ ಧರ್ಮ ಶಕ್ತಿಯು ಬಹಳ ರುವದು. ಹಾಗೆ ನಡೆಯುವಲ್ಲಿ ಬಹಳ ಪ್ರೀತಿಪಡುವ ಜನರು ಹೆಚ್ಚುಂಟು. ಈ ವೀರಶೈವರು ಸ್ವಭಾವದಿಂದ ಸಾತ್ವಿಕರು. ಆದ್ದರಿಂದ ಅಧಿಕಾರ ಪ್ರಿಯ ರಾಗಿ ರಾಜ್ಯಗಳಿಸಲಿಕ್ಕೆ ಇವರಲ್ಲಿ ಯತ್ನಿಸಿದವರು ಸಿಗುವದು ಕ್ವಚಿತ್ತು. ಭಕ್ತರಲ್ಲಿ ಸಹ ಶರಣ ಸಂತತಿಯ ಎಷ್ಟೋ ವೀರಶೈವರು ತೀರ ಸಾದಾ ವೃತ್ತಿಯಲ್ಲಿರಲಿಕ್ಕೆ ವಿಶೇಷ ಮೆಚ್ಚಿದವರಾಗಿರುವದರಿಂದ ವ್ಯವಹಾರ ಸಂಪ ತ್ತಿಯ ಆಶೆಯಾದರೂ ಅವರಿಗಷ್ಟೊಂದು ಈಗಾದರೂ ಇರುವದಿಲ್ಲ. ಈ ಮತದೊಳಗಿನ ವಿರಕ್ತ ಮಹಾಮೂರ್ತಿಗಳು ವೈರಾಗ್ಯದ ಶುದ್ಧ ಸ್ವರೂಪಿಗಳೇ ಆಗಿರುವರು. ಲಿಂಗಾಂಗ ಸಾಮರಸ್ಯದಲ್ಲಿ ತೀರ ತಲ್ಲೀನ ರಾಗಿ ಹೋಗಿದ್ದ ಈ ಮಹಾಮಹಿಮರಿಗೆ ಪ್ರಾಪಂಚಿಕ ಸುಖವು ಅತ್ಯಂತ ಹೇಯವಾಗಿ ತೋರುತ್ತಿರುವದು ಅರಿದಲ್ಲ. ಈ ಮಹಾಮಹಿಮರು ಭಕ್ತರ ಉದ್ಧಾರಕ್ಕಾಗಿಯೇ ಅವತರಿಸಿ ಕಡೆಗೆ ಅವರಿಗಾಗಿಯೇ ತಮ್ಮ ಅವ ತಾರ ಸಮಾಪ್ತಿಯನ್ನು ಮಾಡಿಬಿಡುವರು. ಗುರುಸ್ಥಳದವರಾದರೂ ಪರಂಪರಾಗತವಾದ ಸ್ವಸೂತ್ರದ ಶಿಷ್ಯೋದ್ಧಾರಕ ಕೆಲಸದಲ್ಲಿಯೇ ಸದಾ ಕಾಲಹರಣ ಮಾಡುತ್ತಿರಬೇಕಾಗುತ್ತದೆ. ತಮ್ಮ ಪಾಲಿಗೆ ಬಂದಷ್ಟು ಶಿಷ್ಯರ ರೀತಿನಡಾವಳಿಗಳನ್ನು ತಿದ್ದಿ ನಿಜವಾದ ಲಿಂಗಾಂಗ ಸಾಮರ ಸ್ಯವನ್ನು ಒದಗಿಸಿಕೊಡುವದೇ ಅವರ ಕೆಲಸ. ಶಿಷ್ಯರಿಗೂ ಇವರಿಗೂ ತೀರ ನಿಕಟಸಂಬಂಧವಿರುವದರಿಂದ ಅಡವೀ ಸೇರುವ ಸನ್ಯಾಸವೃತ್ತಿಯು ಇವರಿಗೆ ಸಲ್ಲುವದಿಲ್ಲ. ಇವರು ಈ ಶಿವಧರ್ಮದ ಅಷ್ಟಾವರಣಗಳಲ್ಲಿಯ ಗುರುಗಳೂ ಜಂಗಮರೂ ಆಗಿರುವರು. ಆದ್ದರಿಂದ ಇವರಿಲ್ಲದೆ ಭಕ್ತರ



ಆಟವೇ ನಡೆಯದು. ಒಟ್ಟಿನ ಮೇಲೆ ಭಕ್ತಮಹೇಶ್ವರರಿಗೆ ತಳಿಕೆಯೇ ಬಿದ್ದುಹೋಗಿರುವದರಿಂದ ಪರಸ್ಪರಾವಲಂಬನವು ಎಂದೆಂದೂ ಹೋಳಾ ಗದಂತಾಗಿದೆ. ಈ ಭಕ್ತಮಾಹೇಶ್ವರರು ಕೆಸರೊಳಗಿನ ಕಮಲದಂತೆ ಪ್ರಪಂಚದ ರಾಡಿಯಿಂದ ನಿರ್ಮಲರಾಗಿದ್ದು ಶಿವಾನುಭವಿಗಳಾಗುವರು. ಸರ್ವರೂ ಶಿವಯೋಗಿಗಳಾಗಬೇಕೆಂಬದೇ ಈ ಮತದ ಮೂಲರಹಸ್ಯ. ಈ ಮತವು ಆ ಪರಶಿವನ ಪ್ರಸನ್ನತೆಯ ಯೋಗದಿಂದ ಉದಯವಾಗಿ ರುವದರಿಂದ ಈ ಮೊದಲು ಹೇಳಿರುವಂತೆ ಎಲ್ಲ ಮಾತುಗಳಿಂದಲೂ ಇದು ಪರಿಪೂರ್ಣವಾಗಿರುವದು. ಈ ತತ್ವಪರಿಪೂರ್ಣವಾದ ಮತವು ತನ್ನ ಮಹತ್ವದ ತತ್ವಗಳನ್ನೆಷ್ಟೋ ಅನ್ಯರಿಗೆ ದಾನವಾಗಿ ಕೊಟ್ಟಿರು ವದು. ಎಷ್ಟೋ ನಡೆನುಡಿಗಳನ್ನೂ ಆಚಾರವಿಚಾರಗಳನ್ನೂ ಮುಖ್ಯ ವಾಗಿ ತಿಳಿಸಿ ಬಿಟ್ಟಿರುವದು. ಇದು ಜಗತ್ಕರ್ತನ ಅನುಗ್ರಹದಿಂದ ಬಂದ ಧರ್ಮವಾದದ್ದರಿಂದ ಇವರು ನನ್ನವರು ತನ್ನವರು ಎಂಬ ಭೇದ ಭಾವವನ್ನೇ ಸಂಪೂರ್ಣ ಬಿಟ್ಟಿರುವದು. ಎಲ್ಲರನ್ನು ತನ್ನ ಕ್ರಮಕಟ್ಟಿ ಗಳ ಸೋಪಾನಗಳನ್ನು ಪಾರಹಚ್ಚಿ ಕ್ರಮವಾಗಿ ಮೆಟ್ಟಿನಿಂದ ಮೆಟ್ಟಿಗೆ ಏರಿಸುವದು.

ಏಶಿಯಾಖಂಡವು ಸಕಲಧರ್ಮಗಳ ತವರುಮನೆಯಾಗಿರುವದು. ಇದರಲ್ಲಿಯೂ ಹಿಂದುಸ್ತಾನದೊಳಗಿನ ಹಿಂದೂಧರ್ಮವು ಸಕಲಕ್ಕೂ ಮೂಲಾಧಾರವಾಗಿದೆ. ಶೈವಮತವು ಹಿಂದೂಧರ್ಮಕ್ಕೆ ಬೊಡ್ಡೆಯಂತಿ ರುವದು. ಇದರ ತಾಯಿಬೇರು ವೀರಶೈವಮತವಾಗಿದೆ. ಯಾಕಂದರೆ ಶೈವಮತದ ಸರ್ವಸ್ವವು ಅದೊಂದರಲ್ಲೇ ಸಂಗ್ರಹವಾಗಿದೆ. ಈ ಸರ್ವ ಲಕ್ಷಣ ಸಂಪನ್ನವಾದ ವೀರಶೈವಮತಕ್ಕೆ ಈ ಮೊದಲು ಆಳಿಹೋದ ಬೇರೆ ಬೇರೆ ಅರಸರಿಂದ ಅನೇಕ ಆಘಾತಗಳು ತಗಲಿರುವವು. ಈ ಮತಾನುಯಾಯಿಗಳು ಐಹಿಕ ಸುಖಗಳಲ್ಲಿ ತೀರ ನಿರಸ ಬುದ್ಧಿಯವ ರಾಗಿದ್ದರಿಂದ ರಾಜಸತ್ತೆಯನ್ನು ಸಂಪಾದಿಸಿ ತಮ್ಮ ಕಾಟವನ್ನಾದರೂ ಕಳಕೊಳ್ಳಲಿಲ್ಲ. ಇಷ್ಟೇ ಅಲ್ಲ, ಪರಮತದವರು ಅಹಂಭಾವ ಬುದ್ಧಿ ಯಿಂದ ಇವರ ಮತವನ್ನೇ ಮುರಿದು ಮೂಲಿಗಿಕ್ಕಬೇಕೆಂದು ಪರಿಪರಿ ಯಿಂದ ಕಾಟ ಕೊಟ್ಟರೂ ಅವನ್ನೆಲ್ಲ ಬಹಳ ಶಾಂತಮನಸ್ಸಿನಿಂದ ತಡ ಕೊಂಡರು. ಗುಪ್ತವಾದ ಸ್ಥಳಗಳಲ್ಲಿ ಅಡಗಿಕೊಂಡಿರುವ ತಮ್ಮ ಯೋಗಾ ನುಷ್ಠಾನಗಳನ್ನು ಸಾಗಿಸುತ್ತ ಕಾಲಕಳೆದರು. ನಮ್ಮ ಹಿಂದೂಸ್ಥಾನ

ದಲ್ಲಿ ರಾಜಕ್ರಾಂತಿಯ ಜೋಡಿಗೆ ಧರ್ಮಕ್ರಾಂತಿಯೂ ಆಗುತ್ತಿರುವದು ಎಂದಿಗಾದರೂ ನಡೆದೇ ಇರುವದು. ಅಶೋಕ ಮೊದಲಾದ ಬೌದ್ಧ ಅರಸರ ಕಾಲಕ್ಕೆ ಬೌದ್ಧಮತದ ಸಾಮ್ರಾಜ್ಯವೇ ಇದ್ದದ್ದೂ ಮುಸಲ್ಮಾನ ಅರಸರ ಕಾಲಕ್ಕೆ ಮುಸಲ್ಮಾನೀ ಧರ್ಮದ ಪ್ರಾಬಲ್ಯವೇ ಬೆಳೆದದ್ದೂ ಯಾರಿಗೇನು ತಿಳಿಯದ್ದದೆ? ಈ ಪರಧರ್ಮಗಳ ಗಲಾಟೆಯಲ್ಲಿಯೂ ಪರರಾಜರ ಕಾಟದಲ್ಲಿಯೂ ಶಿವಮತವು ಯಾವ ರೂಪಾಂತರವನ್ನೂ ಹೊಂದದೆ ಇದ್ದಕ್ಕಿದ್ದಂತೆ ಉಳಿದದ್ದು ನಮ್ಮೆಲ್ಲರ ಪುಣ್ಯವೇ ಸರಿ. ಇದರಲ್ಲಿಯೂ ಜೈನಧರ್ಮವೇ ರಾಜಧರ್ಮವಾಗಿ ವೀರಶೈವ ಮತಕ್ಕೆ ಅನೇಕ ಕಾಟಗಳೊದಗುವ ಸಂಧಿಗೆ ಶ್ರೀ ಬಸವೇಶ್ವರರು ಅವತರಿಸಿ ನಮ್ಮ ವೀರಶೈವ ಮತದ ಪುನರುಜ್ಜೀವನ ಮಾಡಿದ್ದು ನಮ್ಮೆಲ್ಲರ ಪರಮ ಭಾಗ್ಯವೇ ಸರಿ. ವೀರಶೈವ ಮತವು ಆಗ ತಲೆ ಎತ್ತಲಿಕ್ಕೆ ಧರ್ಮಪ್ರಭಾವದೊಂದಿಗೆ ರಾಜ್ಯಸತ್ತೆಯೂ ತುಸು ಕಾರಣಿಕವಾಗಿಬೇಕಾಗಿತ್ತು. ಅಂತೇ ಆಗಿನ ಪ್ರಬಲಧರ್ಮದ ಮುಖ್ಯ ಅರಸನಾದ ಬಿಜ್ಜಳನಿಗೆ ಶ್ರೀ ಬಸವೇಶ್ವರರು ತಮ್ಮ ಮಹತ್ವವನ್ನು ತೋರಿಸಿ ಮಂತ್ರಿಗಳಾಗಿ ನೆವಕ್ಕೆ ಮಾತ್ರ ರಾಜ್ಯಸತ್ತೆಯ ಸೂತ್ರವನ್ನಷ್ಟು ಕೈಯ್ಯಲ್ಲಿ ಹಿಡಿದರು. ಈ ಪವಾಡ ಪುರುಷನಿಗೆ ಅರಸನಾಗಿ ಜನಿಸಲಿಕ್ಕೂ ಅಸಾಧ್ಯವಿದ್ದಿಲ್ಲ. ಬರೇ ರಾಜ್ಯವೈಭವದಲ್ಲಿ ಮೆರೆದು ಹೋಗಲಿಕ್ಕೇನೂ ಅವರು ಅವತರಿಸಿದ್ದಿಲ್ಲ. ಶಿವಮತೋದ್ಧಾರವನ್ನು ಮಾಡುವದೇ ಅವರ ಮೂಲ ಉದ್ದೇಶವಾಗಿತ್ತು. ಈ ಪವಾಡ ಪುರುಷರು ತಮ್ಮ ಮಹಿಮಾತಿಶಯದಿಂದಲೂ ಅಧಿಕಾರದ ಬಲದಿಂದಲೂ ಲಿಂಗವಂತ ಮತವನ್ನು ಸಕಾಲದಲ್ಲಿಯೇ ಪ್ರಬಲ ಸ್ಥಿತಿಗೆ ತಂದರು. ಶ್ರೀ ಬಸವೇಶ್ವರರು ಪ್ರತ್ಯಕ್ಷ ಅವತಾರಿ ಪುರುಷರೇ ಹೌದೆಂಬುವದು ಅವರು ಬರೆದಿರುವ ವಚನಗಳ ಮೇಲಿಂದ ತಾನಾಗಿಯೇ ಎಲ್ಲರಿಗೂ ಗೊತ್ತಾಗುವದು. ಇವರ ವಚನಗಳು ಕನ್ನಡಿಗರಿಗೆ ವೇದವಚನಕ್ಕಿಂತಲೂ ಮೇಲಾಗಿವೆ. ಅವು ಪವಿತ್ರಮೂರ್ತಿಯ ನಿರ್ಮಲ ರಕ್ತದಲ್ಲಿ ಹರಿದು ಪ್ರಸಾದವಾಣಿಯಲ್ಲಿ ಸೋಸಿ ಬಂದಿರುವದರಿಂದ ಪಂಡಿತರಿಗೂ ಪಾಮರರಿಗೂ ಸರಿಯಾಗಿ ತಿಳಿಯಲು ಅರ್ಹವಾಗಿವೆ. ವೇದವಚನಗಳಂತೆ ಜಗ್ಗಾಡಿ ಅರ್ಥಹಚ್ಚಿಕೊಂಡು ದಣಕೊಳ್ಳುವ ಮಾತೇ ಇವುಗಳಲ್ಲಿಲ್ಲ. ಅಷ್ಟೊಂದು ಸರಳವೂ ಸುಗಮವೂ ಆಗಿರುವವು. ವಚನಗಳನ್ನು ರಚಿಸಿದವರಲ್ಲಿ ಶ್ರೇಷ್ಠರಾದ ಈ ಮಹಿಮರು ಅಷ್ಟಾವರಣಗಳ



ಮಹಿಮೆಯನ್ನೂ ಪ್ರಯೋಜನ ಮೊದಲಾದವುಗಳನ್ನೂ ವಿತಿಮೀರಿ ಹೊರಗೆಡವಿರುವರು. ಪ್ರತಿಯೊಂದು ವಿಷಯವನ್ನು ತಿಳಿಯಲಿಕ್ಕೂ ಅದರಿಂದ ತಕ್ಕ ಫಲ ಹೊಂದಲಿಕ್ಕೂ ಆಯಾ ವಿಷಯಗಳಿಗನುರೂಪವಾದ ಉಪಕರಣಗಳೇ ಮೂಲ ಸಾಧನಗಳಾಗಿವೆ. ಎಂಥವರಿಗಾದರೂ ಸರಳ ಹಾದಿಯನ್ನು ತೋರಿಸಿಕೊಟ್ಟು ಉದ್ದಿಷ್ಟ ಫಲವನ್ನೊದಗಿಸಿ ಕೊಡುವಲ್ಲಿ ಈ ಅಷ್ಟಾವರಣಗಳೇ ಅತ್ಯಂತ ಮಹತ್ವದ ಹಾಳತವಾದ ಉಪಕರಣಗಳಾಗಿವೆ. ಆದ್ದರಿಂದ ಇವುಗಳ ಪ್ರವೇಶವು ಪ್ರತಿಯೊಂದು ಧರ್ಮದಲ್ಲಿ ಕೆಲವು ಮಟ್ಟಿಗೆ ಆಗೇ ತೀರಿದೆ. ಹಿಂದೂ ಧರ್ಮದೊಳಗಿನ ಪ್ರತಿಯೊಂದು ಧರ್ಮಗ್ರಂಥವು ಈ ಅಷ್ಟಾವರಣಗಳಲ್ಲಿ ಒಂದೆರಡರ ಮಹಿಮೆಯನ್ನಾದರೂ ಕೊಂಡಾಡದೆ ಬಿಟ್ಟಿಲ್ಲ. ಪರದೇಶದವರ ಧರ್ಮಗಳಲ್ಲಿ ಸಹ ಇವು ರೂಪಾಂತರವಾಗಿ ಪ್ರವೇಶವಾಗಿರುವವು. ಪರಧರ್ಮದಲ್ಲಿ ಹೆಸರಷ್ಟೇ ಬದಲಿಸಿ ಸೇರಿರುವವಲ್ಲದೆ ಪರಿಣಾಮವೇನೂ ಒಂದೇ ತೋರುವದು. ಬಹಳ ಹೇಳುವದೇನು? ಧರ್ಮಧರ್ಮಗಳಲ್ಲಿ ತಮ್ಮ ಮಹತ್ವವನ್ನು ತೋರಿಸುತ್ತಿರುವ ಅಷ್ಟಾವರಣಗಳು ಒಟ್ಟುಗೂಡಿರುವ ಶಿವಧರ್ಮ (ಲಿಂಗಾಯತಧರ್ಮ) ವು ಎಷ್ಟು ಮಹತ್ವದ್ದೆಂಬದನ್ನು ವಾಚಕರೇ ಊಹಿಸಬೇಕಲ್ಲದೆ ಬರೆದು ತಿಳಿಸುವದಾಗದ ಮಾತೇ ಸರಿ!

---

# ಹರಿಶ್ಚಂದ್ರ ಚಾರಿತ್ರದಲ್ಲಿಯ ರಸ ವಿಚಾರ.

(ಸವಿಗಾರ :– ರಾಘವೇಂದ್ರ ಕುಲಕರ್ಣಿ 'ವಿಶಾರದ', ಅಧ್ಯಾಪಕ
ಕನ್ನಡ ಜಾಣವರ್ಗ ವಿಜಾಪುರ.)

ಉಭಯ ಕವಿ ಕಮಲ ರವಿರಾಘವಾಂಕನ ಕವಿತಾರಸ ಮಧುವಿನ ಆಸ್ವಾದನೆಗೆ ಹಂಬಲಿಸಿದ ರಸಿಕ ಜನ ಭೃಂಗಗಳಲ್ಲಿ ನಾನೂ ಒಬ್ಬನಾಗಿ 'ಹರಿಶ್ಚಂದ್ರಚಾರಿತ್ರದ' ಮಧುವನವನ್ನು ಸೇರಿದೆ. ಅಲ್ಲಿನ ಅಮೃತೋಪಮವಾದ ಮಧುವನ್ನೂ ಸವಿದೆ. ಸವಿಯನ್ನು ಸವಿದಷ್ಟೂ ಅತೃಪ್ತತೆ ಹೆಚ್ಚುತ್ತದೆ ಎಂದು ಹೇಳುತ್ತಾರೆ. ಹಾಗೇ ನನ್ನದೂ ಸ್ಥಿತಿ. ಹರಿಶ್ಚಂದ್ರ ಚಾರಿತ್ರವು ಅಷ್ಟು ಸೊಗಸಾದ ಕಾವ್ಯವಾಗಿದೆ. ಸುಂದರವಾದ ಕಾವ್ಯ.

ಕಾವ್ಯಕ್ಕೆ ರಸ ಜೀವ, ಭಾವ ಒಡಲ್, ಅರ್ಥ ಅವಯವ, ಶಬ್ದ ವಿಸರ–ನುಡಿಯಲಂಕಾರ ತೊಡಿಗೆಗಳು ಎಂಬುವನ್ನು ಕವಿಕುಲ ಮಾರ್ತಾಂಡನು ಚನ್ನಾಗಿ ಅರಿತಿದ್ದಾನೆ. ಅಂತೆಯೇ ಹರಿಶ್ಚಂದ್ರ ಚಾರಿತ್ರದಲ್ಲಿ ರಸ-ಭಾವ-ಅಲಂಕಾರಗಳಿಗೆ ಪ್ರಧಾನವಾದ ಸ್ಥಾನವನ್ನಿಡಲಾಗಿದೆ. ಅವನ ಕಾವ್ಯವನಿತೆ, ಸುಂದರಳೂ ರಸಿಕಳೂ ಆಗಿದ್ದಾಳೆ ಎನ್ನಬಹುದು.

ಕವಿ ರಾಘವಾಂಕನ ಹರಿಶ್ಚಂದ್ರ ಚಾರಿತ್ರದಲ್ಲಿ ಪ್ರಾಮುಖ್ಯವಾಗಿ ಎರಡು ರಸಗಳನ್ನು ಹೆಚ್ಚಾಗಿ ಕಾಣಬಹುದು. ಕರುಣ ಮತ್ತು ಹಾಸ್ಯ ರಸಗಳು ತಮ್ಮ ಪರಿಪೂರ್ಣ ರೂಪದೊಂದಿಗೆ ಇಲ್ಲಿ ಲೀಲೆಯಾಡುತ್ತಿವೆ ಎಂದು ಹೇಳಬಹುದು. ಇವನ್ನುಳಿದು ರೌದ್ರ-ವೀರ-ಭಕ್ತಿ-ಶಾಂತಿ ಮೊದಲಾದ ರಸಗಳು ಗೌಣವಾಗಿ ಬರುತ್ತವೆ.

ಹರಿಶ್ಚಂದ್ರ ಕಾವ್ಯವನ್ನು ರಾಘವಾಂಕನು ನಾಟಕವಾಗಿಯೇ ಬರೆದಿದ್ದರೆ, ಅದೊಂದು ಅತ್ಯುತ್ತಮವಾದ ಆವಿದ್ಧ ನಾಟಕವಾಗುತ್ತಿತ್ತು ಎಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ವಿಶ್ವಾಮಿತ್ರನ ಕೋಪದ ಕಾಳ್ಗಿಚ್ಚಿಗೆ ಬಲಿಗೊಂಡ ಹರಿಶ್ಚಂದ್ರನ ಜೀವನವೇ ಈ ರುದ್ರನಾಟಕದ ಉತ್ತಮವಾದ ವಸ್ತುವಾಗಿದೆ.

"ಕೋಣವೆರಡುಂ ಹೋರೆ ಗಿಡುವಿಂಗೆ ಮಿತ್ತು" ವೆಂಬಂತೆ ಕೌಶಿಕ ವಸಿಷ್ಠರ ಕಲಹದಲ್ಲಿ ಪಾಪ ಹರಿಶ್ಚಂದ್ರ ದೊರೆಯು ಗೋಳಿಡಬೇಕಾಯಿತು. ತನ್ನ ಪ್ರತಿಜ್ಞೆಯನ್ನು ಸಾಧಿಸಬೇಕೆಂದು ಕೌಶಿಕನು ಮೊದಲು ನಿಜವೈರದಂತಸ್ಥವರಿಯದ ಮುನಿಗಳನ್ನು ಕರೆಯಿಸಿ, ಹರಿಶ್ಚಂದ್ರರಾಯನನ್ನು ಬಹು ಸುವರ್ಣಯಾಗವ ಮಾಡಲು ಪ್ರೇರೇಪಿಸಿ ಎಂದು ಕಳುಹುತ್ತಾನೆ. ವಸಿಷ್ಠನಿಲ್ಲದ ಸಮಯ ಸಾಧಿಸಿ, ಸುಜನ ಮೃಗಧೀವರನಾದ ಕಪಟಪಟು ಕೌಶಿಕನು, 'ಪಿರಿಯ ಕರಿಯುಂ ಮೆಟ್ಟಿ ಕವಡೆಯಂ ಮಿಡಿದಡೆ, ಎನಿತುದ್ದಕ್ಕೆ ಹೋಹುದೊ, ಅದರ ಸರಿಯೆನಿಸಿ ಸುರಿದ ಹೊನ್ನರಾಶಿಯನೀವುದರಸ' ಎಂದು ಕೇಳುತ್ತಾನೆ. ಯಜ್ಞದೀಕ್ಷನಾದ ದಾನಶೂರ ಹರಿಶ್ಚಂದ್ರನು 'ಹಸಾದ'ವೆನ್ನುತ್ತಾನೆ. ಕೌಶಿಕನು ಬೇಹಾಗ ತರಿಸಿಕೊಳ್ಳುವೆ ಎಂದು ಹೋಗುತ್ತಾನೆ. 'ವಿಷಬೀಜ' ಇಲ್ಲಿ ನೆಲೆಗೊಂಡಿತು ಎನ್ನಬಹುದು. ಹರಿಶ್ಚಂದ್ರ ಕಾವ್ಯದ ಕರುಣರಸದ ಗರ್ಭವೇ ಈ 'ಸುವರ್ಣದಾನ' ಎಂದು ಹೇಳಬಹುದು.

ದುರ್ಮಂತ್ರ ಬಲವಂತನಾದ ವಿಶ್ವಾಮಿತ್ರನು ಘೋರವಾದ ಮಾಯೆಯನ್ನು ನಿರಿಸುತ್ತಾನೆ. ಮಾಯಾಮೃಗಗಳ ಕ್ರೂರ ಹಿಂಸೆಯಿಂದ ಪ್ರಜೆಗಳು ಭಯಗೊಂಡು, ಬಾಯ್ಬಿಟ್ಟು ಅರಸನಲ್ಲಿಗೆ ಧಾವಿಸುತ್ತಾರೆ. ಅರಸನು ಪ್ರಜೆಗಳಿಗೆ ಧೈರ್ಯಗೊಟ್ಟು ಬೇಡಪಡೆಯೊಂದಿಗೆ ಕಾನನಕ್ಕೈದುತ್ತಾನೆ. ಬೇಟೆಯಾಡುತ್ತ ಆಡುತ್ತ ಗುರುವಸಿಷ್ಠನ ಆಶ್ರಮಕ್ಕೆ ಬರುತ್ತಾನೆ. ವಸಿಷ್ಠ ಋಷಿ ವಿಶ್ವಾಮಿತ್ರನ ಆಶ್ರಮಕ್ಕೆ ಹೋಗದಿರು ಎಂದು ಬಾಯಾರೆ ಹೇಳುತ್ತಾನೆ. ದುರ್ದೈವ ರಾಜನನ್ನು ಎಳೆಯುತ್ತಿತ್ತು. ಮಾಯದ ಹಂದಿ ರಾಯನನ್ನು ಕೌಶಿಕನ ಆಶ್ರಮಕ್ಕೆ ಎಳೆದೊಯ್ಯುತ್ತದೆ.

ಭವಿಷ್ಯದ ಘೋರ ಸಂನಿವೇಶವನ್ನು ಕವಿಯು ಒಂದು ಭಯಂಕರ ಕನಸಿನಿಂದ ಮರ್ಮಭೇದಕವಾಗುವಂತೆ ಚಿತ್ರಿಸಿದ್ದಾನೆ. ಅತ್ಯಂತ ಉಚಿತವಾದ ಕಲ್ಪನೆ ರಾಜನ ಕನಸಿನಲ್ಲಿ ಘುಡುಘುಡಿಸುತೊಬ್ಬ ಮುನಿ ಬಂದು ಓಲಗಂಗೊಡುವ ಮಣಿಮಂಟಪದ ಕಂಭವೆಲ್ಲವನ್ನು ತಡೆಗಡಿದು, ಹೊಂಗಳಸಂಗಳನು ಒಡೆಬಡಿದು, ನೆರೆದ ಸಭೆಯೊಳಗೆ ರಾಜನನ್ನು ಕೆಡಹಿ ಸಿಂಹಾಸನವನೊಯ್ಯುತ್ತಾನೆ. ಧಾರದೊಳರಿ ಭೂಭುಜರ ನಡುಗಿಸುವ ಬಿರುದಂಕಮಲ್ಲ ಕನಸಿನಿಂ ಭೀತಿಗೊಂಡು ಬೆಬ್ಬಳಿಸುತ್ತಾನೆ. ಕನಸೇ ಮುಂದೆ ನನಸಾಗುತ್ತದೆ.

ಕೌಶಿಕನ ಇಬ್ಬರು ಚಂಡಾಲ ಕನ್ನಿಕೆಯರನ್ನು ಮದುವೆಯಾಗದ್ದಕ್ಕೆ ದೊರೆಗೆ ಕಡೆಗೆ ಸರ್ವರಾಜ್ಯವನ್ನಾದರೂ ಕೊಡುತ್ತೇನೆ ಎನ್ನಬೇಕಾಗುತ್ತದೆ. ಆ ಮಾತನ್ನೇ ಹಿಡಿದು ವಿಶ್ವಾಮಿತ್ರನು ರಾಜ್ಯವನ್ನೇ ಧಾರೆಯೆರಿಸಿಕೊಳ್ಳುತ್ತಾನೆ. ಇಲ್ಲಿಗೆ ಮುಂದಿನ ಕರುಣರಸದ ಅಸ್ತಿವಾರ ಎನ್ನಬಹುದು.

ವಚನ ಕೊಟ್ಟದ್ದೇ ತಪ್ಪು. ಕಾಟಕ್ಕೆ ಮೊದಲು ಅವರ ಅರಿವೆ ಅಂಚಡಿಗಳನ್ನು ಸೆಳೆದುಕೊಳ್ಳುತ್ತಾನೆ. ಕಡೆಗೆ ಹರಣಮಂ ಬೇಡದುಳುಹಿದನು ಲೇಸಾಯ್ತು ಎಂದು ದೊರೆ ಉಸುರ್ಗಳೆಯುವಂತಾಗುತ್ತದೆ. ಕೌಶಿಕನು ದೊರೆಯ ಅಂತಃಕರಣವನ್ನು ಕೆರಳಿಸಲು ಎಷ್ಟು ಸಾಧ್ಯವೋ ಅಷ್ಟು ಮಾಡುತ್ತಾನೆ. ಹೇಗಾದರೂ ಮಾಡಿ ಹರಿಶ್ಚಂದ್ರನನ್ನು 'ಹುಸಿಕ' ನೆಂದೆನಿಸುವದೇ ಇವನ ಧ್ಯೇಯ. ಒಂದು ವಿಚಾರ ಹೊಳೆಯುತ್ತದೆ. ಪುರದ ವಿಭವದ, ಜನದ ಸಿರಿಯ, ವರ ಚಿತ್ರಶಾಲೆಗಳ, ಪರಮ ವನಿತೆಯರ, ನಾನಾ ರತ್ನಕೋಶದುಪ್ಪರದ ಸೊಗಸಂ ಕಂಡು ಮನ ಮರುಗದೇ ಎಂದು ವಿಚಾರಿಸಿ, ಪುರದ ಜನರೆದುರಿಗೆ ನನಗೆ ರಾಜ್ಯವನೊಪ್ಪಿಸಿಗೊಟ್ಟು ಹೋಗು ದೊರೇ ಎಂದು ಆಗ್ರಹಗೊಳಿಸುತ್ತಾನೆ. ಹರಿಶ್ಚಂದ್ರನು ಅದಕ್ಕೂ ಸಿದ್ಧನಾಗಿ ಪಾದಚಾರಿಯಾಗಿ ಅಯೋಧ್ಯೆಗೆ ಬರುತ್ತಾನೆ. ದೊರೆಯ ಈ ದುರವಸ್ಥೆಯನ್ನು ಕಂಡು ಪ್ರಜರು ಹಾಹಾರಿ ಗೋಳಿಡುತ್ತಾರೆ. ರಾಜನಿದಿರುಹೋಗಿ "ಗೊಳೋ" ಎಂದು ಕೂಗುತ್ತಾರೆ. ರಾಜನು ಸಮಾಧಾನದಿಂದ "ಎನಗರಸುತನವಿಂದು ಹೋಗಿ ವಿಶ್ವಾಮಿತ್ರ ಮುನಿಗಾದುದು, ಆತನಂ ಕಂಡು ಕಾಣಿಕೆಯನಿತ್ತು ಬೆಸಕೈವುದು" ಎಂದು ಆಗ್ರಹ ಮಾಡುತ್ತಾನೆ. ಕೌಶಿಕ ಅಲ್ಲಿ ರಾಜನನ್ನು ಮಾತುಮಾತಿಗೂ ಹಿಸುಕಿ ಹಿಂಸಿಸಿ ಅವನನ್ನು ಪರೀಕ್ಷಿಸುತ್ತಾನೆ. ದೊರೆ ಎಲ್ಲಿಯೂ ಸೋಲುವದಿಲ್ಲ.

ಊರು ಬಿಡುವಾಗ ಜನರ ಗೋಳನ್ನು ಕಂಡು, ನಮ್ಮ ಮನಸ್ಸಿನಲ್ಲೂ ದುಃಖ ಕಲಕೆದ್ದು ಬಿಡುತ್ತದೆ. ಕಡೆಗೆ ರೊಚ್ಚಿಗೆದ್ದು ಕೌಶಿಕನನ್ನು ಪಾಪಿ, ಮೂರ್ಖ, ಚಂಡಾಲನೆಂದು ಶಪಿಸುತ್ತಾರೆ. ದೊರೆ ಇದೆಲ್ಲಕ್ಕೂ ಕ್ಷಮೆ ಕೇಳಿಕೊಳ್ಳುತ್ತಾನೆ.

ಕೌಶಿಕನ ದಕ್ಷಿಣೆಯನ್ನು ತೆತ್ತಲು ವಾರಣಾಸಿಗೆ ಹೋಗಿ ತನ್ನ ಹೆಂಡತಿಯನ್ನೇ ಮಾರುವ ದೃಶ್ಯವು ಅತ್ಯಂತ ಕ್ರೂರವಾದ ಸನ್ನಿವೇಶ.



ಅಗ್ನಿಯೇ ಬ್ರಾಹ್ಮಣನಾಗಿ ಬಂದು ಹೀನ ಮಾತುಗಳಿಂದ ದೊರೆಯನ್ನು ಹಿಂಸಿಸುತ್ತಾನೆ. ಅವನೆದುರಿಗೇ ರಾಣಿಯನ್ನು ಒದೆದು ಬಡಿದು ಎಳೆಯುತ್ತ ಒಯ್ಯುತ್ತಾನೆ. ಇಷ್ಟಾದರೂ ನಕ್ಷತ್ರಕನ 'ಬತ್ತಾಯ' ಕ್ಕೆ ಸಾಲುವಷ್ಟೇ ಹಣ!!

ಯಮನೇ ಯಮಸ್ವರೂಪಿಯಾದ ವೀರಬಾಹುಕನಾಗಿ ದೊರೆನ್ನು ಕೊಂಡೊಯ್ದು, ವಾರಣಾಸಿಯ ಸುಡುಗಾಡ ಕಾಯುವ ಕೆಲಸವನ್ನಿತ್ತು ನೇಮಿಸುತ್ತಾನೆ. ಸಹಸ್ರಾರು ಭಟ್ಟಂಗಿಗಳ ಮಧ್ಯೆ ಅಯೋಧ್ಯಾಪುರದ ಬೀದಿಗಳಲ್ಲಿ ಬಿಜಯಂಗೈಯುತ್ತಿದ್ದ ದೊರೆ, ಸತಿ ಸುತರನ್ನು ಒತ್ತೆಯಿಟ್ಟು, ದಸ್ಯುವಾಗಿ ಕಾಶೀಪುರದ ಬೀದಿಗುಂಟ ವೀರಬಾಹುಕ ನಾಣೆಯಿಡುತ್ತ, ಸಾರುತ್ತ ರುದ್ರಭೂಮಿಗೆ ತೆರಳುತ್ತಾನೆ. ಹೆಣನ ತಲೆಯಕ್ಕಿಯನ್ನು ತಿಂದು ಸುಡುಗಾಡ ಕಾಯ್ದು ದಿನವ ನೂಕುತ್ತಾನೆ. ಇತ್ತ ಬ್ರಾಹ್ಮಣನ ಮನೆಯಲ್ಲಿ 'ಚಂದ್ರಮತಿ' ಗೋಳಿಗೇ ತುತ್ತಾಗಿ ದಿನವೂ ಬಳಲುತ್ತಿದ್ದಾಳೆ. ದೊರೆಯ ಗೋಳನ್ನೂ ಮೀರಿದ ಚಿತ್ರಹಿಂಸೆ ಚಂದ್ರಮತಿಗೆ. ಒಡೆಯನತಿಕೋಪಿ, ಹೆಂಡತಿ ಮಹಾಮೂರ್ಖಿ, ಮಗ ಕಡುಧೂರ್ತ, ಸೊಸೆಯಾದರೊ ಅಧಿಕ ನಿಷ್ಠುರಿ, ಮನೆಯ ನಡೆವವರು ದುರ್ಜನರು, ನೆರೆಮನೆಯವರು ಮಿಥ್ಯಾವಾದಿಗಳು, ಕಾಯುವ ಪಶುಗಳೂ ಅಗಡು. ಇಂತಹ ಹಿಂಸೆಯ ಹಂದರದಲ್ಲಿ ಅವಳು ಕಾಲಯಾಪನೆ ಮಾಡುತ್ತಿದ್ದಾಳೆ. ಈ ಗೋಳಿನಲ್ಲಿಯೇ ಒಂದು ಭಯಂಕರವಾದ ದುರ್ಘಟನೆ ನಡೆಯುತ್ತದೆ. ಹುಲ್ಲು ಕೊಯ್ಯಲು ಹೋದ ಲೋಹಿತಾಶ್ವನನ್ನು ಸರ್ಪವು ಕಚ್ಚುತ್ತದೆ. ಕುಮಾರನು ವಿಷವೇರಿ, ಅಂತೂ ಈ ಕಷ್ಟದ ನರಕ ಹಿಂಸೆಯ ಬಾಳನ್ನು ತ್ಯಜಿಸಿ 'ಮರಣಲೋಕವನ್ನೈದುತ್ತಾನೆ.'

ಆ ದುರ್ವಿಷ ತಾಯ್ಗರುಳಿಗೆ ಎಂತಹ ಕಿಚ್ಚನ್ನು ಭುಗಿಲುಗೊಳಿಸಿರುವದೆಂಬದನ್ನು ಊಹಿಸಲು ಸಾಧ್ಯವಿಲ್ಲ. ಕವಿ ತನ್ನ ಕಾವ್ಯ ಸಾಮರ್ಥ್ಯವನ್ನೇ ಇಲ್ಲಿ ಉಪಯೋಗಿಸಿದ್ದಾನೆನ್ನಬಹುದು. ಓದುವ ನಾವೆಲ್ಲರೂ ಅವಳೊಡನೆ ಕಣ್ಣೀರು ಹರಿಸಿ, ಈ ದುಷ್ಟ ಪ್ರಸಂಗ ಯಾರಿಗೂ ಬರಕೂಡದು ಎಂದೇ ನಿಡಿದಾದ ಉಸಿರನ್ನೇ ಬಿಡುತ್ತೇವೆ. ಅವಳ ಭ್ರಮೆ-ನಮ್ಮ ಭ್ರಮೆ–ಅವಳ ಗೋಳು--ನಮ್ಮ ಗೋಳು--ಅವಳ ಮೊರೆ ನಮ್ಮ ಮೊರೆಯಾಗುತ್ತದೆ. ಇದು ಈ ಕರುಣ ಕಾವ್ಯದ ಮೂರನೆಯ ಅಂತಸ್ತು!!!

ತಾಳ್ಮೆಯೇ ತಾಳ್ಮೆಗೆಟ್ಟ ಅಂತಕನ ಕೋಲಾಹಲದ ಭಯಂಕರ ಸನ್ನಿವೇಶವು ಇನ್ನೂ ಮುಂದೆಯೇ ಇದೆ. ಕೌಶಿಕ ಇಷ್ಟಕ್ಕೆ ಬಿಡುವದಿಲ್ಲ. ಚಂದ್ರಮತಿ ಮಗುವನ್ನು ದಹನ ಕ್ರಿಯೆಗೆಂದು ಸುಡುಗಾಡಿಗೆ ತರುತ್ತಾಳೆ. ಅಲ್ಲಲ್ಲಿ ತನ್ನೆದೆಯ ಕಿಚ್ಚಿನ ಹೊಸರೂಪವಾದ ಶವದ ಕಿಚ್ಚಿನ ಕೊಳ್ಳಿಗಳನ್ನೇ ಆಯ್ದು ತಂದು ಚಿತೆಯನ್ನು ಸಿದ್ಧಪಡಿಸುತ್ತಾಳೆ. ಆ ಉರಿಯಲ್ಲಿ ತನ್ನೆದೆಯ ಕರುಳನ್ನಿಟ್ಟು ಇಡಲಾರದೇ ದುಃಖವೊತ್ತರಿಸೆ ಭೋರೆಂದು ಗೋಳಿಡುತ್ತಾಳೆ. ಹರಿಶ್ಚಂದ್ರ ಯಾರಿವಳು ಮಾಯಾವಿಯೆಂದು ಬೆಂಕಿಕಾರುತ್ತ ಧಾವಿಸಿ ಬಂದು ಮಗುವಿನ ಕಾಲನ್ನು ಹಿಡಿದು ಹೊರಗೆಳೆದು ಚೆಲ್ಲುತ್ತಾನೆ. ತಾಯಿ, ತಂದೇ ಬೇಡ ಬೇಡ ಅವನು ನಿನ್ನ ಮಗನೆಂದು ಬಿಡು ಎಂದು ಅಂಗಲಾಚುತ್ತಾಳೆ. ಮಗನ ಅನುವಂಶದ ವೈಭವವನ್ನು ನೆನೆದು ಅಳುತ್ತಿದ್ದಾಗಲೇ ದೊರೆಗೆ ಗೊತ್ತಾಗುತ್ತದೆ, ಇವನು ತನ್ನ ಮಗ ಎಂದು. ಸಿಡಿಲು ಬಡಿದಂತಾಗಿ ಮಗನ ಮೇಲೆ ಧೊಪ್ಪೆಂದು ದೊರೆ ಬೀಳುತ್ತಾನೆ. ಕಡೆಗೆ ಸಂತೈಸಿಕೊಂಡು ನಿರುಪಾಯನಾಗಿ ಹೇಗಾದರೂ ಮಾಡಿ ಸುಂಕವನ್ನು ತೆಗೆದುಕೊಂಡು ಬಾ ಎಂದು ಹೆಂಡತಿಯನ್ನಟ್ಟುತ್ತಾನೆ. ಇಲ್ಲಿಯ ಗೋಳು ಎಂತಹ ಕಲ್ಲೆದೆಯವನನ್ನೂ ರೋದಿಸಿಯೇ ಬಿಡುತ್ತದೆ.

ಕೌಶಿಕನ ನರಕ ಹಿಂಸೆ ಇಲ್ಲಿಗೆ ಮುಗಿಯಲಿಲ್ಲ. ಇನ್ನೂ ಭಯಂಕರವಾದ ಆಪತ್ತನ್ನು ಒಡ್ಡುತ್ತಾನೆ. ಚಂದ್ರಮತಿಯ ಮೇಲೆ ಕಾಶೀರಾಜನ ಮಗನನ್ನು ಕೊಂದ ಆರೋಪ ಹೊರುವಂತೆ ಮಾಡುತ್ತಾನೆ. ಚಂದ್ರಮತಿಗೆ ಇಷ್ಟು ಹೊತ್ತಿಗೆ ಜೀವನವೇ ಬೇಡಾಗುತ್ತದೆ. ಇದ್ದೊಬ್ಬ ಮಗ ಹಾವಿಗೆ ತುತ್ತು. ಪತಿ ಹೊಲೆಯನಾಳು. ತಾನೊಬ್ಬ ಹಿಂಸಕನ ದಾಸಿ, ಈ ಹೇಸಿ ಜೀವನಕ್ಕೆ ಬೇಸತ್ತು ಸಾಯುವದೇ ಲೇಸೆಂದು ನಿರ್ಧರಿಸುತ್ತಾಳೆ. ಮಗುವಿನ ಕೊಲೆ ನಾನೇ ಮಾಡಿದ್ದೇನೆಂದು ಒಪ್ಪುತ್ತಾಳೆ.

ಅರಸುಗುವರನನ್ನು ಕೊಲೆ ಮಾಡಿದ ಪಾತಕಕ್ಕೆ ಚಂದ್ರಮತಿಗೆ ಚಾಂಡಾಲನಿಂದ ತಲೆ ಹೊಡೆಯಿಸಿಕೊಳ್ಳುವ ಪ್ರಸಂಗ ಬರುತ್ತದೆ. ಚಾಂಡಾಲನಾದ ವೀರಬಾಹುಕನು ಈ ಕೆಲಸವನ್ನು ಸುಡುಗಾಡಕಾವ ಚಂಡಿಗ ಹರಿಶ್ಚಂದ್ರನಿಗೆ ಒಪ್ಪಿಸುತ್ತಾನೆ. ಪತಿಯಾಜ್ಞೆಯಂತೆ ಚಂದ್ರಮತಿಯನ್ನು ಎಳೆದು ತಂದು ತಲೆಹೊಡೆಯಲು ಅನುವಾಗಿ ಹರಕೆಯನು ಕೊಡು ಎಂದು ಕೇಳುತ್ತಾನೆ. ಹರಕೆ ಕೊಡುವ ಈ ದುರ್ಧರ ಪ್ರಸಂ



ಗವು ಮೈ ಜುಮ್ಮೆನಿಸುವಂತಹ ಘೋರ ಪ್ರಸಂಗವೇ. ಅಂತಹ ಆಪತ್ತಿನಲ್ಲಿಯೂ ಅವಳು 'ಹರಕೆ' ಕೊಡುತ್ತಾಳೆ. ಎದೆಯಾಳದಿಂದ ಚಿಮ್ಮಿ ಬರುವ ದುಃಖವನ್ನು ತಬ್ಬಿಟ್ಟು 'ಭೂ ಚಂದ್ರಾರ್ಕ ತಾರಂಬರಂ ಕಲಿ ಹರಿಶ್ಚಂದ್ರರಾಯಂ ಸತ್ಯವೆಂಸಿ ಬಾಳಲಿ, ಮಗಂ ಮುಕ್ತನಾಗಲಿ, ಮಂತ್ರಿ ನೆನೆದುದಾಗಲಿ, ವಿಶ್ವಾಮಿತ್ರ ನಿತ್ಯನಾಗಲಿ ಹೊಡೆ'ಯೆಂದು ಸಾವಿಗೆ ಶಿರಗೊಡುತ್ತಾಳೆ. ಈ ಹರಕೆಯಲ್ಲಿ ಎಂತಹ ನೋವಿನ ಚೆಲುವೆ ಅವಿತಿದೆ ಎಂಬುದನ್ನು ಅನುಭವಿಸಬೇಕಾದುದು. ಕಡೆಗೆ ಗೋಳೇ ತಲೆಬಾಗಬೇಕಾಗುತ್ತದೆ. ಅಂತೂ ಕಾವ್ಯದ ಮೊದಲಿನಿಂದ ಕೊನೆಯ ವರೆಗೂ ಕರುಣರಸವು ಓತಪ್ರೋತವಾಗಿದೆ.

ಹರಿಶ್ಚಂದ್ರ ಚಾರಿತ್ರದ ಪ್ರಧಾನರಸವು ಕರುಣವಾಗಿದೆಯೆಂದು ವಿವೇಚಿಸಿದ್ದಾಯಿತು. ಇದರ ಜೊತೆಗೇ ಈ ಕಾವ್ಯದಲ್ಲಿ ಹಾಸ್ಯರಸಕ್ಕೂ ಹೆಚ್ಚಿನ ಸ್ಥಾನವಿದೆ. ಕೇವಲ ಕರುಣರಸವನ್ನೇ ಚಿತ್ರಿಸಿದ್ದರೆ, ಕಾವ್ಯದ ಆಕರ್ಷಣೆಗ ಒಂದಷ್ಟು ನೀರಸತೆಯ ದೋಷವೂ ಬರಬಹುದಾಗಿತ್ತು. ಇದನ್ನರಿತೇ ಚತುರಕವಿರಾಯ ರಾಘವಾಂಕನು ಅಲ್ಲಲ್ಲಿಗೆ ತಿಳಿಯಾದ ಮಧುರ ಹಾಸ್ಯದ ರುಚಿಯನ್ನು ಮಿಂಚಿಸಿದ್ದಾನೆ. ಈ ಕಾವ್ಯದ ಹಾಸ್ಯರಸದ ಅತ್ಯಂತ ಶ್ರೇಷ್ಠಭಾಗವೆಂಬರೆ ಅನಾಮಿಕ ಸತಿಯರಿಗೂ, ಹರಿಶ್ಚಂದ್ರರಾಯನಿಗೂ ನಡೆದ ಸಂಭಾಷಣೆ ಎನ್ನಬಹುದು. ಆ ವ್ಯಂಗ, ಆ ಕಟುಕಿ, ಆ ಕೂಟ ಪ್ರಶ್ನೆ ಎಷ್ಟು ಸುಂದರ, ಎಷ್ಟು ಸಹಜ, ಎಷ್ಟು ತರ್ಕಪೂರ್ಣ, ಎಷ್ಟು ಗೂಢ, ಎಷ್ಟು ಗಂಭೀರ ಎಂಬುದು ಓದಿ ನೋಡಿ, ನಕ್ಕು ನೊಂದು ನವೆದು ತಿಳಿಯಬೇಕು. ರಾಘವಾಂಕನು ವ್ಯಂಗವನ್ನು ಎಷ್ಟು ಸೂಕ್ಷ್ಮವಾಗಿ, ತೀಕ್ಷ್ಣವಾಗಿ ಉಪಯೋಗಿಸಬಲ್ಲನು ಎಂಬುದು ಆ ಚಂಡಾಲ ಕನ್ನಿಕೆಯರ ಮತ್ತು ರಾಜನ ಪ್ರಶ್ನೋತ್ತರಗಳಿಂದ ಸಹಜವಾಗಿ ತಿಳಿಯುತ್ತಿದೆ. ರಾಘವಾಂಕನ ಈ ಅದ್ಭುತ ಪ್ರತಿಭಾ ಶಕ್ತಿಯೇ ಹರಿಶ್ಚಂದ್ರಕಾವ್ಯಕ್ಕೆ ಚಿರನೂತನ ಅಮರತ್ವವನ್ನು ಕೊಟ್ಟಿದೆಯೆನ್ನಬಹುದು. ಹರಿಶ್ಚಂದ್ರದೊರೆ, "ಸೂರ್ಯಕುಲದ ರಾಯರ್ಗೆ ಕೀರ್ತಿಯೊಳು, ಭುಜಬಲದೊಳು ಒರೆದೊರೆಯೆನಿಸಿ ಕನ್ನಿಕೆಯರಂ ಕೊಡುವ ಭೂಪರಿಲ್ಲೆಂದು ತನಕ; ಇಂತಿರುವಾಗ ಹೊಲತಿಯರು ಬಂದಾವು ಸತಿಯರಾದಪ್ಪೆವೆಂಬುಲಿಹಿದು, ಬಂದ ಕಾಲಗುಣವೊ ನಿಂದ ನೆಲದ ಗುಣವೊ?" ಎಂದು ತಿರಸ್ಕರಿಸಿದರೆ "ಪಾವನ ಕ್ಷೀರವಂ ಕೊಡುವ ಕೆಚ್ಚಲಮಾಂಸವಾವ ಲೇಸು? ಇನಿದುಳ್ಳ ಮಧುವ

ನೊಸಲಿನೊಳುಳ್ಳ ಕಣ್ಣ ಉರಿಯಲ್ಲಿ ಲೇಸು? ಅಧಿಕ ಕಸ್ತೂರಿಯ ಕೊಡುವ ಮೃಗ ನಾಭಿ ತಾನಾವ ಲೇಸು? ದೇವರಿಗೆ ಸಲ್ಲವೇ? ಅವನಿಂತ, ಉತ್ತಮಗುಣಂ ಗಳಿದ್ದಾವ ಕುಂದಂ ಕಳೆಯಲಾಗುವುದು? ಇಂದೆಮ್ಮ ರೂಪು ಜವ್ವನವಿರಲು ಕುಲದ ಮಾತೇಕೆ? ಎಂದು ಮಾರುತ್ತರಗೊಡುತ್ತಾರೆ. ದೊರೆ "ಅಕ್ಕಕ್ಕ ಒಚ್ಚಲುದಕಂ ತಿಳಿದಡೆ ಅರ ಮೀಹಕ್ಕೆ ಯೋಗ್ಯಂ? ನಾಯ್ಗೆ ಹಾಲುಳ್ಳಡೆ ಆವನೂಟಕ್ಕೆ ಯೋಗ್ಯಂ? ಮಿಕ್ಕ ಹೊಲತಿಯರು ನೀವೆನೆ ನಿಮ್ಮ ಜವ್ವನದ ಸೊಕ್ಕು, ರೂಪಿನ ಗಾಡಿ, ಜಾಣತನದೊಪ್ಪ ಏತಕ್ಕೆ ಯೋಗ್ಯಂ? ರಮಿಸಿದವರುಂಟೆ? ಶಿವಶಿವಾ ಈ ಮಾತು ತಾ ಹೊಲೆ!" ಯೆನ್ನುತ್ತಾನೆ. ಇದಕ್ಕೆ ಅವರಿಂತಹ ಸಮರ್ಪಕವಾದ ಉತ್ತರವನ್ನೀಯುತ್ತಾರೆಃ—"ಹಾಡ ನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ, ಮಾತಾಡಿ ನುಡಿಸಿದ ಬಾಯ್ಗೆ ಹೊಲೆಯಿಲ್ಲ, ರೂಪ ನೆರೆ ನೋಡಿದ ವಿಲೋಚನಕೆ ಹೊಲೆಯಿಲ್ಲ, ವೈಯಗ್ಗ ಮುಡಿಗಳಿಂ ಸುಳಿವ ತಂಗಾಳಿಯಿಂ ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ ಹೊಲೆಯಿಲ್ಲ. ಸೋಂಕಿಂಗೆ ಹೊಲೆಯುಂಟಾಯ್ತೆ? ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮ ಒಂದಧಿಕವೇ?!" ಎಷ್ಟು ಸಮಂಜಸವಾದ ಉತ್ತರ. ತಲೆದೂಗುವ ಮೆಚ್ಚುವ, ಮುಗ್ಧಗಾಗುವ, ಮೋಹಿಸುವ, ಮಧುಮಧುರವಾದ ಉತ್ತರ!! ಚತುರ ಕವಿರಾಯ ಹಂಪೆಯ ರಾಘವಾಂಕನ ಹಾಸ್ಯದ ಬಗೆ ಬೆರಗುಗೊಳಿಸುವ ಬಗೆ! ಮುಗ್ಧಗೊಳಿಸುವ ಬಗೆ!

ರಾಘವಾಂಕನು ತನ್ನ ಕಾವ್ಯದಲ್ಲಿ ಇವಲ್ಲದೇ ವೀರ, ಬೀಭತ್ಸ ಶಾಂತ ರಸಗಳನ್ನೂ ತೂಕ ಮೀರಿದಂತೆ ಬಹು ಯೋಗ್ಯವಾಗಿ ಅಲ್ಲಲ್ಲಿಗೆ ಉಪಯೋಗಿಸಿದ್ದಾನೆ. "ಸುರನರೋರಗ ನಮಿತ ಚರಣ ಜಯ ಜಯ, ದಯಾಭರಣ ಜಯಜಯ, ದುರಿತಹರಣ ಜಯ ಜಯತು ಜಯತು; ಗುರುವೆ, ಕುಲಗುರುವೆ, ಮದ್ಗುರುವೆ, ಘನಗುರುವೆ ಶರಣಾಗು ಶರಣಾಗು" ಎಂದು ವಸಿಷ್ಠಮುನಿಗೆ ಸರ್ವಸ್ವ ಸಮರ್ಪಣೆ ಮಾಡುವಾಗಲೂ "ನಿಮ್ಮ ಕರುಣದ ತೊಟ್ಟಿಲ ಹಸುಳೆಯಾಂ, ಸರ್ವಾಪರಾಧಿಯಾಂ ತಂದೆ ಕರುಣಿಸು!" ಎಂದು ವಿಶ್ವಾಮಿತ್ರನನ್ನು ಬೇಡಿಕೊಳ್ಳುವಾಗಲೂ "ಚಾಂಡಾಲ ಕಿಂಕರನಾಗಿ, ಹೊಲೆವೇಷವನ್ನು ಹೊತ್ತು, ಸುಡುಗಾಡ ಕಾದು, ಶವಶಿರದಕ್ಕಿಯನು ಹೇಸದುಂಡು......... ಘನಪತಿವ್ರತೆಯಪ್ಪ ನಿಜ ಸತಿಯ ಕೊಂದ ನೀಚನು ಮೂರ್ಖನು ನಾನು ಎನ್ನ ಠಾವಿಂಗೆ



ಇದೇಕೆ ಪಾವನ ಮೂರ್ತಿ ನೀವು ಬಿಜಯಂಗೈದಿರಿ" ಎಂದು ಅಭವ ನಂಘ್ರಿಯಲಿ ಸೈಗೆಡೆವಾಗಲೂ ಭಕ್ತಿ ಸೂಸುವರಿಯುತ್ತದೆ!

ಸ್ಮಶಾನದ ಹಿಂಸೆಯ ಘೋರ ದೃಶ್ಯವೂ ಚಂದ್ರಮತಿ ಪುತ್ರನ ದಹನ ಸಂಸ್ಕಾರಕ್ಕೆ ಬರುವಾಗ ಹಾದಿಯಲ್ಲಿ ಕೌಶಿಕನು ರಚಿಸಿದ ನರಕ ದೃಶ್ಯವೂ ಎಂತಹ ಬೀಭತ್ಸವನ್ನು ನಮ್ಮ ಮನೋಮುಕುರದಲ್ಲಿ ಚಿತ್ರಿಸುತ್ತವೆ!

ಬೇಟೆಯಾಡುವ ಬೇಡರ ವೀರಶ್ರೀ, ಹರಿಶ್ಚಂದ್ರರಾಯನ ಎಂಟು ತರದ ಬೇಂಟೆಯ ವೀರಾಟೋಪ, ಬೇಟೆಯಲ್ಲಿಯ ಶೌರ್ಯವನ್ನು ಬಿತ್ತರಿಸುತ್ತವೆ. ಇದೂ ಅಲ್ಲದೇ ಉಳಿದ ಒಂದೆರಡು ರಸಗಳೂ ಸಮಯೋಚಿತವಾಗಿ ತಮ್ಮ ರೂಪವನ್ನು ತೋರಿಕೊಂಡಿವೆ.

ರಾಘವಾಂಕನ 'ರಸಪರಿಪಾಕ'ದ ಅನುಪಮ ಜಾಣ್ಮೆಯನ್ನು ತೂಕಗಟ್ಟಿ ನೋಡುವ ಸಾಮರ್ಥ್ಯವು ನನ್ನಲ್ಲಿಲ್ಲ. ಕೇವಲ ವಿದ್ಯಾರ್ಥಿಯಾಗಿ ಓದಿ, ಮನಕ್ಕೆ ನೆಟ್ಟ ಒಂದೆರಡು ವಿಚಾರವಾಗಿ ಮೂಡಿದ ಎರಡು ಭಾವನೆಗಳನ್ನೇ ಮುರುಕು ಮಾತಿನಲ್ಲಿ ಇಡಲು ಪ್ರಯತ್ನಿಸಲಾಗಿದೆ. ಇದೊಂದು ಸ್ಥೂಲ ಪರಿಚಯವೇ ವಿನಾ ವಿಸ್ತಾರವಾದ ವಿವೇಚನೆಯಲ್ಲ.

ರಾಘವಾಂಕನು ಅದ್ಭುತ ಪ್ರತಿಭಾವಂತ ಕವಿ. ಅವನ ಕಾವ್ಯವು ಅನುಪಮಸುಂದರವಾದ ಕಾವ್ಯ. ಅದರಲ್ಲಿ ಅವನು ತೋರಿದ ಜಾಣ್ಮೆ, ಚಮತ್ಕಾರ, ರಸಕೌಶಲ, ರಸಿಕರ ಮೆಚ್ಚುಗೆಗೆ ಎಂದೆಂದಿಗೂ ಪಾತ್ರವಾಗುವಂತಹವು. 'ರಸಿಕತನ-ಸುಳಿ-ಸುಖಂ ನಿಳಯವಂತಪ್ಪ ಈ ಪೊಸ ಕಾವ್ಯಕನ್ನಿಕೆಯ ಪಡೆದು ಪಂಪಾಂಬಿಕೆಯರಸ ವಿರೂಪಾಕ್ಷಂಗೆ ಕೊಟ್ಟ ಹಂಪೆಯ ರಾಘವಾಂಕನೇಂ ಕೃತಕೃತ್ಯನೊ!!'

---

# ವೀರಶೈವ ವಾಙ್ಮಯಾವತಾರ.

(ರಾ. ಸಾ. ಪಿ. ಜಿ. ಹಳಕಟ್ಟಿ ವಿಜಾಪುರ.)

ವೀರಶೈವ ಧರ್ಮ ಮತ್ತು ಅದರ ವಾಙ್ಮಯವು ಈಚೆಗೆ ಬಹು ಜನರ ಲಕ್ಷವನ್ನು ಮೆಲ್ಲಗೆ ಎಳೆಯುತ್ತಿರುವದು ಸಮಾಧಾನಕರವಾದ ಸಂಗತಿಯಾಗಿದೆ. ವಿದ್ವಾಂಸರು ಇವುಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿಮರ್ಶಾತ್ಮಕ ಲೇಖಗಳನ್ನು ಬರೆಯಲೂ ವಿವೇಚನೆಗಳನ್ನು ಮಾಡಲೂ ಹತ್ತಿರುತ್ತಾರೆ. ಕಾಲೇಜುಗಳಲ್ಲಿಯ ವ್ಯಾಖ್ಯಾನಮಾಲೆಗಳಲ್ಲಿಯೂ ಶೈಕ್ಷಣಿಕ ಸಂಸ್ಥೆಗಳಲ್ಲಿಯೂ ಸಾರ್ವಜನಿಕ ಸಭೆಗಳಲ್ಲಿಯೂ ವೀರಶೈವ ವಾಙ್ಮಯದ ಸ್ವರೂಪು ಚರ್ಚಿಸಲ್ಪಡಹತ್ತಿದೆ. ವೀರಶೈವ ಗ್ರಂಥಗಳು ಹೊರಪಟ್ಟಿದ್ದರಿಂದಲೇ ಈ ಸ್ಥಿತಿಯುಂಟಾಗಿರುವದು ನಿರ್ವಿವಾದವಾದುದು.

ಇದೇಮೇರೆಗೆ ವೀರಶೈವ ಸಮಾಜದ ಇತಿಹಾಸ ಸಂಶೋಧನೆಯ ಕಾರ್ಯಗಳಾದರೂ ಬಹು ಮಹತ್ವದವಿರುತ್ತವೆ. ಯಾಕಂದರೆ ಕರ್ನಾಟಕ ಇತಿಹಾಸದಲ್ಲಿ ವೀರಶೈವರಿಗೆ ಒಂದು ಉಚ್ಚ ಸ್ಥಾನವಿದೆ. ಈಚೆಗೆ ಉತ್ತರ ಕರ್ನಾಟಕದಲ್ಲಿಯ ಅನೇಕ ಶಿಲಾಶಾಸನಗಳು ಪ್ರಕಟವಾಗಹತ್ತಿರುತ್ತವೆ. ಅವುಗಳಲ್ಲಿ ಪುರಾತನ ಅನೇಕ ಶಿವಶರಣರ ಉಲ್ಲೇಖಗಳಿರುವದು ಕಂಡುಬರಹತ್ತಿದೆ. ಇವುಗಳಿಂದ ಬಸವನ ಕಾಲದಲ್ಲಿಯೂ ಅವನಕಿಂತ ಮೊದಲೂ ಅನೇಕ ವಚನಕಾರರೂ ಶಿವಶರಣರೂ ಆಗಿಹೋದರೆಂತಲೂ ಅವರು ಕಾಲ್ಪನಿಕ ಪುರುಷರಲ್ಲೆಂತಲೂ ಕಂಡುಬರಹತ್ತಿದೆ.

ಕೆಲವು ವರ್ಷಗಳ ಹಿಂದೆ ಬಸವೇಶ್ವರನ ಮತ್ತು ಅವನ ಸಂಗಡಿಗರ ಮೇಲೆ ಅನುಚಿತ ಆರೋಪಗಳು ಮಾಡಲ್ಪಡುತ್ತಿದ್ದವು. ಅವರು ಅನಾಚಾರಿಗಳನ್ನು ನೆರಹಿಕೊಂಡು ದುರ್ವರ್ತನೆಗಳನ್ನು ಮಾಡಲು ಜನರಿಗೆ ಪ್ರೇರಣೆಮಾಡುವವರಾಗಿದ್ದರೆಂದು ಹೇಳಲ್ಪಡುತ್ತಿತ್ತು. ಈ ತರದ ಆರೋಪಗಳು ಯುರೋಪಿಯನ್ನರು ಬರೆದ ಗ್ರಂಥಗಳಲ್ಲಿ ಮಾತ್ರವಲ್ಲ, ಕರ್ನಾಟಕಸ್ತರು ಕೂಡ ಬರೆದ ಗ್ರಂಥಗಳಲ್ಲಿ ಇರುವದು ಕಂಡುಬರುತ್ತಿದೆ. ಆದರೆ ಬಸವೇಶ್ವರನೊಡನೆ ಇದ್ದ ಅನೇಕ ಜಾತಿಯ ಜನರು ಅಂದರೆ ಮಡಿವಳರು,



ನಾಪಿತರು, ಹೊಲಿಗೆಯವರು, ಢೋರರು, ಸಮ್ಮಗಾರರು ಇವರು ನೀಚ ಜನಗಳಾಗಿದ್ದಿಲ್ಲ, ಆದರೆ ಅವರು ಉಚ್ಚ ತರಗತಿಯ ಶರಣರಾಗಿದ್ದರೆಂದು ಈಗ ಪ್ರಸಿದ್ಧವಾದ ಅವರ ಉಕ್ತಿಗಳಿಂದ ಕಂಡುಬರಹತ್ತಿದೆ. ಇದರಿಂದ ಈ ಬಗೆಯ ಆರೋಪಗಳನ್ನು ಮಾಡುವದು ಈಗ ನಿಂತುಹೋಗಿರುತ್ತದೆ.

ಆದರೆ ವೀರಶೈವ ಶರಣರ ಮತ್ತು ವಚನಕಾರರ ಅವರಲ್ಲಿ ಮುಖ್ಯವಾಗಿ ಬಸವೇಶ್ವರ, ಚನ್ನಬಸವೇಶ್ವರ, ಅಲ್ಲಮಪ್ರಭು, ರೇವಣಸಿದ್ಧೇಶ್ವರ ಈ ಮಹಾನುಭವರ ಚರಿತ್ರೆಗಳ ವಿಷಯವಾಗಿ ಈಚೆಗೆ ಅನೇಕತರದ ಅಭಿಪ್ರಾಯಗಳನ್ನು ವಿದ್ವಾಂಸರು ಪ್ರಕಟಮಾಡಹತ್ತಿರುತ್ತಾರೆ. ಅವುಗಳ ಮೂಲಕ ಈ ಮಹಾನುಭಾವರ ಚರಿತ್ರೆಗಳ ವಿಷಯವಾಗಿ ಬೇರೆ ವಿಧವಾದ ತಪ್ಪು ತಿಳುವಳಿಕೆಗಳು ಉಂಟಾಗಹತ್ತಿರುತ್ತವೆ. ಆದರೆ ನಮ್ಮ ದುರ್ದೈವದಿಂದ ಉತ್ತರ ಕರ್ನಾಟಕದಲ್ಲಿಯ ಶಿಲಾಶಾಸನಗಳು ಇನ್ನೂ ಪ್ರಸಿದ್ಧವಾಗಿಲ್ಲ, ಇಷ್ಟೇ ಅಲ್ಲ, ವೀರಶೈವವಾಙ್ಮಯವೂ ಕೂಡ ಪೂರ್ಣವಾಗಿ ಸಂಶೋಧಿಸಲ್ಪಟ್ಟಿಲ್ಲ. ಆದ್ದರಿಂದ ಇಂಥ ವಿಧಾನಗಳು ತಪ್ಪೆಂದು ಸ್ಪಷ್ಟವಾಗಿ ಸಿದ್ಧಪಡಿಸುವದು ಸದ್ಯದ ಸ್ಥಿತಿಯಲ್ಲಿ ಕಠಿಣ ಕೆಲಸವಾಗಿರುತ್ತದೆ. ಆದರೆ ಮುಂದೆ ಇತಿಹಾಸ ಸಂಶೋಧನ ಕಾರ್ಯಗಳು ಹೆಚ್ಚು ಹೆಚ್ಚು ಆಗುತ್ತಹೋದ ಹಾಗೆ ನಿಜಸ್ಥಿತಿಯು ಹೊರಬೀಳಬಹುದೆಂದು ನಾವು ನಿರೀಕ್ಷಿಸುತ್ತೇವೆ.

ಡಾ॥ ಚಿಲುಕೂರು ನಾರಾಯಣರಾವ್ ಎಂ. ಎ. ಪಿ. ಎಚ್. ಡಿ. ಎಂಬವರು ೧೫-೮-೧೯೩೩ ರಲ್ಲಿ ಅನಂತಪುರ ಗವರ್ನ್ಮೆಂಟ ಕಾಲೇಜಿನ ಕರ್ನಾಟಕ ಸಂಘದ ಪ್ರಾರಂಭೋಪನ್ಯಾಸ ಸಮಯದಲ್ಲಿ ಬಸವೇಶ್ವರ ಮತ್ತು ವೀರಶೈವ ವಾಙ್ಮಯ ಇವುಗಳ ವಿಷಯವಾಗಿ ಅನೇಕ ತರದ ವಿಧಾನಗಳನ್ನು ಮಾಡಿದ್ದಾರೆ. ಈ ಉಪನ್ಯಾಸವನ್ನು ನಾವು ದುರ್ಲಕ್ಷಿಸಬಹುದಾಗಿತ್ತು. ಆದರೆ ಕರ್ನಾಟಕದಲ್ಲಿ ಪ್ರಸಿದ್ಧಹೊಂದಿರುವ ಪ್ರಬುದ್ಧ ಕರ್ನಾಟಕ ಪತ್ರಿಕೆಯ ಈ ತಿಂಗಳಿನ ಸಂಚಿಕೆಯಲ್ಲಿ ಅದಕ್ಕೆ ಸ್ಥಾನವು ದೊರತಿರುತ್ತದೆ. ಆದ್ದರಿಂದ ಅದರಲ್ಲಿ ಕಾಣಿಸಿದ ವಿಷಯಗಳ ಸತ್ಯಾಸತ್ಯತೆಯನ್ನು ಕುರಿತು ನಾವು ವಿವೇಚಿಸುವುದು ಅವಶ್ಯವಾಗಿರುತ್ತದೆ. ಹೀಗೆ ಮಾಡುವ ಪೂರ್ವದಲ್ಲಿ ಮೇಲ್ಕಂಡ ಉಪನ್ಯಾಸವು ಆವುದು ಇರುತ್ತದೆಂಬದನ್ನು ಶಿವಾನುಭವದ ವಾಚಕರು ಅರಿಯುವದು ಬಹು ಅವಶ್ಯವಾಗಿರುತ್ತದೆ. ಆದ್ದರಿಂದ ಅದನ್ನು ಇದ್ದಕ್ಕಿದ್ದಹಾಗೆ ಇಲ್ಲಿ ಪ್ರಕಟಿಸಿದ್ದೇವೆ.

ಅದರಲ್ಲಿ ಮಾಡಿದ ವಿಧಾನಗಳನ್ನು ಮತ್ತು ಅವುಗಳನ್ನು ಸಮರ್ಥಿಸಲು ಮುಂದು ಮಾಡಿದ ಕಾರಣಗಳನ್ನು ವಾಚಕರು ಅರಿತಿದ್ದಾದರೆ ವಿವೇಚನೆಗೆ ಬಹಳ ಅನುಕೂಲವಾಗುವದು. ಅವರ ಮುಖ್ಯ ವಿಧಾನಗಳು ಯಾವವೆಂದರೆ:-

(೧) ಬಸವೇಶ್ವರನು ಐತಿಹಾಸಿಕ ಪುರುಷನಲ್ಲ.

(೨) ೧೨ ನೇ ೧೩ ನೇ ಶತಮಾನಗಳಲ್ಲಿ ವೀರಶೈವ ವಾಙ್ಮಯವೇ ಇರಲಿಲ್ಲ. ಅದು ಪಾಲ್ಕುರಿಕೆ ಸೋಮನಾಥನಿಂದೀಚೆಗೆ ಹುಟ್ಟಿದ್ದಾಗಿದೆ.

(೩) ವಚನಕಾರರ ವಚನಗಳು ಅವರಿಂದಲೇ ಬರೆಯಲ್ಪಟ್ಟಿರುವದಿಲ್ಲ. ಅವರ ಹೆಸರಿನಿಂದ ಹಿಂದುಗಡೆ ಬೇರೆ ಜನರು ರಚಿಸಿರುತ್ತಾರೆ.

(೪) ಷಟ್‌ಸ್ಥಲ ಸಿದ್ಧಾಂತವು ಪುರಾತನಕಾಲದ್ದಲ್ಲ. ಅದು ಈಚೆಗೆ ಉತ್ಪನ್ನವಾದದ್ದು ಇರುತ್ತದೆ.

(೫) ಬಸವೇಶ್ವರನು ಕೂಡಲಸಂಗಮೇಶ್ವರನಲ್ಲಿ ಐಕ್ಯವನ್ನು ಹೊಂದಲಿಲ್ಲ. ಅವನು ಬಿಜ್ಜಳನ ತರುವಾಯ ಅನೇಕ ವರ್ಷ ಜೀವಿಸಿದ್ದನು. ಮುಂದೆ ಅವನು ದ್ವಾರಸಮುದ್ರದ ಹೊಯ್ಸಾಳ-ಬಲ್ಲಾಳರ ಅರಸರ ಪಕ್ಷವನ್ನು ವಹಿಸಿ ಬಿಜ್ಜಳನ ರಾಜ್ಯದಲ್ಲಿ ನುಗ್ಗಿದನು.

ಈಪ್ರಕಾರ ವಿಧಾನಗಳು ಈ ಲೇಖದಲ್ಲಿ ಮಾಡಲ್ಪಟ್ಟಿರುತ್ತವೆ.

ವೀರಶೈವ ಧರ್ಮದ ಮತ್ತು ಅದರ ಇತಿಹಾಸದ ಕಾರ್ಯವನ್ನು ಕೈಕೊಂಡವರು ಈ ಎಲ್ಲ ವಿಷಯುಗಳ ಸಂಶೋಧನವನ್ನು ಸಮಾಧಾನ ಚಿತ್ತದಿಂದ ಮಾಡಿ ಅವುದು ನಿಜವೋ ಅದನ್ನು ಸಪ್ರಮಾಣವಾಗಿ ಜನರ ಮುಂದೆ ಇಡುವದು ಅವರ ಕರ್ತವ್ಯವಾಗಿದೆ. ಇದಕ್ಕೋಸ್ಕರ ಕರ್ನಾಟಕದಲ್ಲಿ ಆಗಿಹೋದ ರಾಜವಂಶಗಳ ಚರಿತ್ರೆಗಳನ್ನು ಅವರು ಸೂಕ್ಷ್ಮರೀತಿಯಿಂದ ಅಭ್ಯಾಸ ಮಾಡುವದೂ ವೀರಶೈವ ವಾಙ್ಮಯದ ಸಂಶೋಧನವೂ ಬಹು ಅವಶ್ಯವಾಗಿವೆ.

**ಡಾ॥ ಚಿಲುಕೂರು ನಾರಾಯಣರಾವ್ ಎಮ್. ಎ. ಪಿ. ಎಚ್. ಡಿ. ಯವರು ಮಾಡಿದ ಭಾಷಣವು.**

"ಈ ವರ್ಷ ನನ್ನನ್ನು ನಿಮ್ಮ ಸಂಘದ ಪ್ರಾರಂಭೋಪನ್ಯಾಸವನ್ನು ಮಾಡಬಯಸಿದ ನಿಮಗೆ ಕೃತಜ್ಞನಾಗಿದ್ದೇನೆ. ನನಗೆ ಕನ್ನಡ ಭಾಷೆಯ ಪರಿಚಯವು ಕಡಿಮೆಯಾಗಿದ್ದರೂ, ಈ ಭಾಷಣವನ್ನು ಮಾಡುವುದಕ್ಕೆ ಉಪಕ್ರಮಿಸಿದ ನನ್ನ ಸಾಹಸವನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇನೆ.



ಯಾವುದಾದರೊಂದು ಸಾಮಾನ್ಯವಾದ ವಿಷಯವನ್ನು ಉಪನ್ಯಸಿಸಿ ವಿಷಯ ವಿಸ್ತಾರದಿಂದ ನಿಮ್ಮನ್ನು ಬೇಸರಗೊಳಿಸುವುದು ನನ್ನ ಉದ್ದೇಶವಲ್ಲ. ಯಾವುದಾದರೂ ಒಂದು ಪ್ರತ್ಯೇಕ ಸಮಸ್ಯೆಯನ್ನು ತೆಗೆದುಕೊಂಡು ಅದನ್ನು ಕುರಿತು ನನ್ನ ಅಭಿಪ್ರಾಯವನ್ನು ಪ್ರಕಟಿಸಿದರೆ ಅದರಿಂದ ನಿಮಗೆ ಲಾಭವುಂಟೆಂದು ಯೋಚಿಸಿ, ಕನ್ನಡ ವಾಙ್ಮಯದಲ್ಲಿ ಮುಖ್ಯವಾದ "ವೀರಶೈವ ಸಾಹಿತ್ಯ" ಎಂಬ ವಿಷಯವಾಗಿ ಪ್ರಸ್ತಾವಿಸಬಯಸುತ್ತೇನೆ. ನಾನು ಹೇಳುವುದೇ ಪ್ರಮಾಣವೆಂದು ನೀವು ನಂಬಬಾರದು. ಅದರಲ್ಲಿ ಲೋಪಗಳೂ, ದೋಷಗಳೂ ಕೂಡ ಇರಬಹುದು. ಅವನ್ನು ತಿಳಿದುಕೊಳ್ಳುವುದಕ್ಕೆ ನನಗಿಂತ ನೀವೇ ಅಧಿಕಾರಿಗಳು. ಆಂಧ್ರಭಾಷೆಯು ನನ್ನ ಅಭಿಮಾನ ಭಾಷೆ. ಆಂಧ್ರಭಾಷಾಚರಿತ್ರೆಯೂ ಅದರಲ್ಲಿರುವ ವಿಜ್ಞಾನವೂ ವಿಶದಪಡುವುದಕ್ಕೆ ಸಾಕಾದಷ್ಟು ಮಾತ್ರ ನನಗೆ ಕನ್ನಡ ಸಾಹಿತ್ಯದೊಡನೆ ಪರಿಚಯವಿದೆ.

ಆಂಧ್ರಭಾಷೆಗೂ, ಕನ್ನಡಕ್ಕೂ, ಆಂಧ್ರ ಸಾಹಿತ್ಯಕ್ಕೂ ಕನ್ನಡ ಸಾರಸ್ವತಕ್ಕೂ ಇರುವ ನಿಕಟಸಂಬಂಧವು ಸಾಮಾನ್ಯವಾದುದಲ್ಲ. ಕನ್ನಡವೂ, ಆಂಧ್ರವೂ ಏಕಮಾತೃಗರ್ಭದಿಂದ ಉತ್ಪತ್ತಿಯಾಗಿರುವ ಭಾಷಾದೇವಿಗಳು. ಕನ್ನಡಕ್ಕೆ ಒಂದು ಪಕ್ಷದಲ್ಲಿ ಆಂಧ್ರವು ಪುತ್ರಿಕೆಯೆಂದು ಹೇಳಿದರೂ ಹೇಳಬಹುದು. ಎರಡರ ನುಡಿಕಾರವೂ ಸಾಹಿತ್ಯ ಮಾರ್ಗಗಳೂ, ಸಾಹಿತ್ಯ ವಿಷಯುಗಳೂ, ಸಾಹಿತ್ಯ ಲಕ್ಷಣಗಳೂ ಒಂದೇ. ಕನ್ನಡಿಗರಿಗೂ, ಆಂಧ್ರರಿಗೂ ಇರುವ ಸಂಬಂಧವು ಮತ್ತು ಯಾವ ದ್ರಾವಿಡರಿಗೂ ಇಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ಮುಖ್ಯವಾಗಿ ಈ ಸಂಬಂಧವನ್ನು ನಿಸ್ಪಷ್ಟವಾಗಿ ಕಾಣಬಹುದು. ಎರಡು ವಾಙ್ಮಯಗಳೂ ಒಂದೇ ರೀತಿಯಾಗಿ ಅವತರಿಸಿವೆ; ಒಂದೇ ರೀತಿಯಾಗಿ ಬೆಳೆದಿವೆ; ಒಂದೇ ರೀತಿಯಾಗಿ ಕ್ಷೀಣಿಸಿ ಈ ಕಾಲದಲ್ಲಿ ಪುನರುಜ್ಜೀವಿಸಿರುತ್ತವೆ. ಅಜ್ಞಾತಯುಗ, ಜೈನ ಕಾವ್ಯಯುಗ, ವೀರಶೈವ ಸಾಹಿತ್ಯಯುಗ, ಪೌರಾಣಿಕ ಯುಗ ಎಂದು ಎರಡು ದೇಶಗಳಲ್ಲಿಯೂ ಸಮಕಾಲಗಳಲ್ಲಿ ತೋರಿದ ಈ ಎರಡು ಸಾಹಿತ್ಯಗಳಿಗೂ ಸಾಮಾನ್ಯ ವಿಷಯುಗಳು ಅನೇಕವಾಗಿ ಇವೆ. ಅವುಗಳಲ್ಲಿ ವೀರಶೈವ ವಾಙ್ಮಯಾವತಾರವೇ ಈಗ ನನ್ನ ಭಾಷಣೆಗೆ ವಿಷಯ.

ಕನ್ನಡ ಸಾಹಿತ್ಯ ಚರಿತ್ರೆಯಾಗಲಿ, ಆಂಧ್ರ ಸಾಹಿತ್ಯ ಚರಿತ್ರೆಯಾಗಲಿ ಇನ್ನೂ ನಿಸ್ಪಷ್ಟವಾಗಿ ಏರ್ಪಡಲಿಲ್ಲ. ಕೀ. ಶೇ. ಶ್ರೀ. ನರಸಿಂಹಾಚಾ

ರ್ಯರವರು ಬರೆದ ಕರ್ಣಾಟಕ ಕವಿಚರಿತೆಯೂ, ವೀರೇಶಲಿಂಗಂ ಅವರುಗಳು ರಚಿಸಿದ "ಆಂಧ್ರ ಕವುಲಚರಿತ್ರಮು" ಎಂಬ ಗ್ರಂಥವೂ ಈ ಎರಡು ಸಾಹಿತ್ಯ ಚರಿತ್ರೆಗಳಿಗೂ ಅಂಕುರಾರ್ಪಣಗಳಾಗಿವೆ. ವಾಙ್ಮಯ ಚರಿತ್ರ ರಚನೆಯಲ್ಲಿ ಎರಡು ಗ್ರಂಥಗಳೂ ಪ್ರಥಮ ಪ್ರಯತ್ನಗಳಾಗಿವೆ. ಅವುಗಳಲ್ಲಿ ಆಯಾ ಕವಿಗಳನ್ನು ಕುರಿತ ಕಾಲ ನಿರ್ಣಯವು ಎಷ್ಟೋ ಸಂದೇಹಾಸ್ಪದವಾಗಿದೆ. ಆ ಗ್ರಂಥಗಳ ಪುನರ್ಮುದ್ರಣಗಳಲ್ಲಿಯೂ ಆ ಸಂದೇಹಗಳು ಹಾಗೆಯೇ ನಿಂತಿವೆ. ಶ್ರೀ. ನರಸಿಂಹಾಚಾರ್ಯರು ಕನ್ನಡ ಶಾಸನಗಳಲ್ಲಿ ಕಾಣಬರುವ ಕವಿಗಳನ್ನೆಲ್ಲಾ ಕನ್ನಡ ಕವಿಗಳೆಂದೇ ಊಹಿಸಿದ್ದಾರೆ. ಅವರಲ್ಲಿ ಕೆಲವರು ಮಾತ್ರ ಕನ್ನಡ ಕವಿಗಳಾಗಿರಬಹುದಾದರೂ ಅನೇಕರು ಸಂಸ್ಕೃತ ಕವಿಗಳೇ ಆಗಿದ್ದಾರೆ. ಅಜ್ಞಾತಯುಗದಲ್ಲಿದ್ದ ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ಶ್ರೀ ವರ್ಧದೇವ ಶ್ಯಾಮಕುಂದಾಚಾರ್ಯ, ಉದಯ, ನಾಗಾರ್ಜುನ, ದುರ್ವಿನೀತ ಪಂಡಿತ ಚಂದ್ರ, ಲೋಕಪಾಲ, ಶಿವಮಾರ, ಮುಂತಾದ ಜೈನಾದಿ ಕವಿಗಳು, ಸಂಸ್ಕೃತ ಪ್ರಾಕೃತಕವಿಗಳೇ ಹೊರತು ಕನ್ನಡ ಕವಿಗಳಲ್ಲವೆಂದು ಹೇಳಬಹುದು. ಕನ್ನಡದಲ್ಲಿ ಪ್ರಥಮ ಗ್ರಂಥವೆಂದು ಹೇಳಲ್ಪಡುವ ಕವಿರಾಜಮಾರ್ಗದ ವಿಷಯದಲ್ಲಿಯೂ ಕಾಲವು ಸರಿಯಾಗಿ ನಿರ್ಣೀತವಾಗಿಲ್ಲ. ಆ ಗ್ರಂಥವನ್ನು ನೃಪತುಂಗನು ಬರೆದನೆಂದು ಹೇಳುತ್ತಾರೆ. ನೃಪತುಂಗನು ರಾಷ್ಟ್ರಕೂಟದ ಅರಸು. ಅವನಿಗೆ ಅತಿಶಯ ಧವಳನೆಂಬ ಬಿರುದು ಉಂಟು. ಕವಿರಾಜಮಾರ್ಗವು "ಅತಿಶಯ ಧವಳೋಕ್ತಕ್ರಮದ" "ಅತಿಶಯಧವಳೋರ್ವೀಶೋದಿತಾಲಂಕೃತಿ" "ಅಗದೆಂದನತಿಶಯಧವಳಂ" "ಅತಿಶಯ ಧವಳಧರಾಧಿಪಮತದಿಂದಂ," ರಚಿಸಲ್ಪಟ್ಟಿದೆ ಎಂದು ಗ್ರಂಥದಲ್ಲಿ ಹೇಳಲ್ಪಟ್ಟಿರುವುದರಿಂದ ಆ ಗ್ರಂಥವು ನೃಪತುಂಗ ರಚಿತವಲ್ಲವೆಂದೂ, ಅವನ ಮತಾನುಸಾರವಾಗಿ ಯಾವನೋ ಈಚೆಯ ಕವಿಯೊಬ್ಬನು ಅದನ್ನು ರಚಿಸಿದನೆಂದೂ ಊಹಿಸಬಹುದಾಗಿದೆ. "ಅತಿಶಯ ಧವಳ" ಎಂಬ ಬಿರುದು ನೃಪತುಂಗನ ತಂದೆಗೂ ಇದೆ. ರಾಷ್ಟ್ರಕೂಟರಾಜರಿಗೆಲ್ಲರಿಗೂ ಆ ಬಿರುದು ಇದೆಯೆಂದು ತಿಳಿಯಬರುತ್ತದೆ. "ನರಲೋಕಚಂದ್ರಮತದಿಂ" "ಕೃತಕೃತ್ಯಮಲ್ಲವಲ್ಲಭಮತದಿಂ," "ಪರಮ ಸರಸ್ವತೀ ತೀರ್ಥಾವತಾರ ನೃಪತುಂಗ ದೇವಮತದಿಂ" ಎಂದೂ ಆ ಗ್ರಂಥದಲ್ಲಿ ಕೆಲವು ಕಡೆಗಳಲ್ಲಿರುವುದರಿಂದ, ಅದನ್ನು ಯಾವನು ರಚಿಸಿದನೋ ಹೇಳುವುದಕ್ಕೆ ಅವಕಾಶವಿಲ್ಲ. ಹೀಗೆಯೇ ಅನೇಕ ಇತರ ಕನ್ನಡ ಕವಿ



ಗಳ ವಿಷಯದಲ್ಲಿಯೂ ಕಾಲನಿರ್ಣಯ ಸಂದರ್ಭದಲ್ಲಿ ಯಾವ ಹೇತುಗಳನ್ನು ಕೊಡದೆ ಊಹಿಸಬಹುದಾಗಿದೆ ಎಂದು ಮಾತ್ರ ಹೇಳಿ ಶ್ರೀ ನರಸಿಂಹಾಚಾರ್ಯರು ತೃಪ್ತಿಯನ್ನು ಹೊಂದಿದ್ದಾರೆ. ಆದರೂ ಅವರು ಆ ಗ್ರಂಥವನ್ನು ರಚಿಸಿದ ಕಾಲಕ್ಕೆ ಕರ್ಣಾಟಕ ಗ್ರಂಥಗಳು ಹೆಚ್ಚಾಗಿ ಮುದ್ರಣವಾಗಿರಲಿಲ್ಲವೆಂದೂ, ವಿವಿಧಪ್ರಾಂತಗಳಲ್ಲಿರುವ ಓಲೆಯ ಪುಸ್ತಕಗಳನ್ನು ಹುಡುಕಿಕೊಂಡು ಅವನ್ನೋದಿ, ಅವುಗಳಿಂದ ಆಯಾ ಚಾರಿತ್ರಕ ವಿಷಯಗಳನ್ನು ಶೋಧಿಸಿ ಸಾಹಿತ್ಯ ಚರಿತ್ರ ಗ್ರಂಥವನ್ನು ಬರೆಯುವುದೆಂದರೇ ಸಾಮಾನ್ಯವಾದ ಕಾರ್ಯವಲ್ಲ. ಅವರು ತಮ್ಮ ಕಾಲದಲ್ಲಿ ಮಾಡಿದ ಕೃಷಿಗಾಗಿ ಅವರಿಗೆ ನಾವೆಲ್ಲರೂ ಕೃತಜ್ಞರಾಗಿರಲೇಬೇಕು. ಅವರು ತೋರಿಸಿದ ಮಾರ್ಗವನ್ನು ಅನುಸರಿಸಿ ಈಚೆಯ ಕನ್ನಡ ವಿದ್ವಾಂಸರು ಹೆಚ್ಚು ಕೃಷಿಯನ್ನು ಮಾಡದಿರುವುದೇ ವಿಷಾದಕರ ವಿಷಯ. ನನ್ನ ಮಿತ್ರರಾದ ಶ್ರೀ. ಶ್ರೀ. ಟಿ. ಎಸ್. ವೆಂಕಣ್ಣಯ್ಯ, ಶ್ರೀ. ಶ್ರೀ. ನರಸಿಂಹಾಚಾರ್ಯ, ಯಶೋವಂತರಾದ ಡಾ॥ ಎ. ವೆಂಕಟಸುಬ್ಬಯ್ಯ, ಮುಂತಾದವರು ಈ ವಿಷಯದಲ್ಲಿ ಪ್ರಯತ್ನಗಳನ್ನು ಸಾಗಿಸುತ್ತಿದ್ದರೂ ಅವರ ಕೃಷಿಗಳನ್ನೆಲ್ಲಾ ಏಕ ಮುಖಕ್ಕೆ ತಂದು ಸಫಲವಾಗುವುದಕ್ಕೆ ತಕ್ಕ ಪ್ರಯತ್ನಗಳಿನ್ನೂ ನಡೆದಿಲ್ಲ. ಆಂಧ್ರಭಾಷೆಯಲ್ಲಿಯೂ ಇನ್ನೂ ಹೀಗೆಯೇ ಇದೆ. ಪೂರ್ವಿಕರು ನಮಗೆ ಕೊಟ್ಟು ಹೋದ ವಿಜ್ಞಾನದಿಂದಲೇ ನಾವು ತೃಪ್ತಿಹೊಂದಿ ಕುಳಿತುಕೊಳ್ಳಬಾರದು. ಅವರು ಹೇಳಿದ್ದನ್ನು ನೂತನ ಸಂಶೋಧನಾನುಸಾರವಾಗಿ ವಿಮರ್ಶಿಸಿ ಯಾವ ವಿಷಯವನ್ನು ಕುರಿತು ಆದರೂ ನಮ್ಮ ವಿಜ್ಞಾನವನ್ನು ವಿಸ್ತರಿಸಬೇಕಾಗಿದೆ.

ನನ್ನ ಉಪನ್ಯಾಸಕ್ಕಿಂತಲೂ ಉಪೋದ್ಘಾತವೇ ದೀರ್ಘವಾದುದಕ್ಕಾಗಿ ನಿಮ್ಮ ಕ್ಷಮೆಯನ್ನು ಬೇಡುತ್ತೇನೆ. ಈ ಹೊತ್ತಿನ ವಿಷಯ ಕನ್ನಡದಲ್ಲಿಯ "ವೀರಶೈವ ವಾಙ್ಮಯಾವತಾರ"ವೆಂದು ಮೊದಲೇ ಹೇಳಿದ್ದೇನೆ. ವೀರಶೈವವೆಂದರೇನು? ಅದು ಅನಾದಿಯಾಗಿದ್ದ ಮತವೋ? ಈಚೆಗೆ ಅಂದರೆ ಬಸವೇಶ್ವರಾದಿಗಳಿಂದ ಏರ್ಪಟ್ಟದ್ದೋ? ಅದರ ಸ್ವರೂಪವೇನು? ಅದಕ್ಕೂ ಇತರ ಶೈವಸಿದ್ಧಾಂತಗಳಿಗೂ ಇರುವ ಸಂಬಂಧವೇನು? ಅವುಗಳಿಗಿರುವ ಭೇದವೇನು? ಮುಂತಾದ ಪ್ರಶ್ನೆಗಳಿಗೆ ಸರಿಯಾದ ಪ್ರತ್ಯುತ್ತರವನ್ನು ತಿಳಿದುಕೊಳ್ಳಬೇಕಾಗಿದೆ. ಶೈವಮತವೇನೋ ಅನಾದಿಯಾಗಿದ್ದ ಮತವೇ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ವೇದಕಾಲಕ್ಕಿಂತಲೂ

ಹಿಂದೆ ಇರುವ ನಾಗರಿಕತೆಯನ್ನು ತೋರಿಸಿ ಇರುತ್ತವೆಂದು ಪರಿಶೋಧಕರು ಹೇಳುತ್ತಿರುವ ಮಹಂಜೋ, ದರೋ, ಹರಪ್ಪಾ ಸ್ಥಲಗಳಲ್ಲಿ ಕಾಣಬರುತ್ತಿರುವ ಸೈಂಧವ ಶಿಥಿಲಗಳಲ್ಲಿ ಶಿವವಿಗ್ರಹಗಳೂ ಲಿಂಗಗಳೂ ದೊರೆತಿವೆ. ಋಗ್ವೇದದಲ್ಲಿಯೂ ಯಜುರ್ವೇದದಲ್ಲಿಯೂ ಶಿವನ ಪ್ರಸ್ತಾವನೆ ಇದೆ. ಅಥರ್ವವೇದದಲ್ಲಿ ರುದ್ರಾದಿ ನಾಮಗಳಿಂದ ಶಿವನು ಹೇಳಲ್ಪಟ್ಟಿದ್ದಾನೆ. ಶಿವಪರವಾದ ಉಪನಿಷತ್ತುಗಳಿವೆ. ಶೈವವು ಅನೇಕ ರೂಪಗಳಿಂದ ಮೊಟ್ಟಮೊದಲಿನಿಂದಲೂ ಭಾರತ ದೇಶದ ಎಲ್ಲಾ ಕಡೆಗಳಲ್ಲೂ ವ್ಯಾಪಿಸಿದೆ ಕಾಶ್ಮೀರದೇಶದ ಆಗಮಿಕ ಶೈವಸಿದ್ಧಾಂತವೂ ತಮಿಳದೇಶದ ಶೈವಸಿದ್ಧಾನ್ತವೂ ಪ್ರಖ್ಯಾತವಾಗಿವೆ.

ಶೈವಮತವು ಶೈವ, ಪಾಶುಪತ, ಸೋಮ, ಲಾಕುಲ, ಎಂಬ ನಾಲ್ಕು ವಿಧವಾಗಿದೆಯೆಂದು ಕೆಲವರು ಹೇಳುತ್ತಾರೆ. ಅವುಗಳಲ್ಲಿ ಶೈವವು, ವಾಮಶೈವ, ದಕ್ಷಿಣ ಶೈವ, ಮಿಶ್ರಶೈವ, ಸಿದ್ಧಾಂತಶೈವ ಎಂಬ ನಾಲ್ಕು ಭೇದಗಳಾಗಿವೆ. ಅಂತೆಯೇ ವಾಮಶೈವದಲ್ಲಿ ಶಕ್ತಿಗೆ ಪ್ರಾಧಾನ್ಯವುಂಟು. ದಕ್ಷಿಣರೂಪವಾದ ಶೈವದಲ್ಲಿ ಭೈರವನು ಪ್ರಧಾನನು. ಸಪ್ತಮಾತೃಕೆಗಳು ಮಿಶ್ರಶೈವದಲ್ಲಿ ಪ್ರಧಾನವಾಗಿವೆ. ಇವು ವೇದಸಮ್ಮತವಾದ ಮತಗಳಲ್ಲವೆಂದೂ ಸಿದ್ಧಾಂತಶೈವವೇ ವೇದಸಮ್ಮತವೆಂದೂ, ಈ ಸಿದ್ಧಾಂತಶೈವವೇ ವೀರಶೈವವೆಂದೂ ವೀರಶೈವಮತಕ್ಕೆ ಪ್ರಮಾಣವೆಂದೂ, ಹೇಳಲ್ಪಡುವ ಶೈವಸಿದ್ಧಾಂತ ಶಿಖಾಮಣಿ ಎಂಬ ಗ್ರಂಥದಲ್ಲಿ ಬರೆಯಲ್ಪಟ್ಟಿದೆ. ಈ ಗ್ರಂಥವು ಉಜ್ಜೆಯದು. ಇದು ರೇಣುಕಾಗಸ್ತ್ಯ ಸಂವಾದರೂಪದಲ್ಲಿದೆ. ಇದನ್ನು ವೀರಣಾರಾಧ್ಯನ ಪೌತ್ರನೂ, ಸಿದ್ಧಯ್ಯನ ಪುತ್ರನೂ, ಆದ ರೇವಣನೆಂಬವನು ರೇಣುಕಕೃತ ಗ್ರಂಥಕ್ಕೆ ಟೀಕಾರೂಪವಾಗಿ ರಚಿಸಿದ್ದಾನೆ. ಈ ಗ್ರಂಥದಲ್ಲಿ ವೀರಶೈವ ಸಿದ್ಧಾಂತಕ್ಕೆ ಮುಖ್ಯ ಲಕ್ಷಣವಾದ ಷಟ್‌ಸ್ಥಲವಿಚಾರವು ವಿವರಿಸಲ್ಪಟ್ಟಿದೆ. ಈ ಷಟ್‌ಸ್ಥಲವಿಚಾರಕ್ಕೂ ಬಸವೇಶ್ವರನಿಗೆ ಹಿಂದಿರುವ ಗ್ರಂಥಗಳಲ್ಲಿ ಸೂಚಿಸಲ್ಪಟ್ಟ ಷಟ್‌ಸ್ಥಲವಿಷಯಕ್ಕೂ ಬಹಳ ಭೇದವಿದೆ.

ಶ್ರೀಪತಿ ಪಂಡಿತ ರಚಿತವೆಂದು ಶ್ರೀ ಹಯವದನರಾಯರು ಪ್ರಕಟಿಸಿದ ಶ್ರೀಕರ ಭಾಷ್ಯವು ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆಂದು ಅವರು ಹೇಳಿದ್ದಾರೆ. ಇತರರ ಅಭಿಪ್ರಾಯವೂ ಹೀಗೆಯೇ ಇದೆ. ಶ್ರೀಪತಿಪಂಡಿತನು ಹದಿನಾಲ್ಕನೆಯ ಶತಾಬ್ದದ ಅಂತ್ಯಭಾಗದಲ್ಲಿದ್ದವನೆಂದು ರಾಯರು ಹೇಳಿದ್ದಾರೆ. ಈ ನಿರ್ಣಯಕ್ಕೆ ಅವರು ತೋರಿಸಿದ ಆಧಾರಗಳು ಸರಿಯಾಗಿಲ್ಲ. ಪಾಲ್ಕುರಿಕೆ ಸೋಮನಾಥನು ಶ್ರೀಪತಿ ಪಂಡಿತನು ಬಸವೇಶ್ವರನಿಗಿಂತಲೂ ಹಿಂದಿನವನೆಂದು ಹೇಳಿದ್ದಾನೆ. ಶ್ರೀಪತಿ ಪಂಡಿತನು ರಚಿಸಿದ ಶ್ರೀಕರ ಭಾಷ್ಯವು ವಿಶಿಷ್ಟಾದ್ವೈತ, ಅಲ್ಲದೆ ಭೇದಾಭೇದಸಿದ್ಧಾಂತವನ್ನು ಪ್ರತಿಪಾದಿಸುತ್ತಿದೆ. ಸ್ವಲ್ಪಮಟ್ಟಿಗೆ ಇದು ವೀರಶೈವ ಸಿದ್ಧಾಂತವನ್ನೇ ಹೋಲುತ್ತಿದ್ದರೂ ಬಸವನ ನಂತರ ವಿಸ್ತರಿಸಿದ ವೀರಶೈವಸಿದ್ಧಾಂತದಿಂದ ಭೇದಿಸುತ್ತಿದೆ. ಇದರಲ್ಲಿ ಷಟ್‌ಸ್ಥಲಸಿದ್ಧಾಂತವು ವಿಸ್ತಾರವಾಗಿ ಕಾಣುವುದಿಲ್ಲ. ಷಟ್‌ಸ್ಥಲವೆಂಬ ಪದವು ಆ ಗ್ರಂಥದಲ್ಲಿ ಎರಡು ಕಡೆ ಇದ್ದರೂ ಅದರ ಅರ್ಥವು ಬೇರೆಯಾಗಿದೆ. ಶ್ರೀಪತಿ ಹೇಳಿದ ಪ್ರಕಾರ ಸೃಷ್ಟಿ, ಸ್ಥಿತಿ, ಲಯ, ವಾಚಿಕ, ಕಾಯಿಕ, ಮಾನಸಿಕ, ಎಂಬುವವು ಷಟ್‌ಸ್ಥಲಗಳು. ಅರ್ವಾಚೀನ ವೀರಶೈವಮತದಲ್ಲಿ ಭಕ್ತಸ್ಥಲ, ಮಹೇಶ್ವರಸ್ಥಲ, ಪ್ರಸಾದಸ್ಥಲ, ಪ್ರಾಣಲಿಂಗಸ್ಥಲ, ಶರಣಸ್ಥಲ, ಐಕ್ಯಸ್ಥಲ, ಎಂಬ ಷಟ್‌ಸ್ಥಲಗಳು ಹೇಳಲ್ಪಟ್ಟಿವೆ. ಶ್ರೀಕರ ಭಾಷ್ಯದಲ್ಲಿರುವ ಷಟ್‌ಸ್ಥಲಗಳಿಗೂ ಇವುಗಳಿಗೂ ಸಂಬಂಧವೇನೂ ಇಲ್ಲವೆಂದು ಸುಲಭವಾಗಿಯೇ ತಿಳಿದುಕೊಳ್ಳಬಹುದು. ಆದರೂ ಅರ್ವಾಚೀನ ವೀರಶೈವರು ಸಿದ್ಧಾಂತಭಾಗದಲ್ಲಿ ಶ್ರೀಪತಿ ಹೇಳಿರುವುದನ್ನು ಸ್ವೀಕರಿಸಿ, ಶಿವತ್ವಪ್ರಾಪ್ತಿಗಾಗಿ ಬೇಕಾದ ಸಾಧನ ವಿಧಾನವನ್ನು ವಿಸ್ತರಿಸಿದ್ದಾರೆಂದು ತೋರುತ್ತದೆ. ಈ ಸಾಧನವಿಧಾನದಲ್ಲಿ ಹೇಳಿರುವ ಸ್ಥಲವೇ ಅಲ್ಲದೇ, ಬೇರೆ ವಿಧವಾದ ಸ್ಥಲವು ಕೂಡ ವೀರಶೈವದಲ್ಲಿ ಹೇಳಲ್ಪಟ್ಟಿದೆ. ಸಚ್ಚಿದಾನಂದಾತ್ಮ ಲಕ್ಷಣ ನಿರೂಪಿತ ಬ್ರಹ್ಮವೇ ಸ್ಥಲ. ಈ ಸ್ಥಲದಲ್ಲಿಯೇ ಮಹತ್ತು ಮುಂತಾದ ಇಪ್ಪತ್ತಯಿದು ತತ್ತ್ವಗಳೂ ಹುಟ್ಟಿ ಅದರಲ್ಲಿಯೇ ಅಡಗುತ್ತವೆ. ಚರಾಚರ ಜಗತ್ತಿಗೆ ಅದುವೇ ಆಧಾರ; ಅದರಿಂದಲೇ ಅದಕ್ಕೆ ಸ್ಥಲವೆಂದು ಹೆಸರು ಬಂತು. ಶಿವನ ತತ್ವವು ಅದೇಯಾದುದರಿಂದ ಅದಕ್ಕೆ ಶಕ್ತಿ ಅದೆ. ಈ ಶಕ್ತಿಯು ಲಿಂಗಸ್ಥಲವೆಂದೂ, ಅಂಗಸ್ಥಲವೆಂದೂ, ಎರಡು ವಿಧವಾಗಿದೆ. ಲಿಂಗಸ್ಥಲವಾದ ಶಿವನು ಪೂಜ್ಯನು; ಅಂಗಸ್ಥಲವಾದ ಜೀವನು ಪೂಜಕನು. ಅದೇ ರೀತಿಯಿಂದ ಶಕ್ತಿಯು ತಿರುಗಿ ಕಲೆಯೆಂದೂ, ಭಕ್ತಿಯೆಂದೂ ಎರಡು ಭಾಗಗಳಾಗುತ್ತದೆ. ಶಿವನು ಕಲಾತ್ಮಕನು; ಜೀವನು ಭಕ್ತಿಯುಳ್ಳವನು. ಶಕ್ತಿಯು ಕರ್ಮಾಚರಣಕ್ಕೆ ಪ್ರೇರಿಸುತ್ತದೆ.

ಭಕ್ತಿಯು ಮುಕ್ತಿಗೆ ಸಹಾಯವಾಗುತ್ತದೆ. ಶಕ್ತಿಯು ಪರಬ್ರಹ್ಮಾತ್ಮಕವಾಗಿರುವುದರಿಂದ ಆರಾಧ್ಯವಾಗುತ್ತದೆ. ಭಕ್ತಿಯಿಂದ ಜೀವನು ಪೂಜಕನಾಗುತ್ತಾನೆ. ಲಿಂಗ ಎಂಬುವುದು ಶಿವನೇ ಹೊರತು ಅವನ ಗುರುತಲ್ಲ. ಲಿಂಗದಲ್ಲಿ ಶಕ್ತಿ ಇರುತ್ತದೆ; ಅಂಗದಲ್ಲಿ ಎಂದರೆ ಜೀವನಲ್ಲಿ ಭಕ್ತಿ ಇರುತ್ತದೆ. ಭಕ್ತಿಯು ಸಂಸಾರದಿಂದ ಜೀವನನ್ನು ಹಿಂದುರುಗಿಸಿ, ಅಂಗಕ್ಕೆ ಎಂದರೆ ಜೀವನಿಗೆ ಶಿವಸಾಮರಸ್ಯವನ್ನು ಹೊಂದಿಸುತ್ತದೆ. ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗ, ಎಂದು ಲಿಂಗಸ್ಥಲವು ಮೂರು ವಿಧವಾಗಿದೆ. ಈ ಮೂರೂ ಸತ್, ಚಿತ್, ಆನಂದಗಳಿಗೆ ಪ್ರತಿನಿಧಿಗಳು. ಇವು ಪ್ರಯೋಗ, ಮಂತ್ರ ಕ್ರಿಯಾತ್ಮಕಗಳಾಗಿ, ಕಲಾ, ನಾದ, ಬಿಂದುಗಳಾಗುತ್ತವೆ. ಈ ಮೂರು ಲಿಂಗಗಳಲ್ಲಿ ಒಂದೊಂದು ಮತ್ತೆ ಎರಡು ವಿಧಗಳಾಗುತ್ತದೆ. ಭಾವಲಿಂಗವು ಮಹಾಲಿಂಗ ಪ್ರಸಾದ ಲಿಂಗಗಳಾಗಿಯೂ ಪ್ರಾಣಲಿಂಗವು ಚರಲಿಂಗ ಶಿವಲಿಂಗಗಳಾಗಿಯೂ, ಇಷ್ಟಲಿಂಗವು ಗುರುಲಿಂಗ ಆಚಾರಲಿಂಗಗಳಾಗಿಯೂ ಏರ್ಪಡುತ್ತವೆ. ಜೀವನನ್ನು ಶಿವಸಾಮರಸ್ಯಕ್ಕೆ ತೆಗೆದುಕೊಂಡು ಹೋಗುವ ಮಾರ್ಗದಲ್ಲಿ ಮೂರು ಸ್ಥಾನಗಳಿವೆ. ಇವಕ್ಕೆ ಯೋಗಾಂಗ, ಭೋಗಾಂಗ ತ್ಯಾಗಾಂಗಗಳೆಂದು ಹೆಸರುಗಳು. ಐಕ್ಯ, ಶರಣಸ್ಥಲಗಳು ಯೋಗಾಂಗದಲ್ಲಿ ಅಂತರ್ಭಾಗಗಳು; ಪ್ರಾಣ ಪ್ರಸಾದ ಸ್ಥಲಗಳೆರಡೂ ಭೋಗಾಂಗದ ವಿಭಾಗಗಳು; ಹಾಗೆಯೇ ತ್ಯಾಗಾಂಗದಲ್ಲಿ ಮಹೇಶ್ವರ, ಭಕ್ತಿಸ್ಥಲಗಳಿವೆ.

(ಮುಂದೆ ಸಾಗುವದು)

---



೩೪. ಗುರುವೆಂಬನಂಗವ ಧರಿಸಿದಡೇನು? ಕೈದೀಪಕ್ಕೆ ಮೊತ್ತದ ತಮ ಹರಿದುದುಂಟೇ? ನಿಃಕಳಲಿಂಗವ ಧರಿಸಿದಲ್ಲಿ ಫಲವೇನು? ವೃತ್ತಿಕೆಯ ಬೊಂಬೆಯ ಕೈಯಲ್ಲಿ ನಿಕ್ಷಯದ ಖಂಡೆಯವಿರೆ, ಕುಟ್ಟಬಲ್ಲುದೇ? ವಿಧಾತೃವಿನ ರೂಪು ಲಾಂಛನವ ತೊಟ್ಟು ಬಹು ರೂಪಿಯಾದಲ್ಲಿ ನೆರೆ ಈಶನ ಮುಕ್ತಿಯ ವಿರಕ್ತ ಜಂಗಮನಾಗಬಲ್ಲನೇ? ಇಂತೀ ಮಾತಿನ ಬಳಕೆಯ ವೇಷವ ಬಿಟ್ಟು ನಿಜ ತತ್ವದ ಸಾಕಾರವೆಯಾದಡೆ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗವು ತಾನೆ.

---

## ಐಕ್ಯಸ್ಥಲ.

೩೫. ಜ್ಞಾನಾದ್ವೈತದ ಹೆಚ್ಚುಗೆ ಭಾವಾದ್ವೈತಕ್ಕೆ ಸಂಬಂಧವಾಗಿಹುದು. ಭಾವಾದ್ವೈತದ ಹೆಚ್ಚುಗೆ ಕ್ರಿಯಾದ್ವೈತವ ಸಂಬಂಧಿಸಿಕೊಂಡಿಹುದು. ಕ್ರಿಯಾದ್ವೈತದ ಹೆಚ್ಚುಗೆ ಸರ್ವಮಯವಾಗಿ ಘನಲಿಂಗವ ಗರ್ಭೀಕರಿಸಿಕೊಂಡಿಪ್ಪುದು. ಇಂತೀ ಭೇದ. ಕ್ರಿಯಾಜ್ಞಾನಕ್ಕೊಳಗಾಗಿ ಮಥನದಿಂದ ವಹ್ನಿ ಕುರುಹಿಂಗೆ ಬಂದಂತೆ ಕ್ರಿಯಿಂದ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವಾದ.

೩೬. ಕ್ರಿಯೆ ಮರೆದಲ್ಲಿ ಅರಿವು ಹೀನವಾಗಿಪ್ಪುದು. ಅರಿವ ಮರೆದಲ್ಲಿ ಜ್ಞಾನ ಹೀನವಾಗಿಪ್ಪುದು. ಜ್ಞಾನವ ಮರೆದಲ್ಲಿ ಬೆಳಗಿನ ಕಳೆ ನಷ್ಟವಾಯಿತ್ತು. ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗವು ಅವರಿಗೆ ಮರೆಯಾಗಿ ತೊಲಗಿದ.

೩೭. ಸುಖದುಃಖಾದಿಗಳ ಮೀರುವರ ಎನ್ನವರ ಕಾಣೆ. ಸುಖದುಃಖಾದಿಗಳ ಮೀರುವ ನಿನ್ನವರ ಕಾಣೆ. ಇನ್ನೇನ ಹೇಳುವೆ? ನಡುಹೊಳೆಯಲ್ಲಿ ಹರಿಗೋಲ ಹರಿದಂತೆ ಅಂಬಿಗನ ಕೊರಳ ಸುತ್ತಿ ಬಂದವರೆಲ್ಲರು ಉಭಯವು ಹೊಂದಿದಂತಾಯಿತ್ತು. ನೀ ಎನ್ನ ಬಟ್ಟೆ ನಾ ನಿನ್ನ ಬಟ್ಟೆ ಉಭಯವು ಒಂದೇ ಬಟ್ಟೆಯಾದೆಯಲ್ಲಾ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ.

೩೮. ಪರಶಿವ ಮೂರ್ತಿಯು ರೂಪ ತಾಳಿ ಎನ್ನ ಶಿವಭಕ್ತರ ಕುಲಬಳಗಂಗಳ ಪವಿತ್ರವ ಮಾಡಿಹೆನೆಂದು ನೀ ಬಂದು ಅಪವಿತ್ರವ ಮುಟ್ಟಲೇತಕ್ಕೆ? ನಿನ್ನ ಕೃಪೆ ಎನಗೆ, ಎನ್ನ ಹೃತ್ಕಮಲಮಧ್ಯ ನಿನಗೆ. ಎನಗೂ ನಿನಗೂ ತ್ರಿವಿಧದ ಹಂಗಿಲ್ಲ. ನಾ ನೀನಲ್ಲದೆ ಬೇರೊಂದ ನೆಣಸಿವಡೆ ನೀ ನಾನಲ್ಲದೆ ಬೇರೊಂದು ಮುಟ್ಟಿವಡೆ ನಿನ್ನ ಸತ್ಯಕ್ಕೆ ಎನ್ನ ಭಕ್ತಿಗೆ ಉಭಯಕ್ಕೂ ನೀನೆ ಮುಂಡಿಗೆ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವೇ.

೩೯. ಹೀರಕವನೊಪ್ಪಿಸಿದಂಗೆ ಸುಂಕವ ಬೇಡಲೇತಕ್ಕೆ? ಮೊದಲು ತ್ರಿವಿಧವ ನಿನಗೆಂದು ಕೊಟ್ಟೆ ಮತ್ತೆ ನೀ ಬೇಡಿದ ಮೇಲೆಡೆ ನೀನೆನಗಿತ್ತ ಮೇಲೆ ಎನ್ನ ನೋಡುವ ಬಿಡು ಮುಡಿಯಾವುದು ನಿನಗೆ? ಶಿವಲೆಂಕ ಹಾಕಿದ ಮುಂಡಿಗೆಯು ನೀನೆತ್ತಲಮ್ಮದೆ ಎನ್ನ ಕೈಯ್ಯೊಳಗಾದೆಯಲ್ಲಾ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ.

೪೦. ಜಲದೊಳಗಣ ಮತ್ಸ್ಯ ಮನದೊಳಗಣ ಮರ್ಕಟ ಆಕಾಶದ ಪಕ್ಷಿ ಇವು ಕೂಡಿ ಮಾತಾಡುವಲ್ಲಿ ಶಬರ ಮತ್ಸ್ಯನ ನೋಡಿ ಜೋಗಿ ವನಚರನ ಕಂಡು ಅಂಟಿದ ಡೊಂಬಹಕ್ಕಿಯ ಕಂಡು ಇಂತೀ ಮೂವರ ಹದವ ಕೆಡಿಸಿತ್ತು. ಕಾರಮಳೆ ಸೊನೆ ಎದ್ದು ಸುರಿಯಿತ್ತು. ಇಂತು ಇನ್ನಾರ ಕೇಳುವೆ? ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವೇ ನೀನೆ ಬಲ್ಲೆ.

ಟೀಕೆಃ — ಜಲವೆಂದೊಡೆ ಸಂಸಾರವಿಷಯ ಜಲಪ್ರವಾಹ. ಅಂತಪ್ಪ ಸಂಸಾರ ವಿಷಯ ಜಲದಲ್ಲಿ ಚರಿಸುತ್ತಿಹನು ಜೀವನೆಂಬುದೀಗ ಜಲದೊಳಗಣ ಮತ್ಸ್ಯವೆಂಬ ಶಬ್ದಕ್ಕರ್ಥ. ಷಡಾಧಾರ ಚಕ್ರದ ಐವತ್ತೊಂದು ದಳಂಗಳಲ್ಲಿ ಸಂಕಲ್ಪ ವಿಕಲ್ಪ ಭಾವದಿಂ ಚರಿಸುತ್ತಿಹುದು ಮನಸ್ಸೆಂಬುದೀಗ ಮನದೊಳಗಣ ಮರ್ಕಟನೆಂಬ ಶಬ್ದಕ್ಕರ್ಥ. ಆತ್ಮಾಕಾಶಮಧ್ಯದಲ್ಲಿ ಸ್ವಲೀಲಾಪರನಾಗಿ ಚರಿಸುತ್ತಿಹುದು ಪರಮಾತ್ಮನೆಂಬುದೀಗ ಆಕಾಶದ ಪಕ್ಷಿ ಎಂಬ ಶಬ್ದಕ್ಕರ್ಥ. ಅಂತಪ್ಪ ಜೀವಾತ್ಮನು ಮನಸ್ಸು ಪರಮಾತ್ಮನು ತಮ್ಮ ತಮ್ಮ ಪ್ರಪಂಚಿನ ವರ್ತನೆಯು ಶಬ್ದ ಜಾಲದೊಳಗೆ ಸಿಲ್ಕಿ ಸಂವಡೆಗೊಳ್ಳುತ್ತಿಹವೆಂಬುದೀಗ ಇವು ಕೂಡಿ ಮಾತಾಡುವಲ್ಲಿ ಎಂಬ ಶಬ್ದಕ್ಕರ್ಥ. ಭಿನ್ನವಿಟ್ಟು ಚರಿಸುತ್ತಿಹ ದ್ವೈತಿಗಳು ಜೀವನ ವರ್ತನೆಯ ಕ್ರಿಯೆಯಿಂದೆ ನಿಲಿಸಬೇಕೆನುತ್ತಿಹರೆಂಬುದೀಗ ಶಬರ ಮತ್ಸ್ಯನ



ನೋಡಿ ಎಂಬ ಶಬ್ದಕ್ಕರ್ಥ. ಲಕ್ಷ್ಯಯೋಗಿಗಳು ಅಂತರ್ಲಕ್ಷ್ಯ ಸಂಧಾನದಿಂದ ಮನೋವರ್ತನೆಯ ಬೇಕೆನ್ನುತ್ತಿಹರೆಂಬುದೀಗ ಜೋಗಿ ವನಚರನ ಕಂಡು ಎಂಬ ಶಬ್ದಕ್ಕರ್ಥ. ಆತ್ಮಜ್ಞಾನದಿಂ ಅದ್ವೈತಿಗಳು ಪರಮಾತ್ಮ ತತ್ವವ ಗ್ರಹಿಸಬೇಕೆನ್ನುತ್ತಿಹರೆಂಬುದೀಗ ಅಂಟದ ಡೊಂಬ ಹಕ್ಕಿಯ ಕಂಡು ಎಂಬ ಶಬ್ದಕ್ಕರ್ಥ. ಅಭ್ರಚ್ಛಾಯೆ ಮಾತ್ರವಾದ ಮಾಯಾಡಂಬರವೆಂಬ ಮೇಘದಲ್ಲಿ ಸಂಸಾರ ವಿಷಯ ರಸವೆಂಬ ವೃಷ್ಟಿ ಸರ್ವಾಂಗದಲ್ಲಿ ಕರೆಯಲು ದ್ವೈತಾದ್ವೈತ ಯೋಗ ಮಾರ್ಗಗಳ ಬಯಕೆ ನಷ್ಟವಾಯಿತ್ತೆಂಬುದೀಗ ಇಂತೀ ಮೂವರ ಹದವ ಕೆಡಿಸಿತ್ತು. ಕಾರಮಳೆ ಸೊನೆ ಎದ್ದು ಸುರಿಯಿತ್ತು ಎಂಬ ಶಬ್ದಕ್ಕರ್ಥ. ತ್ರಿಭಾಂಡಿಗಳು ಶಿವತತ್ವಕ್ಕೆ ಭಿನ್ನವಾಗಿ ಹೋದ ಭೇದವ ಶರಣ ಕಂಡು ಆಶ್ಚರ್ಯಬಡುತ್ತಿರ್ದನೆಂಬುದೀಗ ಇಂತೀ ಇನ್ನಾರ ಕೇಳುವೆ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವೇ ನೀನೆ ಬಲ್ಲೆ ಎಂಬ ಶಬ್ದಕ್ಕರ್ಥ.

---

## ಅಷ್ಟಾವರಣಗಳು.

### ಗುರು

೪೧. ಅಂಗಕ್ಕೆ ಲಿಂಗವಕೊಟ್ಟವ ಆಚಾರ್ಯನಾದ. ಮನಕ್ಕೆ ಅರುಹ ತೋರಿದಾತ ಮೋಕ್ಷಾಚಾರ್ಯನಾದ. ಮೋಕ್ಷ ನಿರ್ಮೋಕ್ಷವಾಗಿ, ಉಭಯದ ಗೊತ್ತ ತೋರಿ, ಕಾಯದ ಕರ್ಮವ ಕೆಡಿಸಿ, ಜೀವನ ಭವವ ಛೇದಿಸಿ, ತದ್ರೂಪವ ತೋರಿದಾತ ಜ್ಞಾನಗುರು. ಆತ ಪರಮಪ್ರಕಾಶ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವು.

೪೨. ಬಹು ರೂಪಕ್ಕೆ ಭಾಷಾಂಗವಿಲ್ಲದೆ ಮೆಚ್ಚದು ಜನ. ಗುರು ಚರ ರೂಪ ತಾಳಿದಲ್ಲಿ ಗುರುವಿಂಗೆ ಗಂಭೀರತೆ ಚರಕ್ಕೆ ನಿಸ್ಪೃಹತ್ವ, ಇಂತೀ ಉಭಯಮೂರ್ತಿಯಾಪೇಕ್ಷೆ ವಿರಹಿತವಾಗಿ ನಿಂದುದು ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವು ತಾನೆ.

---

## ಗುರುಲಿಂಗ.

೪೩. ಇಚ್ಛಾಶಕ್ತಿ ಮರ್ಕಟರೂಪಾದಲ್ಲಿ, ಕ್ರಿಯಾಶಕ್ತಿ ವಿಹಂಗ ರೂಪಾದಲ್ಲಿ. ಜ್ಞಾನಶಕ್ತಿ ಪಿಪೀಲಿಕ ರೂಪಾದಲ್ಲಿ ತ್ರಿವಿಧಮಾರ್ಗ ರೂಪಾಯಿತ್ತು. ಕಾಂಬುದು ಕಾಣಿಸಿಕೊಂಬುದು ಕಂಡಿಹೆನೆಂದು ನಿಶ್ಚಯವಾದಲ್ಲಿ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಮಹದಾಕಾಶದಲ್ಲಿ ವಾಸವಾಗಿರ್ದ.

ಟೀಕು:— ಸುಜ್ಞಾನೋದಯವಾಗಿ ತನ್ನ ನಿಜವನರಿದು ಶಿವಾಪೇಕ್ಷೆಯ ಮುಂದುಗೊಂಡಿರ್ದ ಶಿಷ್ಯಂಗೆ ಶ್ರೀಗುರು ಕರುಣಿಸಿ ಷಡ್ವಿಧಾಂಗದಲ್ಲಿ ಷಡ್ವಿಧ ಲಿಂಗಸಂಬಂಧವ ಮಾಡಿ ಷಡ್ವಿಧ ಭಕ್ತಿವಿಡಿದಾಚರಿಸುವ ಷಟ್‌ಸ್ಥಲ ಮಾರ್ಗವ ತೋರಿದನೆಂಬುದೀಗ ಇಚ್ಛಾಶಕ್ತಿ ಮರ್ಕಟ ರೂಪಾದಲ್ಲಿ ಎಂಬ ಶಬ್ದಕ್ಕರ್ಥ. ಅಂತಪ್ಪ ಶರಣನು ಅಭಿನ್ನಕ್ರಿಯಾಚಾರವಿಡಿದು ಚಿತ್ಪಿಂಡ ಜ್ಞಾನ ಸಂಬಂಧವಾಗಿ ತನುಮನ ಪ್ರಾಣೇಂದ್ರಿಯ ಒಳಹೊರಗೆ ಸರ್ವಾಂಗವು ಲಿಂಗದಲ್ಲಿ ನಿರ್ವಯಲ ಸಮಾಧಿಯನೆಯ್ದಿ ಒಡೆದು ಚಿತ್ಪಿಂಡದಾಚರಣೆಯೆಂಬುದೀಗ ಕ್ರಿಯಾಶಕ್ತಿ ವಿಹಂಗ ರೂಪಾದಲ್ಲಿ ಎಂಬ ಶಬ್ದಕ್ಕರ್ಥ. ಆ ಚಿದ್ರೂಪನಾದ ಶರಣ ಪಿಂಡಾದಿ ಜ್ಞಾನಶೂನ್ಯಾಂತವಾದ ಸ್ಥಲಕುಳಾದಿಗಳಲ್ಲಿ ಏಕವಾಗಿಹುದೇ ಪಿಪೀಲಿಕ ಜ್ಞಾನ ಸಂಬಂಧವಾದ ಕಾರಣ ಜ್ಞಾನಶಕ್ತಿ ಪಿಪೀಲಿಕ ರೂಪವಾದಲ್ಲಿ ಎಂಬ ಶಬ್ದಕ್ಕರ್ಥ. ಇಂತಪ್ಪ ಲಿಂಗಪ್ರಾಣತ್ವ ಪ್ರಾಣಲಿಂಗತ್ವ ಪ್ರಸಾದ ಮುಕ್ತತ್ವವೆಂಬ ತ್ರಿವಿಧಾಚರಣೆಯಲ್ಲಿ ನಿರ್ಧರವಾಗಿ ಎಂಬುದೀಗ ತ್ರಿವಿಧ ಮಾರ್ಗ ರೂಪಾಯಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಶರಣ ತನ್ನ ನಿಜ ಸ್ವರೂಪವ ಸುಜ್ಞಾನ ದೃಷ್ಟಿ ನೋಡುತ್ತಿರ್ದನೆಂಬುದೀಗ ಕಾಂಬುದು ಎಂಬ ಶಬ್ದಕ್ಕರ್ಥ. ಆ ಶರಣನ ಸುಜ್ಞಾನ ದೃಷ್ಟಿಯ ಮುಂದೆ ಪರಬ್ರಹ್ಮವು ತೋರುತ್ತಿಹುದೆಂಬುದೀಗ ಕಾಣಿಸಿಕೊಂಬುದು ಎಂಬ ಶಬ್ದಕ್ಕರ್ಥ. ತನ್ನ ನಿಜಸ್ವರೂಪವ ಶಿವಾನುಭಾವಿಯಾದ ಶರಣನು ಕಂಡು ನಿಶ್ಚಯದಿಂ ನಿರ್ಧರವಾದಲ್ಲಿ ಎಂಬುದೀಗ ತ್ರಿವಿಧ ಮಾರ್ಗ ರೂಪಾಯಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಶರಣ ತನ್ನ ನಿಜ ಸ್ವರೂಪವ ಸುಜ್ಞಾನ ದೃಷ್ಟಿಯಿಂ ನೋಡುತ್ತಿರ್ದನೆಂಬುದೀಗ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಮಹದಾಕಾಶದಲ್ಲಿ ವಾಸವಾಗಿರ್ದನೆಂಬ ಶಬ್ದಕ್ಕರ್ಥ.

---



## ಗುರುಜಂಗಮ.

೪೪. ಗುರು ಪ್ರಸಾದವ ಲಿಂಗಕ್ಕೆ ಕೊಡಲಿಲ್ಲ. ಜಂಗಮ ಪ್ರಸಾದವ ಲಿಂಗಕ್ಕೆ ಕೊಡಲಿಲ್ಲ. ಅದು ಏಕೆಂದರೆ ಆ ಗುರುವಿಗೂ ಲಿಂಗಪ್ರಾಣ ಜಂಗಮಕ್ಕೂ ಲಿಂಗಪ್ರಾಣ. ಆ ಲಿಂಗ ವಿರಹಿತವಾಗಿ ಗುರುವಾಗಬಲ್ಲಡೆ ಆ ಲಿಂಗ ಬಾಹ್ಯವಾಗಿ ಜಂಗಮವಾಗಬಲ್ಲಡೆ ಉಭಯ ಪ್ರಸಾದವ ಲಿಂಗಕ್ಕೆ ಕೊಡಬಹುದು. ಇದನರಿಯದೆ ಉದ್ದೇಶಿಸಿ ನುಡಿವ ಭೇದ ಹೀನರಿಗೆ ತ್ರಿವಿಧವಿಲ್ಲ ಎಂದೆ. ಅವರು ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ದೂರ.

ಟೀಕಾ॥ ಸುಜ್ಞಾನೋದಯವಾಗಿ ಸರ್ವಾಂಗಲಿಂಗ ಸಂಬಂಧವ ತಿಳಿದು ರೂಪು ರುಚಿ ತೃಪ್ತಿ ಮೊದಲಾದ ಸಕಲ ಪದಾರ್ಥವ ಲಿಂಗಾರ್ಪಿತವ ಮಾಡಿ ಆ ಪ್ರಸನ್ನ ಪ್ರಸಾದವನು ಸ್ವೀಕರಿಸಲರಿಯದೆ ಜೀವ ಭಾವದಿಂ ಸ್ವೀಕರಿಸಿ ಅಜ್ಞಾನಿಯಾದ ಭಿನ್ನ ಗುರು. ಆ ಗುರುವಿನ ಪ್ರಸಾದವನು ಆಣವಾದಿ ಮಲತ್ರಯ ರಹಿತವಾದ ನಿರ್ಮಲಲಿಂಗಕ್ಕೆ ಕೊಡಲಿಲ್ಲವೆಂಬುದೀಗ ಗುರುಪ್ರಸಾದವ ಲಿಂಗಕ್ಕೆ ಕೊಡಲಿಲ್ಲವೆಂಬ ಶಬ್ದಕ್ಕರ್ಥ. ಆ ಜಂಗಮ ತನ್ನ ನಿಜ ಸ್ವರೂಪವ ತಿಳಿದು ತನು ಮನ ಪ್ರಾಣೇಂದ್ರಿಯಂಗಳಲ್ಲಿ ಲಿಂಗ ಸಂಬಂಧವಾಗಿ ಸಕಲ ಪದಾರ್ಥವ ಲಿಂಗಾರ್ಪಿತವ ಮಾಡಿ ಆ ಪ್ರಸಾದವ ಸ್ವೀಕರಿಸುವರೆ ಸುಜ್ಞಾನ ಜಂಗಮಸ್ಥಲ. ಇದನರಿಯದೆ ನಾನೇ ಸಾಕ್ಷಾತ್ ಬ್ರಹ್ಮವೆಂದು ಲಿಂಗಕ್ಕೆ ಕೊಡದೆ ಜೀವಭಾವದಿಂ ಸ್ವೀಕರಿಸುವಾತ ಜಂಗಮವಲ್ಲ. ಅಂತಪ್ಪ ಜಂಗಮದ ಪ್ರಸಾದವ ನಿರ್ಮಲ ಲಿಂಗಕ್ಕೆ ಅರ್ಪಿಸಲಿಲ್ಲವೆಂಬುದೀಗ ಜಂಗಮ ಪ್ರಸಾದವ ಲಿಂಗಕ್ಕೆ ಕೊಡಲಿಲ್ಲವೆಂಬ ಶಬ್ದಕ್ಕರ್ಥ. ಅದು ಏಕೆ ಕೊಡಲಿಲ್ಲವೆಂದೊಡೆ ಆ ಗುರುವಿಗೂ ಲಿಂಗ ಚೈತನ್ಯ. ಆ ಜಂಗಮಕ್ಕೂ ಲಿಂಗ ಚೈತನ್ಯವೆಂಬುದೀಗ ಆ ಗುರುವಿಗೂ ಲಿಂಗಪ್ರಾಣ ಜಂಗಮಕ್ಕೂ ಲಿಂಗಪ್ರಾಣವೆಂಬ ಶಬ್ದಕ್ಕರ್ಥ. ಆ ಚೈತನ್ಯ ಸ್ವರೂಪವಾದ ಲಿಂಗವಿರಹಿತವಾಗಿ ಗುರುವೆನಿಸಬಾರದು. ಆ ಚೈತನ್ಯಸ್ವರೂಪವಾದ ಲಿಂಗವಿರಹಿತವಾಗಿ ಜಂಗಮವೆನಿಸಬಾರದೆಂಬುದೀಗ ಆ ಲಿಂಗ ವಿರಹಿತವಾಗಿ ಗುರುವಾಗ ಬಲ್ಲಡೆ ಆ ಲಿಂಗ ಬಾಹ್ಯವಾಗಿ ಜಂಗಮವಾಗಬಲ್ಲಡೆ ಎಂಬ ಶಬ್ದಕ್ಕರ್ಥ. ಇಂತಪ್ಪ ಉಭಯ ಪ್ರಸಾದವ ಲಿಂಗಕ್ಕೆ ಕೊಡಬಹುದೆಂಬುದೀಗ ಉಭಯ ಪ್ರಸಾದವ ಲಿಂಗಕ್ಕೆ ಕೊಡಬಹುದೆಂಬ ಶಬ್ದಕ್ಕರ್ಥ. ತಮ್ಮ ಅಂಗದ ಮೇಲೆ ಲಿಂಗ ಸಂಬಂಧವಿಲ್ಲದೆ ಲಿಂಗಾರ್ಪಿ

ತವ ಮಾಡದೆ ನಾವು ಗುರುಗಳು ನಾವು ಜಂಗಮವು ಎಂದು ಲಿಂಗಕ್ಕೆ ಕೊಡದೆ ಕೊಂಬುವರು ಎಂಬುದೀಗ ಇದನರಿಯದೆ ಉದ್ದೇಶಿಸಿ ನುಡಿವ ಎಂಬ ಶಬ್ದಕ್ಕರ್ಥ. ಅವರಿಗೆ ಪರಶಿವ ತತ್ವದಲ್ಲಿ ಸಮರಸವಿಲ್ಲವೆಂಬುದೀಗ ಭೇದಹೀನರಿಗೆ ಎಂಬ ಶಬ್ದಕ್ಕರ್ಥ. ಅವರಿಗೆ ಲಿಂಗಕ್ರಿಯದಿಂದುದಯವಾದ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವಿಲ್ಲವೆಂಬುದೀಗ ತ್ರಿವಿಧವೆಲ್ಲ ಒಂದೇ ಎಂಬ ಶಬ್ದಕ್ಕರ್ಥ. ಇಂತಪ್ಪ ಜೀವರು ಶಿವತತ್ವಕ್ಕೆ ಭಿನ್ನವಾಗಿ ಭೇದವಾದಿಗಳಾಗಿಹರೆಂಬುದೀಗ ಅವರು ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ದೂರ ಎಂಬ ಶಬ್ದಕ್ಕರ್ಥ.

---

## ಗುರುಲಿಂಗಜಂಗಮ.

೪೫. ಕಾಯವಿದ್ದು ಕಾಂಬುವುದು ಗುರುಸ್ಥಲ, ಜೀವವಿದ್ದು ಕಾಂಬುದು ಲಿಂಗಸ್ಥಲ, ಭಾವವಿದ್ದು ಕಾಂಬುದು ಜಂಗಮಸ್ಥಲ. ತ್ರಿವಿಧವನೊಡಗೂಡಿ ಕಾಂಬುದು ಭಕ್ತಿಸ್ಥಲ. ಭಕ್ತಿ ನಿಶ್ಚಯವಾಗಿ ನಿಂದಲ್ಲಿ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ ನಿಶ್ಚಯವಾದ ಸ್ಥಲ.

೪೬. ಪೂಜಿಸಿ ಕಾಂಬುವುದು ಗುರುವಿನ ಭೇದ. ಧ್ಯಾನಿಸಿ ಕಾಂಬುವುದು ಲಿಂಗದ ಭೇದ. ಉಭಯದಲ್ಲಿ ನಿಂದು ವಿಚಾರಿಸಿ ಕಾಂಬುವುದು ಜಂಗಮದ ಭೇದ. 'ಜಾ' ಎಂದಲ್ಲಿ ಜನನನಾಸ್ತಿ. 'ಗಾ' ಎಂದಲ್ಲಿ ಗಮನ ನಾಸ್ತಿ. 'ಮಾ' ಎಂದಲ್ಲಿ ಮರಣ ನಾಸ್ತಿ. ಈ ತ್ರಿವಿಧ ನಾಸ್ತಿಯಾಗಿ ನಿಂದುದು ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವು ನಿಂದ ನಿಲವು.

೪೭. ಪರಧನವ ಬಿಟ್ಟಾಗಲೆ ಗುರುವಿನಿರವು ಸಾಧ್ಯವಾಯಿತ್ತು. ಪರಸ್ತ್ರೀಯರ ಬಿಟ್ಟಾಗಲೆ ಲಿಂಗ ಅಂಗದ ಮೇಲೆ ಸಲೆ ಸಂದಿತ್ತು. ಎಂಬುದು ನಿಂದಾಗಲೆ ಜಂಗಮಭಕ್ತಿ ಸಾಧ್ಯವಾಯಿತ್ತು. ಇಂತೀ ತ್ರಿವಿಧವ ತಟ್ಟದಿಪ್ಪಾತನು ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವ ಮುಟ್ಟಿಪ್ಪನು.



೪೮. ಅಪ್ಪು ಮೂಲಾಧಾರವಾಗಿ, ಬೀಜದ ಮೇಲೆ ಬೀಳೆ ಪೃಥ್ವೀಗರ್ಭ ಬೆಸಲಾಯಿತ್ತು. ತ್ರಿವಿಧದಾದಿಯಿಂದ ಗುರುವಾಯಿತ್ತು. ತ್ರಿವಿಧ ಭೇದದಿಂದ ಲಿಂಗವಾಯಿತ್ತು. ತ್ರಿವಿಧವಳಿದು ಜಂಗಮವಾಯಿತ್ತು. ಜಂಗಮವಳಿದು ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ ಸ್ವಯಂಭುವಾಯಿತ್ತು.

೪೯. ಗುರುಲಿಂಗ ಬ್ರಹ್ಮರೂಪಾಯಿತ್ತು. ಚರಲಿಂಗ ವಿಷ್ಣುರೂಪಾಯಿತ್ತು. ಸ್ಥಾವರಲಿಂಗ ರುದ್ರರೂಪಾಯಿತ್ತು. ಗುರು ಚರ ಲಿಂಗ ತ್ರಿವಿಧ ಮಲ ಕಾರಣವಾಯಿತ್ತು. ಅಮಲಗುಣ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವು ನಾಮಕ್ಕೆ ಹೊರಗಾದ.

೫೦. ಗುರುವೆಂದಡೂ ಕಾಯವುಳ್ಳನ್ನಕ್ಕ ದೋಷಕ್ಕೆ ಹೊರಗಾಗಬೇಕು. ಲಿಂಗವೆಂದಡೂ ಪೀಠಕ್ಕೆ ಸಿಕ್ಕಿಹನ್ನಕ್ಕರ ಜಗದಾಗುಚಾಗೆಯನರಿಯಬೇಕು. ಜಂಗಮವೆಂದಡೂ ಸುಖದುಃಖವುಳ್ಳನ್ನಕ್ಕ ಕಾಯವಿಡಿದಿಹ ಕಾರಣ ಪಾತಕಕ್ಕೆ ಹೊರಗಾಗಬೇಕು. ಶೂನ್ಯವಾದಡೂ ಆ ಕುರುಹುಳ್ಳನ್ನಕ್ಕ ಸುಖದುಃಖಕ್ಕೊಳಗು. ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವಾದಡೂ ಮರೆದಲ್ಲಿ ಭವಕ್ಕೆ ಬೀಜ.

೫೧. ಸ್ತ್ರೀಲಿಂಗ ನಾಸ್ತಿಯಾಗಿರಬೇಕು ಗುರುವಿನಿರವು. ಪುಲ್ಲಿಂಗ ನಾಸ್ತಿಯಾಗಿರಬೇಕು ಲಿಂಗದಿರವು. ನಪುಂಸಕ ಲಿಂಗ ನಾಸ್ತಿಯಾಗಿರಬೇಕು ಜಂಗಮದಿರವು. ತ್ರಿವಿಧಲಿಂಗ ನಾಸ್ತಿಯಾಗಿರಬೇಕು. ಈಶಾನ್ಯ ಮೂರ್ತಿಮಲ್ಲಿಕಾರ್ಜುನ ಲಿಂಗವು ನಾದ ಬಿಂದು ಕಳೆಗೆ ಹೊರಗಾಯಿತ್ತು.

೫೨. ಗುರು ಮೂರು ಕೂಡಿ ಗುರುವಾದಲ್ಲಿ, ಬಿಂದು ಐದು ಕೂಡಿ ಲಿಂಗವಾದಲ್ಲಿ, ವಿಂಶತಿ ಆರುಕೂಡಿ ವಿಸರ್ಜನವಾದಲ್ಲಿ ಜಂಗಮವಾಯಿತ್ತು. ಆ ಜಂಗಮ ಜಾಮತೆ ಭಾವವಳಿದು ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವಾಯಿತ್ತು.

ಟೀಕೆ:— ಸುಜ್ಞಾನೋದಯವಾಗಿ ಶ್ರೀಗುರು ಕಾರುಣ್ಯವ ಪಡೆದು ಲಿಂಗಾಂಗ ಸಂಬಂಧಿಯಾದ ಶರಣಂಗೆ ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರುವೆಂಬ ಗುರುತ್ರಯವು ಶಿಷ್ಯನಾಚಾರಾಂಗದಲ್ಲಿ ಒಂದೇಸ್ವರೂಪಿನಿಂದ ಗುರುತತ್ವ ಸಂಬಂಧವಾಯಿತ್ತೆಂಬುದೀಗ ಗುರು ಮೂರು ಕೂಡಿ ಗುರುವಾದಲ್ಲಿ ಎಂಬ ಶಬ್ದಕ್ಕರ್ಥ. ಬಿಂದುಸ್ವರೂಪವಾದ ಪಂಚಾಕ್ಷರವೇ

ಆಧಾರಪೀಠ ಮಧ್ಯವೃತ್ತ ಗೋಮುಖ ನಾಳಂಗಳಲ್ಲಿ ಪಂಚಾಕ್ಷರೀ ಮಂತ್ರ ಸ್ವರೂಪಿನಿಂ ಇಷ್ಟಲಿಂಗವಾಗಿ ಬಂದಿತ್ತೆಂಬುದೀಗ ಬಿಂದು ಐದು ಕೂಡಿ ಲಿಂಗವಾದಲ್ಲಿ ಎಂಬ ಶಬ್ದಕ್ಕರ್ಥ. ತತ್ವವಿಪತ್ತು ಅಧಿದೇವತೆಗಳು ಷಡ್ವಿಧ ಇಪ್ಪತ್ತಾರು ತತ್ವವರ್ತನೆ ನಷ್ಟವಾದಲ್ಲಿ ಸದ್ಭಾವ ಹಸ್ತದಲ್ಲಿ ಸುಜ್ಞಾನ ಜಂಗಮಲಿಂಗ ಸಂಬಂಧವೆಂಬುದೀಗ ವಿಂಶತಿ ಮೂರು ಕೂಡಿ ವಿಸರ್ಜನವಾದಲ್ಲಿ ಆ ಜಂಗಮವಾಯಿತ್ತೆಂಬ ಶಬ್ದಕ್ಕರ್ಥ. ಆ ತತ್ವಂಗಳ ನಿವೃತ್ತಿಮಾಡಿದ ಸುಜ್ಞಾನ ಜಂಗಮಕ್ಕೆ ಪುನರ್ಭವವಿಲ್ಲದೆ ಮಹಾಘನಲಿಂಗದಲ್ಲಿ ಸಮರಸೈಕ್ಯವಾದನೆಂಬುದೀಗ ಆ ಜಂಗಮ ಜಾಯತೆ ಭಾವವೇದು ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗವಾಯಿತ್ತೆಂಬ ಶಬ್ದಕ್ಕರ್ಥ.

೫೩. ಗುರುವಿರೆ ಲಿಂಗ ಪ್ರಸಾದವ ಕೊಳಲಾಗದು. ಲಿಂಗವಿರೆ ಜಂಗಮ ಪ್ರಸಾದವ ಕೊಳಲಾಗದು. ಜಂಗಮವಿರೆ ಉಭಯ ಪ್ರಸಾದವ ಕೊಳಲಾಗದು. ಇಂತೀ ಪ್ರಸಾದದ ವಿವರವನರಿತಲ್ಲಿ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಪ್ರಸನ್ನ ಪ್ರಸಾದವಾದ.

ಟೀಕಾ:— ದೀಕ್ಷಾತ್ರಯಂಗಳಂ ಕರುಣಿಸಿ ಅಂಗತ್ರಯಕ್ಕೆ ಲಿಂಗತ್ರಯವ ಸಂಬಂಧವ ಮಾಡಿ ಸದಾಚಾರ ಸತ್ಪರ್ಥ ಮಾರ್ಗವ ತೋರಿ ಕೊಟ್ಟ ಶ್ರೀಗುರುವ ಕ್ಷೀಣವೆಂದು ಲಿಂಗವೇ ಶ್ರೇಷ್ಠವೆಂದು ಗುರುವ ಬಿಟ್ಟು ಲಿಂಗಪ್ರಸಾದವ ಕೊಂಬುದು ಅಜ್ಞಾನವೆಂಬುದೀಗ ಗುರುವಿರೆ ಲಿಂಗಪ್ರಸಾದವ ಕೊಳಲಾಗದು ಎಂಬ ಶಬ್ದಕ್ಕರ್ಥ. ತನ್ನಂಗಮನ ಪ್ರಾಣೇಂದ್ರಿಯಂಗಳಲ್ಲಿ ಲಿಂಗ ಚೈತನ್ಯಸ್ವರೂಪವಾಗಿರ್ದ ಸಕಲ ಪದಾರ್ಥವ ಲಿಂಗಾರ್ಪಿತವ ಮಾಡಿ ಪ್ರಸಾದವ ಸ್ವೀಕರಿಸುವದೇ ಸಹಜ. ಆ ಲಿಂಗವ ಬಿಟ್ಟು ಜಂಗಮವೇ ಶ್ರೇಷ್ಠವೆಂದು ಆ ಜಂಗಮದ ಪ್ರಸಾದವ ಕೊಳಲಾಗದೆಂಬುದೀಗ ಲಿಂಗವಿರೆ ಜಂಗಮ ಪ್ರಸಾದವ ಕೊಳಲಾಗದೆಂಬ ಶಬ್ದಕ್ಕರ್ಥ. ಸುಜ್ಞಾನಸ್ವರೂಪವಾದ ಜಂಗಮವು ತನ್ನಲ್ಲಿ ಚೈತನ್ಯಸ್ವರೂಪವಾಗಿರ್ದ ಬಳಿಕ ಆ ಜಂಗಮವನುದಾಸೀನದಿಂ ಬಿಟ್ಟು ಗುರುಪ್ರಸಾದವ ಲಿಂಗಪ್ರಸಾದವ ಕೊಳಲಾಗದೆಂಬುದೀಗ ಆ ಜಂಗಮವಿರೆ ಉಭಯ ಪ್ರಸಾದವ ಕೊಳಲಾಗದೆಂಬುದೀಗ ಆ ಜಂಗಮವಿರೆ ಉಭಯ ಪ್ರಸಾದವ ಕೊಳಲಾಗದೆಂಬ ಶಬ್ದಕ್ಕರ್ಥ. ಇಂತೀ ಭಿನ್ನ



ಎಂದು ಬಯ್ತಿಟ್ಟ ದಿಂಡಂ ತೆಗೆದು ನೋಡುತುಂ
ಅಂದಲ್ಲಿ ಕಾಣದೆ ಮನಂಗುಂದಿ ಬಾಡುತುಂ
ಎಲ್ಲ ದಿಂಡುಗಳೊಳಗೆ ಲೇಸಾಗಿ ನೋಡುತಿರೆ
ಎಲ್ಲಿಯುಂ ಶಿವನ ಕೌಪಿನ ಸುದ್ದಿ ಇಲ್ಲದಿರೆ
ಕಂಡು ಶಿವಭಕ್ತನರಿದೆಳ್ದು ಬಸಿರುಂ ಪೊಸೆದು
ಕಂಡಿರೇಯಮರನೀತಿಗಳ ಪರಿಕರಮರಿದು
ನಿನ್ನೆ ಕಚ್ಚುಟವ ಬಯ್ತಿಟ್ಟು ಕೊಡು ನೀನೆಂದು
ತನ್ನ ಕೈಯ್ಯೊಳ್ಕೊಡಲ್ಕೊಂಡು ಕೆಟ್ಟಿತ್ತೆಂದು
ನುಡಿವ ಪರಿಯಂ ಕೇಳ್ವರೇ ಭಕ್ತಜನವೆಲ್ಲ
ಕಡೆಯಲೆನ್ನಂ ಹೊಲ್ಲಮೆನಲಾಗದಿನ್ನೆಲ್ಲಿ
ಎನಲಮರನೀತಿಗಳೆ ದೇವ ನಾಂ ಕೊಂಡೆನೇ
ತನಗೆ ತಾನೇ ಕೆಟ್ಟು ಪೋದುದಂ ಬಲ್ಲೆನೇ
ಇದಕೆ ನೀಮಿನಿತಾಸುರಂ ಮಾಡವೇಳ್ಕುಮೋ
ಇದೆ ಕೊಳ್ಳಿ ನಾಲ್ಕೈಯ್ದು ಸಮಕಟ್ಟು ಸಾಲ್ಗುಮೋ

ಎಂದು ಪಟ್ಟಾವಳಿಯ ಸಮಕಟ್ಟನೀವುತಿರೆ
ನಿಂದೊದೆದು ಬಿದ್ದಿರ್ದು ನೆರೆದ ಸಭೆ ನಡುಗುತಿರೆ
ಎಲವೊ ಪಟ್ಟಾವಳಿಯ ಗಿಟ್ಟಾವಳಿಯ ಪವಣೆ
ಎಲವೊ ನೇತ್ರಾವಳಿಯ ಗೀತ್ರಾವಳಿಯ ಪವಣೆ
ಎನಗೆನ್ನ ಕೌಪು ಸಾಲ್ವುದು ಕುಡುಕುಡೇದೆನುತೆ
ನಿನಗವರ ಮಹಿಮೆಯರಿಯದುಸುರ್ದಪೆನೆಂದೆನುತೆ
ಇರಲರಿಯೆನೀನವರ ಕಚ್ಚುಟದ ಮಹಿಮೆಯಂ
ಇರಿಸುವಲ್ಲಿಂ ಮುನ್ನ ಕಚ್ಚುಟದ ಮಹಿಮೆಯಂ
ಮಹಿಮೆಯಲ್ಲಿದು ಬರಿಯ ಕಚ್ಚುಟಂ ಕೊಡು ತಂಡೆ
ಕುಹಕವೇಕೈ ಭಕ್ತರೊಡವೆಯಂ ಕುಡು ತಂದೆ
ಕುಡುವುದುಂ ಕೊಂಬುದುಂ ಸಿರಿವಂತ ಭಕ್ತರೊಳ್
ನುಡಿವುದೈ ನುಣ್ಣನೆಯ ಮಾತನಾ ಭಕ್ತರೊಳ್
ಎಮಗಿನಿತು ಪೇಳ್ವುದೇ ಸಿರಿಯ ಗರ್ವದ ನೆರವು
ನಿಮಗೆ ಗುಣವೇ ಕೊಂಡು ಕುಡಲಿಲ್ಲದಿರ್ಪಿರವು
ಎನೆಂದೊಡಂ ಸುಮ್ಮನಿರ್ದನಮರರನೀತಿ
ಎನೀಯೆಯೊರಲುತ್ತಲಿರ್ಕೆಂಬುದೇ ನೀತಿ

ಇನ್ನೊರ್ವರ್ ಬೇಡುವೆಂ ಕುಡದೆ ನಿಂದೊಡೆ ಬಳಿಕ
ಎನ್ನಸುವನೊಪ್ಪಿಸುವೆ ನಿನಗೆ ಸಂತಸ ಬಳಿಕ
ಮೆನ್ನನೆಮ್ಮಯ ಭಕ್ತರರಸಿಕೊಳ್ವವರುಂಟು
ನಿನ್ನ ಪಣವಲ್ಲ ಕೇಳ್ವೆನಗೆ ಬಲ್ಲಿದರುಂಟು
ಎನುತಲಟ್ಟಾಸುರಂ ಮಾಡುತಿರೆ ಬೆರಗಾಗಿ
ತನತನಗೆ ಭಕ್ತರೆಲ್ಲರ್ಸುಯ್ದು ಸಿಗ್ಗಾಗಿ

ಎನೆ ಶರಣರೆಲ್ಲಂದು ಕೂಡೆ ಮುಮ್ಮಳಿಗೊಂಡು
ತನತನಗೆ ನಲಿದು ಉಲಿವ ಭಕ್ತನ ಕಂಡು
ಭಕ್ತರ್ಗೆ ಮಾಡುವವನಿಂತು ಮಾಣಿಸಿದನೇ
ಭಕ್ತರೆಲ್ಲರ ಪಾಪವಂ ಕಟ್ಟಿಕೊಂಡನೇ
ಕಚ್ಚುಟಕೆ ಪಡಿಯ ದಿಂಡುಗಳನಿತ್ತೊಡೆಯೊಲ್ಲ
ನಚ್ಚರಿಯದೇನೆಂಬ ಪರಿಯನೀಶ್ವರ ಬಲ್ಲ
ನೆಂದೆಲ್ಲರೊಂದನಾಳೋಚಿಸಿದರಂದಿಂಗೆ
ಇಂದಮರನೀತಿ ಬರ್ದುಕಿದೊಡೆ ಸಾಲ್ಗೆಂದೆಮಗೆ
ಭಕ್ತನೇಕಗ್ರಾಹಿ ಕೌಪನಲ್ಲದೆಯೊಲ್ಲ
ಯುಕ್ತಿ ಕೊಳ್ಳದು ಹಿಡಿದ ಮುಷ್ಟಿಯುಂ ಬಿಡಲೊಲ್ಲ
ನಿದಕೆ ಸಾವಿರ ಹೊನ್ನದೊಂದು ಹೊಸ ಕೌಪುಮಂ
ಮುದದಿಂದಲಿತ್ತು ಭಕ್ತನ ಮನದ ಚಲಮುಮಂ
ಬಿಡಿಸುವೆವೆನುತ್ತೆಲ್ಲರೆಂದರಾ ಭಕ್ತಂಗೆ
ಮೃಡನ ಭಕ್ತನ್ಮಾಡಿದರಾ ಕಪಟ ಭಕ್ತಂಗೆ
ಎಮ್ಮ ಮಾತಂ ಸಲಿಸವೇಳ್ಕುಮಿಂದೆಲೆ ದೇವ
ಎಮ್ಮೆಲ್ಲರಂ ನೋಡವೇಳ್ಕುಮಿಂದೆಲೆ ದೇವ
ನಿನ್ನ ಕಚ್ಚುಟಕೆ ಪಣಪ್ಪೊಂದು ಸಾವಿರದ
ಹೊನ್ನ ಕೌಪಂ ಕೊಂಡು ನಯದಿಂದಲೀ ನೆರೆದ
ಭಕ್ತರ್ಗೆ ಸಂತಸಂ ಮಾಡಬೇಕೆನುತಮಿರೆ
ಭಕ್ತನಳ್ಕಿರಿದೇಳೆ ನಿಂದ ಸಭೆ ನಡುಗುತಿರೆ

ಕೋಪಿಸುತೆ ಕಂಪಿಸುತೆ ಮಾಮಸಕದಿಂ ಮಸಗಿ
ಶಾಪಿಸುತೆ ತಾಪಿಸುತೆ ಮಿಗೆ ಮಮ್ಮಲಂ ಮರುಗಿ



ಅಯ್ಯ ಭಕ್ತರಿರ ಮಿಗೆ ಲೋಗರಿಗೆ ಮುಗ್ಧರೇ
ಅಯ್ಯ ನಿಮ್ಮತ್ತಲಾಗಲು ನೆರೆ ವಿದಗ್ಧರೇ
ಕುಡುವವರ ಪಕ್ಷಮಪ್ಪುದನೇಕೆಮಾಣಿರೇ
ಬಡವನುಮನಾಥನೆನಗೆನ್ನತ್ತಲಪ್ಪಿರೇ
ಅದು ನೋಟಕದ ಕಚ್ಚುಟವದೆಂತು ಬಗೆದಿರೇ
ಅದು ಪುರುಷವೆನಗೆ ಚಿಂತಾಮಣಿವ್ರಜವೆನಗೆ
ಅದು ಕೋವಣವೆ ಸುರಭಿಗಳ್ಗೆ ದಾವಣಿ ಯೆನಗೆ
ಅದು ಕೋವಣವೆ ಕಲ್ಪಲತೆಯ ಕಾವಣವೆನಗೆ
ಕೋವಣವೆಯಭಿಮಾನಗೆಕ್ಕಲಾವಣವೆನಗೆ
ಪೊ ಪೋ ಪೋ ಅಂತದಕೆ ಹೊನ್ನ ಕಚ್ಚುಟವೆನಗೆ
ಕೊಡಲೆಂದು ಬರ್ಪಿರೇ ಹೈಕೊಳ್ಳದಿರ್ಪನೇ
ನಡುವೆ ಮಧ್ಯಸ್ತರಾಗಿರ್ಪಿರೇನರಿಯೆನೇ
ಇವರನೇ ಕೈತೋರುತಿರ್ಪೆಯಮರನೀತಿ
ಇವರ ಕೈಯ್ಯೊಳು ಕೊಟ್ಟೆನೇ ಹೇಳಮರನೀತಿ
ಎನುತಲಟ್ಟಾಸುರಂ ಮಾಡುತಿರೆ ಬೆರಗಾಗಿ
ತನತನಗೆ ಭಕ್ತರೆಲ್ಲಂ ಸುಯ್ದು ಸಿಗ್ಗಾಗಿ
ಇವರೇಕೆ ನೀವೇಕೆ ಕೌಪೇಕಮರನೀತಿ
ಇವರನಿನ್ನೇನೆಂದೊಡಂ ನಮಗಪಖ್ಯಾತಿ
ಎಂಬ ನುಡಿಗೇಳ್ದಮರನಿತಿಗಳ್ಮಿಗೆ ನೊಂದು
ಇಂಬಿಲ್ಲ ನುಡಿಗೆಯನ್ಯಾಯನೆಮ್ಮದೆ ಯೆಂದು
ಕೊಟ್ಟನಿವರೊಂದು ಕೌಪಂ ಕೊಂಡೆನಾನಿದಂ
ಕೆಟ್ಟುದಪರಾಧಿಯಾನಿಂತಿದಕೆ ತಕ್ಕುದಂ
ಮಾಡುವರಿವರ್ಮಾಡಿಸಿಯೆ ಕೊಳ್ವೆ ನಾನೆಂದು
ಕಾಡುವರಿವರ್ಕಾಡಿಸಿಯೆ ಕೊಳ್ವೆ ನಾನೆಂದು
ನೀವೆಲ್ಲರುಂ ಬಳಲ್ದಿರಿ ಹಸಿದಿರೆಂದೆನುತೆ
ಆನವರ್ಮಾಡಿದಂತಾದಪ್ಪೆನೆಂದೆನುತೆ
ನುಡಿಯೆ ಭಕ್ತರ್ ಮರುಗಿದ ನಮ್ಮ ವಶವಲ್ಲವಿದು
ಮೃಡನೆ ಬಲ್ಲಂ ಮಿಕ್ಕವರ್ಗರಿಯಬಾರದಿದು

ಎನುತೆಲ್ಲರೇಳಲುದ್ಯುತರಾಗೆ ಶಂಕರಂ
ನೆನೆದನಿಂತಿವರೇಳಲಾಗದೆನುತೀಶ್ವರಂ

ಪೋಗದಿರಿ ನೀವೆಲ್ಲ ನಾನೊಂದನೆಂದಪೆಂ
ರಾಗದಿಂ ನೀವೆಂದ ಮಾಳ್ಕೆಯಿಂ ಬಂದಪೆಂ
ಕೋವಣವನೀತನಾವರ್ತದಿಂ ಕೊಡನದಂ
ನೀವೆಲ್ಲರುಂ ನೋಡಲೀಸುವನೊಡಂಬಡಂ
ಆತಂಗೆ ಫಲವಾವಡೆನಗೆ ಫಲವಪ್ಪುದೇ
ಆತನೊಳ್ಮಗುವಿನೊಳ್ಗುಣದೋಷವರಸುವುದೇ
ಬೇಡಿನ್ನದೇಕೆ ಭಕ್ತರ ನಿರೋಧವದೆಮಗೆ
ಕಾಡಲೇಕೀತನಂ ನೀವೆಲ್ಲರುಮೆನೆನಗೆ
ನಿಮ್ಮಯ ನಿರೋಧಮಂ ಮಾಣಿಸುವೆನಿನ್ನೊಂದು
ಎಮ್ಮ ಮಾರುಡೆ ಕೌಪು ಬೇರೆಯಿದೆ ಮತ್ತೊಂದು
ಇದರ ತೂಕಕ್ಕೆ ಸರಿ ತೂಕವಿತ್ತೊಡೆ ಸಾಲ್ಗು
ಅದರ ಹಂಬಲು ಬೇಡ ಭಕ್ತರ್ಗೆ ನೆರೆ ಸೋಲ್ಗು

ಎನೆ ಶರಣರೆಲ್ಲರು ಕೂಡೆ ಹರುಷಂದಳೆದು
ಮನದೊಳಗೆ ಗುಡಿಗಟ್ಟಿ ಸಂತೋಷಮಂ ತಳೆದು
ಅಮರನೀತಿಗಳನಾಲಿಂಗಿಸಿ ಸುಖಂ ಬಡೆದು
ನಿಮಗೆ ದೇವರ ಕರುಣಮುಂಟೆಂದು ಸುಖವಿಡಿದು
ಶಿರಿಕೆಂದೇ ಬಗೆದು ನೆಗೆದು ನಲಿದಾಡುತುಂ
ಮಾರಾರಿ ಮಾಡ ವೃಷನರಿಯದೊಲೆದಾಡುತುಂ
ತರಿಸು ತರಿಸು ತ್ರಾಸನೆನುತೆ ಸಂಭ್ರಮಿಸುತ್ತೆ
ಹರನಿಂತು ಕರುಣಿಸಿದನೇ ಎಂದು ಹಿಗ್ಗುತ್ತೆ
ಇರೆ ಬಂದುದೊಂದು ಕಿರಿಯ ತ್ರಾಸುಮಂ ಪಿಡಿದು
ಇರಿಸಿ ಕೋವಣದ ಭಾರಕ್ಕೆ ಹಲ್ಲೆಗಳೊಡೆದು
ಶತಚೂರ್ಣಮಾಗೆ ಮತ್ತೊಂದು ಪಿರಿದಪ್ಪುದಂ
ಅತಿ ಭರದೆ ತಂದಿರಿಸಿ ಮಿಗೆ ಬಲ್ಲಿತಪ್ಪುದಂ
ಅದರೊಳಗೆ ಕಚ್ಚುಟವನಿರಿಸಲನುರಾಗದೊಳ್
ಅದು ನುಚ್ಚುನೂರಾಗೆ ಕಂಡಮರನೀತಿಗಳ್
ಬರಿಯ ಕೋವಣಮಲ್ಲ ಕಂಡೆನಿದರಂದಮಂ
ಹೋಗೆ ನಡೆಯುತೆ ತೋರ್ಪೆನಾ ಮಾಡುವಂದಮಂ
ಎಂದು ಶಿವರಾಜಾಂಗಣದ ಮುಂದೆ ಪೊಡಮಟ್ಟು

# ವಚನಶಾಸ್ತ್ರಸಾರ ಗ್ರಂಥಗಳು.

( ರಾ। ಸಾ। **ಪಿ. ಜಿ. ಹಳಕಟ್ಟಿ** ಇವರಿಂದ ವಿರಚಿತವಾದವುಗಳು. )

(೧) ವಚನಶಾಸ್ತ್ರಸಾರ ಭಾಗ ೧ ಪೂರ್ವಾರ್ಧ — ೨—೮—೦

(೨) ,, ,, ಉತ್ತರಾರ್ಧ — ೧—೧೨—೦

ಈ ಎರಡು ಗ್ರಂಥಗಳ ಮೂಲಕ ವೀರಶೈವ ಧರ್ಮದ ಸಾಮಾನ್ಯ ತತ್ವಗಳನ್ನು ಅರಿಯಬಹುದು.

(೩) ವಚನಶಾಸ್ತ್ರಸಾರ ಭಾಗ ೨ — ೪—೮—೦

ಇದರಲ್ಲಿ ಷಟ್‌ಸ್ಥಲ ಸಿದ್ಧಾಂತದ ನಿರೂಪಣೆ ಇದೆ.

(೪) ವಚನಶಾಸ್ತ್ರಸಾರ ಭಾಗ ೩ ಪೂರ್ವಾರ್ಧ — ೨—೪—೦

ಇದರಲ್ಲಿ ವೀರಶೈವರ ಕ್ರಿಯೆಗಳ ಮತ್ತು ಅಷ್ಟಾವರಣಗಳ ಸಾಮಾನ್ಯ ನಿರೂಪಣೆ ಇರುವದಲ್ಲದೆ ಗುರು, ಲಿಂಗ, ಜಂಗಮ ಇವುಗಳ ಸವಿಸ್ತಾರವಾದ ವಿವರಣೆ ಇರುತ್ತದೆ.

ಈ ನಾಲ್ಕು ಗ್ರಂಥಗಳ ಒಟ್ಟು ಪುಟ ಸಂಖ್ಯೆ ೧೫೮೩ ಇದ್ದು ಇವುಗಳ ಬೆಲೆಯು ೧೧ ರೂಪಾಯಿ ಇರುತ್ತದೆ. ಆದರೆ ಈ ಗ್ರಂಥಗಳೆಲ್ಲವನ್ನೂ ಏಕಕಾಲಕ್ಕೆ ತೆಗೆದುಕೊಂಡಲ್ಲಿ ಅವುಗಳು ಮೂರುನಾಲ್ಕಾಂಶ ಬೆಲೆಗೆ ಅಂದರೆ ಒಟ್ಟು ೮—೪—೦ ರೂಪಾಯಿಗಳಿಗೆ ದೊರೆಯುವವು ಟಪಾಲಖರ್ಚು ಪ್ರತ್ಯೇಕ.

ದೊರೆಯುವ ಸ್ಥಳ —

**ಹಿತಚಿಂತಕ ಪ್ರಿಂಟಿಂಗ ಪ್ರೆಸ್**

ಇದನ್ನು ವಿಜಾಪುರದಲ್ಲಿ ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ಉಪಲೀ ಬುರುಜ ಓಣಿಯಲ್ಲಿರುವ ತಮ್ಮ ೧೬೩೦ (ಅ) ಮನೆಯಲ್ಲಿ ಪ್ರಸಿದ್ಧಿಸಿದರು.

R. N. B. 2554

ಶ್ರೀ

# ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೪ ] ಅಗಸ್ಟ ೧೯೪೦. [ ಸಂಚಿಕೆ ೧೧

## ವಿಷಯಾನುಕ್ರಮಣಿಕೆ.


| ವಿಷಯಗಳು. | ಲೇಖಕರು. | ಪುಟ. |
|---|---|---|
| ೧ ಸರ್ವಜ್ಞನ ವಚನಗಳ ಸ್ವಾರಸ್ಯ | ಶ್ರೀ. ಶಿವಮೂರ್ತಿ. | ೪೭೩ |
| ೨ ವೀರಶೈವ ನೀತಿ. | ಶ್ರೀ ವೀರಪ್ಪ ಹುಗಟಿ. | ೪೮೩ |
| ೩ ತ್ರಿವಿಧ ದಾಸೋಹ. | ಶ್ರೀ ಬ. ಚ. ಪಟ್ಟೇದ | ೪೯೦ |
| ೪ ದತ್ತಾತ್ರೇಯ. | ಶ್ರೀ ಬುದ್ಧಯ್ಯಾ ಪುರಾಣಿಕ. | ೫೦೧ |
| ೫ ಶೂನ್ಯ ಸಂಪಾದನೆಯ ರಹಸ್ಯ. | ಶ್ರೀ ಕಲ್ಯಾಣಪ್ಪ ಬ್ಯಾಳಿ. | ೫೧೯ |
| ೬ ಸಂಗೀತ ವಚನಗಳು. | ಶ್ರೀ. ಪಿ. ವ್ಹಿ. ಪಾಟೀಲ. | ೫೨೫ |
| ೭ ಶಿವಾನುಭವ ಶಬ್ದಕೋಶ | ರಾ॥ ಸಾ॥ ಪಿ. ಜಿ. ಹಳಕಟ್ಟಿ. | ೯—೧೬ |

# ಶಿವಾನುಭವ.


| ವರ್ಷ ೧೪ | ಅಗಸ್ಟ ೧೯೪೦. | ಸಂಚಿಕೆ ೧೧ |
| --- | --- | --- |


## ಸರ್ವಜ್ಞನ ವಚನಗಳ ಸ್ವಾರಸ್ಯ.

(ನೈತಿಕ ವಚನಗಳು)

ಲೇಖಾಂಕ—೩.


ಲೇಖಕರು— ಶಿವಮೂರ್ತಿ.


ಸರ್ವಜ್ಞನ ನೈತಿಕ ವಚನಗಳೆಂದರೆ ತೊಳೆದ ಮುತ್ತುಗಳೇ. ಆತನ ಧಾರ್ಮಿಕ ವಚನಗಳು ಎಷ್ಟೇ ವಿಶ್ವವ್ಯಾಪಕವಾಗಿದ್ದರೂ ವಿಶಿಷ್ಟವಾದ ವೀರಶೈವ ಧರ್ಮವನ್ನು ಪ್ರತಿಪಾದಿಸುವದರಿಂದ ಅವಕ್ಕೆ ಒಂದು ವೇಳೆ ಗೌಣವು ಬರುತ್ತದೆಂದು ಕೆಲವರು ತಿಳಿದರೂ ತಿಳಿಯಬಹುದು. ಆದರೆ ಆತನ ನೀತಿಯ ಮಾತುಗಳು ಸರ್ವಸಾಮಾನ್ಯವಾದವುಗಳಾಗಿರುತ್ತವೆ. ಬೇಕಾದ ದೇಶ ಕಾಲ ಪರಿಸ್ಥಿತಿಯಲ್ಲಿ ಸಹ ಅವು ವ್ಯತ್ಯಾಸ ಹೊಂದ ತಕ್ಕವಲ್ಲ. ಸರ್ವಜ್ಞನ ನೈತಿಕ ವಚನಗಳು ರೂಢಿಯೊಳಗಿನ ಗಾದೆಗಳಿಂದ ಉದ್ಭವಿಸಿರುವವೋ ಅಥವಾ ಆತನ ವಚನಗಳಿಂದಲೇ ಗಾದೆಗಳುಂಟಾಗಿರುವವೋ ತಿಳಿಯುವದೇ ಕಷ್ಟವಾಗಿದೆ. ಸರ್ವಜ್ಞನ ನೀತಿಯ ಮಾತುಗಳು ಕಲ್ಪಿಸಿಕೊಂಡು ಬರೆದಂಥವಲ್ಲ. ಪ್ರಪಂಚದಲ್ಲಿ ಒಳಹೊಕ್ಕು ಜನರ ನಡೆನುಡಿಗಳನ್ನು ಚೆನ್ನಾಗಿ ನಿರೀಕ್ಷಿಸಿ ಅದರ ನಿಜವಾದ ಚಿತ್ರವನ್ನೇ ಆತನು ನಮ್ಮ ಕಣ್ಣ ಮುಂದೆ ತೋರಿಸಿಕೊಟ್ಟಿದ್ದಾನೆ. ಅವನ ಪದ್ಯಗಳನ್ನು ಓದಿದರೆ ಅದರ ಉದಾಹರಣೆಗಳನ್ನು ಹುಡುಕಲು ನಾವು ದೂರ ಹೋಗಬೇಕಾಗಿಲ್ಲ. ಸಮಾಜದ ಕಡೆಗೆ ದೃಷ್ಟಿಯನ್ನು ಹಾಕಿದರೆ ಆತನ ವಚನಗಳು ಒಳ್ಳೆ ಮನಗಂಡ ಮಾತುಗಳೆಂದು ಎಂಥವ

ರಿಗಾದರೂ ಮನವರಿಕೆಯಾಗದಿರದು. ಸರ್ವಜ್ಞನ ನೀತಿಯ ವಚನಗಳು ಪ್ರತಿಯೊಬ್ಬನು ಪಾರಾಯಣ ಮಾಡಲು ತಕ್ಕಂಥವುಗಳಾಗಿವೆ.

ಮೊದಲು ಸರ್ವಜ್ಞನು ಸಿರಿವಂತರು ದಾನ ಮಾಡಬೇಕು. ಲೋಭಿಯಾಗಬಾರದೆಂಬ ನೀತಿಯನ್ನು ಒಳ್ಳೇ ಸೊಗಸಾಗಿ ಉಪದೇಶ ಮಾಡಿದ್ದಾನೆ. ಉದಾಹರಣಾರ್ಥವಾಗಿ "ಸಿರಿಬಂದ ಕಾಲಕ್ಕೆ ಕರೆದು ದಾನವ ಮಾಡು। ಪರಿಣಾಮವಕ್ಕು ಪದವಕ್ಕು ಕೈಲಾಸ। ನೆರೆಮನೆಯಕ್ಕು ಸರ್ವಜ್ಞ॥ ತನ್ನಲ್ಲಿ ಸತ್ಪಾತ್ರಕ್ಕಾಗಿ ದಾನ ಮಾಡುವ ಶಕ್ತಿಯಿರದಿದ್ದರೆ ಭಿಕ್ಷೆ ಮಾಡಿಯಾದರೂ ಕೊಡಬೇಕೆಂದು ಸರ್ವಜ್ಞನು ಹೇಳುತ್ತಾನೆ. ಈ ಮಾತನ್ನು ಸಮಾಜ ಸೇವಕರು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. "ತಿರಿದು ತಂದಾದರೆಯು। ಕರೆದು ಜಂಗಮಕಿಕ್ಕು। ಪರಿಣಾಮವಕ್ಕು ಪದವಕ್ಕು ಕೈಲಾಸ। ನೆರೆಮನೆಯಕ್ಕು ಸರ್ವಜ್ಞ॥ ಪಾತ್ರವರಿತು ತಕ್ಕಷ್ಟು ದಾನ ಮಾಡುವದು ಜಾಣತನವಲ್ಲದೆ ಸಾರಾಸಾರ ವಿಚಾರ ಮಾಡದೆ ಅಪಾತ್ರಕ್ಕೆ ದುಡ್ಡು ಸುರುವುವದು ಮೂರ್ಖತನವೆಂಬ ಬಗ್ಗೆ ಸರ್ವಜ್ಞನು ಹೀಗೆ ಹೇಳಿದ್ದಾನೆ. "ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಹೊಯ್ಯುವರೆ?। ಕೊಡಬೇಡ ಕೊಡದೆಯಿರಬೇಡ ಧರ್ಮವನು। ಬಿಡಬೇಡವೆಂದ ಸರ್ವಜ್ಞ॥ ದಾನಕೊಟ್ಟ ಬಳಿಕ ಮನದೊಳಗೆ ಕುದಿಯುವ ಮೂರ್ಖರ ಬಗ್ಗೆ ಆತನು ಸಮಾಧಾನ ಹೇಳುವದೇನಂದರೆ— "ಕೊಟ್ಟದ್ದು ತನಗೆ ಬೈಚಿಟ್ಟದ್ದು ಪರರಿಂಗೆ। ಕೊಟ್ಟು ನಾ ಕೆಟ್ಟೆನೆನಬೇಡ। ಅದು ಮುಂದೆ ಕಟ್ಟೆಹುದು ಬುತ್ತಿ ಸರ್ವಜ್ಞ॥ ಕೆಲವರಿಗೆ ಎಡತಾಕಿಸಿಕೊಂಡು ದಾನ ಕೊಡುವ ಸ್ವಭಾವವಿರುತ್ತದೆ. ಅಂಥವರಿಗೆ ಸರ್ವಜ್ಞನು ಕಿವಿಹಿಂಡಿ ಬುದ್ಧಿ ಹೇಳುವದೇನಂದರೆ "ಕೊಡುವವನ ಧರ್ಮಕ್ಕೆ ಕಡೆಯೇನು ಮೊದಲೇನು। ಎಡತಾಕಿಸಿಕೊಂಡು ಕೊಡುವವನ ಧರ್ಮವು। ಹುಡಿಯು ಮಣ್ಣಿಂದ ಸರ್ವಜ್ಞ॥ ಮತ್ತು ಆಗ ಬಾ ಈಗ ಬಾ ಹೋಗಿ ಬಾ ಎನ್ನದೆ ಆಗಲೆ ಕರೆದು ಕೊಡುವವನ ಧರ್ಮವು। ಹೊನ್ನಾಗದೇ ಬಿಡದು ಸರ್ವಜ್ಞ॥

ದುಡ್ಡು ಗಳಿಸಿ ತಮ್ಮ ಹೊಟ್ಟೆಗೆ ಉಣ್ಣದೆ ಹೂಳಿಡುವ ಲೋಭಿಗಳನ್ನು ಕುರಿತು ಸರ್ವಜ್ಞನು ಹೇಳಿರುವುದೇನಂದರೆ "ಉಣ್ಣದೊಡವೆಯ। ಗಳಿಸಿ ಮಣ್ಣಿನೊಳು ತಾನಿರಿಸಿ। ಸಣ್ಣಿಸಿ ನೆಲನ ಸಾರಿಸಿದನ ಬಾಯೊಳಗೆ। ಮಣ್ಣು ಕಾಣಯ್ಯ ಸರ್ವಜ್ಞ॥ ಮತ್ತು ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು



ನೊರೆಹಾಲ। ಪುಣ್ಯವ ಮಾಡಿ ಉಣಲೊಲ್ಲದವನಿರವು। ಉಣ್ಣೆಯಿಂ ಕಷ್ಟ ಸರ್ವಜ್ಞ॥ ಗುರುಲಿಂಗಜಂಗಮಕ್ಕೆ ಅರ್ಪಿಸದೆ ತನ್ನ ಹೆಂಡರು ಮಕ್ಕಳಿಗಾಗಿ ದುಡ್ಡು ಕೂಡಿಸುವವರ ಸಲುವಾಗಿ ಸರ್ವಜ್ಞನು ಹೇಳಿರುವದೇನಂದರೆ—"ಹೆಂಡರುಮಕ್ಕಳಿಗೆಂದು ದಂಡಿಸದಿರು ದೇಹವನು। ಕಂಡ ವಸ್ತುವನು ಕೊಡದುಣ್ಣದೆ ಬೈಚಿಡಿಲು। ಕಂಡವರಿಗಹುದು ಸರ್ವಜ್ಞ॥ ಈ ಪ್ರಪಂಚದಲ್ಲಿ ಹಲವು ವಿಚಿತ್ರ ಮೂರ್ಖರಿರುವರು. ಅವರು ದಾನಕ್ಕಾಗಿ ಒಂದು ಪೈ ಸಹ ಕೊಡುವದಿಲ್ಲ. ಆದರೆ ದಂಡಕ್ಕಾಗಿ ಸಾವಿರಗಟ್ಲೆ ರೂಪಾಯಿ ಹಾಳುಮಾಡುವರು. ಅಂಥವರಿಗೆ ಸರ್ವಜ್ಞನ ಸಂದೇಶವೇನಂದರೆ—"ಮಾನವರ ದುರ್ಗುಣವನೇನೆಂದು ಬಣ್ಣಿಪೆನು. ದಾನಕ್ಕೆ ಯೆನಲು ಕನಲುವರು ದಂಡವ। ಮೌನದೀಯುವರು ಸರ್ವಜ್ಞ॥

ಈಗ ಹಿಂದುಸ್ಥಾನವು ಪರತಂತ್ರದಲ್ಲಿ ಬಳಲುತ್ತಿರಲು ಅದಕ್ಕೆ ಸ್ವತಂತ್ರವೇ ಲೇಸೆಂದು ಹೇಳಲಿಕ್ಕೆ ಭವಿಷ್ಯವನ್ನು ಬರೆದಿರುವನೋ ಏನೋ ಎಂಬಂತೆ ಸರ್ವಜ್ಞನು "ಜಗದಿ ಸ್ವತಂತ್ರವೇ ಲೇಸು ಸರ್ವಜ್ಞ" ಎಂದು ಅಪ್ಪಣೆ ಕೊಡಿಸಿದ್ದಾನೆ. ಸರ್ವಜ್ಞನು ಸ್ವಾತಂತ್ರ್ಯಪ್ರಿಯನಾದರೂ ರಾಜನೀತಿಯನ್ನು ವಿವರಿಸುವಾಗ ಆತನು ರಾಜಸತ್ತಾವಾದಿಯೆಂದು ಕಂಡು ಬರುತ್ತದೆ. "ಗುರುವುಯಿಲ್ಲದ ಮಠವು। ಹಿರಿಯರಿಲ್ಲದಮನೆಯು। ಅರಸಿಲ್ಲದೂರು ಇವು ಮೂರು ನುಲಿ ಹರಿದ। ಹೊರಸಿನಂತಕ್ಕು ಸರ್ವಜ್ಞ॥ ಸರ್ವಜ್ಞನು ಹೇಳುವದೇನಂದರೆ ಜಾಣರಾದವರು ಅರಸನೊಲ್ಮೆಗೆ ಪಾತ್ರರಾಗಿ ಸುಖಬಡಬೇಕು. ಅರಸನ ಕೋಪಕ್ಕೆ ಗುರಿಯಾದವರಿಗೆ ಸರ್ವನಾಶವು ಸಂಭವಿಸುವುದು "ಅರಸೊಲಿದು ನಡಿಸಿದರೆ ಸಿರಿಯಕ್ಕು ದೆಸೆಯಕ್ಕು। ಕರಿತುರುಗ ಬಲವು ಸಿರಿದಕ್ಕು ಮುನಿದರೆ। ಕರನಾಶವಕ್ಕು ಸರ್ವಜ್ಞ॥ ಅರಸನ ಓಲಗವು ಹೇಗಿರಬೇಕು? ಆ ಓಲಗದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಸರ್ವಜ್ಞನು ಅಪ್ಪಣೆಕೊಡಿಸಿರುವದೇನಂದರೆ—"ಬಂದವರ ಕರೆಯಿಸನು। ನಿಂದವರ ನುಡಿಯಿಸನು। ಹಂದಿಯು ಗಜವು ಸರಿಯೆಂಬ ನೋಲಗವು ಎಂದಿಗೂ ಬೇಡ ಸರ್ವಜ್ಞ॥ ಮತ್ತು "ಅರಸನೋಲಗದಲ್ಲಿ। ಸರಸವಾಡಲು ಬೇಡ। ಸರಸ ನಿಂದೆಯಲಿ ಇರಬೇಡ ಓರ್ವರ। ಭರವಸವು ಬೇಡ ಸರ್ವಜ್ಞ॥ ತನ್ನ ರಾಜನ ಸಲುವಾಗಿ ಅರ್ಥಾತ್ ರಾಜ್ಯದಸಲುವಾಗಿ ಮಡಿಯುವದೇ ಶ್ರೇಷ್ಠವಾದ ಕರ್ತವ್ಯವೆಂಬ ಬಗ್ಗೆ ಸರ್ವಜ್ಞನು ಹೇಳಿರುವದೇನಂದರೆ—"ಅಡಿಯ ಮುಂದಿಡೆ ಸ್ವರ್ಗ।

ಆಡಿಯು ಹಿಂದಿಡೆ ನರಕ। ಅಡಿಗಸ್ವರ್ಮೋಕ್ಷ ಫಲ ಸ್ವಾಮಿ ಕಾರ್ಯಕ್ಕೆ। ಮಾಡಿಯಲೇಬೇಕು ಸರ್ವಜ್ಞ॥

ಸುಭಾಷಿತಕಾರರು ಸಜ್ಜನರೆಂದರೆಂಥವರು? ಅವರ ಸಂಗವೆಂಥ ಹದು? ದುರ್ಜನರು ಹೇಗಿರುತ್ತಾರೆ? ಅವರ ಸಂಗದಿಂದೇನು ನಷ್ಟ ವಾಗುತ್ತದೆಂಬ ಬಗ್ಗೆ ವಿವರಿಸಿದಂತೆ ಸರ್ವಜ್ಞನಾದರೂ ಸಾಮಾನ್ಯ ಉದಾಹರಣೆಗಳನ್ನು ಕೊಟ್ಟು ಪಂಡಿತ ಪಾಮರರ ಮನಸ್ಸಿನ ಮೇಲೆ ಬಹು ಚೆನ್ನಾಗಿ ಬಿಂಬಿಸುವಂತೆ ಹೇಳಿದ್ದಾನೆ. ಸಜ್ಜನರ ವಿಷಯವಾಗಿ ಹೇಳಿ ರುವದೇನಂದರೆ "ಸತ್ಯವಂತರ ನೀನು ಸತ್ತರೆಂದೆನಬೇಡ। ಹೆತ್ತಮ್ಮ ಮಗನ ಕರೆವಂತೆ ನಿನ್ನನವ। ರೆತ್ತಿಕೊಂಬುವರು ಸರ್ವಜ್ಞ॥" ಮತ್ತು ಸತ್ಯರಾ ನುಡಿ ತೀರ್ಥ ನಿತ್ಯರಾ ನಡೆ ತೀರ್ಥ! ಉತ್ತಮರ ಸಂಗವದು ತೀರ್ಥ ಹರಿವನೀ। ರೆತ್ತಣದ ತೀರ್ಥ ಸರ್ವಜ್ಞ॥ ಇದಲ್ಲದೆ "ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ। ದುರ್ಜನರ ಸಂಗದೊಡನಾಟ ಬಚ್ಚ ಲಿನ ರೊಜ್ಜಿನಂತಿಹುದು ಸರ್ವಜ್ಞ॥ ಮತ್ತು ಮಾನಹೀನರ ಸಂಗ। ವೇನು ಕೊಟ್ಟರೂ ಬೇಡ। ಮಾನವುಳ್ಳವರ ಸಂಗ ತಾ ಸಕ್ಕರೆ। ಜೇನು ಸವಿ ದಂತೆ ಸರ್ವಜ್ಞ॥

ವಿಧಿಯು ಹರಿಹರಬ್ರಹ್ಮಾದಿಗಳನ್ನು ಬಿಟ್ಟಿಲ್ಲ. ಮನುಷ್ಯರ ಪಾಡೇನು? ವಿಧಿಯು ಎಲ್ಲಿ ಹೊಕ್ಕರೂ ಬಿಡದು. ನಾವು ಹಿಂದೆ ಮಾಡಿದ ಕರ್ಮ ಫಲವನ್ನು ಈ ಜನ್ಮದಲ್ಲಿ ಭೋಗಿಸಿಯೇ, ತೀರಬೇಕು. "ಬಾರದು ಬಪ್ಪದು, ಬಪ್ಪುದು ತಪ್ಪದು ಕೂಡಲಸಂಗಮದೇವಾ." ಎಂಬಂತೆ ಸರ್ವರೂ ಪಾಲಿಗೆ ಬಂದದ್ದನ್ನು ಉಂಡೇ ತೀರಬೇಕು. ತಾನೊಂದು ಮಾಡ ಹೋದರೆ ವಿಧಿಯೊಂದು ಮಾಡುವದು. ಇತ್ಯಾದಿ ವಿಷಯಗ ವಿವೇಚನೆಯನ್ನು ಸರ್ವಜ್ಞನು ಮಾಡಿರುವದನ್ನು ನೋಡಿದರೆ ಆತನು ದೈವ ವಾದಿಯಾಗಿದ್ದನೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಹರಿಹರ ಬ್ರಹ್ಮಾದಿ ಗಳಿಗೆ ವಿಧಿಯು ಬಿಟ್ಟಿಲ್ಲವೆಂದು ಹೇಳುವಾಗ "ಹರಿಯು ಕೋಡಗನಾದ ಪರಬೊಮ್ಮ ಕಾಗ್ಯಾದ। ಮೆರೆದಿರ್ದ ಶಿವನು ನರಿಯಾದ ನಿಂತೆಂದು। ಬರೆದಿಟ್ಟಾರು ಸರ್ವಜ್ಞ॥ ವಿಧಿವಶದಿಂದ ಪಾಂಡವರಿಗೆ ಎಂತೆಂಥ ಕಷ್ಟ ಗಳು ಬಂದಿರಲು ಮಿಕ್ಕವರ ಪಾಡೇನು? ಎಂದು ಹೇಳುವಾಗ "ಅಂತಿರ್ದರಿಂತಿರ್ದರೆಂತಿರ್ದರೆನಬೇಡ। ಕುಂತಿಯು ಸುತರು ತಿರಿದುಣಲು ಮಿಕ್ಕವರು। ಎಂತಿರ್ದಡೇನು ಸರ್ವಜ್ಞ॥ "ಯಾರೇನು ಮಾಡುವರು



ಯಾರಿಂದಲೇನಹುದು ಪೂರ್ವ ಜನ್ಮದ ಕರ್ಮ ವಿಧಿ ಬೆನ್ನ ಬಿಡದು" ಎಂದು ಪುರಂದರದಾಸರು ಹಾಡಿಕೊಂಡಂತೆ ಸರ್ವಜ್ಞನು "ಗಟ್ಟದಲಿ ಬೆಟ್ಟದಲಿ ಇಟ್ಟೆಡೆಯು ಕಿರುಬಿನಲಿ। ಕೆಟ್ಟೋಡಿ ಬಂದೆನೆನಬೇಡ ವಿಧಿ ಕಾಣ। ದಷ್ಟ ದಿಕ್ಕುಂಟೆ ಸರ್ವಜ್ಞ॥ ಬಂದದ್ದನ್ನು ಉಣಲಾರೆನೆಂದರೆ ನಡೆಯುದೆಂದು ಹೇಳುವಾಗ "ಹಿಂದೆ ಮಾಡಿದ ಕರ್ಮ। ವೆಂದಿಗೂ ಬೆಂಬಿಡದು। ಬಂದ ಭೋಗವನು ತಿಂದು ತೀರಲೇಬೇಕು। ನೊಂದೆ ನೆನಬೇಡ ಸರ್ವಜ್ಞ॥ ನಾನೊಂದು ಮಾಡಿದರೆ ತಾನೊಂದು ಆಗುವ ದೆಂದು ಹೇಳುವಲ್ಲಿ "ಆನೊಂದು ಮಾಡುವೆನು। ಆನೊಂದು ಹೊಡು ವೆನು। ಆನೊಂದು ಮಾಡಲಾನಂದವೆನಲು ಶಿವ। ತಾನೊಂದು ಮಾಳ್ಪ ಸರ್ವಜ್ಞ॥ ವಿಧಿಯ ಕಾಟವನ್ನು ತಪ್ಪಿಸಲು ಉತ್ತಮೋಪಾಯವಾವುದೆಂಬ ಬಗ್ಗೆ ಸರ್ವಜ್ಞನು ಹೀಗೆ ಹೇಳಿರುವನು "ಬಂದುದನೆ ತಾ ಹಾಸಿ ಬಂದು ದನೆ ತಾ ಹೊದೆದು। ಬಂದುದನೆಲ್ಲ ನುಂಗಿದರೆ ವಿಧಿಕರ್ಮ। ನಂದಿ ಹೋಗುವದು ಸರ್ವಜ್ಞ॥

ಸರ್ವಜ್ಞನು ಯಾವ ಜಾತಿಯವರನ್ನೂ ದ್ವೇಷದಿಂದ ದೂಷಿಸುವ ದಿಲ್ಲ. ಆಯಾಯ ಜಾತಿಯವರಲ್ಲಿ ಕಂಡುಬರುವ ಸದ್ಗುಣಗಳನ್ನು ಹೊಗಳಿ ಬಾಹ್ಯಾಚಾರ ಅನಾಚಾರಗಳನ್ನು ಖಂಡಿಸಿರುವನು. ಬ್ರಾಹ್ಮಣರ ಗುಣ ಪ್ರಶಂಸೆ ಮಾಡುವಲ್ಲಿ "ಉತ್ತಮರು ಬ್ರಾಹ್ಮಣರು ಸತ್ಯದಲಿ ನಡೆಯು ವರು। ಉತ್ತಮರಧಮರೆನಬೇಡ ಅವರೊಂದು। ಮುತ್ತಿನಂತಿಹರು ಸರ್ವಜ್ಞ॥ ಮತ್ತು "ವಿಪ್ರರಿಂದಲೆ ವಿದ್ಯೆ ವಿಪ್ರರಿಂದಲೆ ಬುದ್ಧಿ। ವಿಪ್ರನಿಜವಿಪ್ರರಿಲ್ಲ ದಿರೀ ಜಗವು। ಕ್ಷಿಪ್ರದಲಿ ಕೆಡಗು ಸರ್ವಜ್ಞ॥ ಆದರೆ ಬ್ರಾಹ್ಮಣರ ಬಾಹ್ಯ ಜ್ಞಾನದ ಹೆಮ್ಮೆಯನ್ನೂ ಬಾಹ್ಯಾಡಂಬರವನ್ನೂ ಸರ್ವಜ್ಞನು ಈ ರೀತಿ ಯಾಗಿ ಖಂಡಿಸಿದ್ದಾನೆ. "ವೇದವೇ ಮಿಗಿಲೆಂದು। ವಾದವನು ಮಾಡು ವಿರಿ। ವೇದದಲೇನು ಅರಿದಿಹುದು ಅನುಭವಿಯ। ವೇದವೇ ವೇದ ಸರ್ವಜ್ಞ॥" ರಾಮಾಯಣ ಮಹಾಭಾರತ ಕಥೆಗಳು ಪುಣ್ಯಕರವಾದ ವುಗಳಲ್ಲವೆಂಬ ಬಗ್ಗೆ ಸರ್ವಜ್ಞನು "ಹಾದರದ ಕಥೆಯನ್ನು। ಸೋದ ರರ ವಧೆಯನ್ನು। ಆದರಿಸಿ ಪುಣ್ಯಕಥೆಯೆಂದು ಕೇಳುವರು। ಮಾದಿಗರು ನೋಡ ಸರ್ವಜ್ಞ॥ ತೀರ್ಥ ಕ್ಷೇತ್ರಗಳಲ್ಲಿ ಮುಳು ಮುಳುಗಿ ಎದ್ದರೆ ಮೋಕ್ಷ ಬರುತ್ತದೆಂದು ಬ್ರಾಹ್ಮಣರು ಹೇಳುವದನ್ನು ಸರ್ವಜ್ಞನು ಖಂಡಿಸಿ ದ್ದಾನೆ. "ನೀರು ಮುಳುಗಿದ ವಿಪ್ರ। ಸ್ವರ್ಗ ಹಾರುವೊಡೆ। ಹಾರುವನಂತೆ ಮುಳುಗಿಪ್ಪ ಕಪ್ಪೆ ತಾ। ಹಾರದೇಕೆಂದ ಸರ್ವಜ್ಞ॥

ಅದೇ ಮೇರೆಗೆ ಭಸ್ಮ. ಶ್ರೀ ಗಂಧ, ಜನಿವಾರ ಮೊದಲಾದ ಬಾಹ್ಯ ಮೊದಲಾದ ಚಿನ್ನಗಳನ್ನು ಧರಿಸುವದರಿಂದ ಸ್ವರ್ಗಪ್ರಾಪ್ತವಾಗುತ್ತದೆಂಬ ಬ್ರಾಹ್ಮಣರ ಮತವನ್ನು ಸರ್ವಜ್ಞನು ನಿರಾಕರಿಸಿದ್ದಾನೆ. "ಮುಟ್ಟಿ ಶ್ರೀಗಂಧವನು ಇಟ್ಟು ತಾ ನೊಸಲೊಳಗೆ। ನೆಟ್ಟನೆ ಸ್ವರ್ಗಪಡೆವೊಡೆ ಸಾಣೆಕಲ್। ಕೆಟ್ಟುಕೇಡೇನು ಸರ್ವಜ್ಞ॥ ಮತ್ತು "ಸುಟ್ಟುಬೂದಿಯ ತಂದು। ದಟ್ಟವಾಗಿಯೆ ಬಡೆದು। ಶ್ರೇಷ್ಠಸ್ವರ್ಗವನು ಅಡರುವೊಡೆ ಕತ್ತೆ ತಾ। ಕೆಟ್ಟ ಕೇಡೇನು ಸರ್ವಜ್ಞ॥ ಮತ್ತು ಮೂರೆಳೆಯ ತೊಟ್ಟಾತ। ಹಾರುವೊಡೆ ಸ್ವರ್ಗಕ್ಕೆ। ನೂರೆಂಟು ಎಳೆಯ ಕೌಪಿಯನು ಹೊದ್ದಾತ। ಹಾರನೇಕಯ್ಯ ಸರ್ವಜ್ಞ॥ ಯಜ್ಞದಲ್ಲಿ ಆಡನ್ನು ಬಲಿಕೊಟ್ಟು ಅದರ ಮಾಂಸ ಭಕ್ಷಣದಿಂದ ಸ್ವರ್ಗ ಸಿಗುವದೆಂದು ವಿಪ್ರರು ಹೇಳುವ ಮಾತನ್ನು ಸರ್ವಜ್ಞನು ಖಂಡಿಸಿದ್ದಾನೆ. "ಒಂದಾಡ ತಿಂಬಾತ। ಹೊಂದಿದೊಡೆ ಸ್ವರ್ಗವನು। ಎಂದೆಂದು ಅಜನ ಕಡಿತಿಂಬ ಕಟಗತಾ। ನಿಂದ್ರನೇಕಾಗ ಸರ್ವಜ್ಞ॥

ಬ್ರಾಹ್ಮಣರು ತಮ್ಮ ಕುಲವೇ ಶ್ರೇಷ್ಠವೆಂದು ಹೇಳುವ ಮಾತನ್ನು ಖಂಡಿಸಿ ಎಲ್ಲ ಕುಲದವರೂ ಒಂದೇ ಸ್ಥಾನದಲ್ಲಿ ಹುಟ್ಟುವದರಿಂದ ಎಲ್ಲರೂ ಸರಿಸಮಾನರೆಂದು ಸಾರಿ ಪರಮಾತ್ಮನ ಕೃಪೆಗೆ ಪಾತ್ರರಾದವರೇ ಶ್ರೇಷ್ಠ ಕುಲದವರೆಂದು ಸರ್ವಜ್ಞನು ಶೃತಪಡಿಸಿದ್ದಾನೆ. ಉದಾಹರಣಾರ್ಥ "ಮುಟ್ಟಾದ ಹೊಲೆಯೊಳಗೆ ಹುಟ್ಟಿಹುದು ಜಗವೆಲ್ಲ। ಮುಟ್ಟಬೇಡೆಂದು ತೊಲಗುವಾ ಹಾರುವನು। ಹುಟ್ಟಿರುವನೆಲ್ಲಿ ಸರ್ವಜ್ಞ॥ ಮತ್ತು "ಹಸಿವು ತೃಷೆ ನಿದ್ರೆಗಳು। ವಿಷಯು ಮೈಥುನ ಬಯಕೆ। ಪಶು ಪಕ್ಷಿ ನರಗೆ ಸಮನಿರಲು ಕುಲವೆಂಬ। ಘಸಣೆಯೆತ್ತಣದು ಸರ್ವಜ್ಞ॥ ಮತ್ತು, "ಕೂಳಿಂದೆ ಕುಲಬೆಳೆದು। ಬಾಳಿಂದೆ ಬಲಬೆಳೆದು। ಕೂಳು ನೀರುಗಳ ಕಳೆದರೆ ಕುಲಗಳ। ಕೇಳಬೇಡೆಂದ ಸರ್ವಜ್ಞ॥ ಇದಲ್ಲದೆ "ನಡೆಯುದೊಂದೇ ಭೂಮಿ। ಕುಡಿಯುದೊಂದೇ ನೀರು। ಸುಡುವಗ್ನಿಯೊಂದೆಯಿರುತಿರೆ ಕುಲಗೋತ್ರ। ನಡುವೆಯೆತ್ತಣದು ಸರ್ವಜ್ಞ॥ ಇದಲ್ಲದೆ "ಅವಯುವಗಳೆಲ್ಲರಿಗೆ। ಸವನಾಗಿಯಿರುತಿರಲು। ಭವಿಭಕ್ತಶ್ವಪಚ ಶೂದ್ರರುಯೆಂತೆಂಬ। ಕವನವೆತ್ತಣದು ಸರ್ವಜ್ಞ॥ ಮತ್ತು "ಧಾತು ಏಳನು ಕಲೆತು ಭೂತಪಂಚಕವಾಗಿ। ಓತುದೇಹವನು ಧರಿಸಿರ್ದ ಮನುಜರ್ಗೆ। ಜಾತಿಯೆತ್ತಣದು ಸರ್ವಜ್ಞ. ಮತ್ತು, "ಜಾತಿಹೀನರ ಮನೆಯುಜ್ಯೋತಿ ತಾಹೀನವೇ? ಜಾತಿವಿಜಾತಿಯೆನಬೇಡ ದೇವನೊಲಿ। ದಾತನೇ ಜಾತ ಸರ್ವಜ್ಞ॥ ಮತ್ತು "ಯಾತರದ



ಹೂವೇನು ನಾತರದು ಸಾಲದೇ?। ಜಾತಿ ವಿಜಾತಿಯೆನಬೇಡ ದೇವನೊಲಿ। ದಾತನೇ ಜಾತಸರ್ವಜ್ಞ. ಜಾತಿ ನಿರಸನ ವಿಷಯದಲ್ಲಿ ಸರ್ವಜ್ಞನು ಶಿವಶರಣರ ಮಾರ್ಗವನ್ನೇ ಅನುಸರಿಸಿದ್ದಾನೆ.

ಬ್ರಾಹ್ಮಣರ ಗುಣ ಸ್ವಭಾವವನ್ನು ಕುರಿತು ಸರ್ವಜ್ಞನು ಹೀಗೆ ಹೇಳಿದ್ದಾನೆ. "ಕೊಟ್ಟಹರೆ ಹಾರುವರು। ಕುಟ್ಟುವರು ಅವರಂತೆ। ಬಿಟ್ಟರೆ ನೋಡಿ ನುಡಿಸರು ಹಾರುವರು। ಕೆಟ್ಟ ನೋಡೆಂದ ಸರ್ವಜ್ಞ। ಮತ್ತು "ಹಾರುವರ ನಂಬಿದವ। ರಾರಾರು ಉಳಿದಿಹರು?। ಹಾರುವರ ನಂಬಿ ಕೆಟ್ಟರು ಭೂಪರಿ। ನ್ನಾರು ಕೆಡರಯ್ಯ ಸರ್ವಜ್ಞ॥ ಮತ್ತು "ಹೆಂಡಕ್ಕೆ ಹೊಲಿಯನು। ಕಂಡಕ್ಕೆ ಕಟುಗನು। ದಂಡಕ್ಕೆ ಕೃಷಿಕ ಹಾರುವನು ತಂದು ತಾ। ಪಿಂಡಕ್ಕೆ ಇಡುವ ಸರ್ವಜ್ಞ॥

ಜೈನ ಧರ್ಮದ ಮೇಲ್ಮೆಯನ್ನು ಸರ್ವಜ್ಞನು ತಲೆಯ ಮೇಲೆ ಹೊತ್ತು ಕೊಂಡಾಡಿದ್ದಾನೆ. ಆದರೆ ಅದರಲ್ಲಿ ತೋರಿಬರುವ ದೋಷಗಳನ್ನು ತೋರ್ಪಡಿಸದೆ ಬಿಟ್ಟಿಲ್ಲ. ಆತನು ಜೈನ ಧರ್ಮದ ಹೆಚ್ಚಳದ ಬಗ್ಗೆ "ಕೊಲುವ ಧರ್ಮವನೊಯ್ದು। ಒಲೆಯೊಳಗೆ ಇಕ್ಕುವಾ। ಕೊಲಲಾಗದೆಂಬ ಜೈನನ ಮತವೆನ್ನ। ತಲೆಯ ಮೇಲಿರಲಿ ಸರ್ವಜ್ಞ॥ ಆದರೆ ಪ್ರಪಂಚದಲ್ಲಿ ಮನುಷ್ಯನು ತನಗೆ ಹಿಂಸೆ ಪಡಿಸುವ ಪ್ರಾಣಿಗಳನ್ನು ಕೊಲ್ಲಬೇಕಾಗುತ್ತದೆ. ಎಷ್ಟೋ ಪ್ರಾಣಿಗಳನ್ನು ಕೊಂದು ತಿಂದು, ಜೀವಿಸಬೇಕಾಗುತ್ತದೆ. ಹೀಗಿರಲು ಯಾವ ಪ್ರಾಣಿಗಳನ್ನೂ ಕೊಲ್ಲಬಾರದೆಂದು ಅಹಿಂಸೆಯ ಅತಿರೇಕವನ್ನು ಜೈನಧರ್ಮವು ಹೇಳುವದನ್ನು ಸರ್ವಜ್ಞನು ಖಂಡಿಸಿದ್ದಾನೆ. ಹ್ಯಾಗಂದರೆ "ಹೇನು ಕೂರಿಗಳನ್ನು ತಾನಾಗಿ ಜಿನ ಕೊಲ್ಲ। ಸ್ಥಾನಪಲ್ಲಟವ ಮಾಡಿರ್ದೊಡಾ ಮೇಲೆ। ಏನಾದುದರಿಯ ಸರ್ವಜ್ಞ॥ ಮತ್ತು "ಎಂತು ಜೀವಿಯ ಕೊಲ್ಲ। ದಂತಿಹುದು ಜಿನಧರ್ಮ। ಜಂತುಗಳ ಹೆತ್ತು ಮರಳಿಯುವನು ಸಲುಹಿ। ದಂತವನೆ ಜೈನ ಸರ್ವಜ್ಞ॥ "ಜೀವೋ ಜೀವಸ್ಯ ಜೀವನಂ" ಎಂಬ ಮಾತನ್ನು ಸರ್ವಜ್ಞನು "ಜೀವಿ ಜೀವಿಯ ತಿಂದು ಜೀವಿಪುದು ಜಗವೆಲ್ಲ। ಜೀವದಿಂ ಹೊರಗೆ ತಿಂಬರನಾ ಕಾಣೆ। ಜೀವವೀ ಜಗವು ಸರ್ವಜ್ಞ॥ ಮತ್ತು "ಚರ ಜೀವವನು ತಿಂದು। ಚರಿಸುವದು ಜಗವರ್ಥ। ಚರಿಸದ ಜೀವಿಗಳ ತಿಂದು ಜಗವರ್ಥ। ಚರಿಸುವದು ನೋಡ ಸರ್ವಜ್ಞ॥ ಮತ್ತು "ಜೀವಿ ಜೀವವ ತಿಂದು। ಜೀವಿಗಳ

ಹುಟ್ಟಿಸಿರೆ। ಸಾವು ಎಲ್ಲಿಯದು ಸ್ವಾರ್ಥವೆ ಜಗದೊಳಗೆ। ಸಾವೆಂದು ತಿಳಿಯೊ ಸರ್ವಜ್ಞ

ಭರ್ತೃಹರಿಯು ನೀತಿ ಶತಕದಲ್ಲಿ "ಶಾಸ್ತ್ರದಲ್ಲಿ ಎಲ್ಲಕ್ಕೂ ಔಷಧ ವುಂಟು. ಆದರೆ ಮೂರ್ಖರಿಗೆ ಔಷಧವೇ ಇಲ್ಲ. ಎಂಬುದಾಗಿಯೂ ಮೂರ್ಖಜನರ ಚಿತ್ತವನ್ನು ಸಂತಸಗೊಳಿಸುವದು ಎಂಥವರಿಗೂ ಶಕ್ಯ ವಿಲ್ಲವೆಂಬುದಾಗಿಯೂ ಹೇಳಿರುವಂತೆ ಸರ್ವಜ್ಞನಾದರೂ ಮೂರ್ಖರು ಹೇಗಿರುವರು? ಅವರೊಡನೆ ವ್ಯವಹಾರದಲ್ಲಿ ಹೇಗೆ ವರ್ತಿಸಬೇಕು? ಎಂಬ ಬಗ್ಗೆ ನಮ್ಮೆಲ್ಲರಿಗೆ ಉಪದೇಶ ಮಾಡಿದ್ದಾನೆ. "ಮೂರ್ಖಂಗೆ ಬುದ್ಧಿಯನು ನೂರ್ಕಾಲ ಹೇಳಿದರೆ। ಭೋರ್ಕಲ್ಲಮೇಲೆ ಮಳೆಗರೆದರಾ ಕಲ್ಲು। ನೀರ್ಕುಡಿಯ ಬಹುದೆ ಸರ್ವಜ್ಞ॥ ಮತ್ತು "ಆರು ಬೆಟ್ಟವನೊಬ್ಬ। ಹಾರಬಹುದೆಂದರೆ। ಹಾರಬಹುದೆಂದು ಎನಬೇಕು। ಮೂರ್ಖನೊಡ ಹೋರಾಟ ಸಲ್ಲ ಸರ್ವಜ್ಞ॥ ಮತ್ತು "ಒಂದನ್ನು ಎರಡೆಂಬ। ಹಂದಿ ಹೆಬ್ಬುಲಿಯೆಂಬ। ನಿಂದ ದೇಗುಲವ ಮರನೆಂಬ ಮೂರ್ಖನು। ಅಂದಂತೆ ಅನ್ನಿ ಸರ್ವಜ್ಞ॥

ವ್ಯವಹಾರದಲ್ಲಿ ಎಂತೆಂಥ ವಸ್ತುಗಳು ಅಥವಾ ಕಾರ್ಯಗಳು ಲೇಸೆಂಬದನ್ನು ಸರ್ವಜ್ಞನು ಮನೋರಂಜಕವಾಗಿ ಹೇಳುತ್ತಾನೆ. ಅಂಥ ಕೆಲವು ಸಂಕೀರ್ಣ ಪದ್ಯಗಳನ್ನು ಇದರಡಿಯಲ್ಲಿ ಕೊಡಲಾಗಿದೆ. ಊಟಕ್ಕೆ ಯಾವುದು ಲೇಸೆಂಬುವಲ್ಲಿ "ಹರಕು ಹೋಳಿಗೆ ಲೇಸು! ಮುರಕ ಹಪ್ಪಳ ಲೇಸು। ಕುರು ಕುರು ಕಡಲೆ ಬಲು ಲೇಸು ಪಾಯಸದ। ಚುರುಕು ಲೇಸೆಂದ ಸರ್ವಜ್ಞ॥ ನಾವು ಒಬ್ಬರ ಹಂಗಿನೊಳಗಿರಬಾರದೆಂಬುವಲ್ಲಿ "ಹಂಗಿನರ ಮನೆಗಿಂತ' ವಿಂಗಡದ ಗುಡಿ ಲೇಸು. ಭಂಗಗೆಟ್ಟುಂಬ ಬಿಸಿಯನ್ನಕಿಂದಲೂ। ತಂಗುಳುವೆ ಲೇಸು ಸರ್ವಜ್ಞ॥ ಮತ್ತು "ಹಂಗಿನಾ ಹಾಲಿನಿಂ। ದಂಬಲಿಯು ತಿಳಿಲೇಸು। ಭಂಗಗೆಟ್ಟುಂಬ ಬಿಸಿಯಿಂದ ತಿರವರ। ಸಂಗವೇಲೇಸು ಸರ್ವಜ್ಞ॥ ಸುದೈವಿಗಳು ಮಣ್ಣು ಹಿಡಿದರೆ ಚಿನ್ನವಾಗುವದೆಂದು ಹೇಳುವಲ್ಲಿ "ಪುಣ್ಯ ತನಗುಳ್ಳನಕ। ಮಣ್ಣೆಯು ಪಿರಿದಕ್ಕು। ಹೆಣ್ಣಿದ ಕಾರ್ಯ ಫಲವಕ್ಕು ಹಿಡಿದಿರ್ದ। ಮಣ್ಣು ಹೊನ್ನಕು ಸರ್ವಜ್ಞ॥ ಸಂಪತ್ತು ಇರುವತನಕ ಎಲ್ಲ ನೆಟ್ಟಗೆ ಅದು ಹೋದ ಮರುದಿವಸ ಅವನನ್ನು ಯಾರೂ ಕೇಳುವದಿಲ್ಲವೆಂದು ಹೇಳುವಾಗ "ಸಿರಿಯುಣ್ಣನುಳ್ಳನಕ। ಹಿರಿಯಣ್ಣನೆನಿಸಿಪ್ಪ। ಸಿರಿಯಣ್ಣಹೋದ ಮರುದಿನ



ಹಿರಿಯಣ್ಣ। ನರಿಯಣ್ಣನೆಂದ ಸರ್ವಜ್ಞ॥ ಕಂಡದ್ದನ್ನಾಡಿದರೆ ಕೆಂಡದಂತಹ ಸಿಟ್ಟು ಎಂಬದನ್ನು ಹೇಳುವಾಗ "ಕಂಡುದನು ಆಡೆ ಭೂಮಂಡಲವು ಮುನಿಯುವದು। ಕೊಂಡಾಡುತಿಚ್ಚೆ ನುಡಿದರೆ ಜಗವೆಲ್ಲ। ಮುಂಡಾಡುತಿಹುದು ಸರ್ವಜ್ಞ॥ ಜಗತ್ತಿನಲ್ಲಿ ಉತ್ತಮರು ಹಾದಿ ತಪ್ಪಿ ನಡೆದರೆ ಲೋಕಪಾಟ ಸಾಗದೆಂದು ಹೇಳುವಲ್ಲಿ "ಸತ್ಯರೂ ಹುಸಿಯುವಡೆ। ಒತ್ತಿಹರಿದಡೆ ಶರಧಿ। ಉತ್ತಮರು ತಪ್ಪಿ ನಡೆದರೆ ಲೋಕವಿ। ನ್ನೆತ್ತ ಸಾರುವದು ಸರ್ವಜ್ಞ॥ ಕಣ್ಣು ನಾಲಿಗೆ ಮನಸ್ಸುಗಳನ್ನು ಮನುಷ್ಯನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಬೇಕೆಂಬ ವಿಷಯದಲ್ಲಿ "ಕಣ್ಣಿನಿಂದಲೆ ಪುಣ್ಯ। ಕಣ್ಣಿನಿಂದಲೆ ಪಾಪ। ಕಣ್ಣಿನಿಂದಿಹವು ಪರವಕ್ಕು ಲೋಕಕ್ಕೆ। ಕಣ್ಣೆ ಕಾರಣವು ಸರ್ವಜ್ಞ॥ ಮತ್ತು "ಕಣ್ಣು ನಾಲಿಗೆ ಮನವು। ತನ್ನವೆಂದೆನಬೇಡ। ಅನ್ಯರು ಕೊಂದರೆನಬೇಡ ಇವು ಮೂರು। ತನ್ನ ಕೊಲ್ಲುವವು. ಸರ್ವಜ್ಞ॥ ಮನುಷ್ಯನು ಉದ್ಯೋಗದಿಂದಲೇ ಜೀವಿಸಬೇಕು ಎಂದು ಹೇಳುವಾಗ "ಉದ್ಯೋಗವುಳ್ಳನಕ। ಹೊದ್ದುವದು ಸಿರಿಬಂದು ಉದ್ಯೋಗವಿಲ್ಲದಿರುವನಾ ಕರದೊಳ। ಗಿದ್ದುದು ಪೋಕು ಸರ್ವಜ್ಞ॥ ಮನುಷ್ಯನು ಸುಖದಿಂದ ಬಾಳಬೇಕಾದರೆ ಯಾವ ಉದ್ಯೋಗಳನ್ನು ಮಾಡಬೇಕೆಂದು ಹೇಳುವಾಗ "ಕೋಟಿ ವಿದ್ಯೆಗಳಲ್ಲಿ। ಮೇಟಿ ವಿದ್ಯೆಯೆ ಮೇಲು। ಮೇಟಿಯಿಂ ರಾಟೆ ನಡೆದುದಲ್ಲದೆ ದೇಶ। ದಾಟವೇ ಕೆಡಗು ಸರ್ವಜ್ಞ॥ ಮ. ಗಾಂಧಿಯವರು "ರಾಟೆಯಿಂದಲೇ ರಾಷ್ಟ್ರದ ಸ್ವಾತಂತ್ರ್ಯ" ವೆಂದು ಈಗ ಸಾರುತ್ತಿರುವಂತೆ ಸರ್ವಜ್ಞನು ರಾಟೆಯ ಮಹತ್ವವನ್ನು ಹಿಂದಕ್ಕೆ ತೋರಿಸಿಕೊಟ್ಟಿದ್ದಾನೆ. ಮಾತಿನ ಪ್ರಸಂಗಗಳು ವಿಕೋಪಕ್ಕೆ ಹೋದಾಗ ಜಾಣರು ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ "ಮಾತು ಬಲ್ಲವ ತಾನು ಸೋತು ಹೋಹುದು ಲೇಸು। ಮಾತಿಂಗೆ ಮಾತು ಮಥಿಸಲ್ಕೆ ವಿಧಿ ಬಂದು। ಆತು ಕೊಂಡಿಹುದು ಸರ್ವಜ್ಞ॥ ಜಾಣರು ಸಿರಿಯನ್ನು ನಚ್ಚಬಾರದೆಂದು ಹೇಳುವಾಗ "ತುಂಬಿದಾಕೆರೆ ಭಾವಿ। ತುಂಬಿದಂತಿರುವುದೇ?। ನಂಬಿರಬೇಡ ಲಕ್ಷ್ಮಿಯನು ಬಡತನವು। ಬೆಂಬಿಡದೆ ಬಹುದು ಸರ್ವಜ್ಞ॥ ಸಾಲಗೊಯ್ಕರ ಬೊಗಳಿಯನ್ನು ಸರ್ವಜ್ಞನು ಬಹು ಹಾಸ್ಯಕರವಾಗಿ ವಿವರಿಸಿದ್ದಾನೆ. "ಸಾಲವನು ತರುವಾಗ। ಹಾಲೋಗರುಂಡಂತೆ। ಸಾಲಿಗನು ಬಂದು ಕೇಳಿದರೆ ಕುಂಡಿಗೆ। ಚೇಳು ಕಡಿದಂತೆ ಸರ್ವಜ್ಞ॥ ಉದ್ದರಿಯಿಂದ ಸಾಮಾನುಗಳನ್ನು ಕೊಡುವ ಅಂಗಡಿಕಾರನಿಗೆ ಸರ್ವಜ್ಞನು ಈ ಪ್ರಕಾರ ಬುದ್ಧಿ ಹೇಳಿದ್ದಾನೆ. "ಉದ್ದರಿಯ

ಕೊಟ್ಟಾತ. ಹದ್ದಾದ ಹಾಹಾವ। ಎದ್ದೆದ್ದು ಬರುವ ನಾಯೂದ ವೈಲಾರ। ಗೊಗ್ಗಯ್ಯನಾದ ಸರ್ವಜ್ಞ॥ ರೂಢಿಯಲ್ಲಿ ಉತ್ತಮ ಮಧ್ಯಮ ಕನಿಷ್ಟರೆಂದು ಯಾರಿಗೆ ಅನ್ನಬೇಕು ಎಂಬುವಲ್ಲಿ "ಆಡದೆ ಮಾಡುವನು। ರೂಢಿಯೊಳಗುತ್ತಮನು। ಆಡಿ ಮಾಡುವನು. ಮಧ್ಯಮನು ಅಧಮತಾ। ನಾಡಿ ಮಾಡದವ ಸರ್ವಜ್ಞ॥ ನಮಗೆ ವೈರಿಗಳಾರೆಂದು ಹೇಳುವಲ್ಲಿ "ವಿದ್ಯೆವೀಯದ ತಂದೆ। ಬುದ್ಧಿ ಕೊಡದಾ ಗುರುವು। ಬಿದ್ದಿರಲು ಬಂದು ನೋಡದಾ ತಾಯಿ। ಶುದ್ಧ ವೈರಿಗಳು ಸರ್ವಜ್ಞ॥ ಅಭಾವ ವೈರಾಗ್ಯದ ಒಂದು ಉದಾಹರಣೆಯನ್ನು ಸರ್ವಜ್ಞನು ಒಳ್ಳೆ ಹಾಸ್ಯಯುಕ್ತವಾಗಿ ಹೇಳಿದ್ದಾನೆ. "ನಲ್ಲ ಒಲ್ಲೀ ಒಲ್ಲ। ನೆಲ್ಲಕ್ಕಿ ಬೋನೊಲ್ಲ। ಅಲ್ಲವನೊಲ್ಲ ಮೊಸರೊಲ್ಲಯಾಕೊಲ್ಲ। ಇಲ್ಲದಕೆ ಒಲ್ಲ ಸರ್ವಜ್ಞ॥ ಎರಡನೆಯವರ ಸ್ವಾಧೀನದಲ್ಲಿ ಯಾವ ವಸ್ತುಗಳನ್ನು ಬಿಡಬಾರದೆಂದು ಸರ್ವಜ್ಞನು ಸೂಚಿಸಿರುವದೇನಂದರೆ—"ಅಡಿಯ ಮಾವಿನ ಹಣ್ಣು। ಕಡಿದ ಕಬ್ಬಿನಗಣಿಕೆ। ಪಡೆದ ಒಡವೆಯನು ಮಡದಿಯನು ಪರರಲಿ। ಬಿಡುವನೇ ಹೆಡ್ಡ ಸರ್ವಜ್ಞ॥ ದೊಡ್ಡವರು ಸಣ್ಣವರೊಡನೆ ಜಗಳವಾಡಿದರೆ ಅವರ ಸ್ವರೂಪವೇ ಹಾನಿಯೆಂದು ಹೇಳುವಲ್ಲಿ "ಆನೆ ಬೀದಿಲಿ ಬರಲು ಶ್ವಾನತಾ ಬೊಗಳುವದು। ಶ್ವಾನನಂತಾನೆ ಬೊಗಳಿದರೆ ಆನೆಯ। ಮಾನವೇ ಹಾನಿ ಸರ್ವಜ್ಞ॥

---

# ವೀರಶೈವ ನೀತಿ.

ಲೇ.— ವೀರಪ್ಪ ಯಗಟಿ ಬಿ. ಎ. ಎಲ್. ಎಲ್. ಬಿ. ಹಾವೇರಿ.

ನೀತಿಯು ಸರ್ವ ಧರ್ಮಗಳಿಗೆ ಮುಖ್ಯ ಅಂಗವಾಗಿದೆ. ಮನುಷ್ಯನ ವ್ಯವಹಾರಕ್ಕೆ ಕಣ್ಣುಗಳು ಹೇಗೆ ಅವಶ್ಯವಾದ ಸಾಧನಗಳೋ ಹಾಗೆಯೇ ಧರ್ಮಕ್ಕೆ ನೀತಿಯು ಅವಶ್ಯವಾದುದು. ನೀತಿಯ ತಳಹದಿಯಿಲ್ಲದ ಧರ್ಮವು ಉಸುಬಿನ ದಿನ್ನೆಯಂತೆ ಉದುರಿ ಬೀಳುವದು. ನೀತಿಯೆಂದರೆ ಉತ್ತಮ ನಡತೆಯು. ಪ್ರಸಿದ್ಧ ಆಂಗ್ಲ ನೀತಿ ಶಾಸ್ತ್ರಜ್ಞರಾದ ಜೆ. ಎಸ್ ಮ್ಯಾಕೆಂಜಿ ಇವರು "*Ethics is the science of the ideal in conduct.*" ನೀತಿ ಶಾಸ್ತ್ರವು ನಡತೆಯಲ್ಲಿ ಧೇಯವಿರುವಂತಹ ಶಾಸ್ತ್ರವೆಂದು ವ್ಯಾಖ್ಯೆ ಮಾಡಿದ್ದಾರೆ. ನೀತಿಯು ಇಹದಲ್ಲಿಯೂ ಪರದಲ್ಲಿಯೂ ಶ್ರೇಯಸ್ಸನ್ನುಂಟುಮಾಡತಕ್ಕದ್ದಾಗಿದೆ. ಮನುಷ್ಯನು ಸಕಲ ಜೀವಿಗಳನ್ನು ತನ್ನಂತೆ ಭಾವಿಸಿ ಜೀವಿಗಳಿಗೆ ಹಿತವಾಗುವ ರೀತಿಯಲ್ಲಿ ಆಚರಿಸಿದರೆ ತನಗೂ, ಹಿತವೂ ಶ್ರೇಯಸ್ಸೂ ಲಭಿಸುವದು ಅನುಭವದ ಮಾತಾಗಿದೆ. ಇದನ್ನೇ ಸರ್ವಜ್ಞ ಕವಿಯು 'ತನ್ನಂತೆ ಪರರ ಬಗೆವಡೆ ಕೈಲಾಸ ಬಿನ್ನಣವಕ್ಕು ಸರ್ವಜ್ಞ' ಎಂದು ಹೇಳಿದ್ದಾನೆ.

ಸದಾಚಾರಃ— ವೀರಶೈವ ಧರ್ಮವು ನೀತಿಯನ್ನು ಕೇವಲ ಬೋಧೆಗಾಗಿ ಇಟ್ಟುಕೊಳ್ಳದೆ ಆಚರಣೆಯಲ್ಲಿಯೇ ಇಳಿಸಬೇಕೆಂದು ಕಟ್ಟನ್ನು ಹಾಕಿರುವದು. "ಲಾಂಛನಕ್ಕೆ ಶರಣೆಂಬೆ ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ ಛೀ ಎಂಬೆ" ಎಂದು ಬಸವಣ್ಣನವರು ಹೇಳಿದ್ದಾರೆ. ಹೀಗೆ ಎಲ್ಲ ವೀರಶೈವ ಶರಣರು, ವಚನಕಾರರು ವರ್ತನೆಯಲ್ಲಿ ಪರಿವರ್ತನೆಯಾದ ನೀತಿಗೆ ಪ್ರಾಧಾನ್ಯ ಕೊಟ್ಟಿದ್ದಾರೆ. ''ಜ್ಞಾನ ರಹಿತವಾಗಿ ಕ್ರಿಯೆಯನೆಷ್ಟುಮಾಡಿದರೇನು ? ಅದು ಕಣ್ಣಿಲ್ಲದವನ ನಡತೆಯಂತೆ, ಕ್ರಿಯಾ ರಹಿತವಾಗಿ ಜ್ಞಾನಿಯಾದಡೇನು ? ಅದು ಕಾಲಿಲ್ಲದವನ ಇರುವಿನಂತೆ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಜವ ಬೆರಿಸುವಡೆ ಜ್ಞಾನವೂ ಕ್ರಿಯೆಯೂ ಎರಡೂ ಬೇಕು.'' ನೀತಿಯ ಜೀವನಕ್ಕೆ ಸಮತಾಭಾವವು ಅವಶ್ಯವಾದು. ಹಿರಿದು ಕಿರಿದೆಂಬ ಶಬ್ದವಡಗಿದಲ್ಲಿ ಆತನೇ ಶರಣ

"ಗುಹೇಶ್ವರಾ" ಎಂದು ಅಲ್ಲಮಪ್ರಭುಗಳು ಹೇಳಿದ್ದಾರೆ. ಈ ಭಾವನೆಯಿಂದ ಅಹಂಕಾರವು ನಾಶವಾಗುವದು. ನಿರಹಂಕಾರಿಯಾದವನಿಗೆ ಸ್ತುತಿಯು ಅಸತ್ಯವಾಗಿಯೂ ಆತ್ಮನಿಂದೆಯು ಹಿತವಾಗಿಯೂ ತೋರುವವು. "ಆರು ಜರಿದರೂ ಅವರೆನ್ನ ಮನದ ಕಾಳಿಕೆಯ ಕಳೆದರೆಂಬುದೇ ಸಮತೆ. ಆರು ಸ್ತೋತ್ರ ಮಾಡಿಹರೆನ್ನ ಜನ್ಮದ ಹಗೆಗಳೆಂಬುದೇ ಸಮತೆ ಕಪಿಲಸಿದ್ಧಮಲ್ಲಿಕಾರ್ಜುನಾ" ಎಂದು ಸಿದ್ಧರಾಮೇಶ್ವರನು ಸಮತೆಯ ವ್ಯಾಖ್ಯೆ ಮಾಡಿದ್ದಾನೆ. ಸಮತಾ ಬುದ್ಧಿಯುಳ್ಳವನು ತನ್ನನ್ನು ಜರೆದವರನ್ನು ತನ್ನ ಮನಸ್ಸಿನ ದೋಷವನ್ನು ಕಳೆದರೆಂಬುದಾಗಿಯೂ, ಸ್ತುತಿಸಿದವರನ್ನು ಅಹಿತರನ್ನಾಗಿಯೂ ತಿಳಿಯುವನು. ಅಹಂಕಾರವು ಅನಿಷ್ಟಕ್ಕೆ ಕಾರಣವು. ಅದು ಬಂಧನಕ್ಕೆ ಒಳಗು ಮಾಡುವದು. ಮೋಕ್ಷಕ್ಕೆ ಹೊರಗು ಮಾಡುವದು. "ಅಹಂ ಪೆಂಬುದೇ ದೇಹ, ದಾಸೋಹಂ ಎಂಬುದೇ ನಿರ್ದೇಹ, ಅಹಂಭಾವವಳಿದವರ ಕೂಡಲ ಚನ್ನಸಂಗಯ್ಯನಲ್ಲಿ ನಿರ್ದೇಹಿಗಳೆಂಬೆ." ಎಂದು ಚನ್ನಬಸವಣ್ಣನವರು ಅಹಂಕಾರವ ಸ್ವರೂಪವನ್ನು ಹೇಳಿದ್ದಾರೆ.

ಆಶೆ:— ನೀತಿಯು ದೃಢವಾಗಬೇಕಾದರೆ ಮನುಷ್ಯನು ಆಶೆಗಳನ್ನು ತೊರೆಯಬೇಕು. ಆಶೆಗಳಿಂದ ಅಡಚಣೆಗಳು ಬೆಳೆಯುವವು. ಅಡಚಣೆಗಳು ನೀಗದಿದ್ದರೆ ದುಃಖವುಂಟಾಗುವದು. ಆಶೆಗಳ ತೃಪ್ತಿಯಸಲುವಾಗಿ ನಾವು ನಮ್ಮ ಇಂದ್ರಿಯಗಳ ಮತ್ತು ಅನ್ಯರ ದಾಸ್ಯತ್ವದೊಳಗಿರಬೇಕಾಗುವದು. "ಆಶೆಯೇ ದಾಸತ್ವ ನಿರಾಶೆಯೇ ಈಶತ್ವ" ಎಂದು ಉರಿಲಿಂಗಪೆದ್ದಿಯು ಹೇಳುತ್ತಾನೆ. "ಆಶೆಯುಳ್ಳಾತರೊಬ್ಬರಾಧೀನದಲ್ಲಿಪ್ಪನು ಆಶೆಯ ಮೊನೆಯ ಕೊನೆಯನರಿದಾತ ಕೈಲಾಸದಾಚೆಯಲ್ಲಿಪ್ಪ" ಎಂದು ಅಂಬಿಗರ ಚೌಡಯ್ಯನ ಉಪದೇಶವುಂಟು. ಆಶೆಗಳು ನಾವೇ ಕಲ್ಪಿಸಿಕೊಂಡ ಬಲೆಗಳಂತಿದ್ದು ಅವುಗಳಲ್ಲಿ ಸಿಲುಕಿ ನಾವು ನೆರಳುತ್ತೇವೆ. ಈ ವಿಧವಾದ ಬಲೆಯಿಂದ ಪಾರು ಮಾಡೆಂದು ಮಹಾದೇವಿಯಕ್ಕನು ದೇವರನ್ನು ಪ್ರಾರ್ಥಿಸುತ್ತಾಳೆ. "ತೆರಣಿಯ ಹುಳು ತನ್ನ ಸ್ನೇಹದಿಂದ ಮನೆ ಮಾಡಿ ತನ್ನ ನೂಲು ತನ್ನನ್ನೇ ಸುತ್ತಿ ಸಾವ ತೆರನಂತೆ ಮನಬಂದುದ ಬಯಸಿ ಬೇವುತ್ತಿರುವೆನಯ್ಯ. ಎನ್ನ ಮನದ ದುರಾಶೆಯ ಬಿಡಿಸಿ, ನಿಮ್ಮತ್ತ ತೋರಾ ಚನ್ನಮಲ್ಲಿಕಾರ್ಜುನಾ.



ಕೋಪ:— ನೀತಿಯ ಜೀವನಕ್ಕೆ ಕೋಪವು ಹಗೆಯಂತಿರುವದರಿಂದ ಕೋಪವನ್ನು ನೀಗಬೇಕು. ಪುರುಷನು ಇಂದ್ರಿಯ ವಿಷಯಗಳಲ್ಲಿ ಮನಸು ಹಾಕಿದರೆ ಅವುಗಳಲ್ಲಿ ಆಸಕ್ತಿಯುಂಟಾಗುವದು. ಆಸಕ್ತಿಯಿಂದ ಆಶೆಯುಂಟಾಗುವದು. ಆಶೆಯು ಕೈಗೂಡದಿದ್ದರೆ ಕೋಪವುಂಟಾಗುವದು. ಕೋಪದಿಂದ ಮೈಮರೆಯುವಿಕೆಯೂ, ಮೈಮರೆಯುವಿಕೆಯಿಂದ ಬುದ್ಧಿ ಭ್ರಮೆಯೂ, ಬುದ್ಧಿ ಭ್ರಮೆಯಿಂದ ಆತ್ಮದ ಕೇಡೂ ಉಂಟಾಗುವದು. (ಭಗವದ್ಗೀತಾ ಅ. ೨ ಶ್ಲೋ. ೬. ನೋಡಿರಿ.) ಹೀಗೆ ಒಂದು ದುರ್ಗುಣದಿಂದ ಮತ್ತೊಂದು ದುರ್ಗುಣವು ಹುಟ್ಟುತ್ತ ಸರಪಳಿಯ ಗೊಣಸುಗಳಂತೆ ಅವು ಒಂದನ್ನೊಂದು ತಳಿಕಿ ಹಾಕಿವೆ. ಅನ್ಯರು ನಮ್ಮ ಮೇಲೆ ಕೋಪ ಮಾಡಿದರೆ ನಾವು ಸೈರಿಸಬೇಕಲ್ಲದೆ ಪ್ರತಿಯಾಗಿ ಕೋಪ ಮಾಡಬಾರದು. ಆ ಕೋಪವು ನಮ್ಮನ್ನೇ ಹಾಳುಮಾಡುವದು. "ತನುವಿನ ಕೋಪ ತನ್ನ ಹಿರಿಯತನದ ಕೇಡು, ಮನದ ಕೋಪ ತನ್ನ ಅರಿವಿನ ಕೇಡು. ಮನೆಯೊಳಗಿನ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆ ಬೇವುದೇ ಕೂಡಸಂಗಮದೇವಾ." ಎಂದು ಬಸವಣ್ಣನವರು ಹೇಳಿದ್ದಾರೆ. ಮನೆಯೊಳಗಿನ ಬೆಂಕಿಯು ಮನೆಯನ್ನೇ ಸುಡುವಂತೆ ಕೋಪವು ಕೋಪಿಸಿಗೊಂಡವನನ್ನೇ ಸುಡುವದು. ಪರರು ಎಷ್ಟು ಹಿಂಸಿಸಿದರೂ ನಾವು ಶಾಂತಿಯಿಂದ ಸೈರಿಸಿದರೆ ನಮ್ಮ ಗುಣಗಳು ಮತ್ತಷ್ಟು ಪ್ರಕಾಶವಾಗುವವು. ಗಂಧದ ಕೊರಡನ್ನು ತಿಕ್ಕಿದಂತೆ ಅದರ ಸುಗಂಧವು ಹೆಚ್ಚುವದು. ಕಬ್ಬನ್ನು ಗಾಣದಲ್ಲಿ ಹಿಂಡಿದರೆ ಅದರ ರುಚಿಯು ಕಡಿಮೆಯಾಗದು. "ಚಂದನವ ಕಡಿದು ಕೊರಡು ತೇದಡೆ ನೊಂದೆನೆಂದು ಕಂಪ ಬಿಟ್ಟಿತ್ತೇ? ತಂದು ಸುವರ್ಣವ ಕಡಿದೊರೆದಡೆ ಬೆಂದು ಕಳಂಕ ಹಿಡಿದಿತ್ತೇ? ಸಂದು ಸಂದು ಕಡಿದು ಕಬ್ಬ ತಂದು ಗಾಣದಲಿಕ್ಕೆ ಬೆಂದು, ಪಾಕಾಗುಳ್ಳ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೇ? ನಾ ಹಿಂದೆ ಮಾಡಿದ ಹೀನಗಳೆಲ್ಲವ ತಂದು ಮುಂದಿಳುಹಲು ಹಾನಿಯೇ? ಎನ್ನ ತಂದೆ ಚನ್ನಮಲ್ಲಿಕಾರ್ಜುನದೇವಯ್ಯ ಕೊಂದರೆ ಶರಣೆಂಬುದ ಮಾಣೆ." ಎಂದು ಉತ್ಕೃಷ್ಟವಾದ ಉಪಮೆಗಳಿಂದ ಮಹದೇವಿಯಕ್ಕನು ಸೈರಣೆಯ ಮಹತ್ವವನ್ನು ತೋರಿಸುವಲ್ಲದೆ ದೇವರು ಕೊಲ್ಲುವಾಗಲೂ ಶರಣೆಂಬುದನ್ನು ಬಿಡೆನೆಂಬ ಮಾತಿನಿಂದ ಆಕೆಯ ಹೃದಯವು ಎಷ್ಟು ಪರಿಪಕ್ವವಾಗಿತ್ತೆಂಬದನ್ನು ತೋರಿಸಿದ್ದಾಳೆ.

ಇಂದ್ರಿಯನಿಗ್ರಹಃ— ಇಂದ್ರಿಯಗಳೇ ಎಲ್ಲ ದುಷ್ಟ ಪ್ರವೃತ್ತಿಗೆ ಮೂಲ
ಕಾರಣವು. ಆದ್ದರಿಂದ ಇಂದ್ರಿಯ ನಿಗ್ರಹವು ನೀತಿಯ ಮಾರ್ಗಕ್ಕೆ ಅವ
ಶ್ಯವಾಗಿದೆ. (ಹರಿದಾಡುವ ಇಂದ್ರಿಯಗಳನ್ನು ಮನಸ್ಸು ಹಿಂಬಾಲಿಸಿದರೆ
ಬಿರುಗಾಳಿಯಿಂದ ದಿಕ್ಕು ತಪ್ಪಿದ ನಾವಿನಂತೆ ಆ ಮನಸ್ಸಿನ ಸ್ಥಿತಿಯುಂ
ಟಾಗುವದು. (ಭ. ಗಿ. ಅ ೨ ಶ್ಲೋ. ೬೭) ಅದೇ ಮನಸ್ಸನ್ನು ಲಿಂಗದ
ಕಡೆಗೆ ತಿರುಗಿಸಿ ಇಂದ್ರಿಯಗಳ ಮೂಲಕವಾಗಿ ಬಂದ ಪದಾರ್ಥಗಳನ್ನು
ಲಿಂಗಾರ್ಪಿತ ಮಾಡಿ ಲಿಂಗ ಪ್ರಸಾದವೆಂದು ಭೋಗಿಸಬೇಕು. ಹೀಗೆ
ಮಾಡುವದರಿಂದ ಲಿಂಗ ಗುಣಗಳು ಬೆಳೆದು ಅಂಗದ ಅಥವಾ ಇಂದ್ರಿ
ಯದ ಗುಣಗಳು ಅಡಗುವವು. ಮನಸ್ಸನ್ನು ಅಂತರಂಗದ ಆತ್ಮಧ್ಯಾ
ನದಲ್ಲಿರಿಸುವವನು. ಜ್ಞಾನಿಯು. ಮನಸ್ಸನ್ನು ಪರಮಾತ್ಮನಲ್ಲಿ ಒಂದು
ಮಾಡುವವನು ಐಕ್ಯನು. "ಸಕಲೇಂದ್ರಿಯಗಳಲ್ಲಿ ವಿಕಾರಿಸುವ ಮನವ
ಸೆಳೆದು ನಿಂದಾತನೇ ಸುಖಿ. ಪಂಚೇಂದ್ರಿಯಗಳಚ್ಚೆಯಲ್ಲಿ ಕೀಳು ಮನಂ
ಗೊಂಡು ಸುಳಿವಾತ ದುಃಖಿ. ಮನಸ್ಸು ಬಹಿರ್ಮುಖವಾಗಲು ಮಾಯಾ
ಪ್ರಪಂಚಿ ಮನವಂತರ್ಮುಖವಾಗಲು ಅವಿರಳಜ್ಞಾನಿ, ಮನವು ಮಹ
ದಲ್ಲಿ ನಿಂದಿರಲಾತ ಮುಕ್ತನು, ಮನೋಲಯವಾದರೆ ಸೌರಾಷ್ಟ್ರ
ಸೋಮೇಶ್ವರಲಿಂಗದಲ್ಲಿ ಅಭೇದ್ಯನು." ಎಂದು ಶರಣನಾದ ಆದಯ್ಯನು
ಮನೋವಿಕಾರ, ನಿರ್ವಿಕಾರಗಳ ಸ್ವರೂಪವನ್ನು ಅಂದವಾಗಿ ಚಿತ್ರಿಸಿದ್ದಾನೆ.
ಇಂದ್ರಿಯ ನಿಗ್ರಹದಲ್ಲಿ ಬ್ರಹ್ಮಚರ್ಯೆಯು ಅಡಕವಾಗಿದೆ. ವೀರಶೈವ
ವಚನಕಾರರು ಪರಸ್ತ್ರೀಯರನ್ನು ಮಾತೆಯಂತೆ ಭಾವಿಸಬೇಕೆಂದು ಹೇಳಿ
ದ್ದಾರೆ. "ಛಲಬೇಕು ಶರಣಂಗೆ ಪರಸತಿಯನೊಲ್ಲೆಂಬ .. ... ಇಂತು
ಛಲವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮದೇವ." ಮತ್ತು ಗಂಡನು
ಳ್ಳಮ್ಮನ ಗೌರಿಯೆಂದು ಕಂಡಡೆ ಭೂಮಂಡಲಕ್ಕೆ ಅರಸಾಗಿ ಪುಟ್ಟು
ವನಾತನು. ಗಂಡನುಳ್ಳಮ್ಮನ ಕಂಡು ಒಡವೆರೆದಾತ ನರಕದಲ್ಲಿ ದಿಂಡು
ಗೆಡೆದಿಪ್ಪನೈ ರಾಮನಾಥಾ." ಎಂದು ದೇವರ ದಾಸಿಮಯ್ಯನು ಪರಸ್ತ್ರೀ
ಯರನ್ನು ಪಾರ್ವತಿಯಂತೆ ಪೂಜಿಸಬೇಕೆಂದು ಹೇಳಿದ್ದಾನೆ.

ಸತ್ಯ:— ಸತ್ಯನುಡಿಯು ಮನುಷ್ಯನ ಸತ್ವವನ್ನು ಪ್ರಕಟಿಸುವದು.
ಲೌಕಿಕ ವ್ಯವಹಾರದಲ್ಲಿ ಅವನ ವರ್ಚಸ್ಸು ಬೆಳೆಯುವದಲ್ಲದೆ ಪಾರ
ಲೌಕಿಕ ಪುರುಷಾರ್ಥವೂ ಲಭಿಸುವದು. ಸತ್ಯದಿಂದ ಸದ್ಯದಲ್ಲಿ ಫಲವು
ಲಭಿಸದಂತೆ ಕಂಡರೂ ಅದರ ಅಂತ್ಯ ಫಲವು ಅಪಾರವಾದದ್ದೂ, ನಿತ್ಯ



ವಾದದ್ದೂ, ನಿಶ್ಚಿತವಾದದ್ದೂ ಇದೆ. ಅಸತ್ಯವನ್ನು ನುಡಿಯುವದು
ಆತ್ಮವಂಚನೆಯಾಗಿದೆ. ಸತ್ಯವು ದೇವ ಸ್ವರೂಪವಾಗಿದೆ. ರಾಘವಾಂಕ
ಕವಿಯು "ಹರನೇ ಸತ್ಯ, ಸತ್ಯವೇ ಹರ." ಎಂದು ಹೇಳಿದ್ದಾನೆ. ಹರಿ
ಶ್ಚಂದ್ರನು ಸತ್ಯಕ್ಕಾಗಿ ರಾಜ್ಯವನ್ನು ತೊರೆದನು. ಹೆಂಡತಿಯನ್ನು ಮಾರಿ
ಕೊಂಡನು. ಹೊಲೆಯನಿಗೆ ಆಳಾದನು. ಆದರೆ ಕೊನೆಯಲ್ಲಿ ಸತ್ಯದ
ತೇಜದಿಂದ ಯಶಸ್ವಿಯಾದನು. ಬಸವಣ್ಣನವರು ಎಂಥ ಪ್ರಸಂಗ ಬಂದರೂ
ಸತ್ಯದಿಂದ ಕದಲಲಿಲ್ಲ. "ಸತ್ಯವ ನುಡಿವುದೇ ದೇವಲೋಕ, ಮಿಥ್ಯವ
ನುಡಿವುದೇ ಮೃತ್ಯುಲೋಕ" ಎಂದು ಸತ್ಯದ ಮಹತ್ವವನ್ನು ವರ್ಣಿ
ಸಿದ್ದಾರೆ.

ಅಸ್ತೆಯಃ— ಪರರ ಧನವನ್ನು ಅಪಹರಿಸದಿರುವದು ಅಸ್ತೇಯವು.
ಇಷ್ಟರಿಂದಲೇ ವೀರಶೈವ ಶರಣರು ತೃಪ್ತರಾಗಿಲ್ಲ. ತಮಗೆ ಬೇಕಾದದ್ದಕ್ಕಿಂತ
ಹೆಚ್ಚಿನದನ್ನು ಸಂಪಾದಿಸುವದು ಕಳವಾಗಿರುವದು. ಆಯದಕ್ಕಿಯ
ಮಾರಯ್ಯನು ಅಕ್ಕಿಯನ್ನು ಆರಿಸಿಕೊಂಡು ಬಂದು ನಿತ್ಯದ ಉಪಜೀವನ
ಮಾಡುತ್ತಿದ್ದನು. ಒಂದು ದಿನ ಆ ದಿನದ ಊಟಕ್ಕೆ ಬೇಕಾದುದರಕ್ಕಿಂತ
ಹೆಚ್ಚಿನ ಅಕ್ಕಿಯನ್ನು ಅವನು ತಂದಿರಲು ಅವನ ಹೆಂಡತಿಯು ಹೆಚ್ಚಿನ
ಅಕ್ಕಿಯನ್ನು ಮನೆಯಲ್ಲಿಟ್ಟುಕೊಳ್ಳದೆ ಹೊರಗೆ ಹಾಕಿಸಿದಳು. ಯಾಕಂದರೆ
ಹೆಚ್ಚಾದುದನ್ನಿಟ್ಟುಕೊಳ್ಳುವದೆಂದರೆ ಇತರರಿಗೆ ಬೇಕಾದದ್ದನ್ನು ಅಪಹರಿ
ಸಿದಂತೆ ಎಂದು ಅವರ ಭಾವನೆಯು ಶರಣರು ಏನಾದರೊಂದು ಉದ್ಯೋಗ
ಮಾಡಿ ಜೀವಿಸುತ್ತಿದ್ದರಲ್ಲದೆ, ಇತರರ ಮೇಲೆ ಅವಲಂಬಿಸಿರಲಿಲ್ಲ.
ಇತರರ ಒಡವೆಗಳನ್ನು ಕೈಯಿಂದ ಮುಟ್ಟುತ್ತಿರಲಿಲ್ಲ. "ಬಟ್ಟೆಯಲ್ಲಿ ಹೊನ್ನು
ವಸ್ತ್ರ ಬಿದ್ದಿದ್ದರೆ ನಾನು ಕೈಮುಟ್ಟಿಯೆತ್ತಿದೆನಾದರೆ ನಿಮ್ಮಾಣೆ ನಿಮ್ಮ
ಪ್ರಮಥರಾಣೆ, ಅದೇನು ಕಾರಣವೆಂದರೆ, ನೀನಿಕ್ಕಿದ ಭಾಷೆಯಲ್ಲಿಪ್ಪೆನಾಗಿ
ಇಂತಲ್ಲದೆ ನಾನು ಅಳಿಮನವಮಾಡಿ ಪರದ್ರವ್ಯಕ್ಕೆ ಆಶೆಮಾಡಿದೆನಾದೊಡೆ
ನೀನಾಗಲೆ ಎನ್ನ ನರಕದಲದ್ದಿ ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ."
ಈ ವಚನದಿಂದ ಶರಣರ ದೃಢತೆಯು ಎಷ್ಟಿತ್ತೆಂಬುದು ಗೊತ್ತಾಗುತ್ತದೆ.

ಅಹಿಂಸೆಃ— ಇತರರನ್ನು ಮನಸ್ಸಿನಿಂದಲೂ, ಮಾತಿನಿಂದಲೂ,
ಕೃತಿಯಿಂದಲೂ ನೋಯಿಸದಿರುವದು ಅಹಿಂಸೆಯು. ನುಡಿಯಲ್ಲಿ
ನಯವಿರಬೇಕು. ಕಲ್ಲಿಗೆ ಕಲ್ಲು ತಾಗಿ ಚದರಿ ಹೋಗುವಂತೆ ಬಿರುಸು
ಮಾತಿನಿಂದ ಹಗೆತನವು ಬೆಳೆಯುವದು. ಮತ್ತು ಅಲ್ಲಿ ದೇವರು ಇರ

ಲಾರನು. "ಬಲ್ಲವರು ಬೆಸಗೊಂಡರೆ ಮೆಲ್ಲನಾರೈದು ಮೆಲ್ಲನೆ ನುಡಿಯಬೇಕು. ಕಲ್ಲು ಕಲ್ಲುತಾಗಿದಂತೆ ಸೊಲ್ಲು ಬಿರಿಯಾದರೆ ಅಲ್ಲಿ ನಿಲ್ಲನಯ್ಯಾ ಅಖಂಡೇಶ್ವರಾ." ಅಂತರಂಗದಲ್ಲಿ ಮಾನಸ್ಸು ಶುದ್ಧವಾಗಿಯೂ ಮೃದುವಾಗಿಯೂ ಇದ್ದರೆ ನುಡಿಯು ಮೃದುವಾಗುವದು. ಮನಸಿನಲ್ಲಿ ಸಹ ಇತರರಿಗೆ ಕೆಟ್ಟದ್ದನ್ನು ಬಗೆಯಬಾರದು. "ಅಂತರಂಗ ಆತ್ಮಶುದ್ಧವಿಲ್ಲದವರನೆಂತು ನಂಬುವನಯ್ಯ ಕೂಡಲಸಂಗಮದೇವಾ." ಜೀವ ಹಿಂಸೆಯು ಪಾಪಮಯವಾದದ್ದು. ಯಜ್ಞಕ್ಕೆ ಆಹುತಿಯಾಗುವ ಹೋತನ್ನು ಕಂಡು ("ಅಳು ಕಂಡ್ಯಾ ಹೋತೇ ?" ಎಂದು ಬಸವನು ಮರುಗಿದ್ದಾನೆ. "ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ ಹಲವು ಪ್ರಾಣಿಗಳ ಕೊಂದು ನಲಿನಲಿದಾಡುವ, ತನ್ನ ಮನೆಯಲೊಂದು ಶಿಶು ಸತ್ತರೆ ಅದಕ್ಕೆ ಮರಗುವಂತೆ ಅವಕೇಕೆ ಮರುಗನು ?) ಸರ್ವಂ ಚಿಜ್ಜ್ಯೋತಿ ದೇವೇತಿಯಃ ಪಶ್ಯತಿ ನ ಪಶ್ಯತಿ, ಚನ್ನಮಲ್ಲಿಕಾರ್ಜುನನ ಭಕ್ತನಾಗಿರ್ದು ಜೀವ ಹಿಂಸೆಯು ಮಾಡುವ ಮಾದಿಗರನೇನೆಂಬೆ ?" "ಕೊಲ್ಲುವವನೇ ಮಾದಿಗ" ಎಂದು ಬಸವನು ಹಿಂಸಾಚಾರವನ್ನು ಬಲವಾಗಿ ನಿಂದಿಸಿದ್ದಾನೆ. ತನ್ನ ಕೂಸು ಸತ್ತರೆ ಮರಗುವವನು ಇತರ ಪ್ರಾಣಿಗಳನ್ನೇಕೆ ಕೊಲ್ಲಬೇಕು ? "ದಯಬೇಕು ಸರ್ವ ಪ್ರಾಣಿಗಳಲ್ಲಿ. ದಯವೇ ಧರ್ಮದ ಮೂಲವಯ್ಯ" ಎಂದು ಬಸವಣ್ಣನವರು ಉಸುರಿದ್ದಾರೆ. ತನ್ನಂತೆ ಪರರನ್ನು ಕಾಣುವದು ಅಹಿಂಸೆಯಲ್ಲಿ ಅಡಕವಾಗಿದೆ.

ದಾನಃ— ಇತರರ ಕಷ್ಟವನ್ನು ಪರಿಹಾರ ಮಾಡುವದೇ ದಾನವು. ಯಾವದೊಂದು ಸಮಾಜ ರಚನೆಯಲ್ಲಿ ಪರಸ್ಪರರಲ್ಲಿ ಸಹಾಯಬೇಕೆಂಬದು ಅನುಭವದ ಮಾತು. ಕ್ರೈಸ್ತ ಧರ್ಮವು ನಿನ್ನ ನೆರೆಹೊರೆಯವರನ್ನು ನಿನ್ನಂತೆ ಭಾವಿಸು" ಎಂದು ಹೇಳುತ್ತದೆ. ಹಾಗೆಯೇಕೆ ಭಾವಿಸಬೇಕೆಂಬುದಕ್ಕೆ ಕಾರಣವನ್ನು ಹೇಳುವದಿಲ್ಲ. ವೀರಶೈವವು ಹೇಳುವದೇನಂದರೆ ನಿನ್ನ ಆತ್ಮವೂ ನಿನ್ನ ನೆರೆಹೊರೆಯುವರ ಆತ್ಮ ಮತ್ತು ನಿನ್ನ ವೈರಿಗಳ ಆತ್ಮವೂ ಒಂದೇ ಆಗಿದೆ. ಅವರನ್ನು ನಿನ್ನಂತೆ ಭಾವಿಸೆಂಬುದರ ಕಾರಣವು ಇದೇ ಎಂಬದು. ಪಶುಪಕ್ಷಿಗಳೂ ಸಹ ತಮ್ಮ ಬಳಗಕ್ಕೆ ವಿಪತ್ತು ಬಂದಾಗ ಒಂದನ್ನೊಂದು ರಕ್ಷಿಸುವದಕ್ಕೆ ಒಂದಾಗಿ ಕೂಡುತ್ತವೆ. "ಕಾಗೆ ಒಂದಗುಳ ಕಂಡರೆ ಕರೆಯದೇ ತನ್ನ ಬಳಗವನೆಲ್ಲವನು ? ಕೋಳಿ ಒಂದು ಗುಟುಕ ಕಂಡರೆ ಕರೆಯದೇ ತನ್ನ ಕುಲ



ವನೆಲ್ಲವನು ? ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ ಕಾಗೆ ಕೋಳಿಗಳಿಗಿಂತ ಕರಕಷ್ಟ ಕೂಡಲಸಂಗಮದೇವಾ." ಎಂಬ ವಚನದಿಂದ ಬಸವಣ್ಣನವರು ಪಕ್ಷಿಗಳಲ್ಲಿರುವ ಪರೋಪಕಾರ ಬುದ್ಧಿಯನ್ನು ತೋರಿಸಿದ್ದಾರೆ. ಪರೋಪಕಾರದಿಂದ ಆತ್ಮೋನ್ನತಿಯಾಗುವದು. ಸ್ವಾರ್ಥದಿಂದ ಪರಪೀಡನೆಯಾಗುವದು. ವಿನಯ ಮಾತು ಸಹ ಪರೋಪಕಾರವೆನಿಸುವದು. ನಯವಾದ ನುಡಿಯಿಂದ ಪ್ರೇಮ ಹುಟ್ಟುವದು. ಪ್ರೇಮದಿಂದ ಪರಸ್ಪರ ಸಹಾಯ ಲಭಿಸುವದು. ನೀತಿಕ್ಷೇತ್ರದಲ್ಲಿರುವ ವಿನಯವೇ ಧರ್ಮಕ್ಷೇತ್ರದಲ್ಲಿ ಭಕ್ತಿರೂಪದಿಂದ ಪ್ರಕಟವಾಗುವದು. ಭಕ್ತಿ ಪ್ರೇರಿತನು ತನ್ನ ತನು, ಮನ, ಧನ, ಪ್ರಾಣಗಳನ್ನು ತ್ಯಜಿಸಿ ನಿಷ್ಕಾಮ ಬುದ್ಧಿಯಿಂದ ಪರಮಾತ್ಮನಲ್ಲಿ ಬೆರೆಯಲಿಚ್ಛಿಸುವನು. ಬಸವನು ಭಕ್ತಿಯ ಆವೇಶದಲ್ಲಿ ತ್ಯಾಗಬುದ್ಧಿಯನ್ನು ಹೃದಯಂಗಮವಾಗಿ ತೋರಿಸಿರುವದನ್ನು ನೋಡಿರಿ, "ಎನ್ನ ಕಾಯವ ದಂಡಿಗೆಯ ಮಾಡಯ್ಯ, ಎನ್ನ ಶಿರವ ಸೋರೆಯ ಮಾಡಯ್ಯ, ಎನ್ನ ನರವ ತಂತಿಯ ಮಾಡಯ್ಯ, ಎನ್ನ ಬೆರಳ ಕಡ್ಡಿಯ ಮಾಡಯ್ಯ, ಎನ್ನ ಉರದಲೊತ್ತಿ ನಿನ್ನ ಜಯಗಾನವ ಬಾರಿಸು ಕೂಡಲಸಂಗಮದೇವಾ." ಈ ವಚನದಲ್ಲಿ ಬಸವನು ತನ್ನ ದೇಹವನ್ನು ತಂಬೂರಿಯ ಕೋಲನ್ನಾಗಿಯೂ, ತಲೆಯನ್ನು ತಂಬೂರಿಯ ಕಾಯಿಯನ್ನಾಗಿಯೂ, ನರವನ್ನು ತಂತಿಯನ್ನಾಗಿಯೂ, ಬೆರಳನ್ನು ಬಾರಿಸುವ ಕಡ್ಡಿಯನ್ನಾಗಿಯೂ ಮಾಡಿ ಗಾನ ಮಾಡೆಂದು ದೇವರಿಗೆ ಬೇಡಿಕೊಂಡಿದ್ದಾನೆ. ಹೀಗೆ ತನ್ನ ತನುವನ್ನೇ ಅರ್ಪಣ ಮಾಡಿದ್ದಾನೆ. ಇದೆಂತಹ ತ್ಯಾಗಗುಣವು ?

ಈ ಪ್ರಕಾರ ವೀರಶೈವರಲ್ಲಿ ನೈತಿಕ ಗುಣಗಳು ನಿತ್ಯದ ಧರ್ಮಾಚರಣೆಯಲ್ಲಿ ಸೇರ್ಪಡೆಯಾಗಿರುವವಲ್ಲದೆ ಅವು ಪರಮಾತ್ಮ ಪ್ರಾಪ್ತಿಗೆ ಸಾಧನವಾಗಿವೆ. ಇವೆಲ್ಲ ಗುಣಗಳನ್ನು ಬಸವಣ್ಣನವರು ಒಂದೇ ವಚನದಲ್ಲಿ ಮುತ್ತಿನ ಮಾಲೆಯಂತೆ ಪೋಣಿಸಿದ್ದಾರೆ. "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ನುಡಿಯಬೇಡ, ತನ್ನ ಬಣ್ಣಿಸಬೇಡ, ಇದಿರು ಹಳಿಯಲುಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ, ನಮ್ಮ ಕೂಡಲಸಂಗಮದೇವರ ನೊಲಿಸುವ ಪರಿ." ಈ ಸದ್ಗುಣಗಳು ಪರಮಾತ್ಮನನ್ನು ಒಲಿ

ಸುವದಕ್ಕೆ ಸಾಧನವೆಂದು ಅವರು ಹೇಳಿದ್ದಾರೆ. ವೀರಶೈವ ಧರ್ಮದಲ್ಲಿ ಈ ಗುಣಗಳೇ ಮುಖ್ಯವಾಗಿರುವವಲ್ಲದೆ ಬಹಿರಂಗದ ಡಾಂಭಿಕ ಆಚ ರಣೆಗಳು ಪ್ರಾಧಾನ್ಯವಾಗಿಲ್ಲ. ಸೋಮೇಶ್ವರ ಕವಿಯು ಹೇಳುವಂತೆ ನೀತಿಯು ಸಕಲ ಲೋಕಕ್ಕೆ ಅವಶ್ಯವಾಗಿ ಬೇಕು.

---

# ತ್ರಿವಿಧ ದಾಸೋಹ.

---

( ಲೇ — ಬಸವಪ್ಪ ಚೆನ್ನಪ್ಪ ಪಟ್ಟೇದ—ವಂಟಮುರಿ. )

ವೀರಶೈವರು ತ್ರಿವಿಧ ದಾಸೋಹಿಗಳು. ಮೂರು ತೆರನಾದ ದಾಸೋಹಂ ಭಾವದಿಂದ ವರ್ತಿಸುವದೇ ವೀರಶೈವ ತತ್ವದ ತಿರುಳು. ವೀರ ಶೈವ ಮತದ ಸಾರವೆಲ್ಲ ಈ ತ್ರಿವಿಧ ದಾಸೋಹವೆಂಬದೊಂದೇ ಶಬ್ದ ದಲ್ಲಿ ಸಂಗ್ರಹಿತವಾಗಿದೆ. ಆದುದರಿಂದ ಇದರ ಅರ್ಥವನ್ನು ಪ್ರತಿಯೊಬ್ಬ ವೀರಶೈವನು ಸರಿಯಾಗಿ ಅರಿತುಕೊಳ್ಳುವದು ಅತ್ಯವಶ್ಯವಾಗಿದೆ.

ದಾಸೋಹಂ (ದಾಸಃ+ಅಹಂ) ಯೆಂದರೆ ನಾನು ಸೇವಕನು. ಈ ಶಬ್ದದ ಕೊನೆಯ ಅನುಸ್ವಾರವನ್ನು ಕಳೆದು ಉಳಿದ ಬರೇ 'ದಾಸೋಹ' ವೆಂಬದಿಷ್ಟೇ ವ್ಯವಹಾರದಲ್ಲಿ ರೂಢವಾಗಿದೆ. ಲಿಂಗವಂತರು "ಅಹಂ" ಕಾರಕ್ಕೆ ಮಹತ್ವ ಕೊಡದೆ, ಯಾವಾಗಲೂ ಅದನ್ನು ಅಲ್ಲಗಳೆಯಲಿಕ್ಕೇ ಆತುರಪಟ್ಟವರು, ಪಡುವವರು ! ನಾನು ಎಂಬದನ್ನು ಪೋಷಿಸುವದೇ ಭವದ ಬೀಜವಾಗಿರುವದು. ಶರೀರದಲ್ಲಿ ನಾನು ಎಂದೆನಿಸಿಕೊಳ್ಳುವ ವಸ್ತುವೇ ನಿಜವಾಗಿ ಆತ್ಮನು ಇಲ್ಲವೆ ಶಿವನಾಗಿರುವದರಿಂದ, ಶಿವಭಕ್ತನು ತನ್ನನ್ನು ಯಾವಾಗಲೂ ಶಿವರೂಪದಲ್ಲಿ ಬೆರಿಸಿಕೊಳ್ಳಲಿಕ್ಕೆ ಹವಣಿಸುತ್ತಿ ರುವದು ಸ್ವಾಭಾವಿಕವೂ ಅವಶ್ಯವೂ ಆಗಿರುವದು. ಅಹಂಕಾರದಿಂದ ಭೇದ ಭಾವನೆಗೆ ಆರಂಭವಾಗಿ, ಮದಾಂಧನಾಗಲಿಕ್ಕೂ ಅರಿಷಡ್ವರ್ಗಕ್ಕೆ ಬೀಡಾಗಲಿಕ್ಕೂ ಒಳಿತಾಗಿ ಆಶ್ರಯದೊರೆದು, ಮನುಜನು ಭವಿಯಾ ಗುತ್ತಾನೆ. ಆದುದರಿಂದ ಲಿಂಗಾಂಗಿಗಳು ಯಾವಾಗಲೂ ದಾಸ (ಭೃತ್ಯ)



ಭಾವದಿಂದಲೇ ಜೀವಿಸಲಿಕ್ಕೆ ಯತ್ನಿಸುವರು. ಶ್ರೀ ಬಸವಣ್ಣನವರು "ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ...ಕೂಡಲಸಂಗಮ ದೇವಾ." ಎಂದು ಹೇಳಿಕೊಂಡು, ಅದರಂತೆ ಅಕ್ಷರಶಃ ವರ್ತಿಸಿದ್ದನ್ನು ಎಲ್ಲರೂ ಗಮನಿಸಬೇಕು. "ಭಕ್ತದೇಹಿಕದೇವನಪ್ಪದೇವನು ಸದ್ಭಕ್ತರ ಬಳಿಯಲ್ಲಿ ಬಪ್ಪನಾಗಿ" "ಅಳ್ದನು ಬರಲು ಆಳು ಮಂಚದಲಿಪ್ಪದು ಗುಣವೇ ? ಹೇಳಾ ! ಜಂಗಮರೂಪಾಗಿ ಕೂಡಲಸಂಗಯ್ಯ ಬಂದಾ ನೆಂದು ಎಂದೆಂದೂ ಮಂಚವನೇರದ ಭಾಷೆ" ಮತ್ತು "ಜಂಗಮ ಸನ್ನಿಧಿಯಲ್ಲಿ ವಾಹನವನೇರಲಮ್ಮೆ.... ಜಂಗಮಬರಲಾಸನದಲ್ಲಿ ಇರ ಲಮ್ಮೆ... ಜಂಗಮ ಬರಲು ದಿಟ್ಟತನದಲ್ಲಿ ನಿಂದಿರಲಮ್ಮೆ...ನಿಮ್ಮ ವರ ಸುಳುಹ ನೀವೆಂದು ಭಾವಿಸಿ, ತೊತ್ತು ಭೃತ್ಯನಾಗಿಪ್ಪೆನಯ್ಯಾ ಕೂಡಲಸಂಗಮದೇವಾ." ಎಂದು ಅಂಜಿ ಅಳುಕಿ ಅಹಂಕಾರವ ತೊರೆದು, ಅದೆಷ್ಟು ನಮ್ರವಾಗಿರಲಿಕ್ಕೆ ಜಗದಣ್ಣನು ಎಚ್ಚರಪಡುತಿದ್ದನೆಂಬು ದಕ್ಕೆ ಆತನ ಈ ವಚನಗಳೇ ಸಾಕ್ಷಿಯಾಗಿವೆ. ಇದಲ್ಲದೆ ವೀರಶೈವರ ಪಂಚಾಚಾರಗಳಲ್ಲಿ ಭೃತ್ಯಾಚಾರವೂ ಒಂದಾಗಿರುವದೆಂಬದು ಎಲ್ಲರೂ ಅರಿತ ವಿಷಯವು. ಈ ವಿವೇಚನೆಯಿಂದ "ದಾಸೋಹಂ" ತನದ ಮಹತ್ವವು ಚೆನ್ನಾಗಿ ತೋರಿಬರುವದು.

ಈ ದಾಸೋಹವು ಮೂರು ತೆರನಾಗಿರುವದೆಂದು ಹೇಳಲ್ಪಟ್ಟಿರು ವದಷ್ಟೇ ! ಅದು ಹೇಗೆಂಬುದನ್ನು ಹೇಳುವ ಪೂರ್ವದಲ್ಲಿ, ಗುರುಲಿಂಗ ಜಂಗಮಗಳ ಸತ್ಯ ಸ್ವರೂಪದ ವಿಷಯವಾಗಿ, ತುಸು ಹೆಚ್ಚಾಗಿ ವಿಶದೀ ಕರಿಸುವದು ಅವಶ್ಯವಾಗಿದೆ. ಯಾಕಂದರೆ, ಈ ತ್ರಿವಿಧ ದಾಸೋಹಕ್ಕೂ ಗುರುಲಿಂಗ ಜಂಗಮಕ್ಕೂ ಅತಿ ನಿಕಟವಾದ ಸಂಬಂಧವುಂಟು. ನಮ್ಮ ಅಷ್ಟಾವರಣಗಳು ಸ್ಥೂಲ (ಬಾಹ್ಯ), ಸೂಕ್ಷ್ಮ (ಆಂತರಿಕ) ವೆಂದೆರಡು ವಿಧವಾಗಿ ಎಣಿಸಲ್ಪಡುವವು. ಮೊದಮೊದಲು ಸ್ಥೂಲವನ್ನು ಹಿಡಿದರೂ ಬರಬರುತ್ತ ಸ್ಥೂಲವನ್ನು ಬಿಡದೆ, ಸೂಕ್ಷ್ಮವನ್ನು ಅರಿತು ಅವಲಂಬಿಸಿ, ಬಾಹ್ಯಾಂತರಗಳನ್ನು ಏಕ ರೂಪವೆಂದು ಬಗೆದು, ಶಿವಭಕ್ತರು ತಮ್ಮ ಪ್ರಗತಿಯ ಮಾರ್ಗವನ್ನು ಕ್ರಮಿಸಬೇಕಾಗುವದು. ಅಷ್ಟಾವರಣಗಳಲ್ಲಿ ಗುರುಲಿಂಗ ಜಂಗಮಗಳಿಗೇ ಮೇಲಿನ ಸ್ಥಾನಗಳುಂಟು. ಅವು ಮೂರಾ ದರೂ ನಿಜವಾಗಿ ಒಂದೇ ಇರುವವು. ಇವನ್ನು ಕುರಿತು ವೀರಶೈವ ಸಿದ್ಧಾಂತ ಶಿಖಾಮಣಿಯು "ಏಕ ಏವಶಿವಃ ಸಾಕ್ಷಾತ್ । ಸರ್ವಾನುಗ್ರಹ

ಕಃಪ್ರಭುಃ || ಗುರುಜಂಗಮಲಿಂಗಾತ್ಮಾ । ವರ್ತತೇಭುಕ್ತಿಮುಕ್ತಿದಃ ॥ ” ಎಂದು ವರ್ಣಿಸಿರುತ್ತದೆ. ಅಂತೇ ಇವನ್ನು ಗುರುಲಿಂಗ ಜಂಗಮವೆಂದು ಏಕ ವಚನದಲ್ಲಿಯೇ ಹೆಚ್ಚಾಗಿ ಪ್ರಯೋಗಿಸುವದು ರೂಢವಾಗಿದೆ.

ನಮ್ಮ ಸಾಮಾನ್ಯ ಜನಸಮೂಹವು ಸಾಧಾರಣವಾಗಿ ಅಯ್ಯಗಳ (ಅಯ್ಗೋಳ) ವರ್ಗಕ್ಕೇ ಗುರುಗಳೆಂದೂ ಜಂಗಮವೆಂದೂ ನಂಬಿರುವದು; ಅದ ಅವರು ಗುರುವರ್ಗದವರೇ ಇರಲಿ. ವಿರಕ್ತವರ್ಗದವರೇ ಇರಲಿ. ರಲ್ಲೇ ತುಸು ಹೆಚ್ಚು ಅರಿತವರು. ಗುರುವರ್ಗದವರಿಗೆ ಜಂಗಮರೆನ್ನದೆ, ವಿರಕ್ತ ವರ್ಗೀಯರಿಗೆ ಮಾತ್ರ ಜಂಗಮರೆಂದು ಕರೆಯುವರು ಆದರೆ ಇದೆಲ್ಲ ಸ್ಥೂಲವಾದ ಪ್ರಾಥಮಿಕ ಭಾವನೆಯು. ಅಯ್ಯಾಚಾರ ಸಂಸ್ಕಾರವನ್ನು ಹೊಂದಿದವರು ಅಯ್ಯಗಳೆನಿಸುವರು. ಈಗಿನ ಕಾಲದಲ್ಲಿ ಈ ಸಂಸ್ಕಾರವು, ಒಂದು ಜನ್ಮ ವಿಶಿಷ್ಟ ವರ್ಗಕ್ಕೇ ಅದೂ ಬರೇ ಹೆಸರಿಗೆ ಮಾತ್ರ ಕೊಡಲ್ಪಡುವದೇ ಹೊರತು, ಅದರಿಂದ ಸಂಸ್ಕಾರಗಳಿಗೆ ಹೆಚ್ಚಿನ ಅದಾವ ಯೋಗ್ಯತೆಯಾಗಲಿ ಗುಣ ವಿಶಿಷ್ಟತೆಯಾಗಲಿ ಲಭಿಸುವದೇ ಇಲ್ಲ. ಯಾಕಂದರೆ ಮುಂದೆ ಅದರ ಪ್ರಗತಿಯ ಬಗ್ಗೆ ಯಾರೂ ಯಾವ ವಿಧದಿಂದಲೂ ಯತ್ನಿಸುವದಿಲ್ಲ. ಈ ಅಯ್ಯಗಳೊಳಗಿಂದಲೇ ಗುರುತ್ವದ ಸಲುವಾಗಿ ಪಟ್ಟದದೇವರು ಚರಂತಿಪ್ಪನವರನ್ನೂ, ಜಂಗಮತ್ವದ ಸಲುವಾಗಿ ವಿರಕ್ತಮೂರ್ತಿಗಳನ್ನೂ ಬಹುಶಃ ಆರಿಸುವರು. ಅನೇಕ ವೇಳೆ ಇತರರೊಳಗಿಂದಲೂ ಆರಿಸಿ ಅವರಿಗೆ ಅಯ್ಯಾಚಾರ ದೀಕ್ಷೆಕೊಟ್ಟು, ಗುರು ವಿರಕ್ತಸ್ಥಾನಗಳಿಗೆ ಅಧಿಕಾರಿಗಳನ್ನಾಗಿಯೂ ಮಾಡುವದುಂಟು, ಈ ವಿಷಯದಲ್ಲಿ ಗುಣಕರ್ಮಗಳಿಗೇ ಪ್ರಾಶಸ್ತ್ಯವಲ್ಲದೆ, ಪಂಗಡಗಳಿಗೇನೂ ಮಹತ್ವವಿಲ್ಲ. ವೀರಶೈವರು ತಮ್ಮಲ್ಲಿ ಜಾತಿ ಪಂಗಡ ಮುಂತಾದ ಯಾವ ಕೃತ್ರಿಮ ಭೇದ ಬುದ್ಧಿಗಳನ್ನೂ ಎಣಿಸುವವರಲ್ಲ. ಆದರೂ ಈಗ ಗುರು ಪಟ್ಟವನ್ನು ಕಟ್ಟುವಾಗ, ಚರಂತಿಕೆ ಮಾಡುವಾಗ, ಕೆಲಕೆಲವು ಕಡೆ “ಪುತ್ರವರ್ಗದ ಮಠ ” ವೆಂಬ ಕುಂಟನೆವವು ಮುಂದೆ ಚಾಚಲ್ಪಡುತ್ತದೆ. ಅದು ಉತ್ಪನ್ನದ ಆಶೆಯಿಂದ ಸ್ವಾರ್ಥಕ್ಕೆ ಬಿದ್ದು, ಅವರ ಜನಕ ಮನೆತನದವರು ಹೇಳುತ್ತಿರುವ ಒಂದು ಕವನವೇ ಹೊರತು ಸತ್ಯವಾದುದಲ್ಲ! ಹೀಗೆಂದ ಮಾತ್ರಕ್ಕೆ ಆ ಮನೆತನದೊಳಗಿಂದ ಯಾರನ್ನೂ ಆರಿಸಬಾರದೆಂಬ ಅರ್ಥವಲ್ಲ. ಯೋಗ್ಯರಿದ್ದರೆ ಆರಿಸಲಿಕ್ಕೆ ಅಡ್ಡಿ ಇಲ್ಲ. ಅವರ ಮನೆತನವೂ ಶಿಷ್ಯಗಣದೊಳಗಿನದೇ ! ಒಂದು ವೇಳೆ ಅವರಲ್ಲಿ



ಯೋಗ್ಯರಿಲ್ಲದಿದ್ದರೆ ಇತರ ಶಿಷ್ಯ ಸಮೂಹದೊಳಗಿಂದ ತಕ್ಕವರನ್ನು ಆರಿಸಿಯೇ ನೇಮಿಸತಕ್ಕದ್ದು. ವಿರಕ್ತಮಠಾಧಿಕಾರಿಗಳನ್ನು ಆರಿಸುವಾಗ, ಈ ಪುತ್ರ ವರ್ಗದ ದನಿಯು ಎಲ್ಲೆಲ್ಲಿಯೂ ಕೇಳಬರುವದಿಲ್ಲ. ಇದು ಅಶಾಸ್ತ್ರೀಯ ವಿಚಾರವು. ವಿರಕ್ತ ಮಠಗಳಿಗೆ ಸಂಬಂಧಿಸಿದ ನಿಯಮವೇ ಗುರುಮಠಗಳಿಗೂ ಉಂಟು. ಈ ಆರಿಸುವಿಕೆಯು ಕೇವಲ ಸಾಮಾಜಿಕರನ್ನೇ ಅವಲಂಬಿಸಿರಬೇಕಲ್ಲದೆ, ಆಯಾಮಠದ ಸ್ವಾಮಿಗಳು ಅದರಲ್ಲಿ ಮನಸ್ಸುಹಾಕಲೇಬಾರದು. ಮಠಾಧಿಕಾರಿಗಳಾದವರು ಬರೇ ತಮ್ಮ ಸ್ವಂತದ ಸುಧಾರಣೆಯ ಕಡೆಗೇ ಗಮನಿಸುವದು ಅವಶ್ಯವು. ಅಂದರೆ ತಮ್ಮಲ್ಲಿ ನಿಜವಾದ ಪೂಜ್ಯತೆಯು ಒಳಿತಾಗಿ ನೆಲಿಸುವಂತೆ, ತತ್ಪರಿಪೋಷಕವಾದ ಗುಣಕರ್ಮಗಳನ್ನು ಸಂಗ್ರಹಿಸಿಕೊಳ್ಳಬೇಕು. ಸಮಾಜದಲ್ಲಿರುವ ತಮ್ಮ ಸ್ಥಾನ ಮಾನಗಳನ್ನರಿತು, ಯಾವಾಗಲೂ ಕರ್ತವ್ಯಪರಾಯಣರಾಗಿರಬೇಕು. ಸಮಾಜೋತ್ಕರ್ಷ ಚಿಂತನದಲ್ಲಿಯೇ ನಿಮಗ್ನರಾಗಿರಬೇಕು. ಇಷ್ಟರ ಹೊರತು ಅನ್ಯವಾದ ಮಠದ ಯಾವ ವಿಧದ ಹಾಳು ಕಾರಭಾರದಲ್ಲಿಯೂ ಅವರು ಸಹಸಾ ಮನಸ್ಸು ಹಾಕಬಾರದು. ಅದನ್ನೆಲ್ಲ ಸಮಾಜದವರು ತಾವೇ ನೋಡಿಕೊಳ್ಳಬೇಕು. ಹೀಗೆ ಹೇಳಿದಷ್ಟಕ್ಕೆ ಆ ಸ್ವಾಮಿಗಳ ಹಿತದ ಕಡೆಗೆ ದುರ್ಲಕ್ಷಿಸಿದಂತಾಗುವದೆಂದು ಯಾರೂ ತಿಳಿಯಕೂಡದು. ಅವರ ಸೇವಾಶುಶ್ರೂಶೆ, ಯೋಗಕ್ಷೇಮ, ಮೊದಲಾದ ಪರಾಮರ್ಶವನ್ನು ಭಕ್ತರು ಸರಿಯಾಗಿ ಇಡುವರು. ಸ್ವಾಮಿಗಳ ಆಯುಷ್ಯವು ಸಣ್ಣಪುಟ್ಟ ಕಾರ್ಯಗಳಲ್ಲಿ ವ್ಯರ್ಥಹೋಗದೆ, ಸಾಮಾಜಿಕ ಮಹತ್ವದ ಕರ್ತವ್ಯದಲ್ಲಿಯೇ ಅದರ ಸದುಪಯೋಗವಾಗಬೇಕೆಂಬುದೇ ಇದರ ಮುಖ್ಯೋದ್ದೇಶ! ಸಾರಾಂಶವೇನಂದರೆ ಅಧಿಕಾರಿಗಳಾದ ಸ್ವಾಮಿಗಳು ತಮ್ಮ ಮೇಲೆ ಬರುವ ಹೊಣೆಗಾರಿಕೆಯನ್ನು ಸರಿಯಾಗಿ ನಿಸ್ತರಸಿಕೊಂಡು ಹೋಗಲಿಕ್ಕೆ, ಸರ್ವರೀತಿಯಿಂದಲೂ ಸಮರ್ಥರಿರಬೇಕು.

ಇದಾಯಿತು ಬಹಿರ್ದೃಷ್ಟಿಯ ಸಾಮಾನ್ಯ ಜನತೆಯ, ಸ್ಥೂಲ ಗುರುಜಂಗಮರ ಕಲ್ಪನೆಯ ಮಾತು. ಲಿಂಗದ ವಿಷಯವಾಗಿಯೂ ಅವರ ಕಲ್ಪನೆಯು ವಿಚಿತ್ರವಾದುದೇ ! ತಾವು ಶರೀರದ ಮೇಲೆ ಧರಿಸುವ ಶಿಲಾಮಯ ದೃಶ್ಯಲಿಂಗವೇ ಲಿಂಗವು ” ಎಂಬದನ್ನಿಷ್ಟೇ ಅವರು ಬಲ್ಲರು. ಆದುದರಿಂದ ಈ ಗುರು ಲಿಂಗ ಜಂಗಮದ ವಿಷಯವಾಗಿ ಬಲ್ಲವರ

ಸೂಕ್ಷ್ಮ ವಿಚಾರವೇಸಿರುವದೆಂಬದು, ಸಾಮಾನ್ಯರಿಗೆ ಕೂಡ ಗೊತ್ತಾಗುವದು ಅಗತ್ಯವೂ ಬಹು ಪ್ರಯೋಜನಕರವೂ ಆಗಿರುವದು.

ಗುರು— ಇದರರ್ಥವು ಶ್ರೇಷ್ಠ-ದೊಡ್ಡದು ಎಂದಿರುವದು. ಜಗತ್ತಿನ ಆದಿ ಕಾರಣನು ಪರಮಾತ್ಮನೇ ಆಗಿರುವದರಿಂದ ಅವನೇ ಗುರುವೆಂಬುದು ಸ್ವಾಭಾವಿಕವಾಗಿದೆ. "ಬ್ರಹ್ಮ ವಿಷ್ಣುಶ್ಚ ರುದ್ರಶ್ಚ। ಈಶ್ವರಶ್ಚ ಸದಾಶಿವಃ। ಯೋತೇಗರ್ಭಗತಸ್ತೈವ। ತಸ್ಮೈಶ್ರೀಗುರವೇನಮಃ॥" ಇದರಂತೆ "ಗುರುದೇವೋ ಮಹಾದೇವೋ ಗುರುದೇವಃ ಸದಾಶಿವಃ। ಗುರುದೇವಾತ್ ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ॥" ಇತ್ಯಾದಿಯಾಗಿರುವ ಅನೇಕ ಸ್ತೋತ್ರಗಳಲ್ಲಿ ಬಂದಿರುವ ಗುರುಶಬ್ದವು, ಪರಮಾತ್ಮನನ್ನೇ ಉದ್ದೇಶಿಸಿ ಪ್ರಯೋಗಿಸಲ್ಪಟ್ಟಿದೆ. "ಗುರು ತನ್ನ ವಿನೋದಕ್ಕೆ ಸ್ಥಾವರವಾದ, ಗುರು ತನ್ನ ವಿನೋದಕ್ಕೆ ಜಂಗಮವಾದ, ಗುರುತನ್ನ ವಿನೋದಕ್ಕೆ ಪ್ರಸಾದವಾದ, ಗುರು ತನ್ನ ವಿನೋದಕ್ಕೆ ಗುರುವಾದ ಕೂಡಲಚನ್ನಸಂಗಯ್ಯನಲ್ಲಿ ಏಕಾರ್ಥವಾದ" ಈ ವಚನವಾದರೂ ಅದನ್ನೇ ಹೇಳುವದು.

"ಅಯಮಾತ್ಮಾಬ್ರಹ್ಮ" "ಪ್ರಜ್ಞಾನಂ ಬ್ರಹ್ಮ" "ಸತ್ಯಂ ಜ್ಞಾನಂ ಅನಂತಂಬ್ರಹ್ಮ" ಎಂದು ಶ್ರುತಿ ಸಾರುತ್ತಿರುವದರಿಂದ, ಪರಮಾತ್ಮನೆಂದು ಹೇಳಿಸಿಕೊಳ್ಳುವ ಶಿವನು, ಕೇವಲ ಜ್ಞಾನಮಯನಾಗಿರುವನೆಂಬದು ಸ್ಪಷ್ಟವೇ ಆದೆ. ಶಿವ ಅಂದರೆ ಕಲ್ಯಾಣ ಇಂತಹ ಲಕ್ಷಣವುಳ್ಳದು ಜ್ಞಾನದ ಹೊರತು ಈ ಜಗದಲ್ಲಿ ಆದಾವುದಿರುವದು ? "ನಹಿಜ್ಞಾನಾಯುಸದೃಶಂ ಪವಿತ್ರಮಿಹವರ್ತತೇ" ಎಂಬದರ ತಾತ್ಪರ್ಯವಾದರೂ ಇದೇ !

"ಏಕಮೇವಾ ದ್ವಿತೀಯಂ ಬ್ರಹ್ಮ" ಎಂಬ ಶೃತಿಗನುಸಾರವಾಗಿ, ಇಲ್ಲವೆ "ಲಿಂಗಮಯಂ ಜಗತ್ಸರ್ವಂ" ಎಂಬ ಆಗಮೋಕ್ತಿಯಂತೆ, ಸರ್ವವನ್ನೂ ಪರಮಾತ್ಮ ರೂಪವಾಗಿ ಬಗೆಯುವ ಪಾರಮಾರ್ಥಿಗಳಿಗೆ, ಸರ್ವತ್ರ ಗುರುರೂಪವೇ ಕಾಣುವದು ಸಹಜ ! ಆದರೆ ಲೌಕಿಕರು ಮಾತ್ರ ಜ್ಞಾನ ವಿಶಿಷ್ಟನಾದ ಮನುಜನನ್ನೇ ಗುರುವೆಂದು ಭಾವಿಸುವದುಂಟು. ಈ ವಚನವನ್ನು ನೋಡಿರಿ—"ಅಣು ರೇಣು ಪರಮಾತ್ಮನೆಂಬರು. ಅಣು ರೇಣು ತೃಣಕಾಷ್ಠದೊಳಗೆ ಇಪ್ಪನೆಂಬರು, ಅಪ್ಮೈನಯ್ಯ. ನಾನೆನಲಮ್ಮೆನಯ್ಯ ! ಶರಣ ಸನ್ನಿಹಿತನು, ಭಕ್ತಕಾಯ ಮಮಕಾಯನು



ದಾಸೋಹ ಪರಿಪೂರ್ಣನು, ಸದುಹೃದಯದಲ್ಲಿ ಸಿಂಹಾಸನವಾಗಿ ಅಗಲದಿಪ್ಪನು ಕಲಿದೇವಯ್ಯನು." ಇದು ಸಾಮಾನ್ಯರ ವಿಚಾರವನ್ನೇ ಬಲಪಡಿಸುತ್ತದೆ. ಅವರ ದೃಷ್ಟಿಯಲ್ಲಿ ಜ್ಞಾನವಿಶಿಷ್ಟನಾದ ಮನುಜನೇ ಗುರುವು. ಇಂತಹ ಮಹಿಮರೇನರ ಗುರುಗಳು. ಇವರೇ ದೃಶ್ಯ ಗುರುಗಳು. ಇವರನ್ನು ಕುರಿತು ಹೆಚ್ಚಾಗಿ ಆಲೋಚಿಸಿದರೆ ಕಂಡು ಬರುವದೇನಂದರೆ, ಇವರ ಜಡತನುವೇನೂ ಗುರುವಲ್ಲ. ಅದು ಸಕಲರಿಗೂ ಜನ್ಮ ಸಿದ್ಧವಾದುದರಿಂದ ಸಾಮಾನ್ಯವು. ಹಾಗಾದರೆ ಗುರುವಾವುದು ? ಇಲ್ಲಿ ಅವರಲ್ಲಿರುವ ಜ್ಞಾನ ವಿಶೇಷವೇ ಗುರುತ್ವಕ್ಕೆ ಕಾರಣವೆಂದು ಒಡಂಬಡಬೇಕಾಗುವದಲ್ಲವೇ ? ಆದ ಕಾರಣ ನಿಜವಾದ ಗುರುವೆಂದರೆ ಜ್ಞಾನವು (ಅರಿವು).

ಜಂಗಮ— ಇಂತಹ ಜ್ಞಾನವು ಮತ್ತೂ ಹೆಚ್ಚಾಗಿ ಬೆಳೆದು, ಪರಮಾವಧಿಯನ್ನು ಹೊಂದಿ, ಅದ್ವೈತ (ಸಮರಸ) ವೆಂಬ ಸುಜ್ಞಾನದಲ್ಲಿ ಪರಿಣಮಿಸಿದರೆ, ಅದೇ ಜಂಗಮವು. ನರ ಜಂಗಮರನ್ನು "ಜಾನಂತ್ಯತಿಶಯಾದ್ಯೇತು ಶಿವಂ ವಿಶ್ವ ಪ್ರಕಾಶಕಂ। ಸ್ವಸ್ವರೂಪತಯಾತೇತು ಜಂಗಮಾ ಇತಿ ಕೀರ್ತಿತಾಃ॥" ಎಂದು ವರ್ಣಿಸಿದ್ದಾರೆ.

ಲಿಂಗ— ಇದು ಶಿವ ಶಕ್ತ್ಯಾತ್ಮಕವಾದುದಲ್ಲವೇ ? ಇಷ್ಟಲಿಂಗದಲ್ಲಿ ಪಿಂಡಿಯೇ ಶಿವ, ಅದರ ಕೆಳಗಿನ ಪೀಠವೇ ಶಕ್ತಿ, ನರದೇಹದಲ್ಲಿ ರುಂಡವೇ (ಜ್ಞಾನಸ್ಥಾನವಾದಮೆದುಳೇ) ಶಿವ, ಧಡವೇ (ಮೆದುಳಿಗೆ ಒಳಪಟ್ಟು ದುಡಿಯುವ ಗಾತ್ರವೇ) ಶಕ್ತಿ. ಶಿವನೆಂದರೆ ಸತ್ಯಜ್ಞಾನವು. ಜಗದಾತ್ಮವೇ ತನ್ನ ಆತ್ಮವೆಂದರಿವುದು ಸತ್ಯಜ್ಞಾನ. ಆ ಸತ್ಯಜ್ಞಾನಾನುಸಾರವಾಗಿ ವರ್ತಿಸುವದೇ ಅರ್ಥಾತ್ ಅಭೇದ ಭಾವದಿಂದ ಆಚರಿಸುವದೇ ಕ್ರಿಯೆಯು. (ಶಕ್ತಿಯು). ಆದುದರಿಂದ ಲಿಂಗವನ್ನುಧರಿಸುವದೆಂದರೆ, ಯಾವಾಗಲೂ ನಿಜಜ್ಞಾನವಿಡಿದು ಸತ್ಕ್ರಿಯೆಗಳನ್ನಾಚರಿಸುವದೇ ವಿನಾ, ಮತ್ತೊಂದಲ್ಲವೆಂದು ಸಿದ್ಧವಾಗುವದಲ್ಲವೇ ? ಇದೇ ಮಾತನ್ನು ಲೌಕಿಕದಲ್ಲಿ "ನುಡಿ-ನಡೆಗಳೊಂದಾಗಬೇಕು" ಎಂದು ಹೇಳುವ ರೂಢಿಯುಂಟು. ನುಡಿಯೆಂದರೆ ಜ್ಞಾನಪೂರ್ವಕವಾಗಿ ಪ್ರಕಟವಾಗುವ ಮಾತು (ಇದೇ ಶಿವ), ನಡೆಯೆಂದರೆ ತದನುಸಾರ ವರ್ತನವು (ಇದೇ ಶಕ್ತಿ), "ನುಡಿಯಂತೆ ನಡೆ ಇದೇ ಜನ್ಮವೇ ಕಡೆ" ಎಂಬುದು ನಮ್ಮ ಗಾದೆಯ ಮಾತು. ತಾತ್ಪರ್ಯವೇನಂದರೆ ಗುರುವೆಂದರೆ ಜ್ಞಾನ, ಲಿಂಗವೆಂದರೆ ಸತ್ಕ್ರಿಯಾ

ತ್ಮಕಜ್ಞಾನ (ಪ್ರಜ್ಞಾನ), ಜಂಗಮವೆಂದರೆ ಸಮರಸ ಜ್ಞಾನ (ಸತ್ಯಜ್ಞಾನ). ಒಟ್ಟಿಗೆ ಗುರುಲಿಂಗಜಂಗಮವೆಂದರೆ ಜ್ಞಾನವ ಹೊರತು ಬೇರೊಂದಲ್ಲ!

ಇನ್ನು ತ್ರಿವಿಧ ದಾಸೋಹದತ್ತ ತಿರುಗುವಾ. ಶ್ರೀಬಸವ ಮಹಾತ್ಮರ ಈ ವಚನಗಳನ್ನು ಚಿತ್ತೈಸಿರಿ:—(೧) "ಆಡಿದರೇನು ! ಹಾಡಿದರೇನು ! ಓದಿದರೇನು ! ತ್ರಿವಿಧದಾಸೋಹವಿಲ್ಲದನ್ನಕ್ಕ ಆಡದೇ ನವಿಲು, ಹಾಡದೇ ತಂತಿ, ಓದದೇ ಗಿಳಿ ? ಭಕ್ತಿ ಇಲ್ಲದವರನೊಲ್ಲ ಕೂ. ಸಂ. ದೇವ" (೨) "ತನುವ ಕೊಟ್ಟು ಗುರುವನೊಲಿಸಲೇಬೇಕು. ಮನವಕೊಟ್ಟು ಲಿಂಗವನೊಲಿಸಲೇಬೇಕು. ಧನವ ಕೊಟ್ಟು ಜಂಗಮನನೊಲಿಸಲೇಬೇಕು. ಈ ತ್ರಿವಿಧವ ಹೊರಗುಮಾಡಿ, ಹರೆಯಹೊಯಿಸಿ, ಕುರುಹ ಪೂಜಿಸುವವರ ಮೆಚ್ಚ; ಕೂ. ಸಂ. ದೇವ"

ಇವೆರಡರೊಳಗೆ ಮೊದಲನೆಯದರಲ್ಲಿ— ಭಜನೆಯನ್ನು (ಶಿವನಾಮ ಸಂಕೀರ್ತನೆಯನ್ನು) ಮಾಡುವಾಗ, ಮನಃಪೂರ್ವಕವಾದ ಭಕ್ತಿಯು ಅವಶ್ಯವಾಗಿಬೇಕು. ಅದಿಲ್ಲದೆ ಬರೇ ತೋರಿಕೆಗಾಗಿ ತಾಳಕಟೆಯುತ್ತ ಆವೇಶಗೊಂಡು ಎಷ್ಟೇ ಕುಣಿದಾಡಿ ಒದರಾಡಿ ಚೀರಾಡಿ, ದೇವರ ನಾಮೋಚ್ಚರಣೆ ಮಾಡಿದರೂ ಅದೆಲ್ಲ ವ್ಯರ್ಥ, ನವಿಲು ಕುಣಿದಾಡಿದರು ಅದಕ್ಕೇನು ಆತ್ಮೋದ್ಧಾರವುಂಟೇ ? ಅದೇ ಮೇರೆಗೆ ತಂತಿ ನಾದ ಮಾಡಿದರೆ, ಫೋನೋ ಹಾಡಿದರೆ, ರಾಗದಪೆಟ್ಟಿಗೆ ನುಡಿದರೆ, ಅವೇನು ಧನ್ಯವಾಗುವವೇ ? ಹಾಗೆಯೇ ಅನೇಕ ಗ್ರಂಥಗಳನ್ನು (ಚತುರ್ವೇದ ಷಟ್ ಶಾಸ್ತ್ರಾದಿಗಳನ್ನು) ಕಲಿತು ನೆನಪಿಟ್ಟು ಬರೇ ಬಾಯಿಪಾಠ ಹೇಳಲಿಕ್ಕೆ ಬಂದರೆ, ಅವರಿಂದಲೂ ಏನೂ ಪ್ರಯೋಜನವಿಲ್ಲ. ಅದೆಲ್ಲ ಗಿಳಿಯೋದಿದಂತೆ ವ್ಯರ್ಥವಾದುದು ! ಕಲಿತದ್ದೂ ಓದಿದ್ದೂ ಮುಂತಾದುದೆಲ್ಲ ತನ್ನ ಆಚರಣೆಯಲ್ಲಿ ಬರದಿದ್ದರೆ, ಅದಕ್ಕೇನು ಬೆಲೆ ? ಪ್ರತ್ಯಕ್ಷ ಸವಿಯದೆ ಬರೇ "ಸಕ್ಕರೆ" ಎಂಬ ನಾಮೋಚ್ಚಾರ ಮಾತ್ರದಿಂದ ಅದರ ರುಚಿಯ ಸುಖವು ದೊರೆಯುವದೇ ? ಎಂದೂ ಶಕ್ಯವಿಲ್ಲ ! ಅದರಂತೆ ಓದಿ ಕಲಿತಂತೆ, ನಡೆದು ಅನುಭವಿಸದಿದ್ದರೆ, ನಿಜವಾದ ಸುಖವು ಎಂದೂ ಲಭಿಸಲಾರದು. ಆದುದರಿಂದ ಒಣಡಂಭಾಚಾರವನ್ನು ಬಿಟ್ಟು, ತನ್ನ ಉದ್ಧಾರಕ್ಕಾಗಿ ಭಕ್ತಿಯನ್ನು (ತ್ರಿವಿಧ ದಾಸೋಹವನ್ನು) ಹಿಡಿಯಬೇಕೆಂದು ಬೋಧಿಸಿರುತ್ತದೆ.



ಎರಡನೆಯದರಲ್ಲಿ—ತ್ರಿವಿಧದಾಸೋಹವೆಂದರೇನೆಂಬದನ್ನು ಒಡೆದು ವಿಸ್ತರಿಸಿರುವದು. ತನು ಮನ ಧನಗಳನ್ನು ನೀಡಿ, ಗುರುಲಿಂಗ ಜಂಗಮ ಪ್ರಸಾದವನ್ನು ಪಡೆಯಬೇಕೆಂದು ಆಗ್ರಹದಿಂದ ಅಪ್ಪಣೆಕೊಡಿಸಲಾಗಿದೆ. ಆದರೆ ಇದು ಕೇವಲ ಸೂತ್ರರೂಪವಾಗಿರುವದರಿಂದ, ಇದನ್ನು ಹೆಚ್ಚಾಗಿ ಸ್ಪಷ್ಟೀಕರಿಸುವದು ಅವಶ್ಯವದೆ.

ಗುರುವಿಗೆ ತನುವನೊಪ್ಪಿಸುವದು— ನಾವು ಯಾವ ಕಾರ್ಯವನ್ನು ಮಾಡಿದರೂ, ಅದು ಜ್ಞಾನಪೂರ್ವಕವಾಗಿಯೇ ನಡೆಯಬೇಕು. ಅಜ್ಞಾನದಿಂದ ಮನಬಂದಂತೆ ಮಾಡಿ, ತನಗೂ ಅನ್ಯರಿಗೂ ಕೂಡೇ ದುಃಖವಾಗುವಂತೆ ವರ್ತಿಸಬಾರದು. ನೀತಿಶಾಸ್ತ್ರವು ಇದಕ್ಕಾಗಿಯೇ ಜನ್ಮತಾಳಿದೆ. ಪಂಚಾಚಾರವು ನೀತಿಶಾಸ್ತ್ರಕ್ಕೆ ಕಲಶಪ್ರಾಯವಾಗಿದೆ. ಆದುದರಿಂದ ಶಿವಭಕ್ತರು ನೀತಿ ಪಂಚಾಚಾರಗಳನ್ನು ಪಾಲಿಸಬೇಕು. ತನುವಿನಿಂದ ಅದಾವ ಅಕೃತ್ಯವೂ ಆಗದೆ, ಸದಾ ಸತ್‌ಕೃತ್ಯಗಳೇ ಘಟಿಸಿ ಆಚಾರ ಸಂಪನ್ನವಾದರೆ, ತನುವು ಪವಿತ್ರವಾಗುವದು. ಹೀಗೆ ತನುವನ್ನು ಪರಿಶುದ್ಧಮಾಡಿಕೊಳ್ಳುವದಕ್ಕೇ "ತನುವನ್ನು ಗುರುವಿಗೆ ಒಪ್ಪಿಸುವದೆಂದೆನ್ನುವರು." ಹೀಗೆ ಗುರುಕೃಪೆಗೆ ಪಾತ್ರರಾಗಿ ಪೂತಾತ್ಮರಾದ ಸಕಲರನ್ನೂ ಅವರು ತನ್ನ ಕಳಬಳ್ಳಿಯವರೇ ಇರಲಿ, ಅನ್ಯರೇ ಇರಲಿ ತನ್ನವರೆಂದು ದೃಢವಾಗಿ ನಂಬಿ ತದನುಸಾರ ಲಿಂಗಾಂಗಿಯು ನಡೆಯಬೇಕು. ಇದರಿಂದ ಆಣವ ಮಲವು (ರಕ್ತಸಂಬಂಧಿಗಳೇ ತನ್ನವರೆಂಬ ಆಕುಂಚಿತ ಭಾವನೆಯು) ನಷ್ಟವಾಗುವದು. ಈ ಪ್ರಕಾರ ನಡೆಯುವದೇ ಪಾರಮಾರ್ಥಿಕ ದೃಷ್ಟಿಯಿಂದ ಹೆಚ್ಚು ಯೋಗ್ಯವೂ ಸಮಂಜಸವೂ ಶ್ರೇಯಸ್ಕರವೂ ಆಗಿರುವದು.

ಲಿಂಗಕ್ಕೆ ಮನವನೊಪ್ಪಿಸುವದು— ಸ್ವಾಭಾವಿಕವಾಗಿ ಮನವು ಜನ್ಮಾರಭ್ಯ ಬಹಿರ್ಮುಖವಾಗಿ, ಜಗತ್ತಿನ ವಿಷಯಗಳಲ್ಲಿಯೇ ಮಗ್ನವಾಗಿರುವದು. ಅದನ್ನು ವಿಶೇಷತರದ ಜ್ಞಾನದಿಂದ (ಆತ್ಮವಿದ್ಯೆಯು ಸಾಧನದಿಂದ) ವಿಷಯಗಳತ್ತಣಿಂದ ನಿವೃತ್ತಿಗೊಳಿಸಿ, ಲಿಂಗದಲ್ಲಿ ತೊಡಗಿಸಿ, ನಿರುತ ಅದರ ಆರಾಧನೆಯನ್ನು ಜಾಗ್ರತೆಯಿಂದ ಮಾಡುವದರಲ್ಲಿಯೇ ಸೇರಿಸಬೇಕು. ಅಂದರೆ ಮನವು ಜ್ಞಾನಮಯವಾಗಿ, ತನ್ನ ಪೂರ್ವದ ಆಕುಂಚಿತ ಸ್ವಾರ್ಥವನ್ನು (ಅಹಂಕಾರ ಯೋಗದಿಂದಾಗುವ ಭೇದಭಾವನೆಯನ್ನು) ಬಿಟ್ಟು, ವಿಸ್ತೃತವಾಗಿ (ಸರ್ವಪ್ರಾಣಿಗಳನ್ನು ತನ್ನಂತೆಯೇ

ಒಗೆದು) ನಡೆಯುವಂತೆ ಮಾಡಬೇಕು. ಇದರಿಂದ ಕ್ರಿಮಿಕೀಟಕ ಮೊದಲ್ಗೊಂಡು ಮನುಷ್ಯ ಕಡೆಯಾಗಿ, ಎಲ್ಲ ಜೀವಿಗಳೂ ತನ್ನ ಸ್ವರೂಪವೇ ಎಂದು ಅರಿಕೆಯಾಗುವದು. ಮುಂಚಿನ ಭೇದಭಾವನೆಯು (ಮಾಯಾಮಲವು) ಅಳಿಯುವದು. ಹಿಂಸಾ ವೃತ್ತಿಯು ನಿಂತು ಹೋಗಿ, ಭೂತದಯೆಯು ನೆಲಿಸುವದು. ಅಹಂಕಾರ ಮಮಕಾರಗಳಿಗೆ ಸ್ಥಾನವೇ ಉಳಿಯುವದಿಲ್ಲ. ಹೀಗಾದರೆ ಮನವನ್ನು ಲಿಂಗಾರ್ಪಿತ ಮಾಡಿದಂತಾಯಿತು.

ಜಂಗಮಕ್ಕೆ ಧನವನೊಪ್ಪಿಸುವದು— ಮಾನವ ಬಳಗವನ್ನಷ್ಟೇ ಅಲ್ಲ, ಪ್ರಾಣಿಕೋಟಿಯನ್ನಷ್ಟೇ ಅಲ್ಲ, ವನಸ್ಪತಿ ವರ್ಗವನ್ನೂ ಖನಿಜ ಸಮೂಹವನ್ನೂ ಸಹ ಪರಮಾವಧಿಗೆ ಮುಟ್ಟಿದ ಜ್ಞಾನದ ಬಲದಿಂದ ಸತ್ (ಆತ್ಮ) ಸ್ವರೂಪವಾಗಿಯೇ ಕಾಣುವ ಅತ್ಯುಚ್ಚ ಭಾವನೆಯು ಗಟ್ಟಿಗೊಳ್ಳುವದೇ ಜಂಗಮ ಸ್ವರೂಪವು. ಇದರಿಂದ ಭಕ್ತನ ಸ್ವತಂತ್ರ ಅಸ್ತಿತ್ವವೇ ನಷ್ಟವಾಗಿ, ಉರಿಯುಂಡ ಕಪ್ಪುರದಂತೆ, ಜಗದ್ವಿಲೀನನಾಗಿ (ಮಹಾಲಿಂಗೈಕ್ಯನಾಗಿ) ಹೋಗುವನು. ಯಾವ ವಿಷಯದಾಸೆಯನ್ನೂ ಮಾಡದ ಸಹಜ ವೃತ್ತಿಯುಳ್ಳವನಾಗಿ, ಸರ್ವವನ್ನೂ ಲಿಂಗರೂಪದಲ್ಲೇ ಕಾಣುವನು. ಪೂರ್ಣ ತ್ಯಾಗವೃತ್ತಿಯು (ವೈರಾಗ್ಯವು) ಪ್ರಕಟವಾಗುವದು. ಆಗ ಧನವನ್ನು (ಸರ್ವ ವಿಷಯಪದಾರ್ಥಗಳನ್ನು) ಜಂಗಮಕ್ಕೆ ನೀಡಿದಂತಾಗುವದು. ಇದರಿಂದ ಕಾರ್ಮಿಕ ಮಲವು (ಪಾಪಪುಣ್ಯಾದಿಗಳ ಕಲ್ಪನೆಯು) ಹೇಳ ಹೆಸರಿಲ್ಲದಂತಾಗಿ ಹೋಗುವದು. ಮಾಡುವವನೂ ಮಾಡಿಸಿಕೊಳ್ಳುವವನೂ ಮಾಡುವ ಸಾಧನವೂ ಅಭೇದರೂಪವಾಗಿ ಬಿಟ್ಟಿರುವದು, ಮಹಾಲಿಂಗತ್ವದ ಅಖಂಡ ಸ್ಥಿತಿಯು ಪ್ರಾಪ್ತವಾಗಿರುವದು.

ಹೀಗೆ ಗುರುಲಿಂಗ ಜಂಗಮತ್ರಯಕ್ಕೆ ತನುಮನಧನಗಳನ್ನರ್ಪಿಸಿದರೆ, ಅದು ಪ್ರಸನ್ನವಾಗಿ ಅದರ ಪ್ರಸಾದವು (ಆ ಜ್ಞಾನದ ಸುಪರಿಣಾಮವು) ಪ್ರಾಪ್ತವಾಗುವದು. ಅದರಿಂದ ಭಕ್ತನು ಲಿಂಗರೂಪನಾಗಿ ಅದರಲ್ಲಿ ಸಮರಸ ಹೊಂದುವನು.

ತ್ರಿವಿಧ ದಾಸೋಹದ ಸತ್ಯ ಸ್ವರೂಪವು ಸಂಕ್ಷೇಪತಃ ಮೇಲೆ ವರ್ಣಿಸಿದಂತೆ ಇರುವದು. "ನಾವು ದಾಸೋಹಿಗಳು, ನಮ್ಮದು ದಾಸೋಹ ಮಠ" ಎಂದು ಹೇಳಿಕೊಳ್ಳುವವರು, ನಮ್ಮಲ್ಲಿ ಅಲ್ಪಸ್ವಲ್ಪ ಕಂಡುಬರುವರು. ಆದರೆ ಅವರ ವರ್ತನವು, ಈ ಒರೆಗಲ್ಲಿಗೆ ಹಚ್ಚಿ ನೋಡ



ದರೆ, ಅದೆಷ್ಟು ಮಟ್ಟಿಗೆ ಸರಿಬರುವದು ? ತಿಲಮಾತ್ರವೂ ಇಲ್ಲವೆಂದು ಅತಿ ಕಷ್ಟದಿಂದ ಹೇಳಬೇಕಾಗುವದಲ್ಲವೆ !

ಏನೊಂದರ ಅಪೇಕ್ಷೆಯೂ ಇಲ್ಲದೆ, ಕೇವಲ ನಿರಿಚ್ಛೆಯಿಂದ ಪರಮಾತ್ಮನು ಜಗದ್ಧಿತಾರ್ಥವಾಗಿಯೇ ಲೀಲೆಯನ್ನು ಧರಿಸಿದ್ದಾನೆಂಬದು ಸ್ಪಷ್ಟವು ! ಪ್ರಾಣಿಗಳ ರಕ್ಷಣೆಗಾಗಿಯೇ ಹವೆ, ಬೆಳಕು, ಅನ್ನ, ನೀರು. ಗಿಡಬಳ್ಳಿ, ಹಣ್ಣುಹಂಪಲ, ಹೂಕಾಯಿ, ಇತ್ಯಾದಿಗಳನ್ನೆಲ್ಲ ಸೃಷ್ಟಿಸಿರುವನು. ಪರಹಿತಾರ್ಥವಾಗಿಯೇ ನದಿಗಳು ಹರಿಯುತ್ತವೆ. ಹಸುಗಳು ಹಾಲು ಕರೆಯುತ್ತವೆ. ಮರಗಳು ಫಲಿಸುತ್ತವೆ. ಸೂರ್ಯಚಂದ್ರರು ಬೆಳಗುತ್ತಾರೆ. ಮಳೆ ಸುರಿಯುತ್ತದೆ. ಭೂಮಿ ಬೆಳೆ ಕೊಡುತ್ತದೆ. ಇದನ್ನೆಲ್ಲ ಕಂಡು ಜ್ಞಾನಿಯಾದ ಮನುಷ್ಯನು ತನ್ನ ಬಾಳಾದರೂ ಪರ (ಸಚ್ಚಿದಾನಂದ ಪರಮಾತ್ಮ) ಸೇವೆಗಾಗಿಯೇ-ದಾಸೋಹಕ್ಕಾಗಿಯೇ- ಇರುವದೆಂದು ನಿಶ್ಚಯಿಸಿ ಹಾಗೆ ನಡೆಯುವದು, ಸ್ವಾಭಾವಿಕವೂ ಯೋಗ್ಯವೂ ಅಲ್ಲವೇ ! ಆದುದರಿಂದ ಮನುಷ್ಯನು ಸ್ವತಃ ದೇಹ ಶ್ರಮ ಮಾಡಿ ದುಡಿದು ಸಾತ್ವಿಕತನದಿಂದ ಧನ ಸಂಪಾದಿಸಿ, ಅದರಿಂದ ತನ್ನ ರಕ್ಷಣೆ ಮಾಡಿಕೊಳ್ಳುವದಲ್ಲದೆ, ಪರಹಿತವನ್ನೂ ಕೂಡ ಸಹಜ ದೃಷ್ಟಿಯಿಂದ ಸಾಧಿಸುವದು ಕ್ಷೇಮಕರವಾದುದು. ನಮ್ಮ ಪಂಚಾಚಾರಾಂತರ್ಗತ ಸದಾಚಾರವು ಇವನ್ನೇ ಹೇಳುತ್ತದೆ. ಇದೇ ನಿಜವಾದ ದಾಸೋಹವೃತ್ತಿಯು. ಊರೂರು ಮನೆಮನೆ ತಿರುಗಾಡಿ, ಭಿಕ್ಷೆ ಬೇಡಿ ತಂದು, ತಾವು ದಾಸೋಹವನ್ನು ಸಾಗಿಸುತ್ತೇವೆಂದು ತಿಳಿಯುವದು ದೊಡ್ಡದೊಂದು ಭ್ರಮೆಯಲ್ಲದೆ, ಅದರಿಂದ ಅವರಿಗಾವ ಶ್ರೇಯಸ್ಸೂ ಇಲ್ಲವೆಂಬದು ಕೆಳಗಿನ ಉಕ್ತಿಯಿಂದ ಗೊತ್ತಾಗುವದು. "ಕೆರೆಯ ನೀರು ಹರಗೆರೆದರೆ ವರವದೆಂತು ದೊರೆವುದಯ್ಯಾ ? ಅದರೊಳಗೆ ಅವನದೇನಿರುವದಯ್ಯಾ ? ತದುಪರಿ ಪರರ ಮರುಗಿಸಿ ಅವರೊಡನೆ ತಿರಿತಂದು, ತಾನುಂಡು, ಮಿಕ್ಕಿದುದ ಮನವಿಲ್ಲದೆ ಹೆಸರಿಂಗಾಗಿ ಹೆರವರಿಗೆ ಇಕ್ಕಿದೊಡೆ, ಅದರೊಳಿಹ ಪೌರುಷವಾವುದಯ್ಯಾ ? ಹಾವು ಹಣಿದು ಹದ್ದಿಂಗಿತ್ತ ತೆರನಾಯಿತ್ತವರ ಬಾಳುವೆ ! ಧಿಕ್‌ಧಿಕ್ ! ಇಂತಹ ಭಂಡರ ಮುಖವನೊಮ್ಮೆಯಾದರೂ ತೋರದಿರಾ, ಮನದೊಡೆಯ ಮಹಾದೇವಾ."

ಈ ದಾಸೋಹ ಮಠಗಳ ಆದಿ ಪ್ರವರ್ತಕರು ಅಸಾಧಾರಣ ಮಹಿಮಾ ಪುರುಷರೇ ಆಗಿದ್ದರೆಂದೂ, ಅವರ ಅದ್ವಿತೀಯ ಪವಾಡಗಳಿಗೂ ಅಪ್ರತಿಮ ವೈರಾಗ್ಯಕ್ಕೂ ಬೆರಗಾಗಿ ಮನಸೋತು ಭಕ್ತಿ ಪರವಶರಾಗಿ, ಆಗಿನ ಜನರು ತಾವಾಗಿಯೇ ತಂದು, ಹೇರಳ ಧನ ಧಾನ್ಯಾದಿಗಳನ್ನು ಅವರ ಪಾದಕ್ಕೆ ಸಲ್ಲಿಸಿ, ಮಠದಲ್ಲಿ ದಾಸೋಹ ನಡಿಸುತ್ತಿದ್ದರೆಂದೂ, ಈಗಳೂ ಜನತೆಯಲ್ಲಿ ಪ್ರವಾದಗಳಿರುತ್ತವೆ. ಇದು ಸ್ವಾಭಾವಿಕ ದಾಸೋಹವು! ಆ ಸ್ವಾಮಿ ಮಹಾನುಭಾವರು ಯಾರನ್ನೂ ಕೇಳಲಿಲ್ಲ, ಬೇಡಲಿಲ್ಲ. ತಾನಾಗಿ ನಡೆದು ಬಂದುದುದನ್ನು ನಿಃಸ್ವಾರ್ಥತೆ ನಿರುದ್ದೇಶಗಳಿಂದ ಗುರುಲಿಂಗ ಜಂಗಮ ಸೇವೆಗೆ ಸಮರ್ಪಿಸಿ ಕೃತಾರ್ಥರಾದರು. ಅವರ ಈ ಚಿತ್ರವನ್ನು ನೋಡಿರಿ. ಈಗಿನ ದಾಸೋಹ ಮಠಗಳ ವೈಚಿತ್ರ್ಯವನ್ನು ನೋಡಿರಿ!

ಹೀಗೆ ದೊಡ್ಡ ಪ್ರಮಾಣದಿಂದ ದಾಸೋಹ ಜರಗಿಸುವದು ಎಲ್ಲರಿಗೂ ಯಾವಾಗಲೂ ಸಾಧ್ಯವಿಲ್ಲ. ಆದರೂ ಮೋಳಿಗೆಯ ಮಾರಯ್ಯ, ನುಲಿಯ ಚಂದಯ್ಯ, ಹಡಪದ ಅಪ್ಪಣ್ಣ, ಮಡಿವಾಳ ಮಾಚಿದೇವರು, ಆಯ್ದಕ್ಕಿಯ ಮಾರಯ್ಯಗಳು, ಡೋಹರ ಕಕ್ಕಯ್ಯ, ಮಾದರ ಚೆನ್ನಯ್ಯ, ಗಾಣದ ಕನ್ನಪ್ಪಯ್ಯ, ಅಂಬಿಗರ ಚೌಡಯ್ಯ, ಮೇದಾರ ಕೇತಯ್ಯ, ಮೊದಲಾದ ಶಿವಶರಣರು ಸತ್ಕಾಯಕವನ್ನು ಸ್ವೀಕರಿಸಿ, ತಮಗೆ ಶಿವಾನುಗ್ರಹದಿಂದ ದೊರೆತುದರಲ್ಲಿಯೇ ಗುರುಲಿಂಗ ಜಂಗಮ ಸೇವೆಯನ್ನು ಮಾಡಿ, ಆನಂದದಿಂದ ಜೀವನ ಯಾತ್ರೆಯನ್ನು ಸಾಗಿಸಿ, ಜಗದಲ್ಲಿ ಧನ್ಯರೂ ಆದರ್ಶ ಸದ್ಭಕ್ತರೂ ಆಗಲಿಲ್ಲವೇ! ಇಂತಹ ತ್ರಿವಿಧ ದಾಸೋಹವನ್ನು ವೀರಶೈವರೆಲ್ಲರೂ ಆಚರಿಸುವದು ಯುಕ್ತವಲ್ಲವೇ!

---

# ದತ್ತಾತ್ರೇಯ.

(ಲೇಖಕ— ವೇ. ಮೂ. ಬುದ್ದಯ್ಯಾ ಪುರಾಣಿಕ ಧಾರವಾಡ.)

ಈ "ದೇವರ ವಿಷಯವಾಗಿ ಮಹಾಭಾರತದಲ್ಲಿ ಎರಡು ಸಂದರ್ಭಗಳಲ್ಲಿ ಉಲ್ಲೇಖವಿದೆ. ಒಂದನೆಯದು ವನಪರ್ವದ ೧೧೫ನೆಯ ಅಧ್ಯಾಯದಲ್ಲಿ— ಸಹಸ್ರಾರ್ಜುನನಿಗೆ ದತ್ತಾತ್ರೇಯನ ಪ್ರಸಾದದಿಂದ ಒಂದು ವಿಮಾನವು ದೊರೆತಿದ್ದರ ವರ್ಣನೆಯು ಹೇಳಲ್ಪಟ್ಟದೆ. ಇದನ್ನೇ ಶಾಂತಿಪರ್ವದ ೪೯ನೆಯ ಅಧ್ಯಾಯದಲ್ಲಿ ಪುನಃ ಹೇಳಲಾಗಿದೆ. ಇವುಗಳಲ್ಲದೆ ಅನುಶಾಸನ ಪರ್ವದ ೯೧ನೆಯ ಅಧ್ಯಾಯದಲ್ಲಿ ದತ್ತಾತ್ರೇಯನು ಅತ್ರಿಯ ಪುತ್ರನೆಂದು ವರ್ಣನೆಯಿದೆ. ೧

## ಜನ್ಮ

"ಮಹಾಭಾರತದಲ್ಲಿ ದತ್ತಾತ್ರೇಯನ ಜನನದ ವಿಚಾರವಾಗಿ ಏನೂ ಹೇಳಿಲ್ಲ." ೨ ಮಹಾರೋಗದಿಂದ ಪೀಡಿತನಾದ ಕೌಶಿಕ ಋಷಿಗೆ ಮಾಂಡವ್ಯನು "ಸೂರ್ಯೋದಯವಾಗುವದರೊಳಗಾಗಿ ಮರಣ ಹೊಂದು" ಎಂದು ಶಾಪವನ್ನು ಕೊಡಲು— ಕೌಶಿಕನು ತನ್ನ ಸತಿಯ ಪಾತಿವ್ರತ್ಯ ಧರ್ಮದ ಪ್ರಭಾವದಿಂದ ಸಾಯಲೇ ಇಲ್ಲ; ಮತ್ತು ಸೂರ್ಯೋದಯವಾಗದಿದ್ದುದರಿಂದ ಸಚರಾಚರ ಪ್ರಾಣಿಗಳೂ ದೇವತೆಗಳೂ ಭೀತಿಗ್ರಸ್ತರಾದರು. ಆದ್ದರಿಂದ ಆ ಸತಿಯನ್ನು ಪ್ರಸನ್ನೀಕರಿಸುವ ಸಲುವಾಗಿ ಬ್ರಹ್ಮ, ವಿಷ್ಣು, ಮಹೇಶರು ಅತ್ರಿಪತ್ನಿ ಅನುಸೂಯೆಯ ಆರಾಧನೆಯನ್ನು ಕೈಕೊಂಡರು. ಅನುಸೂಯೆಯು ತನ್ನ ಪ್ರಭಾವದಿಂದ ಕೌಶಿಕನನ್ನು ಜೀವಂತವಾಗಿರಿಸಿ, ಕೌಶಿಕ ಪತ್ನಿಗೆ ಸಂತೋಷಗೊಳಿಸಿ ಸೂರ್ಯೋದಯವನ್ನುಂಟುಮಾಡಿದಳು. ಇದಕ್ಕೆ ದೇವತೆಗಳು ಪ್ರಸನ್ನರಾಗಿ ಅನುಸೂಯೆಯ ಇಚ್ಛೆಯಂತೆ ಬ್ರಹ್ಮೇಶಜನಾರ್ದನರು ಆವಳ ಉದರದಲ್ಲಿ ದತ್ತರೂಪದಿಂದ ಜನ್ಮತಾಳಿದರು." ಈ ಕತೆಯು ಮಾರ್ಕಂಡೇಯ ಪುರಾಣದ ಅಧ್ಯಾಯ ೧೬ ೧೮ ರಲ್ಲಿ ಇದೆ ಯೆಂದು ಶ್ರೀ ಗಣೇಶ ಹರಿಖರೆ, ಕ್ಯೂರೇಟರ, ಭಾರತ

---

೧. ಮಹಾರಾಷ್ಟ್ರ ಜ್ಞಾನಕೋಶ ಭಾಗ ೧೬, ೧೫, ದ ಅಕ್ಷರ ೧೫

೨. ” ” ” ” ” ”

ಇತಿಹಾಸ ಸಂಶೋಧಕ ಮಂಡಲ, ಪುಣೆ ಇವರು ಹೇಳಿರುವರು. [೧] ಇದನ್ನೇ ಶ್ರೀ ಖರೆಯವರು "ಅತ್ರಿ ಋಷಿಗಳು ಪುತ್ರ ಪ್ರಾಪ್ತಿಗೋಸುಗ ಉಗ್ರ ತಪಸ್ಸನ್ನು ಮಾಡಿದುದರಿಂದ ಅವನ ಮಸ್ತಕದಿಂದ ತ್ರೈಲೋಕ ದಾಹಕ ಜ್ವಾಲೆಗಳು ಉತ್ಪನ್ನವಾದುವು. ಇದರ ಶಾಂತಿಗಾಗಿ ದೇವ ತ್ರಯಿಗಳು ಅನುಸೂಯೆಯ ಉದರದಲ್ಲಿ ಜನ್ಮ ತಾಳಬೇಕಾಯಿತು" ಎಂದು ಅದೇ ಪುಸ್ತಕದಲ್ಲಿ ಹೇಳಿರುವರು. [೨] ಇವನ ಜನ್ಮವನ್ನು ಗುರು ಚರಿತ್ರೆಕಾರನು "ಅಂಬಋಷಿಗಳಿಗೆ ದೂರ್ವಾಸನು ಶಾಪ ಕೊಟ್ಟದ್ದರಿಂದ ಮಹಾ ತಪಸ್ವಿಗಳಾದ ಅತ್ರಿಋಷಿ ಹಾಗೂ ಅವನ ಪತ್ನಿ ಅನುಸೂಯೆ ಇವರ ಗರ್ಭದಲ್ಲಿ ಪರಮೇಶ್ವರನು ಜನ್ಮ ತಾಳಬೇಕಾಯಿತು" ಎಂದು ಇನ್ನೊಂದು ರೀತಿಯಿಂದ ಹೇಳಿರುವನು. [೩]

ಡಾ. ಶ್ರೀಧರ ವೆಂಕಟೇಶ ಕೇತಕರ ಇವರು "ಸಾವಿತ್ರಿ-ಲಕ್ಷ್ಮಿ ಹಾಗು ಪಾರ್ವತಿಯರು ನಮ್ಮಂಥ ಪತಿವ್ರತೆಯರು ಭೂಲೋಕದಲ್ಲ ಯಾರಾದರೂ ಉಂಟೇ? ಎಂದು ನಾರದನಿಗೆ ಪ್ರಶ್ನಿಸಲು—ನಾರದನು ಅತ್ರಿಪತ್ನಿ ಅನುಸೂಯೆಯ ಹೆಸರನ್ನು ಸೂಚಿಸಲು—ಅವಳ ಸತ್ವ ಪರೀಕ್ಷೆಗಾಗಿ ಆ ಶಕ್ತಿತ್ರಯರು ತಂತಮ್ಮ ಪತಿಯರನ್ನು ಕಳುಹಿಸಿದರು. ಈ ತ್ರಿಮೂರ್ತಿಗಳು ಅತ್ರಿಋಷಿಯು ಸ್ನಾನಕ್ಕೆ ಹೋದಾಗ್ಗೆ ಅವನ ಆಶ್ರಮಕ್ಕೆ ಹೋಗಿ ಊಟದ ಭಿಕ್ಷೆಗಾಗಿ ಅನುಸೂಯೆಯನ್ನು ಬೇಡಿದರು. ಅನುಸೂಯೆಯು ಒಪ್ಪಿ ತನ್ನ ಪತಿಯ ಪಾದೋದಕವನ್ನು ಅವರ ಮೇಲೆ ಚಿಮುಕಿಸಲು ಅವರು ಶಿಶುರೂಪವನ್ನು ತಾಳಿದರು. ಆಗ ಅನುಸೂಯೆಯು ಆ ಶಿಶುಗಳನ್ನು ತೊಟ್ಟಿಲಲ್ಲಿ ಹಾಕಿ ಜೋಗುಳ ಪಾಡುತ್ತಿರಲು ಅತ್ರಿ ಋಷಿಯು ಬಂದು ನೋಡಿದನು. ಇತ್ತ ನಾರದನು ಈ ವಿಚಾರವನ್ನು ಕೈಲಾಸದಲ್ಲಿ ಶಕ್ತಿತ್ರಯರಿಗೆ ನಿರೂಪಿಸಲು— ಅವರು ತಮ್ಮ ಪತಿಗಳ ವಿವೇಚನೆಗಾಗಿ ಅನುಸೂಯೆಯ ಬಳಿಗೆ ಬಂದು ಯಾಚಿಸತೊಡಗಿದರು. ಆಗ್ಗೆ ಅನುಸೂಯೆಯು ಆ ಮೂರೂ ಶಿಶುಗಳನ್ನು ಮುಂದೆ ಮಾಡಲು— ಅದರಲ್ಲಿ ತಂತಮ್ಮ ಪತಿಯರನ್ನು ಶಕ್ತಿತ್ರಯರು ಗುರುತಿಸಲಾರದೆ ಹತಾಶರಾಗಲು— ಅನುಸೂಯೆಯು ಇದನ್ನು ತಿಳಿದು ತನ್ನ ಹಸ್ತ ಸ್ಪರ್ಶ

೧. ಗ ಹ. ಖರೆಕೃತ 'ಮೂರ್ತಿವಿಜ್ಞಾನ' ಪುಟ ೩೮
೨. ,, ,, ,, ,,
೩. ಗುರು ಚರಿತ್ರೆ ಅಧ್ಯಾಯ ೪ ಓವಿ ೩೫.



ಮಾಡಲು- ಆ ಶಿಶುಗಳು ತಮ್ಮ ನಿಜಸ್ವರೂಪವನ್ನು ತಾಳಿದುವು. ಆಗ್ಗೆ ತ್ರಿಮೂರ್ತಿಗಳು ಅನುಸೂಯೆಗೆ ಪ್ರಸನ್ನರಾಗಿ ನಿನ್ನ ಅಭೀಷ್ಟವನು ಬೇಡೆಂದು ಹೇಳಲು-ಅದಕ್ಕೆ ಅನುಸೂಯೆಯು ನಿಮ್ಮಂಥ ಒಬ್ಬ ಪುತ್ರನು ಬೇಕೆಂದು ಯಾಚಿಸಲು— ತ್ರಿಮೂರ್ತಿಗಳು ಅದಕ್ಕೆ ಒಪ್ಪಿ- ಅವಳ ಗರ್ಭದಲ್ಲಿ ದತ್ತ ರೂಪದಿಂದ ಅವತರಿಸಿದರು" ಎಂದು ದತ್ತಾತ್ರೇಯನ ವಿಷಯವಾಗಿ ಈ ರೀತಿಯಲ್ಲಿ ಪ್ರಚಾರದಲ್ಲಿದ್ದ ಕತೆಯು ಭಾಗವತ ಸ್ಕಂದ ೪ ಅಧ್ಯಾಯ ೧ ರಲ್ಲಿ ಇದೆ" ಎಂದು ತಮ್ಮ ಮಹಾರಾಷ್ಟ್ರ ಜ್ಞಾನ ಕೋಶದಲ್ಲಿ ಹೇಳಿರುವರು. [೧]

ಇದನ್ನು ನೋಡಲಾಗಿ ದತ್ತನ ಜನ್ಮ ವಿಚಾರವು ಇನ್ನೂ ಚರ್ಚಾಸ್ಪದವಾದ ವಿಚಾರವಾಗಿಯೇ ಉಳಿದಿರುವದೆಂದು ಗೋಚರಿಸುವುದು.

## ದತ್ತಾಂಶ ಮತ್ತು ಲಗ್ನ

ಮೂರ್ತಿ ವಿಜ್ಞಾನ ಪುಸ್ತಕದೊಳಗಿದ ಎರಡೂ ಕಥೆಗಳಲ್ಲಿ ವಿಷ್ಣುವಿನ ಅಂಶದ ಪುತ್ರನೇ ದತ್ತಾತ್ರೆಯನೆಂದು ವರ್ಣನೆ ಇದೆ. [೨] ಮತ್ತು ಭಾಗವತ ಸ್ಕಂದ ೪ ಅಧ್ಯಾಯ ೧ ರಲ್ಲಿಯೂ ದತ್ತಾತ್ರೆಯನು ವಿಷ್ಣುವಿನ ಅಂಶವೆಂದೇ ಹೇಳಲ್ಪಟ್ಟದೆ. [೩] ಮಾರ್ಕಂಡೇಯ ಪುರಾಣದ ೧೭-೧೯ ನೆಯ ಅಧ್ಯಾಯಗಳಲ್ಲಿ ದತ್ತಾತ್ರೆಯನು ಸಪತ್ನಿಕನೆಂದು ಹೇಳಿದೆ [೪] ಇದೇ ವಿಷಯವನ್ನು ಶ್ರೀ ಖರೆಯವರು "ದೇವದಾನವರ ಯುದ್ಧ ನಡೆದಾಗ್ಗೆ ದೇವತೆಗಳು ಓಡಿ ಹೋಗಿ ದತ್ತಾತ್ರೆಯನನ್ನು ಆಶ್ರಯಿಸಲು— ದೈತ್ಯರು ಕೂಡಾ ಅವರನ್ನು ಬೆನ್ನಟ್ಟಿ ದತ್ತನ ಆಶ್ರಮವನ್ನು ಹೊಕ್ಕರು. ಅಲ್ಲಿ ದಾನವರು ದತ್ತನ ಸುಂದರ'ಪತ್ನಿ ಲಕ್ಷ್ಮಿಯನ್ನು ನೋಡಿದೊಡನೆಯೇ ದೇವತೆಗಳನ್ನು ಬಿಟ್ಟು ಲಕ್ಷ್ಮಿಯನ್ನು ತಲೆಯ ಮೇಲಿಟ್ಟುಕೊಂಡು ಹಿಂತಿರುಗಿದರು. ಆಗ್ಗೆ ದೇವತೆಗಳೆಲ್ಲ ದತ್ತನ ಸಹಾಯದಿಂದ ದಾನವರ ಕೂಡ ಹೋರಾಡಿ ವಿಜಯವನ್ನು ಸಂಪಾದಿಸಿ ಲಕ್ಷ್ಮಿಯನ್ನು ತಿರುಗಿ

೧. ಮ. ಜ್ಞಾ. ಕೋಶ ಭಾಗ ೧೪, ೧೫ ದ. ಅಕ್ಷರ ೧೫
೨. ಗ. ಹ. ಖರೆ ಕೃತ'ಮೂರ್ತಿ ವಿಜ್ಞಾನ' ಪುಟ ೩೮
೩. ಮ. ಜ್ಞಾ. ಕೋಶ ಭಾಗ ೧೪—೧೫ ದ. ಅಕ್ಷರ ೧೫
೪. ,, ,, ,, ,, ,, ,,

ತಂದರು" ಎಂದು ಮಾರ್ಕಂಡೇಯ ಪುರಾಣದ ಅಧ್ಯಾಯ ೧೬-೧೮ ರಲ್ಲಿ ವರ್ಣನೆಯಿದೆ ಎಂದು- ಈ ರೀತಿಯಾಗಿ ಹೇಳಿರುವರು ೧

ದತ್ತಾಂಶ ವಿಷಯವಾಗಿ ತ್ರಿಮೂರ್ತಿಗಳ ಕಲ್ಪನೆಯು ಅಳಿದು ಇಲ್ಲಿ ವಿಷ್ಣುವಿನ ಅಂಶಕ್ಕೆ ಬಂದಿದೆ. ಇನ್ನು, ದತ್ತನು ಬ್ರಹ್ಮಚಾರಿಯಾಗಿರದೆ ಸಪತ್ನಿಕನೆಂದು ನಿಃಸಂಶಯವಾಗಿ ಮೇಲಿಂದ ಸಿದ್ಧವಾಗುತ್ತಿದೆ.

## ದತ್ತ ಸ್ವರೂಪ

ದತ್ತಾತ್ರೇಯನು ಒಂದು ಮುಖದವನೆಂದು ಭಾಗವತ ಸ್ಕಂದ ೪ ಅಧ್ಯಾಯ ೧ ರಲ್ಲಿ ವರ್ಣನೆ ಇದೆ. ೨ ಇದರಂತೆಯೇ ಗುರುಚರಿತ್ರೆಯಲ್ಲಾದರೂ ಅವನ ಸ್ವರೂಪವನ್ನು ನಿರೂಪಿಸಿರುವುದು ಕಂಡು ಬರುವುದು. ೩ ಶ್ರೀ ಗ. ಹ. ಖರೆ ಇವರು "ಬ್ರಹ್ಮ- ವಿಷ್ಣು ಮಹೇಶರನ್ನು ಒಂದುಗೂಡಿಸಿ ದತ್ತನ ಸ್ವರೂಪವನ್ನು ತೋರಿಸುವುದು ಒಂದು ಪ್ರಕಾರ— ಎರಡನೆಯದಾಗಿ ವಿಷ್ಣುವನ್ನು ಯೋಗಿಯಾಗಿ ಕಲ್ಪಿಸಿ ಅವನ ಆಸನದ ಕೆಳಗೆ ಹಂಸ-ಗರುಡ ಮತ್ತು ನಂದಿ ಈ ಮೂರು ವಾಹನಗಳನ್ನು ತೋರಿಸುವುದು—ಮೂರನೆಯದಾಗಿ ಬ್ರಹ್ಮ-ವಿಷ್ಣು-ಮಹೇಶ್ವರನ್ನು ಸಂಯುಕ್ತ ರೂಪದಿಂದ ಚಿತ್ರಿಸಿ ತೋರಿಸುವುದು."—ಎಂದು ಕೈ. ವಾ. ಗೋಪಿನಾಥರವರ ಅಭಿಪ್ರಾಯವನ್ನು ತಮ್ಮ ಪುಸ್ತಕದಲ್ಲಿ ೪ ವ್ಯಕ್ತಗೊಳಿಸಿರುವರು. ಇನ್ನು ಶ್ರೀ ಖರೆಯವರು ಕಲ್ಪಿಸಿರುವ— ಯೋಗಾಸನದಲ್ಲಿ ಕುಳಿತಿರುವ- ಮೇಲಿನ ಎರಡು ಕೈಗಳಲ್ಲಿ ಶಂಖ, ಚಕ್ರಗಳಿರುವ ಕೆಳಗಿನ ಎರಡು ಕೈಗಳ ಅಂಗೈಗಳನ್ನು ತೊಡೆಯ ಮೇಲೆ ಎಡದ ಕೈ ಕೆಳಗೂ ಬಲದ ಕೈ ಮೇಲಾಗಿಯೂ- ವ್ಯಾಖ್ಯಾನ ಮುದ್ರೆಯಿಂದಿರುವ ಆಸನದಲ್ಲಿ ಅನುಕ್ರಮವಾಗಿ ಗರುಡ, ನಂದಿ, ಹಂಸ, ಈ ಪ್ರಕಾರವಾಗಿ ಮೂರು ವಾಹನಗಳಿಂದ ಚಿತ್ರಿಸಿರುವ ಮೂರ್ತಿಯೊಂದನ್ನು ಬದಾಮಿಯಲ್ಲಿ ತಾವು ನೋಡಿರುವೆವು ಎಂದೂ— ಇದೇ ರೀತಿ ದತ್ತನ ಸ್ವರೂಪವಿದ್ದರೆ ಒಳಿತಾಗುವದೆಂದೂ ಮತ್ತು ತ್ರಿಮೂರ್ತಿಗಳನ್ನು ಒಟ್ಟುಗೂಡಿಸಿ

೧. ಶ್ರೀ. ಗ. ಹ. ಖರೆ ಕೃತ 'ಮೂರ್ತಿವಿಜ್ಞಾನ' ಪುಟ ೩೮.
೨. ಮ. ಜ್ಞಾ. ಕೋಶ ಭಾಗ ೧೪—೧೫ ದ. ಅಕ್ಷರ ೧೫
೩. ಗುರು ಚರಿತ್ರೆ ಅ. ೪. ಓವಿ ೬೮.
೪. ಗ. ಹ. ಖರೆ ಕೃತ 'ಮೂರ್ತಿ ವಿಜ್ಞಾನ' ಪುಟ ೩೯



ಚಿತ್ರಿಸಿದರೆ ದತ್ತನ ಸ್ವರೂಪವು ಹೊರಹೊಮ್ಮದೆಂದೂ ಅಭಿಪ್ರಾಯಪಡುತ್ತಾರೆ ೧.

ಇದನ್ನು ವಿಚಾರಿಸಲಾಗಿ ದತ್ತನ ಸ್ವರೂಪವು ಹೀಗೆಯೇ ಎಂದು ಇನ್ನೂ ನಿರ್ದಿಷ್ಟವಾಗಿ ಹೇಳಲು ಬರುವಂತಿಲ್ಲ. ಅಂದ ಮೇಲೆ ದತ್ತಸ್ವರೂಪವೂ ಚರ್ಚಾಸ್ಪದವಾಗಿರುವುದು.

## ದತ್ತನ ವೈದಿಕತ್ವ

ಡಾ. ಶ್ರೀಧರ ವೆಂಕಟೇಶ ಕೇತಕರ ಇವರು " ದತ್ತಾತ್ರೆಯ ಈ ದೇವರು ವೈದಿಕ ಇರದಿದ್ದರೂ ಬ್ರಹ್ಮ-ವಿಷ್ಣು-ಮಹೇಶ ಈ ಮೂರು ವೈದಿಕ ದೇವತೆಗಳದ್ದೇ ಆಗಿರುವದೆಂದು ಹೇಳಿರುವರು. ೨ ಇತ್ತಿಚೆಗೆ ಗೌಡ ಸಾರಸ್ವತ ವೈಷ್ಣವ ಬ್ರಾಹ್ಮಣನಾದ ಶ್ರೀ ನಾರಾಯಣಚಾರ್ಯ ಕುಮಠ ಎಂಬವರು ತಾವು ಪ್ರಸಿದ್ಧ ಮಾಡಿದ 'ಗುರು ಪರಂಪರಾಮೃತ' ವೆಂಬ ಗ್ರಂಥದಲ್ಲಿ ದತ್ತನ ತ್ರಿಮೂರ್ತಿ ಮತ್ತು ಷಡ್ಭುಜ ಮೂರ್ತಿಯ ವೈದಿಕ ಧರ್ಮದ ವಿರುದ್ಧವಿದ್ದು ತ್ರಿಮುಖಿ ದತ್ತನ ಉಪಾಸಕರು ಈಶ್ವರದ್ರೋಹಿಗಳೆಂದು ಟೀಕಿಸಿ ಇಂಥ ಮೂರ್ತಿಗಳ ಉತ್ಸವಗಳಲ್ಲಿ ಭಾಗಿಗಳಾಗಕೂಡದೆಂದು " ತಾ॥ ೭-೧೧-೧೯೦೫ ರ 'ಧರ್ಮ' ಮಾಸಿಕದಲ್ಲಿ ಕೊಟ್ಟಿದ್ದನ್ನು ಎತ್ತಿ ಹೇಳಿರುವರು. ೩

ಇದನ್ನು ಪರಿಶೀಲಿಸಲಾಗಿ ದತ್ತಾತ್ರೆಯನು ವೈದಿಕನಲ್ಲವೆಂಬುದು ಸಹಜ ಸಿದ್ಧವಾಗುವದು.

## ದತ್ತನ ಸಂಪ್ರದಾಯ

ಡಾ. ಶ್ರೀಧರ ವೆಂಕಟೇಶ ಕೇತಕರ ಇವರು " ದತ್ತಾತ್ರೇಯನು ನಿರಂತರವಾಗಿ ವಾಮಮಾರ್ಗಿಯಾಗಿದ್ದನೆಂದು ಮಾರ್ಕಂಡೇಯ ಪುರಾಣ ಅಧ್ಯಾಯ ೧೭, ೧೯ ರಲ್ಲಿ ವರ್ಣನೆ ಇದೆ " ಎಂದು ಹೇಳಿರುವರು. ೪ ಇನ್ನು ಶ್ರೀ ಖರೆಯವರು—ದತ್ತಾತ್ರೆಯನ ಚರಿತ್ರೆಯ ವಿಷಯವಾಗಿ

೧. ಗ. ಹ. ಖರೆ ಕೃತ 'ಮೂರ್ತಿವಿಜ್ಞಾನ' ಪುಟ ೩೯.
೨. ಮ. ಜ್ಞಾ. ಕೋಶ ಭಾಗ ೧೪, ೧೪ ದ. ಅಕ್ಷರ ೧೫.
೩. ,, ,, ,, ,,
೪. ,, ,, ,, ,,

ಯಾವ ಯಾವ ಸಂಗತಿಗಳು ಉಪಲಬ್ಧವಿರುವವೋ ಅವುಗಳನ್ನು ನೋಡ ಲಾಗಿ "ಇವನು ಒಂದು ಗುಪ್ತ ಪಂಥದ ಚಾಲಕನಿರಬಹುದೆಂದು ತೋರು ತ್ತದೆ; ಶೈವರಲ್ಲಿ ಯಾವ ಪ್ರಕಾರವಾಗಿ ಲಾಕುಲೀಶ, ಕಾಪಾಲಿಕ, ಅಘೋರ, ನಾಥ ಮೊದಲಾದ ಹೆಚ್ಚುಕಡಿಮೆ ಪ್ರಮಾಣದೊಳಗೆ ಗುಪ್ತಮಾರ್ಗಾನು ಯಾಯಿ, ಘೋರ ಮತ್ತು ಲೌಕಿಕ ದೃಷ್ಟಿಯಿಂದ ಅನಾಚಾರವುಳ್ಳದ್ದೂ ತಾಂತ್ರಿಕ ಕ್ರಿಯಾಮಯವಾದದ್ದೂ ಹಾಗ ಹಠಯೋಗ ಪ್ರಧಾನವುಳ್ಳ ಪಂಥಗಳಿರುವವೋ ಅವುಗಳಂತೆ ಇಲ್ಲವೆ ಶಾಕ್ತರವಾಮಚಾರಿ ಮಾರ್ಗದಂತೆ ಈ ಪಂಥದ ಸ್ವರೂಪವಿರಬಹುದು. ಅರ್ಥಾತ ಇದು ವೈಷ್ಣವ ಪಂಥವು. ಇತರ ಧರ್ಮಗಳಂತೆ ಇದರ ಧ್ಯೇಯವಾದರೂ ಆತ್ಮಜ್ಞಾನದ ಅನುಭವವೇ ಇರಬಹುದು. ಏಕನಾಥನ ಗುರುವಾದ ಜನಾರ್ದನ ಸ್ವಾಮಿಯು ಇದೇ ಮಾರ್ಗದ ಅನುಯಾಯಿ ಇದ್ದಂತೆ ತೋರುತ್ತದೆ" ಎಂದು ಹೇಳು ತ್ತಾರೆ. ೧ ದತ್ತಾತ್ರೇಯನ ಚರಿತ್ರೆಯ ವಿಷಯವಾಗಿ ಯಾವ ಬೇರೆಬೇರೆ ಕಥೆಗಳಿರುವವೋ ಅವುಗಳಲ್ಲಿಯವೊಂದು ಭಾಗವತ ಪುರಾಣದಲ್ಲಿ ಹೇಳ ಲ್ಪಟ್ಟಿದೆ. ಆದ್ದರಿಂದ ಇಲ್ಲಿ ಭಾಗವತ ಪುರಾಣದ ವಿಷಯವಾಗಿ ಹೆಚ್ಚು ಚರ್ಚಿಸಬೇಕಾಗಿದೆ.

## ಭಾಗವತ ಪುರಾಣ

"ಈ ಪುರಾಣದ ಕೈಬರೆಹದ ಹಾಗು ಮುದ್ರಿತವಾದ ನೂರಾರು ಪ್ರತಿ ಗಳು ದೊರೆಯುತ್ತಿವೆ. ಇದಲ್ಲದೆ ಇದರ ಸಂಪೂರ್ಣ ಟೀಕಾ ಗ್ರಂಥ ಗಳೂ ಮತ್ತು ಅದರೊಳಗಿನ ಕೆಲವು ಭಾಗಗಳ ಸ್ಪಷ್ಟೀಕರಣಾರ್ಥವಾಗಿ ಬಹಳ ಲೇಖನಗಳೂ ಪ್ರಸಿದ್ಧವಾಗಿವೆ. ಪಾಶ್ಚಾತ್ಯ ಭಾಷೆಗಳಲ್ಲಿಯೂ ಕೂಡ ಇದರ ಭಾಷಾಂತರವು ಮಾಡಲ್ಪಟ್ಟಿದೆ. (Paris 1840-1847) ಇದರಲ್ಲಿಯ ವಿಷಯ ಪ್ರತಿಪಾದನೆಯೂ ಅನೇಕ ಶಬ್ದಗಳ ಹೋಲಿಕೆಯೂ ವಿಷ್ಣು ಪುರಾಣದಂತೆಯೆ ಇರುವುದು. ಇದನ್ನು ನೋಡಲಾಗಿ ವಿಷ್ಣು ಪುರಾಣವನ್ನೇ ಆಧಾರವಾಗಿಟ್ಟುಕೊಂಡು ಬರೆದಂತೆ ತೋರುತ್ತದೆಂದು ಶ್ರೀ ವಿಂಟರ ನಿಟ್ಜ ಇವರು ತರ್ಕಿಸುತ್ತಾರೆ. ವ್ಯಾಸ ಕೃತ ೧೮ ಪುರಾಣ ದೊಳಗಿನ ವಿಷಯವು ಇದು ಅಹುದೋ ಅಲ್ಲೋ ಎಂಬ ಸಂಶಯ ವನ್ನು ವ್ಯಕ್ತಮಾಡುತ್ತಾರೆ. ಮತ್ತು ಮಹಾ ಭಾರತದೊಳಗಿನ ವಿಷಯ ಸಾಮ್ಯತೆಯೂ ಇದರ ಬಹು ಭಾಗದಲ್ಲಿ ಕಂಡುಬರುತ್ತದೆ. ಭಾಗವತ

೧. ಶ್ರೀ. ಗ. ಹ. ಖರೆ ಕೃತ 'ಮೂರ್ತಿವಿಜ್ಞಾನ' ಪುಟ ೪೮



ಪುರಾಣದ ಕರ್ತೃವು ವೈಯಾಕರಣಿ ಬೊಪ್ಪದೇವನೆಂದು ಮೆಸರ್ಸ ಕೋಲ ಬ್ರುಕ್ ಬನಾಕ ಮತ್ತು ವಿಲ್‌ಸನ್ ಇವರು ಸಿದ್ಧಮಾಡಿರು ವರು. ಹಾಗು ಇದು ೧೩ನೆಯ ಶತಮಾನದಲ್ಲಿ ರಚಿಸಲ್ಪಟ್ಟಿರಬೇಕೆಂದು ತರ್ಕಿಸುವರು. ರಾಮಾನುಜಾಚಾರ್ಯರಾದರೂ ತಮ್ಮ ಗ್ರಂಥಗಳಲ್ಲಿ ಭಾಗವತ ಪುರಾಣದ ಯಾವ ಆಧಾರವನ್ನೂ ತೆಗೆದುಕೊಳ್ಳದೇ ಕೇವಲ ವಿಷ್ಣು ಪುರಾಣದ ಉತಾರಗಳನ್ನೇ ಕೊಟ್ಟಿರುವದರಿಂದ ಈ ಭಾಗವತ ಪುರಾಣವು ರಾಮಾನುಜಾಚಾರ್ಯರ ನಂತರ ರಚಿಸಲ್ಪಟ್ಟಿರಬಹುದೆಂದೂ ಕೆಲವರು ತರ್ಕಿಸುವರು. ಇನ್ನು ಕೆಲವರು ಕ್ರಿ. ಶ. ಕ್ಕಿಂತಲೂ ಪೂರ್ವ/ ದ್ದೆಂದು ವಾದಿಸುವರು. ಇದರಲ್ಲಿ ೧೨ ಸ್ಕಂದಗಳೂ ೧೮,೦೦೦ ಶ್ಲೋಕ ಗಳೂ ಇರುವುವು. ೧೦ನೆಯ ಸ್ಕಂದದಲ್ಲಿ ಕೃಷ್ಣನ ವರ್ಣನೆಯು ಇದ್ದರೂ ಕೃಷ್ಣನ ಪ್ರೌಢಾವಸ್ಥೆಯ ವರ್ಣನೆಯೂ ಹಾಗೂ ರಾಧೆಯ ಇರವೂ ಕಾಣುವುದಿಲ್ಲ. ೧೧ನೆಯ ಸ್ಕಂದದಲ್ಲಿ ಕೃಷ್ಣನ ಮರಣದ ವರ್ಣನೆಯು ಇರುವುದು' ಎಂದು ಡಾ. ಶ್ರೀಧರ ವೆಂಕಟೇಶ ಕೇತಕರ ಇವರು ಅಭಿ ಪ್ರಾಯಪಟ್ಟಿರುವರು ೧. ಈ ಭಾಗವತ ಪುರಾಣದ ಮರಾಠಿ ಭಾಷಾಂ ತರವನ್ನು ಕ್ರಿ. ಶ. ೧೫೭೩ ರಲ್ಲಿ ಏಕನಾಥರು ಮಾಡಿರುವರು ೨. ಈ ಏಕ ನಾಥನ ಗುರುವು ಜನಾರ್ಧನ ಸ್ವಾಮಿಯೆಂದು ಶ್ರೀ ಗಣೇಶ ಹರಿಖರೆ ಅಂದಿರುವರು ೩.

## ದತ್ತನ ಪ್ರಥಮ ಅವತಾರ.

ಶ್ರೀಪಾದ ಶ್ರೀವಲ್ಲಭನೇ ದತ್ತನ ಪ್ರಥಮ ಅವತಾರವೆಂದು ಜನರು ಯಾವನನ್ನು ತಿಳಿಯುವರೋ ಅದೇ ದತ್ತನು ನರಸೋಬವಾಡಿ (ಕರ ವೀರ) ಯಲ್ಲಿ ಆದವನೆಂದು ಮಹಾರಾಷ್ಟ್ರ ಜ್ಞಾನ ಕೋಶಕಾರರು ಅಭಿ ಪ್ರಾಯಪಡುತ್ತಾರೆ. ಕೊಲ್ಹಾಪುರ ಸಂಸ್ಥಾನದ ನರಸೋಬವಾಡಿಯು ಪಂಚಗಂಗ-ಕೃಷ್ಣ ಈ ಎರಡು ನದಿಗಳ ಸಂಗಮದಲ್ಲಿರುವುದು. ಪೂರ್ವ ದೇಶದ ಪೀಠಾಪುರ ಗ್ರಾಮದಲ್ಲಿ ಆಪಸ್ತಂಭ ಶಾಖೆಯ ಆ ಪಳರಾಜ ಈ ಹೆಸರಿನ ಒಬ್ಬ ಬ್ರಾಹ್ಮಣನಿಗೆ ಸುಮತಿ ಎಂಬ ಒಬ್ಬ ಹೆಂಡತಿ ಇದ್ದಳು.

೧. ಮ. ಜ್ಞಾ. ಕೋಶ ಭಾಗ ೧೮ ಭ. ಅಕ್ಷರ ೨೦
೨. ಶ್ರೀ. ಲ. ರಾ. ಪಾಂಗರಕರ ಕೃತ 'ತುಕಾರಾಮ ಚರಿತ್ರೆ' ಪುಟ ೬೧
೩. ಶ್ರೀ. ಗ. ಹ. ಖರೆ ಕೃತ 'ಮೂರ್ತಿ ವಿಜ್ಞಾನ' ಪುಟ ೪೮.

ಅವರ ಉದರದಿಂದ ವಿಷ್ಣುವು ದತ್ತಾವತಾರ ತಾಳಿದನು[೧]. ದತ್ತನ ಸ್ಥಾನವು ಕರವೀರ ಕ್ಷೇತ್ರದ ಮುಹೂರ ಎಂಬುದು[೨] ಅವನಿಗೆ ಶ್ರೀಪಾದ ಶ್ರೀವಲ್ಲಭನೆಂಬ ಹೆಸರನ್ನಿಟ್ಟರು[೩]. ಇವನ ಅವಸಾನವು ಆಶ್ವೀನ ವದ್ಯ ದ್ವಾದಶಿ ಮೃಗಶಿರ ನಕ್ಷತ್ರದಲ್ಲಿ ಗಂಗೆಯಲ್ಲಿ ಆಯಿತು[೪]. ಇವನ ಕಾಲವು ಸುಮಾರು ಕ್ರಿ. ಶ. ೧೩೯೦ ಇಲ್ಲವೆ ೧೪೦೦ ಆಗಬಹುದು.

## ನರಸಿಂಹ ಸರಸ್ವತಿ ಅವತಾರ

ಉತ್ತರದೇಶದ ಕರಂಜಿಗ್ರಾಮದ ಅಂಬಾಭವಾನಿ ಎಂಬವಳು ವಾಜಸೇನೆ ಶಾಖೆಯ ವಿಪ್ರ ಕುಲದಲ್ಲಿ ಜನ್ಮ ತಾಳಿದಳು. ಇವಳು ಅದೇ ಗ್ರಾಮದ ಮಾಧವನೆಂಬ ಒಬ್ಬ ಬ್ರಾಹ್ಮಣನನ್ನು ಮದುವೆಯಾದಳು[೫]. ತನ್ನ ವಯಸ್ಸಿನ ೧೬ನೆಯ ವರ್ಷದ ಮಂಗಳವಾರ ತ್ರಯೋದಶಿ ದಿವಸ ಗರ್ಭತೊಟ್ಟಳು[೬]. ಇವಳು ಪ್ರತಿ ಶನಿವಾರ ಪ್ರದೋಷ ಪೂಜೆಯಿಂದು ಶ್ರೀ ಶಂಕರನನ್ನು ಆರಾಧಿಸುತ್ತಿರಲು ಅದರ ಪ್ರತಿಫಲವೆಂಬಂತೆ ಓರ್ವ ಪುತ್ರನು ಜನಿಸಿದನು. ಅವನ ಜನ್ಮ ನಾಮವನ್ನು ಸಾಲಿಗ್ರಾಮನೆಂದೂ ಮತ್ತು ಕರೆಯುವ ಹೆಸರು ನರಹರಿ ಎಂದೂ ಇಟ್ಟರು[೭]. ಬ್ರಾಹ್ಮಣರು ಇವನ ಉಪನಯನವನ್ನು ಮಾಡಬೇಕೆಂದು ಯೋಚಿಸಿದರು[೮]. ತನಗೆ ಈ ಮುಂಚೆಯೇ ಉಪನಯನವಾದಂತೆ ಯಜ್ಞೋಪವೀತವನ್ನು ತೋರಿಸಿದನು[೯]. ಬ್ರಾಹ್ಮಣರು ಇದಕ್ಕೊಪ್ಪದೆ ಔಪಚಾರಿಕ ರೀತಿಯಿಂದ ಉಪನಯನವನ್ನು ಮಾಡಿದ ಕೂಡಲೆ ನರಹರಿಯು "ಸನ್ಯಾಸಿ ಮಾರ್ಗವನ್ನು ಸ್ಥಾಪಿಸಲೋಸುಗ ಹೊರಹೊರಟು ಕಾಶೀ ಕ್ಷೇತ್ರಕ್ಕೆ ಬಂದು

೧. ಗುರುಚರಿತ್ರೆ ಅಧ್ಯಾಯ ೫ ಓವಿ ೯—೧೨.
೨. " " " " ೩೫.
೩. " " " " ೫೫—೫೬
೪. " " ೯ " ೪೭—೪೮.
೫. " " ೧೧ " ೩೦ದ ೭.
೬. " " " " ೧೦.
೭. " " " " ೩೦.
೮. " " " " ೪೬.
೯. " " " " ೬೦—೬೧



ಅಲ್ಲಿಯ ಕೃಷ್ಣ ಸರಸ್ವತಿಯ ಕಡೆಯಿಂದ ಸನ್ಯಾಸಿ ಆಶ್ರಮವನ್ನು ತೆಗೆದುಕೊಂಡನು[೧].

## ಗುರುಪರಂಪರೆ

"೧. ಪೂರ್ವಪೀಠ: ಶಂಕರ ೨. ವಿಷ್ಣು ೩. ಬ್ರಹ್ಮ ೪. ವಸಿಷ್ಠ ೫. ಪರಾಶರ ೬. ವ್ಯಾಸ ೭. ಶುಕ ೮. ಗೌಡಪಾದ ೯. ಗೋವಿಂದ ೧೦. ಶಂಕರಾಚಾರ್ಯ ೧೧. ವಿಶ್ವರೂಪ ೧೨. ಜ್ಞಾನಬೋಧನ ಗಿರಿಯ ೧೩. ಸಿದ್ಧಗಿರಿಯ ೧೪. ಈಶ್ವರತೀರ್ಥ ೧೫. ನರಸಿಂಹತೀರ್ಥ ೧೬. ವಿದ್ಯಾತೀರ್ಥ ೧೭. ಶಿವತೀರ್ಥ ೧೮. ಭಾರತೀ ತೀರ್ಥ ೧೯. ವಿದ್ಯಾರಣ್ಯ ೨೦. ಶ್ರೀಪಾದ ೨೧. ವಿದ್ಯಾತೀರ್ಥ ೨೨. ಮಲೆಯಾನಂದ ೨೩ ದೇವತೀರ್ಥ ೨೪. ಸರಸ್ವತಿ ವೃದ್ಧ ೨೫. ಸರಸ್ವತಿಯಾದವೇಂದ್ರ ೨೬. ಕೃಷ್ಣಸರಸ್ವತಿ ೨೭. ನೃರಸಿಂಹ ಸರಸ್ವತಿ" ಎಂದು ಇರುವದು[೨]. ಈ ನರಸಿಂಹ ಸರಸ್ವತಿಯು ನಿಜಾಮ ಇಲಾಖೆಯ ಅಮರಜ ಮತ್ತು ಕೃಷ್ಣಾನದಿಗಳ ಸಂಗಮದಲ್ಲಿರುವ ಗಾಣಗಾಪುರ ಎಂಬಲ್ಲಿ ವಾಸಿಸುತ್ತಿದ್ದನು[೩]. ಇವನು ಕ್ರಿ. ಶ. ೧೩೮೦ ರ ಸುಮಾರಕ್ಕೆ ಧರ್ಮ ಜಾಗ್ರತೆಯ ಕೆಲಸವನ್ನು ಕೈಕೊಂಡಿದ್ದನೆಂದು ಶ್ರೀ ಪಾಂಡರಕರರವರು ಅಭಿಪ್ರಾಯ ಪಡುತ್ತಾರೆ[೪]. ಇವನು ಬಹುಧಾನ್ಯ ನಾಮಸಂವತ್ಸರದ ಮಾಘಮಾಸ ಅಸಿತ ಪಕ್ಷ ಶುಕ್ರವಾರದ ದಿವಸ ಸಮಾಧಿಸ್ತನಾದನು[೫]. ಈ ಕಾಲವು ಕ್ರಿ. ಶ. ೧೪೫೮ ಆಗುತ್ತದೆ ಎಂದು ಶ್ರೀ ಪಾಂಗಾರಕರರವರು ಸಿದ್ಧಮಾಡಿರುತ್ತಾರೆ[೬]. ಇವನಿಗೆ ಅನುಕ್ರಮವಾಗಿ ೭ ಜನ ಶಿಷ್ಯರಿದ್ದರು. ೧ ಮಾಧವ ಸರಸ್ವತಿ ೨ ಬಾಳ ಸರಸ್ವತಿ ೩ ಕೃಷ್ಣ ಸರಸ್ವತಿ ೪ ಉಪೇಂದ್ರ ಮಾಧವ ಸರಸ್ವತಿ ೫ ಸದಾನಂದ ಸರಸ್ವತಿ ೬ ಜ್ಞಾನಜ್ಯೋತಿ ಸರಸ್ವತಿ ೭ ಸಿದ್ಧ ಸರಸ್ವತಿ[೭]. ಕೌಂಡಿಣ್ಯ ಗೋತ್ರದ ಸಾಖರೆ ಉಪನಾಮದ ಗಂಗಾಧರನೆಂಬ ಬ್ರಾಹ್ಮಣನಿದ್ದನು. ಅವನಿಗೆ ಚಂಪಾ ಎಂಬ ಒಬ್ಬ ಹೆಂಡತಿ ಇದ್ದಳು. ಇವರ ಹೊಟ್ಟೆ

೧. ಗುರು ಚರಿತ್ರೆ ಅಧ್ಯಾಯ ೧೧ ಓವಿ ೯೯.
೨. " " ೧೨ " ೧೦೮ ರಿಂದ ೧೧೬.
೩. " " ೧ " ೬೭
೪. ಶ್ರೀ ಪಾಂಗಾರಕರ ಕೃತ 'ತುಕಾರಾಮ ಚರಿತ್ರೆ' ಪುಟ ೭೦.
೫. ಗುರು ಚರಿತ್ರೆ ಅಧ್ಯಾಯ ೫೧ ಓವಿ ೩೬—೩೭.
೬. ಶ್ರೀ ಪಾಂಗಾರಕರ ಕೃತ 'ತುಕಾರಾಮ ಚರಿತ್ರೆ' ಪುಟ ೭೦.
೭. ಗುರು ಚರಿತ್ರೆ ಅ. ೧೩. ಓವಿ ೨೦—೨೧.

ಯಲ್ಲಿ ಗುರುಚರಿತ್ರೆಕಾರನಾದ ಸರಸ್ವತಿ ಗಂಗಾಧರನೆಂಬವನು ಹುಟ್ಟಿದನು ೧. ಇವನು ೫೩ ಅಧ್ಯಾಯ ೭೩೦೦ ಓವಿಯುಳ್ಳ ಗುರು ಚರಿತ್ರೆಯನ್ನು ರಚಿಸಿದನು ೨. ಇವನು ಕ್ರಿ. ಶ. ೧೫೪೮ರ ಸುಮಾರಿನಲ್ಲಿ ಈ ಗ್ರಂಥವನ್ನು ಬರೆದನೆಂದು ಶ್ರೀ ಪಾಂಗರಕರವರ ಅಭಿಪ್ರಾಯವಿದೆ ೩. ಕ್ರಿ. ಶ. ೧೫ನೆಯ ಶತಮಾನದ ಅಂತ್ಯಕ್ಕೆ ನರಸಿಂಹ ಸರಸ್ವತಿಯು ಆಗಿ ಹೋದನೆಂದು ಡಾ. ಕೇತಕರರವರು ಅಭಿಪ್ರಾಯಪಡುತ್ತಾರೆ ೪. ೧೬ನೆಯ ಶತಮಾನದ ಉತ್ತರಾರ್ಧದಲ್ಲಿ ಆಗಿಹೋದಂಥ ನರಸಿಂಹ ಸರಸ್ವತಿಯು ದತ್ತನ ಅವತಾರವೆಂದು ತಿಳವಳಿಕೆ ಇದ್ದು ಔದುಂಬರ ಗಾಣಗಾಪುರ, ನರಸೋಬನವಾಡಿ ಮುಂತಾದ ಸ್ಥಳಗಳಲ್ಲಿ ಅವನು ಇದ್ದುದರಿಂದ ಆ ಸ್ಥಾನಗಳಿಗೆ ಗುರುದತ್ತನ ಪವಿತ್ರ ಕ್ಷೇತ್ರಗಳೆಂದು ಬಹಳ ಮಹತ್ತ್ವ ಬಂದಿತೆಂದು ಸಹ ಅದೇ ಡಾ. ಕೇತಕರರವರು ಅಭಿಪ್ರಾಯಪಟ್ಟಿರುವರು ೫. ಇದನ್ನು ನೋಡಲಾಗಿ ಇವೆರಡರಲ್ಲಿಯೂ ಸಾಮ್ಯವಿಲ್ಲವೆಂದು ಗೊತ್ತಾದರೂ-ಅದರ ಅಗತ್ಯವು ನಮಗೆ ಸದ್ಯಕ್ಕೆ ಇರುವದಿಲ್ಲ. ಆದರೆ ಈ ಭಿನ್ನಾಭಿಪ್ರಾಯವು ಹೇಗಾಯಿತೆಂಬುದರ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಒಬ್ಬ ಅಗಸನಿಗೆ ನೀನು ಮುಂದಿನ ಜನ್ಮದಲ್ಲಿ ವೇದುರಾನಗರದಲ್ಲಿ ಮ್ಲೇಂಛ ಕುಲದೊಳಗೆ ಬಾದಶಹನಾಗಿ ಹುಟ್ಟುವಿಯೆಂದು ವರಕೊಟ್ಟವನು ಶ್ರೀಪಾದನೋ ಅಥವಾ ನರಸಿಂಹ ಸರಸ್ವತಿಯೋ ಎಂಬುದರಲ್ಲಿ ಮತಭೇದವಿದೆ. ವೇ. ಸಿದ್ಧೇಶ್ವರ ಶಾಸ್ತ್ರಿ ಚಿತ್ರಾವ ೬. ಶ್ರೀ ಚಿಂತಾಮಣಿ ವಿನಾಯಕ ವೈದ್ಯ ೭, ಶ್ರೀ ಸರಸ್ವತಿ ಗಂಗಾಧರ ೮, ಶ್ರೀ ಸರದೇಸಾಯಿ ೯, ಸಾಧುಸಮುಚ್ಚಯ ಗ್ರಂಥ ಕರ್ತೃ ೧೦. ಮುಂತಾದವರು ಅಗಸನಿಗೆ ವರ ಕೊಟ್ಟವನು ನರಸಿಂಹ ಸರಸ್ವತಿಯೆಂದು ಗುರುಚರಿತ್ರೆಯ

೧. ಗುರುಚರಿತ್ರೆ ಅ. ೧ ಓವಿ ೩೬-೪೩
೨. ,, ,, ,, ೫೩ ,, ೧೦೪
೩. ತುಕಾರಾಮ ಚರಿತ್ರೆ ಪುಟ ೬೦
೪. ಮ. ಜ್ಞಾ. ಕೋಶ ಭಾಗ ೧೨-೧೩ ಗ. ಅಕ್ಷರ೫.
೫. ,, ,, ,, ೧೪-೧೫ ದ ಅಕ್ಷರ ೧೫
೬. ಮಧ್ಯಯುಗದ ಚರಿತ್ರ ಕೋಶ ಪುಟ ೬೦-೬೧
೭ ವಿವಿಧ ಜ್ಞಾನ ವಿಸ್ತಾರ ಮಾಸಿಕ ಅಗಸ್ಟ ಸಂಚಿಕೆ ೧೯೦೮
೮. ಗುರು ಚರಿತ್ರೆ ಅ. ೫೦-೫೨
೯. ಮುಸಲ್ಮಾನೀ ರಿಸಾಯತ ಭಾಗ ೧ ಪುಟ ೨೧೩
೧೦. ಸಾಧು ಸಮುಚ್ಚಯ ಗ್ರಂಥ ಪುಟ ೬೭೫



ಆಧಾರದಿಂದ ವಾದಿಸುವರು. ಇದೇ ಗುರು ಚರಿತ್ರೆ ಆಧಾರದಿಂದ ವರದಾತನು ಶ್ರೀಪಾದ ವಲ್ಲಭನೆಂದು ಹೇಳಿ ಅರಸನು ತಾನು ಪೂರ್ವದಲ್ಲಿ ಅಗಸ ಕುಲದವನೆಂಬುದನ್ನು ನೆನಪುಮಾಡಿ ಕೊಟ್ಟವನು ಗಾಣಗಾಪುರದ ನಸಿಂಹ ಸರಸ್ವತಿಯೆಂದು ಎರಡನೆಯ ಪಕ್ಷದವರು ಪ್ರತಿಪಾದಿಸುವರು. ಈ ಮತಭೇದದಿಂದ ಡಾ. ಕೇತಕರರವರು ಮೇಲೆ ಹೇಳಿದಂತೆ ಅಭಿಪ್ರಾಯಪಟ್ಟಿರುವರು.

ವಿಜಾಪುರದ ಕಲೆಕ್ಟರ ಕಚೇರಿಯ ಅಂಗಳದಲ್ಲಿ ಕಂದಕದ ದಂಡೆಯಮೇಲೆ ನರಸಿಂಹ ಸರಸ್ವತಿಯ ಒಂದು ಪುರಾತನ ಸ್ಥಾನವಿದೆ. ಪ್ರತಿಮೆಗೆ ಹಳ್ಳಿಗರು ಹಿರೋಡ್ಯಾ=ಹಿರೇ ಒಡೆಯ = ಮಹಾದೇವನೆಂದೆನ್ನುವರು. ಇದಕ್ಕೆ ವಿಜಾಪುರ ಜಿಲ್ಹೆಯೊಳಗಿನ ಹಲವು ಐತಿಹಾಸಿಕ ವತನದಾರ ಮನೆತನದವರಿಂದ ನೇಮಣಕಗಳಿವೆ. ಇದರ ಉಪಾಸಕರು ಬಹುವಾಗಿ ಬ್ರಾಹ್ಮಣರಿದ್ದು ಪೂಜಾರಿ ಮಾತ್ರ ವತನದಾರ ಲಿಂಗವಂತನಿರುವನು. ಇದರ ಮೇಲಿಂದ ಈ ನರಸಿಂಹ ಸರಸ್ವತಿಯು ಬ್ರಾಹ್ಮಣೇತರನಿರಬಹುದೆಂದು ಊಹಿಸಲಾಸ್ಪದವಿದೆ. ಸಂಶೋಧಕರು ಕಾಲನಿರ್ಣಯದೊಂದಿಗೆ ಈ ಮಾತನ್ನೂ ಸಹ ವಿಚಾರಿಸಬೇಕೆಂದು ನಮ್ಮ ಸೂಚನೆಯಿದೆ.

ಕ್ರಿ. ಶ. ೧೩೭೮ ರ ಸುಮಾರಕ್ಕೆ ನರಸಿಂಹ ಸರಸ್ವತಿಯು ಧರ್ಮಜಾಗ್ರತೆಯ ಕೆಲಸವನ್ನು ಮಾಡುತ್ತಿದ್ದನೆಂದು ಶ್ರೀ. ಪಾಂಗರಕರವರು ಹೇಳಿದ್ದನ್ನು ಮೇಲೆ ಉದಾಹರಿಸಿದೆ. ನರಸಿಂಹ ಸರಸ್ವತಿಯ ಧರ್ಮಜಾಗ್ರತೆಯ ಕಾರ್ಯದ ಕಾಲಕ್ಕೂ ಹಾಗು ಗುರು ಚರಿತ್ರೆ ಗ್ರಂಥ ನಿರ್ಮಾಣ ಕಾಲಕ್ಕೂ ೧೭೦ ವರ್ಷಗಳ ಅಂತರವಿದೆ. ನರಸಿಂಹ ಸರಸ್ವತಿಯ ಅವಸಾನ ಕಾಲಕ್ಕೂ ಗುರುಚರಿತ್ರೆಯ ನಿರ್ಮಾಣ ಕಾಲಕ್ಕೂ ೯೦ ವರ್ಷಗಳ ಅಂತರವಿದೆ. ಒಟ್ಟಿನಲ್ಲಿ ಗುರುಚರಿತ್ರೆ ಗ್ರಂಥಕರ್ತೃವು ನರಸಿಂಹ ಸರಸ್ವತಿ ಸಮಕಾಲೀನನಲ್ಲವೆಂದು ತಿಳಿದುಬರುವುದರಿಂದ ಈ ಗ್ರಂಥವು ಐತಿಹಾಸಿಕ ದೃಷ್ಟಿಯಿಂದ ಎಷ್ಟರಮಟ್ಟಿಗೆ ಗ್ರಾಹ್ಯವೆಂಬುದನ್ನು ಸಂಶೋಧಕರು ವಿಚಾರಿಸತಕ್ಕದ್ದು. ಗುರುಚರಿತ್ರೆಯ ಭಾಷೆಯು ಅಷ್ಟು ಚೆನ್ನಾಗಿಲ್ಲ. ದತ್ತ ಸಂಪ್ರದಾಯವನ್ನು ಕುರಿತು ಬೇರೆ ಗ್ರಂಥ

ಇದು ಪರಮ ಪೂಜ್ಯವಾ
ಗಳು ಇಲ್ಲವಾದುದರಿಂದ ದತ್ತೋಪಾಸಕರಿಗೆ ಎಂಬವರು ಇದರ
ಗಿದೆ. ಇತ್ತೀಚೆಗೆ ವಾಸುದೇವಾನಂದ (ಟೇಂಬೆ) ಪರಂಪರೆಯೊಳಗಿನ
ಸಂಸ್ಕೃತ ಭಾಷಾಂತರ ಮಾಡಿರುವರು ೧. ಗುರು ಇತ್ಯಾದಿಗಳ
'ಗಿರಿ 'ಪುರಿ ತೀರ್ಥ, ಭಾರತಿ, ಅರಣ್ಯ, ಸರಸ್ವತಿ' ಹೆಸರಿನ ಮುಂದೆ
ಮೇಲಿಂದ ಹಾಗೂ ಸರಸ್ವತಿಯ ಶಿಷ್ಯರು ತಮ್ಮ ಜನರು 'ದಸನಾಮಿ
'ಸರಸ್ವತಿ' ಈ ಶಬ್ದವನ್ನು ಹಚ್ಚುವದರಿಂದ ಈ ಬಲವತ್ತರ
ಗೋಸಾವಿ' ಜಾತಿಯವರಿರಬಹುದೆಂದು ತರ್ಕ ಮಾಡಲಿಕ್ಕೆ ಸ್ಪಷ್ಟೀಕರಣಾರ್ಥವಾಗಿ
ವಾದ ಸಾಧನೆಗಳು ಕಂಡುಬರುತ್ತವೆ. ಇದರ ಕೆಳಗೆ ಕೊಡುತ್ತೇವೆ.
ದಸನಾಮಿ ಗೋಸಾವಿಗಳ ಪರಿಚಯವನ್ನು ಈ

## ದಸನಾಮಿ ಗೋಸಾವಿ.

"ಗೋಸಾಯಿ, ಗುಸಾಯಿ ಗೋಸ್ವಾಮಿ" ಮುಂತಾದ ಅನೇಕ ಹೆಸ
ರುಗಳಿಂದ ಇವರನ್ನು ಸಂಬೋಧಿಸುತ್ತಾರೆ. ಗೋಸಾವಿ ಇದು ಒಂದು
ಹಿಂದು ಯತಿಗಳ ವರ್ಗವಿದ್ದು ಅವರಲ್ಲಿ ಶೈವ, ವೈಷ್ಣವ ಎಂಬ ಎರಡು
ಭೇದಗಳು ಇರುವವು. ವರ್ಹಾಡ ಮತ್ತು ಮಹಾರಾಷ್ಟ್ರ ಪ್ರಾಂತಗಳಲ್ಲಿ
ವಿಶೇಷಿತ ಶೈವರೇ ಇರುವರು. ಗೋಸಾವಿಗಳಲ್ಲಿ ಭಿಕ್ಷೆ ಬೇಡುವವರು
ಹಾಗೂ ಗೃಹಸ್ಥರು ಎಂದು ಎರಡು ಭಾಗ ಮಾಡಬಹುದು. ವಟುಗಳನ್ನು
ಮಾಡುವುದರ ಸಲುವಾಗಿ ಅವರು ಕೆಲವು ಹುಡುಗರನ್ನು ಕೊಳ್ಳುವರು
ಅಥವಾ ಸಾಕುವರು. ಗೋಸಾವಿಗಳು ಒಂದು ಸಾರೆ ಶಸ್ತ್ರಧಾರಿಗಳಾದರೆ
ಅವರನ್ನು ಸಂತೈಸುವುದು ಬಹಳ ಕಷ್ಟಕರವೆಂಬುದು ಅನುಭವದ ಮಾತಾ
ಗಿದೆ. ಪ್ರಾಚೀನ ಕಾಲದಲ್ಲಿ ವಿವಿಧ ಗೊಸಾವಿಗಳ ನಡುವೆ ಘೋರ
ಯುದ್ಧಗಳಾಗಿವೆ. ಇವರು ಗುಂಪು ಗುಂಪಾಗಿ ತಿರುಗುತ್ತ ಒಂದು
ಪ್ರಕಾರದ ತೆರಿಗೆಯಂತೆ ಬಿಕ್ಷವನ್ನು ಎತ್ತುತ್ತಾರೆ. ಹಿಂದಕ್ಕೆ ಗೋಸಾ
ಯಿಗಳು ಸೈನ್ಯದಲ್ಲಿಯೂ ಸೇರುತ್ತಿದ್ದರು. (ಡಫನ ಇತಿಹಾಸ). ಇಲ್ಲಿಯ
ವರೆಗೆ ಸಾಮಾನ್ಯ ಗೊಸಾವಿಗಳ ವಿವೇಚನೆಯಾಯಿತು. ಇನ್ನು ಮೇಲೆ
ಗೃಹಸ್ಥ ಗೋಸಾಯಿಗಳ ವಿಷಯವಾಗಿ ಕೆಲವು ಸಂಗತಿಗಳನ್ನು ಹೇಳ
ಬೇಕಾಗಿದೆ. ಗೋಸಾವಿಗಳು ಮರಾಠಿ ಜಾತಿಯವರೆಂದು ಸಾಮಾನ್ಯ
ವಾಗಿ ಎಣಿಸಲ್ಪಡುತ್ತಾರೆ. ಅಖಿಲಭಾರತದಲ್ಲಿ ಇವರ ಜನಸಂಖ್ಯೆಯು
೫ ಲಕ್ಷದ ಮೇಲಿದೆ. ಇವರು ಶಂಕರಾಚಾರ್ಯರ ಅದ್ವೈತಮತಾನುಯಾ

೧. ಮ. ಜ್ಞಾ. ಕೋಶ.



ಯಿಗಳಿರುವರು. ಗಿರಿ, ಪುರಿ, ಭಾರತಿ, ಮುಂತಾದ ೧೦ ಅಡ್ಡ ಹೆಸರು
ಗಳು ಇವರಲ್ಲಿ ಬಳಿಕೆಯಲ್ಲಿರುವವು. ಇವರಲ್ಲಿ 'ಘರ ಭಾರಿ, ಮಠದಾರಿ
ಸನ್ಯಾಸಿ ಎಂದು ಎರಡು ಭೇದಗಳಿರುತ್ತವೆ. ಆದರೆ ಪ್ರತಿಯೊಬ್ಬನಿಗೂ
ಯಾವದೇ ತರಹದ ಸನ್ಯಾಸತ್ವವನ್ನೂ ಸ್ವೀಕರಿಸಲು ಬರುವುದು. ಇತ್ತೀ
ಚೆಗೆ ಎಷ್ಟೋ ಮಠಧಾರಿಗಳು ಲಗ್ನ ಮಾಡಿಕೊಳ್ಳಲು ಪ್ರಾರಂಭಿಸಿರು
ವರು. ವರ್ಹಾಡದೊಳಗಿನ ವ್ರಜೇಶ್ವರಿ ಸಂಸ್ಥಾನದ ಅಧಿಪತಿಗಳು ಗೃಹ
ಸ್ಥಾಶ್ರಮಿಗಳಾಗಿರುವರು. ಮಠದಾರಿ ಗೋಸಾಯಿಗಳಲ್ಲಿ 'ಮಹಂತ, ಪರ
ಮಹಂಸ' ಎಂದು ಎರಡು ವಿಧ. ಆದರೆ ಅವರ ಎಲ್ಲ ವ್ಯವಹಾರಗಳು
'ಘರ ಭಾರಿ' ಯವರಂತೆಯೇ ಇರುವವು. ಈ ಮಠಧಾರಿಗಳಲ್ಲಿ ಎಷ್ಟೋ
ಗೋಸಾಯಿಗಳು ನವಕೋಟಿ ನಾರಾಯಣರಿರುವರು. ಬುದ್ಧಗಯೆ,
ಹೈದರಾಬಾದ ಮೊದಲಾದ ಸಂಸ್ಥಾನಗಳಲ್ಲಿ ಗೋಸಾಯಿಗಳು 'ರಾಜ,
ಮಹಾರಾಜ' ಎಂಬ ಬಿರುದುಗಳನ್ನು ಪಡೆದವರಿರುವರು. ಈ ಜಾತಿಯ
ವಂಶಾವಳಿಯು ಭಾಟ ಜನರಲ್ಲಿರುವದು. ಅದರ ಮೇಲಿಂದಲೂ ಮತ್ತು
ಇನ್ನಿತರ ಐತಿಹಾಸಿಕ ಆಧಾರಗಳ ಮೇಲಿಂದ ಈ ಜಾತಿಯಲ್ಲಿ ಬ್ರಾಹ್ಮ
ಣರ ಸೇರ್ಪಡೆ ಇದ್ದಂತೆ ಕಂಡು ಬರುತ್ತದೆ. ಎಷ್ಟೋ ಧರ್ಮಗುರುಗಳಿರು
ವರು. ಇನ್ನೂ ಕೆಲವು ಜನರಿಗೆ ದೊಡ್ಡ ದೊಡ್ಡ ಜಹಗೀರುಗಳಿರುವುವು.
ಮುಖ್ಯವಾಗಿ ಗೋಸಾಯಿಗಳು ಶಂಕರನ ಉಪಾಸಕರಿರುವರು. ಇವರಲ್ಲಿ
'ಋಕ್' ಸಂಧ್ಯಾ ಮಾಡುವವರು ಬಹಳ ಜನರಿರುವರು. ಹಲವರು
ಗಾಯತ್ರಿ ಪಠನ ಮಾಡುವರು. ವೈದಿಕ ಸಂಸ್ಕಾರದ ಸನ್ಯಾಸದ ಅವಶೇಷ
ವಾದ 'ವಿರಜ ಹೋಮ' ಎಂಬುದು ಮಾತ್ರ ಇನ್ನೂ ಉಳಿದಿರುತ್ತದೆ.
ಇನ್ನುಳಿದುದೆಲ್ಲವೂ ಪುರಾಣೋಕ್ತವಾಗಿದೆ. ಗೋಸಾಯಿಗಳಲ್ಲಿ ಒಳಪಂಗ
ಡಗಳಿಲ್ಲ. ಗೃಹಸ್ಥರನ್ನು ಸನ್ಯಾಸಿಗಳಂತೆಯೇ ಹುಗಿಯುತ್ತಾರೆ. ಶ್ರಾದ್ಧದ
ಬದಲು ಪುಣ್ಯತಿಥಿ ಮಾಡುತ್ತಾರೆ. ಇವರ ವಿವಾಹ ಪದ್ಧತಿಯು ವೇದ
ಮತ್ತು ಪುರಾಣವನ್ನನುಸರಿಸಿ ನಡೆಯುತ್ತದೆ. 'ಗಿರಿ, ಪುರಿ, ಪರ್ವತ,
ಸಾಗರ, ಬನ, ತೀರ್ಥ, ಭಾರತಿ, ಸರಸ್ವತಿ, ಅರಣ್ಯ ವ ಆಶ್ರಮ' ಹೀಗೆ
ಮುಖ್ಯವಾಗಿ ಹತ್ತು ಅಡ್ಡ ಹೆಸರುಗಳಿಂದ ಕರೆಯಲ್ಪಡುವರು. ಶರೀರ
ಸಂಬಂಧವು ಒಂದೇ ಮಠದವರಲ್ಲಿ ಆಗುವುದಿಲ್ಲ. ಈ ಮಠಗಳು
೫೨-೫೩ ಇರುವವು. ಹಿಂದಿನ ಗೋತ್ರ ಪ್ರವರಗಳ ಮರವೆಯಾದದ್ದರಿಂದ
ಸದ್ಯಕ್ಕೆ ಇವರು ಮಠಗಳನ್ನೇ ಗೋತ್ರವಾಗಿ ತಿಳಿಯುವರು. ಇವುಗ
ಳಲ್ಲಿ ಶಾರದಾಮಠ, ಜ್ಯೋತಿರ್ಮಠ (ಜೋಷಿಮಠ) ಗೋವರ್ಧನಮಠ,

ಮಠಗಳಿರುವವು. ತಮ್ಮ ಶೃಂಗರಿಮಠ ಹೀಗೆ ಮುಖ್ಯವಾಗಿ ನಾಲ್ಕು ಸ್ಥಾನವು ದ್ವಿಜರಂತಿರುವುದೆಂದು ಸುಶಿಕ್ಷಿತ ಗೋಸಾಯಿಗಳು ತಿಳಿಯು ವರು. ಪೇಶವಿಗಳ ಕಾಲದಲ್ಲಿ ಮಹಾನುಭಾವಿ ಹಾಗೂ ಗೋಸಾವಿ ಇವರ ನಡುವೆ ಸಾಮಾಜಿಕ ಸ್ಥಾನದ ಬಗ್ಗೆ ತಂಟೆಗಳಾಗಿ— ಅದರಲ್ಲಿ ಗೋಸಾವಿಗಳು ಸನಾತನೀ ಧರ್ಮದ ಅನುಯಾಯಿಗಳೆಂದು ನಿರ್ಣಯಿ ಸಲ್ಪಟ್ಟಿರುವರು. ಮುಂಬೈ ಹಾಗೂ ಮಧ್ಯಪ್ರಾಂತ ಹಾಯಕೋರ್ಟುಗಳಲ್ಲಿ ಯಾಜ್ಞವಲ್ಕ್ಯ ಸ್ಮೃತಿ ಹಾಗು ದಾಯ ಭಾಗಗಳು ಅನ್ವಯಿಸುವುವೆಂದು ನಿರ್ಣಯವಾಗಿದೆ" (ಯವತಮಾಳದ ಶ್ರೀ. ಸ್ಪೃಪ್ಪಿಗ್ ಹರಿಹರ ಇವರ ಕಡೆಯಿಂದ ಬಂದ ಸಂಗತಿಯನ್ನೇ ಸಂಕ್ಷಿಪ್ತವಾಗಿ ಮೇಲೆ ಉದಾಹರಿ ಸಲಾಗಿದೆ. ಇತರ ಸಂದರ್ಭ ಗ್ರಂಥಗಳು. ವಿಲ್ಸನ್ನರ ರಿಲಿಜಿಯಸ್‌ಟೆಕ್ಸ್ಟ ಆಫ್ ಹಿಂದೂಸ್, ಸೆನ್ಸಸ್ ರಿಪೋರ್ಟ ೧೮೮೧-೯೧೧, ಕ್ರುಕ್, ರಸೆಲ್, ಹೀರಾಲಾಲ್, ಎಂಥೋವೆನ್, ಜೋಗೇಂದ್ರನಾಥಭಟ್ಟಾಚಾರ್ಯ ಇವರ ಹಿಂದೂ ಕಾಸ್ಟ ಎ್ಯಂಡ್‌ಸೆಕ್ಟ್ಸ) ಎಂದು ಮಹಾರಾಷ್ಟ್ರ ಜ್ಞಾನಕೋಶ ದಲ್ಲಿ ಹೇಳಿದೆ [೧].

ಈ ನರಸಿಂಹ ಸರಸ್ವತಿಯ ಏಳು ಶಿಷ್ಯರ ಪೈಕಿ ಕೃಷ್ಣ ಸರಸ್ವತಿ ಎಂಬುವನೊಬ್ಬನಿದ್ದನು. ಇವನ ಶಿಷ್ಯನಾದ ಬ್ರಹ್ಮದಾಸನು ಚಾಮರ ಸನ ಪ್ರಭುಲಿಂಗ ಲೀಲೆಯ ಭಾಷಾಂತರವನ್ನು ಮರಾಠಿ ಭಾಷೆಯಲ್ಲಿ ೩೮೭೭ ಓವಿಗಳಿಂದ ಮಾಡಿದ್ದಾನೆ [೨]. ಈ ಮರಾಠಿ ಗ್ರಂಥದ ಕಡೆಯಲ್ಲಿ ಈ ಕೆಳಗಿನ ಓವಿಗಳಿರುತ್ತವೆ.—

ಏಕಾದಶ ಶತೀ ಏಕಾದಶ । ಪಡೇ ಪದಲಾ ಮುನಿ ಚಾಮರಸ ॥
ಪಂಪಾಪತಿ ವಿರೂಪಾಕ್ಷ ಈಶ । ವರವಿಶೇಷ ಲಾವುನೀ ॥೬೬॥
ಲೀಲಾ ವಿಶ್ವಂಭರಾಚೇ ಚರಿತ್ರ । ಸರೋವರ ರಚಿಲೆ ಪವಿತ್ರ ॥
ಮೋಕ್ಷಲಾಭೇ ಸ್ನಾನೇ ಮಾತ್ರ । ಜೀವಸ್ವತಂತ್ರೀ ಪರಬ್ರಹ್ಮ ॥೬೭॥
ಶೃಂಗರೀ ಮಠ ಭೋಗದಾರ । ಸಂಪ್ರದಾಯಪದ ಮನೋಹರ ॥
ಸರಸ್ವತೀ ದಶನಾಮೀ ಥೋರ । ಕೀರ್ತಿ ವಸುಂಧರೀ ವಿಸ್ತಾರಿಲೀ ॥೬೮॥
ಸನ್ಯಾಸಿ ಧರ್ಮ ಪರಿಪೂರ್ಣಮೂರ್ತಿ । ನಾಮೆ ನರಸಿಂಹ ಸರಸ್ವತೀ ॥
ಗಣಗಾಪೂರೀ ವಿಖ್ಯಾತ ಕೀರ್ತಿ । ಯೋಗೀ ವರ್ತತೀ ಸರ್ವದಾ ॥೬೯॥

೧. ಮ. ಜ್ಞಾ. ಕೋಶ ಭಾಗ ೧೨-೧೪ ಗ. ಅಕ್ಷರ ೭೪೫, ೨೪೬.
೨. ಧಾರವಾಡ ಲಿಂ. ವಿ. ಸಂ. ವಾಂಗ್ಮಯ ಶಾಖೆಯ ಪ್ರಭುಲಿಂಗಲೀಲೆ ಪು. ೨,೩೦



ತೋಚ ಆತ್ಮಾ ಮೂಲಪುರುಷ । ಶ್ರೀಕೃಷ್ಣ ಸ್ವಾಮಿ ಸದ್ಗುರು ಈಶ ॥
ತೇಣೇ ತಾರಿಲ ಬ್ರಹ್ಮದಾಸ । ಸ್ವಕೀಯಧ್ಯಾನ ಲಾವುನೀ ॥೭೦॥

## ಉಪಸಂಹಾರ.

ಮೇಲಿನ ಎಲ್ಲ ಸಂಗತಿಗಳ ಆಧಾರದಿಂದ ಸೂಕ್ಷ್ಮ ಬುದ್ಧಿಗಳು ನಿಷ್ಪಕ್ಷಪಾತ ದೃಷ್ಟಿಯಿಂದ ವಿಚಾರ ಮಾಡಿದರೆ ಸತ್ಯೈಕ ಶೋಧಕ ಬುದ್ಧಿ ಯುಳ್ಳ ವಾಚಕ ವೃಂದಕ್ಕೆ ಈ ಕೆಳಗೆ ವಿಮರ್ಶಿಸಿದಂತೆ ಒಪ್ಪಿಗೆಯಾ ಗಬಹುದೆಂದು ನಮ್ಮ ಬಲವಾದ ನಂಬುಗೆಯಿದೆ. ಅದು ಹೇಗಂದರೆ— ಗಾಣಿಗಾಪುರದ ನರಸಿಂಹ ಸರಸ್ವತಿಯು ಶುದ್ಧ ಅದ್ವೈತ ಸಾಂಪ್ರದಾ ಯದ, ವಿಪ್ರ ಸರಿಸಮಾನತೆಯ, ಮರಾಠರ ಜಾತಿಯ ಶೃಂಗರಿ ಮಠದ ಸರಸ್ವತಿ ಎಂಬ ಉಪನಾಮದ ದಸನಾಮಿ ಗೋಸಾಯಿ ಜಾತಿಯವ ನಿರಬಹುದೆಂಬುದಕ್ಕೆ ಎಳ್ಳಷ್ಟು ಸಂಶಯವಿಲ್ಲ. ಇವನಿಗೇ ಸಾಮಾನ್ಯ ಜನತೆಯು ವಾಡಿಯ ನರಸೋಬ (ನರಸಪ್ಪ) ಎಂದು ಕರೆಯುವ ರೂಢಿ ಯಿದೆ. ಪ್ರಯಾಗ ಕ್ಷೇತ್ರದಲ್ಲಿ ಮಾಧವ ಎಂಬ ಹೆಸರಿನ ಒಬ್ಬ ದ್ವಿಜ ಶ್ರೇಷ್ಠನು ಈ ನರಸಿಂಹ ಸರಸ್ವತಿಗೆ ಬಂದು ಭೆಟ್ಟಿಯಾದನು. ನರಸಿಂಹ ಸರಸ್ವತಿಯು ಮಾಧವನಿಗೆ ಬ್ರಹ್ಮಜ್ಞಾನವನ್ನು ಹೇಳಿ ಚತುರ್ಥಾಶ್ರಮ ವಾದ ಸನ್ಯಾಸಾಶ್ರಮವನ್ನು ಕೊಟ್ಟನೆಂದು ವರ್ಣನೆ ಇದೆ [೧]. ಈ ಮಾಧವ ಸರಸ್ವತಿಯು ಇವನಿಗೆ ಪ್ರಥಮ ಶಿಷ್ಯನು. ಗುರುಚರಿತ್ರೆಯಲ್ಲಿ ಇವನು ಬ್ರಾಹ್ಮಣನೆಂದು ಹೇಳಿದೆ.

ಇದರ ಹೊರ್ತಾಗಿ ಈ ದಸನಾಮಿ ಗೋಸಾಯಿಗಳಲ್ಲಿ 'ಅರಣ್ಯ' ಎಂಬ ಒಂದು ಶಾಖೆಯು ಇರುವುದು. ಗೌತಮಿ ತಟಾಕದ ಮಂಜರಿಕ ಗ್ರಾಮದಲ್ಲಿ ಅರಣ್ಯಶಾಖೆಯ ಮಾಧವಾರಣ್ಯನೆಂಬೊಬ್ಬ ವಿಖ್ಯಾತ ಮುನಿಯು ಆಗಿಹೋದನು [೨]. ಈ ಆರಣ್ಯ ಶಾಖೆಯ ಮುನಿಗಳಲ್ಲಿ ವಿದ್ಯಾರಣ್ಯನೆಂಬೊಬ್ಬನು ಬಹಳ ಪ್ರಖ್ಯಾತನಾಗಿದ್ದನು [೩]. ಇವನ ಹೆಸರು ಗುರುಚರಿತ್ರೆಯೊಳಗಿನ ಗುರುಪರಂಪರೆಯಲ್ಲಿದೆ. ಹಿಂದಕ್ಕೆ ರೇವಣಸಿದ್ಧೇಶ್ವರನ ಸಾಂಪ್ರದಾಯದವರಲ್ಲಿ ಒಬ್ಬನು ವಿದ್ಯಾರಣ್ಯ ಎಂಬ

೧. ಗುರುಚರಿತ್ರೆ ಅಧ್ಯಾಯ ೧೨ ಓವಿ ೧೨೫, ೧೨೬, ೧೨೭
೨. ಗುರುಚರಿತ್ರೆ ಅಧ್ಯಾಯ ೧೪ ಓವಿ ೬೯.೮೧
೩. ಗುರು ಚರಿತ್ರೆ ಅಧ್ಯಾಯ ೧೨. ಓವಿ ೧೧೪